॥ ಶ್ರೀ ಹರಿಃ ಓಂ ॥

॥ ಶ್ರೀ ಗರುಡವಾಹನ ಶ್ರೀ ಲಕ್ಷ್ಮೀನರಸಿಂಹಾಯ ನಮಃ ॥

॥ ಶ್ರೀ ಜಗನ್ನಾಥವಿಠ್ಠಲ ಪ್ರಸೀದ ॥

# ಸಂಧಿ (೯)

# ವರ್ಣಪ್ರಕ್ರಿಯಾ ಸಂಧಿ (ಜೀವಪ್ರಕರಣ ಸಂಧಿ)

# (ಉದಾತ್ತಾನುದಾತ್ತ ಸಂಧಿ)

**ಸಂಧಿಯ ಸಾರ :—**

ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸವರೇಣ್ಯರ ಅಮರ ಕೃತಿರತ್ನ **ಶ್ರೀಮದ್ಧರಿಕಥಾಮೃತಸಾರದಲ್ಲಿ** ಘಟಕವಾಗಿರುವ ೯ನೆಯ ಈ ಸಂಧಿಗೆ "**ವರ್ಣಪ್ರಕ್ರಿಯಾ ಸಂಧಿ**"—ಎಂದು ಹೆಸರು. ಅಲ್ಲದೆ ಈ ಸಂಧಿಗೆ "**ಜೀವಪ್ರಕರಣ ಸಂಧಿ**" ಅಥವಾ "**ಉದಾತ್ತಾನುದಾತ್ತ ಸಂಧಿ**"- ಎಂತಲೂ ಹೆಸರುಗಳಿವೆ.

ಪ್ರಥಮ ಪದ್ಯದಲ್ಲಿ ಶ್ರೀಹರಿಯ ಅಕಾರಾದಿ ಕ್ಷಕಾರಪರ್ಯಂತ ವರ್ಣ ಪ್ರತಿಪಾದ್ಯವಾದ ಅಜಾದಿ ಶ್ರೀ ಲಕ್ಷ್ಮೀನರಸಿಂಹ ಪರ್ಯಂತ ಇರುವ ರೂಪಗಳ ವಿವರಗಳನ್ನು ತಿಳಿಸುತ್ತಾರೆ. ಉದಾತ್ತ, ಅನುದಾತ್ತ, ಪ್ರಚಯ, ಸ್ವರಿತ ಸಂಧಿ, ವಿಸರ್ಗ, ಬಿಂದು ಮುಂತಾದ ಸಪ್ತಸ್ವರವಾಚ್ಯ ಭಗವದ್ರೂಪಗಳು, ತತ್ತನ್ನಾಮ ರೂಪೋಪಾಸನೆಯನ್ನು ನಿರಂತರ ಮಾಡು

ತ್ತಿರುವ ಸಾಧಕರು ಈ ಭೂಮಿಯಲ್ಲಿ ದೇವತೆಗಳೇ ಸರಿ ಸಾಮಾನ್ಯ ನರರಲ್ಲ. ಅವರಾಡುವುದೇ ವೇದಾರ್ಥ ಎಂದು ತಿಳಿಸುತ್ತಾರೆ.

ಶಾಸ್ತ್ರಗಳ ವಿಚಾರದಲ್ಲಿ ನಮಗಿರಬೇಕಾದ ತತ್ತ್ವನಿಷ್ಠೆಯನ್ನು ಎರಡನೆಯ ಪದ್ಯದಿಂದ ತಿಳಿಸುತ್ತಾರೆ. ಸರ್ವನಿಯಾಮಕನಾದ ಶ್ರೀ ಪರಮಾತ್ಮ ನಲ್ಲಿ ಸಮೀಚೀನವಾದ ಜ್ಞಾನ, ಶ್ರೀಹರಿಯ ಅಂತರಂಗ ಭಕ್ತರಲ್ಲಿ ಸಾತ್ವಿಕ ಭಕ್ತಿಭಾವ, ಪ್ರಾಪಂಚಿಕ ವಿಷಯಗಳಲ್ಲಿ ವೈರಾಗ್ಯ. ಮಿಥ್ಯಾವಾದದಲ್ಲಿ ಅತ್ಯಂತ ದ್ವೇಷವಿರಬೇಕು. ಸಮಸ್ತ ಜೀವರಾಶಿಗಳಲ್ಲಿ ರಮಾರಮಣನಾದ ಶ್ರೀ ಪರಮಾತ್ಮನು ಅಂತರ್ಯಾಮಿಯಾಗಿರುವನೆಂದು ತಿಳಿದು, ಅವರವರ ಮನೋಭೀಷ್ಟಗಳನ್ನು ಸಲ್ಲಿಸುವುದೇ ಶ್ರೀಹರಿಯ ಪ್ರಿತ್ಯರ್ಥವಾಗಿ ಮಾಡುವ ಯಜ್ಞಪೂಜಾರೂಪವಾದ ಕೈಂಕರ್ಯ ಎಂಬ ಭಾವನೆ ಇರಬೇಕು.

ತೃತೀಯ ಪದ್ಯದಿಂದ, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯ ಗಳು, ಪೃಥಿವೀ, ಜಲ ಮತ್ತು ಅಗ್ನಿ ಈ ಭೂತತತ್ತ್ವಗಳಲ್ಲಿ ವಿದ್ಯಮಾನ ನಾಗಿರುವ ಶ್ರೀಹರಿಯ ೧೩ ರೂಪಗಳು (ತ್ರಿದಶ) ಮತ್ತು ಬಿಂಬರೂಪಿ "ಏಕಾತ್ಮ" ನೆನಿಸುವ ಶ್ರೀ ಪರಮಾತ್ಮನು ಇಂದ್ರಿಯಾಭಿಮಾನಿ ಹಾಗೂ ಭೂತತತ್ತ್ವಾಭಿಮಾನಿ ದೇವತೆಗಳಲ್ಲಿ ನಿಯಾಮಕರಾಗಿರುವ ಮುಖ್ಯಪ್ರಾಣ ದೇವರಲ್ಲಿ ವಿದ್ಯಮಾನನಾಗಿದ್ದು, ಅವರಲ್ಲಿ ವ್ಯಾಪ್ತನಾಗಿದ್ದು, ಆ ಅಪಾರ ಮಹಿಮಾಸಂಪನ್ನನು ಲಯ ಕರ್ತನಾದ ಸಂಕರ್ಷಣನಾಮಕ ಶ್ರೀ ಪರಮಾತ್ಮನು ಸಮಸ್ತ ವಿಷಯಗಳನ್ನು ತಾನೇ ಸ್ವೀಕರಿಸಿ, ಬಿಂಬಕ್ರಿಯಾದ್ವಾರಾ, ತತ್ವೇ ಶಾಂತರ್ಗತ ಶ್ರೀ ಮುಖ್ಯಪ್ರಾಣಾಂತರ್ಗತನಾಗಿದ್ದು. ಜೀವರ ಅನುಭವಕ್ಕೆ ತಂದೀಯುವನು ಎಂದು ತಿಳಿಸುತ್ತಾರೆ.

ಕರ್ಮಗಳಲ್ಲಿ ಮೂರುಪ್ರಕಾರ. ದೇಹಸಂಬಂಧವಾದ ದೈಹಿಕ ಕರ್ಮ ಗಳು, ದೇಶಕ್ಕೆ ಅನುಸಾರವಾದ ದೈಶಿಕ ಕರ್ಮಗಳು ಮತ್ತು ಕಾಲಕ್ಕನುಗುಣ ವಾದ ಕಾಲಿಕ ಕರ್ಮಗಳು ಎಂಬ ಈ ಮೂರು ಪ್ರಕಾರವಾದ ಕರ್ಮಗಳಲ್ಲಿ, ವಿಹಿತ ಕರ್ಮಗಳನ್ನು ಮರ್ಮವರಿತು ಮಾಡುತ್ತಾ, ಆ ಕರ್ಮಸಂಬಂಧವಾದ ಫಲಗಳನ್ನು ಅಪೇಕ್ಷಿಸದೆ, ನಿಷ್ಕಾಮ ಬುದ್ಧಿಯಿಂದ, ದ್ವಂದ್ವಕರ್ಮಗಳನ್ನು

ಪವಮಾನರ ದ್ವಾರಾ ಆ ಇಂದಿರೇಶನ ಪಾದದ್ವಂದ್ವಗಳಿಗೆ ಅರ್ಪಿಸುತ್ತಾ, ಬೃಹತೀನಾಮಕರಾದ ಭಾರತೀರಮಣರ ಮಹಾಮಹಿಮೆಗಳನ್ನು ಮನಸಾ ಚಿಂತಿಸುತ್ತಾ, ಹಗಲು, ರಾತ್ರಿ ಅಂದರೆ ನಿರಂತರವೂ ಎಸಗುತ್ತಿರುವ ಕರ್ಮಗಳನ್ನು ನಿರ್ವಂಚನೆಯಿಂದ ಯುಕ್ತವಾದ ಉತ್ತಮ ಭಕ್ತಿಭಾವದಿಂದ ಅರ್ಪಿಸಬೇಕೆಂದು ನಾಲ್ಕನೆಯ ಪದ್ಯದಲ್ಲಿ ಕರ್ಮಾರ್ಪಣೆಯ ಅನುಸಂಧಾನ ಕ್ರಮವನ್ನು ತಿಳಿಸುತ್ತಾರೆ.

ಪೂರ್ವೋಕ್ತ ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯಗಳಲ್ಲಿ ಕ್ರಮವಾಗಿ ಶ್ರೀಕೃಷ್ಣ (ಕಂಸಾರಿ), ಪರಶುರಾಮ (ಭಾರ್ಗವ) ಮತ್ತು ಹಯಗ್ರೀವ ಎಂಬ ಮೂರು ರೂಪಗಳಿಂದ ಶ್ರೀ ಪರಮಾತ್ಮನಿದ್ದಾನೆ. ತ್ರಿವಿಧ ಜೀವರ ಪ್ರಕಾರ, ಕರ್ಮತ್ರಯಗಳು × ತ್ರಿವಿಧ ಜೀವವರ್ಗ = ೯ ರೂಪಗಳಿಂದ ವಿದ್ಯಮಾನನಾಗಿದ್ದು, ಸಾತ್ವಿಕರು (ಸೂರಿ), ರಾಜಸರು (ಮಾನವ) ಮತ್ತು ತಮೋಯೋಗ್ಯರು (ದಾನವರು), ಈ ಜೀವತ್ರಯದಲ್ಲಿ ಪ್ರೇರ್ಯ ಪ್ರೇರಕನಾಗಿದ್ದಾನೆ. ಬಿಂಬಕ್ರಿಯಾದ್ವಾರಾ ಸಕಲ ಕರ್ಮಗಳನ್ನೂ ತಾನು ಮಾಡಿ, ತ್ರಿವಿಧ ಜೀವರದ್ವಾರಾ ಮಾಡಿಸುತ್ತಿದ್ದರೂ, ತಾನು ಮಾತ್ರ ನಿರ್ಲಿಪ್ತನು (ವಿಕಾರಶೂನ್ಯನು) ಆ ಕರ್ಮ ಮತ್ತು ಕರ್ಮಫಲ ಲೇಪ ಶ್ರೀ ಪರಮಾತ್ಮನಿಗಿಲ್ಲ. ಆದ್ದರಿಂದ ಜಗದ್ವಿಲಕ್ಷಣನು. ಸರ್ವಸಾರ ಭೋಕ್ತವಾದ ಶ್ರೀಹರಿಯು ಸ್ವರಮಣನು. ಆಪ್ತಕಾಮನು. ಸ್ವಾಖ್ಯರಸ ಮಾತ್ರ ಸ್ವೀಕರಿಸಿ, ತ್ರಿವಿಧರಿಗೆ ಅವರ ಕರ್ಮಫಲಗಳನ್ನು ಉಣಿಸುವನು.

ಶ್ರೀಹರಿಯ ಪರಮ ವೈಲಕ್ಷಣ್ಯ ಧರ್ಮವನ್ನು ೬ನೆಯ ಪದ್ಯದಿಂದ ಇನ್ನೂ ವಿವರವಾಗಿ ನಿರೂಪಿಸುತ್ತಾರೆ. ಅಗ್ನಿಯಿಂದ ಅಕ್ಕಿಯನ್ನು ಬೇಯಿಸಿ ಅನ್ನಮಾಡುತ್ತೇವೆ. ಪುನಃ ಪಚನಗೈದ ಆ ಅನ್ನವನ್ನೇ ಅಗ್ನಿಯಲ್ಲಿ ಆಹುತಿ ರೂಪದಿಂದ ಹೋಮಿಸುತ್ತೇವೆ. ಅದರಂತೆಯೇ ದೇವತಾಪ್ರಭುವಾದ ಆ ಜಗತ್ಸ್ವಾಮಿಯು ಸಕಲ ಚೇತನರಲ್ಲಿದ್ದು, ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ಜೀವರ ದ್ವಾರಾ ಮಾಡಿಸುವ ಅಖಿಳ ಕರ್ಮಗಳನ್ನೂ (ಶುಭ, ಮಿಶ್ರ ಮತ್ತು ಅಶುಭ) ಮನಸ್ಸು, ವಾಕ್ಕು ಮತ್ತು ದೇಹ ಈ ಮೂರು ಮಾಧ್ಯಮ

ಗಳ ದ್ವಾರಾ, ಜ್ಞಾನಾನುಸಂಧಾನ ಪೂರ್ವಕ ತಿಳಿದು, ಯಾವ ಸಂಶಯ ವನ್ನೂ ಹೊಂದದೆ, ಅವನಿಗೆ ಅರ್ಪಿಸು. ಆಗ ಸಕಲಪಾಪಹರನಾದ ಶ್ರೀ ಪರಮಾತ್ಮನು (ವೃಜನಾರ್ದನ), ಕಾಯಕ ಮಾನಸಿಕ ಹಾಗೂ ವಾಚನಿಕವಾದ ಸಕಲ ಕರ್ಮಗಳನ್ನೂ ತಾನು ಸ್ವೀಕರಿಸಿ, ತನ್ನ ಭಕುತರನ್ನು ನಿರಂತರದಿ ಸಂರಕ್ಷಣ ಮಾಡುತ್ತಾನೆ.

ಮುಂದಿನ ೭ನೆಯ ಪದ್ಯದಿಂದ ಅತ್ಯಂತ ಸೂಕ್ಷ್ಮರೂಪದಲ್ಲಿರುವ ಜೀವನ ಪರಮಾಣು ಸ್ವರೂಪ ಪ್ರಮಾಣವನ್ನು ದೃಷ್ಟಾಂತಪೂರ್ವಕ ತಿಳಿಸುತ್ತಾರೆ. ಕುದುರೆಯ ಬಾಲ ಅತಿಸೂಕ್ಷ್ಮ. ಉದ್ದವಾಗಿದ್ದು ಏಕಪ್ರಕಾರವಾದ ಮಂದತ್ವ ವನ್ನು ಹೊಂದಿರುವುದು, ಅಂತಹ ಕುದುರೆ ಬಾಲದ ಒಂದು ಕೂದಲನ್ನು ತೆಗೆದುಕೊಂಡು, ಅದರ ತುದಿಯನ್ನು ನೂರು ಭಾಗಗಳಾಗಿ ವಿಭಾಗಿಸಿ, ನೂರನೆಯ ಒಂದು ಅಂಶವನ್ನು ಪುನಃ ಶತಭಾಗವನ್ನಾಗಿ ಮಾಡಿದರೆ, ಅತ್ಯಂತ ಸೂಕ್ಷ್ಮಭಾಗವು ಸಿಗುವುದು. ಬ್ರಹ್ಮಾದಿ ಸಮಸ್ತ ಜೀವರಾಶಿಗಳ ಸ್ವರೂಪ ದೇಹದ ಪ್ರಮಾಣವು ಕುದುರೆಬಾಲದ ತುದಿಯ ಹತ್ತು ಸಾವಿರದ ಒಂದನೆಯ ಅಂಶದಷ್ಟು ಸೂಕ್ಷ್ಮವಾಗಿದ್ದು, ಏಕರೀತಿಯಾಗಿರುವುದು. ಜೀವವರ್ಗದಲ್ಲಿ ತಾರತಮ್ಯವಿದೆ. (ಗುಣ ತಾರತಮ್ಯ) ಆದರೆ ಬ್ರಹ್ಮಾದಿ ತೃಣಾಂತ ಸಕಲ ಜೀವರ ಸ್ವರೂಪದೇಹದ ಪರಿಮಾಣ ಒಂದೇ. ಇಂತಹ ಪರಿಮಾಣು ಜೀವ ನಲ್ಲಿ ನ್ಯೂನಾಧಿಕಗಳಿಲ್ಲ.

ಸ್ವರೂಪದೇಹದಲ್ಲಿ ಹಾಗೂ ಸ್ಥೂಲದೇಹದಲ್ಲಿ ವ್ಯಾಪ್ತವಾಗಿರುವ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ ಮುಂದಿನ ೮ನೆಯ ಪದ್ಯದಲ್ಲಿ. ಮೂಲೇಶ, ಅಗ್ರೇಶ ಮತ್ತು ಪ್ರಾದೇಶ ರೂಪಗಳ ವಿವರಗಳು. ಜೀವನ ಸ್ವರೂಪದೇಹದ ಹೆಬ್ಬೆರಳಿನ ತುದಿಯಗಾತ್ರದ (ಅಂಗುಟಾಗ್ರ ಮೂರ್ತಿ) ಭಗವದ್ರೂಪಕ್ಕೆ **ಮೂಲೇಶನೆಂದು** ಹೆಸರು. ಜೀವನಸ್ವರೂಪ ದೇಹದ ಹೆಬ್ಬೆರಳಿನ ಗಾತ್ರದಷ್ಟು ಇರುವ ಭಗವದ್ರೂಪಕ್ಕೆ **ಅಗ್ರೇಶ**ನೆಂದು ಹೆಸರು. ಅಗ್ರೇಶನು ಅಂಗುಟಮೂರುತಿ. ಜೀವನ ಸ್ವರೂಪ ದೇಹದ ಹೆಬ್ಬೆರಳು ಮತ್ತು ತರ್ಜನೀ ಇವುಗಳಿಗಿರುವ ಅಂತರಕ್ಕೆ ಪ್ರಾದೇಶ ಎಂದು

ನಾಮ, ಈ ಭಗವದ್ರೂಪವೇ **ಪ್ರಾದೇಶನಾಮಕ** ಶ್ರೀ ಪರಮಾತ್ಮನದು. ಜೀವಸ್ವರೂಪವನ್ನು ಆದ್ಯಂತವಾಗಿ ವ್ಯಾಪಿಸಿರುವ ರೂಪವು **ಜೀವಕಾರ ಮೂರುತಿ.** ಇಂತು ಜೀವರ ಸ್ವರೂಪದೇಹದ ಅವಯವಗಳಲ್ಲಿ ವ್ಯಾಪಿಸಿರುವ ಹಾಗೂ ಸ್ಥೂಲದೇಹದಲ್ಲಿ ವ್ಯಾಪ್ತವಾಗಿರುವ ಭಗವದ್ರೂಪೋಪಾಸನೆ ಅತ್ಯಗತ್ಯ. ಇಂತಹ ವ್ಯಾಪ್ತರೂಪಗಳಿಂದ ಪರಮ ಕರುಣಾಳುವಾದ ಶ್ರೀಹರಿಯು ಜಗತ್ರಯವನ್ನು ರಕ್ಷಿಸುತ್ತಿರುವನು.

ಬಿಂಬರೂಪಿಯಾದ ಶ್ರೀ ಪರಮಾತ್ಮ ಜೀವನ ಅಂಗುಷ್ಟ ಪರಿಮಿತನಾಗಿ ಜೀವಾಕಾರನಾಗಿ ಸರ್ವಚೇತನರಲ್ಲಿ ಆವಾಸನಾಗಿದ್ದಾನೆ. ಜೀವನ ಹೃದಯಾ ಕಾಶದಲ್ಲಿ ಹೃತ್ಕಮಲದಲ್ಲಿ ನೆಲೆಸಿದ್ದಾನೆ. ಅವನೇ ವಿಶ್ವಂಭರನಾಮಕನಾದ ಮೂಲೇಶನು. ಪ್ರಾದೇಶನಾಮಕ ಶ್ರೀ ಪರಮಾತ್ಮನಿಗೆ **ಪ್ರಾಜ್ಞ** ಎಂತ ಹೆಸರು. ಇಂತಹ ಬಿಂಬರೂಪಿ ವಿಶ್ವಂಭರಾತ್ಮಕ ಪ್ರಾಜ್ಞನಿಗೆ ಸಮಸ್ತ ಜಗತ್ತೇ ಒಂದು ಕುಟುಂಬ. ಸಕಲ ಭಕ್ತರೂ ಅವನ ಕಟುಂಬಕ್ಕೆ ಸೇರಿದವರು, ಇದರಿಂದ ವಿಶ್ವಕುಟುಂಬಿಯು ಈ ರೀತಿಯಲ್ಲಿ ಉಪಾಸನಾಮಾಡತಕ್ಕವರನ್ನು ಸದಾ ಸಂರಕ್ಷಿಸುವನು.

ಸರ್ವಜೀವರ ಸ್ವರೂಪದೇಹ, ಲಿಂಗಶರೀರ, ಅನಿರುದ್ಧದೇಹ ಮತ್ತು ಸ್ಥೂಲಶರೀರಗಳಲ್ಲಿ ಆಯಾಯಾ ದೇಹಕಾರನಾಗಿರುವ ಶ್ರೀ ಪರಮಾತ್ಮನ ರೂಪಕ್ಕೆ **ಪುರುಷ**ನೆಂದು ಹೆಸರು. ಸಕಲೇಂದ್ರಿಯಗಳಲ್ಲಿದ್ದು ಇಂದ್ರಿಯ ಪ್ರೇರಕನಾಗಿರುವುದರಿಂದ **ಹೃಷೀಕೇಶ**ನೆಂದು ಹೆಸರು. ಮೋಕ್ಷದಾಯಕ ವಾಸುದೇವನೇ ತುರ್ಯನಾಮಕ **ವಿಶ್ವನು.** ಇಂತಹ ವಿಶ್ವನು ಭ್ರೂಮಧ್ಯ ದಿಂದ ಆರಂಭಿಸಿ ೧೨ ಅಂಗುಲದ ಮೇಲೆ ಇರುವ ಬ್ರಹ್ಮರಂಧ್ರದಲ್ಲಿ ತುರ್ಯ ನೆಂದು ಖ್ಯಾತನಾಗಿದ್ದಾನೆ, ಬ್ರಹ್ಮರಂಧ್ರಗತ ತುರ್ಯನೇ ಮೋಕ್ಷಪ್ರದ ವಾಸುದೇವರೂಪನು. ಪುರುಷನಾಮಕ ವಾಸುದೇವನು ಸ್ಥೂಲಶರೀರಾ ದ್ಯಂತ ವ್ಯಾಪಿಸಿರುವ ೭೨,೦೦೦ ನಾಡಿಗಳಲ್ಲಿ ವಿದ್ಯಮಾನನಾಗಿದ್ದಾನೆ.

ಬಿಂಬರೂಪಿಯಾದ ಶ್ರೀಹರಿಯು ಸ್ವರೂಪದೇಹದ ಒಳಗೆ ಅಂತ ರ್ಯಾಮಿ ರೂಪದಿಂದಿರುವನು. ಆ ಹರಿಯೇ ಸ್ವರೂಪದ ಹೊರ ಆವರಣ

ದಲ್ಲಿರುವ ಲಿಂಗ, ಅನಿರುದ್ಧ ಮತ್ತು ಸ್ಥೂಲದೇಹಗಳಲ್ಲಿ ವ್ಯಾಪಕನಾಗಿದ್ದು, ಜೀವರ ಪರವಾಗಿ ಜೀವಕೃತಕರ್ಮಗಳನ್ನು ತಾನೇ ಮಾಡಿದರೂ, ಅದರಿಂದ ನಿರ್ಲೇಪನಾಗಿರುವನು. ಅಂತಹ ಬಿಂಬನು ಅರುಣವರ್ಣಕಾಂತಿಯಿಂದ ವಿಶಿಷ್ಟನಾಗಿ. ವಿಶ್ವಾದಿ ಅಷ್ಟ ಭಗವದ್ರೂಪಗಳ ಮಧ್ಯೆ (ಸ್ವಮೂರ್ತಿ ಮಧ್ಯಗ) ವಿರಾಜಮಾನನಾಗಿದ್ದು ಬ್ರಹ್ಮ, ವಾಯು ರುದ್ರಾದಿ ದೇವತಾ ಗಣದಿಂದ ಸಂಸೇವ್ಯಮಾನನಾಗಿದ್ದಾನೆ.

ಮುಂದಿನ ೧೨ನೆಯ ಪದ್ಯದಿಂದ, ಜೀವನ ಸ್ವರೂಪದೇಹದಲ್ಲಿ ವಾಯುದೇವರ ಪ್ರವೇಶ ವಿಚಾರವನ್ನು ವಿವರಿಸುತ್ತಾರೆ. ಇದು ವಿವಾದಾಸ್ಪದವಾದ ವಿಷಯ. ಜ್ಞಾನಿಗಳಲ್ಲಿ ಎರಡು ಪ್ರಕಾರವಾದ ಅಭಿಪ್ರಾಯಗಳಿವೆ. ಇಬ್ಬರೂ ತಮ್ಮ ವಾದವನ್ನು ಸಮರ್ಥಿಸಲು ಯುಕ್ತ ಪ್ರಮಾಣಗಳನ್ನು ತೋರಿಸುತ್ತಾರೆ. (೧) ವಾಯುದೇವರಿಗೆ ಸ್ವರೂಪದೇಹದಲ್ಲಿ ಪ್ರವೇಶವಿಲ್ಲ ಇದೊಂದು ಮತ. **ಶ್ರೀ ಸಂಕರ್ಷಣ ಒಡೆಯರು** ತಮ್ಮ ವ್ಯಾಖ್ಯಾನದಲ್ಲಿ ಸಪ್ರಮಾಣವಾಗಿ ಈ ಅಭಿಪ್ರಾಯವನ್ನು ಸಮರ್ಥಿಸಿರುವರು. (೨) ಸ್ವರೂಪದೇಹದಲ್ಲಿ ವಾಯು ದೇವರ ಪ್ರವೇಶವಿದೆ. ಇದನ್ನು ಒಪ್ಪದಿದ್ದವರು ನರಕಭಾಜನರೆಂದು ಉಳಿದ ವ್ಯಾಖ್ಯಾನಕಾರರ ಮತ. ಶ್ರೀಹರಿಯೇ ಗರುಡ. ಶೇಷ ಭವಾದಿನಾಮಗಳಿಂದ ಸ್ವರೂಪದೇಹದಲ್ಲಿದ್ದು, ವ್ಯಾಪಾರ ಮಾಡುತ್ತಾನೆ. ಜೀವಕೋಟಿಯಲ್ಲಿ ಪ್ರವಿಷ್ಟರಾಗಿರುವ ಅತ್ಯಣುಪ್ರಮಾಣ ಸ್ವರೂಪದೇಹವುಳ್ಳ ಲಿಂಗದೇಹಸಹಿತವಾದ ಶ್ರೀ ವಾಯುದೇವರಿಗೆ ಸ್ವರೂಪ ಶರೀರದಲ್ಲಿ ವ್ಯಾಪ್ತಿ ಇಲ್ಲವೆಂದು ಒಂದು ವಾದ. ಜೀವೋತ್ತಮರಾಗಿರುವುದರಿಂದ ಜೀವನ ಸ್ವರೂಪಯೋಗ್ಯತೆಯನ್ನು ಬಲ್ಲ ವಾಯುದೇವರು. ಗರಿಮಾ ಲಘಿಮಾ ಮಹಿಮಾನ್ವಿತರಾದುದರಿಂದಲೂ ಮತ್ತು ಅವರ ಲಿಂಗಶರೀರ ಕೇವಲ ಧಗ್ಧಪಟದಂತೆ ಇರುವುದರಿಂದಲೂ ಸ್ವರೂಪಶರೀರದಲ್ಲಿ ಅವರ ವ್ಯಾಪ್ತಿಗೆ ಯಾವ ಆಕ್ಷೇಪವೂ ಸಲ್ಲದೆಂದು ಇತರರ ವಾದ, ಲಿಂಗದೇಹದಲ್ಲಿ ಬ್ರಹ್ಮದೇವರು (ಸರಸಿಜಾಸನ) ಸರಸ್ವತೀ, ಭಾರತೀ ಮತ್ತು ಭರತನಾಮಕರಾದ ವಾಯುದೇವರ ಸಹಿತ ಇದ್ದಾರೆ. ಅವರನ್ನುಳಿದು (ಪರಶುಕ್ಲತ್ರಯರು) ಇತರ ದೇವತೆಗಳಿಗೆ ಲಿಂಗದೇಹದಲ್ಲಿ ಪ್ರವೇಶವಿಲ್ಲ. ಇದರ ವಾದವಿವಾದಗಳ

ಸರಣಿಯನ್ನು ಮುಂದೆ ೧೨ನೆಯ ಪದ್ಯದ "ಸರ್ವವ್ಯಾಖ್ಯಾನಸಾರ ಸಂಗ್ರಹ" ದಲ್ಲಿ ಕೊಟ್ಟಿದೆ ಅಲ್ಲಿ ವಾಚಕರು ಅವಲೋಕಿಸಿ ವಿಚಾರಮಾಡತಕ್ಕದ್ದು.

ಮುಂದಿನ ೧೩ನೆಯ ಪದ್ಯದಲ್ಲಿ ಲಿಂಗಶರೀರದ ವಿಚಾರ ಹೇಳುತ್ತಾರೆ. ಅಕ್ಕಿಗೆ ಸುತ್ತಲೂ ತವಡು ಎಂಬ ಹೊಟ್ಟು (ತುಷದಂತೆ) ಆವರಿಸಿರುವುದು. ಅದರಂತೆ ಜೀವನ ಸ್ವರೂಪದೇಹದ ಸುತ್ತಲೂ ಹೊರಾವರಣರೂಪವಾಗಿ ಅನಾದಿ ಲಿಂಗದೇಹವಿದೆ. ಲಿಂಗಶರೀರಕ್ಕೂ ಮತ್ತು ಸ್ವರೂಪಶರೀರಕ್ಕೂ ಮಧ್ಯೆ ಅವಕಾಶವಿದೆ. (ಗಜ್ಜುಗದಲ್ಲಿರುವ ಬೀಜದಂತೆ) ಅಂದರೆ ಸ್ವರೂಪ ದೇಹಕ್ಕೆ ಲಿಂಗಶರೀರವು ಸಾವಕಾಶವಾಗಿ ಆವರ್ಕರೂಪದಲ್ಲಿದೆ. ಇದು ಅನಾದಿಯಿಂದ ಇದೆ. ಸೂಕ್ಷ್ಮವಾದ ಜಡಪ್ರಕೃತಿಯ ಅಧಿಷ್ಠಾನವೇ ಇದು. ಈ ಲಿಂಗಶರೀರವು ತ್ರಿಗುಣಾತ್ಮಕವಾದದ್ದು, ೧೬ ಕಳಾಯುಕ್ತವಾದದ್ದು. ಜಡ ಪ್ರಕೃತಿಯ ಅಭಿಮಾನಿಯಾದ **ಮಹಾಲಕ್ಷ್ಮಿಯೇ** ಲಿಂಗದೇಹಕ್ಕೆ ಅಭಿಮಾನಿ ಗಳು. ತ್ರಿಗುಣಾಭಿಮಾನಿಗಳಾದ ಶ್ರೀ ರಮಾ ಸತ್ವ. ರಜ ಮತ್ತು ತಮ ಆವರಣತ್ರಯಗಳಿರುವ ಅವ್ಯಕ್ತ ತತ್ತ್ವಸಾಂಕೇತವಾದ ಈ ಲಿಂಗದೇಹಕ್ಕೆ ಶ್ರೀ ಭೂ ದುರ್ಗಾರೂಪತ್ರಯಗಳಿಂದ ಅಭಿಮಾನಿಗಳು. ಸಾತ್ವಿಕರಿಗೆ ವಿರಜಾ ನದಿಯ ಸ್ನಾನದಿಂದ ಲಿಂಗ ಭಂಗ. ಅಂದರೆ ಅನಾದಿಕರ್ಮವಿಮೋಚನೆ. ಲಕ್ಷ್ಮ್ಯಾತ್ಮಕವಾದ ವಿರಜಾಸ್ನಾನ ಪರ್ಯಂತ ಈ ಅನಾದಿಲಿಂಗ ಭಗವದಿಚ್ಛೆ ಯಿಂದ ಜೀವನ ಸ್ವರೂಪದೇಹಕ್ಕೆ ಹತ್ತಿಕೊಂಡಿದೆ.

ಪುನಃ ಮುಂದಿನ ೧೪ನೆಯ ಪದ್ಯದಿಂದ ಲಿಂಗಶರೀರದ ಹೆಚ್ಚು ವಿವರಣೆ ಯನ್ನು ಕೊಡುತ್ತಾರೆ. ಅನಾದಿಲಿಂಗವು ಷೋಡಶ ಕಳಾತ್ಮಕವಾದದ್ದು. ಅಂದರೆ ೧೬ ಕಳೆಗಳಿಂದ ಯುಕ್ತವಾಗಿದೆ. ಅವು ಇಂದ್ರಿಯಗಳು ೧೦+ ಮನಸ್ಸು ೧+ಶಬ್ದಾದಿ ತನ್ಮಾತ್ರಗಳು ೫=೧೬ ಕಳೆಗಳು. ಲಿಂಗದೇಹಕ್ಕೂ ಮತ್ತು ಅದಕ್ಕೆ ಆವರ್ಕರೂಪದಲ್ಲಿರುವ ಅನಿರುದ್ಧ ಶರೀರಕ್ಕೂ ಮಧ್ಯೆ ಎರಡು ತೆರೆಗಳಿವೆ (ಆಚ್ಛಾದಿಕ) (೧) ಜೀವಾಚ್ಛಾಧಿಕ ಮತ್ತು (೨) ಪರಮಾ ಚ್ಛಾಧಿಕ. ದಾನವರ ಪ್ರವೇಶವಾಗದಂತೆ ಜನಾರ್ದನರೂಪಿ ಶ್ರೀ ಪರಮಾತ್ಮನು ಸತ್ವರಜಸ್ತಮೋಗುಣಗಳೆಂಬ ತ್ರಿಗುಣಗಳಲ್ಲಿ ತಾನಿದ್ದು, **ತ್ರಿವೃತು** ಎಂಬ

ಹೆಸರಿನಿಂದ ಆ ಗುಣತ್ರಯಕಾರ್ಯಗಳನ್ನು ಶ್ರೀ ರಮಾ ದ್ವಾರಾ ನಡೆಯಿ ಸುತ್ತಾ, ದೈತ್ಯರನ್ನು ದೂರದಲ್ಲಿ ಓಡಿಸುವನು.

ಇನ್ನು ಅನಿರುದ್ಧ ಶರೀರದ ವಿಚಾರವನ್ನು ಮುಂದಿನ ೧೫ನೆಯ ಪದ್ಯದಲ್ಲಿ ವಿವರಿಸುತ್ತಾರೆ. ಅನಾದಿಲಿಂಗದೇಹದ ಮೇಲೆ ಅನಿರುದ್ಧ ಶರೀರವು ಆವರಣ ರೂಪದಲ್ಲಿದೆ. ರುದ್ರ, ಇಂದ್ರ, ಮೊದಲಾದ ತಾತ್ವಿಕದೇವತೆಗಳು ತಮ್ಮ ಭಾರ್ಯಾಸಹಿತರಾಗಿ ಈ ಅನಿರುದ್ಧ ಶರೀರದಲ್ಲಿ ಆವಾಸವಾಗಿದ್ದಾರೆ. ಅಂತೆಯೇ ತತ್ತ್ವದೈತ್ಯರೂ ಪತ್ನೀಸಮೇತ ಇದ್ದಾರೆ. ಅವರಿಗೆ ಅನಿರುದ್ಧ ಶರೀರದಲ್ಲಿ ಕೇವಲ ವ್ಯಾಪ್ತಿಮಾತ್ರ. ವ್ಯಾಪಾರಗಳಿಲ್ಲ. ಅದರ ಮೇಲೆ ಇರುವ ಚತುರ್ವಿಂಶತಿ ತತ್ತ್ವಯುಕ್ತವಾದ ಈ ಸ್ಥೂಲದೇಹದಲ್ಲಿ ದೇವ ದಾನವರು ಪರಸ್ಪರ ಸ್ಪರ್ಧೆಯಿಂದ ದ್ವಂದ್ವ ಕರ್ಮಗಳನ್ನು ಮಾಡುತ್ತಿರುವರು. ಪುಣ್ಯ ಕೆಲಸಗಳು ದೇವತೆಗಳ ದ್ವಾರವೂ ಮತ್ತು ಪಾಪಕರ್ಮಗಳು ದೈತ್ಯರ ದ್ವಾರವೂ ನಡೆಯುತ್ತಿರುವುವು. ಆ ತತ್ತ್ವಾಭಿಮಾನಿ ದೇವ ದೈತ್ಯರು ಜೀವೋತ್ತಮರಾದ ಶ್ರೀ ವಾಯುದೇವರ ನಿಯಂತ್ರಣದಲ್ಲಿ ಅವರ ಆ ಜ್ಞಾನಾನುಸಾರ ವ್ಯಾಪಾರಗಳನ್ನು ಮಾಡುವರು.

ಮುಂದಿನ ೧೬ನೆಯ ಪದ್ಯದಲ್ಲಿ ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯಗಳ ವಿವರ ಹೇಳುತ್ತಾರೆ. ಈ ಭೂಮಂಡಲದಲ್ಲಿ ಬದರಿ, ತಿರುಪತಿ ಇತ್ಯಾದಿ ತೀರ್ಥಕ್ಷೇತ್ರಗಳ ಯಾತ್ರೆ, ಆಯಾಯಾ ತೀರ್ಥಕ್ಷೇತ್ರ ಗಳಲ್ಲಿ ಚಳಿಗಾಲ (ತುಹಿನ), ವಸಂತಕಾಲ ಇತ್ಯಾದಿ ಕಾಲ ಧರ್ಮಗಳಿಗನು ಗುಣವಾಗಿ ಮಾಡುವ ಚಾತುರ್ಮಾಸ ಇತ್ಯಾದಿ ಕರ್ಮ ವಿಶೇಷಗಳು, ದೇಹ ಸಂಬಂಧವಾದ, ಸಕಲ ವ್ಯಾಪಾರಗಳು ಇವುಗಳನ್ನು ಬ್ರಹ್ಮಾದಿ ಸಕಲ ತತ್ತ್ವಾಭಿಮಾನಿ ದೇವತೆಗಳು ನಮ್ಮ ಸ್ಥೂಲ ಶರೀರದಲ್ಲಿ ವಿದ್ಯಮಾನರಾಗಿದ್ದು, ಸತ್ವರಜಸ್ತಮೋಗುಣ ಧರ್ಮಗಳಿಗನುಸಾರವಾಗಿ ಸಮಸ್ತ ಚೇತನರಲ್ಲಿ ನಿರ್ಭಯದಿಂದ ಕಾರ್ಯಗಳನ್ನು ಮಾಡುತ್ತಿರುವರು. ದೈತ್ಯರಲ್ಲಿ ದೇವತೆಗಳೇ ಸನ್ನಿಹಿತರಾಗಿದ್ದು, ಪಾಪಕರ್ಮಗಳನ್ನು ಮಾಡಿ ಮಾಡಿಸುವರು.

ತಲೆಯ ಕೂದಲನ್ನು ನೀಳವಾಗಿ ಒಂದು ಸಹಸ್ರ ಭಾಗಗಳಾಗಿ ಸೀಳಿದರೆ, ಅದರ ಒಂದಂಶವು ಸಾವಿರದ ಒಂದನೇ ಭಾಗವಾಗಿರುವದು. ಇಷ್ಟು ಸೂಕ್ಷ್ಮವಾಗಿರುವ ನಾಡಿಗೆ **ಸುಷುಮ್ನಾ** ಎಂದು ಹೆಸರು. ಇದಕ್ಕೆ **ಮಧ್ಯನಾಡಿ** ಅಥವಾ **ಬ್ರಹ್ಮನಾಡಿ** ಎಂತಲೂ ಕರೆಯುವರು, ಈ ಸೂಕ್ಷ್ಮತಮವಾದ ಸುಷುಮ್ನಾನಾಡಿಯು ಮೂಲಾಧಾರವಾದ ತುಂದಿಯಿಂದ ನೇರವಾಗಿ ಹೊರಟು, ದೇಹದ ಮಧ್ಯದಲ್ಲಿ (ಬೆನ್ನಿನ ಹುರಿ) ವ್ಯಾಪಿಸಿಕೊಂಡು ಬ್ರಹ್ಮರಂಧ್ರಪರ್ಯಂತ ಇದೆ. ಇದು ಮಧ್ಯನಾಡಿಯು. ಇದಕ್ಕೆ (೧) ಪೂರ್ವದಲ್ಲಿ **ಪ್ರಕಾಶಿನೀ** ಎಂಬ ನಾಡಿಯೂ (೨) ದಕ್ಷಿಣದಲ್ಲಿ **ವೈದ್ಯುತೀ** ಎಂಬ ನಾಡಿಯೂ, (೩) ಪಶ್ಚಿಮಕ್ಕೆ **ವಜ್ರಿಕಾ** ಎಂಬ ನಾಡಿಯೂ ಮತ್ತು (೪) ಉತ್ತರಕ್ಕೆ **ಅರ್ಯಕಾ** ಎಂಬ ನಾಡಿಯೂ ವ್ಯಾಪಿಸಿವೆ. ನಾಲ್ಕು ದಿಕ್ಕುಗಳಲ್ಲಿರುವ ಈ ನಾಲ್ಕು ನಾಡಿಗಳ ಸಹಿತ ಮಧ್ಯಗತವಾದ ಸುಷುಮ್ನಾ ಸೇರಿ, ಐದು ನಾಡಿಗಳಾಗುವುವು "**ಸುಷುಮ್ನಾ ಪಂಚಪ್ರಭೇದಿನೀ**"–ಎಂಬ ಪ್ರಮಾಣವು ಇದಕ್ಕೆ ಅಧಾರವಾಗಿದೆ. ಇದು ಮುಂದಿನ ೧೭ನೆಯ ಪದ್ಯದ ತಾತ್ಪರ್ಯವು.

ಮುಂದಿನ ೧೮ನೆಯ ಪದ್ಯದಲ್ಲಿ ತ್ರಿಕೋಣಚಕ್ರ ಮತ್ತು ಅಗ್ನಿ ಮಂಡಲದ ವಿಚಾರ ಹಾಗೂ ಪಾಪಪುರುಷನ ದಹನ ವಿಷಯವನ್ನು ತಿಳಿಸುತ್ತಾರೆ. ಬ್ರಹ್ಮನಾಡಿ ಎಂದೆನಿಪ ಸುಷುಮ್ನಾ ನಾಡಿಯಲ್ಲಿ ತ್ರಿಕೋಣಾಕಾರದ (ಮೂರು ಮೂಲೆಯು) ಅಗ್ನಿ ಮಂಡಲವಿದೆ (ಕೃಶಾನು ಮಂಡಲ) ಇದರಲ್ಲಿ ಸಂಕರ್ಷಣಾಖ್ಯನು ವಿದ್ಯಮಾನನಾಗಿದ್ದಾನೆ, ಪರಮ ನೀಚನಾದ ಪಾಪಪುರುಷನನ್ನು (ಕಲಿ) ಈ ಅಗ್ನಿಮಂಡಲದಲ್ಲಿ ಸಂಕರ್ಷಣನು ದಹಿಸುವನು. ಪುನಃ ಆ ಪಾಪಪುರುಷನ ಉತ್ಪತ್ತಿ. ಇಂತು ಈ ಪಾಪಪುರುಷನನ್ನು ಬ್ರಹ್ಮನಾಡೀ ಪ್ರವೇಶಕ್ಕೆ ಅವಕಾಶವೀಯದಂತೆ ಸಂಕರ್ಷಣನು ದಹನಮಾಡಿ ದೇಹಶುದ್ಧಿ ಗೋಸುಗ ಶರೀರದಲ್ಲಿ ತುರ್ಯನಾಮಕನಾಗಿರುವ ವಿಜ್ಞಾನಮಯ ಕೋಶಾಭಿಮಾನಿ ಶ್ರೀ ಪುರುಷಶಬ್ದವಾಚ್ಯ ವಾಸುದೇವನನ್ನು ಕೂಡಿಕೊಂಡು. ವರುಣ ಬೀಜದಿಂದ ಅಮೃತವೃಷ್ಟಿ ಸುರಿಸುವನು. ಸುಷುಮ್ನಾ ನಾಡಿಯ ಮಧ್ಯದಲ್ಲಿ ಹೃದಯಭಾಗದಲ್ಲಿ ಅಷ್ಟದಳ ಪದ್ಮವಿದೆ. ಈ ಹೃದಯಕಮಲದ

ಮೂಲದಲ್ಲಿ ಮೂಲೇಶ ನಾರಾಯಣನು ಅಷ್ಟಬಾಹು ಯುಕ್ತವಾಗಿ, ಅಷ್ಟಾಯುಧ ಸಹಿತನಾಗಿ ಇದ್ದಾನೆ. ಅಂತಹ ಮೂಲೇಶ ನಾರಾಯಣನ ಪಾದಪದ್ಮದಲ್ಲಿ ಮುಖ್ಯಪ್ರಾಣರಾದ ಪವಮಾನರಿದ್ದಾರೆ. ಆ ಪವನನ ಪಾದ ಮೂಲದಲ್ಲಿ ಲಿಂಗಾನಿರುದ್ಧ ಶರೀರಯುಕ್ತನಾದ ಜೀವನು ಆಶ್ರಯಿಸಿಕೊಂಡಿರುವನು. ಗಂಗಾಧರನಾದ ರುದ್ರದೇವರೇ ಆದಿಯಾಗಿ (ಕಪರ್ದಿ ಮೊದಲಾದವರೆಲ್ಲರು) ಅಷ್ಟದಿಕ್ಪಾಲಕರರಾದ ದೇವತೆಗಳು ಜೀವನನ್ನು ಸಂರಕ್ಷಿಸುತ್ತಾ, ತಮ್ಮ ತಮ್ಮ ಸ್ಥಾನಕ್ಕೆ ಹೃದಯ ಅಷ್ಟದಳಗಳಲ್ಲಿ ಸಂಚಾರ ಮಾಡುತ್ತಿರುವ ಮೂಲೇಶ ನಾರಾಯಣನನ್ನು ನಿರೀಕ್ಷಿಸಿಕೊಂಡಿರುವರು ಎಂದು ತಿಳಿಸುತ್ತಾರೆ ಮುಂದಿನ ೧೯ನೆಯ ಪದ್ಯದಿಂದ.

ಮುಂದಿನ ೨೦ನೆಯ ಪದ್ಯದಲ್ಲಿ ಹೃದಯ ಅಷ್ಟದಳ ಕಮಲಸ್ಥ ಮೂಲೇಶನ ಸಂಚಾರವನ್ನು ವಿವರಿಸುತ್ತಾರೆ. ಬ್ರಹ್ಮನಾಡಿಯ ಮಧ್ಯದಲ್ಲಿ ಹೃದಯಸ್ಥಾನದಲ್ಲಿ ವಿದ್ಯಮಾನವಾಗಿರುವ ಎಂಟು ದಳಗಳುಳ್ಳ ಪದ್ಮದಲ್ಲಿ ಹಂಸನಾಮಕನಾದ ಮೂಲೇಶನು ಕುಂಬಾರನ ಚಕ್ರದಂತೆ (ಕುಲಾಲಚಕ್ರದ ತೆರದಿ) ಸುತ್ತುತ್ತಿರುವನು. ಆಯಾಯಾ ಕಾಲಕ್ಕೆ ಆಯಾಯಾ ದಳಗಳಿಗೆ ಬಂದಾಗ, ಆ ದಳಗತ ದಿಕ್ಪಾಲಕರಿಂದ ಸಂಸೇವ್ಯಮಾನನಾಗಿ, ಅವರ ದ್ವಾರಾ ಜೀವರಿಗೆ ವಿವಿಧ ಮನೋವೃತ್ತಿಗಳನ್ನುಂಟುಮಾಡುವನು. ಎಣ್ದೆಸೆ ಎಂದರೆ ಎಂಟು ದಿಕ್ಕಿನಲ್ಲಿರುವ-ಎಂದರ್ಥ. (ಎಣ್ = ಎಂಟು, ದಿಶೆ = ದಿಕ್ಕು) ಅಂದರೆ ಅಷ್ಟದಿಕ್ಪಾಲಕರಾದ ಇಂದ್ರ, ಅಗ್ನಿ, ಯಮ, ನಿಋುತಿ, ವರುಣ, ವಾಯು, ಕುಬೇರ ಮತ್ತು ರುದ್ರ (ಈಶಾನ) ಈ ದೇವತೆಗಳಿಂದ ಸೇವೆಯನ್ನು ಸ್ವೀಕರಿಸುವನು ಎಂದು ತಾತ್ಪರ್ಯ.

ಇನ್ನು ೨೧ನೆಯ ಪದ್ಯದಲ್ಲಿ ಅಷ್ಟದಳಗತ ಅಷ್ಟದಿಕ್ಪಾಲಕರಿಂದ ಸಂಸೇವ್ಯಮಾನವಾದ ಬಿಂಬರೂಪಿ ಶ್ರೀಹರಿಯ ಭಗವದ್ರೂಪಗಳ ಉಪಾಸನಾಕ್ರಮ ತಿಳಿಸುತ್ತಾರೆ. (೧) ಪೂರ್ವದಿಕ್ಕಿನ ದಳದಲ್ಲಿ ಇಂದ್ರನಿಂದ ಸೇವಿತನಾದ ಇಂದ್ರಾನುಜ **ಉಪೇಂದ್ರ** ನಾಮಕ ಶ್ರೀ ಪರಮಾತ್ಮ (೨) ಆಗ್ನೇಯ ದಿಕ್ಕಿನ ದಳದಲ್ಲಿ ಅಗ್ನಿಯಿಂದ ಸೇವಿತನಾದ **ಪರಶುರಾಮ**

**ರೂಪ** (ರೇಣುಕಾತ್ಮಜ) (೨) ದಕ್ಷಿಣ ದಿಕ್ಕಿನ ದಳದಲ್ಲಿ ಯಮದೇವರಿಂದ ಸೇವಿತನಾದ **ಶ್ರೀ ರಾಮಚಂದ್ರಮೂರ್ತಿ** (ದಾಶರಥಿ) (೪) ನೈರುತ್ಯ ದಿಕ್ಕಿನಲ್ಲಿ ನಿರಋತಿಯಿಂದ ಸೇವಿತನಾದ, ಪಾಪಿಗಳಾದ ದೈತ್ಯರನ್ನು ಸಂಹರಿಸುವ **ವೃಜಿನಾರ್ದನರೂಪ** (೫) ಪಶ್ಚಿಮ ದಿಕ್ಕಿನ ದಳದಲ್ಲಿ ವರುಣನಿಂದ ಸಂಸೇವ್ಯಮಾನವಾದ **ಮತ್ಸ್ಯರೂಪ** (ಅಮಲ ಜಲಾಶಾಲಯ) (೬) ವಾಯುವ್ಯ ದಿಕ್ಕಿನ ದಳದಲ್ಲಿ ಪ್ರವಹವಾಯುವಿನಿಂದ ಸಂಸೇವಿತನಾದ **ಹಯವದನರೂಪ** (೭) ಉತ್ತರ ದಿಕ್ಕಿನ ದಳದಲ್ಲಿ ಕುಬೇರನಿಂದ **ಸೇವಿತ**ನಾದ **ಶ್ರೀ ಕಪಿಲರೂಪ** (೮) ಈಶಾನ್ಯ ದಿಕ್ಕಿನ ದಳದಲ್ಲಿ ಮಹರುದ್ರದೇವರಿಂದ ಸಂಸೇವ್ಯಮಾನವಾದ **ಶ್ರೀ ನರಸಿಂಹರೂಪ.** ಇಂತು, ಅಷ್ಟ ಸ್ವರೂಪಗಳಿಂದ ಅಷ್ಟದಳಗತ ಅಷ್ಟದಿಕ್ಪತಿಗಳಿಂದ ಸಂಸೇವ್ಯಮಾನವಾಗಿ ಅವರವರ ದ್ವಾರಾ ಜೀವನನ್ನು ಸಂತೋಷಪಡಿಸುತ್ತಾ, ನಿತ್ಯಾನಂದಮಯನಾದ ಶ್ರೀಹರಿಯು ಸಕಲ ಚೇತನರ ಹೃತ್ಕಮಲದಲ್ಲಿ **ಬಿಂಬ** ನಾಮಕನಾಗಿ ವಾಸವಾಗಿದ್ದಾನೆ.

ಮುಂದಿನ ೨೨ನೆಯ ಪದ್ಯದಿಂದ ಹೃತ್ಕಮಲಗತ ದಳಗಳಲ್ಲಿ ಬಿಂಬರೂಪಿ ಶ್ರೀಹರಿಯು ಸಂಚರಿಸುತ್ತಿರುವಾಗಿ. ದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಅಯಾಯಾ ದಿಕ್ಪತಿಗಳ ದ್ವಾರಾ ಕೊಡುವ ವಿವಿಧ ಮನೋವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ.

(೧) ಇಂದ್ರನ ಆಲಯವಾದ ಪೂರ್ವ ದಿಕ್ಕಿನ ದಳಕ್ಕೆ ಬಂದಾಗ. ಪುಣ್ಯಕಾರ್ಯಗಳಲ್ಲಿ ನಮ್ಮ ಮನಸ್ಸು ಪ್ರೇರಿತವಾಗುವುದು (ಸುರಪನಾಲಯ) (೨) ಅಗ್ನಿಯ ದಳವಾದ ಅಗ್ನೇಯಕ್ಕೆ ಬಂದಾಗ, ನಿದ್ರೆ, ಸೋಮಾರಿತನ (ಆಲಸ್ಯ), ಹಸಿವು ಮತ್ತು ಬಾಯಾರಿಕೆ ಆಗುವುದು. (೩) ಸೂರ್ಯಪುತ್ರನಾದ ಯಮನ ದಳಕ್ಕೆ ಅಂದರೆ ದಕ್ಷಿಣ ದಿಕ್ಕಿಗೆ ಬಂದಾಗ, (ತರಣಿ ತನಯ ನಿಕೇತನ) ಜೀವರಿಗೆ ಕೋಪೋದ್ರೇಕ ಉಂಟಾಗುವುದು. (೪) ದೋಷವಿದೂರನಾದ ಮೂಲೇಶನು ನೈರುತ್ಯ ದಿಕ್ಕಿನ ನಿರಋತಿಯ ದಳಕ್ಕೆ ಬಂದಾಗ, ನಾನಾ ಪ್ರಕಾರವಾದ ಪಾಪಕರ್ಮಗಳನ್ನು ಜೀವರಿಂದ ಮಾಡಿಸುವನು.

ಉಳಿದ ನಾಲ್ಕು ದಳಗಳ ವಿಚಾರವನ್ನು ೨೩ನಯ ಪದ್ಯದಿಂದ ಮುಂದು ವರಿಸುತ್ತಾರೆ. (೫) ಪಶ್ಚಿಮ ದಿಕ್ಕಿನ ದಳದಲ್ಲಿ (ವರುಣಾಲಯ) ಬಂಡಾಗ ವಿನೋದ-ಹಾಸ್ಯದ ಮಾತುಗಳನ್ನು ಆಡಿಸುತ್ತಾನೆ. (೬) ವಾಯುವ್ಯ ದಿಕ್ಕಿನ ಪ್ರವಾಹವಾಯು ಸ್ಥಾನದಲ್ಲಿ ಬಂದಾಗ, ಅಡ್ಡಾಡುವ ಬುದ್ಧಿ (ಗಮನಾಮನ) ಪ್ರೇರಣೆಯಾಗುವುದು. (೭) ಮೂಲೇಶನು ಉತ್ತರ ದಿಕ್ಕಿನ ಕುಬೇರನ ದಳಕ್ಕೆ ಬಂದಾಗ, (ಧನಾಧಿಪದಲ್ಲಿ), ಜೀವನಿಗೆ ಧರ್ಮದಲ್ಲಿ ಬುದ್ಧಿ ಪ್ರೇರಿತವಾಗುವುದು. (೮) ಈಶಾನ್ಯ ದಿಕ್ಕಿನ ಹರನ ಮಂದಿರದಲ್ಲಿ ಗೋದಾನ, ಧನದಾನ, ಭೂದಾನ, ಕನ್ಯಾದಾನಾದಿಗಳನ್ನು ಕೊಡುವ ದಾನದ ಬುದ್ಧಿ ತತ್ತಕ್ಷಣದಲ್ಲಿ ಉಂಟಾಗುವುದು.

ದಳಗಳ ಸಂಚಾರ ಬಿಟ್ಟು, ಮೂಲೇಶನನು ತನ್ನ ಸ್ಥಾನವಾದ ಕಮಲ ಮಧ್ಯಗತವಾತ ಕರ್ಣಿಕಾಕ್ಕೆ ಬಂದಾಗ, ವಿಷಯ ಭೋಗಾದಿಗಳಲ್ಲಿ ವೈರಾಗ್ಯ ಉಂಟಾಗುವುದು. ಕರ್ಣಿಕಾಸುತ್ತಲೂ ಇರುವ ಕೇಸರಗಳಲ್ಲಿ ಆಗಮಿಸಿದಾಗ, ಜೀವರಿಗೆ ಸ್ವಪ್ನ ಉಂಟಾಗುವುದು. ಲಿಂಗದೇಹದಲ್ಲಿ ಪ್ರವೇಶಿಸಿದಾಗ, ಸುಷುಪ್ತ್ಯವಸ್ಥೆ ಎಂಬ ಗಾಢನಿದ್ರಾವಸ್ಥೆ ಉಂಟಾಗುವುದು. ಮಧು ನಾಮಕ ದೈತ್ಯನನ್ನು ಸಂಹರಿಸಿದ ಆ ಶ್ರೀಹರಿಯು (ಮಧಹ) ಪುನಃ ಸ್ವಸ್ಥಾನ ವಾದ ಕರ್ಣಿಕಾಕ್ಕೆ ಬರಲು, ಜೀವರಿಗೆ ಜಾಗ್ರದವಸ್ಥೆ ಒದಗುವುದು. ಸುದರ್ಶನ ನಾಮಕ ಚಕ್ರಾಯುಧ ಇವೇ ಮೊದಲಾದ ಅಷ್ಟಾಯುಧಗಳನ್ನು ತನ್ನ ಅಷ್ಟಭುಜಗಳಲ್ಲಿ ಧರಿಸಿದವನಾಗಿ, ದಿಕ್ಪಾಲಕರಾದ ಇಂದ್ರಾದಿದೇವತೆಗಳ ಆವಾಸವೆಂದೆನಿಸುವ ಹೃದಯ ಕಮಲದ ಅಷ್ಟದಳಗಳಲ್ಲಿ ಕ್ರಮವಾಗಿ ಸಂಚಾರ ಮಾಡುತ್ತಾ ದೇಹದಲ್ಲಿ ಪ್ರಕಾಶತೋವ್ಯಾಪ್ತರಾಗಿರುವ ಜೀವರಿಗೆ ಆಯಾಯಾ ಪ್ರಕಾರ ಬುದ್ಧಿ ಮತ್ತು ಮನೋವ್ಯಾಪಾರಗಳನ್ನು ಕೊಡುತ್ತಾನೆ ಎಂಬುದೇ ೨೪ನೆಯ ಪದ್ಯದ ತಾತ್ಪರ್ಯವು.

ಮುಂದಿನ ೨೫ನೆಯ ಪದ್ಯದಿಂದ ಪಿಂಡಾಂಡ ರೂಪವಾದ ಈ ಶರೀರ ದಲ್ಲಿ ವಿದ್ಯಮಾನನಾಗಿ ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವ ಆ ಬಿಂಬರೂಪಿ ಶ್ರೀಹರಿಯ ಮಹಿಮೆಯನ್ನು ತಿಳಿಸುತ್ತಾರೆ. ಸರ್ವಚೇತನರ

ಹೃದ್ಗುಹಾವಾಸಿಯಾದ ಆ ಬಿಂಬನೇ ಮೂಲೇಶನಾಮಕ ಶ್ರೀ ಮನ್ನಾರಾಯಣನು. ಸೂತ್ರನಾಮಕರಾದ ಶ್ರೀ ಪ್ರಾಣದೇವರಿಗೆ ನಿಯಾಮಕನು. ಅಂದರೆ ಪ್ರಾಣಪತಿಯು. ವೇದಕ್ಕೆ ಮಾತೃಭೂತವಾದ ತ್ರಿಪಾದ ಗಾಯತ್ರೀ ಮಂತ್ರ ಪ್ರತಿಪಾದ್ಯನು. ಅಂತಹ ಪ್ರಾಣೇಶನು ಸಾಧನ ಶರೀರವೆಂಬ ಈ ದೇಹದಲ್ಲಿ ನೆಲೆಸಿದ್ದಾನೆ. ಈ ಜ್ಞಾನಾನುಸಂಧಾನವಿಲ್ಲದೆ, ಕಂಡ ಕಂಡ ಕಡೆಗೆ ಭೂಮಿಯಲ್ಲಿ ಅಂಡಲೆಯುತ್ತಾ, ಪತ್ನೀ ಪುತ್ರಸಹಿತನಾಗಿ ನಿರಂತರವೂ ತೀರ್ಥಕ್ಷೇತ್ರಯಾಟನೆ ಮಾಡಿದೆನು, ನಾನು ಬಹು ಭಾಗ್ಯವಂತ, ಎಂದೆನುತ ಹಿಗ್ಗಿದರೆ ಏನು ಪ್ರಯೋಜನ ? ಎಂದು ಜ್ಞಾನಿವರೇಣ್ಯರಾದ, ಶ್ರೀಹರಿಯು ನಿತ್ಯ ಸನ್ನಿಧಾನ ಪಾತ್ರರಾದ ದಾಸರಾಯರು ಕೇಳುತ್ತಾರೆ. ಅಂದರೆ, ಸಕಲಕ್ಕೂ ಶ್ರೀಹರಿಯೇ ನಿಯಾಮಕನು. ಅವನೇ ನಮ್ಮ ಶರೀರದಲ್ಲಿ ಹೃತ್ಕಮಲ ನಿವಾಸಿಯಾಗಿದ್ದು ದೈಹಿಕ, ದೇಶಿಕ, ಕಾಲಿಕ. ಹಾಗೂ ಕಾಯಕ, ವಾಚನಿಕ ಮತ್ತು ಮಾನಸಿಕ ಸಮಸ್ತ ಕ್ರಿಯೆಗಳನ್ನು ತಾನೇ ಬಿಂಬಕ್ರಿಯಾ ದ್ವಾರಾ ಮಾಡಿ, ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿಸಿ, ಅದರದರ ಕರ್ಮ ಫಲವನ್ನು, ಆಯಾಯಾ ಜೀವರ ಸ್ವರೂಪಯೋಗ್ಯತೆಗನುಗುಣವಾಗಿ, ಅವರ ಅನಾದಿಕರ್ಮಾನುಸಾರವಾಗಿ ಅನುಭವಕ್ಕೆ ತಂದು ಕೊಡುತ್ತಿರುವನು- ಎಂಬ ತತ್ತ್ವ ರಹಸ್ಯವನ್ನರಿಯದೆ, ಯಾಂತ್ರಿಕವಾದ ತೀರ್ಥಯಾತ್ರೆ, ಧಾನಧರ್ಮಾದಿ ಪುಣ್ಯ ಕಾರ್ಯಗಳನ್ನು ಮಾಡಿದರೆ ಏನು ಫಲ ? ಎಂಬುದೇ ಸಾರಾಂಶವು.

ಇನ್ನೂ ಮುಂದಿನ ೨೬ ನೆಯ ಪದ್ಯದಿಂದ ತನುಚತುಷ್ಟಯಗಳಲ್ಲಿ ವಿದ್ಯಮಾನನಾಗಿರುವ ಭಗವದ್ರೂಪಗಳನ್ನು ತಿಳಿಸುತ್ತಾರೆ. (೧) ಜೀವರ ಸ್ವರೂಪ ದೇಹದಲ್ಲಿ ಶ್ರೀ ಲಕ್ಷ್ಮೀನರಸಿಂಹ ದೇವರು. (೨) ಷೋಡಶ ಕಳಾತ್ಮಕವಾದ ಅನಾದಿ ಲಿಂಗಶರೀರದಲ್ಲಿ ಪುರುಷನಾಮಕ ಪರಮಾತ್ಮನು. (೩) ಅನಿರುದ್ಧ ದೇಹದಲ್ಲಿ ಶಾಂತೀರಮಣನಾದ ಅನಿರುದ್ಧನು. ಮತ್ತು (೪) ಸ್ಥೂಲದೇಹದಲ್ಲಿ ಕೃತಿಪತಿ ಪ್ರದ್ಯುಮ್ನ. ಈ ರೀತಿಯಾಗಿ ದೇಹ ಚತುಷ್ಟಯಗಳಲ್ಲಿ ಆಯಾಯಾ ಭಗವದ್ರೂಪಗಳಿಂದ ಇದ್ದು, ಶ್ರೀ ಪರ

ಮಾತ್ಮನು ಶರೀರ ವ್ಯಾಪಾರಗಳನ್ನು ಪ್ರೇರಿಸುತ್ತಾ, ಮುಖ್ಯ ಪ್ರವರ್ತಕನಾಗಿದ್ದಾನೆ ಎಂಬ ಅಭಿಪ್ರಾಯವು.

ಸ್ಥೂಲದೇಹಕ್ಕೆ ಆವರಣರೂಪದಲ್ಲಿರುವ ತ್ವಗಾದಿ ಸಪ್ತಧಾತುಗಳು ಮತ್ತು ಧಾತ್ವಂತರ್ಗತ ಭಗವದ್ರೂಪಗಳ ವಿಚಾರವನ್ನು ತಿಳಿಸುತ್ತಾರ, ಮುಂದಿನ ೨೭ ನೆಯ ಈ ಪದ್ಯದಿಂದ. (೧) ಮೇಲ್ಭಾಗದಲ್ಲಿರುವ ತ್ವಗಿಂದ್ರಿಯದಲ್ಲಿ **ನಿಧನ** ನಾಮಕ ಶ್ರೀ ಪರಮಾತ್ಮನಿದ್ದಾನೆ. (೨) ತ್ವಕ್ಕಿನ ಒಳಪದರದಲ್ಲಿರುವ ಚರ್ಮವೆಂಬ ಆವರಣದಲ್ಲಿರುವ ಭಗವದ್ರೂಪ **ಹಿಂಕಾರನಾಮಕ** ಶ್ರೀ ಪರಮಾತ್ಮನು. (೩) **ಆದಿನಾಮಕನು** ಚರ್ಮದ ಒಳಪದರದಲ್ಲಿರುವ ಮಾಂಸದಲ್ಲಿದ್ದಾನೆ. (೪) ಮಾಂಸದ ಒಳಾವರಣ ರುಧಿರ (ರಕ್ತ), ಇದರಲ್ಲಿ **ಪ್ರಸ್ತಾವ** ರೂಪಿ ಪರಮಾತ್ಮನಿರುವನು. (೫) ರುಧಿರದ ಒಳಗೆ ಮೇದಸ್ಸೆಂಬ ಭಾಗ. ಇದರಲ್ಲಿ **ಪ್ರತಿಹಾರನು** ವಿದ್ಯಮಾನನಾಗಿರುವನು. (೬) **ಉದ್ಗೀಥನಾಮಕನು** ಮೇದಸ್ಸಿನ ಒಳಗಿರುವ ಮಜ್ಜಾ-ಎಂಬ ಭಾಗದಲ್ಲಿರುವನು. (೭) ಶರೀರಕ್ಕೆ ಚೌಕಟ್ಟಿನಂತಿರುವ ಅಸ್ಥಿಗಳಲ್ಲಿ (ಎಲಬುಗಳು) **ಉಪದ್ರವ**ನಾಮಕ ಭಗವದ್ರೂಪ ಚಿಂತನೆ. ಇಂತು ಸಪ್ತಸಾಮಗ ರೂಪಗಳಿಂದ, ಸಪ್ತಧಾತುಗಳಲ್ಲಿದ್ದು, ಅವುಗಳ ಕಾರ್ಯಗಳನ್ನು ಪ್ರವರ್ತನಗೊಳಿಸುತ್ತಿರುವನು, ಸಪ್ತಧಾತುಗಳು × ಸಪ್ತನಾಮಕ ಭಗವದ್ರೂಪಗಳು = ೪೯ ರೂಪಗಳಿಂದ ನಾಲ್ವತ್ತೊಂಭತ್ತು ಮರುದ್ಗಣದಲ್ಲಿ (ಏಕೋನ ಪಂಚಾಶನ್ಮರುದ್ಗಣ. ಅಂದರೆ ಪಂಚಾಶತ = ೫೦, ಏಕೋನ = ಒಂದು ಕಡಿಮೆ. ಅಂದರೆ ೪೯ ಸಂಖ್ಯೆ), ನಿಧನಾದಿ ರೂಪಗಳಿಂದ, ಆಯಾಯಾ ಅಧಿಷ್ಠಾನಗತ ನಾಮಗಳಿಂದ ಕರೆಯಿಸಿಕೊಳ್ಳುತ್ತಾ. ೪೯ ರೂಪಗಳಿಂದ (ಒಂಭತ್ತಧಿಕ ನಾಲ್ವತ್ತು) ತ್ವಗಾದಿ ಸಪ್ತ ಧಾತುಗಳು ಮತ್ತು ಅಭಿಮಾನಿ ದೇವತೆಗಳಲ್ಲಿ ಇದ್ದಾನೆ.

ಮುಂದಿನ ೨೯ ನೆಯ ಪದ್ಯದಿಂದ, ಎಲಬುಗಳು, ಎರಡು ಎಲಬುಗಳನ್ನು ಜೋಡಿಸುವ ಕೀಲುಗಳು (ಅಂಗುಲಿಯ ಪರ್ವಗಳು), ಕೀಲಿನ ಸುತ್ತಲೂ ಎಣ್ಣೆಯಂತಿರುವ ಮಜ್ಜಾ ಎಂಬ ಜಾರುವ ಧಾತು—ಈ ಸ್ಥಾನ

ತ್ರಯಗಳಲ್ಲಿರುವ (ತ್ರಿಸ್ಥಳದಿ) ಭಗವದ್ರೂಪೋಪಾಸನಾ ವಿಷಯ ತಿಳಿಸುತ್ತಾರೆ. ಈ ಸ್ಥೂಲದೇಹದಲ್ಲಿ ಪಾದಾದಿ ಶಿರಃಪರ್ಯಂತ ಅಸ್ಥಿಗಳು ದೇಹಕ್ಕೆ ಗೂಡಿನಂತೆ ಆಧಾರವಾಗಿವೆ. ಒಂದು ಅಸ್ಥಿ ಮತ್ತೊಂದು ಅಸ್ಥಿಯನ್ನು ಸಂಧಿಸುವ ಭಾಗಕ್ಕೆ "ಪರ್ವ"–ಎಂದು ಹೆಸರು. ಇದೇ ಕೀಲುಗಳು. ಈ ಕೀಲುಗಳಿಂದ ಅಸ್ಥಿಗಳ ಜೋಡಣೆ. ಇದರಿಂದ ದೇಹಗತ ಅಂಗಾಂಗಗಳ ಚಲನೆ. ಇಂತಹ ಕೀಲುಗಳು ದೇಹಾದ್ಯಂತ ೩೬೦ ಇವೆ. ಪ್ರತಿ ಕೀಲಿನ ಸುತ್ತಲೂ ಮಜ್ಜಾ ಎಂಬ ೬ ನೆಯ ಧಾತುವಿದೆ. ಇದು ಎಣ್ಣೆಯಂತ ಜಾರುವ ಧಾತು ವಿಶೇಷ. ಇದರಿಂದ ಕೀಲುಗಳು ಸರಾಗವಾಗಿ ಚಲಿಸುವುವು. (ತಿರುಗುವ ಚಕ್ರಕ್ಕೆ ಕೀಲೆಣ್ಣೆ ಇದ್ದಂತೆ). ಅಸ್ಥಿ–ಕೀಲು–ಮಜ್ಜಾ ಎಂಬ ಸ್ಥಾನಗಳಲ್ಲಿ, ಒಂದು ಸಾವಿರದ ಎಂಭತ್ತು (೧೦೮೦) ರೂಪಗಳಿಂದ ಈ ದೇಹಾದ್ಯಂತ ಲಕ್ಷ್ಮೀಪತಿಯಾದ ಪಕ್ಷಿವಾಹನನು ಸಮಸ್ತ ದೇವತಾ ವರ್ಗದಿಂದ ಕೂಡಿದವನಾಗಿ, ವಿಹರಿಸುತ್ತಿರುವನು. ಇಂತಹ ೩೬೦ ಎಲುಬಿನ ಕೀಲುಗಳಲ್ಲ ೩೬೦ ದಿವಾಭಿಮಾನಿ ದೇವತಗಳೂ ಮತ್ತು ೩೬೦ ನಿಶಾಭಿಮಾನಿ ದೇವತೆಗಳು ಇದ್ದಾರೆ. ೩೬೦ × ತ್ರಿಸ್ಥಾನಗತ ರೂಪಗಳು = ೩೬೦ × ೩ = ೧೦೮೦ ಭಗವದ್ರೂಪಗಳ ಸಂಖ್ಯಾವಿವರ.

ಮುಂದಿನ ೩೦ ನೆಯ ಪದ್ಯದಿಂದ ಶ್ರೀ ಪರಮಾತ್ಮನ ಅನುಗ್ರಹದಿಂದ ಅಲ್ಪರಾದ ಸಾತ್ವಿಕ ಚೇತನರು ಸಾರೂಪ್ಯ ಮುಕ್ತಿಯನ್ನು ಹೊಂದುವರು ಎಂಬ ವಿಷಯುವನ್ನು ಕೀಟಪೇಶಸ್ಕಾರಿ ದೃಷ್ಟಾಂತದಿಂದ ತಿಳಿಸುತ್ತಾರೆ. ರೆಕ್ಕೆ ಇರುವ ಕುರಡಿಕುಠಾರ ಎಂಬ ಹೆಸರಿನ ಕುಂಬಾರ ಹುಳವು, ಮಣ್ಣಿನ ಗೂಡನ್ನು ನಿರ್ಮಿಸಿ, ಅದರಲ್ಲಿ ಒಂದು ಹಸಿರು ಹುಳವನ್ನು ತಂದಿಡುವುದು, ಅದು ಹೊರಗೆ ಹೋಗದಂತೆ ಬಂಧಿಸಿ, ಅದು ಇದ್ದಲ್ಲಿಯೇ ಆಹಾರವನ್ನು ತಂದು ಕೊಡುತ್ತಾ, ಸಾಕುವುದು. ಆ ಹುಳುವು ಕುಂಬಾರ ಹುಳದ ಧ್ಯಾನದಿಂದಲೇ ತನ್ನ ದೇಹಾಕಾರವನ್ನು ಬದಲಾಯಿಸಿ, ರೆಕ್ಕೆ ಇರುವ ಕುರಡಿಕುಠಾರದ ಹುಳುವಿನಂತೆಯೇ ಆಗಿ, ಹಾರಿಹೋಗುವುದು. ಕೈಟಭ ಎಂಬ ಅಸುರನನ್ನು ಸಂಹರಿಸಿದ ಆ ಪರಮಾತ್ಮನನ್ನು ಧ್ಯಾನಕ್ಕೆ ವಿಷಯನನ್ನಾಗಿ ಮಾಡಿಕೊಂಡು, ತದೇಕ ಚಿತ್ತನಾಗಿ, ಶ್ರೀಹರಿಯಲ್ಲಿ ಚಿತ್ತವನ್ನು ನಿಲ್ಲಿಸಿ

ದಾಗ, ಶ್ರೀ ಪರಮಾತ್ಮನು ತನ್ನ ಪರಮಾನುಗ್ರಹರೂಪವಾದ ಕಾರುಣ್ಯ ದಿಂದ ವಿಶೇಷದಿಂದ. ಆ ಜೀವರಿಗೆ ಜನನ ಮರಣಾಖ್ಯವಾದ ಭಯವೆಂಬ ಈ ಗೊಂಡಾರಣ್ಯವನ್ನು ಅತಿಜಾಗ್ರತೆಯಾಗಿ ದಾಟಿಸಿ, ಬಂಧ ಮೋಚಕರನ್ನಾಗಿ ಮಾಡಿ ತನ್ನಂತೆಯೇ ಸದೃಶವಾದ (ಪ್ರತಿಬಿಂಬ ರೂಪವಾದ) ಸಾರೂಪ್ಯ ವೆಂಬ ಮುಕ್ತಿಯನ್ನು ಅನುಗ್ರಹಿಸುವನು.

ಈ ಪ್ರಸಕ್ತ ಸಂಧಿಯ ಕೊನೆಯದಾದ ೩೧ ನೆಯ ಪದ್ಯದಿಂದ ಸಂಧಿ ಗತ ವಿಷಯವನ್ನು ಉಪಸಂಹರಿಸುತ್ತಾರೆ. ಪೂರ್ವೋಕ್ತ ಪ್ರಕಾರ ಸಾಧನ ಶರೀರವೆಂದೆನಿಪ ಈ ದೇಹದಲ್ಲಿ ವಿದ್ಯಮಾನವಾಗಿರುವ ಭಗವದ್ರೂಪವನ್ನು ಮರೆಯದೆ, ಏಕಮನಸ್ಸಿನಿಂದ ಸ್ಮರಣೆ ಮತ್ತು ಧ್ಯಾನೋಪಾಸನೆ ನಿರಂತರವೂ ಮಾಡುತಿಪ್ಪ ಅಂತರಂಗ ಭಕ್ತರನ್ನು ವೇದಪ್ರತಿಪಾದ್ಯನಾದ ಶ್ರೀ ಜಗನ್ನಾಥ ವಿಠ್ಠಲಾಂಕಿತ ಶ್ರೀಹರಿಯು, ಆ ಜೀವರ ಸಮೀಪವರ್ತಿಯಾಗಿದ್ದು (ಬಿಂಬ ನಾಗಿ) ತನ್ನ ದರ್ಶನ ಭಾಗ್ಯವನ್ನು ಅಂದರೆ ಭಗವದಪರೋಕ್ಷವನ್ನು ಪಾಲಿಸಿ, ಸಕಲ ಕಾಲ ಮತ್ತು ಅವಸ್ಥೆಗಳಲ್ಲಿಯೂ, ಅವರನ್ನು ಎಡಬಿಡದೆ ಸಂರಕ್ಷಿಸು ವನು ಎಂದು ಉಪಸಂಹಾರಮಾಡುತ್ತಾರೆ.

**||ಇಂತು ಪ್ರಸಕ್ತಸಂಧಿ- "ಜೀವಪ್ರಕರಣ ಸಂಧಿ"-ಯ ಸಾರವು ಸಮಾಪ್ತಿಯಾಯಿತು||**

**|| ಶ್ರೀ ಗರುಡವಾಹನ ಲಕ್ಷ್ಮೀನರಸಿಂಹಾರ್ಪಣಮಸ್ತು ||**

॥ ಶ್ರೀಃ ಹರಿಃ ಓಂ ॥

॥ಶ್ರೀ ಗರುಡವಾಹನ ಲಕ್ಷ್ಮೀನಾರಸಿಂಹಾಯ ನಮಃ॥

॥ಶ್ರೀ ಜಗನ್ನಾಥವಿಠ್ಠಲಪ್ರಸೀದ॥

# ಸಂಧಿ (೬)

## ವರ್ಣಪ್ರಕ್ರಿಯಾಸಂಧಿ (ಜೀವನ ಪ್ರಕರಣ ಸಂಧಿ)

## (ಉದಾತ್ತಾನುದಾತ್ತ ಸಂಧಿ)

**ಪ್ರಾರಂಭ :**

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ ॥ಪ॥

## ಪದ್ಯ (೧)

**ಮೂಲ :—**

ಹರಿಯು ಪಂಚಾಶದ್ವರಣ ಸು ।
ಸ್ವರ ಉದಾತ್ತಾನುದಾತ್ತ ಪ್ರಚಯ ।
ಸ್ವರಿತ ಸಂಧಿ ವಿಸರ್ಗ ಬಿಂದುಗಳೊಳಗೆ ತದ್ವಾಚ್ಯ ॥
ಇರುವ ತತ್ತನ್ನಾಮರೂಪಗ ।
ಳರಿತುಪಾಸನಗೈವರಿಳೆಯೊಳು ।
ಸುರರೆ ಸರಿ ನರರಲ್ಲ ಅವರಾಡುವುದೇ ವೇದಾರ್ಥ ॥ ॥೧॥

**ಅವತರಣಿಕೆ :**

ಅಪರೋಕ್ಷೀಕೃತಶ್ರೀಶರಾದ ಶ್ರೀ ಜಗನ್ನಾಥದಾಸವರೇಣ್ಯರು **ಜೀವ ಪ್ರಕರಣ ಸಂಧಿ** ಎಂಬ ಪ್ರಸಕ್ತ ಸಂಧಿಯನ್ನು ಆರಂಭಿಸುತ್ತಾ, ಜೀವನ ಸ್ವರೂಪದೇಹದಲ್ಲಿ, ಲಿಂಗ, ಅನಿರುದ್ಧ ಮತ್ತು ಸ್ಥೂಲದೇಹಗಳಲ್ಲಿ ನಡೆಯುತ್ತಿರುವ ಸಕಲವಿಧವಾದ ವ್ಯಾಪಾರ ವಿಶೇಷಗಳಿಗೆ ಮುಖ್ಯಕಾರಣ ನಾದ ಬಿಂಬರೂಪಿ ಮೂಲೇಶನಾಮಕ ಶ್ರೀ ಪರಮಾತ್ಮನ ಮಹಿಮಾ ವಿಶೇಷ ಗಳನ್ನು ಮತ್ತು ಭಗದ್ವ್ಯಾಪಾರ ವಿಶೇಷಗಳನ್ನು ಸದೃಷ್ಟಾಂತವಾಗಿ ವಿವರಿಸುತ್ತಾರೆ.

ಸಂಸ್ಕೃತ ವರ್ಣಮಾಲೆಯಲ್ಲಿ ೫೦ ಅಕ್ಷರಗಳಿವೆ. ಕೊನೆಯ "ಕ್ಷ" ಕಾರ ವರ್ಣವೂ ಸೇರಿದರೆ ೫೧ ವರ್ಣಗಳಾಗುವುವು (ಏಕೋತ್ತರ ಪಂಚಾಶದ್ವರ್ಣ ಗಳು). ಅಕ್ಷರಗಳ ಸಂಯೋಜನೆಯಿಂದ ಪದಗಳ ಉತ್ಪತ್ತಿ, ಪದಗಳ ಅನುಕ್ರಮವಾದ ಸಂಯೋಗದಿಂದ ವಾಕ್ಯಗಳ ಉತ್ಪತ್ತಿ. ಅಕ್ಷರಗಳು ನಿತ್ಯ, ಆದರೆ ಜಡ ಸ್ವರೂಪವಲ್ಲ. ಅಕ್ಷರೇಢ್ಯನಾದ ಶ್ರೀ ಪರಮಾತ್ಮನು ಪ್ರತಿ ವರ್ಣದಲ್ಲಿ ವಾಚ್ಯನಾಗಿರುದರಿಂದಲೇ ಅವುಗಳಿಗೆ ಅಭಿವ್ಯಂಜಕಶಕ್ತಿ ಉಂಟಾಗಿ, ವರ್ಣಗಳ ಉಚ್ಚಾರಣಾ ದ್ವಾರಾ ಅವುಗಳ ಅರ್ಥಾನುಪತ್ತಿ ಯಾಗುವುದು. ಅದರಿಂದ ಕ್ರಮವಾಗಿ ಪದಗಳ ಅರ್ಥ ಮತ್ತು ಪದ ಸಂಯೋಜನಾರೂಪವಾದ ವಾಕ್ಯಗಳ ಅರ್ಥ ತಿಳಿಯುವುದು. ವಾಕ್ಯಗಳ ಉಚ್ಚಾರಣೆ ವಾಗೀಂದ್ರಿಯದ ವ್ಯಾಪಾರವು. ಪದ, ಅಥವಾ ಅಕ್ಷರಗಳ ಉಚ್ಚಾರಣೆಯಲ್ಲಿ ಧ್ವನಿ ಮುಖ್ಯ. ಅದಕ್ಕನುಗುಣವಾಗಿ ಸ್ವರ, ಧ್ವನಿಯ ಏರಿಕೆ, ಇಳಿತ, ಅರ್ಧವಿರಾಮ, ಪೂರ್ಣವಿರಾಮ, ಇತ್ಯಾದಿ ವಿವಿಧ ಹಂತಗಳಿವೆ. ಇಂತಹ ಪ್ರತಿ ಹಂತ ಹಂತದಲ್ಲಿ ಸರ್ವಸ್ವರ, ಶಬ್ದವಾಚ್ಯ ನಾದ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದು, ತದ್ವಾಚ್ಯನಾಗಿ, ತತ್ತ ನಾಮಗಳಿಂದ, ತದ್ರೂಪಗಳಿಂದ ವರ್ಣಗಳಿಗೆ ಅಭಿವ್ಯಂಜಕ ಶಕ್ತಿಯನ್ನೀ ಯುತ್ತಾ, ಸಂಭಾಷಣಾರೂಪವಾದ ವಾಗ್ವ್ಯಾಪಾರಗಳಿಗೆ ಮುಖ್ಯ ಪ್ರವರ್ತಕನಾಗಿದ್ದಾನೆ, ಇಂತಹ ವರ್ಣಪ್ರತಿಪಾದ್ಯನ, ಶರ್ವಶಬ್ದವಾಚ್ಯನ

ರೂಪೋಪಾಸನೆಯನ್ನು ಜ್ಞಾನಾನುಸಂಧಾನದಿಂದ ತಿಳಿದು, ಧ್ಯಾನಿಸುತ್ತಿರುವ ಮಹಾನುಭಾವರು ದೇವತೆಗಳೇ ಸರಿ. ಅವರು ಖಂಡಿತ ಮಾನವರಲ್ಲ. ಈ ಜಗತ್ತಿನಲ್ಲಿ ಅವರಾಡುವುದೇ ಅಖಿಳ ವೇದಾರ್ಥ ಎಂದು ಈ ಪ್ರಥಮ ಪದ್ಯದ ತಾತ್ಪರ್ಯವು. ॥೧॥

**ಪ್ರತಿಪದಾರ್ಥ :**

**ಹರಿಯು** = ಸರ್ವಪಾಪಪರಿಹಾರಕನೂ, ಸರ್ವಜೀವರ ಬಿಂಬನೂ ಆದ ಶ್ರೀಹರಿಯು, **ಪಂಚಾಶದ್ವರಣ** = ಅ-ಕಾರದಿಂದ ಪ್ರಾರಂಭಿಸಿ ಳ-ಕಾರದವರೆಗೆ ಇರುವ ೫೦ ಅಕ್ಷರಗಳಲ್ಲಿ (ಪಂಚಾಶತ್ = ೫೦ ಸಂಖ್ಯಾಕವಾದ, ವರ್ಣ = ಅಕ್ಷರಮಾಲೆ) ("ಕ್ಷ"-ಕಾರದಲ್ಲಿ ಎಲ್ಲಾ ವರ್ಣಗಳೂ ಸಮಾವೇಶ) **ಸುಸ್ವರ** = ಅಕ್ಷರಗಳನ್ನು ಸ್ಪಷ್ಟವಾಗಿ ಮತ್ತು ಶ್ರಾವ್ಯವಾಗಿ**ರುವಂತೆ** ಉಚ್ಚರಿಸುವುದು. **ಉದಾತ್ತ** = ಸ್ವರವನ್ನು ಹೆಚ್ಚಿನ ಧ್ವನಿಯಲ್ಲಿ **ಎತ್ತರಿಸು**ವುದು, ಅಂದರೆ, ಉಚ್ಚಸ್ವರ, **ಅನುದಾತ್ತ** = ತಗ್ಗಿನ ಧ್ವನಿಯಲ್ಲಿ ವರ್ಣೋಚ್ಚಾರಣೆ, **ಪ್ರಚಯ** = ಉಚ್ಚನೀಚಗಳಿಂದ ಸಮಾನಸ್ಥಿತಿ, **ಸ್ವರಿತ** = ಅನುಸ್ವಾರ (ಸೊನ್ನೆ) ಸಹಿತವಾದ ಅಕ್ಷರದ ಉಚ್ಚಾರಣೆ, ಅಂದರೆ ಕಂಪನಸ್ವರ **ಸಂಧಿ** = ಎರಡು ಪದಗಳನ್ನು ಅಥವಾ ಎರಡು ಅಕ್ಷರಗಳನ್ನು ಒಂದಾಗಿ ಕೂಡಿಸುವುದು **ವಿಸರ್ಗ** = ಎರಡು ಸೊನ್ನೆಗಳಿಂದ (ಒಂದರ ಕೆಳಗೆ ಒಂದು) ಸಹಿತವಾದ ವರ್ಣದ ಉಚ್ಚಾರ (ಕಃ, ಪಃ......ಇತ್ಯಾದಿ) **ಬಿಂದು** = ಅರ್ಧಾಕ್ಷರ ಉಚ್ಚಾರ ಮತ್ತು ಪಕ್ಕದಲ್ಲಿ ಸೊನ್ನೆ ಸಹಿತವಾದ (ಕ್+೦, ರ್+೦......ಇತ್ಯಾದಿ) ವಾಕ್ಯಪೂರ್ತಿಯಾದಾಗ, ನಿಲ್ಲಿಸುವ ಸ್ಥಾನ ವಿಶೇಷಕ್ಕೂ ಬಿಂದು ಎಂದು ಹೆಸರು. ಪೂರ್ವೋಕ್ತ ಏಳು ಹಂತಗಳೂ ಉಚ್ಚಾರಣಾ ಕ್ರಿಯೆಯಲ್ಲಿ ಘಟಕವಾಗಿವೆ. **ತದ್ವಾಚ್ಯ** = ಇವುಗಳಲ್ಲಿ ಆಯಾಯಾ ವರ್ಣವಾಚ್ಯನಾಗಿ, **ಇರುವ** = ವರ್ಣಗಳಿಗೆ ಅಭಿವ್ಯಂಜಕ ಶಕ್ತಿಯನ್ನೀಯುತ್ತಾ, ವಿದ್ಯಮಾನನಾಗಿರುವ, **ತತ್ತನ್ನಾಮ** = ಆಯಾಯಾ ವರ್ಣಗಳ ಹೆಸರಿನಿಂದಲೇ ಪ್ರತಿಪಾದ್ಯನಾಗಿರುವ, **ರೂಪಗಳನು** = ವರ್ಣ, ಸ್ವರ, ಧ್ವನಿ ಪ್ರತಿಪಾದ್ಯ ಭಗವದ್ರೂಪಗಳನ್ನು (ಅಜಾದಿ ಶ್ರೀ ಲಕ್ಷ್ಮೀನರ

ಸಿಂಹ ಪರ್ಯಂತ–ಮಾತೃಕಾನ್ಯಾಸದ ಪ್ರಕಾರ) **ಅರಿತು** = ಜ್ಞಾನಾನುಸಂಧಾನದಿಂದ ತಿಳಿದುಕೊಂಡು **ಉಪಾಸನೆಗೈವರು** = ಸರ್ವಶಬ್ದವಾಚ್ಯನಾದ ಆ ಅಕ್ಷರೇಢ್ಯರೂಪಿ ಶ್ರೀ ಪರಮಾತ್ಮನ ಭಗವದ್ರೂಪಗಳನ್ನು ಧ್ಯಾನೋಪಾಸನೆ ಮಾಡುವವರು, **ಇಳೆಯೊಳು** = ಈ ಭೂಮಂಡಲದಲ್ಲಿ. **ಸುರರೆ ಸರಿ** = ದೇವತೆಗಳೇ ಹೊರತು. **ನರರಲ್ಲ** = ಸಾಮಾನ್ಯ ಮನುಷ್ಯರಲ್ಲ. **ಅವರಾಡುವುದೇ** = ಅವರ ಬಾಯಿಯಿಂದ ಬರುವ ಮಾತುಗಳೆಲ್ಲವೂ **ವೇದಾರ್ಥ** = ವೇದ ವಾಕ್ಯಗಳಲ್ಲದೇ ಅನ್ಯಥಾ ಅಲ್ಲ. ॥೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :–

ಹಿಂದಿನ ಸಂಧಿಯಲ್ಲಿ ಅಜಾದಿ ವರ್ಣವಾಚ್ಯ ಭಗವದ್ರೂಪಗಳು ಹೇಳಲ್ಪಟ್ಟವು. ಈ ಸಂಧಿಯಲ್ಲಿ ೫೧ ವರ್ಣಗಳಿಗೆ ವ್ಯಂಜಕಗಳಾದ ಉದಾತ್ತ ಅನುದಾತ್ತಾದಿ ಮೊದಲಾದ್ದರಿಂದ ವಾಚ್ಯನಾದ ಪರಮಾತ್ಮ, ದೇಹದಲ್ಲಿ ಇದ್ದಾನೆಂತಲೂ, ಇನ್ನೂ ವೇದಸ್ವರಗಳು ತದ್ಗತ ಭಗವದ್ರೂಪಗಳ ಉಪಾಸನಾಕ್ರಮ ವಿಚಾರ ಹೇಳತಾರೆ :–

ಮಹನ್ಮೇಘಸ್ವರೋ ಉದಾತ್ತಸ್ವರಃ ಓಂಕಾರಸಹಿತಂ ವ್ಯಂಜಯತೀ ।
ಭೇರೀ ಶಬ್ದೋಽನುದಾತ್ತಾಖ್ಯಂ ವರ್ಣಂ ವ್ಯಂಜಯತಿ ॥

ಘಂಟಾಶಬ್ದಃ ಸ್ವರಿತಾಖ್ಯಂ ವರ್ಣಂ ವ್ಯಂಜಯತಿ ।
ಸ್ವರ್ಣ ಚಂಚ್ವಾದಿ ಶಬ್ದೋಽನುದಾತ್ತಾಖ್ಯಂ ವರ್ಣಂ ವ್ಯಂಜಯತಿ ॥

ಶ್ವಾಸಾದಿಶಬ್ದೋ ಮಂದ್ರಾಖ್ಯಂ ವರ್ಣಂ ವ್ಯಂಜಯತಿ ।
ಪ್ರಚಯಾಖ್ಯಂ ವರ್ಣಂ ವ್ಯಂಜಯಿತ್ವಾ ಚಾಂಚಲ್ಯಂ ಪ್ರಕಾಶಯತಿ ॥

ವೇದಸ್ವರಗಳು ಇತ್ಯಾದಿ ತಾರತಮ್ಯಗಳಿಂದ ಇರೋದಾಗಿ ಅವೆ. ಇದು **ಐತರೇಯ ಭಾಷ್ಯ**ದಲ್ಲಿ ವಿಸ್ತಾರವಾಗಿ ಹೇಳತದೆ.

ಹರಿಯು–ಗುಣಪೂರ್ಣನಾದ ಶ್ರೀಮನ್ನಾರಾಯಣದೇವರ ನಾಮಗಳೇ, ಪಂಚಾಶದ್ವರಣ–ಅ, ಕ ಇತ್ಯಾದಿ ೫೦ ಅಕ್ಷರಗಳು ಎಂದರೆ, ಆಯಾ ವರ್ಣ ಸಾಂಕೇತದಿಂದ, "ಅ"–ಎಂದರೆ, ಅಜನಾಮಕನು, "ಕ"–ಎಂದರೆ, ಕಪಿಲ ನಾಮಕನು ಈ ರೀತ್ಯಾ ಯಾವತ್ತೂ ಅಕ್ಷರಗಳು ಶ್ರೀ ಪರಮಾತ್ಮನ ನಾಮ ಗಳೇವೇ. ಈ ವರ್ಣಗಳೇ ಅನಂತವೇದಗಳು. ಯಾವತ್ತು ಅಪೌರುಷೇಯ ಗಳು, ಸ್ವರಗಳು. ಈ ವರ್ಣಗಳು ಉದಾತ್ತಾದಿ ಸ್ವರಗಳಿಂದ ಯುಕ್ತ ವಾಗಿ ಅವೆ. ಯಾವತ್ತೂ ಸ್ವರಗಳು ಉದಾತ್ತಾದಿ ಸ್ವರಗಳಲ್ಲೇ ಅಂತ ರ್ಭೂತವು. ಯಾವತ್ತೂ ಪೌರುಷೇಯಾಪೌರುಷೇಯಗಳು, ಪ್ರಾಕೃತಾದಿ ಭಾಷೆಗಳು, ಅದನ್ನನುಸರಿಸಿದ ಸ್ವರಗಳು, ಅಕಾರಾದಿ ವರ್ಣಗಳಲ್ಲಿ ಉದಾ ತ್ತಾದಿ ಸ್ವರಗಳಲ್ಲಿ ಅಂತರ್ಭೂತಗಳು. ಸುಸ್ವರ–ಸಮೀಚೀನ ಸ್ವರಗಳು, ಅಸಮೀಚೀನ ಸ್ವರಗಳು, ಎಂತ ಎರಡು ಪ್ರಕಾರ. ಹ್ಯಾಂಗೆಂದರೆ–ವರ್ಣ ವಿಪರ್ಯಾಸದಿಂದ ವರ್ಣಸಮೂಹಗಳು ಸೇರಿ, ದುಷ್ಟವಾದ ಬೈಗಳು ಆಗೋವಾಗತವೆ. ಅದೇ ಪ್ರಕಾರವೇ ಸ್ತೋತ್ರವೂ ಆಗೋದಾಗತವೆ. ತದ್ವತ್ ಉದಾತ್ತಾದಿ ಸ್ವರಗಳು ದಾವ ದಾವ ಸ್ಥಾನಗಳಲ್ಲಿ ನಿಚೋಚ್ಚಗಳಿಂದ ಉಚ್ಚರಿಸಬೇಕೋ, ಆ ಪ್ರಕಾರ ಉಚ್ಚರಿಸಿದರೇ ಸುಸ್ವರವಾಗುತ್ತದೆ. ತದ್ವ್ಯತಿರಿಕ್ತ ಉಚ್ಚಸ್ವರ ಸ್ಥಾನದಲ್ಲಿ ನೀಚಸ್ವರವೂ, ನೀಚಸ್ವರ ಸ್ಥಾನಡಲ್ಲಿ ಉಚ್ಚಸ್ವರವೂ ಉಚ್ಚರಿಸಿದರೆ, ಅದೇ ಅಪಸ್ವರವಾಗುತ್ತದೆ. ಈ ರೀತ್ಯಾ ಸುಸ್ವರ, ಅಪಸ್ವರ, ಉದಾತ್ತಾದಿ ಸ್ವರಗಳಲ್ಲಿ ಅನೇಕ ವಿಧದಿಂದ ಅಂತರ್ಭೂತ ಗಳೇವೇ. ಸ್ವರಗಳು ಎಷ್ಟು ಪ್ರಕಾರ ಎಂದರೆ, ಅಕ್ಷರಗಳು ಐವತ್ತಕ್ಕೆ ಮ್ಯಾಲೆ ಹ್ಯಾಂಗಿಲ್ಲವೋ, ಸ್ವರಗಳೂನೂ ಅದೇ ಪ್ರಕಾರ ಇರೋವಾಗಿ ಅವೆ. ಆಯಾ ಸ್ವರಗಳು, ಅದರ ನಾಮಲಕ್ಷಣಗಳ ವಿವರ :–

(೧) **ಉದಾತ್ತ**– ಉಚ್ಚಸ್ವರವು ಎಂದರೆ, ಅತ್ಯಂತವಾಗಿ ಹೆಚ್ಚಾದ ಉಚ್ಚಸ್ವರ.

(೨) **ಅನುದಾತ್ತ**– ಅದರಿಗಿಂತಲೂ ಕಿಂಚಿತ್ತು ಕಡಿಮೆ ಆದ ಉಚ್ಚಸ್ವರ.
(೩) **ಪ್ರಚಯ**– ಉಚ್ಚನೀಚಗಳಿಲ್ಲದ ಸಮಾನಸ್ವರ.

(೪) **ಸ್ವರಿತ**– ಒಂದು ಅಕ್ಷರ. ಅದನ್ನನುಸರಿಸಿದ ಒಂದು ಸೊನ್ನೆ ಸಹಿತವಾದ ಅಕ್ಷರ ಉಚ್ಚಾರಸ್ವರ. ಇದು ಕಂಪನಸ್ವರ.

(೫) **ಸಂಧಿ**– ಅಕ್ಷರಗಳ ಸಂಧಿಕಾಲದಲ್ಲಿ ಉಚ್ಚರಿಸತಕ್ಕ ಸ್ವರ.

(೬) **ವಿಸರ್ಗ**– ಎರಡು ಸೊನ್ನೆಗಳಿಂದ ಸಹಿತವಾಗಿ ವರ್ಣಉಚ್ಚಾರ ಸ್ವರಕ್ಕೆ ವಿಸರ್ಗ ಎಂತ ನಾಮ.

(೭) **ಬಿಂದು**– ಅರ್ಧಾಕ್ಷರ ಉಚ್ಚಾರ ಮತ್ತು ಎಡಭಾಗದಲ್ಲಿ ಸೊನ್ನೆ ಸಹಿತವಾದ ಉಚ್ಚಾರಸ್ವರ. ಇದಕ್ಕೆ ಬಿಂದು ಎಂತ ನಾಮ.

ಸಂಗೀತಶಾಸ್ತ್ರ ರೀತ್ಯಾ, ಉದಾತ್ತಾದಿ ಸಪ್ತಸ್ವರಗಳು ಎಂತಲೂ ತಾತ್ಪರ್ಯವೇ. ವೇದದಲ್ಲೇನು, ಸಂಗೀತದಲ್ಲೇನು, ಇದೇ ಉದಾತ್ತಾದಿ ಸಪ್ತಸ್ವರಗಳು ವರ್ಣಾಶ್ರಯಗಳಾಗಿ ಇರೋದಾಗಿ ಅವೆ. ಗಳೊಳಗೆ–ಸಪ್ತಸ್ವರಗಳೊಳಗೆ ೫೦ ಅಕ್ಷರಗಳು ಒಳಗೆ ಇವುಗಳಲ್ಲಿ, ತದ್ವಾಚ್ಯ–ಆಯಾ ಸ್ವರವರ್ಣ ವಾಚ್ಯನಾಗಿ, ತದಂತರ್ಗತನಾಗಿ, ಇರುವ–ಇರತಕ್ಕ ಶ್ರೀ ಪರಮಾತ್ಮನ, ಅದರದರಲ್ಲಿ, ತತ್ತನ್ನಾಮರೂಪಗಳರಿತು–ಆಯಾ ಸ್ವರಾಕ್ಷರ ನಾಮಗಳೇ ಅಂತರ್ಗತವಾದ ಪರಮಾತ್ಮನ ನಾಮಗಳೆಂತಲೂ, ಆಯಾ ಸ್ವರಾಕ್ಷರ ರೂಪಗಳೇ ಅಂತರ್ಗತನಾದ ಪರಮಾತ್ಮನ ಆಕಾರಗಳೆಂತಲೂ, ತಿಳಿದವನಾಗಿ, ಉಪಾಸನೆಗೈವರು–ಪ್ರತಿಮಾದಿಗಳ ಇಟ್ಟುಕೊಂಡು ತದ್ಗತ ಪರಮಾತ್ಮನ್ನ ಅನುಸಂಧಾನಮಾಡಿ, ಉಪಾಸನಾ ಮಾಡಿದೋಪಾದಿಯಲ್ಲಿ ದಾರಾದರೂ ಉಪಾಸನೆ ಮಾಡುತಾರೋ, ಅಂಥಾ ಉಪಾಸನಾ ಮಾಡತಕ್ಕವರು, ಇಳೆಯೊಳು–ಭೂಮಿಯಲ್ಲಿ, ಸುರರೆ ಸರಿ–ದೇವತೆಗಳು ಸಾಧನಪೂರ್ತಿಯಾಗಿ ಮನುಷ್ಯತ್ವೇನ ಅವತಾರ ಮಾಡಿದ್ದೇ ನಿಶ್ಚಯವು. ನರರಲ್ಲ–ಅವರು ಮಾನುಷಗಣ ಪ್ರವಿಷ್ಟರಲ್ಲ, ಅಂದರೆ, ಮಾನವರಲ್ಲ. ಅವರಾಡುವುದೇ ವೇದಾರ್ಥ–ಅವರು ಆಡೋ ಮಾತುಗಳೆಲ್ಲಾ ವೇದಾರ್ಥಗಳೇ

ಅಂದರೆ, ವೇದದಲ್ಲಿ ಪ್ರಯೋಜನಾರ್ಥ ಈಶ್ವರನ ಮಹಾತ್ಮ್ಯ, ಇವರು ಆಡತಕ್ಕ ಮಾತು ಸಾಂಕೇತವಾದ ಪ್ರತಿವರ್ಣದಲ್ಲಿ ಶ್ರೀ ಪರಮಾತ್ಮನ ಮಹಾತ್ಮ್ಯ ಪ್ರತಿಪಾದನಪೂರ್ವಕ ಅನುಸಂಧಾನದಿಂದ ಮಾತುಗಳಾಡುತಾರೆ. ಆದ್ದರಿಂದ ಸರ್ವವೂ ವೇದಾರ್ಥಗಳೆಂತಲೇ ತಾತ್ಪರ್ಯ.

**ವಿಶೇಷಾ ರ್ಥ :-**

**ಉಕ್ತಂಚ ಶ್ರೀಮದಾನಂದತೀರ್ಥ ಪೂಜ್ಯಪಾದೈ :-**

**ದಾರ್ಢ್ಯಮೇವಾನುದಾತ್ತಾರ್ಥಃ ಉದಾತ್ತಸ್ಯೋಚ್ಛ್ರತಾರ್ಥತಾ ।**
**ನೀಚನಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ ॥**
**ಸಮಾಹಾರೇಽಖಿಲಾರ್ಥಃ ಸ್ಯುಃ ಸ್ವರಾರ್ಥಾನಾಮಿಯಂ ಸ್ಥಿತಿಃ ॥**

ಈ ಪ್ರಮಾಣರೀತ್ಯಾ ತಿಳಿದು, ತನ್ನಾಮ, ತದ್ರೂಪ, ತದಾಕಾರ ಪೂರ್ವಕ ಸಮಸ್ತ ವರ್ಣಗಳು, ಸ್ವರಾದಿಗಳು, ಭಗವತ್ಪರತ್ವೇನ ನಿರ್ವಚನ ಮಾಡುತ್ತಾ, ಉಪಾಸನಾ ಮಾಡತಕ್ಕವರೇ, ದೇವತೆಗಳೆಂದು ಭಾವ ತೋರಿಸಿದ್ದಾರೆಂದು ತಾತ್ಪರ್ಯ. ॥೧॥

(೨) **"ಭಾವಪ್ರಕಾಶಿಕೆ"-ವ್ಯಾಖ್ಯಾನ :-**

ಈ ಸಂಧಿಯಲ್ಲಿ ಮುಕ್ತಿಯಾಗಬೇಕಾದರೂ, ಅಪರೋಕ್ಷವಾಗಬೇಕಾದರೂ ಸಹ ಮುಖ್ಯವಾಗಿ ಮೊಟ್ಟಮೊದಲು ಜೀವರ ಸ್ವರೂಪ ಯೋಗ್ಯತೆಯನ್ನು ತಿಳಿದುಕೊಂಡು, ಯಾರ ಯಾರಲ್ಲಿ ಹೇಗೆ ಇರಬೇಕೆಂಬ ವಿಷಯವನ್ನು ಅರಿತು, ಅಧಿಷ್ಠಾನವನ್ನನುಸರಿಸಿ, ಉಪಾಸನೆ ಮಾಡುವುದು ಮುಖ್ಯ ಸಾಧನವೆಂದು ಹೇಳುತ್ತಾರೆ. ಈ ಕಾರಣದಿಂದ ಇದಕ್ಕೆ **ಜೀವ ಪ್ರಕರಣ ಸಂಧಿ**-ಎಂದು ಹೆಸರಿಟ್ಟರು. ಅದರಲ್ಲಿ ಪ್ರಥಮ ಪದ್ಯದಿಂದ ಸಂಧಿಯ ಸಾರ ಭೂತವಾದ ಉತ್ತಮ ಜೀವರ ಸ್ವರೂಪವನ್ನು ತಿಳಿಸುತ್ತಾರೆ.

ವೇದಗಳಲ್ಲಿ ಸ್ವರಿತ, ಉದಾತ್ತ, ಅನುದಾತ್ತ, ಪ್ರಚಯ ಮೊದಲಾದ ಅಂಶಗಳಿರುವುವು. ಸಂಧಿ, ವಿಸರ್ಗ, ಬಿಂದುಗಳು ಸರ್ವಸ್ಮೃತಿ

ವಾಕ್ಯಗಳಲ್ಲಿ, ವೇದಗಳಲ್ಲಿ ಸಹ ಬರುವುವು. ಸ್ವರಿತ, ಅನುದಾತ್ತ, ಉದಾತ್ತಗಳ ಲಕ್ಷಣಗಳನ್ನು ತಿಳಿಯಬೇಕಾದರೆ, ಸಂಗೀತಶಾಸ್ತ್ರದಲ್ಲಿ ಸ್ವಲ್ಪ ಪರಿಚಯ ಪರಿಶ್ರಮ ಇರಬೇಕು. "ಸರಿಗಮಪಧನಿ"—ಎಂಬ ಏಳು ಸ್ವರಗಳು ಆರೋಹಣಕ್ರಮವಾಗಿ ಒಂದಕ್ಕೊಂದು ಉಚ್ಚಸ್ವರವಾಗುವುವು. "ನಿಧಪಮಗರಿಸ"—ಇವು ಅವರೋಹಣ. ಇವು ಒಂದಕ್ಕೊಂದು ನೀಚ ಸ್ವರವಾಗುವುವು. ಇದರಲ್ಲಿ "ಮ, ಪ, ಧ" ಎಂಬ ಮೂರು ಸ್ವರಗಳನ್ನು ತೆಗೆದುಕೊಂಡರೆ, "ಮ"–ಎಂಬುದು ಅನುದಾತ್ತ ಸ್ವರವು. "ಪ"–ಎಂಬುವು ಸ್ವರಿತ. "ಧ"–ಎಂಬುದು ಉದಾತ್ತ. "ಪ"–ಎಂಬ ಸ್ವರವು ಯಥಾಸ್ಥಿತಿಯಾಗಿ ಉಚ್ಚರಿಸುವುದು. ಆದಕ್ಕೆ "ಸ್ವರಿತ"—ಎಂದು ಹೆಸರು. ಪಂಚಮಕ್ಕಿಂತಲೂ ಒಂದು ಸ್ವರ ಕೀಳಾಗಿ ಉಚ್ಚಾರಮಾಡುವುದು ಮ (ಮಧ್ಯಮ) ಪಂಚಮಕ್ಕಿಂತಲೂ, ಒಂದು ಸ್ವರ ಉಚ್ಚದಿಂದ ಉಚ್ಚರಿಸುವುದು. ಧ (ಧೈವತ) ವೇದಗಳಲ್ಲಿ ಸಮನಾಗಿ ಉಚ್ಚರಿಸುವುದು. ಸ್ವರಿತ, ನೀಚಸ್ವರವೆ. ಅನುದಾತ್ತ ಉಚ್ಚಸ್ವರವೆ. ಉದಾತ್ತ, ಪ್ರಚಯವೆಂದರೆ, ಉದಾತ್ತವನ್ನು ಉಚ್ಚರಿಸುವಾಗ ಸ್ವರಿತ, ಅನುದಾತ್ತ, ಉದಾತ್ತಗಳನ್ನು ಒಂದೇ ಪದದ ಕಡೆಯಲ್ಲಿ ಏಕಕಾಲದಲ್ಲಿ ಉಚ್ಚರಿಸುವ ಸ್ಥಳವಿಶೇಷವು. "ಸಂಧಿ"–ಎಂದರೆ ಎರಡು ಪದಗಳನ್ನು ಸೇರಿಸುವುದು. ಅಂದರೆ, "**ಪ್ರಾಣಾಪಾನಾವಿಡಾಯೂಂ**"–ಎಂಬ ಪದದಲ್ಲಿ. ಪ್ರಾಣ, ಅಪಾನ ಎರಡು ಪದಗಳನ್ನು ಸಂಧಿ ಮಾಡುವಾಗ, "ಪ್ರಾಣಾಪಾನೌ" –ಎಂದಾಯಿತು. ಇದಕ್ಕೆ ಸಂಧಿ ಎಂದು ಹೆಸರು. ವಿಸರ್ಗ, ಬಿಂದುಗಳು ಪ್ರಸಿದ್ಧವೇ ಸರಿ. ಇವುಗಳಲ್ಲಿ ೫೦ ಅಕ್ಷರಗಳ ವಾಚ್ಯನಾಗಿಯೂ, ಉದಾತ್ತನಾಮಕನಾಗಿಯೂ, ಅನುದಾತ್ತಾದಿ ನಾಮಗಳಿಂದ ಕೂಡಿ, ಅಲ್ಲಲ್ಲಿ ವ್ಯಾಪ್ತನಾಗಿರುವನು ಎಂದು ತಿಳಿದು ಉಪಾಸನಾ ಮಾಡಬೇಕು.

**"ಸರ್ವೇವೇದಾಯತ್ಪದಮಾಮನಂತಿ, ವೇದೈಶ್ಚಸರ್ವೈರಹಮೇವ ವೇದ್ಯಃ".**

–ಇತ್ಯಾದಿ ಶ್ರುತಿಸ್ಮೃತಿಗಳಲ್ಲಿ ಹೇಳಿದಂತೆ ಸಕಲ ವೇದಗಳೂ, ಪುರಾಣಗಳೂ ಸಹ ಪರಮಾತ್ಮನನ್ನೇ ಹೊಗಳುವುವು. ಅವನು ಸಕಲ ಶ್ರುತಿ,

ಸ್ಮೃತಿ ಪ್ರತಿಪಾದ್ಯನೆಂದು ಭಾವಿಸಿ, ಯಾವನು ಉಪಾಸನೆ ಮಾಡುವನೋ, ಅವನನ್ನು ಈ ಮನುಷ್ಯಲೋಕದಲ್ಲಿ ಸಾಮಾನ್ಯ ಮನುಷ್ಯನೆಂದು ಭಾವಿಸದೆ, ದೇವಾಂಶನೆಂದು ತಿಳಿಯಬೇಕೆಂದು ಸಂಧಿ ಸೂಚಿತವಾದ ಈ ಪದ್ಯದಿಂದ ಉತ್ತಮ ಜೀವನ ಸ್ವರೂಪವನ್ನು ತಿಳಿಸಿದರು. ॥೧॥

**(೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–**

ಈಗ ವೇದ ವಿಚಾರ, ಜೀವ ವಿಚಾರ, ಜೀವಸ್ವರೂಪ ದೇಹದಲ್ಲಿ ಮಾತರಿಶ್ವದೇವರ ಪ್ರವೇಶ–ಮೊದಲಾದ ವಿಚಾರ ಖಂಡಿತವಾಗಿ ತಿಳಿಯದೇ ಶ್ರೀಧಾಮನ ದರ್ಶನಲಾಭವಾಗುವುದು ದುಸ್ತರವಾದ ಕಾರಣ, ಸಜ್ಜನರಿಗೆ ತಿಳಿಸೋದಕ್ಕೋಸ್ಕರ **ಜೀವಪ್ರಕರಣ** ಸಂಧಿ ಉಪಕ್ರಮಿಸುತ್ತಾರೆ.

"ಹರೀತಿ" ॥.

**"ಸರ್ವೇ ವೇದಾಃ ಸಘೋಷಾಶ್ಚ ಸರ್ವೇವರ್ಣಾಃ ಸ್ವರಾ ಅಪಿ ।**
**ಸಮಾತ್ರಾಃ ಸವಿಸರ್ಗಾಶ್ಚ ಸಾನುಃ ಸ್ವರಪದಾಸ್ತಥಾ ॥**
**ಗುಣಸಾಂದ್ರೇ ತಥಾವಿಷ್ಣೌ ಮಹಾತಾತ್ಪರ್ಯ ಗೋಚರಾಃ ॥"**

**–ಎಂಬ ಶಾಂಡಿಲ್ಯ ತತ್ತ್ವಕ್ಕನುಸಾರವಾಗಿ** ಉದಾತ್ತಾದಿ ಸ್ವರಗಳ ವಿವರ ಬರೆಯಲ್ಪಡುತ್ತದೆ.

(೧) ಊರ್ಧ್ವಸ್ವರವೇ ಉದಾತ್ತ. (೨) ಅಧೋಸ್ವರವೇ ಅನುದಾತ್ತ. (೩) ಸಮಸ್ವರವೇ ಸ್ವರಿತ. (೪) ಸ್ವರ ವಿಶೇಷವೇ ಪ್ರಚಯ, (೫) ಪದದ್ವಯ ಕೂಡಿರುವುದೇ ಸಂಧಿ. (೬) ಎರಡು ಸೊನ್ನೆ ಮುಂದೆ ಹಾಕೋಣವೇ ವಿಸರ್ಗ. (೭) ಅನುಸ್ವಾರವೇ ಬಿಂದು. ಈ ಮೇಲೆ ಪಂಚಾಶದ್ವರ್ಣ ಉಚ್ಚಾರ ಮಾಡೋಣವೇ ಸುಸ್ವರ.

ಈ ಉದಾತ್ತಾದಿ ವಿಷಯದಲ್ಲಿ **ಪ್ರಮಾಣ :–**

**ಉಕ್ತಂಚ ಶ್ರೀಮದಾನಂದತೀರ್ಥ ಪೂಜ್ಯ ಪಾದೈ :–**

**"ದಾರ್ಢ್ಯಮೇವಾನುದಾತ್ತಾರ್ಥ ಉದಾರ್ಥಸ್ಯೋಚ್ಚತಾರ್ಥತಾ ।**
**ನೀಚತಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ ॥**

–ಇತ್ಯಾದಿ ವಿಚಾರ ತಿಳಿದು, ತನ್ನಾಮ, ತದ್ರೂಪ, ತದಾಕಾರ ಪೂರ್ವಕ ಸಮಸ್ತ ವರ್ಣಸ್ವರಾದಿಗಳನ್ನು ಭಗವತ್ಪರತ್ವೇನ ನಿರ್ವಚನ ಮಾಡುತ್ತಾ ಉಪಾಸನ ಮಾಡತಕ್ಕವರೇ ದೇವತೆಗಳೆಂದು ಭಾವತೋರಿಸಿದ್ದಾರೆಂಬ ತಾತ್ಪರ್ಯ. ॥೧॥

**(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–**

"ನಾನರ್ಥಕಃ ಸ್ವರೋಽಪಿ"– ಇತ್ಯುಕ್ತೇಃ ಸ್ವರಾಧಿಕಂ ಅವಗತಂ ಚೇತ್ ಅರ್ಥತಃ ಕೃತಾರ್ಥಃ ಸ್ಯಾತ್ ಇತಿ ಆಲೋಚಯನ್ "ಸರ್ವೇ ವೇದಾಃ ಸರ್ವೇ ಘೋಷಾಃ"– ಇತ್ಯುಕ್ತಂ ಅರ್ಥತಃ ವಕ್ತುಂ ವರ್ಣ ಪ್ರಕ್ರಿಯಾಂ ವರ್ಣಯಂತಿ– "ಹರಿಯೆ"–ಇತಿ ॥

ಹರೀತಿ ಹರಿಯೇ– ವರ್ಣಗತತ್ವಾತ್ ತದುಚ್ಚಾರಣ ಶಕ್ತಿದಾತೃತ್ವಾತ್ನಾ ವರ್ಣಃ ॥ ವರ್ಣಾದಿ ವಾಚಕಂ ರೂಪಂ ಜ್ಞೇಯಂ– "ವರ್ಣಾದಿ ನಾಮಕಮ್ಂ । ವಿಷ್ಣೋಃ ವರ್ಣಾದಿ ಸಂಸ್ಥಂ ಚ ಪುಂಸ್ತ್ವ ತತ್ತತ್ಕ್ರಿಯಾಪ್ರದಮ್"॥ ಇತಿ **ತೈತ್ತಿರೀಯ್ಯೆ** ॥ ಸುಸ್ವರಾಃ ಉದಾತ್ತಾದಯಃ ॥ ಓಂ ಸ್ವರತೇಃ ತು ಸ್ವರಃ ॥ **ಋಗ್ಭಾಷ್ಯೇಚ** ॥ ದಾರ್ಢ್ಯಮೇವಾನುದಾತಾರ್ಥಾ, ಉದಾತ್ತಸ್ಯೋ ಚ್ಯತಾರ್ಥತಾ ॥ ನೀಚತಾ ಸ್ವರಿತಸ್ಯಾರ್ಥಃ ಪ್ರಚಯಸ್ಯ ಯಥಾಸ್ಥಿತಿಃ । ಸಮಾಹಾರೇ ಅಖಿಲಾರ್ಥಾಃ ಸ್ಯುಃ ಸ್ವರಾರ್ಥಾನಾಂ ಇಯಂ ಸ್ಥಿತಿಃ । ಸಾಧಾರಣೋ ವಿಧಿಸ್ತ್ವೇಷಃ"– ಇತಿ ॥ ವಿಶೇಷಸ್ತು ಐತರೇಯೇ– "ತಥಾ ಭೇರೀಧ್ವನಿಃ ಪ್ರಭೋಃ ॥ ಅನುದಾತ್ತ ಸ್ವರೂಪತ್ವಾತ್ ಔದಾರ್ಯಂ ವದತೀಶತುಃ ॥ ತದಪೇಕ್ಷಯಾನ್ಯ ನೀಚತ್ವಂ ಘಟಾದ್ಯಾಃ ಸ್ವರಿತಾತ್ಮಕಾಃ ॥ ಉಚ್ಚಸ್ಥಿತಿ ಮುದಾತ್ತಸ್ತು ಸ್ವವರ್ಣಂ ಚಂಚಾದ್ವಯಃ ಸ್ವರಾಃ ವಿಷ್ಣೋಃ ವಕ್ತಿ ತಥಾಶ್ವಾಸಾದಿಃ ಪ್ರಚಯಾತ್ಮಕಃ ॥ ಏಕಪ್ರಕಾರತಾಂ ಸದಾಬಾಲ್ಯಂ ವದತ್ಯಪಿ"–ಇತಿ ॥ ಗರ್ಗರ ಗೋಧಾ ಪಿಂಗಾದೀನಾಂ ಘೋಷಾಃ ಅಪಿ ನಾದಮಾತ್ರ ವ್ಯಂಜಕತ್ವೇನ ಭಗವದ್ವಾಚಕಾಃ ಏವ ಇತ್ಯಾಹ– "ಅವ ಸ್ವರಾತಿ"– ಇತ್ಯಾದಿನಾ ॥ ಗರ್ಗರ ಇತಿ ಪಾದಭೂಷಣ ಮಹಾಮತ್ರಕದಧಿ ಪಾತ್ರ ಹಸ್ತಿ ಹಸ್ತಾನಾಂ ನಾಮ । ಪಿಂಗಾಚಕೋರೀ ॥ ಓಂ ದಧ್ನಃ ಮಥನ

ಶಬ್ದ ಶ್ಚಾಪ್ಯಂತರ್ನಾದ ಸ್ವರೂಪತಃ ॥ ಭೀಷಕತ್ವಂ ಹರೇಃ ಭೂಯಾತ್ ಅಂತರ್ನಾದೋ ಹಿ ಭೀಷಣೇ ॥ ಗಜ ಬೃಂಹಿತಮಪ್ಯೇವಂ ದಿಕ್ಕಾರ ಸಹಿತಂ ವದೇತ್ ॥ ಸ್ವರಿತೇನ ಸಮಾಯೋಗಾತ್ ಭಿಕ್ಕೃತ್ ಸ್ವರಿತಃ ಯತಃ ॥ ಮಹಾಮಂತ್ರ ಜಲಾದ್ಯೈಶ್ಚ ಯುಕ್ತ ಮೇತಾದೃಶಂ ವದೇತ್ ॥ ಪಾದ ಭೂಕ್ಷಾದಿತಿ ದಿಕ್ಕಾರ ತತ್ಕೃತಂ ಸ್ವರಿತಃ ವದೇತ್ ॥ ಅದ್ಭುತತ್ವಂ ಹರೇಃ ವತ್ತ ಪಿಂಗಾ ಕಂಠಗಶಬ್ದವತ್ ॥ ತಾಮೇವಾದ್ಭುತತಾಂ ವತ್ತಿ ಗೃಹಸೋಧಾ ಪರಾಪಿ ಚ"- ಇತಿ ಶಬ್ದ ತತ್ವೇ ॥ ಓಂ- "ಯಚ್ಚೈರ್ನ್ಯಾನದ್ಯ ಆಪತಂತಿ ತದ್ಘೋಷಶ್ಚೇಂದ್ರ ವಾಚಕಃ ॥ ನದೀ ಸಮುದ್ರ ಘೋಷಾದ್ಯಾಃ ನಾದ ತ್ವಾತ್ ಶ್ರೈಷ್ಠ್ಯವಾಚಕಾಃ । ನಾದೋಹಿ ಶ್ರೈಷ್ಠ್ಯವಾಚೀ ಸ್ಯಾತ್ ಏವಂ ಘೋಷಾಃ ಪರೇಪಿಚ ॥ ಇತಿ ಕರ್ಮನಿರ್ಣಯೇ ॥ "ಇತ್ಯಾದಯಃ ಸರ್ವೇ ಘೋಷಾಃ ವಿಷ್ಣೋರೇವ ಗುಣೋನ್ನತಿಮ್ । ವದಂತಿ ಕಿಮು ವೇದಾದ್ಯಾಃ ಮಾರ್ಜಾರಾಪ್ಯಭಿದಾಃ ತಥಾ" ॥ ಇತಿ ಐತರೇಯೇ ॥ ವಾಸುದೇವಾದಿಕಾ ನ್ಯೇವ ತಾನಿ ಪೂರ್ವೋತ್ತರಾರ್ಣಯೋಃ ॥ ಸಂಹಿತಾಃ ತಥಾ ಸಂಧೌ ॥ ವಿಸರ್ಗ ಕೃದ್ವಿಸರ್ಗಾಖ್ಯಃ ಬಿಂದುರ್ವತ್ರ್ಯಧಿಕತ್ವಂ ಚ ॥ ಇತಿ ॥ ॥೧॥

**ಕನ್ನಡಾರ್ಥ :—**

"ವೇದ ಮಂತ್ರಗತ ಸ್ವರಗಳೆಲ್ಲವೂ ವ್ಯರ್ಥವಲ್ಲ"- ಎಂಬ ಪ್ರಮಾಣ ಏದೆ. ಈ ಕಾರಣದಿಂದ ಸ್ವರಾದಿಗಳನ್ನು ಅರ್ಥಪೂರ್ಣವಾಗಿ ಅರಿಯಬೇಕು. ಆಗಲೇ ಅವರ ಜ್ಞಾನಕ್ಕೆ ಸಾರ್ಥಕ್ಯ. "ಸರ್ವೇ ವೇದಾಃ"- ಎಂಬ ವಾಕ್ಯ ದಿಂದ, ಸಕಲ ವೇದಗಳೂ, ಧ್ವನಿವರ್ಣಗಳೂ ಆ ಪರಮಾತ್ಮನನ್ನೇ ಪ್ರತಿ ಪಾದಿಸುವುವು ಎಂದು ಸುಸ್ಪಷ್ಟ. ಈ ತತ್ತ್ವ ವಿವರಿಸುವುದಕ್ಕಾಗಿಯೇ **ವರ್ಣ ಪ್ರಕ್ರಿಯೆಯ** ಅರ್ಥವನ್ನು ವಿಶದೀಕರಿಸುತ್ತಾರೆ- "ಹರಿಯೆ"-ಎಂಬ ಪ್ರಸಕ್ತ ಸಂಧಿಯಿಂದ, ಶ್ರೀಹರಿಯು (೧) ವರ್ಣಗಳಲ್ಲಿ ಇದ್ದಾನೆ. ಮತ್ತು (೨) ವರ್ಣೋಚ್ಚಾರಣ ಸಾಮರ್ಥ್ಯಪ್ರದನು. ಇದರಿಂದ "**ವರ್ಣ**" ಎಂದು ಶ್ರೀ ಪರಮಾತ್ಮನಿಗೆ ಹೆಸರು. ಅಂತಹ ವರ್ಣಗಳಿಂದ ಪ್ರತಿಪಾದ್ಯ ನಾದ ಶ್ರೀಹರಿಯ ಭಗವದ್ರೂಪಗಳಿಗೂ ಸಹ "**ವರ್ಣ**"-ಎಂತ ಹೆಸರು.

ಉದಾತ್ತ ಮುಂತಾದುವು ಸುಸ್ವರಗಳು. **ಋಗ್ಭಾಷ್ಯದಲ್ಲಿ** ಅನುದಾತ್ತಸ್ವರಕ್ಕೆ "ಧೃಢ" ಅಥವಾ "ದಾರ್ಢ್ಯ" ಎಂದು ಅರ್ಥ. ಉದಾತ್ತ ಸ್ವರಕ್ಕೆ "ಉಚ್ಚ" ಅಥವಾ "ಉನ್ನತ" ಎಂದು ಹೆಸರು. ಸ್ವರಿತಸ್ವರಕ್ಕೆ "ನೀಚ" (ಕೆಳಗಿನ) ಎಂದರ್ಥ. ಪ್ರಚಯಕ್ಕೆ "ಯಥಾಸ್ಥಿತವಾದದ್ದು" ಎಂಬ ತಾತ್ಪರ್ಯ. ಸಕಲ ವಿಷಯಗಳನ್ನು ಸಮಾಹಾರ (ಸಂಗ್ರಹ) ಮಾಡುವ ಅರ್ಥದಲ್ಲಿ– "ಸಮಾಹಾರ ಸ್ವರಿತ" ವು ಉಪಯುಕ್ತವಾಗಿದೆ. ಇದು ಸಾಮಾನ್ಯ ವಿಧಿ. ವಿಶೇಷ ನಿಯಮವು **ಐತರೇಯದಲ್ಲಿ** ವಿಶದೀಕರಿಸಲ್ಪಟ್ಟಿದೆ.

"ಭೇರಿ ಧ್ವನಿಯು ಅನುದಾತ್ತ ಸ್ವರ ಪ್ರತಿಪಾದಕ. ಇದರಿಂದ ಶ್ರೀಹರಿಯ ಔದಾರ್ಯ ಗುಣದ ಸೂಚನೆ. ಅದಕ್ಕಿಂತಲೂ ಕೆಳಗಿನ ಧ್ವನಿ– ಘಟಾದಿಗಳಿಂದ ಉಂಟಾಗುವ ಶಬ್ದ–ಇದು ಸ್ವರಿತ ಧ್ವನಿ ಪ್ರತಿಪಾದಕ. ನೆಂದು ಆದಿಯಾಗಿ ಉಚ್ಚಸ್ಥಿತಿಯ ಶಬ್ದವು ಉದಾತ್ತ ಸ್ವರವು. ಶ್ವಾಸಾದಿಗಳ ಧ್ವನಿ ಮುಂದ್ರವಾಗಿರುವುದು. ಇದು ಪ್ರಚಯರೂಪವು. ಈ ಪ್ರಚಯವು ಶ್ರೀ ಪರಮಾತ್ಮನ "ಶಶ್ವದೇಕ ಪ್ರಕಾರತ್ವ" ಸೂಚಕ (ಏಕರೀತಿಯಲ್ಲಿ ನಿರಂತರ ಇರುವವನು) ಗರ್ಗರ, ಗೋಧಾ, ಪಿಂಗ ಇತ್ಯಾದಿ ಧ್ವನಿಗಳು ನಾದ ಅಭಿವ್ಯಂಜಕಗಳು. ಇವೂ ಸಹ ಭಗವತ್ಪ್ರತಿಪಾದಕವೇ. ಗರ್ಗರವೆಂದರೆ ಪಾದಾಭರಣ, ದಧಿಪಾತ್ರ, ಗಜ ಶುಂಡಗಳಿಗೆ ಹೆಸರು. ಪಿಂಗಾ ಎಂಬುದು ಹೆಣ್ಣು ಚಕೋರ ಪಕ್ಷಿಯ ಧ್ವನಿ.

ಮೊಸರು ಕಡೆಯುವಾಗ (ದಧಿಪಾತ್ರ) ಆಗುವ ಶಬ್ದವೇ ಅಂತರ್ನಾದ ರೂಪವು (ಒಳಗೇ ನಾದವನ್ನುಂಟುಮಾಡುವುದು). ಈ ಧ್ವನಿಯು ಭಗವಂತನಲ್ಲಿರುವ ದುಷ್ಟರನ್ನು ಭಯಗೊಳಿಸುವ ಗುಣವನ್ನು ಪ್ರತಿಪಾದಿಸುತ್ತದೆ. ಅಂತರ್ನಾದವು "ಭೀಷಣ" ಗೊಳಿಸುವುದನ್ನು ಹೇಳುತ್ತದೆ. ಗಜಗರ್ಜನವೂ ಇಂತೆಯೇ ಧಿಕ್ಕಾರ ಸಹಿತವಾದ ಭಯಸೂಚಕವು. ಸ್ವರಿತ ಸ್ವರವು ಧಿಕ್ಕಾರದ ಧ್ವನಿಯ ಅಭಿವ್ಯಕ್ತಿ. ನೀರನ್ನು ಕೊಡದಲ್ಲಿ ತುಬುವಾಗ ಉಂಟಾಗುವ ಶಬ್ದವು ಇದೇ ಅರ್ಥದ್ಯೋತಕ. ಹೆಣ್ಣು ಚಕೋರ ಪಕ್ಷಿಯ ಧ್ವನಿಯು ಹರಿಯ ಅತ್ಯಾದ್ಭುತ ಗುಣಗಳನ್ನು ಪ್ರತಿಬಿಂಬಿಸುತ್ತದೆ. ಹಲ್ಲಿಯೂ

ಸಹ (ಗೃಹ ಗೋಧಾ) ಇದೇ ಅರ್ಥವನ್ನೇ ಪ್ರತಿಪಾದಿಸುತ್ತದೆ. ನದಿಗಳ ಸಂಗಮದಿಂದ ಉಂಟಾಗುವ ನಾದವು ಇಂದ್ರನಾಮಕ ಪರಮಾತ್ಮನನ್ನು ಪ್ರತಿಪಾದಿಸುವುದು. ನದೀ ಮತ್ತು ಸಮುದ್ರದ ಮೊರೆತ ಇವು ನಾದರೂಪದಲ್ಲಿ ಶ್ರೀ ಪರಮಾತ್ಮನ ಶ್ರೇಷ್ಠತೆಯನ್ನು ತಿಳಿಸುತ್ತವೆ. ಇಂತು ಸಮಸ್ತ ಧ್ವನಿಗಳೂ ಶ್ರೀ ಪರಮಾತ್ಮನಲ್ಲಿಯೇ ತಾತ್ಪರ್ಯ. ಈ ವಿಷಯವು **ಕರ್ಮನಿರ್ಣಯ**ದಲ್ಲಿ ಉಕ್ತವಾಗಿದೆ. ಯಾವತ್ತೂ ಧ್ವನಿಗಳು ಶ್ರೀ ವಿಷ್ಣುವಿನ ಗುಣಪೂರ್ಣತೆಯನ್ನು ಹೇಳುತ್ತವೆ. ಅಂದಮೇಲೆ ವೇದಾದಿಗಳು ನಾರಾಯಣನಿಗೇ ಗುಣಪೂರ್ಣತೆಯನ್ನು ಹೇಳುತ್ತವೆ ಎಂಬುದೆ ಕೈಮುತ್ಯನ್ಯಾಯಸಿದ್ಧವಾದ ಸಂಗತಿ. ಈ ವಿಷಯವು **ಐತರೇಯ** ದಲ್ಲಿ ಪ್ರತಿಪಾದಿತವಾಗಿದೆ. ವಿಸರ್ಗವನ್ನುಂಟುಮಾಡುವುದರಿಂದ ಪ್ರಲಯ, ಮೋಕ್ಷವು ವಿಸರ್ಗವೆಂದೂ ಮತ್ತು ಬಿಂದುವು ಆಧಿಕ್ಯವನ್ನು ಹೇಳುವುದೆಂದೂ ತಿಳಿಯಲ್ಪಡುವುದು. ॥೧॥

## (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :-

ಈ ಸಂಧಿಯಲ್ಲಿ ವರ್ಣವೆಂಬ ಅಕ್ಷರಗಳು, ಮಾತ್ರಾ ಎಂಬ ವ್ಯಂಜನ, ಮೊದಲಾದ ಹ್ರಸ್ವ ದೀರ್ಘಸ್ವರಗಳು ಮುಂತಾದ್ದರಲ್ಲಿಯೂ, ಧಾತುಗಳು, ದೈಶಿಕ, ಕಾಲಾದಿ ಕರ್ಮಗಳಲ್ಲೂ, ಲಿಂಗಶರೀರಾದಿಗಳಲ್ಲಿಯೂ, ಸನ್ನಿಹಿತ ದೇವರ ರೂಪಸ್ಮರಣೆ, ಅಷ್ಟದಳ ಹೃದಯ ಕಮಲಸ್ಥ ಪ್ರಹರೀ ರೂಪಸ್ಮರಣೆ ಮುಂತಾದ ಉಪಾಸನಾಕ್ರಮ ತಿಳಿಸುತ್ತಾರೆ.

ಪಂಚಾಶದ್ವರ್ಣಾದಿಗತನಾಗಿ, ಆಯಾಯಾ ಹೆಸರಿನಿಂದ ಕರೆಸುವ ಶ್ರೀಹರಿಯ ರೂಪಸ್ಮರಣೆ ತಿಳಿಸುತ್ತಾರೆ– "ಹರಿಯೆಂದು". ಶ್ರೀಹರಿಯೇ ಅಕಾರ ಮೊದಲು ಳ-ಕಾರದವರೆಗೆ ೫೦ ಅಕ್ಷರಗಳಲ್ಲಿಯೂ ಉದಾತ್ತವೆಂಬ ಊರ್ಧ್ವಸ್ವರದಲ್ಲೂ, ಅನುದಾತ್ತ ಎಂಬ ಕೆಳಗಿಳಿಯುವ ಸ್ವರದಲ್ಲೂ, ಪ್ರಚಯವೆಂಬ ವಿಸ್ತಾರ ಸ್ವರದಲ್ಲೂ, ಸ್ವರಿತವೆಂಬ ಕಂಪನ ಸ್ವರದಲ್ಲೂ, ವರ್ಣಗಳಿಗೆ ಪದಗಳಿಗೆ ಸಹಾ ಸಂಬಂಧವಿರುವ ಸಂಧಿಯಲ್ಲೂ, ಎರಡು ಸೊನ್ನೆ ಎನಿಸುವ ವಿಸರ್ಗದಲ್ಲೂ, ಒಂದೇ ಸೊನ್ನೆ ಎನಿಸುವ ಬಿಂದುವಿನಲ್ಲಿಯು ಸಹ ಸುಸ್ವರ ಎಂಬುದೇ ಮೊದಲಾದ ಅದರದರ ಹೆಸರಿನಿಂದಲೇ

ತದ್ವಾಚ್ಯ–ಎಂದರೆ ಅದರಿಂದ ವರ್ಣಿಸಲ್ಪಡುವವನು ಎಂದರ್ಥ. ಆಯಾಯಾ ರೂಪನಾಮಗಳನ್ನು ತಿಳಿದು ಉಪಾಸನೆ ಮಾಡುವವರು ದೇವತೆಗಳೇ ಸರಿ. ಮನುಷ್ಯರಾಗಿ ಹುಟ್ಟಿದ್ದರೂ, ಅವರಾಡುವ ಮಾತುಗಳೆಲ್ಲವೂ ವೇದಾರ್ಥವಾದ್ದರಿಂದ, ಅವರನ್ನು ದೇವತೆಗಳೆಂದೇ ಪರಿಗಣಿಸಬೇಕು ಇದರಿಂದ,

**॥ವರ್ಣಸ್ಸ್ವರಃ ಮಾತ್ರಾಬ್ಯ ಸಾಮಸಂತಾಪಃ ।**

**ಇತ್ಯುಕ್ತಶ್ಶೀಕ್ಷಾಧ್ಯಾಯಃ—ಎಂಬ ತೈತ್ತರೀಯ ಶೃತ್ಯರ್ಥವು** ವಿವರಿಸಲ್ಪಟ್ಟಿತು. ॥೧॥

# ಸರ್ವವ್ಯಾಖ್ಯಾನಸಾರಸಂಗ್ರಹ

(೧) ಸ್ವರಾದಿ ವರ್ಣಗಳಲ್ಲಿರುವ ಉದಾತ್ತ ಅನುದಾತ್ತಾದಿ ಸ್ವರೋಚ್ಚಾರಣಾಕ್ರಮ, ಅವುಗಳಲ್ಲಿದ್ದು, ವರ್ಣಪ್ರತಿಪಾದ್ಯನಾಗಿ, ವರ್ಣಗಳಿಗೆ ಉಚ್ಚಾರಣೆ, ಅರ್ಥಾನುಪತ್ತಿ ಮುಂತಾದ ಅಭಿವ್ಯಂಜನ ಶಕ್ತಿಪ್ರದನಾದ ಶ್ರೀ ಪರಮಾತ್ಮನ ಏಕಪಂಚಾಶದ್ವರ್ಣ ಪ್ರತಿಪಾದ್ಯ ಭಗವದ್ರೂಪೋಪಾಸನಾಕ್ರಮ ಇತ್ಯಾದಿ ವಿವರಗಳನ್ನು ತಿಳಿಸುವುದರಿಂದ ಈ ಸಂಧಿಗೆ— **"ಉದಾತ್ತಾನುದಾತ್ತ ಸಂಧಿ"**– ಎಂದು ಹೆಸರು.

(೨) ಜೀವರ ಸ್ವರೂಪದೇಹದ ವಿಚಾರ. ಹೃದಯಸ್ಥಾನಗತ ಅಷ್ಟದಳ ಪದ್ಮದ ವಿವರಣೆ, ಆ ದಳಗಳಲ್ಲಿ ಮೂಲೇಶನ ಸಂಚಾರ, ಅದರಿಂದ ಶ್ರೀ ಪರಮಾತ್ಮನ ಬಿಂಬಕ್ರಿಯಾದ್ವಾರಾ, ಜೀವರಿಗೆ ಉಂಟಾಗುವ ಅನುಭವ ವಿಶೇಷಗಳು...... ಇತ್ಯಾದಿ ವಿವರಗಳನ್ನು ತಿಳಿಸುವುದರಿಂದ, ಈ ಸಂಧಿಗೆ—**"ಜೀವಪ್ರಕರಣಸಂಧಿ"**—ಎಂತಲೂ ಇನ್ನೊಂದು ಹೆಸರು.

(೩) ಅಕಾರಾದಿ ಕ್ಷಕಾರ ಪರ್ಯಂತ ವರ್ಣಮಾಲೆಯಲ್ಲಿರುವ ೫೧ ಅಕ್ಷರಗಳು. ಆವುಗಳ ಉಚ್ಚಾರಣಾಕ್ರಿಯು, ವರ್ಣಪ್ರತಿಪಾದ್ಯ ಅಜಾದಿ

ಶ್ರೀ ಲಕ್ಷ್ಮೀನರಸಿಂಹ ಪರ್ಯಂತ ವಿದ್ಯಮಾನನಾಗಿರುವ ಭಗವದ್ರೂಪಗಳು, ಅಕ್ಷರಗಳ ಸಂಯೋಗದಿಂದ ಪದಗಳ ಉತ್ಪತ್ತಿ, ಪದಗಳ ಸಕ್ರಮವಾದ ಜೋಡಣೆಯಿಂದ ವಾಕ್ಯಗಳ ಉತ್ಪತ್ತಿ ಅವುಗಳ ಅರ್ಥಾನುಪತ್ತಿ, ಸಪ್ತಸ್ವರಗಳು. ಅವುಗಳಲ್ಲಿ ಅಭಿವ್ಯಂಜಕಶಕ್ತಿ ಪ್ರದನಾದ ಅಕ್ಷರೇಢ್ಯನ ಮಹಿಮಾ ವಿಶೇಷಗಳು ಇತ್ಯಾದಿ ವಿವರಗಳನ್ನು ತಿಳಿಸುವುದರಿಂದ, ಪ್ರಸಕ್ತ ಸಂಧಿಗೆ—**"ವರ್ಣಪ್ರಕ್ರಿಯಾ ಸಂಧಿ"**—ಎಂತಲೂ ಇನ್ನೊಂದು ಹೆಸರಿದೆ.

ಹೀಗೆ ನವಮ ಸಂಧಿಯನ್ನು (೧) ಉದಾತ್ತಾನುದಾತ್ತ **ಸಂಧಿ** (೨) ಜೀವಪ್ರಕರಣ ಸಂಧಿ ಮತ್ತು (೩) ವರ್ಣಪ್ರಕ್ರಿಯಾ ಸಂಧಿ–ಎಂಬ ಮೂರು ಹೆಸರುಗಳಿಂದ ಕರೆಯುವರು.

(೪) ಪ್ರಸಕ್ತ ಪ್ರಥಮ ಪದ್ಯದಿಂದ **ಹರಿಯು ಪಂಚಾಶದ್ವರ್ಣ**–ಎಂದು ಪ್ರಾರಂಭಿಸುತ್ತಾರೆ. ಸಕಲ ಚೇತನರ ಬಿಂಬಸ್ವರೂಪಿಯಾದ, ಸಜ್ಜನರಿಗೆ ಸಮಸ್ತ ಪಾಪಪರಿಹಾರಕನಾದ ಶ್ರೀ ಹರಿಯು ೫೦ ಅಕ್ಷರಗಳಲ್ಲಿ ತಾನಿದ್ದು, ಪ್ರತಿವರ್ಣದಿಂದಲೂ ಪ್ರತಿಪಾದ್ಯನಾಗಿದ್ದಾನೆ. ಸಂಸ್ಕೃತ ವರ್ಣಮಾಲೆಯಲ್ಲಿ ಅ–ಕಾರದಿಂದ ಪ್ರಾರಂಭಿಸಿ, ಳ–ಕಾರದ ವರೆಗೆ ಇರುವ ವರ್ಣಗಳ ಸಂಖ್ಯೆ ೫೦. ಇದಕ್ಕೆ **ಪಂಚಾಶದ್ವರ್ಣ** ಎಂದು ಹೇಳಿರುವರು. "ಪಂಚಾಶತ್"– ಎಂದರೆ ೫೦ ಎಂದರ್ಥ. ಕೊನೆಯವರಾದ ೫೧ ನೆಯ ವರ್ಣವು **ಕ್ಷ–ಕಾರವು.** ಇದರಲ್ಲಿ ಉಳಿದ ೫೦ ವರ್ಣಗಳೂ ಸಮಾವೇಶವಾಗಿರುವುದರಿಂದ, ಅ–ಕಾರದಿಂದ ಳ–ಕಾಸದ ವರೆಗೆ ೫೦ ವರ್ಣಗಳನ್ನು ಮಾತ್ರ ತೆಗೆದುಕೊಂಡಿರುತ್ತಾರೆ.

(೫) **ಸ್ವರ**ಗಳು ಪದಗಳ ಜೋಡಣಾಕ್ರಮದಲ್ಲಿಯೂ, ಉಚ್ಚಾರಣ ಕ್ರಿಯಾ ದ್ವಾರಾ ಅರ್ಥವನ್ನು ಕೊಡುವುದರಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುವುವು. ಇವು **ಏಳು ಪ್ರಕಾರವಿವೆ :–**

**(1) ಉದಾತ್ತ :–**

ಉಚ್ಚಸ್ವರಕ್ಕೆ "ಉದಾತ್ತ ವೆಂದು ಹೆಸರು. ಎತ್ತರದ ಸ್ಥಾಯಿಯಲ್ಲಿ ಉಚ್ಚಾರಣೆ ಮಾಡತಕ್ಕ ಸ್ವರವು. ಉದಾತ್ತಕ್ಕೆ **ಊರ್ಧ್ವಸ್ವರ** ವೆಂತ ಇನ್ನೊಂದು **ಹೆ**ಸರು. **ಋಗ್ಭಾಷ್ಯದಲ್ಲಿ** ಈ ಸ್ವರವನ್ನು "ಉಚ್ಚ" ಅಥವಾ "ಉನ್ನತ" ಎಂದು ಕರೆದಿರುತ್ತಾರೆ.

**(2) ಅನುದಾತ್ತ :–**

ಕೆಳಗಿನ ಸ್ಥಾಯಿಯಲ್ಲಿ ಉಚ್ಚರಿಸುವ ಸ್ವರಕ್ಕೆ– "ಅನುದಾತ್ತ" ವೆಂದು ಹೆಸರು. **ಋಗ್ಭಾಷ್ಯದಲ್ಲಿ** ಈ ಸ್ವರಕ್ಕೆ "ದೃಢ" ಅಥವಾ "ದಾರ್ಢ್ಯ" ವೆಂದು ಕರೆದಿರುತ್ತಾರೆ.

**(3) ಪ್ರಚಯ :–**

ಉಚ್ಚ ನೀಚಗಳಿಲ್ಲದ ಸಮಾನಸ್ವರಕ್ಕೆ– "ಪ್ರಚಯ"-ಎಂದು ಹೆಸರು. ಅಂದರೆ, ಯಥಾಸ್ಥಿತವಾದ ಸ್ವರವು ಪ್ರಯಚವು. ಇದನ್ನು ವಿಸ್ತಾರ ಸ್ವರ ವೆಂತಲೂ ಕರೆಯುವರು.

**(4) ಸ್ವರಿತ :–**

ಕಂಪನ ಸ್ವರಕ್ಕೆ- "ಸ್ವರಿತ"-ವೆಂದು ಹೆಸರು. ಸಮೂಹಾರ ಅಥವಾ ಸಂಗ್ರಹಮಾಡುವ ಅರ್ಥದಲ್ಲಿ ಸ್ವರಿತವು ಉಪಯುಕ್ತವಾಗುವುದು.

**(5) ಸಂಧಿ :–**

ಅಕ್ಷರಗಳ ಸಂಧಿಕಾಲದಲ್ಲಿ (ಸೇರುವೆಡೆ) ಉಚ್ಚರಿಸತಕ್ಕ ಸ್ವರಕ್ಕೈ "ಸಂಧಿ"– ಎಂದು ಹೆಸರು.

**(6) ವಿಸರ್ಗ :–**

ಎರಡು ಸೊನ್ನೆಗಳಿಂದ ಸಹಿತವಾದ ವರ್ಣ ಉಚ್ಚಾರ ಸ್ವರವು- "ವಿಸರ್ಗ"–ವೆಂದೆನಿಸುವುದು.

## (7) ಬಿಂದು :-

ಎಡಭಾಗದಲ್ಲಿ ಒಂದು ಸೊನ್ನೆ ಸಹಿತವಾದ ಉಚ್ಚಾರಸ್ವರಕ್ಕೆ- "ಬಿಂದು"- ಎಂದು ಹೆಸರು.

ಪೂರ್ವೋಕ್ತ ಸಪ್ತಸ್ವರಗಳು ಸಂಗೀತ ಶಾಸ್ತ್ರದಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರತಿ ರಾಗದ ಉತ್ಪತ್ತಿಯು ಸಪ್ತಸ್ವರಗಳ ಪ್ರಸ್ತಾರವನ್ನು ಅವಲಂಬಿಸಿದೆ. **ಸರಿಗಮಪದನಿ**—ಎಂಬ ಸಪ್ತ ಸ್ವರಗಳು ಆರೋಹಣ ಕ್ರಮದಲ್ಲಿಯೂ, **ನಿಧಪಮಗರಿಸ**—ಇವು ಅವರೋಹಣ ಕ್ರಮದಲ್ಲಿಯೂ ಉಚ್ಚ ಹಾಗೂ ನೀಚ ಸ್ವರವಾಗುವುವು. **ಧ**-ಎಂಬ ಸ್ವರವು **ಉದಾತ್ತ. ಮ**-ಎಂಬ ಸ್ವರವು ಅನುದಾತ್ತ (ನೀಚ) **ಪ**-ಎಂಬ ಸ್ವರವು **ಸ್ವರಿತ** (ಯಥಾಸ್ಥಿತಿ ಉಚ್ಚಾರಣೆ).

(೬) ಇಂತು, ವೇದಗಳು ಶ್ರೀ ಪರಮಾತ್ಮನ ಮಹಿಮಾ ವಿಶೇಷಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಡುವ ಶಬ್ದ ಪ್ರಪಂಚವು, ಇವು ಅಪೌರುಷೇಯಗಳಾದ್ದರಿಂದ, ಸರ್ವ ವರ್ಣ, ಸ್ವರ, ಧ್ವನಿಗಳಿಂದ ಪ್ರತಿಪಾದ್ಯನು ಶ್ರೀಹರಿಯು. ಅಂದರೆ ಸರ್ವ ವರ್ಣಗಳೂ, ಸ್ವರಗಳೂ, ಧ್ವನಿಗಳೂ ಶ್ರೀಹರಿಯನ್ನೇ ಪರಮ ಮುಖ್ಯವೃತ್ತಿಯಿಂದ ಪ್ರತಿಪಾದಿಸುಸುವುವು. ಈ ಕಾರಣದಿಂದ ವೇದಮಂತ್ರಗಳಲ್ಲಿರುವ ಸರ್ವ ವರ್ಣವೂ ವ್ಯರ್ಥವಲ್ಲ"-ಎಂಬುದು ಪ್ರಮಾಣಸಿದ್ಧವು. ಜಗತ್ತಿನಲ್ಲಿ ಕೇಳಿಬರುವ ಬೇರೆ ಧ್ವನಿ, ಪಕ್ಷಿಗಾನ, ಮೊಸರನ್ನು ಕಡೆಯುವಾಗ ಉಂಟಾಗುವ ಶಬ್ದ, ಘಂಟಾರವ, ಗಜ ಝೇಂಕಾರ, ಹಲ್ಲಿಯ ಲೊಚಗುಟ್ಟುವಿಕೆ (ಗೃಹಗೋಧಿ) ಸಮುದ್ರದ ಭೋರ್ಗರೆತ......ಇತ್ಯಾದಿ ಧ್ವನಿವಿಶೇಷಗಳೆಲ್ಲವೂ ಅಪಾರ ಮಹಿಮಾಸಂಪನ್ನನಾದ ಆ ಶ್ರೀಹರಿಯ ಗುಣಗಾನ ರೂಪವಾಗಿರುವುವು.

(೭) **ಐತರೇಯೊಪನಿಷತ್ತಿನಲ್ಲಿ**–

(1) ಭೇರಿನಿನಾದವು (ನಗಾರಿಯ ಧ್ವನಿ) ಅನುದಾತ್ತ ಸ್ವರವು. ಅದು ಶ್ರೀಹರಿಯ **ಔದಾರ್ಯ** ಗುಣವನ್ನು ಹೇಳುತ್ತದೆ.

(೩) ಘಂಟಾನಾದವು ಉದಾತ್ತ ಸ್ವರವು. ಅದು ಶ್ರೀ ಪರಮಾತ್ಮನ **ಸರ್ವೋತ್ತಮತ್ವ** (ಶ್ರೇಷ್ಠತೆ) ದ ಸೂಚಕವು.

(3) ಶ್ವಾಸಧ್ವನಿಯು ಮಂದ್ರಸ್ವರವು. ಪ್ರಚಯ ಸ್ವರವಾಗಿರುವುದರಿಂದ ಶ್ರೀ ಪರಮಾತ್ಮನ **ಶಶ್ವದೇಕಾರ ಗುಣ**ದ ಪ್ರತಿಪಾದಕವು.

(4) ಮೊಸರನ್ನು ಕಡೆಯುತ್ತಿರುವಾಗ ಉಂಟಾಗುವ ಶಬ್ದಕ್ಕೆ "ಗರ್ಗರ" ಎಂದು ಹೆಸರು. ಇದು ಅಂತರ್ನಾದ ರೂಪವಾದದ್ದು. ಇದರಿಂದ **ಶ್ರೀ** ಪರಮಾತ್ಮನಲ್ಲಿರುವ– "ದುಷ್ಟರನ್ನ ಭಯಗೋಳಿಸುವ ಗುಣ"ವು ವೇದ್ಯವಾಗಿರುವುದು.

(5) ಆನೆಯ ಝೀಂಕಾರ ಶಬ್ದದಲ್ಲಿ (ಗಜಘೀರ್ಜನೆ) ಸ್ವರಿತ ಸ್ವರವು ಸೇರಿದೆ. ಇದು ದಿಕ್ಕಾರ ಗುಣ ಸೂಚಕವು. ಕೊಡದಲ್ಲಿ ನೀರನ್ನು ತುಂಬುವಾಗ ಉಂಟಾಗುವ "ಗುಡು ಗುಡು" ಶಬ್ದವು ಇದೇ ಅರ್ಥವನ್ನು ಸೂಚಿಸುವುದು.

(6) ಹೆಣ್ಣು ಚಕೋರ ಪಕ್ಷಿಯ ಧ್ವನಿ ಹಾಗೂ ಮನೆಯ ಹಲ್ಲಿಯ ಧ್ವನಿ (ಗೃಹ ಗೋಧಾ), ಪರಮಾತ್ಮನ ಅತ್ಯದ್ಭುತ ಗುಣವನ್ನು ಪ್ರತಿಪಾದಿಸುವುದು. ಇಂತು ಸರ್ವ ಧ್ವನಿಗಳೂ ಶ್ರೀಹರಿಯಲ್ಲಿಯೇ ಮುಖ್ಯ ತಾತ್ಪರ್ಯವನ್ನು ಹೊಂದುವುವು. ಈ ತತ್ತ್ವವು **ಕರ್ಮನಿರ್ಣಯ** ಗ್ರಂಥದಲ್ಲಿ ಉಕ್ತವಾಗಿದೆ.

**ಇದಕ್ಕೆ ಪ್ರಮಾಣ :–**

**"ಸರ್ವೇ ವೇದಾ ಯತ್ಪದಮಾಮನಂತಿ ।**
**ವೇದ್ಯೈಶ್ಚ ಸರ್ವೈರಹಮೇವ ವೇದ್ಯಃ" ॥**

**—ಗೀತಾ ವಾಕ್ಯ ಪ್ರಮಾಣ:–**

ಇಂತು ಸಕಲ ಶ್ರುತಿ. ಸ್ಮೃತಿ. ಪುರಾಣ, ಇತಿಹಾಸಾದಿ ಗ್ರಂಥಗಳಿಂದ ಶ್ರೀ ಪರಮಾತ್ಮನೇ ಪರಮಮುಖ್ಯವೃತ್ತಿಯಿಂದ ಪ್ರತಿಪಾದ್ಯನು.

(೮) ಹೀಗೆ ಸರ್ವ ವರ್ಣ, ಸ್ವರ, ಧ್ವನಿ ಪ್ರತಿಪಾದ್ಯನಾದ ಶ್ರೀಹರಿಯನ್ನ, ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯ, ವಿಸರ್ಗ, ಬಿಂದು, ಸಂಧಿ ಇತ್ಯಾದಿಗಳೊಳಗೆ ತತ್ತದ್ವಾಚ್ಯನಾಗಿ, ತನ್ನಾಮಕನಾಗಿ ತದ್ರೂಪ, ತದಾಕಾರನಾಗಿ ಶ್ರೀ ಹರಿಯು ಇರುವನೆಂದು ಪರಮ ಜ್ಞಾನಾನುಸಂಧಾನದಿಂದ ನಿತ್ಯ ಉಪಾಸನೆ ಮಾಡುತ್ತಿರುವ ಭಾಗವತರು, ಈ ಭೂಮಿಯಲ್ಲಿ ಮಾನವ ಜನ್ಮದಲ್ಲಿ ಬಂದಿದ್ದರೂ, ಅವರು ದೇವತೆಗಳೇ ಸರಿ. ಸಾಮಾನ್ಯ ಮಾನವರಲ್ಲ, ಅವರು ಆಡುವುದೆಲ್ಲವೂ ವೇದಾರ್ಥಗಳೇ ಸರಿ ಎಂದು ಬುಧರ ಚರ್ಯೆಯನ್ನು ತಿಳಿಸುತ್ತಾರೆ ಜ್ಞಾನಿವರೇಣ್ಯರಾದ ದಾಸರಾಯರು. ॥೧॥

## ಪದ್ಯ (೨)

**ಮೂಲ :—**

**ಈಶನಲಿ ವಿಜ್ಞಾನ ಭಗವ ।**
**ದ್ದಾಸರಲಿ ಸದ್ಭಕ್ತಿ ವಿಷಯನಿ ।**
**ರಾಶೆ ಮಿಥ್ಯಾವಾದಿಯಲಿ ಪ್ರದ್ವೇಷ ನಿತ್ಯದಲಿ ॥**
**ಈ ಸಮಸ್ತ ಪ್ರಾಣಿಗಳಲಿ ರ ।**
**ಮೇಶನಿಹನೆಂದರಿತು ಅವರಭಿ ।**
**ಲಾಷೆಗಳ ಪೂರಯಿಸುವುದೆ ಮಹಯಜ್ಞ ಹರಿಪೂಜೆ ॥ ॥೨॥**

**ಅವತರಣಿಕೆ :—**

ಭಗವದನುಗ್ರಹಾಕಾಂಕ್ಷಿಗಳಾದ ಸಾಧಕ ಚೇತನರಿಗೆ ಇರಲೇ ಬೇಕಾದ ತತ್ತ್ವನಿಷ್ಠೆಯನ್ನು ತಿಳಿಸುತ್ತಾರೆ. **ಈಶನಲಿ ವಿಜ್ಞಾನ**-ಎಂಬ ಪ್ರಸಕ್ತ ಸಂಧಿಗತ ೨ನೆಯ ಈ ಪದ್ಯದಿಂದ.

ಈ ಜಗತ್ತಿನಲ್ಲಿ ಸಮಸ್ತ ವಿಷಯದಲ್ಲಿಯೂ ಶ್ರೀಹರಿಯೇ ಮುಖ್ಯ ನಿಯಾಮಕನು. ಈ ಕಾರಣದಿಂದ ಶ್ರೀ ಪರಮಾತ್ಮನಿಗೆ ಈಶ ನೆಂದು ಹೆಸರು. ಅಂತಹ ಈಶನಲ್ಲಿ ವಿಶೇಷವಾದ ಜ್ಞಾನವಿರಬೇಕು. ಇಂತಹ ಈಶನ್ನಿಷ್ಠ ವಿಜ್ಞಾನವು ಸಚ್ಛಾಸ್ತ್ರಗಳ ದ್ವಾರಾ. ಗುರೂಪದೇಶ ದ್ವಾರಾ ದೊರೆಯುವುದು. ಗ್ರಂಥಸ್ಥ ಜ್ಞಾನವು ಅನುಭವಕ್ಕೆ ವಿಷಯವಾದಾಗ ಮಾತ್ರ ಅದು ವಿಜ್ಞಾನವೆನಿಸುವುದು. ಭಗವಂತನ ಚರಣಾರವಿಂದಗಳಲ್ಲಿ ನಿಷ್ಕಾಮ ಭಾವದಿಂದ ಭಕ್ತಿಯನ್ನು ಹೊಂದಿರುವ ಶ್ರೀಹರಿಯ ಅಂತರಂಗ ಭಕ್ತರೇ ಭಗವದ್ದಾಸರು. ಅವರಲ್ಲಿ ಪರಮ ಸಾತ್ವಿಕರೂಪವಾದ ಸಹಜಭಕ್ತಿ ಇರಬೇಕು. ಪ್ರಾಪಂಚಿಕ ವಿಷಯ ಭೋಗಾದಿಗಳಲ್ಲಿ ವೈರಾಗ್ಯ ಬುದ್ಧಿ ಅತ್ಯಗತ್ಯ, ಆಗಲೇ ಭಗವಂತನೆಡೆಗೆ ನಮ್ಮ ಮನಸ್ಸು ನಿರ್ಮಲ ಭಕ್ತಿಯಿಂದ ಹರಿಯುವುದು. ಈ ಜಗತ್ತು ಮಿಥ್ಯ, ಪಂಚಭೇದ ತಾರತಮ್ಯಗಳು ಭ್ರಮಾತ್ಮಕ, ಜೀವೇಶ್ವರಲ್ಲಿ ಐಕ್ಯ ಇತ್ಯಾದಿ ದುರ್ವಾದಗಳನ್ನು ಹರಡಿ, ಜನಸಾಮಾನ್ಯರ ಮನಸ್ಸಿನಲ್ಲಿ ದುರ್ಬೋಧನೆಯ ವಿಷಬೀಜವನ್ನು ಬಿತ್ತುವ ದುರ್ಮತಗಳಲ್ಲಿಯೂ ಮತ್ತು ದುರ್ಮತ ಪ್ರವರ್ತಕರಲ್ಲಿಯೂ ಮಹತ್ತರವಾದ ದ್ವೇಷ ಅತ್ಯಗತ್ಯ, ಸರ್ವ ಮತಗಳ ಸಾರವೂ ಒಂದೇ. ಎಲ್ಲಾ ಮತಪ್ರವರ್ತಕರೂ ಮಾನ್ಯರೇ ಎಂಬ ಈ ಹುಚ್ಚು ಕಲ್ಪನೆಗಳನ್ನು ತಲೆಯಲ್ಲಿ ಹಾಕಿಕೊಂಡು, ಎಲ್ಲಾ ಮತಪ್ರವರ್ತಕರ ಅಭಿಪ್ರಾಯವನ್ನು ಅನುಮೋದಿಸುವುದು ಖಂಡಿತ ಶ್ರೇಯಸ್ಕರವಲ್ಲ. ಸಕಲಚೇತನರಲ್ಲೂ ರಮಾರಮಣನಾದ ಶ್ರೀಹರಿಯು ಆವಾಸನಾಗಿದ್ದಾನೆ. ಸರ್ವಜೀವರ ಹುದ್ಗುಹಾವಾಸಿಯಾದ ಶ್ರೀಪರಮಾತ್ಮನು ಸರ್ವತ್ರ ವ್ಯಾಪ್ತನು. ಈ ಉತ್ತಮ ಜ್ಞಾನಾನುಸಂಧಾನವನ್ನು ಅರಿತು, ವ್ಯಾಪ್ತ್ಯೋಪಾಸನೆಮಾಡುತ್ತಾ. ಸರ್ವತ್ರ ಭಗವದ್ರೂಪಗಳನ್ನು ಚಿಂತಿಸುತ್ತಾ, ಅವರ

ವರ ಮನೋಭಿಲಾಷೆಗಳನ್ನು ಪೂರ್ತಿಮಾಡುವುದೇ ಯಜ್ಞರೂಪವಾದ ಶ್ರೀಹರಿಯ ಪೂಜೆ ಎಂಬ ಅನುಸಂಧಾನವಿರಬೇಕೆಂದು ಪದ್ಯದ ಮುಖ್ಯ ಸಾರಾಂಶ. ॥೨॥

**ಪ್ರತಿಪದಾರ್ಥ :-**

**ಈಶನಲಿ** = ಸರ್ವನಿಯಾಮಕನೂ, ಜಗತ್ಪ್ರಭುವೂ ಆದ ಶ್ರೀ ಪರಮಾತ್ಮನಲ್ಲಿ, **ವಿಜ್ಞಾನ** = ವಿಶೇಷವಾದ ಜ್ಞಾನವು, **ಭಗವದ್ದಾಸರಲಿ** = ಶ್ರೀಹರಿಯ ಅಂತರಂಗ ಭಕ್ತರಾದ ಪರಮಜ್ಞಾನಿಗಳಲ್ಲಿ (ಬುಧರಲ್ಲಿ) **ಸದ್ಭಕ್ತಿ** = ಅವರವರ ಯೋಗ್ಯತಾನುಸಾರ ತಾರತಮ್ಯೋಕ್ತವಾದ ರೀತಿಯಲ್ಲಿ ಅಂತಃ ಕರಣ ಪೂರ್ವಕವಾದ ನಿರ್ಮಲ ಭಕ್ತಿಯು, **ವಿಷಯು** = ಪ್ರಾಪಂಚಿಕ ಭೋಗಾದಿ ವಿಷಯುಗಳಲ್ಲಿ **ನಿರಾಶೆ** = ಆಶಾತ್ಯಾಗಮಾಡುವುದು, ಅಂದರೆ ಪ್ರಾಪಂಚಿಕ ವಿಷಯುಭೋಗಗಳಲ್ಲಿ ವೈರಾಗ್ಯಭಾವವು. **ಮಿಥ್ಯಾವಾದಿಯುಲಿ** = ಈ ಜಗತ್ತು ಸುಳ್ಳು, ಕೇವಲ ಭ್ರಮಾತ್ಮಕವಾದದ್ದು ಎಂದು ವಾದಿಸುವ ದುರ್ಮತ ಹಾಗೂ ದುರ್ವಾದಿಗಳಲ್ಲಿ **ಪ್ರದ್ವೇಷ** = ಅಂತರಂಗದಲ್ಲಿ ನಿಜವಾದ ದ್ವೇಷ. **ನಿತ್ಯದಲಿ** = ನಿರಂತರವಾಗಿ **ಈ ಸಮಸ್ತ ಪ್ರಾಣಿಗಳಲಿ** = ಸಕಲ ಜೀವರಾಶಿಗಳಲ್ಲಿ, **ರಮೇಶನು** = ರಮಾಪತಿಯಾದ ಶ್ರೀಮನ್ನಾರಾಯಣನು **ಇಹನೆಂದು** = ಆವಾಸನಾಗಿದ್ದಾನೆಂದು, **ಅರಿತು** = ಶಾಸ್ತ್ರದ್ವಾರಾ, ಗುರೂಪದೇಶದ್ವಾರಾ, ಜ್ಞಾನಾನುಸಂಧಾನದಿಂದ ತಿಳಿದವನಾಗಿ, **ಅವರವರ** = ಆಯಾಯಾ ಜೀವರುಗಳ **ಅಭಿಲಾಷೆಗಳ** = ಮನಸ್ಸಿನ ಇಚ್ಛೆಗಳನ್ನು. **ಪೂರೈಯಿಸುವುದೆ** = ಯೋಗ್ಯತಾನುಸಾರ ಅರಿತು ಸಲ್ಲಿಸುವುದೇ, **ಮಹ ಯಜ್ಞ** = ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡುವ ಮಹಾಯಾಗ **ಹರಿಪೂಜೆ** = ಶ್ರೀ ಪರಮಾತ್ಮನ ಪೂಜಾರೂಪವಾದ ಉಪಚಾರಗಳು ಎಂದು ಅರಿಯಬೇಕು ಎಂತ ತಾತ್ಪರ್ಯ. ॥೨॥

## ವ್ಯಾಖ್ಯಾನಗಳು

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-**

ಪೂಜಾ ಮಾಡತಕ್ಕ ಮುಖ್ಯವಾದ ಬ್ರಾಹ್ಮಣಾಧಿಷ್ಠಾನವನ್ನು ಹೇಳುತಾರೆ.

ವಿಷಯನಿರಾಶೆ-ಪ್ರಾಕೃತ ವಿಷಯಾದಿಗಳಲ್ಲಿ ಭೋಗೇಚ್ಛಾರಹಿತನಾಗಿ ತ್ಯಾಗದಿಂದ ರಹಿತವಾದ ಸತ್ಕರ್ಮಯುಕ್ತನಾಗಿ, ನಿಸ್ಸಂಗನಾಗಿ, ವಿರಕ್ತನಾಗಿ, ಮಿಥ್ಯಾವಾದಿಯಲಿ ಪ್ರದ್ವೇಷ-ಭಗವದ್ವೇಷಿಯಾದ ಮಾಯಾವಾದಿಯಲ್ಲಿ, ಅವನ ಶಾಸ್ತ್ರದಲ್ಲಿ ಛಂದಾಗಿ ಅಂತರಂಗದ್ವೇಷ ಪೂರ್ವಕನಾಗಿ, ಭಗವದ್ದಾಸರಲಿ- ಶ್ರೀ ಪರಮಾತ್ಮನ ದಾಸರಾದ ಬ್ರಹ್ಮಾದಿ ದೇವತೆಗಳಲ್ಲಿ, ಇತರರಾದ ಭಗವದ್ಭಕ್ತ- ಅವರವರ ಯೋಗ್ಯತಾನುಸಾರ ತಾರತಮ್ಯಾನುಸಾರ ಸಮೀಚೀನವಾದ ಅಂತಃಕರಣ ಪೂರ್ವಕಭಕ್ತಿ, ಇಂಥ ಭಕ್ತಿಪೂರ್ವಕನಾಗಿ, ಈಶನಲಿ ವಿಜ್ಞಾನ- ಶ್ರೀ ಪರಮಾತ್ಮನಲ್ಲಿ ವಿಶೇಷಜ್ಞಾನ ಇರಬೇಕು, ನಿತ್ಯದಲಿ- ಪ್ರತಿನಿತ್ಯದಲ್ಲಿಯೂ ಈ ಸಮಸ್ತ ಪ್ರಾಣಿಗಳಲಿ-ಏತಾದೃಶ ಸರ್ವಪ್ರಾಣಿಗಳಲ್ಲಿ, ರಮೇಶನಿಹನೆಂದು- ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣ ಇದ್ದಾನೆಂದು, ಅರಿತು-ಆದ್ದರಿಂದ ಆಯಾ ಅಭಿಪ್ರಾನಾಂತರ್ಗತ ರಮಾಪತಿಯಾದ ಶ್ರೀನಾರಾಯಣದೇವರು ಇದ್ದಾರೆಂದು ಅರಿತವನಾಗಿ ಅವರವರಭಿಲಾಷೆಗಳ- ತನ್ನ ಯೋಗ್ಯತಾನುಸಾರ ಅವರ ಅಭಿಪ್ರಾಯವನ್ನ, ಪೂರೈಸುವುದೆ-ಪೂರ್ಣ ಮಾಡಿದ ಕಾಲಕ್ಕೂ, ಆದರ ಉಪಚಾರಗಳಿಂದ ಅಲ್ಪಪೂಜಾ, ಅಲ್ಪ ಸೇವಾಗಳಿಂದಲೇ ಸಂತುಷ್ಟರಾಗುವಂತೆ, ಅವರವರು ಪೂರ್ಣ ಸಂತೋಷವನ್ನು ಐದಿಸಿ, ನಿರ್ವಾಹ ಮಾಡೋಣ ದಾವದದೇ ಅದೇ, ಮಹ ಯಜ್ಞ ಹರಿಪೂಜೆ- ಶ್ರೀ ಪರಮಾತ್ಮನ ಪ್ರೀತಿಗೋಸುಗ ಮಾಡತಕ್ಕ ಮಹಾಯಜ್ಞ ಎಂತಲೂ ಪೂಜೆ ಎಂತಲೂ ಅನಿಸುತ್ತದೆ.

**ವಿಶೇಷಾರ್ಥ :—**

ಶ್ರೀ ಪರಮಾತ್ಮನಲ್ಲಿ ವಿಶೇಷಜ್ಞಾನ ಇರಬೇಕು ಎಂತ ಹೇಳಿದ್ದಾರೆ. ಹ್ಯಾಗೆಂದರೆ ಬ್ರಹ್ಮಾದಿ ದೇವತೆಗಳು ತಾರತಮ್ಯಾನುಸಾರ ಅಧಿಕ ನ್ಯೂನಗಳಿಂದ ಪರಮಾತ್ಮನ ದಾಸತ್ವೇನ ಅನುಸಂಧಾನದಿಂದ ಭಕ್ತಿ, ಶ್ರೀ ಪರಮಾತ್ಮನಲ್ಲಿ ಮಹಾತ್ಮ್ಯಜ್ಞಾನ ಪೂರ್ವಕ ಸುದೃಢ ಸ್ನೇಹ ಮಾಡುತ್ತಾ, ಸರ್ವೋತ್ತಮತ್ವೇನ ತಿಳಿದು ಭಕ್ತಿಮಾಡೋಣವಾವದದೆ, ಇದೇ ದೇವರಲ್ಲಿ ವಿಜ್ಞಾನ ಭಕ್ತಿ. ಇಂಥ ವಿಶೇಷ ಜ್ಞಾನದಿಂದ ಭಕ್ತಿ ಇರಬೇಕು, ಇಂತಹ ಅಧಿಕಾರಿಗಳು ಪರಮಾತ್ಮನಿಗೆ ಉತ್ತಮಾಧಿಷ್ಠಾನರು, ತದನ್ಯರು ತಾರತಮ್ಯಾನುಸಾರ

ಮಧ್ಯಮ, ಅಧಮ, ಅಧಮಾಧಮ ಅಧಿಷ್ಠಾನಗಳೆಂದು ತಿಳಿಯಬೇಕು. ಭಗವದ್ವೇಷಿಗಳು ಸರ್ವವೂ ನೀಚಾಧಿಷ್ಠಾನಗಳೆಂದು ತಿಳಿಯಬೇಕು. ಅವರಲ್ಲಿ ವಿಜ್ಞಾನಾದಿ ಸರ್ವವೂ ಇದ್ದರೆ ಉತ್ತಮಾಧಿಷ್ಠಾನ ಕೆಲವು ಅವೆ. ಕೆಲವು ಇಲ್ಲ. ಇವು ಯಾವತ್ತೂ ಮಧಮಾಧಿಕಾರಿಗಳಲ್ಲೇ ಸೇರತದೆ ಎಂತ ಅರ್ಥ. ಮತ್ತು ಅಧಿಷ್ಠಾನ ಉತ್ತಮವಾದ ಕಾಲಕ್ಕೂ ಅಂತರ್ಗತ ಶ್ರೀ ಪರಮಾತ್ಮನ್ನ ತಿಳಿಯದೆ, ಅಧಿಷ್ಠಾನಕ್ಕೆಪೂಜಾ ಮಾಡಿದರೆ ತೋಷ, ನಿಷ್ಫಲ ಎಂದರೆ ಪಾರತ್ರಿಕಫಲವಿಲ್ಲ. ಐಹಿಕದಲ್ಲಿ ಅಲ್ಪ ಫಲ ದಿಂದ ಪರ್ಯವಸಾನವಾಗತದೆ. ಪೂರ್ವೋಕ್ತಪ್ರಕಾರ ಅನುಸಂಧಾನ ಕ್ರಮವನ್ನು ತಿಳಿದು ಪೂಜಾದಿಗಳ ಮಾಡೋರಿಗೆ ಅನ್ನೋದಕ ಕಾದಿಗಳ ಕೊಡೋಣದರಿಂದ, ದೇಹದಲ್ಲಿ ಪಂಚಾಗ್ನಿಗಳು, ನಾಡ್ಯಂತ ರ್ಗತ ಭಗವದ್ರೂಪಗಳ ಅನುಸಂಧಾನ ಮಾಡಿ, ಭೋಜನದ್ರವ್ಯ ಗಳ ಆಹುತಿಗಳನ್ನಾಗಿ ಯಜ್ಞತ್ವೇನ ಹೋಮಿಸುತ್ತಾರೆ. ಆದ್ದರಿಂದ ಮಹಾಯಜ್ಞಮಾಡಿದ ಫಲ ಬರೋದಾಗತದೆ. ಅನ್ನದಾತೃವು ಯಜ್ಞತ್ವೇನ ಅನುಸಂಧಾನಮಾಡಿ ಅನ್ನೋದಕಾದಿಗಳ ಕೊಡಬೇಕು. ಈ ಪ್ರಕಾರ ಅಂತರ್ಗತ ಹರಿಪೂಜಾ ಎಂತ ತಿಳಿದು, ಪೂಜಾದಿಗಳ ಮಾಡಬೇಕು, ಚಲಪ್ರತಿಮಾ ಭಗವದ್ಭಕ್ತರು. ಅಚಲಪ್ರತಿಮಾ ಲೋಹಾದಿ ಪ್ರತೀಕಗಳು. ಸರ್ವವಿಧದಿಂದಲ್ಲೂ ಚಲಪ್ರತಿಮಾಗಳಿ ಗಿಂತಲೂ ಶ್ರೇಷ್ಠವು. ॥೨॥

## (೨) "ಭಾವ ಪ್ರಕಾಶಿಕೆ" ವ್ಯಾಖ್ಯಾನ :-

ಈ ಪದ್ಯದಲ್ಲಿ ಹೇಳಿದ "ಯೋಗ್ಯ ಜೀವರ ಸ್ವರೂಪವನ್ನೇ ವಿಶದ ಮಾಡುತ್ತಾರೆ.

ಶ್ರೀ ಪರಮಾತ್ಮನೇ ಸರ್ವೋತ್ತಮನು. ಸಮಸ್ತಪ್ರಪಂಚದಿಂದ ಭಿನ್ನನು. ಸಕಲ ಜಗತ್ಪ್ರೇರಕನು-ಎಂಬಿವೇ ಮೊದಲಾದ ವಿಶೇಷಜ್ಞಾನ. ಭಗವಂತನು ನಮಗೆ ಸ್ವಾಮಿಯು. ನಾವು ಅವನ ದಾಸರು ಎಂದರಿತು ಉಪಾಸನೆ ಮಾಡುವ ಭಕ್ತರಲ್ಲಿ ಉತ್ತಮವಾದ ಭಕ್ತಿಮಾಡುವುದು. ಸಂಸಾರ

ಸುಖದಲ್ಲಿ ನಿರಾಶೆ. ಜಗತ್ತೆಲ್ಲವೂ ಸುಳ್ಳು. ಈಶ್ವರನನ್ನು ಬಿಟ್ಟು ಜೀವನು ಬೇರೆ ಇಲ್ಲ. ನಾನೇ ಈಶ್ವರನು ಎಂಬಿವೇ ಮೊದಲಾದ ಮತವನ್ನಾಶ್ರಯಿಸಿದ ವರಲ್ಲಿ ವಿಶೇಷವಾದ ದ್ವೇಷ. ಚರಾಚರಮಿಶ್ರವಾದ ಈ ಪ್ರಪಂಚದಲ್ಲಿ ಶ್ರೀಹರಿಯು ಸರ್ವತ್ರ ವ್ಯಾಪಿಸಿಕೊಂಡಿರುವನು ಎಂದು ತಿಳಿದು, ಪ್ರಾಣಿಗಳ ಮನೋಭೀಷ್ಟಗಳನ್ನು ಪೂರೈಸುವುದೇ ದೊಡ್ಡ ಯಾಗವೆಂತಲೂ, ಅದೇ ಪರಮಾತ್ಮನ ಮಹಾ ಪೂಜೆಯಂತಲೂ ತಿಳಿಯಬೇಕು. ಹೀಗಿರುವವರು ಯೋಗ್ಯಜೀವರೆಂದು ತಾತ್ಪರ್ಯ. ॥೨॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :

ಈಗ ಶ್ರೀಹರಿಯೇ ಸರ್ವೋತ್ತಮ. ಚೇತನಾಚೇತನ ಜಗತ್ತಿಗೆ ನಿಯಾಮಕ ಎಂಬ ವಿಶೇಷಜ್ಞಾನವೂ, ಭಗವಚ್ಚರಣಾರವಿಂದಮಕರಂದಾಸ್ವಾದ ತತ್ಪರರಾದವರಲ್ಲಿ ಭಕ್ತಿಯೂ, ಪಾಪಸಂಪಾದನಾಮಾಡಿಕೊಡತಕ್ಕ ವಿಷಯಾದಿಗಳಲ್ಲಿ ವಿರಕ್ತಿಯೂ, ಶ್ರೀಹರಿಯೇ ನಾನು ಎಂಬ ಸೋಹಮುಪಾಸನಾ ಮಾಡತಕ್ಕವರಲ್ಲಿ ವಿಶೇಷದ್ವೇಷವೂ-ಹೀಗೆ ಸರ್ವದಾ ದಾರ್ಢ್ಯದಿಂದ ನಡೆಯಿಸತಕ್ಕಂಥ ಪುರುಷರಲ್ಲಿ ಶ್ರೀಹರಿಯು ವ್ಯಾಪ್ತನಾಗಿದ್ದಾನೆಂದು ತಿಳಿದು. ಅವರಿಚ್ಛಾ ಪೂರ್ಣಮಾಡೋಣವೇ ಮಹಾಯಜ್ಞರೂಪಿ ಶ್ರೀಹರಿ ಪೂಜೆ ಎಂದು ತಿಳಿಸಿಕೊಡುತ್ತಾರೆ- "ಈಶೇತಿ" ॥೨॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ.

"ಈಶನಲಿ"-ಇತಿ॥ ಸಂಸದಿ ಮಾಯಿನಃ ತನ್ಮತ ದೃಢೀಕರಣೇ ಹರಿಃ ಪ್ರೀಣಾತಿ ॥

ಭಗವಂತನಲ್ಲಿ ವಿಶೇಷವಾದ ಜ್ಞಾನ. ಸಜ್ಜನರಾದ ಭಾಗವತೋತ್ತಮರಲ್ಲಿ ಭಕ್ತಿ. ವಿಷಯಸುಖಗಳಲ್ಲಿ ವೈರಾಗ್ಯಬುದ್ಧಿ. ಮಿಥ್ಯಾಜ್ಞಾನಿಗಳಲ್ಲಿ ಪ್ರಬಲ ದ್ವೇಷ, ನಿಂದಾ ಇತ್ಯಾದಿ ತೋರಿಸುವುದು. ಅಂತಹ ಮಿಥ್ಯಾವಾದಿಗಳನ್ನು ವಾದಕ್ಕೆ ಎಳೆದು ಸೋಲಿಸುವುದು. ಸಜ್ಜನರಿಗೆ ಸಂಶಯ ವಿಪರೀತಜ್ಞಾನಿಗಳ ಪರಿಹಾರ. ಅಸಜ್ಜನರಿಗೆ ಅವರ ಸ್ವಭಾವೋಚಿತವಾದ

ಭ್ರಾಂತಿಜ್ಞಾನೋತ್ಪತ್ತಿ. ಈ ಪ್ರಕ್ರಿಯೆಗಳು ತತ್ತ್ವನಿಷ್ಠೆಯುಳ್ಳವನಿಗೆ ಅತ್ಯಗತ್ಯ. ಇದರಿಂದ ಶ್ರೀಹರಿಯು ಸುಪ್ರಸನ್ನತೆ. ಇದೊಂದು ಸ್ವಾರಸ್ಯವು ಪ್ರಮೇಯಶಾಸ್ತ್ರಕ್ಕೆ ವಿರೋಧವಾಗದ ಅರ್ಥ. ॥೨॥

### (೩) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:-

ಸರ್ವಜನ ಸಾಧಾರಣೋಪಾಸನೆ ತಿಳಿಸುತ್ತಾರೆ. "ಈಶನೆಂದು" ಈಶನೆಂಬ ಲಕ್ಷ್ಮೀಪತಿಯಲ್ಲಿ, ವಿಜ್ಞಾನವೆಂಬ ತಾರತಮ್ಯಕ್ಕೆ ಕೊನೆಯಾಗಿರುವ ಸರ್ವೋತ್ತಮತ್ವ ನಿಶ್ಚಯ, ಆ ಸ್ವಾಮಿಭಕ್ತರಲ್ಲಿ ನಿಷ್ಕಪಟ ಸದ್ಭಕ್ತಿ ಎಂಬ ಸ್ನೇಹ. ವಿಷಯದಲ್ಲಿ ವಿರಕ್ತಿ, ಎಂದರೆ, ಪಶುಗಳಂತೆ ನಾಲಿಗೆ ಮೊದಲಾದ್ದನ್ನು ತೃಪ್ತಿಪಡಿಸುವುದುದರಲ್ಲಿಯೇ ಮಗ್ನನಾಗದೆ, ಅನಾಯಾಸ ದೊರಕ್ಕಿದ್ದಲ್ಲಿ ರುಚಿ ಮೊದಲಾದ್ದು ಎಣಿಸದೆ, ಶರೀರ ಧಾರಣೆಗೆ ತಕ್ಕಷ್ಟು ಮಿತಾಹಾರಾದಿಗಳಲ್ಲೇ ತೃಪ್ತನಾಗಿರುವುದು. ಮಿಥ್ಯಾವಾದಿಯಲಿ ಪ್ರದ್ವೇಷ ಎಂದರೆ, ಜೀವ ಪರಮಾತ್ಮಾದಿ ತತ್ವಸ್ವರೂಪವನ್ನು ವ್ಯತ್ಯಾಸವಾಗಿ ಆಗ್ರಹದಿಂದ ಸಾಧಿಸುವ ವಿಪರೀತಜ್ಞಾನಿ ಜನರಲ್ಲಿ ಪ್ರದ್ವೇಷ ಎಂದರೆ, ಮನಸ್ಸಿನಲ್ಲಿ ಅ ಪ್ರೀತಿರೂಪ ನಿತ್ಯವಿರೋಧವು. ಈ ಸಮಸ್ತ ಜೀವರಲ್ಲೂ ರಮಾಪತಿ ಇದ್ದಾನೆಂದು ತಿಳಿದು. ಅವರವರಭಿಲಾಷೆಗಳ ಪೂರೈಸುವುದೆ, ಎಂದರೆ ಅವರವರ ತಿಳಿವಳಿಕೆಗೆ ಸರಿಯಾಗಿ ತಾನೂ ಮಾತನಾಡಿ, ನಡತೆಯಲ್ಲೂ ಅತಿವಿರೋಧ ಮಾಡದಿರುವುದು–ಇವೆಲ್ಲಾ ದೇವರ ಪೂಜೆ ಎಂದು ಭಾವಿಸಬೇಕೆಂದರ್ಥ. ಇದೇ **ವೈಷ್ಣವ ದೀಕ್ಷಾ** ಎಂಬುದು.

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯ ಅನುಗ್ರಹ ಪ್ರಾಪ್ತಿಯನ್ನು ಬಯಸುವ ಸಾಧಕರಿಗೆ ಇರಬೇಕಾದ ತತ್ತ್ವನಿಷ್ಠೆ ಹಾಗೂ ವೈಷ್ಣವ ದೀಕ್ಷಾ ಪದ್ಧತಿಯನ್ನು ತಿಳಿಸುತ್ತಾರೆ. **ಈಶನಲಿ ವಿಜ್ಞಾನ** ಎಂಬ ಪ್ರಸಕ್ತ ೨ನೆಯ ಪದ್ಯದಿಂದ.

(1) ಶ್ರೀಹರಿಯು ಸರ್ವಕ್ಕೂ ನಿಯಾಮಕನು. ಜಗತ್ಸ್ವಾಮಿಯಾದ ಆ ಪರಮಾತ್ಮನ ಆಣತಿಯಂತೆ ಈ ಸಮಸ್ತ ಚರಾಚರ ಜಗತ್ತಿನ ವ್ಯಾಪಾರಗಳು ನಡೆಯುತ್ತಿರುವುವು. ಇದರಿಂದ ಶ್ರೀ ಪರಮಾತ್ಮನಿಗೆ- **ಈಶ**- ಎಂದು ಹೆಸರು. ಸರ್ವಜೀವರು ಆವನಿಂದ ನಿಯಮ್ಯರು. ಅಂತಹ ಈಶನಾದ ಶ್ರೀಹರಿಯಲ್ಲಿ ವಿಜ್ಞಾನವಿರಬೇಕೆಂದು ತಿಳಿಸುತ್ತಾರೆ. ವಿಶೇಷವಾದ ಜ್ಞಾನಕ್ಕೆ **ವಿಜ್ಞಾನ** ಎಂದು ಹೆಸರು. ಜ್ಞಾನದಲ್ಲಿ (1) ಸಾಮಾನ್ಯಜ್ಞಾನ ಮತ್ತು (2) ವಿಶೇಷವಾದ ಜ್ಞಾನ ಎಂದು ಎರಡು ಪ್ರಕಾರ. ಮಹಾತ್ಮ್ಯಜ್ಞಾನವೇ ವಿಜ್ಞಾನವು. ಶ್ರೀಹರಿಯೇ ಸರ್ವೋತ್ತಮನು. ಸಮಸ್ತ ಜಡ ಮತ್ತು ಜೀವವರ್ಗಗಳಿಂದ ಅತ್ಯಂತ ಭಿನ್ನನು. ಸದಾ ಆನಂದ ಉದ್ರಿಕ್ತ ವಸ್ತು. ರಮಾಬ್ರಹ್ಮಾದಿವಂದ್ಯನು. ಈ ರೀತಿಯಲ್ಲಿ ಶಾಸ್ತ್ರದ್ವಾರಾ ಅಂತು, ಗುರೂಪದೇಶ ದ್ವಾರಾ ತಿಳಿಯುವುದೇ **ಈಶನಲಿ ವಿಜ್ಞಾನ**ವೆಂದೆನಿಸುವುದು.

(2) ಜಗತ್ತು ಶ್ರೀಹರಿಗೆ ಪ್ರತೀಕರೂಪದಲ್ಲಿದೆ. ಶ್ರೀ ಪರಮಾತ್ಮನು ಸಮಸ್ತ ಜೀವರಾಶಿಗೆ ಬಿಂಬನು. ಶ್ರೀಹರಿಗೆ ಪ್ರತಿಬಿಂಬಭೂತರಾದ ಜೀವರು ಸರ್ವತಂತ್ರಸ್ವತಂತ್ರನಾದ ಶ್ರೀ ಪರಮಾತ್ಮನ ನಿಯಂತ್ರಣದಲ್ಲಿದ್ದು , ಪರಾಧೀನ ಕರ್ತೃತ್ವ ಉಳ್ಳವರು. ಇಂತಹ ಸಮೀಚಿನವಾದ ಭಗವತ್ಸಂಬಂಧವಾದ ವಿಜ್ಞಾನಿಗಳು ಭಗವದ್ದಾಸರು. ಅವರೇ ಶ್ರೀಹರಿಯ ಅಂತರಂಗ ಭಕ್ತರು. ಬ್ರಹ್ಮರುದ್ರಾದಿ ದೇವತಾವರ್ಗ ಶ್ರೀಹರಿಯ **ಭಗವದ್ದಾಸರು.** ಅಂತಹ ಭಗವದ್ದಾಸರಲ್ಲಿ ತಾರತಮ್ಯೋಚಿತವಾದ ಸ್ನೇಹರೂಪವಾದ ಭಕ್ತಿ ಇರಬೇಕು. ಇದು **ಭಗವದ್ದಾಸರಲಿ ಸದ್ಭಕ್ತಿ**—ಎಂದೆನಿಸುವುದು,

(3) ಈ ಪ್ರಾಪಂಚಿಕ ವಿಷಯಭೋಗಗಳಲ್ಲಿ ವಿರಕ್ತಿ ಇರಬೇಕು. ವಿಷಯ ಭೋಗವೆಂಬ ತೃಣಕೆ ಉರಿಯಾಗಿರಬೇಕೆಂದು **ಶ್ರೀ ಪುರಂದರದಾಸರ** ಸಂದೇಶ. ಕಾಮಾದಿ ಅರಿಷಡ್ವರ್ಗಗಳನ್ನು ಗೆಲ್ಲಬೇಕಾದರೆ, ವೈರಾಗ್ಯವು ಅತ್ಯಗತ್ಯ. ಭೋಗಾದಿ ವಿಷಯಗಳಲ್ಲಿ ಜಿಹಾಸೆಯೇ ನಿಜವಾದ ವಿರಕ್ತಿ ಎಂದೆನಿಸುವುದು. ಮಹಾತ್ಮ್ಯಜ್ಞಾನ ಪೂರ್ವಕವಾದ ಸುದೃಢವಾದ ಸ್ನೇಹವೇ

ಭಗವದ್ಭಕ್ತಿಯು. ನಿಜವಾದ ಭಗವದ್ಭಕ್ತಿಯ ಲಕ್ಷಣವು ಶ್ರೀಶನ ಪಾದಾರವಿಂದಗಳಲ್ಲಿ ನಮ್ಮ ಸಕಲ ಇಂದ್ರಿಯಗಳನ್ನು ನಿಷ್ಕಾಮ ಬುದ್ಧಿಯಿಂದ ಅರ್ಪಿಸುವುದೇ ಆಗಿದೆ. **ವಿಷಯದಲಿ ನಿರಾಶೆಯೇ** ಭಗವದರ್ಪಣ ಕ್ರಿಯೆಗೆ ಕಾರಣವು.

(4) ಈ ಜಗತ್ತು ಸುಳ್ಳು, ಜೀವನಿಂದ ಈಶನು ಭಿನ್ನನಲ್ಲ. ಜಗತ್ತು ವ್ಯಾವಹಾರಿಕವಾಗಿ ಸತ್ಯವಾಗಿದೆ. ಆದರೆ ಪಾರಮಾರ್ಥಿಕವಾಗಿ ಮಿಥ್ಯಾಭೂತವಾಗಿದೆ. ಸೋಹಂ ಭಾವವೇ ನಿರ್ಗುಣ ಬ್ರಹ್ಮ ಪ್ರಾಪ್ತಿಗೆ ಸಾಧನ. ಈ ರೀತಿ ಸೋಹಮುಪಾಸಕರಿಗೆ **ಮಿಥ್ಯಾವಾದಿ**ಗಳೆಂದು ಹೆಸರು. ಅಂತಹ ಮಾಯಾವಾದಿಗಳಲ್ಲಿ ಪ್ರಬಲವಾದ ದ್ವೇಷವಿರಬೇಕೆಂದು ತಿಳಿಸುತ್ತಾರೆ. ಇಲ್ಲದಿದ್ದರೆ, ಅವರ ಮೋಹಕವಾದ ಮಾತುಗಳಿಗೆ ಯುಕ್ತಿಗಳಿಗೆ ಮರುಳಾಗಿ ವಸ್ತುಸ್ಥಿತಿಯ ಜ್ಞಾನದಿಂದ ವಂಚಿತರಾಗುವರು. ಈ ಕಾರಣದಿಂದ ಮಾಯಾಮತವು ಸರ್ವಪ್ರಕಾರಗಳಲ್ಲಿಯೂ ಖಂಡನೀಯವಾದದ್ದು. ಈ ವಿಚಾರ ಸರಣಿಯ ದೃಷ್ಟಿಯಿಂದ **ಮಿಥ್ಯಾವಾದಿಯಲಿ ಪ್ರದ್ವೇಷ** ಎಂದಿರುವರು.

(5) ಈ ಜಗತ್ತಿನಲ್ಲಿ ಶ್ರೀ ಪರಮಾತ್ಮನಿಂದ ಸೃಷ್ಟರಾದ ಸಮಸ್ತ ಜೀವರಾಶಿಗಳಲ್ಲಿಯೂ ಲಕ್ಷ್ಮೀಪತಿಯಾದ ಶ್ರೀಹರಿಯು ಅಂತರ್ಯಾಮಿಯಾಗಿ ಇದ್ದು, ಬಿಂಬಕ್ರಿಯಾ ದ್ವಾರಾ ಸಕಲ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ಈ ರೀತಿ **ಸಮಸ್ತ ಪ್ರಾಣಿಗಳಲಿ ರಮೇಶನು ಇಹನೆಂದು ಅರಿತು,** ಸರ್ವತ್ರದಲ್ಲಿ ಶ್ರೀಹರಿಯ ಭಗವದ್ರೂಪಗಳನ್ನು ಕಾಣುತ್ತಾ ವ್ಯಾಪ್ತೋಪಾಸಕನಾಗಿ ಶ್ರೀಹರಿಯನ್ನು ಭಜಿಸುತ್ತಿರಬೇಕು. ಆಯಾಯಾ ಜೀವರ ಯೋಗ್ಯತಾನುಸಾರ, ಅನಾದಿಕರ್ಮಪರಂಪರೆಗೆ ಅನುಗುಣವಾಗಿ, ಶ್ರೀಹರಿಯೇ ಆಯಾಯಾ ಜೀವರಲ್ಲಿ ನಿಂತು, ಸಮಸ್ತ ಪ್ರೇರಕ, ಪ್ರವರ್ತಕನಾಗಿದ್ದಾನೆಂಬ ಅನುಸಂಧಾನದಿಂದ, ಅವರವರ ಮನೋಗತ ಅಭಿಲಾಷೆಗಳನ್ನು ಸಲ್ಲಿಸಬೇಕು. ಇದೇ ಮಹಾಯಜ್ಞರೂಪವಾದ ಶ್ರೀಹರಿಯ ಪೂಜೆ ಎಂಬ ಉತ್ತಮಾನುಸಂಧಾನವಿರಬೇಕೆಂದು ಪದ್ಯದ ಮುಖ್ಯ ತಾತ್ಪರ್ಯವು. ॥೨॥

## ಪದ್ಯ (೩)

**ಮೂಲ :—**

**ತ್ರಿದಶ ಏಕಾತ್ಮನೆನಿಸಿ ಭೂ ।**
**ಉದಕ ಶಿಖಿಯೊಳು ಹತ್ತು ಕರಣದಿ ।**
**ಅಧಿಪರೆನಿಸುವ ಪ್ರಾಣಮುಖ್ಯಾದಿತ್ಯರೊಳು ನೆಲೆಸಿ ॥**
**ವಿದಿತನಾಗಿದ್ದನವರತ ನಿರ ।**
**ವಧಿಕ ಮಹಿಮನು ಸಕಲ ವಿಷಯವ ।**
**ನಿಧನನಾಮಕ ಸಂಕರುಷಣಾಹ್ವಯನು ಸ್ವೀಕರಿಪ ॥ ॥೩॥**

**ಅವತರಣಿಕೆ :–**

ದಶೇಂದ್ರಿಯಗಳು, ಪೃಥ್ವೀ, ಜಲ ಮತ್ತು ತೇಜಸ್ಸು ಎಂಬ ಭೂತತ್ರಯ ತತ್ತ್ವಗಳು ಇವುಗಳಲ್ಲಿ ೧೩ ರೂಪಗಳಿಂದ (**ತ್ರಿದಶ**) ಇದ್ದು, "ಏಕಾತ್ಮ" ನೆಂದು ಹೆಸರುಳ್ಳ ಬಿಂಬರೂಪಿ ಶ್ರೀ ಹರಿಯು ಇಂದ್ರಿಯಾಭಿಮಾನಿ ಹಾಗೂ ಭೂತತತ್ತ್ವಾಭಿಮಾನಿ ದೇವತೆಗಳಲ್ಲಿಯೂ, ಮುಖ್ಯ ಪ್ರಾಣಾಂತರ್ಗತನಾಗಿದ್ದು, ನಿರವಧಿಕಮಹಿಮಾಸಂಪನ್ನನು ಸರ್ವತ್ರ ವ್ಯಾಪ್ತನಾಗಿದ್ದು, ಸಕಲ ಪದಾರ್ಥಗತ ಸ್ವಾಖ್ಯಿರಸವನ್ನು ಸ್ವೀಕರಿಸಿ, ಲಯಕರ್ತನಾದ ಸಂಕರ್ಷಣನಾಮಕನು ವಿರಾಜಮಾನನಾಗಿದ್ದಾನೆ ಎಂದು ತಿಳಿಸುತ್ತಾರೆ. **ತ್ರಿದಶ ಏಕಾತ್ಮನೆನಿಸಿ**—ಎಂಬ ಪ್ರಸಕ್ತ ಸಂಧಿಗತ ೩ ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ :–**

**ತ್ರಿದಶ**=ಹದಿಮೂರು (ತ್ರಿ=೩, ದಶ=೧೦, ತ್ರಿದಶ=೧೦+೩ =೧೩) ರೂಪಗಳಿಂದಲೂ **ಏಕಾತ್ಮನೆನಿಸಿ**=ಏಕಾತ್ಮ ಎಂಬ ಹೆಸರಿನಿಂದ

ಪ್ರಸಿದ್ಧನಾಗಿಯೂ (ಏಕಮೇವಾದ್ವಿತೀಯನಾದ ಶ್ರೀ ಪರಮಾತ್ಮನೇ ಸರ್ವ ಚೇತನ ಬಿಂಬರೂಪಿಯು) **ಭೂ** = ಪೃಥಿವೀ ತತ್ತ್ವ, **ಉದಕ** = ಅಪ್ ತತ್ತ್ವ, **ಶಿಖಿ** = ತೇಜಸ್ಸಿನಲ್ಲಿ (ಅಗ್ನಿ) **ಹತ್ತು ಕರಣದಿ** = ಪಂಚ ಜ್ಞಾನೇಂದ್ರಿಯಗಳು ಮತ್ತು ಪಂಚಕರ್ಮೇಂದ್ರಿಯಗಳೆಂಬ ಹತ್ತು ಇಂದ್ರಿಯ ಗಳಲ್ಲಿ **ಅಧಿಪರೆನಿಪ** = ಅಭಿಮಾನಿಗಳು ಎಂದು ಕರೆಯಿಸುವ **ಪ್ರಾಣ ಮುಖ್ಯ** = ವಾಯುದೇವರೇ ಆದಿಯಾಗಿ **ಅದಿತ್ಯರೊಳು** = ತತ್ವಾಭಿಮಾನಿ ದೇವತೆಗಳಲ್ಲಿ, **ನೆಲೆಸಿ** = ತದಾಕಾರ, ತನ್ನಾಮಗಳಿಂದ ಅಂತರ್ಯಾಮಿ ತ್ವೇನ ವಿದ್ಯಮಾನನಾಗಿದ್ದು, **ವಿದಿತನಾಗಿದ್ದು** = ವಿಶೇಷವಾಗಿ ವ್ಯಾಪ್ತ ನಾಗಿದ್ದು, **ಅನವರತ** = ನಿರಂತರದಲ್ಲಿ **ನಿರವಧಿಕ ಮಹಿಮನು** = ಅಸ ದೃಶವಾದ ಅಪರಿಮಿತ ಮಹಿಮಾಸಂಪನ್ನನಾದ ಶ್ರೀ ಪರಮಾತ್ಮನು **ಸಕಲ ವಿಷಯವ** = ಸಮಸ್ತ ವಿಷಯಗತ ಭೋಗಾದಿಗಳನ್ನು **ನಿಧನ ನಾಮಕ** = "ನಿಧನ" ಎಂಬ ಹೆಸರುಳ್ಳ ಲಯಕರ್ತನಾದ **ಸಂಕರ್ಷಣಾಹ್ವಯನು** = ಸಂಕರ್ಷಣನಾಮಕ ಶ್ರೀ ಪರಮಾತ್ಮನು, **ಸ್ವೀಕರಿಪ** = ಸಮಸ್ತ ವಿಷಯ ಗತ ಸ್ವಾಖ್ಯರಸ ಸ್ವೀಕಾರ ದ್ವಾರಾ, ಪ್ರತಿಬಿಂಬರಾದ ಚೇತನರ ಅನು ಭವಕ್ಕೆ ತಂದು ಕೊಡುವನು. ॥೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪೂರ್ವೋಕ್ತ ಪ್ರಕಾರ ಮಾಡಿದ ಪೂಜಾವನ್ನೇ ಶ್ರೀ ಪರಮಾತ್ಮ ಸ್ವೀಕರಿಸುತ್ತಾನೆ ಎಂತ ಹೇಳತಾರೆ.

ತ್ರಿದಶ–ಹದಿಮೂರು. ಏಕ–ಒಂದು, ಭೂ ಉದಕ ಶಿಖಿಯೊಳು– ಪೃಥಿವ್ಯಾದಿ ಪಂಚಭೂತಗಳು. ತನ್ಮಾತ್ರಯಗಳು ಐದು. ಅಂತು, ಹತ್ತು. ಒಟ್ಟು ೨೪. ಆತ್ಮಕನೆನಿಸಿ–ಈ ೨೪ ತತ್ತ್ವಗಳಲ್ಲಿ, ತದಾಕಾರ ತದ್ರೂಪ

ತನ್ನಾಮದಿಂದ ಪ್ರಚುರನೆನಿಸಿ, ಕರ್ತೃ, ಭೋಕ್ತೃ ಶರೀರಗಳಲ್ಲಿ ಇದ್ದಾನೆ. ಮತ್ತು ಹತ್ತು ಕರಣ–ದಶೇಂದ್ರಿಯಗಳಲ್ಲಿ ತದನ್ಯ ತತ್ತ್ವಗಳಲ್ಲಿ, ಅಧಿಪರೆನಿಸುವ–ಅಭಿಮಾನಿಗಳು ಎಂಥ ಕರಿಸತಕ್ಕ, ಪ್ರಾಣಮುಖ್ಯ–ದೇವತಾಶ್ರೇಷ್ಠರಾದ ಮಹತ್ತತ್ತ್ವಾಭಿಮಾನಿಗಳಾದ ಮುಖ್ಯಪ್ರಾಣದೇವರು, ಆದಿತ್ಯರೊಳು–ನೇತ್ರಾಭಿಮಾನಿ ಸೂರ್ಯ, ಇವರೇ ಮೊದಲಾದ ತತ್ತ್ವಾಭಿಮಾನಿಗಳಲ್ಲಿ, ನೆಲೆಸಿ–ತದಾಕಾರ ತನ್ನಾಮದಿಂದ ಅವರ ಅಂತರ್ಗತನಾಗಿ ನಿಂತು, ಮತ್ತು ವಿದಿತನಾಗಿದ್ದು–ಭೋಗಯೋಗ ದ್ರವ್ಯಗಳಲ್ಲಿ, ತದಭಿಮಾನಿಗಳಲ್ಲಿ ಪೂರ್ವೋಕ್ತ ಪ್ರಕಾರ ವ್ಯಾಪ್ತನಾಗಿದ್ದು, ಅನವರತ–ನಿರಂತರದಲ್ಲಿಯೂ, ನಿರವಧಿಕ ಮಹಿಮನು–ಸದೃಶ ಶೂನ್ಯವಾದ ಮಹಿಮೋಪೇತನಾದ, ನಿಧನ ನಾಕಮ–ಜಗತ್ತು ಸಂಹಾರ ಕರ್ತನಾದ, ಸಂಕರ್ಷಣಾಹ್ವಯನು–ಸಂಕರ್ಷಣ ನಾಮಕ ಶ್ರೀ ಪರಮಾತ್ಮನು, ಸಕಲ ವಿಷಯವ–ಭೋಗಯೋಗ್ಯಗಳಾದ ಪ್ರಾಕೃತ ಸರ್ವವಿಷಯಗಳ ತನ್ನ ಸ್ವಾಖ್ಯ ವಿಷಯಗಳ, ದೇಹಗತ ಚತುರ್ವಿಂಶತಿ ತತ್ತ್ವಗತ ತದಭಿಮಾನಿ ದೇವತಾಂತರ್ಗತ ತನ್ನ ರೂಪಗಳಿಂದ, ಸ್ವೀಕರಿಪ–ತನ್ನ ಸ್ವಾಖ್ಯಗಳ ತಾನು ಸ್ವೀಕರಿಸೋವನಾಗತಾನೆ.

**ತಾ||** ಪೂರ್ವೋಕ್ತ ಪ್ರಕಾರ, ಭಗವದ್ಭಕ್ತರ ಭೋಜನ ಮಾಡಿಸಿದ ಕಾಲದಲ್ಲಿ, ಅನುಸಂಧಾನವಿರಬೇಕು. ಈ ಪ್ರಕಾರ ಜ್ಞಾನಿಗಳಾದ ಭಗವದ್ಭಕ್ತರು ಭೋಜನ ಮಾಡತಾರೆ. ಆದ್ದರಿಂದ ಮಹಾಯಜ್ಞಾಖ್ಯ ಪೂಜಾನೇ ಆಯಿತು. ಕರ್ತೃ ಭೋಕ್ತೃಗಳಿಗೆ ಇಂಥಾ ಅನುಸಂಧಾನವಿರಬೇಕೆಂದು ತಾತ್ಪರ್ಯ.

### (೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–

"ತ್ರಿದಶೇತಿ" ॥ ತ್ರಿದಶನಾಮಕ, ಹರಿಯೆಂಬರ್ಥ. ಏಕಾತ್ಮಾಮುಖ್ಯನಾದವನು ನಿಧನ–ಸಂಹಾರನಾಮಕನು. ॥

### (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ತ್ರಿದಶ"-ಇತಿ ॥ ತ್ರಯೋದಶ ಇತ್ಯರ್ಥಃ । "ಏಕಾತ್ಮ"-ಇತಿ॥ ಉಕ್ತಾರ್ಥಮ್ ॥ ನಿಧನ ಸಾಮ್ಯೇಡ್ಯತ್ವಾತ್ ತನ್ನಾಮಾ ॥

**ಕನ್ನಡಾರ್ಥ :—**

"ತ್ರಿದಶ"– ಎಂದರೆ ೧೩ ಎಂದರ್ಥ. ಇವು ೧೦ ಕರಣಗಳು ಹಾಗೂ ಭೂ–ಉದಕ–ಶಿಖಿ (ಅಗ್ನಿ) ಹೀಗೆ ೩. ಒಟ್ಟು ೧೩ ರಲ್ಲಿರುವ ನಿಯಾಮಕ ರೂಪಗಳೆಂದು ಭಾವ. ಮನಸ್ಸಿನಲ್ಲಿ "ಏಕಾತ್ಮ" ನೆಂಬ ರೂಪದಿಂದ ನಿಯಾಮಕನಾಗಿದ್ದಾನೆ. "ಏಕಾತ್ಮ"–ಎಂಬ ಸಾಮಾರ್ಥವನ್ನು ಸಂಧಿ ೬ರ ೯ನೆಯ ಪದ್ಯದಲ್ಲಿ **ತತ್ವವಿದೇಕಾತ್ಮ**– ಎಂದು ವಿವರಿಸಲಾಗಿದೆ. "ನಿಧನ"–ನೆಂಬ ಸಾಮದಿಂದ ಹೇಳಿಸಿಕೊಳ್ಳುವುದರಿಂದ– "ನಿಧನ" ಎಂಬ ನಾಮಧೇಯವು. ॥೩॥

**(ಙ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ :–**

ಮೇಲಿನ ಪದದಲ್ಲಿ ಹೇಳಿದ ಅಭಿಪ್ರಾಯವನ್ನೇ ಸಂಗ್ರಹಿಸಿ, ಪ್ರಕಾರಾಂತರೇಣ ಶ್ರೀ ಸಂಕರ್ಷಣ ಸ್ಮರಣೋಪಾಸನೆಯನ್ನು ತಿಳಿಸುತ್ತಾರೆ. "ತ್ರಿದಶಃ—ಎಂದು. ಭೂ. ಉದಕ, ಶಿಖಿ ಎಂದರೆ ಅಗ್ನಿ. ಅಂದರೆ, ಅನ್ನ–ನೀರು—ತೇಜಸ್ಸುಗಳಲ್ಲಿ ತತ್ತನಾಮಗಳಿಂದ ವಾತ–ಪಿತ್ತ–ಶ್ಲೇಷ್ಮ ಎಂತ ಹೆಸರುಗಳುಳ್ಳ ಮೂರು ಧಾತುಗಳಲ್ಲಿಯೂ, ತನ್ನಾಮಕ ಕ್ರಿಯಾರೂಪದಿಂದ ಕಣ್ಣು ಮೊದಲಾದ ಹತ್ತು ಕರಣಗಳೆಂಬ ಇಂದ್ರಿಯಗಳಲ್ಲಿಯೂ, ತನ್ನಾಮಕ ದಶರೂಪಗಳಿಂದ, ಮನಸ್ಸಿನಲ್ಲಿ "ಏಕಾತ್ಮ—ನೆಂಬ ರೂಪದಿಂದ ತತ್ತದಭಿಮಾನಿ ಪ್ರಾಣ ಮೊದಲಾದ ದೇವತೆಗಳಲ್ಲಿ ಶ್ರೀಹರಿ ಇದ್ದು, ಜ್ಞಾನಿಗಳಿಗೆ ವಿದಿತನಾಗಿ. ಎಂದರೆ, ತಿಳಿಸಿಕೊಳ್ಳುತ್ತಾ, ಸದಾ ಅಪರಿಮಿತ ಮಹಿಮನು ಸಕಲ ಸ್ಪರ್ಶಾದಿ ಭೋಗವನ್ನು, ದೇಹ ಮುಂತಾದಕ್ಕೆ ಹೊಂದಿಸುವುದರಿಂದ. **ನಿಧನ ಸಾಮಕ**–ಎಂದರೆ ದ್ವೇಷಿಗಳಾದ ದೈತ್ಯವನ್ನೂ ಮತ್ತು ಪ್ರಳಯಕಾಲದಲ್ಲಿ ಸರ್ವಜಗತ್ತನ್ನೂ ಸಂಹಾರ ಮಾಡುವ ಶ್ರೀಸಂಕರ್ಷಣ ರೂಪಿ ಪರಮಾತ್ಮನು ಸ್ವೀಕರಿಪ–ಎಂದರೆ, ಶಬ್ದಾದಿ ಸಕಲವಿಷಯಭೋಗ, ಸ್ವಾಖ್ಯರಸಗಳನ್ನು ತಾನು ಸ್ವೀಕರಿಸಿ, ಜೀವಯೋಗ್ಯ ಭೋಗ್ಯ ರಸಗಳನ್ನು ಶರೀರೇಂದ್ರಿಯಗಳಿಗೆ ಉಪಚಯಮಾಡುವನೆಂದು ಸ್ಮರಿಸಬೇಕೆಂದರ್ಥ ॥೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪರಮಾತ್ಮನ ತ್ರಿದಶ ರೂಪಗಳು, ಏಕಾತ್ಮರೂಪ ಹಾಗೂ ಜಗದ್ವ್ಯಾಕ್ ಎಂಬ ನಿಧನನಾಮಕ ಶ್ರೀಸಂಕರ್ಷಣನ ರೂಪ—ಇವುಗಳ ಉಪಾಸನಾ ಕ್ರಮವನ್ನು ತಿಳಿಸುತ್ತಾರೆ. **ತ್ರಿದಶ**—ಎಂಬ ಪ್ರಸಕ್ತ ೩ನೆಯ ಪದ್ಯದಿಂದ.

೧. "ತ್ರಿದಶ—ಎಂದರೆ ಹದಿಮೂರು ಎಂದರ್ಥ. (ತ್ರಿ=ಮೂರು, ದಶ=ಹತ್ತು. ಅಲ್ಲಿಗೆ ೧೦+೩=೧೩ ಎಂದಾಗುವುದು). ಈ ಸಂಖ್ಯಾತ್ಮಕ ಭಗವದ್ರೂಪಗಳ ವಿವರ ಇಂತಿದೆ—

| | | | |
|---|---|---|---|
| (1) | ಜ್ಞಾನೇಂದ್ರಿಯಗಳು | = | ೫ |
| (2) | ಕರ್ಮೇಂದ್ರಿಯಗಳು | = | ೫ |
| (3) | ಪೃಥಿವೀ ತತ್ವ | = | ೧ |
| (4) | ಅಪ್‌ತತ್ತ್ವ | = | ೧ |
| (5) | ತೇಜಸ್ಸತ್ತ್ವ | = | ೧ |
| | ಒಟ್ಟು | = | ೧೩ ಅಧಿಷ್ಠಾನಗತ ರೂಪಗಳು. |

೨. ದಶೇಂದ್ರಿಯಗಳನ್ನು ನಿಯಂತ್ರಿಸುವ ಇಂದ್ರಿಯವು **ಮನಸ್ಸು**. ಈ ಕಾರಣದಿಂದ ಮನಸ್ಸಿಗೆ "ಏಕಾದಶೇಂದ್ರಿಯ"—ಎಂದು ಹೆಸರು. ಇಂತಹ ಮನಸ್ಸಿನಲ್ಲಿದ್ದು, ಮನಃಪ್ರವರ್ತಕರೂಪವು **'ಏಕಾತ್ಮ'**—ನೆಂದು. "ಏಕಾತ್ಮ" ಎಂಬ ಹೆಸರಿನಿಂದ ಮನಸ್ಸಿನಲ್ಲಿ ವಿದ್ಯಮಾನನಾಗಿದ್ದಾನೆ.

೩. ಇಂತು ಪೂರ್ವೋಕ್ತ ೧೩ ಅಧಿಷ್ಠಾನಗತನಾಗಿದ್ದು **ತ್ರಿದಶ** ನಾಮಕನಾಗಿ, ಮನಸ್ಸಿನಲ್ಲಿ ವಿದ್ಯಮಾನನಾಗಿದ್ದು, **ಏಕಾತ್ಮನಾಮಕನಾಗಿ** ಬಿಂಬ

ರೂಪಿ ಶ್ರೀಪರಮಾತ್ಮನು ದಶಕರಣಾಭಿಮಾನಿಗಳಾದ ತತ್ತ್ವದೇವತೆಗಳಲ್ಲಿಯೂ, ಭೂ. ಉದಕ ಮತ್ತು ಶಿಖಿ (ಅಗ್ನಿ) ಎಂಬ ಭೂತ ತತ್ತ್ವತ್ರಯಾಭಿಮಾನಿಗಳಾದ ದೇವತೆಗಳಲ್ಲಿಯೂ ಅಂತರ್ಯಾಮಿಯಾಗಿದ್ದು, ಆ ತತ್ತ್ವಪತಿ ದೇವತೆಗಳಿಗೆ ನಿಯಂತ್ರಕರಾದ ಶ್ರೀ ಮುಖ್ಯಪ್ರಾಣರಲ್ಲಿ ಪರಮಮುಖ್ಯವೃತ್ತಿಯಿಂದ ನಿಯಾಮಕನಾಗಿದ್ದಾನೆ.

೪. ತತ್ತ್ವಪತಿದೇವತೆಗಳು ಹಾಗೂ ಮುಖ್ಯಪ್ರಾಣಾಂತರ್ಗತನಾಗಿ ತ್ರಿದಶ ಮತ್ತು ಏಕಾತ್ಮನಾಮಕನಾದ ಶ್ರೀಪರಮಾತ್ಮನು ನಿರಂತರದಲ್ಲಿಯೂ (ಅನವರತ) ಅವರಿಂದ ವೇದ್ಯನಾಗಿದ್ದಾನೆ. (ವಿದಿತನಾಗಿದ್ದು).

೫. ತತ್ವಾಭಿಮಾನಿಗಳಿಂದ ತಾರತಮ್ಯಾನುಸಾರ ವಿದಿತನಾಗಿರುವ, ಸರ್ವವ್ಯಾಪ್ತನಾದ ಶ್ರೀಹರಿಯು ಅಸದೃಶ ಮಹಿಮಾಸಂಪನ್ನನು. ಸಮಾಭ್ಯಧಿಕಶೂನ್ಯನಾದ್ದರಿಂದ, ನಿರವಧಿಕ ಮಹಿಮೆಯುಳ್ಳವನು. ಆತನ ಮಹಿಮಾದಿ ಗುಣ ಸಮೂಹಗಳನ್ನು ಯಾರೂ ಸಾಕಲ್ಯೇನ ಅರಿಯಲಾರರು.

೬. ಗಂಧ, ರಸ, ರೂಪ, ಸ್ಪರ್ಶ ಮತ್ತು ಶಬ್ದಗಳು ಭೂತ ಪಂಚಕಗಳ ತನ್ಮಾತ್ರಾಗುಣಗಳು. ಇವುಗಳಿಗೆ **ವಿಷಯ**ಗಳೆನ್ನುತ್ತೇವೆ. ಈ ವಿಷಯುಗಳು ಜ್ಞಾನೇಂದ್ರಿಯಗಳಾದ ನಾಸಿಕ, ಜಿಂಹ್ವಾ, ನೇತ್ರ, ತ್ವಗಿಂದ್ರಿಯ ಮತ್ತು ಕರ್ಣ ಈ ಪಂಚಕರಣಗಳಿಗೆ ಸನ್ನಿಕರ್ಷವಾದಾಗ, ಆ ವಿಷಯ ಸಂಬಂಧಜ್ಞಾನವು ಮನೋತತ್ತ್ವದ ಮೂಲಕ ದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಚೇತನನ ಅನುಭವಕ್ಕೆ ಬರುವುದು. ಹೀಗೆ ನಡೆಯುವ ಕ್ರಿಯಾಸರಣಿಯು ಶ್ರೀಪರಮಾತ್ಮನ ಬಿಂಬಕ್ರಿಯೆಯಲ್ಲದೆ ಅನ್ಯಥಾ ಇಲ್ಲ. ಸ್ಪರ್ಶಾದಿ ವಿಷಯುಗಳಲ್ಲಿ ಅಂತರ್ಗತನಾಗಿದ್ದು, ಕರಣಗಳಲ್ಲಿ ವಿದ್ಯಮಾನನಾಗಿದ್ದು, ಮನೋವೃತ್ತಿಗಳಲ್ಲಿ ಅಂತಸ್ಥಿತನಾಗಿರುವ ಶ್ರೀಪರಮಾತ್ಮನು

ಪೂರ್ವೋಕ್ತ ಅಧಿಷ್ಠಾನಗತ ಭಗವದ್ರೂಪಗಳಲ್ಲಿ ರಮಿಸುವನು, ಇದೇ ಸ್ವರಮಣನಾದ ಶ್ರೀಹರಿಯ ಬಿಂಬಕ್ರಿಯಾರೂಪವಾದ ವ್ಯಾಪಾರ ವಿಶೇಷ. ಇದನ್ನೇ **ಸ್ವಾಖ್ಯರಸ** ಎನ್ನುವರು. ಇಂತು, ವಿಷಯಗತ, ಇಂದ್ರಿಯ್ಯ ಗತ, ಮನೋವೃತ್ತಿಗತ ಸ್ವಾಖ್ಯವಾದ ಶುಭರಸಗಳನ್ನು ಶ್ರೀಪರಮಾತ್ಮನು ಸ್ವೀಕರಿಸುತ್ತಾನೆ. ಇದರಿಂದ ಬಿಂಬಕ್ರಿಯಾ ವಿಶೇಷ. ತನ್ಮೂಲಕ ಜೀವ ರಿಗೆ ವಿಷಯಾದಿ ಭೋಗಗಳ ಅನುಭವ.

೭. ತನ್ನಿಂದ ಸೃಷ್ಟವಾದ ಜಗತ್ತಿನಲ್ಲಿ ಓತಪ್ರೋತನಾಗಿ ಸರ್ವತ್ರ ವ್ಯಾಪಿಸಿಕೊಂಡಿದ್ದು, ಜಗತ್ತನ್ನು ಪಾಲನೆ ಮಾಡುತ್ತಾ, ಸರ್ವಪ್ರಾಣಿ ಗಳ ರಕ್ಷಕನಾದ ಶ್ರೀಹರಿಯು ಕೊನೆಯಲ್ಲಿ ಸಮಸ್ತಜಗತ್ತನ್ನೂ ಭಕ್ಷಿಸಿ ಲಯಗೊಳಿಸುವನು. ಇದರಿಂದ ಲಯಕರ್ತನಾದ ಶ್ರೀಪರಮಾತ್ಮನಿಗೆ **ನಿಧನ** ಎಂದು ಹೆಸರು. ನಿಧನ—ಎಂದರೆ, ನಾಶ, ಸಂಹಾರ, ಲಯ ಎಂದರ್ಥ. ಗುಣವೈಷಮ್ಯವೇ **ಸೃಷ್ಟಿ**ಯು. ಗುಣಸಾಮ್ಯವೇ **ಲಯ ಕಾರ್ಯ**ವು. ನಿಧನ–ಎಂಬ ಶಬ್ದಾರ್ಥವು ಸಾಮವಾಚಕವು. **ಸಂಕರ್ಷಣ** ರೂಪಿ ಶ್ರೀಪರಮಾತ್ಮನೇ **ನಿಧನನಾಮಕನು.** ಸಮಸ್ತವನ್ನೂ ತನ್ನ ಕಡೆಗೆ ಆಕರ್ಷಿಸುವುದರಿಂದ, ಶ್ರೀ ಪರಮಾತ್ಮನಿಗೆ **ಸಂಕರ್ಷಣ**ನೆಂದು ಹೆಸರು. **(ಸಮ್ಯಕ್ ಆಕರ್ಷಯತೀತಿ— ಸಂಕರ್ಷಣಃ)** ॥೩॥

## ಪದ್ಯ (೪)

**ಮೂಲ :–**

**ದಹಿಕ ದೈಶಿಕ ಕಾಲಿಕತ್ರಯ ।**
**ಗಹನ ಕರ್ಮಗಳುಂಟು ಇದರೊಳು ।**
**ವಿಹಿತ ಕರ್ಮಗಳನರಿತು ನಿಷ್ಕಾಮಕನು ನೀನಾಗಿ ॥**
**ಬೃಹತಿನಾಮಕ ಭಾರತೀಶನ ।**
**ಮಹಿತರೂಪವ ನೆನೆದು ಮನದಲಿ ।**
**ಅಹರಹರ್ಭಗವಂತಗರ್ಪಿಸು ಪರಮ ಭಕುತಿಯಿಲಿ ॥** ॥೪॥

**ಅವತರಣಿಕೆ :–**

ದೇಹ, ದೇಶ ಮತ್ತು ಕಾಲಗಳಿಗನುಗುಣವಾದ ವಿಹಿತ ಕರ್ಮಗಳನ್ನು ಶ್ರೀಹರಿಯ ಪ್ರೀತ್ಯರ್ಥವಾಗಿ ಮಾಡುತ್ತಾ, ನಿಷ್ಕಾಮನಾಭಾವನೆಯಿಂದ ಬೃಹತೀನಾಮಕರಾದ ಭಾರತೀ ರಮಣಾಂತರ್ಗತ ಶ್ರೀ ರಮಾದೇವಿಯರಿಗೆ ಪ್ರೀತಿ ವಿಷಯನಾದ (ಮಹಿತ ರೂಪವ) ಬಿಂಬರೂಪಿ ಶ್ರೀ ಪರಮಾತ್ಮನನ್ನು ಮನಸಾ ನಿರಂತರದಿ ಚಿಂತಿಸುತ್ತಾ, ನಿರ್ಮಲಾಂತಃಕರಣದಿಂದ ಪ್ರತಿದಿನ ಮಾಡುವ ಸರ್ವ ಕರ್ಮಗಳನ್ನೂ, ಆ ಕರ್ಮಪತಿಯಾದ ಭಗವಂತನಿಗೆ ಅರ್ಪಿಸಬೇಕೆಂದು ತಿಳಿಸುತ್ತಾರೆ. **ದಹಿಂಕ ದೈಶಿಕ**–ಎಂಬ ಪ್ರಸಕ್ತ ಸಂಧಿಗತ ೪ ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ :–**

**ದಹಿಂಕ** = ದೇಹ ಸಂಬಂಧವಾದ ಕರ್ಮಗಳು, **ದೈಶಿಕ** = ಆಯಾಯಾ ದೇಶಸಂಬಂಧವಾದ ಕರ್ಮಗಳು, **ಕಾಲಿಕ** = ಕಾಲಕ್ಕನುಗುಣವಾದ ಕರ್ಮಗಳು, **ತ್ರಯ** = ಈ ರೀತಿಯಲ್ಲಿ ದೇಹ, ದೇಶ ಮತ್ತು ಕಾಲ ಸಂಬಂಧವಾದ ಮೂರು ಪ್ರಕಾರವಾದ ಕರ್ಮಗಳ **ಗಹನ ಕರ್ಮಗಳು** = ಗೂಢವಾದ ಹಾಗೂ ಕಷ್ಟಕರವಾದ ಕರ್ಮ ವಿಶೇಷಗಳು **ಉಂಟು** = ಇವೆ. (ಅಂತ್ಯ ಕಾಣದ ಕರ್ಮಗಳು) **ಇದರೊಳು** = ಇಂತಹ ಗಹನ ಕರ್ಮತ್ರಯಗಳ ಪರಂಪರೆಯಲ್ಲಿ **ವಿಹಿತ ಕರ್ಮಗಳ** = ವರ್ಣಾಶ್ರಮಧರ್ಮೋಚಿತವಾದ ಅತ್ಯಗತ್ಯವಾಗಿ ಆಚರಿಸಲೇಬೇಕಾದ ಕರ್ಮಗಳ **ಅರಿತು** = ಆ ಕರ್ಮಗಳ ಮರ್ಮವನ್ನು ಜ್ಞಾನಾನುಸಂಧಾನಪೂರ್ವಕವಾಗಿ ತಿಳಿದು (ಕರ್ಮಾಚರಣೆಯು ಜ್ಞಾನ ಪ್ರಾಪ್ತಿಗೆ ಕಾರಣವು) **ನಿಷ್ಕಾಮಕನು** = ಆ ಕರ್ಮಗಳ ಫಲಗಳಲ್ಲಿ ಅಪೇಕ್ಷಾರಹಿತನಾಗಿ, **ನೀನಾಗಿ** = ಈ ರೀತಿ ನೀನು ಕರ್ಮಾಚರಣೆ ಮಾಡುತ್ತಾ, **ಬೃಹತಿ ನಾಮಕ** = ೭೨,೦೦೦ ನಾಡೀಗತ ಬೃಹತೀ ಎಂಬ ಹೆಸರುಳ್ಳ **ಭಾರತೀಶನ** = ಭಾರತೀ ರಮಣರಾದ ಶ್ರೀ ವಾಯುದೇವರನ್ನು ಚಿಂತಿಸುತ್ತಾ, **ಮಹಿತರೂಪವ** = ಭಾರತೀ ರಮಣಮುಖ್ಯಪ್ರಾಣಾಂತರ್ಗನಾದ ಮಹಿತ–ಎಂದರೆ ರಮಾದೇವಿಗೆ ಪ್ರೀತಿ ವಿಷಯನಾದ

(ಮಾ-ಲಕ್ಷ್ಮೀದೇವಿಯರು ಹಿತ-ಅವರಿಗೆ ಪ್ರಿಯಕರನಾದ) ಶ್ರೀ ಪರಮಾತ್ಮನ ರೂಪ ವಿಶೇಷಗಳನ್ನು **ನೆನೆದು** = ಮನಸಾ ಸ್ಮರಿಸುತ್ತ, **ಮನದಲಿ** = ಮನೋಮಂದಿರದಲ್ಲಿ **ಪರಮಭಕುತಿಯಲಿ** = ಅತ್ಯಂತ ಶ್ರೇಷ್ಠವಾದ ಅಂತಃ ಕರಣಪೂರ್ವಕವಾದ ನಿರ್ಮಲ ಭಕ್ತಿಭಾವದಿಂದ, **ಅಹರಹ** = ಪ್ರತಿದಿವಸ **ಭಗವಂತನಿಗೆ** = ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀ ಪರಮಾತ್ಮನಿಗೆ **ಅರ್ಪಿಸು** = ಸಮಸ್ತ ಕರ್ಮಗಳನ್ನು ಅರ್ಪಿಸುವವನಾಗು. ||೪||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ವಿಹಿತ ಕರ್ಮಗಳ ಆಚರಣೆ ಮಾಡು ಎಂತಲೂ, ಅವಿಹಿತ ಕರ್ಮಗಳ ಆಚರಣೆ ಮಾಡಬ್ಯಾಡ ಎಂತಲೂ, ವಿಹಿತ ದಾವದೆಂದರೆ ಅದನ್ನು ಹೇಳ್ತಾರೆ.

ದಹಿಕ-ಎಂದರೆ ದೇಹ ಸಂಬಂಧ ಕರ್ಮ, ದೈಶಿಕ-ಎಂದರೆ ದೇಶವನ್ನು ಅನುಸರಿಸಿದ ಕರ್ಮ, ಕಾಲಿಕ-ಎಂದರೆ ಕಾಲವನ್ನು ಅನುಸರಿಸಿದ ಕರ್ಮ, ಅಂತು ಮೂರು ವಿಧ ಕರ್ಮಗಳು. ಇದಕ್ಕೆ ವಿವರ :- ಈ ದೇಹ ಸಂಬಂಧ ಕರ್ಮ ಎಂದರೆ, ದೇಶ ಕಾಲಕ್ಕೆ ಸಂಬಂಧಪಡದ ತೀರ್ಥಯಾತ್ರಾದಿಗಳು, ನಮಸ್ಕಾರ ಪ್ರದಕ್ಷಿಣೆ ಜಪಾದಿಗಳು. ಈ ದೃಷ್ಟಾಂತವನ್ನು ಅನುಸರಿಸಿದ ದೇಹಸಂಬಂಧ ತದ್ವ್ಯತಿರಿಕ್ತ ಅನೇಕ ಕರ್ಮಗಳು ಎಂತ ತಾತ್ಪರ್ಯ. ದೈಶಿಕ ಎಂದರೆ, ದೇಶಭೇದದಿಂದ ಆಚರಿಸತಕ್ಕ ಕರ್ಮಗಳು. ಅನೇಕ ದೇಶ ಭೇದಗಳಲ್ಲಿ ಇರತಕ್ಕ ತೀರ್ಥಗಳಲ್ಲಿ ಶ್ರಾದ್ಧಾದಿಗಳು, ಇನ್ನೂ ಅನೇಕ ವಿಧವಾದ ದೇಶಾಚಾರಗಳು. ಈ ದೃಷ್ಟಾಂತದಿಂದ ಸ್ವದೇಶಾಚಾರ ವ್ಯತಿರಿಕ್ತ ಅನ್ಯ ದೇಶಾಚಾರಗಳ ತೆಗೆದುಕೋಬೇಕು. ಕಾಲಿಕ ಎಂದರೆ ಕಾಲವನ್ನನುಸರಿಸಿದ ಕರ್ಮಗಳು. ಅವು ದಾವುವೆಂದರೆ, ಚಾತುರ್ಮಾಸ್ಯಾದಿ ವ್ರತಗಳು,

ಭೀಷ್ಮಪಂಚಕ, ವಿಷ್ಣುಪಂಚಕ, ಗ್ರಹಣ, ಪರ್ವಕರ್ಮಗಳು, ಷಣ್ಣವತಿ ಶ್ರಾದ್ಧಾದಿಗಳು, ಅವಿಧವಾನವಮಿ ಇತ್ಯಾದಿ ಕಾಲಕೃತ ಕರ್ಮಗಳು. ಈ ದೃಷ್ಟಾಂತದಿಂದ ತದನ್ಯಗಳ ತೆಗೆದುಕೋಬೇಕು. ತ್ರಯ–ಏತಾದೃಶ ತ್ರಿವಿಧವಾದ, ಗಹನ-ಅಂತ್ಯ ಕಾಣದ, ಕರ್ಮಗಳುಂಟು-ಕರ್ಮಗಳು ಇರೋವಾಗಿ ಅವೆ. ಇದರೊಳು–ಈ ಅಂತ್ಯಕಾಣದ ಕರ್ಮಗಳಲ್ಲಿ, ವಿಹಿತ ಕರ್ಮಗಳರಿತು–ಮಾಡೋದಕ್ಕೆ ಸಾಧ್ಯವಾದದ್ದು ಬಿಡದೆ, ಮಾಡಬೇಕಾದ ವಿಹಿತ ಕರ್ಮಗಳು ದಾವುವೋ ಅವನ್ನ ತಿಳಿದು, ನಿಷ್ಕಾಮುಕನು ನೀನಾಗಿ–ನೀನು ಫಲಾಪೇಕ್ಷಾರಹಿತನಾಗಿ ಮಾಡುತ್ತಾ ಆ ಕರ್ಮಗಳಲ್ಲಿ, ಬೃಹತೀನಾಮಕ–ಬೃಹತೀನಾಮಕ, ಭಾರತೀಶನ-ಭಾರತೀಪತಿಯಾದ ಮುಖ್ಯಪ್ರಾಣದೇವರನ್ನ ಚಿಂತಿಸಿ, ಮಹಿತನ–ತದಂರ್ಗತ "ಮ"-ಎಂದರೆ, ರಮಾದೇವೇರಿಗೆ, "ಹಿತ"—ಪ್ರೀತಿಕರನಾದ ಶ್ರೀ ಪರಮಾತ್ಮನ, ರೂಪವ ನೆನೆದು–ತದಾಕಾರ, ತನ್ನಾಮ, ತದ್ರೂಪವನ್ನ ನೆನೆದು, ಮನದಲಿ-ಹೃದಯಸ್ಥ ಮನಾಂತರ್ಗತನಾದ, ಭಗವಂತನಿಗೆ-ಬಿಂಬರೂಪಿ ಶ್ರೀ ಪರಮಾತ್ಮನಿಗೆ, ಅಹರಹಃ–ಹಗಲೂ ರಾತ್ರಿಗಳಲ್ಲಿ ಮಾಡಿದ ಕರ್ಮ ಹಗಲೂ ರಾತ್ರಿಗಳಲ್ಲಿ, ಪರಮ ಭಕುತಿಯಲಿ–ಅತ್ಯಂತ ಭಕ್ತಿಯಿಂದ, ಅರ್ಪಿಸು-ಭಗವದ್ರೂಪಗಳಿಂದ ಭಗವದ್ರೂಪಗಳಿಗೆ ಪೂರ್ವೋಕ್ತ ಪ್ರಕಾರ ಅರ್ಪಿಸೋವನಾಗು, ಅರ್ಪಣ ಎಂದರೆ, ಸರ್ವವೂ ಇದೇ ಪ್ರಕಾರವೆಂದು ತಾತ್ಪರ್ಯ.

**ವಿಶೇಷಾರ್ಥ :-**

ಪ್ರಕಾರಾಂತರ ಅರ್ಥ :-

ದಹಿಕ ಎಂದರೆ, ಸ್ವರೂಪದೇಹದ ಸಂಬಂಧ. ದೈಶಿಕ ಎಂದರೆ, ಅಸ್ಪೃಜ್ಯ ದೇಶದಲ್ಲಿ ಅನಾದಿಯಿಂದ ವಿದ್ಯಮಾನವಾಗಿ ಇರತಕ್ಕ ಲಿಂಗದೇಹದ ಸಂಬಂಧ. ಕಾಲಿಕ ಎಂದರೆ, ಸೃಷ್ಟಿಕಾಲಕ್ಕೆ ಪ್ರಾಪ್ತವಾದ ಅನಿರುದ್ಧ ಶರೀರದ ಸ್ಥೂಲದೇಹ ಸಂಬಂಧ. ತ್ರಯ ಎಂದರೆ ಮೂರು ದೇಹಗಳ ಸಂಬಂಧದಿಂದ ಮಾಡತಕ್ಕ ಗಹನ ಕರ್ಮಗಳುಂಟು ಎಂದೆರೆ, ಮೂರೂ ಸೇರಿಕೊಂಡು ಸ್ಥೂಲದೇಹದ ದ್ವಾರಾ ಮಾಡತಕ್ಕ ಕರ್ಮಗಳಲ್ಲೇನು

ಗಹನ ಕರ್ಮಗಳುಂಟು ಎಂದರೆ, ತಿಳಕೊಂಬೋದಕ್ಕೂ, ಅನುಷ್ಠಾನ ಮಾಡೋದಕ್ಕೂ ಗಹನ ಶಕ್ಯವಲ್ಲದ ಕರ್ಮಗಳು ಅನೇಕ ಇರೋದಾಗಿ ಅವೆ. ಈ ಗಹನ ಕರ್ಮದೊಳಗೆ ಈ ವಿಹಿತಕರ್ಮಗಳರಿತು, ಎಂದರೆ, ತನಗೆ ಮಾಡೋದಕ್ಕೆ ವಿಹಿತವಾದ, ಸದ್ಗತಿಮಾರ್ಗ ತೋರಿಸತಕ್ಕ, ಕರ್ಮ ದಾವದೋ, ಆ ಕರ್ಮಗಳನ್ನ ಗುರುಗಳ ದ್ವಾರಾ ತಿಳಕೊಂಡವನಾಗಿ, ಆ ತಿಳಕೊಂಡ ಕರ್ಮಗಳು, ನಿಷ್ಕಾಮಕನು (ಹೋಗಲ್ಪಟ್ಟ ಕಾಮನಾಫಲ ವುಳ್ಳವನು) ನೀನಾಗಿ–ಎಂದರೆ, ಕರ್ಮಮಾಡತಕ್ಕವನಿಗೆ ಸಂಬೋಧನ. ಬೃಹತೀನಾಮಕ ಭಾರತೀಶನ ಎಂದರೆ, ಭಾರತೀಪತಿಯಾದ ಬೃಹತೀ ಎಂಬ ನಾಮದಿಂದ ವಾಚ್ಯನಾದ ಪ್ರಾಣದೇವರ ಮಹಿತರೂಪನೆಂದು, ಎಂದರೆ ಮಹಿತ–ಎಂದರೆ, ಪೂಜ್ಯರಾದ ವಾಯುದೇವರು ಎಂತ ತಾತ್ಪರ್ಯ. ದಾರಿಂದ ಪೂಜ್ಯ ಎಂದರೆ, ತೃಣಜೀವರ ಆರಂಭಮಾಡಿ ಭಾರತೀಪರ್ಯಂತ ಮುಕ್ತಿಯೋಗ್ಯರಾದವರಿಂದ ಪೂಜ್ಯನು. ಮತ್ತು ವಾಯುದೇವರಲ್ಲಿ ಮಹಿತನ ಎಂದರೆ, ರಮಾದೇವೇರಿಗೆ ಹಿತಪತಿಯಾದ ಪರಮಾತ್ಮನ ನೆನೆದು, ಎಲ್ಲ ನೆನೆದು ಎಂದರೆ, ಮನದಲ್ಲಿ ವಾಯ್ವಂತರ್ಗತನಾಗಿ ನೆನೆದು, ಅಹರಹಃ– ಹಗಲು ರಾತ್ರಿಗಳಲ್ಲಿ ಮಾಡತಕ್ಕ ಕರ್ಮಗಳ ಭಗವಂತನಿಗರ್ಪಿಸು. ಷಡ್ಗುಣೈಶ್ವರ್ಯಾದಿ ಸಂಪದ್ಯುಕ್ತನಾದ ಭಗವಂತನಿಗೆ ಅರ್ಪಿಸು. ಪರಮಭಕುತಿಯಲಿ ಎಂದರೆ, ಸುಮ್ಮನೆ ಕೃಷ್ಣಾರ್ಪಣ ಎಂತ ಅರ್ಪಣ ಅಲ್ಲ. ಉತ್ತಮವಾದ ಭಕ್ತಿಯಿಂದ ಕೊಡಬೇಕು ಎಂತ ತಾತ್ಪರ್ಯ. ಉತ್ತಮವಾದ ಭಕ್ತಿ ಎಂಥಾದ್ದು ಎಂದರೆ, ದಾರಾ ಪುತ್ರ ದ್ರವ್ಯಾದಿಗಳಲ್ಲಿ ಈಗ್ಗೆ ದಾವ ಭಕ್ತಿ ಇದೆಯೋ, ಆ ಭಕ್ತಿ ದ್ರವ್ಯಾದಿಗಳಿಂದ ಬಿಡಿಸಿ ಪರಮಾತ್ಮನಲ್ಲಿ ಇಡೋಣ ದಾವದೋ, ಅದೆ ಪರಮ ಭಕ್ತಿ ಎಂತ ತಾತ್ಪರ್ಯ. ಇಂಥಾ ಭಕ್ತಿಯಿಂದ ಅರ್ಪಿಸಬೇಕು. ವಿಹಿತ ಕರ್ಮಗಳ ಅರಿತು ಎಂದರೆ, ವಿಹಿತ ಕರ್ಮದಾವದು ಎಂದರೆ, ತನ್ನ ಸ್ವರೂಪಅಭಿವ್ಯಕ್ತಿ ಆಗೋದಕ್ಕೆ ವಿಹಿತವಾದ ಕರ್ಮ ದಾವದೋ, ಅದೇನೇ ವಿಹಿತಕರ್ಮ. ಆ ಕರ್ಮ ಎಂಬುದು ಭೇದಜ್ಞಾನ, ಸ್ವಾಮಿಭೃತ್ಯನ್ಯಾಯ, ಅಹಂ ಮಮತಾತ್ಯಾಗ, ಲಾಭಾಲಾಭಾಗಳಲ್ಲಿ ಸಮಬುದ್ಧಿ, ಸುಖದುಃಖಾದಿಗಳಲ್ಲಿ ಸಮಬುದ್ಧಿ, ಭಗವದ್ಭಕ್ತರ ಅಭಿಲಾಷೆ

ಪೂರ್ತಿಗೊಳಿಸೋಣ, ಎತಾದೃಶವಾದ ವಿಹಿತ ಕರ್ಮಗಳು, ಇನ್ನು ಗುರುಸೇವಾ, ಗುರುಭಕ್ತರ ಸೇವಾ, ಇವೇ ವಿಹಿತಕರ್ಮ. ತತ್ಸ ಜಾತೀಯಗಳು ಯಾವತ್ತೂ ತೆಗೆದುಕೋಬೇಕು. ಪರಮಾತ್ಮನಿಗೆ ಅರ್ಪಣೆ, ಎಂದರೆ ಜಡಕರ್ಮ ಅರ್ಪಣೆ ಎಂತ ತಾತ್ಪರ್ಯವಲ್ಲ. ಪ್ರತಿ ಕರ್ಮದಲ್ಲಿ ಬೃಹತೀನಾಮಕ ಪ್ರಾಣದೇವರನ್ನ, ತದಂತರ್ಗತ ಪರಮಾತ್ಮನನ್ನ, ತಿಳಿದು ತನ್ನ ಮನದಲ್ಲಿ ವಾಯ್ವಂತರ್ಗತ ಪರಮಾತ್ಮನ ಚಿಂತಿಸಿ, ಮನೋಂತ ರ್ಗತ ಮನಃಶಬ್ದವಾಚ್ಯ ಪರಮಾತ್ಮನಲ್ಲಿ ಐಕ್ಯಚಿಂತನೆ ಮಾಡೋಣ, ಕರ್ಮಾಂತರ್ಗತ ಕರ್ಮರೂಪಿ ಶ್ರೀ ಪರಮಾತ್ಮನ್ನ ಚಿಂತಿಸಿ, ಆತನಲ್ಲಿ ಐಕ್ಯ ಚಿಂತನೆ ಮಾಡೋಣ ಎಂಬದು, ಪರಮಾತ್ಮಗೆ ಕರ್ಮಸಮರ್ಪಣೆ ಎಂತ ತಾತ್ಪರ್ಯ. ಈ ರೀತ್ಯಾ ಪರಮಾತ್ಮನಿಗೆ ಕರ್ಮ ಅರ್ಪಣೆ ಮಾಡಬೇಕು. ಇಂಥಾ ಸತ್ಕರ್ಮಮಾಡಿ, ಸದ್ಗತಿ ಐದಬೇಕೆಂದು ತಾತ್ಪರ್ಯ. ತದ್ವ್ಯತಿರಿಕ್ತ ಅನೇಕ ಕರ್ಮಗಳ ಮಾಡಿದರೂ ಗತಿ ಆಗಲಾರದು ಎಂತ ತಿಳಿಯಬೇಕು. ॥೪॥

## (೨) "ಭಾವಪ್ರಕಾಶಿಕೆ"–ವ್ಯಾಖ್ಯಾನ :–

ಮನುಷ್ಯರು ಮಾಡಬೇಕಾದ ಕರ್ಮಗಳು ಮೂರು ಪ್ರಕಾರ. ದೈಹಿಕ, ದೈಶಿಕ ಮತ್ತು ಕಾಲಿಕ ಎಂದು. ದೈಹಿಕವೆಂದರೆ ದೇಹ ದಿಂದಮಾಡುವ ಸೇವಾದಿಗಳು. ದೈಹಿಕ ಎಂದರೆ ದೇಶ ಸಂಬಂಧ ವಾದುದು. ಅದು ಪುಣ್ಯಕ್ಷೇತ್ರಗಳಾದ ಕಾಶಿ ಮುಂತಾದ ಸ್ಥಳಗಳಿಗೆ ಹೋದಾಗ ಮಾಡುವ ಮುಂದಿನ ತೀರ್ಥಶ್ರಾದ್ಧ ಮೊದಲಾದವು. ಕಾಲಿಕ ವೆಂದರೆ, ಕಾಲಸಂಬಂಧವಾದ ಸಂಧ್ಯಾವಂದನೆ, ಶ್ರಾದ್ಧ, ಸಂಕ್ರಮಣಾದಿ ಗಳಲ್ಲಿ ಮಾಡುವ ಕರ್ಮ ವಿಶೇಷಗಳು, ಹೀಗೆ ಮೂರು ವಿಧವಾದ ಕರ್ಮ ಗಳಲ್ಲಿ ವಿದ್ಯುಕ್ತಪ್ರಕಾರ ಎಲ್ಲಾ ಕರ್ಮಗಳನ್ನು ಮಾಡಬೇಕಾದರೆ ಬಹಳ ಕಠಿಣವಾಗಿರುವುವು. ಆದುದರಿಂದ ಈ ಮೂರು ವಿಧವಾದ ಕರ್ಮಗಳಲ್ಲಿ ವಿಹಿತವಾದ ಕರ್ಮಗಳು, ಅಂದರೆ, ಯಾವ ಕರ್ಮಗಳನ್ನು ಅವಶ್ಯವಾಗಿ ಮಾಡೇತೀರಬೇಕೋ, ಆ ಕರ್ಮಗಳನ್ನು ತಿಳಿದು, ಫಲಾಪೇಕ್ಷೆಯನ್ನು

ಬಿಟ್ಟು, ಭಗವತ್ಪ್ರೀತಿಗೋಸ್ಕರವಾಗಿ ಮಾಡಬೇಕು. ೭೨,೦೦೦ ನಾಡೀಗತ ವಾಯುದೇವರಿಗೆ **ಬೃ**ಹತೀ– ಎಂದು ಹೆಸರು. ಅಂತಹ ಬೃಹತೀಛಂದಸ್ಸಿಗೆ ಪ್ರತಿಪಾದ್ಯರಾದ ಬೃಹತೀನಾಮಕರಾದ ಭಾರತೀಪತಿಯಾದ **ಶ್ರೀ**ವಾಯು ದೇವರನ್ನು ಚಿಂತಿಸಿ, ಅವರಂತರ್ಯಾಮಿಯಾದ ಭಗವಂತನಿಗೆ. ಪ್ರತಿ ದಿವಸವೂ ನಾವು ಮಾಡುವ ಕರ್ಮಗಳನ್ನು ಪರಮಭಕ್ತಿಯಿಂದ ಅರ್ಪಿಸ ಬೇಕು. ॥೪॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :–

"ದಹಿಂಕೇತಿ"॥ ದಹಿಂಕ–ಕಾಯ ಸಂಬಂಧ. ದೈಶಿಕ– ದೇಶ ಸಂಬಂಧ. ಕಾಲಿಕ–ಕಾಲಸಂಬಂಧ ಹೀಗೆ ತ್ರಿವಿಧ ಕರ್ಮಗಳೆಂದು ತಾತ್ಪರ್ಯ ॥೪॥

## (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

"ದೈಹಿಂಕ"–ಇತಿ ॥**ವಿಷ್ಣುರಹಸ್ಯೇ**– "ಸೋಧಿಕಾರೋಪಿ ದೈಹಿಂಕಃ ॥ ಯಜ್ಞದಾನಾದಿಕಂ ತತ್ತತ್ಕಾಲ ವಿಶೇಷೇಷು ಯಜ್ಞದಾನಜಪಾದಿಕಂ ॥ ವಿಧೀಯತೇ– "ಸತು ಪ್ರೋಕ್ತಃ ಕೃತೋऽಧಿಕಾರಃ ಕಾಲಿಕಃ ಬುಧೈಃ ತೀರ್ಥಕ್ಷೇತ್ರ ವಿಶೇಷೇಷು ಕರ್ತವ್ಯಮಭಿಧೀಯತೇ ॥ ತತೋऽಧಿಕಾರಃ ವಿಜ್ಞೇಯಃ ದೈಶಿಕಃ ಮುನಿಭಿಃ ಮುನೇ ॥ ಆತಏವಹಿ ತೀರ್ಥಾದೌ ಮುಂಡನಂ ಚೋಪವಾಸನಮ್" ॥ಇತಿ॥ ॥೪॥

## ಕನ್ನಡಾರ್ಥ :–

ಈ ಪದ್ಯದಲ್ಲಿ ನಿರೂಪಿತವಾಗಿರುವ ದಹಿಂಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯಂಗಳ ವಿಚಾರವಾಗಿ **ಶ್ರೀ ವಿಷ್ಣುರಹಸ್ಯ**ದಲ್ಲಿ ಅರ್ಥವಿವ ರಣೆ ಇದೆ. ಕರ್ಮಾಧಿಕಾರ ಮತ್ತು ಕರ್ಮಾಚರಣೆ ಮೂರು ಪ್ರಕಾರ. ದೇಹಸಂಬಂಧವಾಗಿ ನಡೆಯುವ ಕ್ರಿಯೆಗಳು ದೈಹಿಕವೆನಿಸುವುವು. ದೇಶ ಸಂಬಂಧ ನಿಮಿತ್ತವಾದ ಕರ್ಮಗಳು ದೈಹಿಕ ಕರ್ಮಗಳು. ಕಾಲನಿಮಿತ್ತ ನಡೆಯುವ ಕರ್ಮಗಳು ಕಾಲಿಕಗಳೆನಿಸುತ್ತವೆ, ಆಯಾಯಾ ಕಾಲವಿಶೇಷ

ಗಳಲ್ಲಿ ವಿಧಿಸಲ್ಪಡುವ ಯಜ್ಞ, ದಾನ ಮುಂತಾದ ಕರ್ಮಗಳು ಕಾಲಿಕವೆನಿಸುತ್ತವೆ. ತೀರ್ಥಕ್ಷೇತ್ರ ಮೊದಲಾದ ದೇಶವಿಶೇಷವನ್ನು ನಿಮಿತ್ತ ಮಾಡಿ ಮಾಡುವ ಕ್ರಿಯೆಗಳು ದೈಶಿಕಗಳೆನಿಸುವುವು, ಹೇ ಮುನಿಯೇ ! ತೀರ್ಥಕ್ಷೇತ್ರ ಸಂಬಂಧ ದೈಶಿಕ ಕರ್ಮಾನುಸಾರ ತೀರ್ಥಕ್ಷೇತ್ರಗಳಲ್ಲಿ ಉಪವಾಸ ಮುಂಡನ ಮುಂತಾದ ವಿಧಿಗಳು ಅವಶ್ಯ ಆಚರಣೀಯ"-**ಎಂದು ವಿಷ್ಣು ರಹಸ್ಯದಲ್ಲಿ** ನಿರೂಪಿತವಾಗಿದೆ. ॥೪॥

## (೫) ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ :-

ವಿಹಿತ ಕರ್ಮೋಪಾಸನೆ ತಿಳಿಸುತ್ತಾರೆ- ದೈಹಿಕವೆಂದು. ದೈಹಿಕವೆಂಬ ಜಾತಕರ್ಮ, ಚೌಲ, ಉಪನಯನ, ಸ್ನಾನಾದಿ ವಿಹಿತಕರ್ಮಗಳು, ದೈಶಿಕವೆಂಬ ತೀರ್ಥಶ್ರಾದ್ಧ, ಉಪವಾಸ, ಯಾತ್ರಾದಿಗಳು, ಕಾಲಿಕವೆಂಬ ಸಂಧ್ಯೋಪಾಸನಾದಿಗಳು, ಹೀಗೆ ತ್ರಯಗಹನ ಕರ್ಮಗಳು ಎಂದರೆ, ಕರ್ತೃ, ಕಾಲ, ದೇಶ ಗುಣ ಬಹುವಿಧದಿಂದ ತಿಳಿಯುವುದಕ್ಕೆ ಶಕ್ಯವಲ್ಲದ ಫಲಗಳನ್ನು ಕೊಡುವುದರಿಂದಲೂ ಅಪಾರವಾದ ಪೂರ್ವೋಕ್ತ ಮೂರು ಬಗೆ ಕರ್ಮಗಳುಂಟು. ಇವುಗಳಲ್ಲಿ ಅತ್ಯಾವಶ್ಯಕ, ಮಾಡದಿದ್ದರೆ ಪಾಪ ಬರತಕ್ಕ ಸಂಧ್ಯಾದಿಗಳನ್ನು ತಿಳಿದು, ದೇವರ ಪ್ರೀತಿ ಮಾತ್ರ ಅಪೇಕ್ಷಿಸುವವನೂ, ಫಲಾಪೇಕ್ಷೆ ಇಲ್ಲದವನೂ ಸಹ ಆಗಿ, ನಾಡೀಸ್ಥಿತ **ಬೃಹತೀ** ನಾಮಕ ಭಾರತೀಶ ವಾಯುದೇವರ ಉತ್ಕೃಷ್ಟರೂಪಗಳನ್ನು ಕರ್ಮಪ್ರವರ್ತಕಗಳೆಂದು ಸ್ಮರಿಸಿ, ಸದಾ ಪರಮಸ್ನೇಹವೆಂಬ ಭಕ್ತಿಯಿಂದ, ಆ ಕರ್ಮಗಳನ್ನೆಲ್ಲಾ ದೇವರ ಪ್ರೀತಿಕರ, ತದಧೀನವೆಂಬ ಭಾವನಾರೂಪ ಸಮರ್ಪಣೆಯನ್ನು ಮಾಡುತ್ತಿರುವುದು. ॥೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಕರ್ಮತ್ರಯಗಳ ವಿಚಾರ ಮತ್ತು ಸರ್ವಕರ್ಮ ಸಮರ್ಪಣಾಕ್ರಮವನ್ನು ತಿಳಿಸುತ್ತಾರೆ- **ದಹಿಕ ದೈಶಿಕ**- ಎಂಬ ಪ್ರಸಕ್ತ ೪ನೆಯ ಪದ್ಯದಿಂದ.

೧. ಜೀವರ ಅಧಿಷ್ಠಾನದಲ್ಲಿ ಕರ್ಮಪತಿಯಾದ ಶ್ರೀಹರಿಯು ಮಾಡಿ ಮಾಡಿಸುವ ಕರ್ಮಗಳು ಮೂರು ಪ್ರಕಾರ.

1. ದೈಹಿಕ ಕರ್ಮಗಳು

2. ದೈಶಿಕ ಕರ್ಮಗಳು

3. ಕಾಲಿಕ ಕರ್ಮಗಳು

೨. ದೇಹದ ದ್ವಾರಾ (ಸಂಬಂಧಿಸಿದಂತೆ) ಆಗುವ ಕರ್ಮಸಮೂಹಗಳಿಗೆ **ದೈಹಿಕ ಕರ್ಮ**ಗಳೆಂದು ಹೆಸರು. ದೇವಪೂಜಾಕ್ಕೆ ಅಣಿಮಾಡುವ ಕಾರ್ಯಗಳು ಪಾದಪೂಜಾ, ಅತಿಥಿಸತ್ಕಾರ, ಷೋಡಶ ಪೂಜಾದಿಗಳು, ತಂತ್ರ ಸಾರೋಕ್ತ ದೇವರ ಪೂಜಾ, ಸಾಷ್ಟಾಂಗ ನಮಸ್ಕಾರಾದಿಗಳು ಇತ್ಯಾದಿ ಕರ್ಮವಿಶೇಷಗಳು ದೈಹಿಕ ಕರ್ಮಗಳೆಂದೆನಿಸುವುವು.

೩. ಆಯಾಯಾ ದೇಶಕ್ಕೆ ಸಂಬಂಧಿಸಿದ ಕರ್ಮಪರಂಪರೆಗಳಿಗೆ **ದೈಹಿಕಕರ್ಮ**ಗಳೆಂದು ಹೆಸರು. ತೀರ್ಥಕ್ಷೇತ್ರ ಯಾತ್ರೆ, ಗಂಗಾದಿ ತೀರ್ಥಗಳಲ್ಲಿ ಸಂಕಲ್ಪ ಪೂರ್ವಕ ಸ್ನಾನಾದಿ ಕರ್ಮಗಳು, ಗಯಾ, ಬದರೀ, ಮುಂತಾದ ಕ್ಷೇತ್ರಗಳಲ್ಲಿ ಆಚರಿಸುವ ಪಿತೃಕರ್ಮಗಳು. ತೀರ್ಥಾಭಿಮಾನಿ ದೇವತೆಗಳ ಹಾಗೂ ಆಯಾಯಾ ಕ್ಷೇತ್ರ ಮೂರ್ತಿಗಳ ಚಿಂತನೆ, ದೇವರ ದರ್ಶನಾದಿಗಳು ಕ್ಷೇತ್ರ ವಿಧಿಗಳು ಇತ್ಯಾದಿ ದೈಶಿಕ ಕರ್ಮಗಳೆಂದೆನಿಸುವುವು.

೪. ಕಾಲಕ್ಕೆ ಅನುಗುಣವಾಗಿ ಮಾಡುವ ಕರ್ಮಗಳು **ಕಾಲಿಕ ಕರ್ಮಗಳು** ಸಮಯಕ್ಕೆ ಸರಿಯಾಗಿ ಪ್ರಾತಃಸಂಧ್ಯಾವಿಧಿ, ಮಾಧ್ಯಾಹ್ನಿಕ, ಸಾಯಂಸಂಧ್ಯಾ, ಚಾತುರ್ಮಾಸ್ಯಾದಿ ವ್ರತಗಳು, ಏಕಾದಶೀವ್ರತ, ಸಂಕ್ರಮಣಗಳಲ್ಲಿ ಎಸಗುವ ವಿಧಿಗಳು, ಚಾಂದ್ರಾಯಣಾದಿ ವ್ರತಗಳು ಇತ್ಯಾದಿ ಕಾಲಿಕ ಕರ್ಮಗಳು.

೫. ಇಂತಹ ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯ ಗಳು ಅತ್ಯಂತ ಗಹನವೆಂದು ದಾಸರಾಯರು ತಿಳಿಸುತ್ತಾರೆ. ಆದರೆ ಕಾಲಕ್ಕೆ

ಸರಿಯಾಗಿ, ವಿದ್ಯುಕ್ತವಾಗಿ, ಕ್ಷೇತ್ರ ವಿಧಿಗಳಿಗನುಸಾರವಾಗಿ ಮಾಡುವ ಈ ಕರ್ಮಗಳಲ್ಲಿ ಬಹುತೇಕ ತುಂಬಾ ಕಷ್ಟಕರವಾದುವು. ಇಂತಹ ಕಠಿಣ ಕರ್ಮಗಳ ಪರಂಪರೆಯಲ್ಲಿ ಯಾವ ಕರ್ಮಗಳನ್ನು ಅತ್ಯಗತ್ಯವಾಗಿ ಮಾಡಿಯೇ ತೀರಬೇಕೋ, ಅಂತಹ ಕರ್ಮಗಳಿಗೆ **ವಿಹಿತ ಕರ್ಮ**ಗಳೆಂದು ಹೆಸರು. ಈ ವಿಹಿತ ಕರ್ಮಗಳು ಭಗವತ್ಪ್ರೀತಿಕರವಾಗಿರಿಬೇಕು. ವಿ-ಶ್ರೀ ಪರಮಾತ್ಮ. ಹಿತ-ಅವನಿಗೆ ಪ್ರೀತಿಯಾದ ಕರ್ಮಗಳೆಂದರ್ಥ.

೬. ಇಂತಹ ವಿಹಿತಕರ್ಮಗಳನರಿತು-ಎಂದಿದ್ದಾರೆ ದಾಸವರ್ಯರು. ಅರಿತು- ಎಂದರೆ, ಜ್ಞಾನಾನುಸಂಧಾನ ಪೂರ್ವಕ ತಿಳಿದುಕೊಂಡು ಎಂದರ್ಥ. ಅಂದರೆ ದೇಹಗತನಾದ ಶ್ರೀ ಪರಮಾತ್ಮನು ಸಮಸ್ತಕರ್ಮಗಳಿಗೂ ತಾನೇ ಪ್ರವರ್ತಕನಾಗಿದ್ದು. ಅಯಾಯಾ ಕಾಲ, ಸಂದರ್ಭ ಮತ್ತು ಪ್ರಸಂಗಗಳಿಗೆ ಅನುಗುಣವಾದ ಕರ್ಮಗಳನ್ನು ತಾನೇ ಮಾಡಿ, ಬಿಂಬ ಕ್ರಿಯಾದ್ವಾರಾ, ದೇವ ದೈತ್ಯರ ಮೂಲಕ ಮಾಡಿಸಿ, ಆ ಕರ್ಮಭೋಗ ರೂಪವಾದ ಫಲವನ್ನು ಜೀವರ ಅನುಭವಕ್ಕೆ ಕೊಡುತ್ತಿರುವನು. ಸತ್ವಗುಣ ಪ್ರಾಚುರ್ಯದಿಂದ ತತ್ತ್ವಾಭಿಮಾನಿ ದೇವತೆಗಳ ದ್ವಾರಾ ಪುಣ್ಯ ಕರ್ಮಗಳೂ ರಜೋಗುಣ ಪ್ರಾಚುರ್ಯದಿಂದ ಪುಷ್ಕರಾದಿಗಳ ದ್ವಾರಾ ಮಿಶ್ರ ಕರ್ಮಗಳೂ ಮತ್ತು ತಮೋಗುಣ ಪ್ರಾಚುರ್ಯದಿಂದ ತತ್ವಾಭಿಮಾನಿ ದೈತ್ಯರ ದ್ವಾರಾ ಪಾಪಕರ್ಮಗಳೂ ಶ್ರೀ ಬಿಂಬರೂಪಿ ಪರಮಾತ್ಮನಿಂದ ಪ್ರೇರಿತನಾಗಿ ನಡೆಯುವುವು. ಶುಭ, ಮಿಶ್ರ ಮತ್ತು ಅಶುಭ ಇತ್ಯಾಧಿ ಸಮಸ್ತ ಕಾರ್ಯಗಳಿಗೂ ಪರಮ ಮುಖ್ಯವ್ಯಕ್ತಿಯಿಂದ ಕರ್ಮನಿಯಾಮಕನಾದ ಶ್ರೀಹರಿಯೇ ಪ್ರೇರಕನು. **"ನಾಹಂ ಕರ್ತಾ ಹರಿರೇವ ಕರ್ತಾ"**-ಎಂಬ ಜ್ಞಾನವು ಉತ್ತಮಾನುಸಂಧಾನವು. ಕರ್ಮಗಳೇ ಪರಮಪುರುಷಾರ್ಥರೂಪವಾದ ಮೋಕ್ಷಕ್ಕೆ ಏಕೈಕ ಸಾಧನವಲ್ಲ. ಕರ್ಮವು ಜ್ಞಾನಪ್ರಾಪ್ತಿಗೆ ಸಾಧನವು. ಇದೇ ಕರ್ಮಚರಣೆಯ ರಹಸ್ಯ.

೭. ಇಂತಹ ಉತ್ತಮಜ್ಞಾನಾನುಸಂಧಾನದಿಂದ ಕರ್ಮಾಚರಣೆ ಮಾಡುವಾಗ. ಆ ಕರ್ಮದಿಂದ ಜನ್ಯವಾದ ಫಲದಲ್ಲಿ ಅಪೇಕ್ಷೆ ಇರ ಬಾರದು.

ಈ ಭಾವವನ್ನೇ ದಾಸರಾಯರು **ನಿಷ್ಕಾಮುಕನು** ನೀನಾಗಿ ಎಂದಿದ್ದಾರೆ. ಅಂದರೆ ಕರ್ಮಗಳಲ್ಲಿ ಫಲಾಪೇಕ್ಷಾರಹಿತನಾಗಿರಬೇಕೆಂದರ್ಥ. ಆಗ ಆ ಕರ್ಮಗಳ ಲೇಪನವು ಜೀವನಿಗೆ ಉಂಟಾಗುವುದಿಲ್ಲ. ನಿರ್ಲಿಪ್ತನಾಗಿರುವನು.

೮. ನಮ್ಮ ದೇಹದಲ್ಲಿ ೭೨,೦೦೦ ನಾಡಿಗಳು ಓತಪ್ರೋತನಾಗಿ ಹಬ್ಬಿ ಹರಡಿವೆ. ಈ ನಾಡಿಗಳಲ್ಲಿ ಭಾರತೀರಮಣರಾದ ಮುಖ್ಯಪ್ರಾಣದೇವರು **ಬೃಹತೀ** ಎಂಬ ಹೆಸರಿನಿಂದ ಸಂಚಾರ ಮಾಡುತ್ತಿರುವರು. ಇದರಿಂದಲೇ ಶ್ವಾಸಕ್ರಿಯೆ, ರಕ್ತಪರಿಚಲನೆ, ಆಹಾರ ಜೀರ್ಣವಾಗುವಿಕೆ ಇತ್ಯಾದಿ ದೈಹಿಕ ವ್ಯಾಪಾರಗಳು ನಡೆಯುತ್ತಿರುವುವು. ಬೃಹತೀ ಛಂದಸ್ಸಿಗೆ ಪ್ರತಿಪಾದ್ಯನು ಶ್ರೀ ಪರಮಾತ್ಮನು. ಚತುರ್ವಿಂಶತಿ ತತ್ತ್ವಗಳು (೨೪) × ತ್ರಿಗುಣಗಳು × ವಿಶ್ವಾದಿ ಸಹಸ್ರರೂಪಗಳು = ೭೨,೦೦೦ ರೂಪಗಳಿಂದ ಮುಖ್ಯಪ್ರಾಣದಲ್ಲಿ ವಿರಾಜಮಾನನಾಗಿದ್ದಾನೆ. ಅಂತಹ ಪರಮಾತ್ಮನಿಗೆ **ಮಹಿತ** ಎಂದು ಹೆಸರು **ಮ–ಲಕ್ಷ್ಮೀದೇವಿ. ಹಿತ–ಆವರಿಗೆ ಪ್ರೇರಕನು.** ಅಂದರೆ ಲಕ್ಷ್ಮೀಮನೋಹರನೆಂದರ್ಥ. ಭಾರತೀಶಾಂತರ್ಗತ ಶ್ರೀ ಪರಮಾತ್ಮನ ಮಹಿತರೂಪಗಳನ್ನು ನಮ್ಮ ಮನಸ್ಸಿನಲ್ಲಿ ನಿರಂತರವೂ ಸ್ಮರಿಸುತ್ತಿರಬೇಕು. ಸರ್ವಕರ್ಮಗಳನ್ನೂ ಮಹಿತರೂಪಿ ಶ್ರೀ ಪರಮಾತ್ಮನೇ ಬೃಹತೀ ನಾಮಕರಾದ ಭಾರತೀಶರ ದ್ವಾರಾ ಮಾಡಿ ಮಾಡಿಸುತ್ತಿರುವನು ಎಂದರಿತು, ಅಂತಃಕರಣಪೂರ್ವಕವಾದ ನಿರ್ಮಲಭಕ್ತಿಯಿಂದ ಆ ಶ್ರೀಶನ ಪಾದಾರವಿಂದಗಳಲ್ಲಿ ಪ್ರತಿದಿನವೂ ಮಾಡುವ ಸರ್ವಕರ್ಮಗಳನ್ನು ಶ್ರೀವಾಯುದೇವರ ದ್ವಾರಾ ಅರ್ಪಿಸಬೇಕೆಂದು ಈ ಪದ್ಯದ ಪ್ರಮೇಯಾರ್ಥವು. ॥೪॥

## ಪದ್ಯ (೫)

**ಮೂಲ :**

**ಮೂರು ವಿಧ ಕರ್ಮಗಳೊಳಗೆ ಕಂ ।**
**ಸಾರಿ ಭಾರ್ಗವ ಹಯುವದನ ಸಂ !**
**ಪ್ರೇರಕನು ತಾನಾಗಿ ನವರೂಪಗಳನೆ ಧರಿಸಿ ॥**
**ಸೂರಿ ಮಾನವ ದಾನವರೊಳು ವಿ ।**
**ಕಾರ ಶೂನ್ಯನು ಮಾಡಿ ಮಾಡಿಸಿ ।**
**ಸಾರಭೋಕ್ತನು ಸ್ವೀಕರಿಸಿ ಕೊಡುತಿಪ್ಪ ಜೀವರಿಗೆ ॥ ॥೫॥**

**ಅವತರಣಿಕೆ :**

ಪೂರ್ವೋಕ್ತ ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯಂಗಳಲ್ಲಿ ವಿದ್ಯಮಾನನಾಗಿರುವ ಭಗವದ್ರೂಪಗಳ ವಿವರವನ್ನು ತಿಳಿಸುತ್ತಾರೆ, **ಮೂರುವಿಧ**– ಎಂಬ ಪ್ರಸಕ್ತ ಸಂಧಿಗತ ೫ನೆಯ ಈ ಪದ್ಯದಿಂದ.

ಮೂರು ಪ್ರಕಾರವಾದ ಕರ್ಮಗಳಲ್ಲಿ ಕ್ರಮವಾಗಿ ಶ್ರೀಕೃಷ್ಣ, ಪರಶುರಾಮ ಮತ್ತು ಹಯಗ್ರಿವ ರೂಪ ತ್ರಯುಗಳಿಂದ ಕರ್ಮಪ್ರೇರಕನಾಗಿದ್ದು, ದೇವ ಮಾನವ ದಾನವರೆಂಬ ತ್ರಿವಿಧ ಜೀವವರ್ಗದವರಲ್ಲಿ ಅಂತಸ್ಥಿತನಾಗಿದ್ದು, ಶಶ್ವದೇಕಪ್ರಕಾರನಾದ ಶ್ರೀ ಪರಮಾತ್ಮನು ಸರ್ವಕರ್ಮಗಳನ್ನೂ ಮಾಡಿ ಮಾಡಿಸಿ, ಸರ್ವಸಾರ ಭೋಕ್ತನಾಗಿದ್ದು, ಆಯಾಯಾ ಜೀವರಿಗೆ ಕರ್ಮಫಲಗಳನ್ನು ನೀಡುತ್ತಾನೆ ಎಂದು ಪದ್ಯದ ತಾತ್ಪರ್ಯ. ॥೫॥

**ಪ್ರತಿಪದಾರ್ಥ :**

**ಮೂರು ವಿಧ ಕರ್ಮಗಳೊಳಗೆ** = ದೈಹಿಕ, ದೇಶಿಕ ಮತ್ತು ಕಾಲಿಕ

ಎಂಬ ಈ ಮೂರು ಪ್ರಕಾರವಾದ ಕರ್ಮಗಳಲ್ಲಿ, **ಕಂಸಾರಿ** = ಕಂಸಮರ್ದನನಾದ ಶ್ರೀಕೃಷ್ಣನು, **ಭಾರ್ಗವ** = ಭೃಗುಕುಲೋತ್ಪನ್ನನಾದ ಶ್ರೀ ಪರಶುರಾಮ ದೇವರು. **ಹಯವದನ** = ಹಯಗ್ರೀವ ದೇವರು **ಸಂಪ್ರೇರಕನು ತಾನಾಗಿ** = ಸ್ವತಃ ಕರ್ಮಪ್ರೇರಕನಾಗಿದ್ದು, **ನವರೂಪಗಳ ಧರಿಸಿ** = ತ್ರಿವಿಧ ಜೀವರಲ್ಲಿ ಕ್ರಮವಾಗಿ ಕೃಷ್ಣರೂಪ ೩, ಪರಶುರಾಮರೂಪ ೩ ಮತ್ತು ಹಯಗ್ರೀವರೂಪ ೩ ಈ ರೀತಿ ೯ ರೂಪಗಳನ್ನು ಧರಿಸಿಕೊಂಡು. **ಸೂರಿ** = ಜ್ಞಾನಿಗಳಾದ ದೇವತೆಗಳು, **ಮಾನವ** = ಮಧ್ಯಮ ಜೀವವರ್ಗದವರಾದ ಮನುಷ್ಯರಲ್ಲಿ (ನಿತ್ಯಸಂಸಾರಿಗಳು), **ದಾನವರೊಳು** = ತಮೋಯೋಗ್ಯರಾದ ದೈತ್ಯರಲ್ಲಿ **ವಿಕಾರಶೂನ್ಯನು** = ಆ ಕರ್ಮಗಳಿಂದ ನಿರ್ಲಿಪ್ತನಾಗಿ ಶಶ್ವದೇಕಪ್ರಕಾರನಾದ ಶ್ರೀ ಪರಮಾತ್ಮನು. **ಮಾಡಿ ಮಾಡಿಸಿ** = ಬಿಂಬಕ್ರಿಯಾ ದ್ವಾರಾ ತಾನೇ ಸರ್ವ ಕರ್ಮಗಳನ್ನೂ ಮಾಡಿ, ದೇವ, ಮಾನವ ದಾನವರ ದ್ವಾರಾ ಮಾಡಿಸುತ್ತಾ, **ಸಾರಭೋಕ್ತನು** = ಕರ್ಮಾಂತರ್ಗತನಾಗಿ ಕರ್ಮಪ್ರೇರಕನಾಗಿ ಸ್ವಾಖ್ಯರಸ ಸ್ವೀಕರಿಸಿ **ಜೀವರಿಗೆ ಕೊಡುತಿಪ್ಪ** = ಜಡರೂಪವಾದ ಕರ್ಮ ಭೋಗವನ್ನು ಜೀವರಿಗೆ ಅವರವರ ಯೋಗ್ಯತಾನುಸಾರ ಅನುಭವಕ್ಕೆ ತಂದು ಕೊಡುತ್ತಾನೆ, ||೫||

# ವ್ಯಾಖ್ಯಾನಗಳು

## ೧. ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪೂರ್ವೋಕ್ತ ತ್ರಿವಿಧ ಕರ್ಮಗಳ ವಿವರ, ಕರ್ಮಾಭಿಮಾನಿಗಳ ಹೇಳತಾರೆ.

ಮೂರುವಿಧ ಕರ್ಮಗಳೊಳಗೆ-ದೈಹಿಕ, ದೈಶಿಕ ಮತ್ತು ಕಾಲಿಕ ಈ ಮೂರು ವಿಧ ಕರ್ಮಗಳೊಳಗೆ, ಕಂಸಾರಿ-ಶ್ರೀಕೃಷ್ಣದೇವರ (ದೈಹಿಕಕರ್ಮಗಳಲ್ಲಿ), ಭಾರ್ಗವ ಶ್ರೀ ಪರಶುರಾಮ ದೇವರು (ದೈಶಿಕ ಕರ್ಮದಲ್ಲಿ), ಹಯವದನ- ಶ್ರೀಹಯವದನ ದೇವರು (ಕಾಲಿಕ ಕರ್ಮದಲ್ಲಿ), ಈ ಪ್ರಕಾರ

ಕರ್ಮತ್ರಯಗಳಲ್ಲಿ ಇರೋವನಾಗಿ, ನವರೂಪಗಳ ಧರಿಸಿ-ಈ ತ್ರಿವಿಧ ಕರ್ಮಗಳಲ್ಲಿ ಒಂಭತ್ತು ರೂಪಗಳ ಧರಿಸಿ, ಸಂಪ್ರೇರಕನು ತಾನಾಗಿ ಸಂ-ಭಂದಾಗಿ ಆಯಾ ಜೀವರಲ್ಲಿದ್ದು ಪ್ರೇರಿಸತಕ್ಕವ ತಾನೇ ಆಗಿ ಅಂದರೆ, ಜೀವಾಂತರ್ಗತ ಪ್ರೇರಕನು ಸಾಕ್ಷಾತ್ತು ಪರಮಾತ್ಮನ ವ್ಯತಿರಿಕ್ತ ಅನ್ಯ ಬ್ರಹ್ಮ-ವಾಯ್ವಾದಿಗಗ ಪ್ರೇರಣೆ ಇಲ್ಲ ಎಂತ ತಿಳಿಯಬೇಕು. ಈ ಪ್ರಕಾರ ಪ್ರೇರಿಸುತ್ತಾ, ಸೂರಿ ಮಾನವ ದಾನವರೊಳು-ಸೂರಿ-ದೇವತೆಗಳು, ಮಾನವ-ನಿತ್ಯಸಂಸಾರಿಗಳು, ದಾನವ-ದೈತ್ಯರು ದೇಹಾಭಿಮಾನಿಗಳಾಗಿ, ತತ್ತ್ವ ನಿಯಾಮಕರಾಗಿಯೂ ತ್ರಿವಿಧರಾದವರೊಳು ತ್ರಿವಿಧ ಕರ್ಮಗಳೊಳು ಇದ್ದು, ವಿಕಾರ ಶೂನ್ಯನು-ವಿಕಾರಶೂನ್ಯವಾದ ಶರೀರ ಉಳ್ಳವನಾಗಿ ಪರಮಾತ್ಮನು, ಮಾಡಿ ಮಾಡಿಸಿ-ಜೀವರ ಕಡೆಯಿಂದ ತ್ರಿವಿಧ ಕರ್ಮಗಳನ್ನ ಪರಮಾತ್ಮ ತನ್ನ ವ್ಯತಿರಿಕ್ತ ಚಲಿಸೋದಕ್ಕೆ ಅಸ್ವತಂತ್ರರಾದ ವಿಕಾರಸಹಿತವಾದ ಶರೀರ ಉಳ್ಳವರಿಗೆ, ಕರ್ಮದಿಂದ ವಿಕಾರ ಐದಿಸಿ ಅವರಿಂದ ಕರ್ಮಗಳು ಮಾಡಿಸಿ, ಸಾರಭೋಕ್ತನು-ಸಾರಭೂತವಾದ ತನ್ನ ಸ್ವಾಖ್ಯಗಳ ಭೋಗ ಮಾಡತಕ್ಕ ಶ್ರೀ ಪರಮಾತ್ಮನು, ಸ್ವೀಕರಿಸಿ ಕೊಡುತಿಪ್ಪ ಜೀವರಿಗೆ-ತನ್ನ ಸ್ವಾಖ್ಯವನ್ನು ತಾನು ಸ್ವೀಕರಿಸಿ, ಜಡಕರ್ಮಭೋಗವನ್ನು ಆಯಾ ದೇಹಗತ ಜೀವರಿಗೆ ಕೊಡೋವನಾಗತಾನೆ.

**ತಾತ್ಪರ್ಯ**— ಈ ಪ್ರಕಾರ ಮಾಡತಕ್ಕ ಕರ್ಮಗಳಲ್ಲಿ ಪೂರ್ವೋಕ್ತ ಪ್ರಕಾರ ಅನುಸಂಧಾನ ಮಾಡಿ, ಕರ್ಮಗಳು ಪರಮಾತ್ಮಗೆ ಅರ್ಪಿಸಿ, ನಿರ್ಲಿಪ್ತನಾಗಿ ಬಿಂಬಕ್ರಿಯಾದ್ವಾರ ಪ್ರತಿಬಿಂಬಕ್ರಿಯಾ ತಿಳಿಯುತ್ತ, ಜೀವರಲ್ಲಿ ಸ್ವಾಧೀನ ಸ್ವಾಂತತ್ರ್ಯಾರೋಪಣೆ ಮಾಡದೆ ಅಸ್ವತಂತ್ರವಾದ ಸ್ವಾತಂತ್ರ್ಯ ಉಳ್ಳವನೆಂದು ತಿಳಿದು, ಅವರವರ ಅನಾದಿ ಸ್ವರೂಪವನ್ನು ಶ್ಲಾಘನ ಉದಾಸೀನದಿಂದಾ ಮಾಡತಾ ಇರಬೇಕೆಂದು ತಾತ್ಪರ್ಯ.

**ವಿಶೇಷಾರ್ಥ :—**

ಕರ್ಮಗಳು ಮೂರು ವಿಧ ದಾವದೆಂರೆ, ೧. ಸಾತ್ತ್ವಿಕರ್ಮ, ಮುಕ್ತಿಯೋಗ್ಯರು ಮಾಡತಕ್ಕದ್ದು, ೨. ರಾಜಸಕರ್ಮ, ಮಿಶ್ರಕರ್ಮವು ಉದಾಸೀನ

ಕರ್ಮ ನಿತ್ಯಸಂಸಾರಿಗಳು ಮಾಡತಕ್ಕದ್ದು ; ೩. ತಾಮಸ ಕರ್ಮ, ಇದು ಪಾಪ ಕರ್ಮ ತಮೋಯೋಗ್ಯರು ಮಾಡತಕ್ಕದ್ದು, ಭೇದಜ್ಞಾನ, ಮಿಥ್ಯಾಜ್ಞಾನ ಎಂತ ತಾತ್ಪರ್ಯ, ಇಂಥಾದ್ದೇ ತ್ರಿವಿಧ ಕರ್ಮವು. ಈ ಮೂರು ವಿಧ ಕರ್ಮಗಳೊಳಗೆ ಒಂದೊಂದರಲ್ಲಿ ಸಾತ್ತ್ವಿಕಾದಿ ಭೇದದಿಂದ ಮೂರು ಪ್ರಕಾರ ಇರೋದಾಗಿ ಅದೆ. ಅದಕ್ಕೆ ಮೂರು ಮೂರು ಭಗದ್ರೂಪಗಳು. ಆ ರೂಪಗಳು ದಾವುದು ಎಂದರೆ, ಸಾತ್ವಿಕರ್ಮ ಒಂದು ಇದರಲ್ಲಿ ಕಂಸಾರಿ ಎಂದರೆ, ಕಂಸಗೆ ಶತ್ರು ಅದಂಥಾ ಕೃಷ್ಣ. ಈ ಸ್ವಾತ್ವಿಕ ಕರ್ಮ ದೊಳಗೆ ಮೂರು ವಿಧ ಮೂರು ಭಗವದ್ರೂಪಗಳು. ಅದರ ವಿವರ-ಸಾತ್ತ್ವಿಕಕರ್ಮ **ಸಾತ್ತ್ವಿಕಕ್ಕೆ ಕೃಷ್ಣ** ಸಾತ್ತ್ವಿಕ ರಾಜಸಕ್ಕೆ ಭಾರ್ಗವ ಎಂದರೆ ಪರಶುರಾಮ ದೇವರು, ಸಾತ್ತ್ವಿಕ ತಾಮಸಕ್ಕೆ ಹಯವದನ ಅಂತು ಮೂರು ಭಗವದ್ರೂಪಗಳು. **೨. ರಾಜಸಕರ್ಮ ಇದಕ್ಕೆ ಪರಶುರಾಮದೇವರು,** ರಾಜಸಸಾತ್ತ್ವಿಕಕ್ಕೆ ಕೃಷ್ಣ, ರಾಜಸರಾಜಸಕರ್ಮಕ್ಕೆ ಪರಶುರಾಮ ದೇವರು, ರಾಜಸತಾಮಸಕರ್ಮಕ್ಕೆ ಹಯವದನ ದೇವರು. ಪರಶುರಾಮ ದೇವರು, ರಾಜಸತಾಮಸಕರ್ಮಕ್ಕೆ ಹಯವದನದೇವರು, ಅಂತು ಮೂರು ಭಗವದ್ರೂಪಗಳು 3. ತಾಮಸ ಕರ್ಮಕ್ಕೆ, ಇದಕ್ಕೆ ಹಯವದನ ದೇವರು ; ತಾಮಸಸ್ವಾತ್ತ್ವಿಕಕ್ಕೆ ಕರ್ಮಕ್ಕೆ ಕಂಸಾರಿಯಾದ ಕೃಷ್ಣದೇವರು, ತಾಮಸರಾಜಸಕರ್ಮಕ್ಕೆ ಪರಶುರಾಮ ದೇವರು, ತಾಮಸತಾಮಸಕರ್ಮಕ್ಕೆ ಹಯವದನದೇವರು, ಅಂತು ಮೂರು ಭಗವದ್ರೂಪಗಳು.

[illegible] ನಿತ್ಯಸಂಸಾರಿಗಳಿಗೆ ಸಾಂಶತ್ವ ಉಂಟು ಎಂಬುದು ಹಿಂದೆ ಸಧ್ಯಂತರದಲ್ಲಿ ವಿವರಿಸಿ ಅದೆ. ಬಿಂಬಕ್ರಿಯಾ ಎಂದರೆ, ಬಿಂಬಶಬ್ದವಾಚ್ಯ ಸ್ಥೂಲ ದೇಹದಲ್ಲಿ ದೇಹಾಕಾರದಿಂದ ಇರತಕ್ಕ ಬಿಂಬ ಎಂತ ತಾತ್ಪರ್ಯವೇ ಹೊರ್ತು, ಜೀವಾಂತರ್ಗತ ಬಿಂಬನೂ ಅಲ್ಲ, ದೇಹಾಂತರ್ಗತ ಅಂಗುಷ್ಟಮಾತ್ರ ಬಿಂಬನೂ ಅಲ್ಲ. ಎಂದರೆ ಏಕದೇಹಗತ ಅಣುವಾದ ಜೀವ ಪ್ರಕಾಶತಃ ಸ್ಥೂಲದೇಹದಲ್ಲಿ ತದಾಕಾರದಿಂದ ಹ್ಯಾಂಗೆ ವ್ಯಾಪ್ತನೋ, ತದ್ವತ್ ಏಕದೇಶ ಬಿಂಬನು ಸ್ಥೂಲದೇಹದಲ್ಲಿ ಸ್ಥೂಲಾಕಾರನಾಗಿ ವ್ಯಾಪ್ತನಾಗಿ ಇದ್ದಾನೆ. ಪ್ರತಿಬಿಂಬನಾದ ಜೀವ ಎಂಬುವ ಸ್ಥೂಲದೇಹಾಕಾರ

ನಾಗಿ ಇದ್ದಾನೆ. ಇವಗೆ ಬಿಂಬ. ದೇಹಾಕಾರನಾಗಿ ಇರತಕ್ಕ ಪರಮಾತ್ಮನೆ, ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಎಂಬುದು ಇಂಥಾ ಬಿಂಬ, ಇಂಥಾ ಬಿಂಬ ಪ್ರತಿಬಿಂಬರಲ್ಲಿ ಸಮನ್ವಯವು. ತದ್ವ್ಯತಿರಿಕ್ತ ಅತ್ಯಣುಜೀವ, ತದ್ಗತ ಅತ್ಯಣು ಪರಮಾತ್ಮ ಎಂತ ತಿಳಿದರೇ ಬಿಂಬಕ್ರಿಯಾ ಪ್ರತಿಬಿಂಬಕ್ರಿಯಾ ಕೊಡೋದಿಲ್ಲ. ಆದ್ದರಿಂದ ಪೂರ್ವೋಕ್ತ ಪ್ರಕಾರ ತಿಳಿದುಕೊಳ್ಳಬೇಕು. ||೫||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ :-

ಮೇಲೆ ಹೇಳಿದ ತ್ರಿವಿಧ ಕರ್ಮಗಳ ಪ್ರೇರಕರಾದ ಭಗವದ್ರೂಪಗಳನ್ನು ಹೇಳುತ್ತಾರೆ.

ದೈಹಿಕ, ದೇಶಿಕ, ಕಾಲಿಕವೆಂಬ ಕರ್ಮಗಳು ಸಾತ್ವಿಕ, ರಾಜಸ ಮತ್ತು ತಾಮಸರೆಂಬ ತ್ರಿವಿಧ ಜೀವರಾಶಿಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿರುವುವು. ಮೂರು ವಿಧ ಜೀವರಾಶಿಗಳೆಂದರೆ, ದೇವತೆಗಳು, ಮನುಷ್ಯರು, ದೈತ್ಯರೆಂದರ್ಥ. ದೈಹಿಕ ಕರ್ಮಗಳಿಗೆ ಪ್ರೇರಕನು ಕೃಷ್ಣರೂಪಿಯಾದ ಪರಮಾತ್ಮನು. ದೇಶಿಕ ಕರ್ಮಗಳ ಪ್ರೇರಕನು ಪರಶುರಾಮ. ಕಾಲಿಕ ಕರ್ಮಗಳ ಪ್ರೇರಕನು ಹಯಗ್ರೀವ. ಮೂರುವಿಧ ಜೀವರಲ್ಲಿ ಮೂರುವಿಧ ಕರ್ಮಪ್ರೇರಕನಾಗಿ ೩ × ೩ = ೯ ರೂಪಗಳಿಂದ ಅಲ್ಲಲ್ಲಿ ಪ್ರೇರಕನಾಗಿರುವನು. ಸಾತ್ವಿಕಾದಿ ಶರೀರಗತನಾಗಿದ್ದರೂ, ತಾನು ವಿಕಾರಶೂನ್ಯನಾಗಿರುವನು. ಮೂರು ವಿಧ ಜೀವರಾಶಿಗಳು ಮಾಡಬೇಕಾದ ಕರ್ಮಗಳನ್ನು ಅವರೊಳಗಿದ್ದು, ತಾನು ಮಾಡಿ, ಅವರಿಂದಲೂ ಮಾಡಿಸಿ, ಸರ್ವಸಾರಭೋಕ್ತನಾದ ಸ್ವಾಮಿ, ಅವರವರ ಪೂಜಾ ದ್ವೇಷಾದಿಗಳನ್ನನುಸರಿಸಿ ಫಲವನ್ನು ಕೊಡುವುದಕ್ಕಾಗಿ, ಸಾತ್ವಿಕರು ಮಾಡುವ ಸಾತ್ವಿಕ ಪೂಜಾದಿಗಳನ್ನು, ಮನುಷ್ಯರು ಮಾಡುವ ರಾಜಸಪೂಜಾದಿಗಳನ್ನು, ತಾಮಸರು ಮಾಡುವ ದ್ವೇಷಾದಿ

ಗಳನ್ನೂ ಕೂಡ ತಾನು ಸ್ವೀಕರಿಸಿ. ಅವರವರ ಕರ್ಮಾನುಸಾರವಾಗಿ ಫಲ ವನ್ನು ಕೊಡುವನು. ॥೫॥

(೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–

ಶ್ರೀದೇವನು ಕೃಷ್ಣ, ಪರಶುರಾಮ, ಹಯಗ್ರೀವ, ಹೀಗೆ ನೂತನ ವಾದ ರೂಪಧಾರಣದಿಂದ ದೇವ ಮಾನವ ದಾನವರಲ್ಲಿ ನಿಂತು, "ದಹಿಕ"– ಎಂಬ ಪದ್ಯದಲ್ಲಿ ಉಕ್ತವಾದ ಪ್ರಕಾರ ತ್ರಿವಿಧ ಕರ್ಮ ಮಾಡಿದೂಡಿಸುವ ನೆಂದು ಹೇಳುತ್ತಾರೆ– **ಮೂರು** ಎಂಬ ಪದ್ಯದಿಂದ.

**"ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ ।**
**ಕರೋತಿ ಕಾರಯತ್ಯದ್ಧಾ ಜಗತ್ಕಾರ್ಯೇವಮಂದ್ರಿತಃ" ॥**

**ಎಂಬ ಶಾಂಡಿಲ್ಯತತ್ತ್ವ** ರೀತ್ಯಾ ಮಾಡಿ ಮಾಡಿಸೋದೇ ಸಿದ್ಧೆಂಬರ್ಥ. ॥೫॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :–

"ಮೂರುವಿಧ"– ಇತಿ ॥ "ಕೃಷ್ಣಭಾರ್ಗವ ದಿವ್ಯಾಶ್ವಕಂಠಾಸ್ತ್ರಿವಿಧ ಕರ್ಮಗಾಃ " ॥೫॥

ಶ್ರೀ ಪರಮಾತ್ಮನು ದೈಹಿಕ, ದೈಶಿಕ, ಕಾಲಿಕ ಎಂಬ ಮೂರು ಪ್ರಕಾರವಾದ ಕರ್ಮಗಳಲ್ಲಿ ಕ್ರಮವಾಗಿ ಕೃಷ್ಣ, ಪರಶುರಾಮ ಮತ್ತು ಹಯಗ್ರೀವ ಎಂಬ ರೂಪತ್ರಯಗಳಿಂದ ನಿಯಾಮಕನಾಗಿ ಕರ್ಮಪ್ರೇರಕ ನಾಗಿದ್ದಾನೆ. ॥೫॥

(೫) ಶ್ರೀ ಗುರುಹೃದಯ ಪ್ರಕಾಶಿಕೆ :–

ಸಮರ್ಪಣೆ ಪ್ರಕಾರ ವಿವರಿಸುತ್ತಾರೆ, ಮೂರು ವಿಧವೆಂದು, ಮೇಲೆ ಹೇಳಿದ ಮೂರು ಬಗೆ ಕರ್ಮಗಳೊಳಗೆ, ದೈಹಿಕವೆಂಬ ಜಾತಕರ್ಮಾದಿ ಕ್ರಿಯೆಗಳಲ್ಲಿ ಕಂಸಾರಿ ಎಂಬ ಶ್ರೀಕೃಷ್ಣರೂಪವು, ದೈಶಿಕವೆಂಬ ಯಾತ್ರಾದಿ

ಕರ್ಮಗಳಲ್ಲಿ ಭಾರ್ಗವನೆಂಬ ಪರಶುರಾಮರೂಪವು, ಕಾಲಿಕವೆಂಬ ಸಂಧ್ಯಾದಿ ಕರ್ಮಗಳಲ್ಲಿ ಹಯವದನ ಎಂಬ ಹಯಗ್ರೀವರೂಪವೂ ಹೀಗೆ ಈ ಮೂರು ರೂಪಗಳು ಸಾತ್ವಿಕ ಸಾತ್ತ್ವಿಕ, ಸಾತ್ತ್ವಿಕ ರಾಜಸ, ಸಾತ್ತ್ವಿಕ ತಾಮಸ ಎಂದು ಒದೊಂದು ಮೂರು ಮೂರು ಪ್ರಕಾರ ಕರ್ಮಗಳು ಒಂಭತ್ತು ಆಗುವುದರಿಂದ, ಆ ಒಂಭತ್ತಕ್ಕೆ ಪ್ರೇರಕ ಒಂಭತ್ತು ರೂಪಗಳನ್ನು, ಧರಿಸಿ ಸೂರಿಗಳೆಂಬ ಸಜ್ಜನರಲ್ಲೂ. ಮಾನವರೆಂಬ ರಾಜಸರಲ್ಲೂ, ದಾನವ ರೆಂಬ ತಾಮಸರಲ್ಲೂ ದೇವರು ಇದ್ದು, ಗುಣಕೃತವಿಕಾರವೆಂಬ ದೋಷರಹಿತ ನಾಗಿ ಸ್ವಕ್ರಿಯೆಯಿಂವ ಜೀವಜ್ಞಾನೇಚ್ಛಾಕ್ರಿಯೆಗಳನ್ನು ವ್ಯಕ್ತಮಾಡಿಸಿ, ಸಾರಭೋಕ್ತನಾದ ಸ್ವಾಮಿ ಸ್ವರಸ ತೆಗೆದುಕೊಂಡು, ಇತರ ರಸಗಳನ್ನು ಆವರವರಿಗೆ ಕೊಡುವನೆಂದು ತಿಳಿಯುವುದೇ ಸಮರ್ಪಣೆ ಎಂದಭಿ ಪ್ರಾಯ. ||೫||

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯಗಳಲ್ಲಿ ಕರ್ಮತ್ರಯಗಳ ವಿಚಾರ ತಿಳಿಸಿ, **ಮೂರು ವಿಧ–** ಎಂಬ ಪ್ರಸಕ್ತ ೫ನೆಯ ಪದ್ಯದಿಂದ ಆ ಕರ್ಮಪ್ರೇರಕ ಹಾಗೂ ತ್ರಿವಿಧ ಚೇತನವರ್ಗದಲ್ಲಿ ಅಂತಸ್ಥಿತ ಕರ್ಮಪ್ರವರ್ತಕ ರೂಪಗಳ ವಿವರ ವನ್ನು ತಿಳಿಸುತ್ತಾರೆ.

೧. ತ್ರಿವಿಧ ಜೀವರು ಮಾಡುವ ಕರ್ಮಗಳು ಮೂರು ಪ್ರಕಾರ. (1) ದೈಹಿಕ ಕರ್ಮಗಳು. (2) ದೈಶಿಕ ಕರ್ಮಗಳು ಮತ್ತು (3) ಕಾಲಿಕ ಕರ್ಮಗಳೆಂದು ಮೂರು ವಿಧ.

೨. ದೈಹಿಕ ಕರ್ಮಗಳನ್ನು ದೇಹಗತ ಇಂದ್ರಿಯಗಳ ದ್ವಾರಾ. ತದಿಂದ್ರಿಯಾಭಿಮಾನಿಗಳ ದ್ವಾರಾ ಶ್ರೀ ಪರಮಾತ್ಮನು. **ಕೃಷ್ಣರೂಪ ದಿಂದ (ಕಂಸಾರಿ)** ಕರ್ಮಗಳಿಗೆ ನಿಯಾಮಕನಾಗಿದ್ದು, ಮಾಡಿ ಮಾಡಿಸು

ತ್ತಿರುವನು. ಕಂಸಾಸುರನು **ಕಾಲನೇಮಿ** ಎಂಬ ಅಸುರನ ಅವತಾರ. ಶ್ರೀಕೃಷ್ಣನು ತನ್ನ ಸೋದರಮಾವನಾದ ಕಂಸಾಸುರನ್ನು ಸಂಹರಿಸಿ. ಸಜ್ಜನರಿಗೆ ಆನಂದಪ್ರದನಾದನು. ನಮ್ಮ ದೇಹವು ಪಂಚಭೂತಗಳಿಂದ ನಿರ್ಮಿತವಾಗಿದೆ. ಇದರಿಂದ ದೇಹವನ್ನು ಪಾಂಚಭೌತಿಕ ಶರೀರವನ್ನುತ್ತೇವೆ. ಇದರಲ್ಲಿ ಪೃಥಿವೀ ಭಾಗವು ಹೆಚ್ಚು. ಶ್ರೀ ಪರಮಾತ್ಮನು ಚತುರ್ವಿಂಶತಿ ತತ್ತ್ವಗಳಲ್ಲಿ ಕೊನೆಯದಾದ **ಭೂತತ್ತ್ವದಲ್ಲಿ ಕೃಷ್ಣರೂಪದಿಂದ ಇದ್ದಾನೆ.** ಅಂತಹ ಕಂಸಾರಿಯಾದ ಕೃಷ್ಣರೂಪಿ ಪರಮಾತ್ಮನೇ ದೈಹಿಕ ಕರ್ಮಗಳನ್ನು ಮಾಡಿ ಮಾಡಿಸುವನು.

೩. ದೇಶ ಸಂಬಂಧವಾದ ಕರ್ಮಗಳಿಗೆ ದೈಶಿಕ ಕರ್ಮಗಳೆಂದು ಹೆಸರು. ಇಂತಹ ದೈಶಿಕ ಕರ್ಮಗಳಿಗೆ ನಿಯಾಮಕ ಭಗವದ್ರೂಪವು **ಪರಶುರಾಮರೂಪ (ಭಾರ್ಗವ).** ಭೃಗು ಕುಲೋತ್ಪನ್ನನಾದ ಪರಶುರಾಮ ದೇವರಿಗೆ ಭಾರ್ಗವನೆಂದು ನಾಮ, ಜಮದಗ್ನಿ ರೇಣುಕಾಪುತ್ರನಾದ ಭಾರ್ಗವ ರಾಮನು ೨೧ ಸಾರಿ ಭೂಪ್ರದಕ್ಷಿಣೆ ಮಾಡಿ ದುಷ್ಟ ಕ್ಷತ್ರಿಯರ ಸಂಹಾರ ಕಾರ್ಯವನ್ನು ಎಸಗಿದನು. ತೀರ್ಥಕ್ಷೇತ್ರ ಯಾತ್ರೆಗಳು. ಆಯಾಯಾ ಕ್ಷೇತ್ರಗಳಲ್ಲಿ ಅಚರಿಸುವ ವಿಧಿಗಳು. ಶ್ರಾದ್ಧಾದಿ ಕರ್ಮಗಳು, ಕ್ಷೇತ್ರಮೂರ್ತಿ ಚಿಂತನೆ, ತೀರ್ಥಾಭಿಮಾನಿದೇವತೆಗಳ ಸ್ಮರಣೆ ಇತ್ಯಾದಿ ದೈಶಿಕಕರ್ಮಗಳಿಗೆ ನಿಯಾಮಕ ಹಾಗೂ ಪ್ರೇರಕ ಭಗವದ್ರೂಪವು **ಪರಶುರಾಮನು.**

೪. ಕಾಲಕ್ಕೆ ಸಂಬಂಧವಾದ, ಸಂಧ್ಯಾವಂದನ ವಿಧಿ, ಏಕಾದಶೀ ವ್ರತ, ಚಾತುರ್ಮಾಸ್ಯ ವ್ರತ, ಪರ್ವಕಾಲಗಳನಲ್ಲಿ ಆಚರಿಸುವ ವಿಧಿಗಳು, ಗ್ರಹಣನಿಮಿತ್ತ ಮಾಡುವ ಕರ್ಮವಿಶೇಷಗಳು, ಇತ್ಯಾದಿ ಕರ್ಮಗಳು ಕಾಲಿಕ ಕರ್ಮಗಳೆನಿಸುವುವು. ಇಂತಹ ಕಾಲಿಕ ಕರ್ಮಗಳಿಗೆ ನಿಯಾಮಕ ಭಗವದ್ರೂಪವು. **ಹಯಗ್ರೀವ ರೂಪವು (ಹಯವದನ)** ಹಯಗ್ರೀವ ರೂಪವು ಜ್ಞಾನ ಪ್ರದರೂಪ. ಸಮಸ್ತ ಕರ್ಮಗಳನ್ನೂ ಭಗವತ್ಪ್ರೀತಿಗಾಗಿ ಫಲಾಪೇಕ್ಷಾರಹಿತನಾಗಿ ಮಾಡಬೇಕು. ಅದಕ್ಕೆ ಉತ್ತಮಜ್ಞಾನಾನುಸಂಧಾನ ಅತ್ಯಗತ್ಯ. ಕರ್ಮವು ಜ್ಞಾನಪ್ರಾಪ್ತಿಗೆ ಸಾಧನ. ಇಂತಹ

ಉತ್ತಮಾನುಸಂಧಾನ ರೂಪವಾದ ಜ್ಞಾನಪ್ರೇರಕನು **ಹಯಗ್ರೀವ** ರೂಪಿ ಶ್ರೀ ಪರಮಾತ್ಮನು.

೫. ಜೀವರು ತ್ರಿವಿಧರಾಗಿರುವುದರಿಂದ ಪ್ರತಿವರ್ಗದಲ್ಲಿಯೂ ದೈಹಿಕ, ದೈಶಿಕ, ಮತ್ತು ಕಾಲಿಕ ಎಂಬ ಕರ್ಮತ್ರಯಗಳಲ್ಲಿ ಕೃಷ್ಣ, ಪರಶುರಾಮ ಮತ್ತು ಹಯಗ್ರೀವ ಎಂಬ ರೂಪತ್ರಯಗಳಿಂದ ವಿದ್ಯಮಾನ ನಾಗಿದ್ದಾನೆ. ಅಂತು ತ್ರಿವಿಧ ಜೀವವರ್ಗ × ರೂಪತ್ರಯಗಳು = ಒಂಭತ್ತು ಭಗವದ್ರೂಪಗಳೆಂದಾಯಿತು, ಈ ಅಭಿಪ್ರಾಯವನ್ನೇ ದಾಸರಾಯರು **ನವರೂಪಗಳ ಧರಿಸಿ** ಎಂದಿದ್ದಾರೆ. ಇಂತಹ ನವರೂಪಗಳಿಂದ ತ್ರಿವಿಧ ಜೀವರಲ್ಲಿ ಕರ್ಮಪ್ರೇರಕನಾಗಿ ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮಗಳನ್ನು ತಾನೇ ಮಾಡಿ. ಅವರ ಮೂಲಕ ಮಾಡಿಸುತ್ತಿರುವನು.

೬. **ಸೂರಿ** ಎಂದರೆ ಜ್ಞಾನಿಗಳೆಂದರ್ಥ. ಇಂತಹ ಸುಜ್ಞಾನಿಗಳ ವರ್ಗವು ಮುಕ್ತಿಯೋಗ್ಯರಾದ ದೇವತೆಗಳು. **ಮಾನವ** ಎಂದರೆ ಮಧ್ಯಮ ಜೀವರು. ನಿತ್ಯಸಂಸಾರಿಗಳಾದ ರಾಜಸ ಜೀವರು. **ದಾನವ** ಎಂದರೆ, ತಮೋಯೋಗ್ಯರಾದ ದೈತ್ಯರು. ಇಂತು ಸಾತ್ವಿಕ, ರಾಜಸ, ತಾಮಸ ರೆಂಬ ಸೂರಿ ಮಾನವ ದಾನವ ವರ್ಗದವರಲ್ಲಿ ಸಂಸ್ಥಿತನಾಗಿದ್ದು, ಅವರವರ ಸ್ವರೂಪಯೋಗ್ಯತೆಗನುಸಾರವಾಗಿ ಕರ್ಮಗಳನ್ನು ಮಾಡಿ ಮಾಡಿಸುತ್ತಿರು ವನು. ಸರ್ವ ಜೀವರಲ್ಲಿ ಕರ್ಮಪ್ರೇರಕನಾಗಿ ವ್ಯಾಪಾರಮಾಡುತ್ತಿದ್ದರೂ ತತ್ಸಂಬಧವಾದ ಕರ್ಮಲೇಪ ಶ್ರೀ ಪರಮಾತ್ಮನಿಗಿಲ್ಲ. ಜಗದ್ವಿಲಕ್ಷಣನಾದ ಶ್ರೀಹರಿಯ ಪರಮ ವೈಶಿಷ್ಟ್ಯವೇ ಇದು. ಅದರಿಂದ ಯಾವ ವಿಕಾರವನ್ನೂ ಹೊಂದದೆ, ಶಶ್ವದೇಕಪ್ರಕಾರನಾಗಿರುವನು. ಈ ಕಾರಣದಿಂದಲೇ **ವಿಕಾರಶೂನ್ಯನು.**

೭. ವಿಕಾರರಹಿತನಾದ ಸರ್ವನಿಯಾಮಕನಾದ ಶ್ರೀ ಪರಮಾತ್ಮನು ಪಾಪ, ಮಿಶ್ರ, ಪುಣ್ಯ ಎಂಬ ಸರ್ವಕರ್ಮಗಳನ್ನೂ ಕರ್ಮಾಂತರ್ಗತನಾ ಗಿದ್ದು ತಾನೇ ಬಿಂಬಕ್ರಿಯಾದ್ವಾರಾ ಮಾಡುವನು. ಪ್ರತಿಬಿಂಬರಾದ

ಜೀವರು ಅವನಿಂದ ಪ್ರೇರ್ಯರಾದ್ದರಿಂದ ಅವರ ದ್ವಾರಾ ಕರ್ಮಗನನ್ನು ಮಾಡಿಸುವನು.

೮. ಶ್ರೀ ಪರಮಾತ್ಮನು ಸರ್ವಸಾರಭೋಕ್ತನು. ಅಂದರೆ ಕರ್ಮಗತ ಫಲಗಳನ್ನು ತಾನು ಭೋಗಿಸುವುದಿಲ್ಲ. ಕರ್ಮಗಳು ಜಡ. ಅವುಗಳ ಅಂತರ್ಗತರೂಪಗಳಲ್ಲಿ ರಮಣಮಾಡುವನು. ಆದರಿಂದಲೇ ಕರ್ಮಕ್ರಿಯಾಭಿವ್ಯಕ್ತಿ. ಸ್ವರೂಪಗಳಲ್ಲಿ ಕ್ರೀಡೆಯೇ ಸ್ವಾಖ್ಯರಸ ಸ್ವೀಕಾರ ವೆಂದೆನಿಸುವುದು. ಅಂದರೆ ಬಿಂಬನಾದ ಸ್ವಾಮಿಯೇ ತನ್ನಲ್ಲಿ ತಾನೇ ರಮಿಸುವನು. ಇದರಿಂದ ಸ್ವರಮಣನು.

೯. ಸರ್ವಸಾರಭೋಕ್ತನಾದ ಆ ಸ್ವರಮಣನು ಸ್ವಾಖ್ಯರಸಗಳನ್ನು ಮಾತ್ರ ಸ್ವೀಕರಿಸಿ, ಪ್ರತಿಬಿಂಬಭೂತರಾದ ಜೀವರಿಗೆ ತತ್ತತ್ಕರ್ಮಫಲಗಳ ಭೋಗವನ್ನು ಕೊಡುವನು. ಅಂದರೆ ಕರ್ಮಫಲಪ್ರದನು. ॥೫॥

**ಪ್ರಮಾಣವಾಕ್ಯಗಳು:**

೧. **"ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ । ಕರೋತಿ ಕಾರಯತ್ಯದ್ವಾ ಜಗತ್ಕಾರ್ಯಮತಂದ್ರಿತ"॥**

**-ಶಾಂಡಿಲ್ಯತತ್ತ್ವ.**

೨. **"ಕೃಷ್ಣ ಭಾರ್ಗವ ದಿವ್ಯಾಶ್ಚ ಕಂಠಾಸ್ತ್ರಿವಿಧ ಕರ್ಮಗಾಃ"** ॥

# ಪದ್ಯ (೬)

**ಮೂಲ :**

**ಅನಳ ಪಕ್ವವಗೈಸಿದನ್ನವ ।**
**ಅನಳನೊಳು ಹೋಮಿಸುವ ತೆರದಂ ।**
**ತನಿಮಿಷೇಶನು ಮಾಡಿ ಮಾಡಿಸಿದಖಿಳ ಕರ್ಮಗಳ ॥**
**ಮನವಚನ ಕಾಯದಲಿ ತಿಳಿದನು ।**
**ದಿನದಿ ಕೊಡು ಶಂಕಿಸದೆ ವೃಜಿನಾ ।**
**ರ್ದನ ಸದಾ ಕೈಕೊಂಡು ಸಂತಯಿಸುವನು ತನ್ನವರ ॥೬॥**

**ಅವತರಣಿಕೆ :**

ಸರ್ವಜೀವರ ಅಂತಸ್ಥಿತನಾಗಿರುವ ಶ್ರೀ ಪರಮಾತ್ಮನು ತಾನೇ ಮಾಡಿ, ಬಿಂಬಕ್ರಿಯಾದ್ವಾರಾ ಜೀವರ ದ್ವಾರಾ ಮಾಡಿಸುತ್ತಿರುವ ಕರ್ಮಪತಿ ನಾಮಕನಾದ ಆ ಬಿಂಬರೂಪಿ ಶ್ರೀ ಪರಮಾತ್ಮನಿಗೆ ನಿಸ್ಸಂದೇಹಪೂರ್ವಕವಾಗಿ ಅರ್ಪಿಸು ಎನ್ನುವ ತತ್ತ್ವರಹಸ್ಯವನ್ನು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ- **ಅನಳ ಪಕ್ವವಗೈಸಿ**- ಎಂಬ ಪ್ರಸಕ್ತ ೬ನೆಯ ಪದ್ಯದಿಂದ.

**ಪ್ರತಿಪದಾರ್ಥ :**

**ಅನಳ**=ಅಗ್ನಿಯಿಂದ, **ಪಚನಗೈಸಿದ**=ಬೇಯಿಸಿದ (ಪಕ್ವ ಮಾಡಿದ) **ಅನ್ನವ**=ಅನ್ನವನ್ನು, **ಅನಳನೊಳು**=ಪುನಶ್ಚ ಅದೇ ಅಗ್ನಿಯಲ್ಲಿ, **ಹೋಮಿಸುವ ತೆರದಂತೆ**=ಆಹುತಿ ರೂಪದಿಂದ ಕೊಡುವ ರೀತಿಯಲ್ಲಿ. **ಅನಿಮಿಷೇಶನು**=ದೇವತೆಗಳಿಗೆ ಸ್ವಾಮಿಯಾದ ಶ್ರೀ

ಮಾತ್ಮನು, **ಮಾಡಿ ಮಾಡಿಸಿದ**=ಬಿಂಬ ಕ್ರಿಯಾ ತಾನೇ ಮಾಡಿ, ಜೀವನ ಕಡೆಯಿಂದ ತತ್ತ್ವೇಶರ ದ್ವಾರಾ ಮಾಡಿಸಿದ, **ಅಖಿಳ ಕರ್ಮಗಳ**=ಶುಭ, ಮಿಶ್ರ ಮತ್ತು ಅಶುಭವೆಂಬ ಸಮಸ್ತ ಕರ್ಮಗಳನ್ನೂ **ಮನ**=ಮನಸ್ಸಿನ ದ್ವಾರಾ, **ವಚನ**=ವಾಗ್ವ್ಯಾಪಾರ ರೂಪವಾದ ಮಾತಿನಿಂದಲೂ, **ಕಾಯ ದಲಿ**=ದೇಹಗತ ಇಂದ್ರಿಯಗಳ ದ್ವಾರಾ, **ತಿಳಿದು**=ಕಾಯಕ, ವಾಚನಿಕ ಮತ್ತು ಮಾನಸಿಕ ಎಂಬ ತ್ರಿಕರಣಗಳ ದ್ವಾರಾ ಆದ ಕರ್ಮವಿಶೇಷಗಳನ್ನು ಅರಿತು, (ಜೀವಕೃತಕರ್ಮಗಳನ್ನೆಲ್ಲಾ ಶ್ರೀ ಪರಮಾತ್ಮನೇ ಮಾಡಿಸುವ ನೆಂದು ಉತ್ತಮಜ್ಞಾನಾನುಸಂಧಾನದಿಂದ ಅರಿತು), **ಅನುದಿನದಿ**= ಪ್ರತಿ ದಿನದಲ್ಲಿಯೂ, **ಶಂಕಿಸದೆ**=ಪುಣ್ಯ, ಮಿಶ್ರ, ಪಾಪಕರ್ಮಗಳನ್ನೆಲ್ಲಾ ಶ್ರೀ ಪರಮಾತ್ಮನೇ ಮಾಡಿ ಮಾಡಿಸುತ್ತಿದ್ದಾನೆಂಬ ವಿಷಯದಲ್ಲಿ ಯಾವ ಸಂದೇಹವನ್ನು ಹೊಂದದೆ. ನಿಸ್ಸಂದೇಹಭಾವದಿಂದ, **ಕೊಡು**=ಆ ಸಮಸ್ತ ಕರ್ಮಗಳನ್ನು ಶ್ರೀ ಪರಮಾತ್ಮನಿಗೆ ಅರ್ಪಿಸು. **ವೃಜಿನಾರ್ದನ** ಪಾಪ ಪರಿಹಾರಕನಾದ ಶ್ರೀ ಪರಮಾತ್ಮನು, **ಸದಾ**=ಯಾವಾಗಲೂ. **ಕೈಕೊಂಡು**=ಆ ಸಮಸ್ತ ಕರ್ಮಗಳನ್ನು ತಾನು ಸ್ವೀಕರಿಸಿ, **ತನ್ನವರ**= ತನ್ನ ನಿಜಭಕ್ತರನ್ನು **ಸಂತಯಿಸುವನು**=ಪಾಪಲೇಪವಾಗದಂತೆ ಸಂರಕ್ಷಣ ಮಾಡುತ್ತಾನೆ. ॥೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ:-

ಸಾತ್ತ್ವಿಕಾದಿ ಭೇದದಿಂದ ಇರತಕ್ಕ, ತಾನು ಮಾಡತಕ್ಕ ತ್ರಿವಿಧಕರ್ಮ ಗಳ, ರಾಜಸ ತಾಮಸರಾದ ಅನ್ಯರು ಮಾಡತಕ್ಕ ಆರು ವಿಧ ಕರ್ಮಗಳ, ಅಂತು ಒಂಭತ್ತು ವಿಧ ಕರ್ಮಗಳ ಅಂದರೆ, ಪಾಪಕರ್ಮಗಳ ಪರಮಾತ್ಮಗೆ ಅರ್ಪಿಸ ಬೇಕು ಎಂತ ಹೇಳತಾರೆ ಪರಮಾತ್ಮನೇ ಕರ್ಮ ಮಾಡಿಸೋವನಾಗಿದ್ದಾನೆ,

ಪುನಶ್ಚ ಅವಗೇ ಸಮರ್ಪಣೆ ಎಂಬುದು ಯಾಕೆ ಮಾಡಬೇಕು ಎಂದರೆ ದೃಷ್ಟಾಂತದಿಂದ ಹೇಳತಾರೆ.

ಅಗ್ನಿದೇವರು ಪಚನಮಾಡಿದ ಅನ್ನವನ್ನು, ಪುನಶ್ಚ ಆದೇ ಅಗ್ನಿಯೊಳು ಆಹುತಿರೂಪದಿಂದ ಕೊಡೋವರಾಗತಾರೆ. ಇದರೋಪಾದಿಯಲಿ, ದೇವತೆಗಳಿಗೆ ಸ್ವಾಮಿಯಾದ ಪರಮಾತ್ಮನು, ಬಿಂಬಕ್ರಿಯಾದ್ವಾರಾ ಮಾಡಿ, ಜೀವನ ಕಡೆಯಿಂದ ತತ್ತ್ವೇಶ್ವರ ದ್ವಾರಾ ಮಾಡಿಸಿದ, ಗುಣತ್ರಯುಗಳ ಅನುಸರಿಸಿದ ಸಮಸ್ತವಾದ ದ್ವಂದ್ವಕರ್ಮಗಳ ಮನಸ್ಸಿನಿಂದ, ವಚನದಿಂದ, ದೇಹದಿಂದ ಮಾಡಿದ ಪುಣ್ಯ ಆಯಾ ಕರ್ಮಾಂತರ್ಗತ ಪರಮಾತ್ಮಗೆ, ಅನುಸಂಧಾನದಿಂದ ತಿಳಿದು ಪಾಪಗಳ ಅರ್ಪಿಸೋ ವಿಷಯದಲ್ಲಿ ಸಂದೇಹ ಪಡದೆ ದೃಢಮನಸ್ಕನಾಗಿ ಪ್ರತಿದಿನದಲ್ಲೂ, ಹೃದಯಾಂತರ್ಗತನಾದ ಬಿಂಬಗೆ ಅರ್ಪಿತ ಮಾಡು, ಎಂದರೆ ಕರ್ಮಾಂತರ್ಗತದೇವರಿಗೂ, ದೇಹಾಂತರ್ಗತ ದೇವರಿಗೂ ಐಕ್ಯಚಿಂತನರೂಪದಿಂದ ಅರ್ಪಿಸೋವನಾಗು. ಪಾಪಗಳ ನಾಶ ಮಾಡತಕ್ಕ ಪರಮಾತ್ಮ ಸ್ವೀಕಾರ ಮಾಡಿ ತನ್ನ ಭಕ್ತರನ್ನು ನಿರಂತರ ಎಡ ಬಿಡದೇ ದೋಷಲೇಪವಾಗದಂತೆ ಸಂರಕ್ಷಣ ಮಾಡತಾನೆ.

**ವಿಶೇಷಾರ್ಥ :–**

ಅನ್ನಪಚನ ಎಂಬದು ಅಗ್ನಿಅಂತರ್ಗತನಾದ ಪರಶುರಾಮ ದೇವರು ಮಾಡಿದ್ದೇನೆ ಖರೆ. ಆದರೆ ಅನ್ನಗತ ದೋಷವೇನೇ ಪರಿಹಾರವಾಗೋದಿಲ್ಲ. ಆ ದೋಷ ದಾವದೆಂದರೆ, ಅನ್ನದಲ್ಲಿ ಸಾತ್ತ್ವಿಕಾದಿ ಭೇದದಿಂದ ತ್ರಿವಿಧರಸ ಉಂಟು ತ್ರಿವಿಧ ಅಭಿಮಾನಿಗಳು ದೇವ, ದೈತರು, ಮನುಷ್ಯರು, ಎಂತ ತ್ರಿವಿಧರಸ ಉಪಚಯದಿಂದ ತ್ರಿವಿಧ ಬುದ್ಧಿಯನ್ನು ಕೊಡತಾರೆ. ದೇವರು ಸ್ವೀಕಾರ ಮಾಡತಕ್ಕ ರಸದಲ್ಲಿ ದೋಷವಿಲ್ಲ. ದೇವತೆಗಳು ಸ್ವೀಕಾರ ಮಾಡೋ ರಸದಲ್ಲೂ ದೋಷವಿಲ್ಲ. ಅವರವರ ಸ್ವರೂಪಭೂತರಸ ಸ್ವೀಕಾರ ಮಾಡತಾರೆ. ಅವರವರ ಸ್ವೀಕಾರರಸ ಹೋಗತ ಜೀವಭೋಗ್ಯರಸ ಮಾತ್ರ ಇರುತ್ತದೆ. ಜೀವರಿಗೆ ಸ್ವರೂಪಭೂತರಸವಿಲ್ಲ, ಜಡರಸ ದೇಹಕ್ಕೆ ಉಪಚಯವಾಗತಕ್ಕ ರಸ ಇರೋದಾಗಿ ಅದೆ. ಇದರಲ್ಲಿ ಇರತಕ್ಕ ದೋಷ

ದಾವದರಿಂದ ಪರಿಹಾರವಾಗಬೇಕು ಅಂದರೆ ಅಗ್ನ್ಯಂತರ್ಗತ ಪರಶುರಾಮ ದೇವರಿಂದ ಪರಿಹಾರವಾಗಬೇಕು. ಎಂತ ನೇಮ, ಅನ್ನದೋಷ ಪರಿಹಾರಾರ್ಥ, ವೈಶ್ವದೇವಾಖ್ಯ ಹೋಮ ಎಂಬ ಅನುಸಂಧಾನ ಮಾಡಿ ಅಗ್ನಿಯಲ್ಲಿ ಅನ್ನವನ್ನು ಕೊಟ್ಟರೆ, ಅನ್ನಗತದೋಷ ಬಾಧಿಸದಂತೆ ಪರಮಾತ್ಮ ಮಾಡತಾನೆ. ತತ್ಪೂರ್ವದಲ್ಲಿ ಅಗ್ನಿಪಚನ ಮಾಡಿದಾಗ್ಯೂ, ಇವನ ಪ್ರಾರ್ಥನಾ ಅನುಸರಿಸಿ ಫಲವಾದ್ದರಿಂದ, ದೋಷಪರಿಹಾರಾರ್ಥವಾಗಿ ಈ ಅನುಸಂಧಾನದಿಂದ ಅಗ್ನಿಯಲ್ಲಿ ವೈಶ್ವದೇವಾಖ್ಯಹೋಮ, ಮಾಡೋವನಾಗಬೇಕು. ಈ ಕಾರಣದಿಂದ, ಅನಲಪಕ್ವಗೈಸಿದ ಅನ್ನವನ್ನು ಮತ್ತು ಅನಲನ ಹೋಮಿಸಬೇಕು ಎಂತ ತಾತ್ಪರ್ಯ. ವೈಶ್ವದೇವ ಮಾಡದ ಅನ್ನ ದೇವರು, ಪ್ರಾಣದೇವರು ಉಭಯಪರ ನಿವೇದನ ಆಗಿದ್ದಾಗ್ಯೂ ಮಹಾ ನಿಷೇಧ ಎಂತ ಗರುಡ ಪುರಾಣದಲ್ಲಿ ಹೇಳತದೆ. ಏಕಾದಶೀ ಅನ್ನಭೋಜನವೂ, ವೈಶ್ವದೇವದಿಂದ ರಹಿತವಾದ ಅನ್ನಭೋಜನವೂ ಎರಡೂ ಸಮಾನ ದೋಷದಿಂದ ಯುಕ್ತವಾದದ್ದು ಎಂತ ಉಕ್ತವಾಗಿ ಆದೆ. ದೋಷಗಳು ಪರಿಹಾರವಾಗಬೇಕಾದರೆ ಪಾಪಗಳು ಅರ್ಪಿಸಬೇಕೆಂಬೋದಕ್ಕೆ ಪ್ರಮಾಣ **'ವಚನಾನ್ನಿವೃತ್ತಿಃ ವಚನಾತ್ಪ್ರವೃತ್ತಿಃ'** ಮತ್ತು **'ಯದನ್ಹಾ ಯದ್ರಾತ್ರ್ಯಾ ಪಾಪಮಕಾರಿಷಂ ಮನಸಾ ವಾಚಾ ಹಸ್ತಾಭ್ಯಾಂ ಪದ್ಭ್ಯಾಂ ಉದರೇಣ ಶಿಶ್ನಾ ಅಹಸ್ತದವಲುಂಪತು ಯತ್ಕಿಂಚ ದುರಿತಂ ಮಯಿ'** ಎಂತ ಇರುವ ಪ್ರಮಾಣಾನುಸಾರ, ಪಾಪಗಳು ಸವಿತ್ರಂತರ್ಗತ ಶ್ರೀನಾರಾಯಣದೇವರಿಗೆ ಅರ್ಪಿಸಬೇಕಾದ್ದೇ. ಅಧಿಕಾರಿ ಭೇದ, ಅನುಷ್ಠಾನಭೇದದಿಂದ ಪಾಪ ಪರಿಹಾರಗಳು ಆಗತಾ ಇರತವೆ. ಅರ್ಪಿತ ಮಾತ್ರದಿಂದ ನಿರ್ಲೇಪನಾಗಲಾರ. ಯದ್ಯಪಿ ಪ್ರಮಾಣಾನುಸಾರ ಅರ್ಪಿಸಬೇಕು. ಈ ರೀತ್ಯಾ ಮಾಡೋಣದರಿಂದ 'ಯದನ್ಹಾತ್ ಕುರುತೇ ಪಾಪಂ ತದನ್ಹಾತ್ ಪ್ರತಿಮುಚ್ಯತೇ' ಎಂತಲೂ ಪ್ರಮಾಣ ಹೇಳತದೆ. ಆದ್ದರಿಂದ ಅರ್ಪಿಸೋವನಾಗಬೇಕು. ||೬||

**(೨) ಭಾವ ಪ್ರಕಾಶಿಕೆ– ವ್ಯಾಖ್ಯಾನ :**

ಶ್ರೀ ಪರಮಾತ್ಮನು ನಮ್ಮೊಳಗಿದ್ದು, ಮಾಡಿ ಮಾಡಿಸುವ ಎಲ್ಲಾ

ಕರ್ಮಗಳನ್ನೂ ಪರಮಾತ್ಮನಿಗೆ ಸಮರ್ಪಣ ಮಾಡಬೇಕೆಂದು ದೃಷ್ಟಾಂತ ಸಹಿತವಾಗಿ ಹೇಳುತ್ತಾರೆ.

ಅಗ್ನ್ಯಂತರ್ಗತರಾದ ಶ್ರೀ ಪರಶುರಾಮ ದೇವರೇ ಅನ್ನಾದಿಗಳನ್ನು ಪಕ್ವವನ್ನಾಗಿ ಮಾಡುವರು. ಅಂದರೆ ನಾವು ಒಲೆ ಉರಿಹಾಕಿ, ಅಗ್ನಿಯಿಂದ ಅನ್ನಾದಿಗಳನ್ನು ಪಕ್ವಮಾಡುವೆವಷ್ಟೆ ? ಆ ಪಕ್ವವನ್ನು ಮಾಡುವ ಶಕ್ತಿಯು ಅಗ್ನಿ ದೇವರಿಗೆ ಇಲ್ಲವಾದುದರಿಂದ ಅಗ್ನ್ಯಂತರ್ಯಾಮಿಯಾಗಿದ್ದು, ಪರಶುರಾಮದೇವರು ಮಾಡುವರೆಂದರ್ಥ. ಅದೇ ಅನ್ನವನ್ನೇ ಶ್ರೀ ಪರಮಾತ್ಮನಿಗೆ ಸಾಲಿಗ್ರಾಮಾದ್ಯಧಿಷ್ಠಾನದಲ್ಲಿ ನೈವೇದ್ಯ ಸಮರ್ಪಣೆಮಾಡಿ, ಮತ್ತು ವೈಶ್ವದೇವ ಮಾಡುವಾಗ ಅಗ್ನ್ಯಂತರ್ಗತ ಪರಶುರಾಮಾತ್ಮಕ ಶ್ರೀ ಪರಮಾತ್ಮನಿಗೆ ಸಮರ್ಪಿಸುವ ಸಂಪ್ರದಾಯವು ಪ್ರಸಿದ್ಧವಲ್ಲವೇ ? ಇದರಂತೆ ಶ್ರೀ ಪರಮಾತ್ಮನು ನಮ್ಮ ಮನೋವಾಕ್ಕಾಯಗಳಲ್ಲಿದ್ದು ಮಾಡಿ ಮಾಡಿಸಿದ, ಸಕಲವಾದ ಪುಣ್ಯಪಾಪಾದಿ ಕರ್ಮಗಳನ್ನು ಕೊಡಬಹುದೋ, ಕೊಡದೋ ಎಂಬ ಶಂಕೆಯನ್ನು ಮನಸ್ಸಿನಲ್ಲಿ ಮಾಡದೆ, ಶ್ರೀ ಪರಮಾತ್ಮನಿಗೆ ಅರ್ಪಿಸಿದರೆ ಪಾಪನಾಶಕನಾದ ಪರಮಾತ್ಮನು ತಾನು ಸರ್ವಕಾಲದಲ್ಲಿಯೂ ಸ್ವೀಕರಿಸಿ, ಪಾಪಗಳನ್ನು ಸುಟ್ಟು, ಪುಣ್ಯಫಲವನ್ನು ಭಕ್ತರಿಗೆ ಕೊಟ್ಟು, ಅವರನ್ನು ಸಮಾಧಾನ ಪಡಿಸುವನು. ॥೬॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :

ಈ ಪದ್ಯಕ್ಕೆ ವ್ಯಾಖ್ಯಾನವನ್ನು ಕೊಟ್ಟಿಲ್ಲ.

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ.

"ಅನಲ ಇತಿ"_ಈ ಸಮಸ್ತ ಜಗತ್ತೂ ಭಗವಂತನಿಂದ ಸೃಷ್ಟವಾದದ್ದು. ಈ ಜಗತ್ತಿನಲ್ಲಿರುವ ಸಮಸ್ತವಸ್ತುಗಳೂ ಭಗವಧೀನವೇ ಆಗಿವೆ. ಅವನ ವಸ್ತುಗಳನ್ನು ಅವನಿಗೇ ಅರ್ಪಿಸುವುದು. ಈ ಕ್ರಿಯೆಯನ್ನು ಅಗ್ನಿಯಿಂದ ಪಕ್ವವಾದ ಅನ್ನವನ್ನು ಅಗ್ನಿಯಲ್ಲಿಯೇ ಆಹುತಿರೂಪಾಗಿ ಕೊಡುವ (ವೈಶ್ವದೇವ ಯಜ್ಞ) ದೃಷ್ಟಾಂತದಿಂದ ತಿಳಿಸುತ್ತಾರೆ. ॥೬॥

**(೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ:-**

ಇದೇ ಸಮರ್ಪಣೆ ಸದೃಷ್ಟಾಂತದಿಂದ ತಿಳಿಸಿ, ಇದರಲ್ಲಿ ದೃಢ ಚಿತ್ತ ಇರಬೇಕೆಂದು ಸಹಾ ಬೋಧಿಸುತ್ತಾರೆ, ಅನಲ ಎಂದು. ಅಗ್ನಿಯೇ ಬೇಯಿಸಿದ ಅನ್ನವನ್ನು ಅಗ್ನಿಯಲ್ಲೇ ಮಂತ್ರಗಳಿಂದ ಹೋಮಿಸುವಂತೆ, ದೇವೇಶ ಶ್ರೀಹರಿ ಮಾಡಿಸಿದ ಸಮಸ್ತಕ್ರಿಯೆ ಗಳನ್ನೂ ತಿಳಿದು ಅಂದರೆ. ದೇವರ ಕ್ರಿಯೆಗಳಿಂದ ತತ್ತ್ವೇಶ ಮೊದಲಾದ ಸರ್ವಜೀವಕ್ರಿಯೆಗಳು ವ್ಯಕ್ತಿಯಾಗುವುದಲ್ಲದೆ ಸ್ವತಂತ್ರವಲ್ಲವೆಂದರಿತು, ಶಂಕಿ ಸದೆ, ಅಂದರೆ ಅಜ್ಞರಿಗೆ ಹೇಳಿದ ಸಾಮಾನ್ಯ ಶಾಸ್ತ್ರವಚನದಿಂದ ಸಂಶಯ ಹೆಚ್ಚಿಸಿಕೊಳ್ಳದೆ, ಮನಸ್ಸು ವಾಕ್ಕು ಶರೀರವೆಂಬ ಮೂರರಲ್ಲೂ ಸರ್ವಕ್ರಿಯಾ ದೇವರ ಅಧೀನವೆಂದು ಭಾವನೆ ಮಾಡುವುದೇ ಸಮರ್ಪಣೆ. ಪಾಪ ಪರಿಹಾರಕನಾದ್ದರಿಂದ ವೃಜಿನಾರ್ದನನೆಂಬ ದೇವರು. ಆ ಸಮರ್ಪಣಾ ರೂಪ ಭಾವನೆಯನ್ನಂಗೀಕರಿಸಿ, ತನ್ನ ಭಕ್ತರನ್ನು ಸಂತೋಷಪಡಿಸುವನು. ॥೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸರ್ವಕರ್ಮಸಮರ್ಪಣಾ ವಿಧಾನವನ್ನು ಒಂದು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ–**ಅನಳ ಪಕ್ವವಗೈಸಿ**–ಎಂಬ ಪ್ರಸಕ್ತ ೬ನೆಯ ಪದ್ಯದಿಂದ.

೧. ನಾವು ಪ್ರತಿನಿತ್ಯವೂ ಮಾಡುತ್ತಿರುವ ಕರ್ಮಗಳು ಮೂರು ಪ್ರಕಾರ-

(1) ಕಾಯಿಕ (2) ವಾಚನಿಕ ಮತ್ತು (3) ಮಾನಸಿಕ ಮೂರು ವಿಧ.

ನಮ್ಮ ದೇಹಗತ ಪಂಚಜ್ಞಾನೇಂದ್ರಿಯಗಳ ದ್ವಾರಾ ಶಬ್ದಾದಿ ವಿಷಯಗಳ ಸ್ವೀಕಾರ ಕ್ರಿಯೆ ಮತ್ತು ಪಂಚಕರ್ಮೇಂದ್ರಿಯಗಳ ದ್ವಾರಾ

ಕ್ರಿಯಾರೂಪವಾದ ಬಗೆ ಬಗೆಯ ವ್ಯಾಪಾರವಿಶೇಷಗಳು ಇತ್ಯಾದಿ **ಕಾಯಿಕ ಕರ್ಮಗಳು.** ಅಂದರೆ ದೇಹ ಸಂಬಂಧ ಕರ್ಮಗಳು.

ಸಂಭಾಷಣೆ, ಪಾಠ ಪ್ರವಚನಗಳು, ಪಠಣ, ಮನೋಗತ ಅಭಿಪ್ರಾಯಗಳ ವರ್ಗಾವಣೆ ಇತ್ಯಾದಿ ವಾಗ್ರೂಪವಾದ ಕರ್ಮಗಳಿಗೆ **ವಾಚನಿಕ ಕರ್ಮಗಳು** ಎಂದು ಹೆಸರು.

ಮನಸ್ಸಿನ ದ್ವಾರಾ ಶಬ್ದಾದಿ ವಿಷಯಗಳ ಸನ್ನಿಕರ್ಷ. ಚಿಂತನೆ, ಧ್ಯಾನ, ಉಪಾಸನಾದಿ ಕ್ರಿಯೆಗಳು **ಮಾನಸಿಕ ಕರ್ಮಗಳು.**

ದೇಹ, ವಾಕ್ಕು ಮತ್ತು ಮನಸ್ಸು ಇವುಗಳಿಗೆ **ತ್ರಿಕರಣಗಳೆಂದು** ಹೆಸರು. ಪೂರ್ವೋಕ್ತ ಕರ್ಮಗಳೆಲ್ಲವೂ ಕರಣತ್ರಯಂಗಳ ದ್ವಾರಾ ನಡೆಯುವ ಕ್ರಿಯೆಗಳು.

೨. ಬಿಂಬರೂಪಿಯಾದ ಶ್ರೀ ಪರಮಾತ್ಮನೇ ನಮ್ಮ ದೇಹಗತ ಇಂದ್ರಿಯಗಳಲ್ಲಿ, ಇಂದ್ರಿಯಾಭಿಮಾನಿಗಳಲ್ಲಿ ನಿಂತು, ಜೀವರ ಯೋಗ್ಯತಾನುಸಾರ ಕಾಲ ದೇಶಗಳಿಗನುಗುಣವಾಗಿ ಕರ್ಮಗಳನ್ನು ಪ್ರೇರಿಸಿ, ಬಿಂಬಕ್ರಿಯಾ ದ್ವಾರಾ ತಾನೇ ಮಾಡಿ, ಇಂದ್ರಿಯಾಭಿಮಾನಿಗಳ ದ್ವಾರಾ ಮಾಡಿಸಿ, ಜೀವನಿಂದ ಮಾಡಿಸುವನು.

ಅಂತೆಯೇ ಬಿಂಬನು ವಾಕ್ಕಿನಲ್ಲಿ ಅಂತಸ್ಥಿತನಾಗಿದ್ದು, ಅಗ್ನ್ಯಂತರ್ಗತ ಪರಶುರಾಮ ರೂಪದಿಂದ ವಾಗ್ರೂಪವಾದ ಕರ್ಮಗಳನ್ನು ಮಾಡಿ ಮಾಡಿಸುವನು. ಮನಸ್ಸಿನಲ್ಲಿ ಅಂತಸ್ಥಿತನಾಗಿದ್ದು ಮನೋವ್ಯಾಪಾರಗಳನ್ನು ಮಾಡಿ ಮಾಡಿಸುವನು.

೩. ಹೀಗೆ ಕಾಯಿಕ, ವಾಚನಿಕ, ಮಾನಸಿಕವಾದ ಶುಭ, ಮಿಶ್ರ, ಅಶುಭಗಳೆಂಬ ಸಮಸ್ತಕರ್ಮಗಳನ್ನು ಕರ್ಮಪತಿಯಾದ, ಬಿಂಬರೂಪಿ ಶ್ರೀ ಪರಮಾತ್ಮನೇ ಆ ಜಡಕರ್ಮಗಳಲ್ಲಿ ಪ್ರೇರಕ ರೂಪದಿಂದಿದ್ದು, ಕರ್ಮ

ಪ್ರವರ್ತಕನಾಗಿದ್ದಾನೆಂದು ಉತ್ತಮ ಜ್ಞಾನಾನು ಸಂಧಾನದಿಂದ ತಿಳಿಯ ಬೇಕು. ಅವನೇ ನಿಂತು ಮಾಡಿ ಮಾಡಿಸಿದ ಕರ್ಮಗಳನ್ನು ಅವನ ಪಾದಕಂಜ ಗಳಿಗೆ ಅರ್ಪಿಸುವುದೇ ಸರ್ವಕರ್ಮಸಮರ್ಪಣೆಯ ಅನುಸಂಧಾನ ಕ್ರಮವು.

೪. ಈ ಭಾವವನ್ನು ದಾಸರಾಯರು ಒಂದು ಹೃದಯಂಗಮ ವಾದ ದೃಷ್ಟಾಂತದಿಂದ ವಿವರಿಸುತ್ತಾರೆ. ನಾವು ಅಕ್ಕಿಯನ್ನು ಅಗ್ನಿ ಸಂಪರ್ಕದಿಂದ ಬೇಯಿಸಿ, ಅನ್ನ ಮಾಡುತ್ತೇವೆ. ವೈಶ್ಯದೇವಾದಿ ಹೋಮ ಗಳನ್ನು ಮಾಡುವಾಗ ಅಗ್ನಿಯಿಂದ ಪಕ್ವವಾದ ಅನ್ನವನ್ನ ಪುನಶ್ಚ ಆ ಅಗ್ನಿಯಲ್ಲಿಯೇ ಆಹುತಿ ರೂಪದಲ್ಲಿ ಕೊಡುತ್ತೇವೆ. ಹೀಗೆ ಬಿಂಬರೂಪಿ ಶ್ರೀ ಪರಮಾತ್ಮನಿಂದ ಮಾಡಿಸಲ್ಪಟ್ಟ ಅಖಿಳ ಕರ್ಮಗಳನ್ನು ಅವನಿಗೇ ಸಮರ್ಪಿಸ ಬೇಕೆಂದು, ಪೂರ್ವೋಕ್ತ ದೃಷ್ಟಾಂತದಿಂದ ತಿಳಿಸುತ್ತಾರೆ.

**ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ**–ಎಂದು ದಾಸ **ಶ್ರೇಷ್ಠ ಶ್ರೀ ಪುರಂದರದಾಸರ** ವಚನದಂತೆ, ಜೀವಕೃತಸಮಸ್ತಕರ್ಮ ಗಳನ್ನೂ ಅವನೇ ಕರ್ಮಪತಿಯಾಗಿ ಕರ್ಮಸಾಕ್ಷಿಯಾಗಿ ನಿಂತು ಮಾಡಿ ಮಾಡಿಸುತ್ತಾನೆಂದು ತಿಳಿಯುವ ಪ್ರಕ್ರಿಯೆಯೇ **ಸರ್ವಕರ್ಮಸಮರ್ಪಣೆ** ಎಂದು ಭಾವವು,

೫. ದೇವತೆಗಳಿಗೆ ಈಶನಾದ ಆ ಜಗತ್ಪ್ರಭುವು ತನಗೇ ಅರ್ಪಿಸಿದ ಸಮಸ್ತ ಕರ್ಮಗಳನ್ನೂ ತಾನೇ ಸ್ವೀಕರಿಸಿ, ಪಾಪ ಕರ್ಮಗಳನ್ನು ಸುಟ್ಟು ಪರಿಹರಿಸಿ, ಅವುಗಳ ಲೇಪ ಜೀವರಿಗಿಲ್ಲದಂತೆ ಮಾಡಿ, ಪುಣ್ಯ ಕರ್ಮಗತ ಶುಭರೂಪವಾದ ಸ್ವಾಖ್ಯರಸವನ್ನು ಮಾತ್ರ ತಾನು ಸ್ವೀಕರಿಸಿ, ಆ ಪುಣ್ಯ ಕರ್ಮ ಫಲಗಳನ್ನು ಜೀವರಿಗೆ ಉಣಿಸಿ, ಅಂತಹ ನಿಜ ಭಕ್ತರನ್ನು ಸದಾ ಸಂತೋಷಪಡಿಸಿ, ರಕ್ಷಿಸುವನು ಎಂದು ತಾತ್ಪರ್ಯ. ॥೬॥

# ಪದ್ಯ (೭)

**ಮೂಲ :**

**ಕುದರೆ ಬಾಲದ ಕೊನೆಯ ಕೂದಲ ।**
**ತುದಿವಿಭಾಗವ ಮಾಡಿ ಶತವಿಧ ।**
**ವದರೊಳೊಂದನು ನೂರುಭಾಗವ ಮಾಡಲೆಂತಿಹುದೊ ॥**
**ವಿಧಿಭವಾದಿ ಸಮಸ್ತ ದಿವಿಜರ ।**
**ಮೊದಲು ಮಾಡಿ ತೃಣಾಂತಜೀವರೊ ।**
**ಅಧಿಕ ನ್ಯೂನತೆಯಿಲ್ಲವೆಂದಿಗು ಜೀವ ಪರಮಾಣು ॥ ॥೭॥**

**ಅವತರಣಿಕೆ :—**

ಸಮಸ್ತ ಜೀವರ ಸ್ವರೂಪದೇಹದ ಗಾತ್ರವಿಚಾರವನ್ನು ವಿವರಿಸುತ್ತಾರೆ. **ಕುದುರೆ ಬಾಲದ**– ಎಂಬ ಪ್ರಸಕ್ತ ಸಂಧಿಗತ ೭ನೆಯ ಈ ಪದ್ಯದಿಂದ.

ಕುದುರೆ ಬಾಲದ ಅಗ್ರಭಾಗವನ್ನು ನೂರು ಭಾಗಮಾಡಿ, ಅವುಗಳಲ್ಲಿ ಒಂದಂಶವನ್ನು ಪುನಃ ನೂರು ಭಾಗಗಳಾಗಿ ವಿಭಾಗಿಸಿದರೆ, ಎಷ್ಟು ಸೂಕ್ಷ್ಮವಾದ ಅಂಶವು ಪ್ರಾಪ್ತವಾಗುವುದೋ ಅಂದರೆ ಕುದುರೆ ಬಾಲಾಗ್ರದ ಹತ್ತುಸಾವಿರದ ಒಂದನೆಯ ಅಂಶದಷ್ಟು. ಬ್ರಹ್ಮಾದಿ ತೃಣಾಂತ ಪರ್ಯಂತ ಜೀವರ ಸ್ವರೂಪ ದೇಹವು ಹೆಚ್ಚು ಕಡಿಮೆ ಇಲ್ಲದೇ ಏಕರೀತಿಯಾಗಿರುವುದು ಜೀವನ ಪರಮಾಣುಸ್ವರೂಪ. ॥೭॥

**ಪ್ರತಿಪದಾರ್ಥ :–**

**ಕುದುರೆ ಬಾಲದ** = ಒಂದು ಕುದುರೆಯ ಬಾಲದಲ್ಲಿರುವ **ಕೊನೆಯ** = ತುದಿಯಲ್ಲಿನ **ಕೂದಲ ತುದಿ** = ಕೂದಲಿನ ಕೊನೆಯನ್ನು **ಶತವಿಭಾಗವ**

**ಮಾಡಿ**＝ನೂರು ಭಾಗಗಳಾಗಿ ವಿಭಾಗಿಸಿ, **ಅದರೊಳೊಂದನು**＝ಆ ನೂರನೆಯ ಒಂದಂಶದಲ್ಲಿ ಒಂದು ಭಾಗವನ್ನು, **ನೂರು ಭಾಗವ ಮಾಡಲು** ＝ಪುನಃ ನೂರು ಭಾಗಗಳಾಗಿ ವಿಭಾಗಿಸಿದರೆ (ಅಂದರೆ ಕುದರೆಯ ಬಾಲದ ಕೂದಲಿನ ತುದಿಯ ಹುತ್ತು ಸಾವಿರದ ಒಂದನೆಯ ಅಂಶ) **ಎಂತಿಹುದೋ** ＝ಎಷ್ಟು ಪರಮ ಸೂಕ್ಷ್ಮಾಂಶವು ಬರುವುದೋ, **ವಿಧಿ**＝ಬ್ರಹ್ಮ ದೇವರು, **ಭವಾದಿ**＝ಭವನಾಮಕ ರುದ್ರದೇವರೇ ಆದಿಯಾಗಿ, **ಸಮಸ್ತ ದಿವಿಜರ**＝ಎಲ್ಲಾ ಸಾಂಶರಾದ ದೇವತೆಗಳಿಂದ, **ಮೊದಲು ಮಾಡಿ**＝ಆರಂಭ ಮಾಡಿ ಕೊಂಡು, **ತೃಣಾಂತ**＝ತೃಣ ಜೀವರ ಪರ್ಯಂತ (ತ್ರಿವಿಧ ಜೀವರ) **ಜೀವರೊಳು**＝ತ್ರಿವಿಧವಾದ ಜೀವವರ್ಗದಲ್ಲಿ, **ಎಂದಿಗು** ＝ಅನಾದ್ಯನಂತ ಕಾಲಕ್ಕೂ (ಯಾವಾಗಲೂ), **ಅಧಿಕ**＝ಈ ಪರಿಮಾಣ ಕ್ಕಿಂತ ಹೆಚ್ಚಾಗಲೀ, **ನೂನ್ಯತೆ**＝ಕಡಿಮೆಯಾಗಲೀ, **ಇಲ್ಲ**＝ಇಲ್ಲವೇ ಇಲ್ಲ. **ಜೀವ**＝ಬ್ರಹ್ಮಾದಿ ತೃಣಾಂತ ಜೀವರ ಸ್ವರೂಪವು **ಪರಮಾಣು** ಕುದುರೆಯ ವಾಲಾಗ್ರದ ಹತ್ತು ಸಾವಿರದ ಒಂದು ಅಂಶದಷ್ಟು ಪರಮ ಅಣು ರೂಪದಷ್ಟು ಸೂಕ್ಷ್ಮವಾಗಿದೆ. ॥೭॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಜೀವಾಂತರ್ಗತ ಪರಮಾತ್ಮ ಒಬ್ಬನೇ ನಿಯಾಮಕ. ಬ್ರಹ್ಮ ವಾಯ್ವಾದಿಗಳಿಗೂ ನಿಯಾಮಕತ್ವ ಇಲ್ಲ, ಎಂತ ಹಿಂದೆ ಹೇಳಲ್ಪಟ್ಟಿದೆ. ಅದಕ್ಕೆ ಕಾರಣವೂ ಜೀವನ ಪರಿಮಿತಿಯೂ ಹೇಳತಾರೆ. ಇಲ್ಲಿಂದ ಜೀವನ ಸ್ವರೂಪ ದೇಹ ವಿಚಾರ ಹೇಳತಾರೆ.

ಕುದುರೆ ಬಾಲಗತ ಒಂದು ಕೂದಲನ್ನು ತೆಗೆದುಕೊಂಡು, ಆ ಕೂದಲು ಕೊನೆಯನ್ನು ನೂರು ಪ್ರಕಾರ ವಿಶೇಷಾಕಾರದಿಂದ ಖಂಡಿಸಿದರೆ, ನೂರು

ಭಾಗಗಳು ಖಂಡಖಂಡವಾಗಿ ಪ್ರತ್ಯೇಕ ಪ್ರತ್ಯೇಕವಾಗತದೆ. ಭಾಗವಾಗಿ ಇರತಕ್ಕ ಆ ನೂರರ ಒಳಗೆ ಒಂದು ಭಾಗ ತೆಗೆದುಕೊಂಡು, ಆ ಒಂದ ರನ್ನ ನೂರಾಗಿ ಖಂಡಿಸಿದರೆ ಆ ನೂರರ ಒಳಗೆ ಒಂದು ಭಾಗ, ಏಷ್ಟು ಪರಿಮಿತವಾದ ಸೂಕ್ಷ್ಮದಿಂದ ಇರೋದೋ ಅಷ್ಟೇ ಪರಿಮಿತದಿಂದ, ಬ್ರಹ್ಮ ರುದ್ರ ಮೊದಲಾದ ಸಮಸ್ತರಾದ ಸಾಂಶರಾದ ದೇವತೆಗಳ ಆರಂಭಮಾಡಿ ಮತ್ತು ನಿರಂಶರಾದ ಮಾನುಷ ಗಂಧರ್ವರು ಆರಂಭಮಾಡಿ ತೃಣಾಂತ ತ್ರಿವಿಧ ಜೀವರಲ್ಲಿ ಜೀವಸ್ವರೂಪ ಪರಮಾಣು ಎಂಬುದು ಪೂರ್ವೋಕ್ತ ದೃಷ್ಟಾಂತದಷ್ಟೇ ಪರಮಸೂಕ್ಷ್ಮವಾದದ್ದು. ಅನಾದ್ಯನಂತಕಾಲಕ್ಕೂ ಅದರಕಿಂತಲೂ ಅಧಿಕವಾಗೋಣವೂ ಇಲ್ಲ, ಕಡಿಮೆಯಾಗೋಣವೂ ಇಲ್ಲ, ಶಶ್ವದೇಕಪ್ರಕಾರ ಇರುತ್ತಾರೆ. ಇದು ಬ್ರಹ್ಮಾದಿ ಸರ್ವಜೀವರಿಗೂ ಒಂದೇ ನೇಮ. ಇದರಕಿಂತಲೂ ಕೊನೆಯದಾದ ಪರಮಾಣುಸ್ವರೂಪ ರಮಾ ದೇವೇರು. ಇವರಕಿಂತಲೂ ಕೊನಿಯಾದವನು ಅಪರಿಚ್ಛಿನ್ನನಾದ ಶ್ರೀಪರ ಮಾತ್ಮ, ಪರಮಾಣುಸ್ವರೂಪನೆಂದು ತಾತ್ಪರ್ಯ.

**ವಿಶೇಷಾರ್ಥ :-**

**ಅಣುಭಾಷ್ಯೇ ಚತುರ್ಥಾಧ್ಯಾಯೇ-** ವೃದ್ಧಿಹ್ರಾಸವಿವರ್ಜಿತಾಃ । ಮುಕ್ತಾನಂದಾದೀನಾ ವೃದ್ಧಿಹ್ರಾಸೇನ ವಿದ್ಯತೇ । ಕಿಂತು ಏಕಪ್ರಕಾರೇಣೈವ ಅವಸ್ಥಾನಾಂ ಕುತಃ ? ಸ ಏಷ ಏತಸ್ಮಿನ್ ಬ್ರಹ್ಮಣಿ ಸಂಪನ್ನೇ ನ ಜಾಯತೇ । ನ ಮ್ರಿಯತೇ । ನ ಹೀಯತೇ । ನ ವರ್ಧತೇ। ನ ಸಹತೇ ಸ್ಥಿತ ಏವ ಸದಾ ಭವಿಷ್ಯತಿ ॥ ಇತಿ ಶ್ರುತಿಃ ।.

**ಪ್ರಕಾಶಸಂಹಿತಾಯಾಂ**-ಅನಂತರೂಪೈಃ ಸರ್ವಾಗಂ ಸ್ವರೂಪೇಣ ಹ್ಯಣೋರ್ವೃದ್ಧಿ ನ ಯುಜ್ಯತೇ । ನೋ ಹಾನಿಃ ಪುನರಾವೃತ್ತಿಃ ದುಃಖಾ ಜ್ಞಾನ ಭಯಾದಯಃ ॥ ದೇವತೆಗಳಿಗೆ ಅಣಿಮಾದಿಗಳು ಹೇಳಿ, ರುದಾದ್ಯ ಪೇಕ್ಷಯಾ ವಾಯು-ಬ್ರಹ್ಮರು ಅಣುಗಳಾಗುತ್ತಾರೆಂದು ಪ್ರಮಾಣಗಳು

ಅವೆ. ಆ ಪ್ರಮಾಣಗಳು ಸ್ವರೂಪ ವ್ಯತಿರಿಕ್ತ ತಮ್ಮ ತಮ್ಮ ಸ್ಥೂಲಶರೀರಗಳ ವಿಚಾರವೆಂದು ತಾತ್ಪರ್ಯ.

**ಜೀವರಪರಮಾಣುಪ್ರಮಾಣ-** ಅಶ್ವಬಾಲಾಗ್ರಮಾದಾಯ ವಿಭಜ್ಯ ಶತಧಾಹಿ ತತ್। ಪುನಶ್ಚ ಶತಧಾ ಭಿನ್ನಂ ಕಿಯನ್ಮಾನಂ ಭವಿಷ್ಯತಿ। ತಾವದ್ಬ್ರಹ್ಮಾದಿ ಜೀವಾನಾಂ ಪರಿಮಾಣಂ ಪ್ರಕೀರ್ತಿತಂ. ॥೭॥

## (೨) "ಭಾವಪ್ರಕಾಶಿಕೆ"-ವ್ಯಾಖ್ಯಾನ

ಪರಮಾತ್ಮನು ಜೀವರಲ್ಲಿ ಪರಮಾಣುವಾದ ಅನೇಕ ರೂಪಗಳಿಂದ ವಾಸವಾಗಿರುವನೆಂಬ ಭಗವನ್ಮಹಿಮೆಯನ್ನು ಮುಂದಿನ ಪದ್ಯದಲ್ಲಿ ಹೇಳುತ್ತಾ, ಈ ಪದ್ಯದಿಂದ ಜೀವರ ಪರಿಮಾಣವನ್ನು ಹೇಳುತ್ತಾರೆ. ಕುದುರೆಯ ಬಾಲದ ಒಂದು ಕೂದಲನ್ನು ಕಿತ್ತು, ಅದರ ಕೊನೆಯ ಭಾಗವನ್ನು ಮಾತ್ರ ತೆಗೆದುಕೊಂಡು. ಅದನ್ನು ನೂರು ಭಾಗವನ್ನಾಗಿ ಸೀಳಿ, ಸೀಳಿದ ಒಂದು ತುಣಕನ್ನು ನೂರು ಭಾಗವಾಗಿ ತುಣುಕು ಮಾಡಿದರೆ ಎಷ್ಟು ಇರುವುದೋ, ಅಷ್ಟು ಮಾತ್ರವೇ ಬ್ರಹ್ಮ ಮೊದಲು ತೃಣ ಜೀವರವರೆಗೆ ಎಲ್ಲಾ ಜೀವರ ಸ್ವರೂಪಪರಿಮಾಣವು ಇರುವುದು. ಬ್ರಹ್ಮಾದಿಜೀವರ ಪರಿಮಾಣವು ದೊಡ್ಡದೆಂದಾಗಲೀ, ತೃಣಾದಿ ಜೀವರ ಪರಿಮಾಣವು ಸಣ್ಣದೆಂದಾಗಲೀ, ಹೆಚ್ಚು ಕಡಿಮೆಯು ಎಂದಿಗೂ ಇಲ್ಲ.

**"ಅಶ್ವವಾಲಾಗ್ರಮಾದಾಯ ವಿಭಜ್ಯ ಶತಧಾಹಿತತ್ ।**
**ಪುನಶ್ಚ ಶತಧಾ ಭಿನ್ನಂ ಕಿಯನ್ಮಾನಂ ಭವಿಷ್ಯತಿ ।**
**ತಾವದ್ಬ್ರಹ್ಮಾದಿ ಜೀವಾನಾಂ ಪರಿಮಾಣಂ ಪ್ರಕೀತೀತಮ್"॥**

**-ತತ್ತ್ವಸಾರ ಪ್ರಮಾಣ.** ॥೭॥

### (೩) ಭಾವದರ್ಪಣ ಟೀಕಾ ವ್ಯಾಖ್ಯಾನ

**"ಅಶ್ವವಾಲಾಗ್ರಮಾದಾಯ ವಿಭಜ್ಯ ಶತಧಾ ಹಿ ತತ್ ।**
**ಪುನಶ್ಚ ಶತಧಾ ಭಿನ್ನಂ ಭವಿಷ್ಯತಿ ॥**
**ತಾವದ್ಬ್ರಹ್ಮಾದಿ ಜೀವಾನಾಂ ಪರಿಮಾಣಂ ಪ್ರಕೀರ್ತಿತಮ್" ॥**

**–ಎಂಬ ತತ್ತ್ವಸಾರಾನುಸಾರ** ಜೀವರ ಪರಿಮಿತಿ ಇಷ್ಟು ಎಂದು ತಿಳಿ ಹೇಳುತ್ತಾರೆ. ॥೭॥

### (೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

ಜೀವ ಪರಿಮಾಣಂ । "ಬಾಲಾಗ್ರ ಶತಭಾಗಸ್ಯ ಶತಧಾಭಿದ್ಯ ತಶ್ಚಯಃ ॥ ಭಾಗೋ ಜೀವಃ ಸ ವಿಜ್ಞೇಯಃ ಸ ಅನಂತ್ಯಾಯ ಕಲ್ಪತೇ" ॥ ಇತಿ ಶ್ರುತ್ಯುಕ್ತಮಾಹ– "ಕುದುರೆ"–ಇತಿ ॥ "ವಿಧಿ"– ಇತಿ ॥ ಇದೇ ಬ್ರಹ್ಮಾದಿಗಳಿಗಳಿಗೆ ಒಂದೇ ಪ್ರಮಾಣ. ಅಧಿಕಾರಾವನಾಭೇದ– ಇತಿಪೂರ್ವಾರ್ಯಾಃ. ॥೭॥

**ಕನ್ನಡಾರ್ಥ :–**

"ಕುದುರೆಯ ಬಾಲದ ಕೂದಲಿನ ತುದಿಯನ್ನು ನೂರು ಭಾಗ ಮಾಡಬೇಕು. ಅದರ ಒಂದು ಭಾಗವನ್ನು ಮತ್ತೆ ನೂರು ಸಲ ವಿಭಜಿಸಬೇಕು. ಆ ಕೊನೆಯ ನೂರನೆಯ ಒಂದು ಭಾಗಕ್ಕೆ ಜೀವನ ಪರಿಮಾಣವು ಸರಿಹೋಗುತ್ತದೆ"– ಇದು ಶ್ರುತಿಪ್ರಮಾಣವು. ಇದರಂತೆ ಜೀವನ ಪರಿಮಾಣವನ್ನು ಹೇಳುತ್ತಾರೆ– "ಕುದುರೆ"– ಎಂಬ ಪದ್ಯದಿಂದ. ಈ ಜೀವರ ಪರಿಮಾಣದ ವಿಷಯದಲ್ಲಿ– "ಇದೇ ಬ್ರಹ್ಮಾದಿಗಳಿಗೆ"– ಎಂಬ ಪ್ರಾಚೀನಆರ್ಯರ ವಚನಗಳೇ ಪ್ರಮಾಣವಾಗಿವೆ. ॥೭॥

### (೫) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ

ಶಾಸ್ತ್ರಸಿದ್ಧ ಜೀವಸ್ವರೂಪ ತಿಳಿಸುತ್ತಾರೆ ಎಂದು. ಕುದುರೆ ಬಾಲದ

ಕೊನೆಯ ಸೂಕ್ಷ್ಮ ಕೂದಲ ಕೊನೆಯನ್ನು ನೂರು ಭಾಗ ಮಾಡಿ, ಆ ನೂರು ಭಾಗದೊಳಗೆ ಒಂದು ಭಾಗವನ್ನು ಪುನಃ ನೂರು ಭಾಗ ಮಾಡಿದರೆ ಎಷ್ಟು ಸೂಕ್ಷ್ಮಅಣು ಇರುವುದೋ, ಅಷ್ಟೇ ಸೂಕ್ಷ್ಮಾಣುಸ್ವರೂಪವು ಬ್ರಹ್ಮಾದಿತೃಣಾಂತ ಸರ್ವಜೀವರ ಜ್ಞಾನರೂಪ ಸರ್ವಾವಯವೂ ಇರುವುದು. ಇದಕ್ಕೆ ಹೆಚ್ಚು ಕಡಿಮೆ ಇಲ್ಲ.

**ಪ್ರಮಾಣ:-**

**ತನ್ಮಧ್ಯೇಚ ಸದಾ ಜೀವಃ ಸ್ವರೂಪಾವಯವೈಸ್ಸದಾ ।**
**ಸ್ವರೂಪೇಂದ್ರಿಯ ಯುಕ್ತಿಸ್ಸನ್ ಜ್ಞಾನರೂಪಶರೀರವಾನ್ ॥**
**ವರ್ತತೇತಸ್ಯ ಚೈತದ್ಧಿ ಪ್ರಮಾಣಮಿಹಕಥ್ಯತೇ ।**
**ಅಶ್ವಬಾಲಸ್ಥರೋಮಾಗ್ರಂ ಶತಭಾಗತಯಾ ಕೃತಂ ॥**
**ತಾವತ್ ಪ್ರಮಾಣಂ ಜೀವಸ್ಯ ಸ್ವರೂಪಂ ಸದ್ಭಿರುಚ್ಯತೇ ।**
**ಬ್ರಹ್ಮಾದಿ ಸರ್ವಜೀವಾನಾಂ ಪ್ರಮಾಣಂ ಚೇದಮೇವ ಹಿ ॥**

**ಎಂಬ ಅಧ್ಯಾತ್ಮಮಾಲಾರ್ಥ ಇದರಿಂದ ವಿವರಿಂದ ವಿವರಿಸಲ್ಪಟ್ಟಿತು ॥೭॥**

# ಸರ್ವವ್ಯಾಖ್ಯಾನಸಾರಸಂಗ್ರಹ

ಬ್ರಹ್ಮಾದಿತೃಣಾಂತ ಜೀವರ ಪರ್ಯಂತ, ಸ್ವರೂಪದೇಹದ ಪರಿಮಾಣ ವಿಚಾರವನ್ನು ತಿಳಿಸುತ್ತಾರೆ- **ಕುದುರೆಬಾಲದ**- ಎಂಬ ಪ್ರಸಕ್ತ ೭ನೆಯ ಪದ್ಯದಿಂದ.

೧. ಕುದುರೆಯ ಬಾಲವನ್ನು ಆಧಾರವಾಗಿ ತೆಗೆದುಕೊಂಡಿದೆ. ಕುದುರೆಯ ಬಾಲವು ನೀಳವಾಗಿದ್ದು, ಕೂದಲಿನ ಮಂದವು ಏಕಪ್ರಕಾರ

ವಾಗಿರುವುದು. ಇಂತಹ ಕುದುರೆಯ ಕೂದಲಿನ ಅಗ್ರಭಾಗವನ್ನು ನೂರು ಭಾಗಗಳಾಗಿ ವಿಭಾಗಿಸಬೇಕು. ಆಗ ಪ್ರತಿ ಅಂಶವೂ ನೂರನೆಯ ಒಂದು ಭಾಗವಾಗಿರುವುದು. ಪುನಃ ನೂರನೆಯ ಒಂದು ಅಂಶವನ್ನು ನೂರು ಭಾಗ ವಿಭಾಗಿಸಿದರೆ. ಬರುವ ಅಂಶವು ಕುದುರೆಯ ಬಾಲದ ತುದಿಯ ಹತ್ತು ಸಾವಿರದಲ್ಲಿ ಒಂದು ಅಂಶವಾಗಿರುವುದು. ಈ ಅಂಶದಷ್ಟೇ ಪರಿಮಾಣ ಸಮಸ್ತ ಜೀವರಾಶಿಗಳ ಸ್ವರೂಪದೇಹದ ಗಾತ್ರವು.

೨. ಚತುರ್ಮುಖ ಬ್ರಹ್ಮದೇವರು ಜೀವಕೋಟಿಯಲ್ಲಿ ಉತ್ತಮರು. ಅಂತೆಯೇ ತ್ರಿವಿಧರಾದ ತೃಣಜೀವರು ತಾರತಮ್ಯಶ್ರೇಣಿಯಲ್ಲಿದ್ದಾರೆ. ಬ್ರಹ್ಮದೇವರು ಆರಂಭಮಾಡಿಕೊಂಡು, ರುದ್ರಾದಿ ಸಕಲದೇವತಾವರ್ಗ ಮೊದಲು ಮಾಡಿ, ತೃಣಾಂತ ತ್ರಿವಿಧಜೀವರ ಸ್ವರೂಪದೇಹವು ಪೂರ್ವೋಕ್ತ ದೃಷ್ಟಾಂತದಂತೆ ಅತ್ಯಂತ ಪರಮಾಣುರೂಪದಲ್ಲಿ ಸೂಕ್ಷ್ಮ ವಾಗಿರುವುದು, ಈ ಪರಿಮಾಣದಲ್ಲಿ ಎಂದೆಂದಿಗೂ ನ್ಯೂನವಾಗಲೀ ಅಧಿಕ ವಾಗಲೀ ಇಲ್ಲ, ಎಲ್ಲಾ ಏಕರೀತಿಯ ಪರಿಮಾಣವನ್ನು ಹೊಂದಿದೆ.

೩. ಹಾಗಾದರೆ ಜೀವರಲ್ಲಿ ತಾರತಮ್ಯವಿಲ್ಲವೇ ? ಎಂಬ ಪ್ರಶ್ನೆ ಏಳು ವುದು ಸಹಜ. ಈ ನಿಚೋಚ್ಚಭಾವವು ಗುಣತಾರತಮ್ಯಕ್ಕೆ ಸಂಬಂಧ ಪಟ್ಟಿದ್ದು ; ಸ್ವರೂಪದೇಹದ ಪರಿಮಾಣಕ್ಕಲ್ಲ. ಜೀವರ ಸ್ವರೂಪಗಳ ಜ್ಞಾನ, ಇಚ್ಛಾ ಮತ್ತು ಕ್ರಿಯಾಶಕ್ತಿಗಳೆಂಬ ಧರ್ಮಗಳು ತಾರತಮ್ಯ ಭಾವವನ್ನು ಹೊಂದಿವೆ. ಇದಕ್ಕೆ "ಗುಣತಾರತಮ್ಯ"– ವೆಂದು ಹೆಸರು ಈ ತಾರತಮ್ಯಕ್ರಮದಲ್ಲಿ ಚತುರ್ಮುಖ ಬ್ರಹ್ಮದೇವರು ಜೀವೋತ್ತಮರೆನಿಸು ವರು. ॥೭॥

# ಪದ್ಯ (೮)

**ಮೂಲ :–**

**ಜೀವನಂಗುಷ್ಟಾಗ್ರಮೂರುತಿ ।**
**ಜೀವನಂಗುಟಿಮಾತ್ರಮೂರುತಿ ।**
**ಜೀವನ ಪ್ರಾದೇಶ ಜೀವಾಕಾರ ಮೂರ್ತಿಗಳು ॥**
**ಏವಮಾದಿ ಅನಂತರೂಪದಿ ।**
**ಯಾವವಯವಗಳೊಳು ವ್ಯಾಪಿಸಿ ।**
**ಕಾವ ಕರುಣಾಳುಗಳ ದೇವನು ಈ ಜಗತ್ತ್ರಯವ ॥ ॥೮॥**

**ಅವತರಣಿಕೆ :–**

ದೇಹಗತನಾಗಿ. ದೇಹಾದ್ಯಂತ ವ್ಯಾಪ್ತವಾಗಿರುವ ಭಗವದ್ರೂಪಗಳ ವಿಚಾರ ತಿಳಿಸುತ್ತಾರೆ. **ಜೀವನಂಗುಷ್ಟಾಗ್ರಮೂರುತಿ** ಎಂಬ ಪ್ರಸಕ್ತ ಸಂಧಿಗತ ೮ನೆಯ ಈ ಪದ್ಯದಿಂದ.

1. ಜೀವಸ್ವರೂಪದ ಅಂಗುಷ್ಠಾಗ್ರಮೂರುತಿ ಎಂಬ **ಮೂಲೇಶ** ನಾಮಕ ಪರಮಾತ್ಮ. 2. ಜೀವಸ್ವರೂಪದ ಅಂಗುಟಾಗ್ರಮೂರುತಿ ಎಂಬ **ಅಗ್ರೇಶ** ನಾಮಕ. 3. ಜೀವನ ಪ್ರಾದೇಶ ಮೂರುತಿ 4. ಜೀವಸ್ವರೂಪಾದ್ಯಂತ ಕರಚರಣಾದ್ಯವಯವಗಳಿಂದ ವ್ಯಾಪ್ತನಾದ **ಜೀವಾಕಾರ**ಮೂರುತಿ ಈ ರೀತಿ ಸ್ವರೂಪ, ಹಾಗೂ ಇತರ ಶರೀರಗಳಲ್ಲಿ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನು ಅತ್ಯಂತ ಕರುಣಾಮಯನು. ಸಮಗ್ರ ಜಗತ್ತಿನ ಸಂರಕ್ಷಕ ಎಂದು ತಿಳಿಸುತ್ತಾರೆ. ॥೮॥

**ಪ್ರತಿಪದಾರ್ಥ :-**

**ಜೀವನ** = ಅತ್ಯಣುಸ್ವರೂಪನಾದ ಜೀವನ, **ಅಂಗುಷ್ಠಾಗ್ರ ಮೂರುತಿ** = ಹೆಬ್ಬೆರಳಿನ ತುದಿಯ ಭಾಗದಷ್ಟು ಪರಿಮಿತ ಭಗವದ್ರೂಪ, **ಜೀವನ** = ಜೀವ ಸ್ವರೂಪದೇಹದ, **ಅಂಗುಟಿಮಾತ್ರಮೂರುತಿ** = ಹೆಬ್ಬೆರಳಿಷ್ಟು ಗಾತ್ರದ ಭಗವದ್ರೂಪ, **ಜೀವನ** = ಜೀವಸ್ವರೂಪದೇಹದ, **ಪ್ರಾದೇಶ** = ಗೇಣು ಉದ್ದದ (ಹೆಬ್ಬೆರಳು ಮತ್ತು ತೋರು ಬೆರಳು ಇವುಗಳ ನಡುವಿನ ಅಂತರ) ಪರಿಮಿತ ಭಗವದ್ರೂಪ, **ಜೀವಾಕಾರ** = ಜೀವನ ಸ್ವರೂಪ ದೇಹದಷ್ಟು ಆದ್ಯಂತ ವ್ಯಾಪಿಸಿರುವ, **ಮೂರ್ತಿಗಳು** = ಪೂರ್ವೋಕ್ತ ಭಗದ್ರೂಪಗಳು, **ಏವಮಾದಿ** = ಇವೇ ಮೊದಲಾದ, **ಅನಂತರೂಪದಿ** = ಅಸಂಖ್ಯಾತವಾದ ರೂಪ ಸಮೂಹಗಳಿಂದ, **ಯಾವತ್ ಅವಯವಗಳೊಳು** = ರೋಮ, ನಖ, ಇತ್ಯಾದಿ ಸಮಸ್ತಅವಯವ ಗಳಲ್ಲಿ, **ವ್ಯಾಪಿಸಿ** = ಓತಪ್ರೋತನಾಗಿ ವ್ಯಾಪಿಸಿಕೊಂಡು (ನವನಾರೀಕುಂಜ ರದ ದೃಷ್ಟಾಂತದಂತೆ), **ಕರುಣಾಳುಗಳ ದೇವನು** = ಕರುಣಾಪೂರ್ಣನಾದ ಭಗವಂತನು, **ಈ ಜಗತ್ರಯವ** = ಮೂರು ಲೋಕಗಳನ್ನು, **ಕಾವ** = ಸಂರಕ್ಷಿಸುವನು. (ತ್ರಿವಿಧರ ಸ್ವರೂಪ ದೇಹಗಳನ್ನು ನಾಶವಾಗದಂತೆ ಕಾಪಾಡುತ್ತಾನೆ- ಇದು **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ** ದ ಪ್ರಕಾರ ಅರ್ಥವಿವರಣೆ). ॥೮॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವಾಂತರ್ಗತ ಪರಮಾತ್ಮನ ವ್ಯತಿರಿಕ್ತ ಅನ್ಯದೇವತೆಗಳು ಇಲ್ಲ ಎಂತ ಮೇಲೆ ಹೇಳಲ್ಪಟ್ಟಿತು. ಜೀವಾಂತರ್ಗತನಾದ ಪರಮಾತ್ಮ ಜೀವಾಪೇಕ್ಷಯಾ ಅಣುರೂಪ ತೆಗೆದುಕೊಂಡಿದ್ದಾನೆ. ಎಂತಲೂ. ಅಂಥ ಅಣು ಆಗತಕ್ಕ ಸಾಮರ್ಥ್ಯ ಬ್ರಹ್ಮ- ವಾಯ್ವಾದಿಗಳಿಗೂ ಇಲ್ಲ ಎಂತಲೂ ಹೇಳುತ್ತಾರೆ.

ಪೂರ್ವೋಕ್ತ ಪ್ರಕಾರ ಜೀವ ಅತ್ಯಣು. ಅವನಲ್ಲಿ ಅವನ ಕರಗತ

ಅವನ ಹೆಬ್ಬೆಟ್ಟಿನ ಅಗ್ರಭಾಗ ಪರಿಮಿತವಾದ ಭಗವದ್ರೂಪ ಒಂದು. ಅಗ್ರ ಎಂದರೆ ಹೆಬ್ಬೆಟ್ಟು ಕೀಲು ಆರಂಭಮಾಡಿ ಮ್ಯಾಲೆ ಭಾಗಕ್ಕೆ ಅಗ್ರಭಾಗ ಎಂತ ಸಂಕೇತ. ಜೀವನ ಕರಗತ ಆದ್ಯಂತ ಅಂಗುಷ್ಟ ಪರಿಮಿತ ಮೂರ್ತಿ ಒಂದು. ಜೀವನ ಪ್ರಾದೇಶ ಮೂರ್ತಿಯೆಂದು. ಪ್ರಾದೇಶ ಎಂದರೆ, ಅಂಗುಷ್ಟ ತರ್ಜನಿ ಬೆರಳು ದೂರ ಮಾಡಿದರೆ ಆಗತಕ್ಕ ಅಳತೆಯ ಪರಿಮಿತಿಗೆ ಪ್ರಾದೇಶ ಎಂತ ಹೆಸರು. ಇಷ್ಟು ಮಾತ್ರ ಪರಿಮಿತಿರೂಪ ಒಂದು, ಜೀವನ ದೇಹಾ ಕಾರರೂಪ ಒಂದು, ಎಂದರೆ ಪಾದ ಆರಂಭಮಾಡಿ ಶಿರದವರೆಗೂ ಅಖಂಡ ರೂಪ. ಇವೇ ಮೊದಲಾದ ಭಗವದ್ರೂಪಗಳು ಅನಂತರೂಪಗಳಿಂದ ರೋಮ ನಖ ಬೆರಳುಗಳು ಯಾವತ್ತೂ ಚಿದಾನಂದ ಶರೀರಕ್ಕೆ ಅವಯುವ ಸಂಕೇತಗಳು. ಇಂಥಾ ಯಾವತ್ತೂ ಅವಯುವಗಳಲ್ಲಿ ತದಾಕಾರ, ಖಂಡಾಖಂಡ ರೂಪಗಳಿಂದಲೂ. ಈ ತನ್ನ ಒಂದೊಂದು ರೂಪದಲ್ಲಿ ನವನಾರೀಕುಂಜರ ದೃಷ್ಟಾಂತದಿಂದಲೂ, ಅನೇಕವಿಧವಾದ ಅನಂತ ರೂಪಗಳಿಂದ ಸಹಿತವಾದ ಒಂದೊಂದು ರೂಪನಾಗಿ, ಈ ಪ್ರಕಾರರೂಪಗಳಿಂದ ವ್ಯಾಪಿಸಿ ಜೀವನಲ್ಲಿ ಇದ್ದು ಸಂರಕ್ಷಣೆ ಮಾಡತಾನೆ. ಎಂದರೆ ಸ್ಥೂಲದೇಹಾಂತರ್ಗತನಾದ ಪರಮಾತ್ಮ ಸ್ಥೂಲದೇಹದಿಂದ ಹೊರಗೆ ಹೊರಟರೆ ಸ್ಥೂಲದೇಹಕ್ಕೆ ನಾಶ ಕಾಣತದೆ, ಇಲ್ಲದಿದ್ದರೆ ಇಲ್ಲ. ತದ್ವತ್ ಜೀವಾಂತರ್ಗತನಾದ ಪರಮಾತ್ಮ ಹೊರಗೆ ಹೊರಟರೆ ಜೀವ ನಾಶ ಕಾಣಬೇಕಾದೀತು. ಅತಏವ ಜೀವಾಂತ ರ್ಗತ ನಾದ ಪರಮಾತ್ಮ ಅನಾದ್ಯನಂತ ಕಾಲಕ್ಕೂ ಜೀವನನ್ನು ಬಿಟ್ಟು ವಿಯೋಗ ನಾಗದೇ ನಾಶರಹಿತನನ್ನಾಗಿ ಮಾಡಿ ರಕ್ಷಿಸತಾ ಇರತಾನೆ. ಇಂಥಾ ಸರ್ವೋ ತ್ತಮನಾದ ದೇವರಲ್ಲಿ ಪರಮಾಂತಃಕರಣಪೂರ್ವಕ ಭಕ್ತಿ ಇರತಕ್ಕ ಜೀವರಿಗೆ ಸ್ವಾಮಿ ಎಂತ ಕರಿಸತಕ್ಕ ಶ್ರೀಪರಮಾತ್ಮನು. ಈ ವಿಧವಾದ ತ್ರಿವಿಧಜೀವರ ಅಂತರ್ಗತನಾಗಿ ಅವರವರ ಸ್ವರೂಪಕ್ಕೆ ನಾಶ ಬಾರದಂತೆ ರಕ್ಷಿಸುತ್ತಾ ಇರತಾ ನೆಂತ ತಾತ್ಪರ್ಯ. ಜಗಶ್ಬಬ್ದ ಜೀವಪರವೆಂದು ತಾತ್ಪರ್ಯ.

**ವಿಶೇಷಾರ್ಥ**

ಜೀವಾಂತರ್ಗತದಲ್ಲಿ ಏವ ಮೂರು ರೂಪಗಳಿಂದ ಪಶಮಾತ್ಮ ಇದ್ದಾನೇ ಹೊರ್ತು, ಅನ್ಯರಾದ ಬ್ರಹ್ಮ-ವಾಯ್ವಾದಿಗಳು ಇಲ್ಲ ಎಂತ ಮ್ಯಾಲೆ ಹೇಳಿದೆ.

ಆಗೋದಿಲ್ಲ ಎಂತ ತಾತ್ಪರ್ಯ. ನವರ್ಧತೇ– ಪರಮಾತ್ಮನಿಂದ ಜೀವರ ಸ್ವರೂಪ ಪೂರ್ವದಕ್ಕಿಂತಲೂ ದೊಡ್ಡದೂ ಆಗೋದಿಲ್ಲ. ನ ಸಹತೇ– ಪರಮಾತ್ಮನಿಂದ ಅಣುಗಳು ಆಗೋದಿಲ್ಲ. ಎಂದರೆ ಸ್ವರೂಪಾಪೇಕ್ಷಯಾ ಅಣು ಆಗೋದಿಲ್ಲ ಎಂತ ತಾತ್ಪರ್ಯ. **ಸ್ಥಿತ ಏವ ಸದಾ ಭವತಿ** ಎಂದರೆ, ಅನಾದಿಯಿಂದ ದಾವ ಸ್ಥಿತಿಯಿಂದ ಇದ್ದಾನೋ ಅಂಥಾ ಸ್ಥಿತಿಯಿಂದಲೇ, **ಸದಾ ಭವತೀ** ಕಾಲತ್ರಯದಲ್ಲೂ ಇರುತ್ತಾನೆ, ಆದಕ್ಕೆ ಅನ್ಯಥಾ ಆಗೋದಿಲ್ಲ. **ಸ ಏಷ** ಎಂದರೆ ಜೀವರು ಎನತಕ್ಕ ಯಾವತ್ತೂ ಮಂದಿ ಎಂತ ತಾತ್ಪರ್ಯ.

ಪರಮಾತ್ಮನಿಂದ ಸ್ಥೂಲದೇಹಗಳು ಕೊಡಲ್ಪಡುತ್ತವೆ. ಪರಮಾತ್ಮನಿಂದ ಪ್ರಾಪ್ತವಾದ ಸ್ಥೂಲದೇಹಗಳಿಂದ ಪರಮಾತ್ಮನ ಅಣುಸ್ಥೂಲಗಳು ಅವರವರ ಯೋಗ್ಯತಾನುಸಾರ ಸ್ಥೂಲಾಣುಗಳನ್ನು ಅವಧಿಯುಕ್ತವಾಗಿ ಹೊಂದತಾರೆ; ಆದಾದರೂ ಜೀವಾಪೇಕ್ಷಯಾ ಅಣು ಅಲ್ಲ. ಆವರಣಾಪೇಕ್ಷಯಾ ದೊಡ್ಡದೂ ಆಗೋದಿಲ್ಲ. ಇದರಲ್ಲಿ ತಾತಮ್ಯ ತಿಳಿಯಬೇಕು. ಹಿಂದಿನ ಶ್ಲೋಕದಲ್ಲಿ ಹೇಳಿದ **ಪ್ರಕಾಶಸಂಹಿತಾಪ್ರಮಾಣಕ್ಕೆ** ಅರ್ಥ— ಅನಂತರೂಪಗಳಿಂದ ಯುಕ್ತನಾದ ಪರಮಾತ್ಮ ಸರ್ವಾಂಗದಲ್ಲಿ ಸಾಯುಜ್ಯ ಬ್ರಹ್ಮದೇವರಿಗೆ ಉಂಟು, ಅಷ್ಟೇ ಹೊರ್ತು. **ಮುಕ್ತಸ್ಯ** ಅಂದರೆ ಮುಕ್ತನಾದ ಬ್ರಹ್ಮಗೆ, **ಸ್ವರೂಪೇಣ** –ಸ್ವರೂಪದಿಂದ ಇಲ್ಲ, ದಾವದು ಎಂದರೆ, ಸ್ವರೂಪೇಣ ಅನಾದಿಯಾದ ಬಂಧಕರಹಿತವಾದ ತನ್ನ ನಿಜಸ್ವರೂಪದಿಂದ. **ಹ್ಯಣೋಃ ವೃದ್ಧಿಃ** ಅಣುತ್ವ, ದೊಡ್ಡದಾಗೋಣವೂ ಇದು ಎರಡೂ ಆಗೋಣವೂ, **ನ ಯುಜ್ಯತೇ**-ಇಲ್ಲ ಎಂತ ಪ್ರಮಾಣದ ಅರ್ಥ. ಅಂದರೆ ಬ್ರಹ್ಮದೇವರ ಜೀವನಸ್ವರೂಪಕ್ಕೆ ಅಣು ಮಹತ್ತು ಆಗೋ ಯೋಗ್ಯತಾ ಇಲ್ಲ ಎಂತ. ಪ್ರಮಾಣದ ಅರ್ಥ ಇಲ್ಲ ಎಂತಲೇ ಹೇಳತದೆ ಮತ್ತು ಪರಮಾತ್ಮನ ಸಾಮರ್ಥ್ಯದಿಂದ ಕೂಡತದಾ ಏನು ಅಂದರೆ, **ನ ಯುಜ್ಯತೇ** ಅದೂನೂ ಕೊಡೋದಿಲ್ಲ. ಅಣು–ವೃದ್ಧಿಗಳು ಆಗತಾವೆಂಬ ಪ್ರಮಾಣ ತೋರಿದರೆ ಅಂಗೀಕಾರವೇ. ಜೀವಾಪೇಕ್ಷಯೂ ಅಣುತ್ವ ಹೇಳಿದರೆ, ಆವರಣಾಪೇಕ್ಷಿಯಾ ಘನತ್ವವೂ ಹೇಳಬೇಕು. ಎರಡೂನೂ ಕೊಡೋದಿಲ್ಲ. ಬ್ರಹ್ಮದೇವರಿಗೆ ಅಣುತ್ವ ಇಲ್ಲದ ಮ್ಯಾಲೆ ವಾಯ್ವಾದಿ ಜೀವರು ತದಂತರ್ಭೂತ

ರೇವೇ. ದಾರಿಗೂ ಇಲ್ಲ ಎಂತಲೇ ತಾತ್ಪರ್ಯ. ಅತ ಏವ ಜೀವಾಂತರ್ಗತ, ಪರಮಾತ್ಮ ಒಬ್ಬನೇ ನಿಯಾಮಕನೆಂದು ತಿಳಿಯಬೇಕು.

೧. **ಜೀವನಂಗುಷ್ಠಾಗ್ರಮೂರುತಿ** – ಜೀವನ ಸ್ವರೂಪದೇಹದ ಅಂಗುಷ್ಟ ಎಂದರೆ ಒಳಗೈಯಿನಲ್ಲಿ ವಿದ್ಯಮಾನವಾದ ಹೆಬ್ಬೆರಳು, ಇದಕ್ಕೆ ಮಧ್ಯದಲ್ಲಿ ಇರತಕ್ಕ ಕೀಲು, ಈ ಕೀಲಿಗೆ ಮೇಲುಭಾಗದಲ್ಲಿ ಇರತಕ್ಕ ಪರಿಮಿತ ದಾವದದೆ ಅದೇ ಅಂಗುಟಕ್ಕೆ ಅಗ್ರಭಾಗ ಅಂದರೆ ಮ್ಯಾಲೆ ಭಾಗ. ಈ ಅಗ್ರಕ್ಕೆ ಸದೃಶವಾದ ಮೂರ್ತಿ ದಾವದದೆ ಇದಕ್ಕೆ ಅಂಗುಟಾಗ್ರ ಮೂರುತಿ ಎಂತ ಹೆಸರು. ಇವನೇ ಮೂಲೇಶನಾಮಕ ಪರಮಾತ್ಮ. ಈ ಪರಿಮಿತದಿಂದ ಇರತಕ್ಕ ರೂಪ ಒಂದು.

೨. **ಜೀವನಂಗುಟಮಾತ್ರಮೂರುತಿ** ಎಂದರೆ, ಜೀವನಸ್ವರೂಪ ದೇಹದ ಹೆಬ್ಬೆರಳು ಅದ್ಯಂತ ಪರಿಮಿತಿ ಎಷ್ಟೋ ಅಷ್ಟು ಮಾತ್ರ ಮೂರುತಿ ಒಂದು, ಇವನೇ ಆಗ್ರೇಶ, ಜೀವಾಕಾರರೂಪ ಉಳ್ಳವನು.

೩. **ಜೀವನ ಪ್ರಾದೇಶಮೂರುತಿ** ಎಂದರೆ, ಜೀವನ ಹೆಬ್ಬೆರಳು ಜೀವನ ತರ್ಜನೀ ಬೆರಳು ಎರಡೂನೂ ದೂರ ಮಾಡಿದರೆ ಎಷ್ಟು ಪರಿಮಿತ ವಾಗತದೋ ಆ ಪರಿಮಿತದಿಂದ ಇರತಕ್ಕ ರೂಪ ಒಂದು. ಇದೇ ಜೀವನ ಪ್ರಾದೇಶರೂಪ ಎಂತ ಹೆಸರಳ್ಳದ್ದು (ಅಷ್ಟದಳ ಕಮಲ ನೋಡಿ),

೪. **ಜೀವಾಕಾರಮೂರುತಿ** ಎಂದರೆ, ಜೀವನ ರೋಮಗಳು ಜೀವ ಬೊಟ್ಟುಗಳು ಜೀವನ ಉಗುರುಗಳು, ಜೀವನ ಪ್ರತಿಪ್ರತಿ ಖಂಡ ಖಂಡವಾದ ಜೀವನಕೆಂತಲೂ ಅತ್ಯಣುವಾದ ಅವಯುವಗಳು, ಇಂಥಾ ಯಾವತ್ತೂ ಅವಯುವಗಳೊಳು ವ್ಯಾಪಿಸಿ ಇದ್ದಾನೆ. ॥೮॥

## (೨) ಭಾವಪ್ರಕಾಶಿಕೆ ವ್ಯಾಖ್ಯಾನ

ಜೀವನು ಪರಮಾಣುರೂಪನೆಂದು ಮೇಲಿನ ಪದ್ಯದಲ್ಲಿ ಹೇಳಿ, ಈ

ಪದ್ಯದಿಂದ ಜೀವಕ್ಕಿಂತಲೂ ಅತ್ಯಂತ ಪರಮಾಣುರೂಪನಾಗಿ ಶ್ರೀ ಪರಮಾತ್ಮನು ಜೀವನಲ್ಲಿರುವನೆಂದು ಹೇಳುತ್ತಾರೆ.

ಜೀವನ ಪರಿಮಾಣವು ಕುದುರೆಯ ಕೂದಲ ಕೊನೆಯನ್ನು ನೂರಾಗಿ ಸೀಳಿ ಅದರಲ್ಲಿನ ಒಂದು ಸೀಳನ್ನು ನೂರಾಗಿ ಭಾಗಿಸಿದರೆ, ಆಗುವಷ್ಟು ಇರುವುದೆಂದು ಹೇಳಿದರಲ್ಲವೇ ? ಅಂತಹ ಜೀವನ ಕೈ ಬೆರಳಿನ ಕೊನೆಯಷ್ಟು ಆಕಾರವುಳ್ಳ ಮೂರ್ತಿಗಳು ಕೆಲವು. ಕೆಲವು ಮೂರ್ತಿಗಳು ಹೆಬ್ಬೆರಳಿನಷ್ಟು. ಮತ್ತೆ ಕೆಲವು ಜೀವನ ಒಂದು ಚೋಟಷ್ಟು. ಜೀವನ ಸಂಪೂರ್ಣಾಕಾರದಷ್ಟು ಮೂರ್ತಿಗಳು ಕೆಲವು. ಹೀಗೆ ಅನಂತಾನಂತ ರೂಪಗಳಿಂದ ಜೀವನ ಎಲ್ಲಾ ಅಂಗಗಳಲ್ಲೂ ವ್ಯಾಪಿಸಿಕೊಂಡು, ಕರುಣಾಪೂರ್ಣನಾದ ಶ್ರೀಹರಿಯು ಮೂರು ಲೋಕಗಳನ್ನೂ ಪಾಲಿಸುವನು.

**॥ತತ್ಕರ್ಣಿಕಾಮೂಲ ದೇಶೇ ಜೀವಾಂಗುಷ್ಠಾಗ್ರ ಮಾನತಃ ।**
**ಮೂಲೇಶ ಇತಿ ವಿಖ್ಯಾತಃ ॥**

**–ಇತ್ಯಾದಿ ಮುಕ್ತ ತತ್ತ್ವಗ್ರಂಥದ ವಾಕ್ಯರಿಂದ** ಜೀವನ ಹೃದಯಾಕಾಶದಲ್ಲಿ ಅಷ್ಟದಳ ಕಮಲ ಕರ್ಣಿಕೆಯ ಮಧ್ಯ ಪ್ರದೇಶದಲ್ಲಿ ಜೀವನ ಅಂಗುಷ್ಟದ ಕೊನೆಯಷ್ಟು ರೂಪದಿಂದ **ಮೂಲೇಶ** ನೆಂಬ ಹೆಸರಿನಿಂದ ವಾಸಮಾಡುತ್ತಿರುವನು. ಆ ಮೂರ್ತಿಯ ಹಿಂಭಾಗದಲ್ಲಿ ಜೀವನ ಅಂಗುಷ್ಟ ಮಾತ್ರ ರೂಪದಿಂದಲೂ, ಆ ಮೂರ್ತಿಯ ಹಿಂದೆ **ಪ್ರಾದೇಶ** ನಾಮಕ ಪರಮಾತ್ಮನು ಚೋಟು ಉದ್ದದಷ್ಟು ರೂಪದಿಂದ ಇರುವನು ಎಂಬ ಅರ್ಥವು ಸಿದ್ಧವಾಗುವುದು. ಜೀವನ ಎಲ್ಲಾ ಅಂಗಗಳಲ್ಲಿಯೂ ಅನಂತಾನಂತರೂಪಗಳಿಂದ ಇರುವನೆಂಬ ವಿಷಯದಲ್ಲಿ **ತೈತ್ತರೀಯ ಭಾಷ್ಯಾದಿ**ಗಳಲ್ಲಿ ಹೇಳಿರುವ.

**॥ವಿಷ್ಣೋರಂಗಾನಿ ಜೀವಾಂಗಸ್ಯವಚ್ಛಿನ್ನಾನಿ ಸರ್ವಶಃ ।**
**ವಾಸುದೇವೋ ಹರೇಃ ಶೀರ್ಷಂ ಜೀವಶೀರ್ಷೇ ವ್ಯವಸ್ಥಿತಃ ।**
**ನಾರಾಯಣೋ ಹರೇರ್ಮಧ್ಯಂ ಜೀವಸಂದೋಹ ಸಂಸ್ಥಿತಃ ॥**

ಎಂಬಿವೇ ಮೊದಲಾದ ಪ್ರಮಾಣಗಳಿಂದ, ಪರಮಾತ್ಮನ ರೂಪಗಳಿಂದ ಜೀವನ ಸರ್ವಾಂಗಗಳಲ್ಲಿಯೂ, ಒಂದೊಂದು ಅಂಗದಲ್ಲಿ ಪ್ರತ್ಯೇಕ ಪ್ರತ್ಯೇಕ ಭಗವದ್ರೂಪಗಳು ಇವೆ ಎಂದು ತಿಳಿಯಬೇಕು. ಜೀವನ ಸ್ವರೂಪ ದೇಹಾಕಾರನಾಗಿ ಜೀವನ ಸ್ವರೂಪದೇಹವನ್ನು ವ್ಯಾಪಿಸಿಕೊಂಡು ಶ್ರೀ ಪರಮಾತ್ಮನಿರುವನು. ಆ ಪರಮಾತ್ಮನ ಶಿರಸ್ಸಿನಲ್ಲಿ ವಾಸುದೇವ ರೂಪಿಯು ವಾಸಮಾಡುವನು. ಅದೇ ಪರಮಾತ್ಮನ ಶಿರಸ್ಸೇ ಜೀವನ ಶಿರಸ್ಸಿನಲ್ಲಿ ಇರುವುದು. ಅಲ್ಲಿ ವಾಸುದೇವಮೂರ್ತಿ ಇರುವನು. ನಾರಾಯಣನು ಜೀವನ ಮಧ್ಯದಲ್ಲಿಯೂ ಇರುವನು. ಇದೇ ಪ್ರಕಾರ ದಕ್ಷಿಣ ಪಾರ್ಶ್ವದಲ್ಲಿ ಪ್ರದ್ಯುಮ್ನನೂ, ಎಡದ ಪಾರ್ಶ್ವದಲ್ಲಿ ಅನಿರುದ್ಧನೂ ಇರುವನು. ಹೀಗೆ ಅನಂತವಾದ ಪರಮಾಣುರೂಪಗಳಿಂದ ಜೀವಸ್ವರೂಪ ದೇಹದಲ್ಲಿ ಪರಮಾತ್ಮನಿರುವನೆಂದು ಸಿದ್ಧವಾಗುವುದು. ॥೮॥

**(ಇ) ಭಾವದರ್ಪಣ ಟೀಕಾ ವ್ಯಾಖ್ಯಾನ :-**

ಜೀವವೇ ಪರಮಸೂಕ್ಷ್ಮ. ಅಂಥ ಜೀವನ ಅಂಗುಷ್ಟಾಗ್ರ ಎಂದರೆ. ಕೇವಲ ಕೊನೆ ಎಂಬರ್ಥ. ಆ ಪರಿಮಿತವುಳ್ಳ ಜೀವನ ಹೃದಯಸ್ಥ ಬಿಂಬನೇ ಅನೇಕ ರೂಪನಾಗಿ ಸರ್ವಾವಯವಗಳಲ್ಲಿ ವ್ಯಾಪ್ತನಾಗಿ ಇರೋಕ್ರಮ ಹೇಳುತ್ತಾರೆ. ॥ ಅಂಗುಷ್ಟಾಗ್ರೇತಿ ॥

**"ಹೃತ್ಕರ್ಣಿಕಾಮೂಲದೇಶೇ ಜೀವಾಂಗುಷ್ಠಾಗ್ರಮಾನತಃ,**
**ಮೂಲೇಶ ಇತಿ ವಿಖ್ಯಾತಃ"–ಇತಿ ॥**

**"ತಸ್ಯ ಪೃಷ್ಠಪ್ರದೇಶೇಷು ಪ್ರಾದೇಶ ಪರಿಮಾಣತಃ ।**
**ಪ್ರಾದೇಶನಾಮಾ ಜೀವಾನಾಂ ದೇಹಾನಾಮಾಶ್ರಯಃ ಸದೇತಿ" ॥**
**–ಇತಿ ಮುಕ್ತಿತತ್ತ್ವೇ ॥**

**ಯಾವದವಯವೇತಿ ॥** ವಾಸುದೇವನೇ ದೇಹಾಕಾರನು ಶಿರಸ್ಸು ಆತನೇ ಜೀವನ ಶಿರಸ್ಸಿನಲ್ಲಿದ್ದಾನೆ. ನಾರಾಯಣನು ಶ್ರೀಹರಿಯ ಮಧ್ಯ

ಭಾಗ ಜೀವನ ಮಧ್ಯಭಾಗದಲ್ಲಿದ್ದಾನೆ—ಎಂಬ ರೀತ್ಯಾ ಪ್ರದ್ಯುಮ್ನನು ದಕ್ಷಿಣದಲ್ಲಿ. ಅನಿರುದ್ಧನು ವಾಮದಲ್ಲಿ, ಸಂಕರ್ಷಣನು ಅಂಘ್ರಿಯಲ್ಲಿ. ಭಾರ್ಗವನು ವಾಕ್ಯದಲ್ಲಿ, ನೃಸಿಂಹನು ಪ್ರಾಣದಲ್ಲಿ. ಕಪಿಲನು ನೇತ್ರಗಳಲ್ಲಿ, ಜೀವಮಾನಿ ಶೇಷನು ಅಲ್ಲಿ ಸಂಕರ್ಷಣನು–ಹೀಗೆ ನಾನಾ ರೂಪದಿಂದ ಇದ್ದಾನೆಂದು ತಿಳಿಯತಕ್ಕದ್ದು.

**ಪ್ರಮಾಣ :–**

**"ವಿಷ್ಣೋರಂಗಾನಿ ಜೀವಾಂಗೇಷ್ವವಚ್ಛಿನ್ನಾನಿ ಸರ್ವಶಃ ।**
**ವಾಸುದೇವೋ ಹರೇಃ ಶೀರ್ಷಂ ಜೀವಶೀರ್ಷೇ ವ್ಯವಸ್ಥಿತಃ ॥**
**ನಾರಾಯಣೋ ಹರೇರ್ಮಧ್ಯಂ ಜೀವಸಂದೋಹ ಸಂಸ್ಥಿತಃ ।**
**ವಿಷ್ಣೋಶ್ಚ ದಕ್ಷಿಣಃ ಪಶ್ಚಾತ್ಪ್ರದ್ಯುಮ್ನೋ ಜೀವಪಕ್ಷಗಃ॥**
**ವಾಮಪಕ್ಷೋಽನಿರುದ್ಧಶ್ಚ ಜೀವವಾಮಾಂಗಸಂಸ್ಥಿತಃ ।**
**ಸಂಕರ್ಷಣೋ ಹರೇರಂಘ್ರಿ ಜೀವಾಂಘ್ರಿತಲ ಸಂಸ್ಥಿತಃ ॥**
**ವಿಷ್ಣೋರ್ವಾಕ್ ಭಾರ್ಗವೋ ರಾಮೋ ಜೀವವಾಚಿ ಪ್ರತಿಷ್ಠಿತಃ ।**
**ನರಸಿಂಹೋ ಹರೇಃ ಪ್ರಾಣೋ ಜೀವ ಪ್ರಾಣೇ ಚ ಸಂಸ್ಥಿತಃ ॥**
**ಹರೇಶ್ಚಕ್ಷುಶ್ಚ ಕಪಿಲೋ ಜೀವ ಚಕ್ಷುಸ್ಥಿತೋ ಹರಿಃ ।**
**ಜೀವಾಭಿಮಾನೀ ಶೇಷಶ್ಚ ತಸ್ಮಿನ್ಸಂಕರ್ಷಣ ಸ್ಥಿತಃ" ॥**

–ಏವಂ ರೀತ್ಯಾ **ತೈತ್ತರೀಯಾದಿ** ಗ್ರಂಥಗಳಲ್ಲಿ **ಶ್ರೀ ಸರ್ವಜ್ಞರಿಂದ** ಉಕ್ತವಾದ್ದನ್ನೇ ಹೇಳುತ್ತಾರೆಂಬ ತಾತ್ಪರ್ಯ. ॥೮॥

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) !-**

ಜೀವಗತ ಭಗವದ್ರೂಪಾಣಿ ಅನುವದತಿ–"ಜೀವೇತಿ" ॥ **ಬೃಹದ್ ಭಾಷ್ಯೇಚ**–"ಹೃತ್ಕರ್ಣಿಕಾ ಮೂಲಗತಃ ಸೋಽಂಗುಷ್ಠಾಗ್ರ ಪ್ರಮಾಣಕಃ ॥

**ಮೂಲೇಶ** ಇತಿ ನಾಮಾಸ್ಮಿನ್ ಸರ್ವೇ ಜೀವಾಃ ಪ್ರತಿಷ್ಠಿತಾಃ ॥ ಅಂಗುಷ್ಠ ಮಾತ್ರೇ ಪುರೇಷೇ ಕರ್ಣಿಕಾಗ್ರೇಸ್ಥಿತೌ ಹರೌ ॥ ಪ್ರವಿಶಂತಿ ಸುಷುಪ್ತೌತು ॥" "ಹೃದಯೇ ಸರ್ವಶೋ ವ್ಯಾಪೀ ಪ್ರಾದೇಶಃ " ॥ ಇತಿ ಚ ॥೮॥

**ಕನ್ನಡಾರ್ಥ :—**

ಜೀವಗತಭಗವದ್ರೂಪಗಳ ವಿವರ ತಿಳಿಸುತ್ತಾರೆ – "ಜೀವಾಂಗುಷ್ಠಾಗ್ರ ಮಾರುತಿ"– ಎಂಬ ಪದ್ಯದಿಂದ. **ಬೃಹದಾರಣ್ಯಕ ಭಾಷ್ಯದಲ್ಲಿ** (ಅ=೬ ಬ್ರಾ=೧)–"ಹೃದಯ ಪದ್ಮದ ಕರ್ಣಿಕಾದ ತುದಿಯಲ್ಲಿ ಅಂಗುಷ್ಠಾಗ್ರ ಪರಿಮಾಣವುಳ್ಳ (ಹೆಬ್ಬೆರಳಿನ ತುದಿ) ಭಗವದ್ರೂಪವಿದೆ. ಆ ಪರಮಾತ್ಮ ನಿಗೆ **ಮೂಲೇಶ**ನೆಂದು ಹೆಸರು. ಈ ಮೂಲೇಶನಾಮಕ ಶ್ರೀ ಪರಮಾತ್ಮನು ಸರ್ವಜೀವರಿಗೂ ಆಧಾರನಾಗಿ, ಆಶ್ರಯನಾಗಿರುತ್ತಾನೆ. ಸಕಲಜೀವರೂ ಈ ಮೂಲೇಶನ ಪಾದದಲ್ಲಿ ಆಶ್ರಯ ಹೊಂದಿರುತ್ತಾರೆ. ಹೃದಯಕಮ ಲದ ಕರ್ಣಿಕೆಯ (ಮೊಗ್ಗೆ) ಮೂಲದಲ್ಲಿ ಅಂಗುಷ್ಠಮಾತ್ರಪರಿಮಿತಿ ಯುಳ್ಳ (ಹೆಬ್ಬೆರಳಿನಷ್ಟು ಗಾತ್ರ) ಶ್ರೀ ಹರಿಯನ್ನು ಸುಷುಪ್ತಿಕಾಲದಲ್ಲಿ ಎಲ್ಲಾ ಜೀವರೂ ಪ್ರವೇಶಿಸುತ್ತಾರೆ. ಹೃದಯಾದ್ಯಂತ ವ್ಯಾಪಿಸಿರುವ ಹೆಬ್ಬೆರಳಿನ ತುದಿಯಿಂದ ತೋರು ಬೆರಳಿನ (ತರ್ಜನೀ) ತುದಿಯವರೆಗೆ ಇರುವ ಅಂತರದಷ್ಟು. ಅಂದರೆ ಚೋಟು ಉದ್ದದ ಪರಿಮಿತಿಯ ಶ್ರೀ ಪರಮಾತ್ಮನಿಗೆ **ಪ್ರಾದೇಶ**ನೆಂದು ಹೆಸರು. ಈ **ಪ್ರಾದೇಶ**ನಾಮಕ ಶ್ರೀಹರಿಯು ಸರ್ವಜೀವರಿಗೆ ಆಧಾರಭೂತನಾಗಿದ್ದಾನೆ."–ಹೀಗೆ **ಬೃಹದಾ ರಣ್ಯಕ ಭಾಷ್ಯದಲ್ಲಿ** ಉಲ್ಲೇಖವಿದೆ. ಇಂತು ಜೀವಹೃದಯಗತವಾದ ಪ್ರಾದೇಶ – ಮೂಲೇಶ ರೂಪಗಳನ್ನು **ಭಾಷ್ಯವಚನ**ಗಳಿಗನುಸಾರವಾಗಿ ತಿಳಿದು ಧ್ಯಾನಿಸಬೇಕು. ॥೮॥

## (ಆ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವಸ್ವರೂಪದೇಹಸ್ಥ ಶ್ರೀಹರಿಯ ಪರಮಸೂಕ್ಷ್ಮರೂಪಗಳನು ಸ್ಮರಣೆಗೆ ತಿಳಿಸುತ್ತಾರೆ, ಜೀವ ಎಂದು. ಜೀವಸ್ವರೂಪ ಅಂಗುಷ್ಠಾಗ್ರೆ

ರೂಪ, ಅಂಗುಷ್ಟಪರಿಮಿತರೂಪ, ಜೀವಸ್ವರೂಪ ಪ್ರಾದೇಶವೆಂಬ ಜೀವ ಸ್ವರೂಪದ ಹತ್ತುಬೆರಳು ಪರಿಮಿತರೂಪ. ಜೀವನ ಆಕಾರಪರಿಮಿತರೂಪ ಇದು ಮೊದಲಾದ ಅನೇಕ ರೂಪಗಳಿಂದ ಜೀವನ ಎಲ್ಲಾ ಅವಯುವ ಗಳಲ್ಲಿದ್ದು, ದೇವರು ಈ ಜಗತ್ರಯವನ್ನು ರಕ್ಷಿಸುವನು. ಆದ್ದರಿಂದ ಕರುಣಾಳುಗಳರಸನು, **ಪ್ರಮಾಣ ಜೀವಸ್ಯಾಕಾರ ತದ್ರೂಪೀ ಜ್ಞಾನಾ ನಂದ ಸ್ವರೂಪವಾನ್** ಇದು ಮೊದಲಾದ **ಅಧ್ಯಾತ್ಮಮಾಲಾರ್ಥ** ಇದ ರಿಂದ ವಿವರಿಸಿತು. ॥೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಜೀವನ ಅತ್ಯಣುರೂಪವಾದ ಸ್ವರೂಪದೇಹಗತ ಭಗವದ್ರೂಪಗಳ ವಿವರ ಮತ್ತು ಧ್ಯಾನೋಪಾಸನಾಕ್ರಮವನ್ನು ತಿಳಿಸುತ್ತಾರೆ- **ಜೀವನಂಗುಷ್ಟಾಗ್ರ ಮೂರುತಿ**—ಎಂಬ ಪ್ರಸಕ್ತ ೮ನೆಯ ಪದ್ಯದಿಂದ.

(೧) ಜೀವನಸ್ವರೂಪದೇಹವು ಅತ್ಯಂತ ಸೂಕ್ಷ್ಮ, ಅತ್ಯಣು ಪರಿಮಿತ ವಾಗಿದೆ. ಇಂತಹ ಜೀವಸ್ವರೂಪದೇಹದ ಹೆಬ್ಬೆರಳಿನ ತುದಿಯಷ್ಟು ಪರಿಮಿತಿ ಯುಳ್ಳ ಭಗವದ್ರೂಪಕ್ಕೆ **ಜೀವನಂಗುಷ್ಟಾಗ್ರ ಮೂರುತಿ** ಎಂದು ತಿಳಿಸು ತ್ತಾರೆ. ಅಂಗುಷ್ಟ ಎಂದರೆ ಹೆಬ್ಬೆರಳು. ಅಗ್ರ, ಎಂದರೆ ಆ ಹೆಬ್ಬೆರಳಿನ ತುದಿ ಅದೆಷ್ಟು ಸೂಕ್ಷ್ಮತಮವಾಗಿರಬೇಕು ? ಇಂತಹ ಜೀವನ ಅಂಗುಷ್ಠಾಗ್ರಮೂರ್ತಿಗೆ **ಮೂಲೇಶ**ನೆಂದು ಹೆಸರು. ಜೀವನ ಹೃದಯಾ ಕಾಶದಲ್ಲಿ ಅಷ್ಟದಳಕಮಲವಿದೆ. ಈ ಹೃತ್ಕಮಲಕರ್ಣಿಕೆಯ ಮಧ್ಯದಲ್ಲಿ **ಮೂಲೇಶನಾಮಕ** ಶ್ರೀ ಪರಮಾತ್ಮನಿರುವನು. ಇವನೇ ಜೀವನ **ಬಿಂಬ ಮೂರುತಿಯು.**

**ಪ್ರಮಾಣ :—**

**"ಹೃತ್ಕರ್ಣಿಕಾಮೂಲಗತಃ ಸೋಽಂಗುಷ್ಟಾಗ್ರ ಪ್ರಮಾಣಕಃ ।**
**ಮೂಲೇಶ ಇತಿ ನಾಮಾಸ್ಮಿನ್ ಸರ್ವೇ ಜೀವಾಃ ಪ್ರತಿಷ್ಠಿತಾಃ" ॥**

**-ಬೃಹದಾರಣ್ಯಕ ಭಾಷ್ಯ (ಅ—೬, ಬ್ರಾಹ್ಮಣ – ೧).**
ಈ ಮೂಲೇಶನು ಸರ್ವಜೀವರಿಗೂ ಆಧಾರನು ಹಾಗೂ ಆಶ್ರಯ ದಾತನು.

(೨) ಮೂಲೇಶನಾಮಕನ ಹಿಂಭಾಗದಲ್ಲಿ ಜೀವನಸ್ವರೂಪದೇಹದ ಹೆಬ್ಬೆರಳಿನ ಗಾತ್ರದಷ್ಟು ಪರಿಮಿತಿಯುಳ್ಳ ರೂಪವನ್ನು **ಜೀವನಂಗುಟ ಮಾತ್ರ ಮೂರುತಿ** ಎಂದಿದ್ದಾರೆ ದಾಸವರ್ಯರು, ಈ ಭಗವದ್ರೂಪವೇ **ಅಗ್ರೇಶನು.** ಜೀವನ ಅಂಗುಟಮಾತ್ರ ಮೂರ್ತಿಯಾದ ಅಗ್ರೇಶನಾಮ ಕನು ಹೃತ್ಕಮಲದ ಕರ್ಣಿಕೆಾದ ತುದಿಯಲ್ಲಿದ್ದಾನೆ. (ಕರ್ಣಿಕಾಗ್ರಸ್ಥಾನ)

**ಪ್ರಮಾಣ :-**

**"ಅಂಗುಷ್ಠಮಾತ್ರೇ ಪುರುಷೇ ಕರ್ಣಿಕಾಗ್ರಸ್ಥಿತೌ ಹರೌ ||**
**-ಬೃಹದಾರಣ್ಯಕ ಭಾಷ್ಯ.**

ಸರ್ವಜೀವರೂ ಮೂಲೇಶನಾಮಕ ಪರಮಾತ್ಮನ ಪಾದಾಶ್ರಿತರಾಗಿದ್ದಾರೆ. ಸುಷುಪ್ತಿ ಕಾಲದಲ್ಲಿ ಎಲ್ಲಾ ಜೀವರೂ ಅಂಗುಟ ಮಾತ್ರ ಪರಿಮಿತಯುಳ್ಳ ಈ ಅಗ್ರೇಶನಲ್ಲಿ ಪ್ರವೇಶಿಸುತ್ತಾರೆ.

(೩) ಅಗ್ರೇಶ ಮೂರ್ತಿಯ ಹಿಂದೆ **ಪ್ರಾದೇಶ** ನಾಮಕನಾದ ಶ್ರೀಹರಿಯ ಭಗವದ್ರೂಪವಿದೆ. ಹೆಬ್ಬೆರಳಿನ ತುದಿಗೂ ಮತ್ತು ತೋರು ಬೆರಳಿನ ತುದಿಗೂ (ತರ್ಜನೀ) ಇರುವ ಅಂತರಕ್ಕೆ **ಚೋಟು** ಎಂದು ನಾವು ಇದಕ್ಕೆ **ಪ್ರಾದೇಶ** ಎಂದು ಹೆಸರು. ಚೋಟು ಉದ್ದದ ಪರಿಮಾಣವುಳ್ಳ ಮೂರ್ತಿಯೇ ಪ್ರಾದೇಶರೂಪವು. ಇಂತಹ ಪ್ರಾದೇಶನಾಮಕ ಶ್ರೀ ಪರ ಮಾತ್ಮನು ಜೀವನ ಸ್ವರೂಪದೇಹದ ಹೃದಯಾದ್ಯಂತ ವ್ಯಾಪಿಸಿದ್ದಾನೆ.

**ಪ್ರಮಾಣ :-**

**"ಹೃದಯೇ ಸರ್ವಶೋ ವ್ಯಾಪೀ ಪ್ರಾದೇಶಃ " ||**
**-ಬೃಹದಾರಣ್ಯಕ ಭಾಷ್ಯ ಪ್ರಮಾಣ.**

(೪) ಜೀವಸ್ವರೂಪದೇಹದ ಆದ್ಯಂತ ನಖ, ಶಿಖ, ಕರಚರಣಾದಿ ಸಮಸ್ತಅವಯುವಗಳಲ್ಲಿ ಪೂರ್ಣವಾಗಿ ವ್ಯಾಪಿಸಿಕೊಂಡಿರುವ ರೂಪವೇ **ಜೀವಾಕಾರ ಮೂರ್ತಿಯು.** ಜೀವನ ಆಕಾಶದಲ್ಲಿಯೇ ಬಿಂಬ ರೂಪದಿಂದ ಇದ್ದಾನೆ. ಶ್ರೀಹರಿಯು **ಬಿಂಬನು,** ಬಿಂಬ ಸದೃಶರಾದ ಪ್ರತಿಬಿಂಬ ಭೂತರೇ ಜೀವರು. ಹೀಗೆ ಬಿಂಬ-ಪ್ರತಿಬಿಂಬ ಭಾವದಿಂದ, ಈಶ-ದಾಸ ಸಂಬಂಧದಿಂದ. ನಿಯಾಮಕ-ನಿಯಾಮ್ಯ ಸಂಬಂಧದಿಂದ ಶ್ರೀ ಪರಮಾತ್ಮ ಮತ್ತು ಜೀವರು ಇದ್ದಾರೆ. ಈ ಜ್ಞಾನವೇ ಭಗವದನುಗ್ರಹಪ್ರಾಪ್ತಿಗೆ ಪರಮಮುಖ್ಯಸಾಧನವು.

ಜೀವಾಕಾರಮೂರ್ತಿಯು ಜೀವನ ಸ್ವರೂಪದೇಹಾದ್ಯಂತ ವ್ಯಾಪಿಸಿಕೊಂಡಿರುವ ಕ್ರಮುವನ್ನು **ಶ್ರೀ ಮದಾಚಾರ್ಯರು ತೈತ್ತರೀಯ ಭಾಷ್ಯ**ದಲ್ಲಿ ಉಲ್ಲೇಖಿಸಿರುತ್ತಾರೆ. (**ಪ್ರಮಾಣ ವಾಕ್ಯಗಳಿಗೆ ಭಾವದರ್ಪಣ ಟೀಕಾ-ವ್ಯಾಖ್ಯಾನವನ್ನು ನೋಡಿ**)

1. **ವಾಸುದೇವನು** (**ಪುರುಷನಾಮಕನಾಗಿ**) ಜೀವನಸ್ವರೂಪ ದೇಹದ **ಶಿರಸ್ಸಿನಲ್ಲಿದ್ದಾನೆ.**
2. ಜೀವನ ದೇಹದ ಮಧ್ಯಭಾಗದಲ್ಲಿ **ಶ್ರೀಮನ್ನಾರಾಯಣರೂಪ.**
3. ದೇಹದ ಬಲಪಾರ್ಶ್ವದಲ್ಲಿ **ಪ್ರದ್ಯುಮ್ನರೂಪ.**
4. ದೇಹದ ಎಡಪಾರ್ಶ್ವದಲ್ಲಿ **ಅನಿರುದ್ಧರೂಪ.**
5. ದೇಹದ ಪಾದಗಳಲ್ಲಿ **ಸಂಕರ್ಷಣರೂಪ.**
6. ದೇಹದ ವದನದಲ್ಲಿ (ವಾಕ್ಕಿನಲ್ಲಿ) **ಭಾರ್ಗವರೂಪ.**
7. ನೇತ್ರಗಳಲ್ಲಿ **ಕಪಿಲನಾಮಕನು.**

8. ಪ್ರಾಣದಲ್ಲಿ **ನರಸಿಂಹರೂಪ.**

9. ಜೀವಾಭಿಮಾನಿ ಶೇಷದೇವರಲ್ಲಿ ಅಂತರ್ಗತನಾಗಿ ಸಂಕರ್ಷಣ ರೂಪಿ ಪರಮಾತ್ಮನು ದೇಹಗತ ವ್ಯಾಪಾರಗಳನ್ನು ಮಾಡಿಸುವನು.

**ಪ್ರಮಾಣ :-**

(೧) **"ಹೃತ್ಕರ್ಣಿಕಾಮೂಲದೇಶೇ ಜೀವಾಂಗುಷ್ಠಾಗ್ರ ಮಾನತಃ ಮೂಲೇಶ ಇತಿ ವಿಖ್ಯಾತಃ ॥**

(೨) **ತಸ್ಯವೃಷ್ಠಪ್ರದೇಶೇಷು ಸ್ಪಾದೇಶ ಪರಿಮಾಣತಃ ।**

(೩) **ಪ್ರಾದೇಶನಾಮಾ ಜೀವಾನಾಂ ದೇಹಾನಾಮಾಶ್ರಯಃ ಸದೇತಿ" ॥**

**-ಇತಿ ಮುಕ್ತತತ್ತ್ವಗ್ರಂಥ.**

(೫) ಇಂತು ಮೂಲೇಶ, ಅಗ್ರೇಶ, ಪ್ರಾದೇಶ, ಜೀವಾಕಾರ ಮೂರ್ತಿ ಎಂದು ಒಂದೊಂದು ರೂಪಗಳಲ್ಲಿಯೂ ಅನಂತಾನಂತರೂಪಗಳಿಂದ ಪೂರ್ಣನಾಗಿದ್ದು, ಸ್ವರೂಪ, ಲಿಂಗ, ಅನಿರುದ್ಧ, ಸ್ಥೂಲ ಎಂಬ ತನುಚತುಷ್ಟಯಗಳಲ್ಲಿ ಪ್ರೇರ್ಯ-ಪ್ರೇರಕ ರೂಪಗಳಿಂದ ದೇಹಗತ ಸಮಸ್ತ ಅವಯವಗಳಲ್ಲಿಯೂ ವ್ಯಾಪಿಸಿಕೊಂಡು, ಕ್ರಿಯಾದಿಗಳನ್ನು ಸ್ಥೂಲ ದೇಹದ ದ್ವಾರಾ ಮಾಡಿ ಮಾಡಿಸುತ್ತಾ, ಈ ಸ್ಥೂಲದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನ ಅನುಭವಕ್ಕೆ ತಂದುಕೊಡುತ್ತಿರುವನು. ಇಂತು ಪರಮಕರುಣಾಮಯನಾದ ಬಿಂಬರೂಪಿಯು ಜಗತ್ರಯದಲ್ಲಿರುವ ಸಮಸ್ತ ಜೀವರಾಶಿಗಳನ್ನು ಕಾಪಾಡುತ್ತಿರುವನು. ॥೮॥

## ಪದ್ಯ (೯)

**ಮೂಲ :**

**ಬಿಂಬ ಜೀವಾಂಗುಷ್ಠಮಾತ್ರದಿ ।**
**ಇಂಬುಗೊಂಡಿಹ ಸರ್ವರೊಳು ಸೂ ।**
**ಕ್ಷ್ಮಾಂಬರದಿ ಹೃತ್ಕಮಲಮಧ್ಯನಿವಾಸಿಯೆಂದೆನಿಸಿ ॥**
**ಎಂಬರೀತಗೆ ಕೋವಿದರು ವಿ ।**
**ಶ್ವಂಭರಾತ್ಮ ಪ್ರಾಜ್ಞ ಭಕ್ತಕು ।**
**ಟುಂಬಿ ಸಂತೈಸುವನು ಈ ಪರಿ ಬಲ್ಲ ಭಜಕರನು ॥ ॥೯॥**

**ಅವತರಣಿಕೆ :-**

ಸರ್ವಚೇತನರ ಹೃದಯಾಕಾಶದಲ್ಲಿ ಹೃತ್ಪದ್ಮನಿವಾಸಿ ಎಂದೆನಿಪ ಜೀವಸ್ವರೂಪದ ಅಂಗುಷ್ಟಮಾತ್ರ ಪರಿಮಿತನಾದ ಬಿಂಬನು ವಿದ್ಯಮಾನ ನಾಗಿದ್ದಾನೆಂದು ತಿಳಿಸುತ್ತಾರೆ- **ಬಿಂಬ ಜೀವಾಂಗುಷ್ಠ ಮಾತ್ರದಿ** – ಎಂಬ ಪ್ರಸಕ್ತ ಸಂಧಿಗತ ೯ ನೆಯ ಈ ಪದ್ಯದಿಂದ.

ಹೃದ್ಗುಹಾನಿವಾಸಿಯಾದ ಅಂಗುಷ್ಟಮಾತ್ರಪರಿಮಿತನಾದ ಬಿಂಬನು ಸಕಲಜೀವರಾಶಿಗಳ ಹೃತ್ಕಮಲದ ಕರ್ಣಿಕಾಮಧ್ಯದಲ್ಲಿದ್ದಾನೆ. ಅಂತಹ ಬಿಂಬರೂಪಿ ಶ್ರೀ ಪರಮಾತ್ಮನನ್ನ ವಿಶ್ವಂಭರ, ಆತ್ಮ, ಪ್ರಾಜ್ಞ ಎಂಬು ದಾಗಿ ಭಗವದ್ವ್ಯಾಪಾರಗಳಿಗನುಸಾರವಾಗಿ ಜ್ಞಾನಿಗಳು ಕರೆಯಿತ್ತಾರೆ. ಇವನೇ ಭಕ್ತಕುಟುಂಬಿ. ಹೀಗೆಂದು ತಿಳಿದು ಉಪಾಸನಾ ಮಾಡತಕ್ಕ ಭಕ್ತವರ್ಗವನ್ನು ಆ ಕರುಣಾಮಯನು ದುಃಖಪರಿಹಾರಕನಾಗಿ ಸಲಹು ವನು ॥೯॥

**ಪ್ರತಿಪದಾರ್ಥ :**

**ಬಿಂಬ**=ಬಿಂಬರೂಪಿಯಾದ ಶ್ರೀ ಪರಮಾತ್ಮನು, **ಜೀವಾಂಗುಷ್ಠ ಮಾತ್ರದಿ**=ಜೀವನ ಸ್ವರೂಪದೇಹದ ಹೆಬ್ಬೆರಳಿನ ಗಾತ್ರದ ಪರಿಮಿತದಿಂದ ಜೀವಾಕಾರನಾಗಿ, **ಸರ್ವರೊಳು** = ಸಕಲ ಜೀವರಾಶಿಗಳಲ್ಲಿ, **ಇಂಬು ಗೊಂಡಿಹ** = ಆವಾಸನಾಗಿದ್ದಾನೆ. **ಸೂಕ್ಷ್ಮಾಂಬರದಿ** = ಸೂಕ್ಷ್ಮವಾದ ಹೃದಯಾಕಾಶದಲ್ಲಿ **ಹೃತ್ಕಮಲ ಮಧ್ಯನಿವಾಸಿ ಎಂದೆನಿಸಿ** = ಹೃದಯ ಮಧ್ಯದಲ್ಲಿ ಇರುವ ಅಷ್ಟದಳ ಕಮಲಕರ್ಣಿಕಾಮಧ್ಯದಲ್ಲಿ ವಿದ್ಯಮಾನನಾಗಿ ವಾಸಿಸುತ್ತಿರುವನೆಂದು ತಿಳಿಯಬೇಕು. **ಕೋವಿದರು**=ಜ್ಞಾನಿಗಳು, **ಈತಗೆ** =ಇಂತಹ ಭಗವದ್ರೂಪಕ್ಕೆ **ವಿಶ್ವಂಭರ**=ಸಮಸ್ತ ಜಗತ್ತನ್ನು ತನ್ನ ಉದರ ಅಲ್ಲಿ ಧರಿಸಿರುವವನು. ಅಂದರೆ ಸಮಸ್ತ ವಿಶ್ವಾಧಾರನು, **ಆತ್ಮ**= ಆತ್ಮನೆಂತಲೂ, **ಪ್ರಾಜ್ಞ**=ಪ್ರಾಜ್ಞ ಎಂತಲೂ **ಎಂಬುರು**=ಎಂಬುದಾಗಿ ಹೇಳುವರು. **ಈ ಪರಿ** = ಈ ಪ್ರಕಾರವಾಗಿ **ಬಲ್ಲ**=ಜ್ಞಾನಾನುಸಂಧಾನ ಪೂರ್ವಕ ತಿಳಿದ, **ಭಜಕರನ**=ತನ್ನನ್ನು ಕೊಂಡಾಡುವ ಭಕ್ತಜನರನ್ನು **ಭಕ್ತಕುಟುಂಬಿ**=ಭಕ್ತಜನ ಸಮುದಾಯವನ್ನೇ ತನ್ನ ಕುಟುಂಬವನ್ನಾಗಿ ಉಳ್ಳವನಾದ ಶ್ರೀ ಪರಮಾತ್ಮನು **ಸಂತೈಸುವರು** = ಸಂತೋಷಪಡಿಸಿ, ಸಂರಕ್ಷಿಸುವನು. ॥೯॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಮ್ಯಾಲೆ ಹೇಳಿದ ಅಂಗುಟಾಗ್ರ,ಅಂಗುಟ ಮಾತ್ರ, ಅಂಗುಟಪ್ರಾದೇಶ ಆ ಮೂರು ರೂಪಗಳೊಳಗೆ ಬಿಂಬ ದಾವುದೆಂದರೆ ಅದರನ್ನ ಹೇಳತಾರೆ. ಆ ಮೂರು ರೂಪಗಳಿಗೆ ಪ್ರಕಾರಾಂತರ ನಾಮಾಂತರ ರೂಪಗಳುಂಟು. ಅದರ ವಿವರ ಹೇಳತಾರೆ.

೧. ಅಂಗುಟಾಗ್ರವೇ ಮೂಲೇಶ. ಇವ ಕರ್ಣಿಕಾಮೂದಲ್ಲಿ ಇರ ತಕ್ಕವ, ದಳಗಳಲ್ಲಿ ಸಂಚಾರ ಮಾಡತಕ್ಕವ. ಇವನ ಮೂಲದಲ್ಲೇ ಜೀವ ಇರೋವನಾಗಿದ್ದಾನೆ. ಇವನೇ ಅಷ್ಟಬಾಹು ದ್ವಿಪಾದ ಒಂದು ಶಿರ ಇವು ಗಳಿಂದ ಯುಕ್ತನಾಗಿ ನಾರಾಯಣ ಎಂತ ಕರಸತಾನೆ.

೨. ಅಗ್ರೇಶ-ಇವ ಇವ ಅಂಗುಟ ಪರಿಮಿತವಾದ ರೂಪವುಳ್ಳವ ಕಮಲಕರ್ಣಿಕಾಮಧ್ಯದಲ್ಲಿ ಇರತಕ್ಕವ. ಇವನ ಆಕಾರ ಜೀವಾಕಾರದಂತೆ ಇರುತ್ತದೆ. ಇವನೇ ಬಿಂಬರೂಪಿ ಎಂತ ಕರಸತಾನೆ. ಇವಗೆ ಪ್ರಾಜ್ಞ ಎಂತಲೂ ಹೆಸರು.

೩. ಪ್ರಾದೇಶಮೂರುತಿ— ಈ ಅಗ್ರೇಶನ ವ್ಯಾಲೆ ಭಾಗದಲ್ಲಿ ಶೋಭಿತವಾದ ದಿವ್ಯರತ್ನಮಯಮಂಟಪದಲ್ಲಿ ಇರತಕ್ಕವಈ ಮೂರುತಿ. ಯನ್ನು ಅಷ್ಟದಳಕಮಲಪೀಠದಲ್ಲಿ ತೋರಿಸಲಿಲ್ಲ. ಊಹೆ ಮಾಡಿಕೊಳ್ಳ ಬೇಕು.

ಅಂತು ಮೂರು ರೂಪಗಳು ಅಷ್ಟದಳಕಮಲದಲ್ಲಿ ಇರೋದಾಗಿ ಅವೆ. ಈ ಪ್ರಕಾರ ಸ್ಥೂಲದೇಹದಲ್ಲಿ ವಿಚಾರ ಎಂದರೆ, ಏಳನೇ ಶ್ಲೋಕ ಆರಂಭ ಮಾಡಿಕೊಂಡು ಪೂರ್ವೋಕ್ತ ಜೀವಾಂತರ್ಗತ ಮೂರು ರೂಪಗಳಿಗೆ ಜೀವಾ ಕಾರ ಬಿಂಬದಾರೆಂದರೆ, ಬಿಂಬರೂಪಿ ಎನತಕ್ಕ ಪರಮಾತ್ಮ ಜೀವನ ಅಂಗುಷ್ಟ ಪರಿಮಿತದಿಂದ ಜೀವಾಕಾರನಾಗಿ ಆವಾಸಮಾಡಿಕೊಂಡು ಇದ್ದಾನೆ. ಎಲ್ಲಿ ಅಂದರೆ, ಸರ್ವಪ್ರಾಣಿಗಳೊಳು, ಆಕಾಶ, ಆಕಾಶದಲ್ಲಿ ಎರಡು ಪ್ರಕಾರ. ಸೂಕ್ಷ್ಮಾಕಾಶ ಸ್ಥೂಲಾಕಾಶ, ಎಂಬುದು ಜೀವನ ಸ್ವರೂಪದೇಹಗತ ಆಕಾಶ, ಸ್ಥೂಲಾಕಾಶ ಎಂಬುದು ಪಾಂಚಭೌತಿಕ ಸ್ಥೂಲದೇಹಗತ ಆಕಾಶ. ಈ ಎರಡರಲ್ಲಿ ಅಂಗುಷ್ಟ ಮಾತ್ರ ಜೀವಾಕಾರ ಬಿಂಬ ಇದ್ದಾನೆ. ಸ್ಥೂಲ ದೇಹದಲ್ಲಿ ದಾವ ಅಂಗಷ್ಠಪರಿಮಿತನಾದ ಪರಮಾತ್ಮ ಎಂದರೆ **'ಜೀವಾಂಗುಷ್ಠ ಮಿತೋ ಜೀವೇ ಸ್ಥೂಲಾಂಗುಷ್ಠಮಿತೋ ಹೃದಿ'** ಎಂಬ ಪ್ರಮಾಣಾನು ಸಾರ ಸ್ಥೂಲದೇಹಗತನಾದ ಪರಮಾತ್ಮ, ಸ್ಥೂಲಾಂಗುಷ್ಠಪರಿಮಿತನಾದ ಜೀವಾಕಾರಬಿಂಬ ಇದ್ದಾನೆಂದು ತಿಳಿಯಬೇಕು. ಸ್ಥೂಲಾಂಬರ ಒಂದು

ಇರೋಣದರಿಂದಲೇ, ಸೂಕ್ಷ್ಮಾಂಬರ ಎಂತ **ಪ್ರ**ಯೋಗ. ಈ ಜೀವನ ಸ್ವರೂಪದೇಹಗತ, ಜೀವಾಪೇಕ್ಷೆಯಾ ಸೂಕ್ಷ್ಮವಾಗಿ ಇರತಕ್ಕ ಆಕಾಶದಿ ವಿದ್ಯಮಾನವಾದ ಹೃದಯಮಧ್ಯದಲ್ಲಿ ಇರತಕ್ಕ ಅಷ್ಟದಳಕಮಲ. ಈ ಕಮಲಕ್ಕೆ ಮಧ್ಯದಲ್ಲಿ ಇರತಕ್ಕದ್ದು ಕಮಲಕರ್ಣಿಕಾ, ಇದರ ಮಧ್ಯದಲ್ಲಿ ಆವಾಸಮಾಡಿಕೊಂಡು ಇದ್ದಾನೆ. ಅಗ್ರೇಶ ಎನಿಸಿದವನಾಗಿ ಇದ್ದಾನೆಂದು ಅಂಬೊರು ಈತನ್ನ, ದಾರೆಂದರೆ ಜ್ಞಾನಿಗಳಾದವರು. ಈ ಅಗ್ರೇಶನಲ್ಲದೇ ವಿಶ್ವಂಭರಾತ್ಮಕ ರೂಪ ಒಂದು, ಈ ರೂಪ ದಾವದೆಂದರೆ ಜಗತ್ತು (ಜಗಚ್ಛಬ್ದ ಜೀವಪರ), ವಿಶ್ವಶಬ್ದ ಸಾಂಕೇತರಾದ ಜೀವರಲ್ಲಿ ಸೇರಿದ ವಾಯುದೇವರು, ಈ ವಾಯುದೇವರ ಪಾದಮೂಲದಲ್ಲಿ ಜೀವರನ, ಈ ಪ್ರಕಾರ ಯಾವತ್ತೂ ಜೀವರ ಭರಿಸಿದ ಕಡಿಯಿಂದ ವಿಶ್ವಂಭರನಾದವ ಮೂಲೇಶ ಎಂತ ತಾತ್ಪರ್ಯ. ಆತ್ಮಕ ಎಂದರೆ ಆತ್ಮರೂಪಿ ಪರಮಾತ್ಮ ಎಂತ ತಾತ್ಪರ್ಯ. ಪ್ರಾದೇಶನಾಮಕ ನಿಗೂ ಪ್ರಾಜ್ಞ ಎಂತ ಸಂಕೇತ ಉಂಟು. ಸಂರಕ್ಷಣ ಮಾಡೋದರಲ್ಲಿ ಕುಟುಂಬಸ್ಥಾನಾಪನ್ನನಾದವ ಮತ್ತು ಭಕ್ತರ ಸಮೂಹವೇ ಸಂಸಾರವಾಗಿ ಉಳ್ಳವ, ಕುಟುಂಬದೋಪಾದಿಯಲ್ಲಿ ಸುಖಪಡಿಸತಕ್ಕವ. ಪ್ರಾಜ್ಞ ಎಂದರೆ ಪ್ರಾಜ್ಞನಾಮಕನಾದ ಅಗ್ರೇಶ ಎಂತ ತಾತ್ಪರ್ಯ. ಮೂರು ರೂಪಗಳ ವಿವರ—

೧. **ಮೂಲೇಶ** ಎಂಬ ರೂಪ, ಜೀವರಕಡಿಯಿಂದ ಸಾಧನಿ ಮಾಡಿಸ ತಕ್ಕ ರೂಪ. ಇವಗೆ **ವಿಶ್ವಂಭರ** ಎಂತ ಹೆಸರೇ,

೨. ಜೀವಾಕಾರನಾದ **ಅಗ್ರೇಶ** ಸಾಧನದಿಂದ ತನ್ನ ಅಪರೋಕ್ಷ ಕೊಡತಕ್ಕವ. ಇವಗೆ **ಆತ್ಮ** ಎಂತ ಹೆಸರು.

೩. **ಪ್ರಾದೇಶ** ಜೀವರ ಸ್ವರೂಪಾನಂದವನ್ನು ಕೊಟ್ಟು ಸಂರಕ್ಷಣೆ ಮಾಡತಕ್ಕವ. ಇವಗೆ **ಅಂತರಾತ್ಮ** ಎಂತ ಹೆಸರು.

ಅಂತು ಮೂರು ರೂಪಗಳು ಕಾರ್ಯವನ್ನು ಈ ಪ್ರಕಾರ ಅನುಸಂಧಾನ ಮಾಡಬೇಕೆಂದು ತಾತ್ಪರ್ಯ. ಪ್ರಾಜ್ಞನಾಮಕ ಪರಮಾತ್ಮ ಸಂರಕ್ಷಣೆ ಮಾಡು

ವನು. ಈ ಪೂರ್ವೋಕ್ತ ಪ್ರಕಾರ, ಅನುಸಂಧಾನಪೂರ್ವಕ ಅರಿತವರ, ಪರಮಾತ್ಮನ್ನ ಭಜಿಸಿದವರನ್ನ ಸಂರಕ್ಷಣೆ ಮಾಡತಾನೆ. ಆದ್ದರಿಂದ ಪೂರ್ವೋಕ್ತ ಅನುಸಂಧಾನದಿಂದ ಭಜನ ಮಾಡಬೇಕೆಂಬ ತಾತ್ಪರ್ಯ. ॥೯॥

## (೨) ಭಾವ ಪ್ರಕಾಶಿಕೆ- ವ್ಯಾಖ್ಯಾನ

ಬಿಂಬ ರೂಪಿಯಾದ ಶ್ರೀ ಪರಮಾತ್ಮನ ಲಕ್ಷಣಗಳನ್ನು ಹೇಳುತ್ತಾರೆ. **ಕಾಟಕೋಪನಿಷದ್ಭಾಷ್ಯದಲ್ಲಿ–**

**"ಸ್ಥೂಲಾಂಗುಷ್ಟಮಿತೋ ದೇಹೇ ಜೀವಾಂಗುಷ್ಟಮಿತೋ ಹೃದಿ"** -ಎಂದು ಹೇಳಿರುವರು, ಈ ಪ್ರಮಾಣಾನುಸಾರವಾಗಿ ಶ್ರೀ ಪರಮಾತ್ಮನು ಸ್ಥೂಲದೇಹದಲ್ಲಿ ಹೃದಯಕಾಶದಲ್ಲಿ ಸ್ಥೂಲದೇಹದ ಅಂಗುಷ್ಠಪರಿಮಿತಿಯುಳ್ಳ ರೂಪದಿಂದ ಇರುವನು. ಇದೇ ಪ್ರಕಾರ ಜೀವನ ಸ್ವರೂಪದೇಹದ ಅತಿಸೂಕ್ಷ್ಮವಾದ ಹೃದಯಾಕಾಶದಲ್ಲಿ ಜೀವನ ಅಂಗುಷ್ಟಪರಿಮಿತಿಯುಳ್ಳ ರೂಪದಿಂದ ಇರುವನು ಎಂದು ತಿಳಿಯಬೇಕು. ಈತನು ಸೂಕ್ಷ್ಮವಾದ ಹೃದಯಾಕಾಶಗತ ಕಮಲಕರ್ಣಿಕಾಮಧ್ಯದಲ್ಲಿರುವುದರಿಂದ ಈತನನ್ನು ಹೃತ್ಕಮಲಮಧ್ಯನಿವಾಸಿ ಅನ್ನುವರು. ಇವನನ್ನೇ ಜ್ಞಾನಿಗಳು ವಿಶ್ವಂಭರ ಮೂರ್ತಿ ಎಂತಲೂ, ಆತ್ಮಮೂರ್ತಿ ಎಂತಲೂ, ಪ್ರಾಜ್ಞಮೂರ್ತಿ ಎಂತಲೂ ಹೇಳುವರು, **ಈ ಸ್ವಾಮಿಯು ಭಕ್ತಜನರನ್ನು ಪ್ರೀತಿಯಿಂದ** ಪೋಷಿಸುವುದರಿಂದ **ಭಕ್ತಕುಟುಂಬಿ** ಎಂದು ಹೇಳಿದರು, ವಿಶ್ವವನ್ನೇ ಪೋಷಿಸುವವನಾದರೂ, ಭಕ್ತರನ್ನು ಪ್ರೀತಿಯಿಂದ ಪೋಷಿಸುವನೆಂದು ತಾತ್ಪರ್ಯ. ಹೀಗೆ ತಿಳಿದು ಯಾರು ಪರಮಾತ್ಮನನ್ನು ಭಜಿಸುವರೋ, ಅವರನ್ನು ಸರ್ವಪ್ರಕಾರದಿಂದಲೂ ಪರಮಾತ್ಮನು ಸಂತೋಷಪಡಿಸುವನು. ॥೯॥

## (೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–

ಬಿಂಬೇತಿ ॥ **ಉಕ್ತಂಚ ಕಾಠಕಭಾಷ್ಯೇ :**

**"ಸ್ಥೂಲಾಂಗುಷ್ಠಮಿತೋ ದೇಹೇ ಜೀವಾಂಗುಷ್ಠಮಿತೋ ಹೃದಿ"** ಇತಿ" ಸೂಕ್ಷ್ಮೇತಿ ॥ ಜೀವನ ಹೃದಯಾಕಾಶ ಪರಮಸೂಕ್ಷ್ಮವೆಂದು ಹೇಳುತ್ತಾರೆ.

**"ತೇಸ್ಯಾಂತೇ ಸುಷಿರಂ ಸೂಕ್ಷ್ಮಮಿತಿಶ್ರುತೇಃ"** ॥ಇತಿ॥ ॥೯॥

## (ಳ) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

"ಬಿಂಬ"- ಇತಿ ॥ **ಅಂತಃಕರ್ಣಿಗ್ರಗತ ಪ್ರಾಜ್ಞರೂಪಮೇವ ಬಿಂಬರೂಪಮಿತಿ ಸಿದ್ಧ್ಯತಿ"- ಇತಿ ರತ್ನಮಾಲಾಯಾಮ್** ॥೯॥

**ಕಡಾರ್ಥ :**

ಬಿಂಬರೂಪಿ ಹರಿಯ ವಿಷಯವನ್ನು ಈ ಪದ್ಯದಿಂದ ತಿಳಿಸುತ್ತಾರೆ. ಹೃತ್ಕಮಲಮಧ್ಯವರ್ತಿ, ಅಂಗುಷ್ಠಪರಿಮಿತನಾದ ಪ್ರಾಜ್ಞರೂಪಿ ಪರಮಾತ್ಮನನ್ನು **ಬಿಂಬ** ನೆಂದು ಕರೆಯುತ್ತಾರೆ. "ಹೃದಯ ಪದ್ಮಗತ ಕರ್ಣಿಕಾತುದಿಯಲ್ಲಿರುವ ಪ್ರಾಜ್ಞನಾಮಕ ಪರಮಾತ್ಮನೇ ಬಿಂಬನೆಂದು ಸಿದ್ಧವು"- ಎಂದು **ಸತ್ತತ್ವರತ್ನಮಾಲೆಯ ಪ್ರಮಾಣ** ॥೯॥

## (ಶ) ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವಬಿಂಬರೂಪ ನಿರೂಪಿಸುತ್ತಾರೆ, **ಬಿಂಬ** ಎಂದು. ಜೀವನ ಅಂಗುಷ್ಟಮಾತ್ರರೂಪನು ಬಿಂಬನಾಮದಿಂದ ಸರ್ವರಲ್ಲೂ ಹೃತ್ಕಮಲ ಮಧ್ಯನಿವಾಸಿ ಎನಿಸಿ, ಜೀವಸೂಕ್ಷ್ಮಹೃದಯಾಕಾಶದಲ್ಲಿ ಆಶ್ರೈಸಿರುವನು. ಈತನನ್ನು ವಿಶ್ವಂಭರ, ಆತ್ಮ, ಪ್ರಾಜ್ಞ, ಎಂದು ಹೆಸರುಳ್ಳವನೆಂದು, ಜ್ಞಾನಿಗಳು, ಹೇಳುವರು, ವಿಶ್ವಪೋಷಕನಾದ ಸ್ವಾಮಿಯು ಹೀಗೆ ತಿಳಿದ ಭಕ್ತರನ್ನು ಸಂತೋಷ ಪಡಿಸುವನು. ಪ್ರಮಾಣ- **ಜೀವಹೃತ್ಕಮಸ್ಕೈವ ಕರ್ಣಿಕಾಯಾಂ ರಮಾಪತಿಃ । ಜೀವನಂಗುಷ್ಠಾ ಪ್ರಮಾಣೇನ ವರ್ತತೇ.**

**ಹ್ಯಾತ್ಮನಾಮುನಾಸ್**॥ ಎಂಬ **ಅಧ್ಯಾತ್ಮನಾಲಾರ್ಥವು**ಹೇಳಲ್ಪಟ್ಟಿತು. ॥೯॥

# ಸರ್ವವ್ಯಾಖ್ಯಾನ ಸಾರಸಂಗ್ರಹ

ಸಮಸ್ತ ಜೀವರಾಶಿಗಳ ಅತ್ಯಂತ ಸೂಕ್ಷವಾದ ದಹರಾಕಾಶಗತ ಹೃತ್ಕಮಲಮಧ್ಯನಿವಾಸಿಯಾದ ಬಿಂಬಮೂರ್ತಿಯು ವಿವರವನ್ನು ತಿಳಿಸುತ್ತಾರೆ. **ಬಿಂಬ** ಎಂಬ ಪ್ರಸಕ್ತ ೯ನೆಯ ಪದ್ಯದಿಂದ.

೧. ಜೀವನಸ್ವರೂಪದೇಹದ ಹೃದಯಾಕಾಶವು ಪರಮಾಸೂಕ್ಷ್ಮ. ಇದಕ್ಕೆ ಹೃದ್ಗುಹ ಅಥವಾ ದಹರಾಕಾಶವೆಂದು ಹೆಸರು. ಇಂತಹ ಹೃದಯಾಕಾಶಪ್ರದೇಶದಲ್ಲಿ ಅಷ್ಟದಳಯುಕ್ತವಾದ ಪದ್ಮವಿದೆ. ಈ ಹೃತ್ಕಮಲದ ಕರ್ಣಿಕಾಮಧ್ಯದಲ್ಲಿ ಬಿಂಬರೂಪಿ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಆ ಬಿಂಬನು ಜೀವಸ್ವರೂಪದೇಹದ ಹೆಬ್ಬೆರಳಿನ ಗಾತ್ರದಷ್ಟು ಪರಿಮಿತನಾಗಿದ್ದಾನೆ. ಈತನಿಗೆ **ಪ್ರಾಜ್ಞ**ನೆಂದು ಹೆಸರು. ಇಂತಹ ಪ್ರಾಜ್ಞನಾಮಕ ಬಿಂಬನು ಜೀವಾಂಗುಷ್ಠ ಪರಿಮಿತನಾಗಿ ಸರ್ವಜೀವರ ದೇಹಗತ ಅತ್ಯಂತ ಸೂಕ್ಷ್ಮವಾದ ಹೃದಯಾಕಾಶದಲ್ಲಿ ಹೃತ್ಕರ್ಣಿಕಾಮಧ್ಯದಲ್ಲಿ **ಹೃತ್ಕಮಲ ಮಧ್ಯನಿವಾಸಿ**ಯಾಗಿದ್ದಾನೆ.

**ಪ್ರಮಾಣ :**

(೧) **"ಸ್ಥೂಲಾಂಗುಷ್ಠಮಿತೋ ದೇಹೇ ಜೀವಾಂಗುಷ್ಠಮಿತೋ ಹೃದಿ"–ಕಾಟಕೋಪನಿಷದ್ಭಾಷ್ಯ ಪ್ರಮಾಣ.**

**(೨) "ತಸ್ಯಾಂತೇ ಸುಷಿರಂ ಸೂಕ್ಷ್ಮಮಿತಿ ಶ್ರುತೇಃ" –ಶ್ರುತಿಪ್ರಮಾಣ.**

(೨) ಹೃತ್ಕಮಲಮಧ್ಯನಿವಾಸಿಯಾದ ಬಿಂಬಮೂರ್ತಿ ಶ್ರೀ ಪರಮಾತ್ಮನಿಗೆ ವಿಶ್ವಂಭರ, ಆತ್ಮ, ಪ್ರಾಜ್ಞ ಎಂಬ ಹೆಸರುಗಳಿಂದ ಜ್ಞಾನಿ

ಗಳು ತಿಳಿಯುವರು. ಸಮಸ್ತ ಜಗತ್ತನ್ನು (ವಿಶ್ವ) ತನ್ನ ಉದರದಲ್ಲಿ ಹಗುರವಾಗಿ, ಅನಾಯಾಸವಾಗಿ ಧರಿಸಿದ ಶ್ರೀ ಪರಮಾತ್ಮನಿಗೆ– **ವಿಶ್ವಂಭರ**–ನೆಂದು ಹೆಸರು. ಅಲ್ಲದೇ ತನ್ನಿಂದ ಸೃಷ್ಟವಾಗಿರತಕ್ಕ ಚೇತನಾಚೇತನಾತ್ಮಕವಾದ ಸಮಗ್ರವಿಶ್ವಕ್ಕೇ ಆಧಾರಭೂತನಾಗಿರುವುದರಿಂದಲೂ– ವಿಶ್ವಂಭರ–ನೆಂದು ನಾಮ. **ಆತ್ಮ** ನಾಮಕನಾಗಿ ಬಿಂಬರೂಪದಿಂದ ಜೀವರ ದ್ವಾರಾ ನಡೆಯುವ ಸಕಲ ವ್ಯಾಪಾರಗಳಿಗೂ ನಿಯಾಮಕನೂ, ಪ್ರೇರಕನೂ ಆಗಿರುವನು. ಸುಷುಪ್ತ್ಯವಸ್ಥೆಯಲ್ಲಿ ಸಮಸ್ತಜೀವರೂ ಇಂತಹ ಪರಮಾತ್ಮನಲ್ಲಿ ಪ್ರವೇಶಿಸಿ. ಅವನಿಂದ ಆಲಿಂಗತರಾಗಿರುತ್ತಾರೆ. ಸುಷುಪ್ತ್ಯವಸ್ಥಾ ಪ್ರೇರಕವಾದ ಬಿಂಬರೂಪಿ ಶ್ರೀಹರಿಗೆ **ಪ್ರಾಜ್ಞ** ನೆಂದು ಹೆಸರು.

೩. ಜೀವನಸ್ವರೂಪದ ಅಂಗುಷ್ಠಾಗ್ರಪರಿಮಿತನಾದ ಭಗವದ್ರೂಪವೇ **ಮೂಲೇಶ** ನಾಮಕನು. ಮೂಲೇಶನು ಹೃತ್ಕಮಲಕರ್ಣಿಕಾ ಮೂಲದಲ್ಲಿ ಆವಾಸನಾಗಿದ್ದಾನೆ. ಕಮಲದ ಅಷ್ಟದಳಗಳಲ್ಲಿ ಸಂಚಾರ ಮಾಡುವವನೇ ಮೂಲೇಶನು. ಈ ಮೂಲೇಶನ ಪಾದಮೂಲದಲ್ಲಿ ಜೀವ ಆಶ್ರಯಿಸಿಕೊಂಡಿದ್ದಾನೆ. ಮೂಲೇಶನಿಗೆ ಅಷ್ಟಬಾಹು, ಎರಡುಪಾದಗಳು, ಒಂದು ಶಿರಸ್ಸು. ಈತನೇ **ಶ್ರೀಮನ್ನಾರಾಯಣನು.** ಸ್ಥೂಲದೇಹದಲ್ಲಿ ಹೃದಯಕಾಶಗತ ಅಷ್ಟದಳಕಮಲಕರ್ಣಿಕಾಮೂಲದಲ್ಲಿ ಸ್ಥೂಲದೇಹದ ಅಂಗುಷ್ಠಾಗ್ರಪರಿಮಿತನಾಗಿ ಮೂಲೇಶನಾದ ಬಿಂಬನಿದ್ದಾನೆ.

(೪) ಜೀವನ ಸ್ವರೂಪದೇಹದ ಅಂಗುಷ್ಠಮಾತ್ರಪರಿಮಾಣವುಳ್ಳವನೇ **ಅಗ್ರೇಶ**ನಾಮಕನು. ಈ ಭಗವದ್ರೂಪವು ಜೀವನ ಸ್ವರೂಪದ ದಹರಾಕಾಶಗತ ಅಷ್ಟದಳಹೃತ್ಕಮಲಕರ್ಣಿಕಾ ಮಧ್ಯದಲ್ಲಿದೆ. ಇವನ ಆಕಾರ ಜೀವಾಕಾರವಾಗಿರುವುದರಿಂದ ಜೀವಾಕಾರಮೂರ್ತಿ ಎನಿಸುವನು. ಈ ಅಗ್ರೇಶನನ್ನು ಕೋವಿದರು **ಪ್ರಾಜ್ಞ** ಎಂದು ಕರೆಯುವರು. ಇದೇ ಅಗ್ರೇಶನು ಪ್ರಾಜ್ಞನಾಮಕನಾಗಿ ಸ್ಥೂಲದೇಹದಲ್ಲಿ ಸ್ಥೂಲದೇಹಗತ ಅಂಗುಷ್ಠಮಾತ್ರ ಪರಿಮಿತನಾಗಿ, ಸ್ಥೂಲದೇಹದ ಹೃದಯಾಕಾಶದಲ್ಲಿರುವ ಹೃತ್ಕಮಲದ ಕರ್ಣಿಕಾ ಮಧ್ಯದಲ್ಲಿ ಹೃತ್ಕಮಲ ಮಧ್ಯನಿವಾಸಿಯಾಗಿದ್ದಾನೆ.

(೫) ಇಂತು ಹೃತ್ಕಮಲಮಧ್ಯನಿವಾಸಿಯಾದ ಬಿಂಬ ಯನ್ನು ವಿಶ್ವ, ಆತ್ಮ, ಪ್ರಾಜ್ಞ ಎಂಬ ರೂಪಗಳಿಂದ ಧ್ಯಾನೋಪಾಸನೆ ಮಾಡುತ್ತಾ, ಅವನ ಮಹಿಮಾತಿಶಯಗಳನ್ನು ನಿರಂತರವೂ ಕೊಂಡಾಡುತ್ತಿರುವ (ಭಜಕರನು) ಭಕ್ತರನ್ನು ಬಿಂಬನು ಸದಾ ಸಂತೋಷಪಡಿಸುತ್ತಾ, ಸರ್ವನಿಧಗಳಲ್ಲಿಯೂ ಸಂರಕ್ಷಿಸುತ್ತಿರುವನು. ||೯||

# ಪದ್ಯ (೧೦)

**ಮೂಲ :**

**ಪುರುಷನಾಮಕ ಸರ್ವಜೀವರೊ |**
**ಳಿರುವ ದೇಹಾಕಾರರೂಪದಿ |**
**ಕರಣನಿಯಾಮಕ ಹೃಷೀಕಪನಿಂದ್ರಿಯಂಗಳಲಿ ||**
**ತುರಿಯನಾಮಕ ವಿಶ್ವತಾ ಹ |**
**ನ್ನೆರಡು ಬೆರಳುಳಿದುತ್ತಮಾಂಗದಿ |**
**ಎರಡಧಿಕ ಎಪ್ಪತ್ತುಸಾವಿರನಾಡಿಯೊಳಿಪ್ಪ ||** ||೧೦||

**ಅವತರಣಿಕೆ :**

ದೇಹಾಕಾರಮೂರ್ತಿ ಪುರುಷನಾಮಕ ಭಗವಂತನ ಧ್ಯಾನೋಪಾಸನಾ ಕ್ರಮವನ್ನು ತಿಳಿಸುತ್ತಾರೆ. **ಪುರುಷನಾಮಕ**– ಎಂಬ ಪ್ರಸಕ್ತ ಸಂಧಿಗತ ೧೦ನೆಯ ಈ ಪದ್ಯದಿಂದ.

ಸಮಸ್ತ ಜೀವರಾಶಿಗಳಲ್ಲಿ ಆಯಾಯಾ ಯೋನಿಗಳಿಗನುಸಾರವಾಗಿ ಪ್ರಾಪ್ತವಾಗಿರುವ ದೇಹದ ಆಕಾರದಂತೆ ದೇಹಾಕಾರನಾಗಿ ಪುರುಷನಾಮಕ ಪರಮಾತ್ಮನಿದ್ದಾರೆ. **ಹೃಷೀಕೇಶ** ನಾಮಕನಾಗಿ ಸಮಸ್ತ ಇಂದ್ರಿಯಗಳಿಗೆ

ನಿಯಾಮಕನಾಗಿದ್ದಾನೆ. **ತುರ್ಯನಾಮಕ** ವಿಶ್ವರೂಪೀ ಶ್ರೀ ಪರಮಾತ್ಮನು, ಶಿರಸ್ಸು ಆಸಂಭಮಾಡಿ, ದಕ್ಷಿಣಾಕ್ಷಿಯ ಮುಖದವರೆಗೆ ೧೨ ಬೆರಳುಗಳ ಅಂತರದ ಎಣಿಕೆ ಆಗುವುದು. ಅಂತಹ ದಕ್ಷಿಣಾಕ್ಷಿಯ ತುದಿಯಲ್ಲಿ ವಿಶ್ವನಿದ್ದಾನೆ. ಬ್ರಹ್ಮರಂಧ್ರದಲ್ಲಿ ತುರ್ಯನು ವಿದ್ಯಮಾನನಾಗಿದ್ದಾನೆ. ಇಂತಹ ಪುರುಷನಾಮಕ ಶ್ರೀಹರಿಯು ದೇಹಾದ್ಯಂತ ಹಬ್ಬಿ ಹರಡಿರುವ ೭೨,೦೦೦ ನಾಡಿಗಳಲ್ಲಿ ಅಂತಸ್ಥಿತನಾಗಿದ್ದು, ನಾಡೀಗತ ಕ್ರಿಯೆಗಳನ್ನು ಮಾಡಿ ಮಾಡಿಸುತ್ತಿರುವನು. ॥೧೦॥

**ಪುರುಷನಾಮಕ** = ಪುರುಷ ಎಂಬ ಹೆಸರಿನ ಶ್ರೀ ಪರಮಾತ್ಮನು, **ಸರ್ವಜೀವರೊಳಿರುವ** = ಸಮಸ್ತಜೀವರಾಶಿಗಳಲ್ಲಿ ಇರುವ, **ದೇಹಾಕಾರ ರೂಪದಿ** = ಆಯಾಯಾ ದೇಹಗಳಲ್ಲಿ ಜೀವರ ಉಂಗುಷ್ಠದಿಂದ ಆರಂಭಿಸಿ ಶಿರಸ್ಸಿನ ಪರ್ಯಂತ ಆಯಾಯಾ ದೇಹದಂತೆ ಆಕಾರವನ್ನು ಹೊಂದಿದವನಾಗಿ, **ಇಪ್ಪ** = ಇರುವವನಾಗಿದ್ದಾನೆ. **ಕರಣನಿಯಾಮಕ** = ಆಯಾಯಾ ದೇಹಗತ ಇಂದ್ರಿಯಗಳನ್ನು ನಿಯಮನ ಮಾಡತಕ್ಕ **ಹೃಷೀಕ** = ಹೃಷೀಕೇಶ ನಾಮಕ ಶ್ರೀ ಪರಮಾತ್ಮನು (ಹೃಷೀಕ–ಇಂದ್ರಿಯಗಳಿಗೆ, ಪ–ಈಶ ಅಂದರೆ, ನಿಯಾಮಕನು ಎಂದರ್ಥ) **ಇಂದ್ರಿಯಗಳಲಿ** = ಆಯಾಯಾ ಇಂದ್ರಿಯಗಳಲ್ಲಿದ್ದು, ಹೃಷೀಕೇಶನು ನಿಯಮಿಸುತ್ತಾ, ಇಂದ್ರಿಯ ವ್ಯಾಪಾರಗಳನ್ನು ಮಾಡಿ. ಇಂದ್ರಿಯಾಭಿಮಾನಿ ದೇವತೆಗಳ ದ್ವಾರಾ ಮಾಡಿಸುತ್ತಿರುವನು, **ತುರಿಯನಾಮಕ** = ತುರ್ಯ ಎಂಬ ಹೆಸರಿನಿಂದ **ವಿಶ್ವ** = ವಿಶ್ವರೂಪಿ ಶ್ರೀ ಪರಮಾತ್ಮನು **ಉತ್ತಮಾಂಗದಿ** = ಶಿರಸ್ಸಿನ ಮೇಲೆ, **ಹನ್ನೆರಡು ಬೆರಳುಳಿದ್ದು** = ಶಿರಸ್ಸಿನ ಮಧ್ಯ ಬ್ರಹ್ಮರಂಧ್ರದಿಂದ ಆರಂಭಿಸಿ, ಬಲಗಣ್ಣಿನ ತುದಿಯವರೆಗೆ ಇರುವ ಅಂತರವು ೧೨ ಬೆರಳುಗಳ ಉದ್ದದಷ್ಟು ಪರಿಮಾಣವಾಗುವುದು. ಇಂತಹ ದಕ್ಷಿಣಾಕ್ಷಿಯ ತುದಿಯಲ್ಲಿರುವ ವಿಶ್ವನಾಮಕನು **ಎರಡಧಿಕ ಎಪ್ಪತ್ತುಸಾವಿರ ನಾಡಿಯೊಳು** = ದೇಹಾದ್ಯಂತ ಹಬ್ಬಿ ಹರಡಿರುವ ೭೨,೦೦೦ ಸಂಖ್ಯಾಕವಾದ ನಾಡಿಗಳಲ್ಲಿ **ಇಪ್ಪ** = ವಿದ್ಯಮಾನಗಿದ್ದಾನಾನೆ. ॥೧೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ಜೀವರ ಸ್ವರೂಪಗತ ವಿದ್ಯಮಾನಗಳನ್ನು ಹೇಳತಾರೆ. ಹಿಂದೆ ಜೀವನ ಯಾವದವಯವಗಳಲ್ಲಿ ಅವಯವಾಕಾರರೂಪ ಒಂದು ಹೇಳಲ್ಪಟ್ಟಿದೆ. ಆ ರೂಪ ದಾವದೆಂದರೆ ಹೇಳತಾರೆ.

**ಪುರುಷ** ಎಂತ ನಾಮ ಪಡೆದರೂಪ ಒಂದು ಜೀವನಲ್ಲಿ ಇರೋದಾಗಿದೆ. ಸಮಸ್ತಜೀವರಲ್ಲೂನೂ ಒಂದೊಂದು ರೂಪದಿಂದ ಇದ್ದಾನೆ. ಅವಗೆ ಆವಾಸಸ್ಥಾನ ದಾವದು ಎಂದರೆ ಜೀವರ ಉಂಗುಷ್ಟ ಆರಂಭ ಮಾಡಿ ಶಿರದವರಿಗೂ ಯಾವದವಯವಗಳಲ್ಲಿ ದೇಹಾಕಾರರೂಪದಿಂದ ಇರುತ್ತಾನೆ. ಇದೇ ಇವಗೆ ಆವಾಸಸ್ಥಾನ. ಈ ಪ್ರಕಾರ ಇರತಕ್ಕ ರೂಪಕ್ಕೆ ಪುರುಷರೂಪ ಎಂತ ಹೆಸರು. ಪುರುಷ ಎಂತ ಹ್ಯಾಂಗೆ ಹೆಸರು ಬಂತು ಅಂದರೆ ಜೀವಗೆ ಪುರುಷ ಎಂತ ನಾಮ ಉಂಟು. ಹ್ಯಾಂಗೆ ಎಂದರೆ '**ದ್ವಾವಿಮೌ ಪುರುಷೌ ಲೋಕೇ**' ಎಂಬ ಪ್ರಮಾಣಾನುಸಾರ ಕ್ಷರ ಪುರುಷರು ಜೀವರು, ಅಕ್ಷರ ಪುರುಷಳು ರಮಾ. ಆದ್ದರಿಂದ ಪುರುಷಶಬ್ದ ಸಂಕೇತಕರಾದ ಜೀವರಲ್ಲಿ ಜೀವಾಕಾರದಂತೆ ಇರತಕ್ಕ ರೂಪಕ್ಕೆ ಪುರುಷ ಎಂತ ಅಧಿಷ್ಠಾನವನ್ನು ಅನುಸರಿಸಿ ಬರೋದಾಯಿತು. ಜೀವನ ದೇಹಾಕಾರದಿಂದ ಪುರುಷರೂಪಿ ಪರಮಾತ್ಮ ಜೀವರ ಸ್ವರೂಪದೇಹದಲ್ಲಿದ್ದಾನೆ. ಜೀವರ ಸ್ವರೂಪದೇಹಗತ ಇಂದ್ರಿಯಗಳ ನಿಯಮನ ಮಾಡತಕ್ಕವ.

ಹೃಷೀಕ ಎಂದರೆ ಇಂದ್ರಿಯಗಳು, ಪ ಎಂದರೆ ಪಾಲನ ಮಾಡತಕ್ಕವ, ಅಂದರೆ ಇಂದ್ರಿಯಗಳಿಗೆ ನಿಯಮನ ಮಾಡಿ ಪಾಲಿಸತಕ್ಕವ ಎಂತ ತಾತ್ಪರ್ಯ. ಇಂದ್ರಿಯಾಭಿಮಾನಿಯಾದವ ತುರ್ಯನಾಮಕ ವಾಸುದೇವನು. ಉತ್ತಮಾಂಗ ಶಿರಸ್ಸು, ಶಿರಸ್ಸು ಆರಂಭ ಮಾಡಿ ಹನ್ನೆರಡು ಬೆರಳು ಅಳಕೊಂಡು, ಎಲ್ಲಿಯವರೆಗೆ ಹನ್ನೆರಡು ಬೆರಳು ಆಗತದೋ ಆ ಸ್ಥಳದಲ್ಲಿ ವಿಶ್ವ, ಎಂದರೆ

ಶಿರಸ್ಸು ಆರಂಭಮಾಡಿ ಎಣಿಕೆ ಹಾಕಿದರೆ ದಕ್ಷಿಣಾಕ್ಷಿಮುಖದವರಿಗೆ ಹನ್ನೆರಡು ಬೆರಳು ಆಗತದೆ. ಆದ್ದರಿಂದ ದಕ್ಷಿಣಾಕ್ಷಿಮುಖದಲ್ಲಿ ವಿಶ್ವ ಇದ್ದಾನೆಂದು ತಿಳಿಯಬೇಕು. ಇದೇ ವಿಶ್ವರೂಪಿ ಪರಮಾತ್ಮ ಜೀವನ ಸ್ವರೂಪದೇಹಗತ ಎಪ್ಪತ್ತೆರಡುಸಾವಿರ ರೂಪದಿಂದ ಇದ್ದಾನೆ. ಈ ಪ್ರಕಾರ ಜೀವರ ಸ್ವರೂಪ ದೇಹದಲ್ಲಿ ದೇಹಾಕಾರನಾಗಿ, ಇಂದ್ರಿಯಗಳ ನಿಯಾಮಕನಾಗಿ, ಇಂದ್ರಿಯಾಭಿಮಾನಿಯಾಗಿ, ನಾಡೀ ಅಂತರ್ಗತನಾಗಿ ಪರಮಾತ್ಮನ ವ್ಯತಿರಿಕ್ತ ಬ್ರಹ್ಮವಾಯುಗಳ ಪ್ರೇವೇಶ ಎಂಬುದು ಇಲ್ಲ. ಎಲ್ಲ ಪರಮಾತ್ಮನೇ ಎಂತ ತಿಳಿಯಬೇಕು. ||೧೦||

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ

ಪುರುಷನಾಮಕನಾದ ಶ್ರೀ ಪರಮಾತ್ಮನು ಜೀವನಸ್ವರೂಪದೇಹವು ಯಾವ ಆಕಾರದಲ್ಲಿರುವುದೋ, ಅಂದರೆ, ಮನುಷ್ಯಾಕಾರವೋ, ಮೃಗಾಕಾರವೋ, ಪಕ್ಷಿಯೋ, ಅಂತು ಜೀವನ ಸ್ವರೂಪವನ್ನನುಸರಿಸಿ ಸರ್ವಜೀವರ ದೇಹದಲ್ಲಿರುವನು. ಹೃಷೀಕೇಶನಾಮಕನು ಇಂದ್ರಿಯಗಳಲ್ಲಿ ಇಂದ್ರಿಯ ಪ್ರೇರಕನಾಗಿರುವನು. ವಿಶ್ವನಾಮಕನು ತುರ್ಯನಾಮಧೇಯದಿಂದ ತಲೆಗೆ ಮೇಲೆ ೧೨ ಅಂಗುಲಗಳ ಎತ್ತರದಲ್ಲಿ ಇರುವನು. ಈ ವಿಷಯದಲ್ಲಿ ೮ನೆಯ ಸಂಧಿ, ೩ನೆಯ ಪದ್ಯದ ತಾತ್ಪರ್ಯವನ್ನು ಬರೆಯುವ ಸಂದರ್ಭದಲ್ಲಿ ಪ್ರಮಾಣ ಸಹಿತವಾಗಿ ವಿಶದ ಮಾಡಿರುತ್ತೆ. ಇದಲ್ಲದೆ ದೇಹಗತ ೭೨ ಸಾವಿರ ನಾಡಿಗಳಲ್ಲಿ ಸಹ ಇರುತ್ತಿರುವನು. ತುರ್ಯ, ವಿಶ್ವ, ಈ ರೂಪಗಳನ್ನು ಹೇಳಿದ್ದರಿಂದ,

**"ಪರಮಾತ್ಮಾ ಚತುರೂರೂಪಃ ಸರ್ವಪ್ರಾಣಿಶರೀರಗತಃ"**

–ಎಂಬ ಪ್ರಮಾಣಾನುಸಾರವಾಗಿ ವಿಶ್ವ, ತೈಜಸ, ಪ್ರಾಜ್ಞ, ತುರ್ಯ ಎಂಬ ನಾಲ್ಕು ರೂಪಗಳಿಂದ ಜೀವರ ದೇಹದಲ್ಲಿರುವನೆಂದು ತಾತ್ಪರ್ಯ. ||೧೦||

(೩) **ಭಾವದರ್ಪಣಟೀಕಾ ವ್ಯಾಖ್ಯಾನ :**

ಪುರುಷೇತಿ ॥ ಉತ್ತಮಾಂಗೇತಿ ॥ ಶಿರಸ್ಸಿದಲ್ಲಿ ಎಂಬರ್ಥ.

**"ಉತ್ತಮಾಂಗಂ ಶಿರಃ ಶೀರ್ಷಮಿತ್ಯಮರಃ"**

ಇಲ್ಲಿ ತುರ್ಯನಾಮಕ ವಿಶ್ವರೂಪನು ಇದ್ದಾನೆಂದು ನಿಶ್ಚಯಿಸತಕ್ಕದ್ದು. ಇಲ್ಲಿ ಆಕ್ಷೇಪ:-

**"ವಿಷ್ಣುಸ್ತು ತುರ್ಯರೂಪೇಣ ದ್ವಾದಶಾಂತೇ ವ್ಯವಸ್ಥಿತಃ" -ಎಂಬ ಛಾಂದೋಗ್ಯಾನುಸಾರ** ಶಿರಸ್ಸು ಆರಭ್ಯ ಹನ್ನೆರಡು ಅಂಗುಲದ ಪರಿಮಿತ ಪ್ರದೇಶದಲ್ಲಿ ಇದ್ದಾನೆಂದು ಕೆಲವರು ಟಿಪ್ಪಣಿಯಲ್ಲಿ ಉದಾಹರಿಸಿದ್ದಾರೆ, ಇದು ಪೂರ್ವದಲ್ಲಿ ಉಕ್ತವಾದ ಪ್ರಮಾಣಕ್ಕೆ ವಿರೋಧ ಬರುತ್ತದೆ. ಮತ್ತು **"ದ್ವಾದಶ ಇತ್ಯಸ್ಯ ಮಸ್ತಕಮಾರಭ್ಯ ಉಪರಿ ಗಗನೇ ದ್ವಾದಶಾಂಗುಲ ಪ್ರದೇಶೇ ಇತ್ಯರ್ಥ ಇತಿ ಆಹುಃ ॥ ವಸ್ತುತಸ್ತು ನಾಸಿಕ ಮೂಲಮಾರಭ್ಯ ಉಪರಿ ದ್ವಾದಶಾಂಗುಲಾಂತೇ ಮಸ್ತಕಮಧ್ಯ ಇತ್ಯರ್ಥಃ".**

-ಎಂತ ಹೇಳಿದಂಥ **ಶ್ರೀನಿವಾಸತೀರ್ಥರ ಟಿಪ್ಪಣಿಗನುಸಾರ** ಉತ್ತಮಾಂಗದಿ ಎಂದರೆ, ಮಸ್ತಕಮಧ್ಯದಲ್ಲಿ ದ್ವಾಸಪ್ತತಿಸಹಸ್ರನಾದಿ ಪ್ರಾಂತಕ ಸಂಬಂಧಿಸಿಕೊಂಡು ಇದ್ದಾನೆಂದು ಜಗನ್ನಾಥದಾಸಾರ್ಯರ ತಾತ್ಪರ್ಯ. ಹೃಷೀಕಪ-ಎಂದರೆ, ಇಂದ್ರಿಯಪಾಲಕ ಎಂದರ್ಥ. ॥೧೦॥

(೪) **ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :-**

"ಪುರುಷನಾಮಕ"-ಇತಿ ॥ "ತುರೀಯ"-ವಿಷ್ಣುಃ ತುರೀಯ ರೂಪೇಣ ದ್ವಾದಶಾಂತೇ ವ್ಯವಸ್ಥಿತಃ"-ಇತಿ **ಮಾಂಡೂಕ ಭಾಷ್ಯೇ**- "ಕೇ ಶಾಂತೇ ವರ್ತತೇ ತುರ್ಯಃ ಕಪಾಲಾತ್ ಉಪರಿಸ್ಥಿತಃ"-ಇತಿ ಚ ॥೧೦॥

**ಕನ್ನಡಾರ್ಥ :-**

ದೇಹದಲ್ಲಿ ವಿದ್ಯಮಾನನಾಗಿರುವ ಶ್ರೀ ಪರಮಾತ್ಮನ ಪುರುಷ, ವಿಶ್ವ ಮತ್ತು ತುರ್ಯ ರೂಪಗಳನ್ನು ತಿಳಿಸುತ್ತಾರೆ. ತುರ್ಯರೂಪದ ವಿಷಯದಲ್ಲಿ **ಮಾಂಡೂಕ ಭಾಷ್ಯದ ಪ್ರಮಾಣವು** ಇಂತಿದೆ.

"ವಿಷ್ಣುವು ತುರ್ಯರೂಪದಿಂದ ಶಿರಸ್ಸಿನಲ್ಲಿಯೇ ಭ್ರೂಮಧ್ಯದಿಂದ ದ್ವಾದಶ ಬೆರಳಿನ ಊರ್ಧ್ವಭಾಗದಲ್ಲಿ ಇರುತ್ತಾನೆ."

"ಕಪಾಲದ ಮೇಲ್ಭಾಗದ ಕೂದಲುಗಳ ತುದಿಯಲ್ಲಿ ಆ ತುರ್ಯರೂಪವಿದೆ"- ಎಂದು ಹೇಳುವ ವಾಕ್ಯಗಳು ಶಾಸ್ತ್ರಾಧಾರವಾಗಿವೆ. ॥೧೦॥

**(ಈ) "ಗುರುಹೃದಯ ಪ್ರಕಾಶಿಕೆ" ವ್ಯಾಖ್ಯಾನ**

ದೇಹಸ್ಥ ಪುರುಷಾದಿ ರೂಪ ನಿರೂಪಿಸುತ್ತಾರೆ- ಪುರುಷನಾಮಕನೆಂದು, ಸರ್ವಜೀವರಲ್ಲೂ ದೇವರು ದೇಹಾಕಾರದಿಂದ ಪುರುಷನಾಮಕನಾಗಿರುವನು, ಕಣ್ಣು ಮೊದಲಾದ ಕರಣಗಳಿಗೆ ನಿಯಾಮಕನಾಗಿ ಹೃಷೀಕೇಶರೂಪದಿಂದ ಜ್ಞಾನಕರ್ಮೇಂದ್ರಿಯಗಳಲ್ಲಿರುವನು. ಉತ್ತಮಾಂಗವೆಂಬ ಶಿರಸ್ಸಿನ ಮೇಲೆ ಹನ್ನೆರಡು ಬೆರಳ ಪ್ರದೇಶದಲ್ಲಿ, ಸಾಕ್ಷಿಯಾದ ಕಾರಣ ತುರೀಯನೆಂಬ ನಾಮದಿಂದ ಇರುವನು. ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ವಿಶ್ವನಾಮಕನಾಗಿರವನು. ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಸಮಸ್ತ ಜೀವರಾಶಿಗಳಲ್ಲಿ ಆಯಾಯಾ ದೇಹಾಕಾರದಿಂದ ಇರತಕ್ಕ ಪುರುಷನಾಮಕ ಪರಮಾತ್ಮನ ವಿಚಾರ ತಿಳಿಸುತಾರೆ- **ಪುರುಷನಾಮಕ** ಎಂಬ ಪ್ರಸಕ್ತ ೧೦ನೆಯ ಪದ್ಯದಿಂದ.

೧. ಅನಂತಾನಂತಕೋಟಿ ಜೀವರಾಶಿಗಳಲ್ಲಿ ತ್ರಿವಿಧವರ್ಗದ ಜೀವರಿದ್ದಾರೆ. ಅವರ ಸ್ವರೂಪದೇಹವು, ದೇವ, ಮಾನವ, ಮೃಗ, ಪಕ್ಷಿ ಇತ್ಯಾದಿ ನಾನಾ ಪ್ರಕಾರವಾಗಿದೆ. ಆಯಾಯಾ ಜೀವರ ಸ್ವರೂ ಪದೇಹದಂ ದೇಹಾಕಾರರೂಪದಿಂದಿದ್ದಾನೆ ಶ್ರೀ ಪರಮಾತ್ಮ. ಸ್ಥೂಲದೇಹವು ಯಾವ ಯಾವ ಯೋನಿಗಳಲ್ಲಿ ಪ್ರಾಪ್ತವಾಗಿದೆಯೋ, ಅದರಂತೆ ದೇಹಾಕಾರ ರೂಪಿಯಾಗಿದ್ದಾನೆ. ಇಂತಹ ಪರಮಾತ್ಮನಿಗೆ **ಪುರುಷ**-ಎಂದು ಹೆಸರು ಪುರು—ಎಂದರೆ ಶರೀರ ಅಥವಾ ದೇಹ. ಆ ದೇಹದಲ್ಲಿ ಆವಾಸನಾಗಿರುವ ಪ್ರಯುಕ್ತ **ಪುರುಷನಾಮಕನು**, ಇವನೇ **ವಾಸುದೇವ**ರೂಪಿ ಶ್ರೀಪರ ಮಾತ್ಮನು.

೨. ಇಂತಹ ದೇಹದಲ್ಲಿ ಕರಚರಣಾದ್ಯವಯವಗಳಿವೆ. ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮತ್ತು ಏಕಾದಶೇಂದ್ರಿಯ ವಾದ ಮನಸ್ಸು ಇತ್ಯಾದಿ ಶರೀರಗತ ಇಂದ್ರಿಯಗಳು. ಇಂತಹ ಇಂದ್ರಿಯ ಗಳಿಗೆ ಪಾಲಕನಾಗಿ, ಇಂದ್ರಿಯ ನಿಯಾಮಕನಾಗಿರುವುದರಿಂದ, ಶ್ರೀ ಪರ ಮಾತ್ಮನಿಗೆ **ಹೃಷಿಕೇಶ** ಎಂದು ಹೆಸರು. "ಹೃಷಿಕ"-ಎಂದರೆ ಇಂದ್ರಿಯ ಗಳು ಎಂದರ್ಥ. ಅವುಗಳಿಗೆ "ಈಶ"—ಎಂದರೆ ನಿಯಾಮಕನು. ಅಂದರೆ **ಕರಣನಿಯಾಮಕ**ನಾದ ಹೃಷಿಕೇಶನು. ಹೃಷೀಕ—ಇಂದ್ರಿಯಗಳನ್ನು ಪ-ಪಾಲನೆ ಮಾಡುವುದರಿಂದ, **ಹೃಷೀಕಪ**ನೆಂತಲೂ ಹೆಸರು.

೩. ಪುರುಷನಾಮಕ, ಹೃಷೀಕೇಶನಾಮಕ ಪರಮಾತ್ಮನೇ **ತುರ್ಯ**ನೆಂಬ ಹೆಸರಿನಿಂದ ಪ್ರತಿಜೀವನ ಶಿರಸ್ಸಿನ ಮಧ್ಯದಲ್ಲಿದ್ದಾನೆ. ವಿಷ್ಣುನಾಮಕ ಪರಮಾತ್ಮನು ಭ್ರೂಮಧ್ಯದಿಂದ ಆರಂಭಿಸಿ, ೧೨ ಅಂಗುಲ ಎತ್ತರದಲ್ಲಿ ಶಿರಸ್ಸಿನಲ್ಲಿ ತುರ್ಯರೂಪದಿಂದ್ದಾನೆ.

**ಪ್ರಮಾಣ.**

**(೧) "ವಿಷ್ಣುಃ ತುರೀಯ ರೂಪೇಣ ದ್ವಾದಶಾಂತೇ ವ್ಯವಸ್ಥಿತಃ" –ಮಾಂಡೂಕಭಾಷ್ಯವಚನ.**

**(೨) "ದ್ವಾದಶ ಇತ್ಯಸ್ಯ ಮಸ್ತಕಮಾರಭ್ಯ ಉಪರಿ ಗಗನೇ ದ್ವಾದಶಾಂಗುಲಪ್ರದೇಶೇ ವ್ಯವಸ್ಥಿತಃ"**

**–ಶ್ರೀನಿವಾಸತೀರ್ಥರ ಟಿಪ್ಪಣಿ.**

೪. ಆ ತುರ್ಯರೂಪಿ ಶ್ರೀ ಪರಮಾತ್ಮನೇ ಶಿರಸ್ಸಿನ ಮಧ್ಯದಿಂದ ಆರಂಭಿಸಿ ೧೨ ಅಂಗುಲದ ಪರಿಮಿತಿಯಲ್ಲಿ ಸರ್ವಜೀವರ ಬಲಗಣ್ಣಿನ ತುದಿಯಲ್ಲಿ (ದಕ್ಷಿಣಾಕ್ಷಿ ಮುಖ) **ವಿಶ್ವನಾಮಕ**ನಾಗಿದ್ದಾನೆ. ಇಂತಹ ದಕ್ಷಿಣಾಕ್ಷಿಮುಖಗತ ವಿಶ್ವನೇ ಸರ್ವಜೀವರ ಜಾಗ್ರದಾವಸ್ಥೆಗೆ ಪ್ರೇರಕನು.

೫. ಪೂರ್ವೋಕ್ತ (1) ಪುರುಷರೂಪ. (2) ಹೃಷೀಕೇಶರೂಪ. (3) ತುರ್ಯರೂಪ ಮತ್ತು (4) ವಿಶ್ವರೂಪ ಇವುಗಳಿಂದ ವಿದ್ಯಮಾನನಾಗಿರುವ ಶ್ರೀ ಪರಮಾತ್ಮನು ದೇಹಾಕಾರನಾಗಿ, ಕರಣನಿಯಾಮಕನಾಗಿ ಬ್ರಹ್ಮರಂಧ್ರಸ್ಥಿತ ಸಹಸ್ರದಳಕಮಲದಲ್ಲಿ ಇದ್ದು. ಜಾಗ್ರದಾವಸ್ಥಾಪ್ರೇರಕನಾಗಿರುವುದಲ್ಲದೆ, ಶರೀರಾದ್ಯಂತ ಹಬ್ಬಿ ಹರಡಿರುವ ೭೨,೦೦೦ (ಎರಡಧಿಕ ಎಪ್ಪತ್ತು ಸಾವಿರ) ನಾಡೀಗತ ರೂಪಗಳಿಂದ **ಬೃಹತೀ ಋಗ್ವಾಚ್ಯ**ನಾಗಿ, ನಾಡಿಗಳ ದ್ವಾರಾ, ಸಮಸ್ತಶರೀರಗತಕ್ರಿಯೆಗಳನ್ನು ನಡೆಸಿ ನಡೆಯಿಸುತ್ತಿರುವನು. ಶರೀರಸೃಷ್ಟಿಗೆ ಉಪಾದಾನಕಾರಣಗಳಾದ ೨೪ ತತ್ತ್ವಗಳು × ಮೂಲ ಪ್ರಕೃತಿಯ ಗುಣತ್ರಯಗಳು × ಶೀರ್ಷಗತ ಸಹಸ್ರದಳದ ಕಮಲದಲ್ಲಿ ವಿಶ್ವಾದಿ ಸಹಸ್ರರೂಪಗಳು (ತುರ್ಯ) = ೭೨,೦೦೦ ನಾಡೀಗತ ಭಗವದ್ರೂಪಗಳು. ॥೧೦॥

# ಪದ್ಯ (೧೧)

**ಮೂಲ :-**

**ವ್ಯಾಪಕನು ತಾನಾಗಿ ಜೀವ ಸ್ವ ।**
**ರೂಪದೇಹದ ಒಳಹೊರಗೆ ನಿ ।**
**ರ್ಲೇಪನಾಗಿಹ ಜೀವಕೃತ ಕರ್ಮಗಳನಾಚರಿಸಿ ॥**
**ಶ್ರೀ ಪಯೋಜಭವೇರರಿಂದ ಪ್ರ ।**
**ದೀಪವರ್ಣ ಸ್ವಮೂರ್ತಿ ಮಧ್ಯಗ ।**
**ತಾ ಪೊಳೆವ ವಿಶ್ವಾದಿರೂಪದಿ ಸೇವೆ ಕೈಗೊಳುತ ॥ ॥೧೧॥**

**ಅವತರಣಿಕೆ :-**

ಜೀವರ ಸ್ವರೂಪದೇಹದ ಒಳ ಹೊರಗೆ ವ್ಯಾಪಿಸಿಕೊಂಡು, ಜೀವನಿಂದ ಅವನ ಸ್ವರೂಪಯೋಗ್ಯತೆಗನುಸಾರವಾದ, ಅನಾದಿಕರ್ಮಕ್ಕನುಗುಣವಾದ ಮಾಡಿಸಬೇಕಾದ ಸಮಸ್ತಕರ್ಮಗಳನ್ನೂ, ಜೀವನ ಪರವಾಗಿ ತಾನೇ ಬಿಂಬ ಕ್ರಿಯಾದ್ವಾರಾ ಮಾಡಿ, ಜೀವನಿಂದ ಮಾಡಿಸುತ್ತಾ, ಶ್ರೀ ಲಕ್ಷ್ಮೀ, ಬ್ರಹ್ಮ, ರುದ್ರೇಂದ್ರಾದಿ ಸಮಸ್ತದೇವತಾಗಣದಿಂದ ಸಂಸೇವ್ಯಮಾನನಾದ ವಿಶ್ವಾದಿ ರೂಪಗಳಿಂದ ಜ್ಞಾನಾನಂದಮಯನಾಗಿ ಪರಿಶೋಭಿಸುತ್ತಿರುವ ಬಿಂಬನ ವಿಷಯ ವಿವರಗಳನ್ನು ತಿಳಿಸುತ್ತಾರೆ- **ವ್ಯಾಪಕನು**-ಎಂಬ ಪ್ರಸಕ್ತಸಂಧಿಗತ ೧೧ನೆಯ ಈ ಪದ್ಯದಿಂದ. ॥೧೧॥

**ಪ್ರತಿಪದಾರ್ಥ :-**

**ಜೀವ ಸ್ವರೂಪದೇಹದ** = ಸಮಸ್ತ ಜೀವರ ಅನಾದಿನಿತ್ಯವಾದ ಚಿದಾನಂದಾತ್ಮಕವಾದ ಸ್ವರೂಪದೇಹದ, **ಒಳಹೊರಗೆ** = ಅಂತರ್ಯಾಮಿ

ರೂಪದಿಂದ ಅಂತಸ್ಥಿತನಾಗಿ ಒಳಗಿದ್ದು, ಸ್ವರೂಪ ಶರೀರಗತ ಇಂದ್ರಿಯಗಳಲ್ಲಿ ಬಹಿಃಶ್ಚ ವಿದ್ಯಮಾನನಾಗಿದ್ದು, **ವ್ಯಾಪ್ಯಕನು ತಾನಾಗಿ**= ಸ್ವರೂಪ ಶರೀರದ ಅಂತರ್ಬಹಿಶ್ಚ ವ್ಯಾಪಿಸಿಕೊಂಡವನಾಗಿ, **ಜೀವಕೃತಕರ್ಮಗಳ**= ಜೀವನು ಅಸ್ವಂತತ್ರನು. ಅವನ ಕರ್ತೃತ್ವಶಕ್ತಿಯು ಪರಾಧೀನವಾದದ್ದು. ಆ ಕಾರಣದಿಂದ ಬಿಂಬನಾದ ಶ್ರೀ ಪರಮಾತ್ಮನೇ ಜೀವರ ಸ್ವರೂಪದೇಹಗತನಾಗಿದ್ದು, ಜೀವನಿಂದ ಮಾಡಲ್ಪಡಬೇಕಾದ ಸಮಸ್ತ (ಶುಭ, ಮಿಶ್ರ, ಅಶುಭಕರ್ಮಗಳನ್ನೂ **ಆಚರಿಸಿ**= ಬಿಂಬಕ್ರಿಯಾದ್ವಾರಾ ತಾನೇ ಜೀವನ ಪರವಾಗಿ, ಅವನ ಹೆಸರಿನಲ್ಲಿ ಮಾಡಿ. **ನಿರ್ಲೇಪನಾಗಿಹ**— ಇಂತು ಜೀವಕೃತಕರ್ಮಗಳನ್ನ ಆಚರಿಸಿದ್ದಾಗ್ಯೂ, ತಾನು ಆ ಕರ್ಮಗಳ ಲೇಪನದಿಂದ ದೂರನಾಗಿ, ಪರಮವಿಲಕ್ಷಣದಾಗಿ, ಜೀವಜಡರಾಶಿಗಳಿಂದ ಅತ್ಯಂತ **ಭಿನ್ನನಾಗಿದ್ದಾನೆ. ಶ್ರೀ**= ಪರಮ ಮಂಗಳ ಸ್ವರೂಪಿಣಿಯರಾದ ಶ್ರೀ ಲಕ್ಷ್ಮೀದೇವಿ (ಸತ್ವಗುಣಾಭಿಮಾನಿ). **ಪಯೋಜಭವ** = ಚತುರ್ಮುಖಬ್ರಹ್ಮದೇವರು (ಪಯೋಜ= ಶ್ರೀ ಪದ್ಮನಾಭದೇವರ ನಾಭೀಕಮಲ. ಭವ= ಆ ಕಮಲೋದ್ಭವರು) **ಭವ** = ಭವನಾಮಕ ಶ್ರೀಮಹರುದ್ರದೇವರು, **ಈರ**= ಭಗವದ್ವಿಷಯದಲ್ಲಿ ಯಾವತ್ತೂ ಜ್ಞಾನತಿರೋಧಾನವಾಗದ, ಪರಶುಕ್ಲತ್ರಯರಾದ ಶ್ರೀ ವಾಯುದೇವರು, **ಇಂದ** = ಇಂತಹ ದೇವತಾ ಸಮೂಹದಿಂದ, **ಪ್ರದೀಪವರ್ಣ**= ಜ್ಞಾನಾನಂದಾದಿ ಅಪ್ರಾಕೃತಶರೀರದ ದಿವ್ಯಕಾಂತಿಯಿಂದ ಪ್ರಕಾಶಮಾನವಾದ ಬಣ್ಣ ಉಳ್ಳವನಾಗಿ. **ಸ್ವಮೂರ್ತಿ**= ಜೀವನ ಸ್ವರೂಪದೇಹದಲ್ಲಿ ಸ್ವಾಖ್ಯರೂಪದಿಂದ **ಮಧ್ಯಗ** = ಸ್ವರೂಪ ದೇಹದ ಮಧ್ಯದಲ್ಲಿ (ಹೃತ್ಕಮಲಕರ್ಣಿಕಾ ಮಧ್ಯದಲ್ಲಿ) **ವಿಶ್ವಾದಿರೂಪದಿ**= ವಿಶ್ವ, ಪುರುಷ, ತುರ್ಯ ಇತ್ಯಾದಿ ಪೂರ್ವಪದ್ಯಗಳಲ್ಲಿ ಉಕ್ತವಾಗಿರುವಂತೆ ನಾನಾರೂಪವಿಶೇಷಗಳಿಂದ **ಸೇವೆಗೊಳುತ** = ರಮಾಬ್ರಹ್ಮಾದಿ ದೇವತಾವರ್ಗದಿಂದ ಸಂಸೇವ್ಯಮಾನನಾಗಿ **ತಾಪೊಳೆವ** = ತಾನೇ ಬಿಂಬರೂಪದಿಂದ ಪ್ರಕಾಶಮಾನನಾಗಿದ್ದು, ಜೀವರಿಗೆ ಅಪರೋಕ್ಷದ್ವಾರಾ ತನ್ನ ದರ್ಶನಭಾಗ್ಯವನ್ನು ಕರುಣಿಸುವನು. ॥೧೧॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

### ವಿಶೇಷಾರ್ಥ

ಇನ್ನೂ ಜೀವಾಂತರ್ಗತ ವಿಚಾರವನ್ನೇ ಹೇಳತಾರೆ.

ಪೂರ್ವೋಕ್ತಪ್ರಕಾರ ವ್ಯಾಪ್ತನಾಗಿದ್ದಾನೆ, ಜೀವನಲ್ಲಿ ಎಂತ ತಾತ್ಪರ್ಯ. ಮತ್ತು ಜೀವನಲ್ಲಿ ತಾನಾಗಿ ಎಂದರೆ, ಪರಮಾತ್ಮನು ತಾನಾಗೇ ಬ್ರಹ್ಮ ವಾಯುಗಳ ಅಪೇಕ್ಷೆ ಇಲ್ಲದೇನೇ ಜೀವಸ್ವರೂಪದೇಹದ ಒಳಗೆ ಮತ್ತು ಹೊರಗೆ ಅಂದರೆ. ಒಳಗೆ ಇದ್ದು ಕಾಣದಂತೆ ಇರತಕ್ಕ ಮನೋಇಂದ್ರಿಯ, ಹೊರಗೆ ಅಂದರೆ ಹೊರಗೆ ಕಾಣತಕ್ಕ ದಶೇಂದ್ರಿಯಗಳು, ಜೀವನ ಸ್ವರೂಪ ದೇಹಗತ ಒಳ ಹೊರಗೆ ಎಂತ ಸಂಕೇತದಿಂದ ಕರಸತಕ್ಕ ಏಕಾದಶೇಂದ್ರಿಯ ಗಳಲ್ಲಿ ನಿರ್ಲೇಪನಾಗಿಹ ಅಂದರೆ ಲೇಪನಾಗದೇ ಇದ್ದಾನೆಂತ ತಾತ್ಪರ್ಯ. ಯಾತರಿಂದ ನಿರ್ಲೇಪ ಎಂದರೆ, ಜೀವನಾದವ ಸ್ಥೂಲದೇಹದಿಂದ ಮಾಡ ತಕ್ಕ ಯಾವತ್ತು ಕರ್ಮಗಳು ಜೀವಾಂತರ್ಗತನಾಗಿ ಇದ್ದು ತಾನು, ಪ್ರಥಮತಃ ಜೀವನ ಸ್ವರೂಪಗತಸ್ವರೂಪೇಂದ್ರಿಯಗಳ ದ್ವಾರಾ (ಶಕ್ತ್ಯನುಸಾರ) ಆಚರಿಸಿ, ಅದರ ಇಚ್ಛಾರೂಪವಾದ ಆಚರಣೆ ಮಾಡಿ, ಜೀವಗೆ ಇಚ್ಛಾ ಕೊಟ್ಟು ತದನಂತರ ಅಲ್ಲಿಂದ ಆ ಕರ್ಮವನ್ನು ಸ್ಥೂಲದೇಹದಲ್ಲಿ ವ್ಯಕ್ತಮಾಡಿ ಸ್ಥೂಲೇಂದ್ರಿಯಗಳ ದ್ವಾರಾ, ಸ್ಥೂಲೇಂದ್ರಿಯಗಳಲ್ಲಿ ಇದ್ದುಕೊಂಡು ಕ್ರಿಯಾ ರೂಪದಿಂದ ಕರ್ಮಗಳ ಆಚರಣೆ ಮಾಡಿ ಮಾಡಿಸಿ, ಹಾಂಗೆ ಆ ಕರ್ಮದಿಂದ ಪ್ರಾಪ್ತವಾಗತಕ್ಕ ಫಲಗಳನ್ನು ಜೀವೇಂದ್ರಿಯಗಳ ದ್ವಾರಾ ಅಚರಣೆ ಮಾಡಿ, ಆ ಕರ್ಮಫಲಭೋಗಕ್ಕೆ ತಾನು ಲೇಪನಾಗದೆ ಜೀವಗೆ ಲೇಪ ಮಾಡುತ್ತ, ತಾನು ಲೇಪರಹಿತನಾಗಿ ಇರೋವನಾಗಿದ್ದಾನೆ. ಮತ್ತು ಜೀವಕರ್ಮಗಳಲ್ಲಿ ಆ ಕರ್ಮ ಜನಿತ ಫಲಗಳಲ್ಲಿ ವಿದ್ಯಮಾನಗಳಾದ ತನ್ನ ಸ್ವಸ್ವರೂಪ ಭೂತಗಳಾದ ತನ್ನ ರೂಪಗಳ ತಾನು ಆಚರಿಸಿ ಸ್ವೀಕಾರ ಮಾಡಿ, ಜೀವಭೋಗ್ಯ ಕರ್ಮಫಲಗಳಿಗೆ ತಾನು ಸಂಬಂಧನಾಗದೇ ತಾನು ನಿರ್ಲೇಪನಾಗಿಹ, ಜೀವನ ಸ್ವರೂಪದೇಹ

ದಲ್ಲಿ ನಿರ್ಲೇಪನಾಗಿಹ ಎಂತ ತಾತ್ಪರ್ಯ. ಮನ ಆದಿ ಏಕಾದಶಸಂಖ್ಯಾಕವಾದ ಜೀವನಸ್ವರೂಪೇಂದ್ರಿಯಗಳಿಂದ ಕರ್ಮಗಳು ಆಚರಿಸೋ ಕ್ರಮ, ಜೀವನಲ್ಲೀಯೂ ಜೀವನ ಇಂದ್ರಿಯಗಳಲ್ಲೀನೂ ಇದ್ದು, ಕರ್ಮಗಳ ಆಚರಿಸಿ ಹಾಗೇ ತತ್ಫಲಗಳಲ್ಲೀನದೆ ಆಚರಿಸಿ ಜೀವಗೆ ಭೋಜನ ಮಾಡಸತಾನೆ. ಎಂದರೆ ತತ್ತ್ವೇಶರ ದ್ವಾರನೇ ಆಗಬೇಕೇ ಹೊರತು ಅನ್ಯಥಾ ಕೊಡೋದಿಲ್ಲ. ಅಲ್ಲಿ ತತ್ತ್ವೇಶರು ದಾರೆಂದರೆ, ಜೀವನ ಸ್ವರೂಪದಲ್ಲಿ ವಾಯ್ವಾದಿ ತತ್ತ್ವೇಶರಿಗೆ ಪ್ರವೇಶ ಇಲ್ಲ ಎಂತ ಹಿಂದೆ ಪ್ರಮಾಣದ ಸಹಿತ ಉದಹರಿಸಲ್ಪಟ್ಟಿತು, ವಾಯ್ವಾದಿ ದೇವತೆಗಳ ಹೇಳಲಿಕ್ಕೆ ಇಲ್ಲ, ಸ್ವರೂಪದಲ್ಲಿ ತತ್ತ್ವೇಶರು ದಾರೆಂದರೆ ಅವರನ್ನ ಹೇಳತೇವೆ. ಹಿಂದೆ ಹತ್ತನೇ ಶ್ಲೋಕದಲ್ಲಿ ಜೀವನ ಅಣುಸ್ವರೂಪದಲ್ಲಿ ಏನು, ಇಂದ್ರಿಯಗಳಲ್ಲಿ ಏನು, ಇಂದ್ರಿಯ ನಿಯಾಮಕತ್ವ ಏನು, ಪರಮಾತ್ಮನೊಬ್ಬನೇ ಎಂತ ಹೇಳತಾರೆ. ಇಲ್ಲಿ ಬ್ರಹ್ಮ-ವಾಯುಗಳ ಪ್ರಸಕ್ತಿ ಇಲ್ಲ. ಹನ್ನೊಂದನೇ ಶ್ಲೋಕದಲ್ಲಿ ಬ್ರಹ್ಮ-ವಾಯುಗಳ ಪ್ರಸಕ್ತಿ ಮಾಡಿದ್ದಾರೆ. ಹನ್ನೆರಡನೇ ಶ್ಲೋಕದಲ್ಲಿ ಜೀವಾಂತರ್ಗತ ವಾಯುದೇವರು ಇದ್ದಂತೆ ಮಾತ್ರ ಪ್ರಥಮತಃ ಪ್ರಶಂಸನ ಮಾಡಿ ತರುವಾಯ ಬ್ರಹ್ಮ ವಾಯು ಸರಸ್ವತೀ ಭಾರತೀ ನಾಲ್ಕು ಮಂದಿ ಲಿಂಗದೇಹದಲ್ಲಿ ಇದ್ದಾರೆಂತ ಪ್ರಶಂಸನ ಮಾಡಿದ್ದಾರೆ. ಹದಿಮೂರನೇ ಶ್ಲೋಕದಲ್ಲಿ ಲಿಂಗದೇಹಕ್ಕೆ ಅಭಿಮಾನಿ ರಮಾದೇವೇರು ಎಂತ ಹೇಳಿದ್ದಾರೆ. ಒಂದು ರೀತ್ಯಾ ನೋಡಿದರೆ, ಬ್ರಹ್ಮ ವಾಯುದೇವರು ಉಭಯರು ಸ್ವರೂಪದಲ್ಲಿ ಇದ್ದಂತೆ ಆಗುತ್ತದೆ. ಒಂದು ರೀತ್ಯಾ ನೋಡಿದರೆ ವಾಯುದೇವರು ಮಾತ್ರ ಸ್ವರೂಪದಲ್ಲಿ ಇದ್ದಂತೆ ಆಗುತ್ತದೆ. ಒಂದು ರೀತ್ಯಾ ನೋಡಿದರೆ ಬ್ರಹ್ಮ-ವಾಯುಗಳು ಸ್ವರೂಪದಲ್ಲಿ ಇಲ್ಲ ಎಂತ ಆಗುತ್ತದೆ. ಈ ಪ್ರಕಾರ ಜೀವನ ಸ್ವರೂಪ ವಿಚಾರ ಹೇಳೋದಕ್ಕೆ ಪ್ರಾರಂಭ ಮಾಡಿದ ಏಳನೇ ಶ್ಲೋಕ ಆರಂಭ ಮಾಡಿ, ಹದಿಮೂರನೇ ಶ್ಲೋಕದವರೆಗೂ ಆಗತಕ್ಕ ಶ್ಲೋಕಾರ್ಥಗಳು ಈ ಪ್ರಕಾರ ಆಗತಾ ಇರೋದಾಗಿ ಅದೆ, ಹ್ಯಾಂಗೆ ಎಂದರೆ, ಲಿಂಗದೇಹಕ್ಕೆ ರಮಾದೇವೇರೇ ಅಭಿಮಾನಿಗಳು ಎಂತ ಹೇಳಿರೋಣದರಿಂದ, ಸ್ವರೂಪದಲ್ಲೇನು ಲಿಂಗದಲ್ಲೇನು ಎರಡು ಸ್ಥಾನಗಳಲ್ಲಿ ಬ್ರಹ್ಮ-ವಾಯುಗಳ ವ್ಯಾಪ್ತಿ ಇಲ್ಲ ಎಂಬುದು

ಅರ್ಥಾತ್ ಸಿದ್ಧವು. ಈ ಪ್ರಕಾರ ಪರಸ್ಪರ ವ್ಯತ್ಯಾಸಗಳಾಗಿ ಅರ್ಥವಾಗತಾ ಅದೆ. ನಿತಾಂತ ಹ್ಯಾಂಗೆ ತಿಳಿಯಬೇಕೆಂದರೆ ಅದರನ್ನ ಹೇಳತೇವೆ.

## ಅರ್ಥ

ವ್ಯಾಪ್ತನು, ಹ್ಯಾಂಗೆ ವ್ಯಾಪ್ತನು ಎಂದರೆ, ಸಮತತ್ವಾಭಿಮಾನಿ ದೇವತಾ ನಾಮ-ರೂಪಗಳು ತಾನೇ ಆಗಿ, ಜೀವನ ಸಚ್ಚಿದಾತ್ಮಕ ವಾದ ಅಣುಸ್ವರೂಪದಲ್ಲಿ, (ಸ್ಥೂಲದೇಹ ಎಂತ ಯಾಕೆ ಮಾಡಬೇಕೆಂದರೆ) ಒಳಹೊರಗೆ ಎಂತ ಪ್ರಯೋಗ ಮಾಡಿ ಇರೋಣದರಿಂದ ಲಿಂಗದೇಹದ ಒಳಗೆ ಇರತಕ್ಕ ಜೀವನ ಸ್ವರೂಪ ಎಂತಲೂ, ಹೊರಗೆ ಎಂದರೆ ಸ್ವರೂಪಕ್ಕೆ ಹೊರಗೆ ಇರತಕ್ಕದ್ದು ಸ್ಥೂಲದೇಹ ಎಂತಲೂ ತಾತ್ಪರ್ಯ. ಇದರಿಂದ ಸ್ವರೂಪದಲ್ಲಿ ಬ್ರಹ-ವಾಯುಗಳ ವ್ಯಾವರ್ತನ ಮಾಡಿದ್ದಾಯಿತು. ಮತ್ತು ದೇಹ ಎಂದರೆ ಸ್ವರೂಪಕ್ಕೆ ಅನ್ಯವಾದ ಲಿಂಗದೇಹಾರಭ್ಯ ಸ್ಥೂಲದೇಹದ ವರೆಗೂ ಗ್ರಾಹ್ಯವೇ. ಲಿಂಗಶರೀರದಲ್ಲಿ ಬ್ರಹ್ಮ-ವಾಯುಗಳ ವ್ಯಾಪ್ತಿ ಎಂತ ಹೇಳಿದ ಉಕ್ತಿಗೆ ಅನಾದಿಲಿಂಗದಲ್ಲಿ ಎಂತ ತಾತ್ಪರ್ಯ ಮಾಡಕೂಡದು. ಯಾಕೆ ಎಂದರೆ ಅನಾದಿಲಿಂಗಶರೀರಕ್ಕೆ ರಮಾದೇವೇರು ಅಭಿಮಾನಿ ಎಂತ ಹದಿಮೂರನೇ ಶ್ಲೋಕದಲ್ಲಿ ಉಕ್ತವಾಗಿ ಇರೋಣದರಿಂದ ಅನಾದಿಲಿಂಗವೇ ಶರೀರ ಎಂತ ತಾತ್ಪರ್ಯ ಮಾಡಲಿಕ್ಕೆ ಇಲ್ಲ. ಆದ್ದರಿಂದ ಅನ್ಯಲಿಂಗದೇಹ ಎಂಬುದು ದಾವದೆಂದರೆ, ಅನಾದಿಲಿಂಗದ ಮ್ಯಾಲೆ ಆವರಣವಾಗಿದೆ. ಇದು ಸೃಷ್ಟಿಪ್ರಾರಂಭದಲ್ಲಿ ಅನಾದಿಲಿಂಗಗತ ಗುಣತ್ರಯಗಳ ಪ್ರತ್ಯೇಕ ತೆಗೆದು ಕೊಂಡು ವೈಷಯಿಕಸೃಷ್ಟಿ ನಿಮಿತ್ತ ಬ್ಯಾರೇ ಗುಣತ್ರಯಾತ್ಮಕ ಆವರಣ ಮಾಡಿ ಲಿಂಗದೇಹಕ್ಕೆ ಆವರಕವಾಗಿ ಅದೆ. ಇದಕ್ಕೆ ಅಣುಲಿಂಗ ಎಂತಲೂ ವೈಷಯಿಕಲಿಂಗ ಎಂತಲೂ ನಾಮ ಉಂಟು. ಈ ಅಣುಲಿಂಗದಲ್ಲೇನು, ಹೊರಗೆ ಉಕ್ತಿಯಿಂದ ಇದಕ್ಕೆ ಹೊರಭಾಗದಲ್ಲಿ ಇರತಕ್ಕ ಅನಿರುದ್ಧಸ್ಥೂಲ ಈ ದೇಹಗಳಲ್ಲೇನು, ಬ್ರಹ್ಮ-ವಾಯುಗಳ ವ್ಯಾಪ್ತಿ ಎಂತ ತಾತ್ಪರ್ಯ. ಸರ್ವಸಮ್ಮೇಳನೇ ಅಣುಲಿಂಗದಾರಭ್ಯ ಸ್ಥೂಲದೇಹದವರಿಗೂ ಬ್ರಹ್ಮ-ವಾಯುಗಳ ವ್ಯಾಪ್ತಿ ಎಂತಲೂ, ಅನಾದಿಲಿಂಗದಲ್ಲಿ ಜೀವನ ಸ್ವರೂಪದಲ್ಲಿ

ಬ್ರಹ್ಮ-ವಾಯುಗಳ ವ್ಯಾಪ್ತಿ ಇಲ್ಲ ಎಂತಲೇ ಆಗೋದಾಯಿತು. ವ್ಯಾಪಕನು ತಾನಾಗಿ ನಿರ್ಲೇಪನಾಗಿಹ ಎಂದರೆ, ಜೀವನ ಸ್ವರೂಪದೇಹದಾರಭ್ಯ ಸ್ಥೂಲ ದೇಹದವರಿಗೂ ಪರಮಾತ್ಮ ವ್ಯಾಪ್ತನಾಗಿ ಲೇಪರಹಿತನಾಗಿದ್ದಾನೆ. ಪದ್ಮ ಪತ್ರಗತ ಉದಕದೋಪಾದಿಯಲಿ ಎಂತ ತಾತ್ಪರ್ಯ.

ರಮಾದೇವೇರು, ಬ್ರಹ್ಮದೇವರು, ವಾಯುದೇವರು, ಇಂದ ಪ್ರದೀಪ ಎಂದರೆ, ಪ್ರಕಾಶಮಾನನಾಗುತಾ ಇದ್ದಾನೆ. ಎಂದರೆ, ಹದಿ ಮೂರನೇ ಶ್ಲೋಕವಲ್ಲಿ ಹೇಳಿದ ಕ್ರಮಕ್ಕೆ ರಮಾಭಿಮನ್ಯವಾದ ಅನಾದಿ ಲಿಂಗಶರೀರದಲ್ಲಿ ರಮಾದೇವೇರಿಂದ ಸಹಿತನಾಗಿನ್ನೂ, ಅಣುಲಿಂಗದಲಿ ಪಯೋಜಭವೇರರಿಂದ ಸಹಿತನಾಗಿನ್ನು ಪ್ರಕಾಶಮಾನನಾಗಿದ್ದಾನೆ. ಜೀವನ ಸ್ವರೂಪದಲ್ಲಿ ತನ್ನ ಸ್ವಾಖ್ಯರೂಪಗಳಿಂದ ಯುಕ್ತನಾಗಿ, ಸ್ವರೂಪ ಹೃದಯ ಮಧ್ಯಗತನಾಗಿ ಇದ್ದಾನೆಂತ ತಾತ್ಪರ್ಯ. ಇಲ್ಲಿಗೆ ತಾರತಮ್ಯವೂ, ತಾರ ತಮ್ಯಾನುಸಾರ ನಿಯಾಮಕಸ್ಥಾನವೂ, ನಿಯಮನ ಮಾಡತಕ್ಕ ವರ್ಣವೂ ಹೇಳಿದಂತಾಯಿತು. ಸ್ವರೂಪದಲ್ಲಿ ಪರಮಾತ್ಮ ಒಬ್ಬನೇ ನಿಯಾಮಕ. ಸ್ವರೂಪದಲ್ಲಿ ರಮಾ ಇಲ್ಲವೇ ಹ್ಯಾಂಗೆ, ಆಕಿಗೆ ನಿಯಾಮಕತ್ವ ಉಂಟಾ ಇಲ್ಲವಾ ಎಂದರೆ ಮುಖ್ಯವೃತ್ತ್ಯಾ ಪರಮಾತ್ಮ, ಅಮುಖ್ಯವೃತ್ತ್ಯಾ ರಮಾ ಎಂತ ತಾತ್ಪರ್ಯ. ವರ್ಣ ಎಂದರೆ ಆಯಾ ದೇಹಗಳು ದಾವದಾವ ವರ್ಣ ವಿಶಿಷ್ಟವಾಗಿ ದಾವ ಆಕಾರದಿಂದ ಇರುತ್ತದೋ ಅದರಂತೆ ಪರಮಾತ ಇರುತ್ತಾನೆಂತ ವರ್ಣಶಬ್ದಕ್ಕೆ ತಾತ್ಪರ್ಯ. ತಾನೊಬ್ಬನೇ ಪ್ರಕಾಶಮಾನನಾಗಿ ಇರುತ್ತಾನೆ. ವಿಶ್ವರೂಪಿ ಪರಮಾತ್ಮ ಸೃಷ್ಟಿಪ್ರಾರಂಭದಲ್ಲಿ ತತ್ತ್ವೇಶರೂಪ ಗಳ ತಾ ಧರಿಸಿ, ಜೀವನ ಸ್ವರೂಪಗತ ತನ್ನ ಸ್ವಾಖ್ಯಗಳಾದ ಅನಾದಿಯಿಂದ ಇರತಕ್ಕ, ತತ್ತ್ವೇಶರೂಪಗಳಿಂದ ಬಿಂಬರೂಪಿ ಪರಮಾತ್ಮ ಸೇವೆ ಕೈಕೊಳ್ಳುತ್ತಾ ಇರುತ್ತಾನೆ. ರಮಾದೇವೇರಿಂದಲೂ ಸೇವೆ ತೋಗೋತಾ ಇರತಾನೆ. **'ಪೂಜ್ಯ ಪೂಜಕರೂಪೇಣ ಕ್ರೀಡತೇ ಪುರುಶೋತ್ತಮಃ'** ಎಂತ ಪ್ರಮಾಣ ಸ್ವರೂಪದಲಿ ಈ ರೀತಿ ಎಂತ ತಾತ್ಪರ್ಯ.

ಅಮುಖ್ಯವೃತ್ತ್ಯಾ ರಮಾದೇವೇರೂನೂ ಜೀವನ ಸ್ವರೂಪಗತ

ಪರಮಾತ್ಮನ ಸೇವಾದಿಗಳು ಮಾಡತಾ ಇರತಾಳೆಂತ ತಿಳಿಯಬೇಕು. ತದ್ವತ್ ಬ್ರಹ್ಮ- ವಾಯುಗಳು ಆವಾಸವಾಗಿ ಇರತಕ್ಕ ಸ್ಥಾನದಲ್ಲಿ ಅವರವರ ಕಡಿಯಿಂದ ಸೇವೆ ಕೈಕೊಳ್ಳುತ್ತ ಇರುತ್ತಾನೆ. ಎಂತ ತಾತ್ಪರ್ಯ. ಆದ್ದರಿಂದ ಗರುಡ ಶೇಷ ಭವಾದಿ ನಾಮವ ಧರಿಸಿ ಪವನಸ್ವರೂಪದೇಹದಿ ಕರಣನಿಯಾಮಕನು ತಾನಾಗಿಪ್ಪ ಹರಿ ಎಂದರೆ, ಗರುಡ ಶೇಷ ಭವರುದ್ರ ಇವರೇ ಮೊದಲಾದ ಯಾವತ್ತು ತತ್ತ್ವೇಶರು ಇವರ ನಾಮಗಳ ಧರಿಸಿ ವಾಯು, ಕರಣನಿಯಾಮಕನು ಅಂಬೋಣದರಿಂದ ಪವನಶಬ್ದ ವಾಯುಪರ ಮಾಡಿಕೊಂಡು ಜೀವಾಂತರ್ಗತ ವಾಯುದೇವರಿಗೆ ಪ್ರವೇಶ ಉಂಟು ಎಂದು ಹೇಳಿದ್ದಾರೆ. ಪವನಶಬ್ದ ಸಾವಕಾಶವೇ ಹೊರತು ನಿರವಕಾಶವಲ್ಲ. ಯಾಕೆ ಅಂದರೆ, ಪವನ ಅಂದರೆ ಮುಖ್ಯವೃತ್ತ್ಯಾ ಪರಮಾತ್ಮನನ್ನೇ ಹೇಳೋದಾಗಿದೆ. ಇದು ವಿಷ್ಣುಸಹಸ್ರನಾಮದಲ್ಲಿ ವಿದಿತವಾಗಿ ಅದೆ. ಆದ್ದರಿಂದ ಇಲ್ಲಿ ಪವನಶಬ್ದ ಪರಮಾತ್ಮವಾಚಕವೇ ಹೊರ್ತುವಾಯುವಾಚಕವಲ್ಲ. ಪವನಶಬ್ದವಾಚ್ಯದಿಂದ,ಪರಮಾತ್ಮನನ್ನೇ ತೆಗೆದುಕೋಬೇಕು. ಯಾಕೆಂದರೆ, ಸ್ವರೂಪಗತ ಪವನಶಬ್ದದಿಂದ ತಾನಾಗಿ ಪರಮಾತ್ಮ ಇರೋವನಾಗಿದ್ದಾನೆ. ದಾರು ಎಂದರೆ ಬಿಂಬರೂಪಿ ಪರಮಾತ್ಮ ಎಂತ ತಾತ್ಪರ್ಯ. ಪವನರೂಪದಿಂದ ಗರುಡ ಶೇಷ ಭವಾದಿ ನಾಮವ ಧರಿಸಿ ಕರಣನಿಯಾಮಕನಾಗಿಪ್ಪ ಎಂದರೆ, ಜೀವನ ಸ್ವರೂಪದ ಇಂದ್ರಿಯಗಳ ನಿಯಾಮಕನಾಗಿ, ಅಂದರೆ ಪವನಶಬ್ದವಾಚ್ಯನಾದ ಶ್ರೀ ಪರಮಾತ್ಮ ಗರುಡಶೇಷ ಭವಾದಿ ನಾಮಗಳು ಧರಿಸಿ ಹ್ಯಾಂಗೆ ನಿಯಮನ ಮಾಡತಾನೆ, ತದ್ವತ್ ಸರಸಿಜಾಸನಾದಿ ನಾಲ್ಕು ಮಂದಿ ಸಂಗಡ ಕೂಡಿಕೊಂಡು ಅಣುಲಿಂಗದಲಿ ಇರತಕ್ಕ ವಾಯುದೇವರು ಗರುಡ ಶೇಷ ಭವಾದಿ ನಾಮವ ಧರಿಸಿ, ತದ್ಗತಇಂದ್ರಿಯಗಳಿಗೆ ನಿಯಾಮಕನಾಗಿ ಇರುತ್ತಾನೆಂತ ತಾತ್ಪರ್ಯ. ಅನ್ಯರಾದ ರುದ್ರಾದಿಗಳಿಗೆ ಈ ಸ್ಥಾನದಲ್ಲಿ ಪ್ರವೇಶವಿಲ್ಲ. ತಾವತ್ ಅನಾದಿಲಿಂಗದಲಿ ರಮಾ ಗರುಡ ,ಶೇಷ ಭವಾದಿ ನಾಮಗಳಿಂದಲೂ ಸ್ವರೂಪದಲಿ ಪರಮಾತ್ಮನು ತಾನು ಇರೋವನಾಗಿ ಇದ್ದಾನೆ. ಇದು ತಾರತಮ್ಯ ಮತ್ತು ಶ್ರೀಪಯೋಜಭವೇರ ನಾಮಗಳಿಂದ ನಿಯಾಮಕನಾಗಿದ್ದಾನೆ. ಇಂಥಾ ರಮಾದೇವೇರು ಜೀವನ ಸ್ವರೂಪೇಂದ್ರಿಯ

ಗಳ ಅಧಿಷ್ಠಾನದಲ್ಲಿ, ದೇವತಾನಾಮಗಳಿಂದ ಇದ್ದು, ಜೀವನ ಇಂದ್ರಿಯಗಳಿಗೆ ಪ್ರೇರಕರಾಗುತ್ತಾರೆ. ಅಲ್ಲಿ ಪರಮಾತ್ಮ ಗರುಡ ಶೇಷ ಭವಾದಿ ನಾಮಗಳ ಧರಿಸಿ, ಕರಣನಿಯಾಮಕನಾಗಿ ಇರುತ್ತಾನೆಂದು ತಾತ್ಪರ್ಯ. ಅಂದರೆ ಆದಿ ಭೂತಗೋಳಕ ಜೀವನ ಇಂದ್ರಿಯಗಳು. ಅಧಿದೈವ ರಮಾ. ಅಧ್ಯಾತ್ಮ ಪರಮಾತ್ಮ ಎಂತ ತಾತ್ಪರ್ಯ. ಅಂದರೆ ರಮಾಶರೀರಗತಇಂದ್ರಿಯಗಳಿಗೆ ಪಯೋಜಾಸನಾದಿ ನಾಮಗಳಿಂದ ಹ್ಯಾಂಗೆ ನಿಯಾಮಕನೋ ತದ್ವತ್, ರಮಾಪಯೋಜಾಸನಾದಿ ನಾಮಗಳಿಂದ ಜೀವೇಂದ್ರಿಯಗಳಲ್ಲಿ ಇದ್ದು ನಿಯಮನ ಮಾಡುತಾಳೆ. ರಮಾಗೋಳಕದಲ್ಲಿ ಗರುಡದೇವ ಭವಾದಿ ನಾಮಗಳಿಂದ ಇದ್ದು, ಲಕ್ಷ್ಮೀದ್ವಾರಾ ಆಯಾ ಇಂದ್ರಿಯಗಳಿಗೆ ನಿಯಮನ ಮಾಡತಾನೆ ಎಂತ ತಾತ್ಪರ್ಯ ಎಂಬುದು, ರಮಾವೇವೇರಲ್ಲಿ ಅನ್ವಯ ಹೋಗತಾ ಸರಸಿಜಾಸನಾದಿ ನಾಲ್ಕು ಮಂದಿ ಲಿಂಗದಲ್ಲಿ ಇದ್ದಾರೆಂತ ತಾತ್ಪರ್ಯ ಎಂಬದು ಆವರ್ತನ ಮಾಡಿಕೊಂಡು ವಾಯುದೇವರಲ್ಲೀನೂ ಪೂರ್ವೋಕ್ತ ದಂತೆ ಸಮನ್ವಯ ಮಾಡಿಕೋಬೇಕು. ಇದರಿಂದ ಪ್ರಮಾಣ ಪ್ರಮೇಯಕ್ಕೆ ಬಾಧಕ ಬರಲಿಲ್ಲ. ಇದು ಸಂಕೋಚಭಾಗವನ್ನು ವಿಸ್ತಾರ ಮಾಡಿಕೊಂಡು ದಿಕ್ಪ್ರದರ್ಶನ ರೀತ್ಯಾ ಬಾಧಕ ಬಾರದಂತೆ ಯೋಜನಾ ಮಾಡಿಕೋಬೇಕು. ಜೀವಕೃತಕರ್ಮಗಳನಾಚರಿಸಿ ಎಂದರೆ, ಜೀವನಾದವ ಕರ್ಮಗಳು ಮಾಡಬೇಕಾದರೆ ಸ್ಥೂಲದೇಹದಿಂದ ಮಾಡತಕ್ಕ ಕರ್ಮಗಳನಾಚರಿಸಿ–ನ, ಆಚರಿಸಿ. ಎಂತ ಎರಡು ಪದ. ನ ಎಂದರೆ, ಜೀವತಾನು ಮಾಡತಕ್ಕ ಕರ್ಮಗಳ ಅನ್ಯಾಧೀನನಾದ ಪ್ರಯುಕ್ತ ಸ್ವತಃ ತಾನು ಆಚರಿಸೋಣ ಎಂಬುದು ನ–ಇಲ್ಲವು. ಇನ್ನು ಆಚರಿಸೋಣ ಎಂಬುದು ಹ್ಯಾಂಗೆ ಅಂದರೆ ಬಿಂಬಕ್ರಿಯಾದ್ವಾರ ಆಚರಿಸತಾನೆ ಎಂತ ತಾತ್ಪರ್ಯ. ಆದ್ದರಿಂದಲೇ ಆಚರಿಸಿ ಎಂದರೆ ಪರಮಾತ್ಮನಾದ ಬಿಂಬ ತನ್ನ ಕ್ರಿಯಾವನ್ನು ತಾನು ಆಚರಿಸಿ, ತನ್ನ ಕ್ರಿಯಾದ್ವಾರಾ ಜೀವನಕಡಿಯಿಂದ ಆಚರಿಸತಾನೆ. ತದನಂತರ ಜೀವನಕ್ರಿಯಾದ್ವಾರ ದೇಹದಲ್ಲಿ ಆಗತದೆ. ಇದು ಸ್ಥೂಲದೇಹದಲ್ಲಿ ದೇಹಾಕಾರದಂತೆ ವ್ಯಾಪ್ತನಾದ ಜೀವನ ವಿಚಾರ, ಪರಮಾಣುವಾದ ಲಿಂಗಗತ ಜೀವನ ವಿಚಾರವಲ್ಲ. ಈ ಸ್ಥೂಲದೇಹದಲ್ಲೀನೂ '**ಶ್ರೀ ಪಯೋಜಭವೇರರಿಂದ ಪ್ರದೀಪವರ್ಣ**

**ಸ್ವಮೂರ್ತಿಮಧ್ಯಗ ತಾ ಪೊಳೆವ ವಿಶ್ವಾದಿರೂಪದಲಿ ಸೇವೆಕೊಳ್ಳುತಾ'** ಇದೇ ಪ್ರಕಾರ ಇದ್ದಾನೆ. ಈ ಸ್ಥೂಲದೇಹದಲ್ಲಿ ಬ್ರಹ್ಮಾದಿ ಅಸ್ವತಂತ್ರ ದೇವತೆಗಳಿಂದಲೂ ಸೇವೈಕೈಕೊಳ್ಳುತ್ತಾ ಇದ್ದಾನೆ. (ಇದರ ವಿವರ **ತಂತ್ರ ಸಾರದಲ್ಲಿ** ಪೀಠಪೂಜಾ, ಆವರಣಪೂಜಾ ಪ್ರಕರಣದಲ್ಲಿ ವಿವರವಾಗಿ ಅದೆ. ಕಂಕಣಾಕಾರಚಕ್ರದಲ್ಲೂ ವಿಶದವಾಗಿ ಅದೆ. **ಕಂಕಣಾಕಾರಸುಳಾದಿ** ನೋಡಿರಿ). ಇನ್ನು ರುದ್ರಾದಿಗಳಿಗೆ ಆವಾಸಸ್ಥಾನ ದಾವದೆಂದರೆ ಅನಿರುದ್ಧ ಶರೀರ. ಇದನ್ನು ಮುಂದಿನ ಶ್ಲೋಕದಲ್ಲಿ ಹೇಳತಾರೆ. ಈ ಪ್ರಕಾರ ತಾರತಮ್ಯದಿಂದ ಆವಾಸ. ಸರ್ವರೂ ಸೇರಿ ಶ್ಲೋಕದಲ್ಲಿ ಒಂದೊಂದು ಅಂಶ ದಿಂದ ವ್ಯಾಪ್ತರಾಗಿ ಕಾರ್ಯಗಳ ಮಾಡಸತಾರೆ. ಮತ್ತು ಗರುಡ ಶೇಷಾದಿ ನಾಮುಗಳಿಂದ ಹರಿ ಹ್ಯಾಂಗೆ ಸ್ವರೂಪದಲ್ಲಿ ನಿಯಾಮಕನೇ ತದ್ವತ್ ಪವನನಾಮಕ ವಾಯುದೇವರು ಸ್ವರೂಪದಲ್ಲಿ ನಿಯಾಮಕರಾಗಿ ಇದ್ದಾರೆ, ಲಿಂಗದಲ್ಲೀನೂ ಇದ್ದಾರೆ ಅಂತಲೂ ಅರ್ಥ ಮಾಡತಾರೆ. ಹಾಂಗೆ ಹೇಳಿದರೆ ಪಯೋಜಭವೇರರಿಂದ ಎಂತ ಹಿಂದಿನ ಶ್ಲೋಕದಲ್ಲಿ ಹೇಳಿ, ಮುಂದಿನ ಶ್ಲೋಕದಲ್ಲಿ ವಾಯುದೇವರ ಒಬ್ಬರನ್ನೇ ಹೇಳಿ ಅದರ ಮುಂದಿನ ಶ್ಲೋಕದಲ್ಲಿ ಲಿಂಗದೇಹಕ್ಕೆ ರಮಾನೇ ಅಭಿಮಾನಿ ಅಂತ ಹೇಳಿ ಇರೋಣದರಿಂದ ಪರಸ್ಪರ ವಿರೋಧ ಬಂತು. ಜೀವಾಂತರ್ಗತದಲ್ಲಿ ವಾಯುದೇವರು ಇದ್ದಾರೆ ಎಂಬುದು ಈ ಉಕ್ತಿಯಿಂದ ನಿರವಕಾಶವಾಗಲಿಲ್ಲ. ಪೂರ್ವೋಕ್ತಯೋಜನ ಎಂಬುದು ಯಾವುದಕ್ಕೂ ಬಾಧಕವಲ್ಲ, ಪ್ರಮಾಣವಿರುದ್ಧವೂ ಅಲ್ಲ. ಪತೀತಾರ್ಥವೇ ಸತ್ಯ ಎಂಬುದಕ್ಕೆ ಪ್ರಮಾಣ ಕಾಣೆ. ಪ್ರವೇಶ, ನಿರ್ಗಮ ಕಾಲ ಇಂಥಾದ್ದು ಎಂತ ಪ್ರಮಾಣ ಎಲ್ಲೂ ಉಕ್ತವಾಗಲಿಲ್ಲ. ಪ್ರವೇಶ ಅಂಗೀಕಾರ ಮಾಡಿದ ಮ್ಯಾಲೆ, ಅಂಶಿಯಲ್ಲಿ ಅಂಶ ಲಯವಾಗಿ ಪ್ರಳಯ ವಾಗಬೇಕು. ಪ್ರವೇಶ ನಿರ್ಗಮನಕ್ಕೆ ಪ್ರಮಾಣವಿಲ್ಲ. ಆದ್ದರಿಂದ ಪ್ರವೇಶ ಕೂಡೋದಿಲ್ಲ. ಇದರ ಮ್ಯಾಲೆ ಆರ್ಯಸಮ್ಮತಿಯೂ, ಅನ್ಯನಿರವಕಾಶ ಪ್ರಮಾಣಗಳೂ ಇದ್ದರೆ ಪ್ರವೇಶ ಅಂಗೀಕಾರವೇ ಸರಿ.

ಪ್ರಮಾಣ

ವಿದ್ಯುದ್ಭಾಸ್ವತ್ಸಮಾಭಾಸಶ್ಚಿದಾನಂದೈಕದೇಹವಾನ್ ।
ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ॥

ಬ್ರಹ್ಮವಾಯುಶಿವಾಹೀಶವಿಪೈಃ ಶಕ್ರಾದಿಕೈರಪಿ ।
ಸೇವ್ಯಮಾನೋಧಿಕಂ ಭಕ್ತ್ಯಾ ನಿತ್ಯನಿಶ್ಶೇಷಶಕ್ತಿಮಾನ್ ॥

ಮೂರ್ತಯೋಷ್ಟಾವಪಿ ಧ್ಯೇಯಾಃ ಚಕ್ರಶಂಖವರಾಭಯೈಃ ।
ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣಭೂಷಿತಾಃ ॥

ಟೀಕಾ :-

ಮಿಂಚಿನ ಕಾಂತಿಯೋಪಾದಿಯಲ್ಲಿ ಕಾಂತಿಯುಕ್ತನಾದಂಥಾ, ಚಿದಾನಂದೈಕದೇಹವಾನ್-ಚಿದಾನಂದನಾದಂಥಾ ಜೀವನ ಸ್ವರೂಪದಲ್ಲಿ, ಏಕ-ಮುಖ್ಯನಾದಂಥಾ ಅಸದೃಶನಾದಂಥಾ, ದೇಹವಾನ್-ದೇಹನಾದಂಥಾ, ಗುಣಪೂರ್ಣನಾದಂಥಾ ಪರಮಾತ್ಮ ಶ್ರೀದೇವೇರಿಂದಲೂ ಭೂದೇವೇರಿಂದಲೂ ಕೂಡಿಕೊಂಡವನಾಗಿ ಆವಾಸವಾಗಿ ಇದ್ದಾನೆ, ಈ ಜೀವನಲ್ಲಿ ತನ್ನ ಸ್ವಾಖ್ಯಗಳಾದ ಅಭಿನ್ನಗಳಾದ ಮೂರ್ತಿರೂಪಗಳ ಗುಣಸಮೂಹದಿಂದ ಯುಕ್ತನಾಗಿ ಜೀವನ ಹೃದಯಾಕಾಶದಲ್ಲಿ ಮಧ್ಯಗತನಾಗಿ ಇರೋವನಾಗಿದ್ದಾನೆ. ಅನ್ಯಮೂರ್ತಿಗಳು ಎಂದರೆ ಬ್ರಹ್ಮ-ವಾಯುಗಳು ವಿಪ-ಗರುಡ, ಅಹೀಶ-ಶೇಷದೇವರು, ಶಕ್ರ-ಇಂದ್ರದೇವರು, ಆದಿಕೈಃ- ಈ ದೇವತಾನಾಮಗಳಿಂದ ರೂಪಗಳಿಂದ ಯುಕ್ತವಾದ ತನ್ನ ಸ್ವಮೂರ್ತಿಗಳ ಮಧ್ಯಗತನಾಗಿ ಇರೋವನಾಗಿದ್ದಾನೆ. '**ಅಪಿ ಸೇವ್ಯಮಾನೋಧಿಕಂ ಭಕ್ತ್ಯಾ**', ಅಪಿ-ಹಾಂಗೇ ಬ್ರಹ್ಮ ವಾಯು ಶಿವಾಹಿಪ ವಿಪ ಶಕ್ರ ಎಂತ ನಾಮಾಂಕಿತರಾದ, ಅಸ್ವತಂತ್ರರಾದ ಬ್ರಹ್ಮಾದಿಗಳು ಅಧಿಕಭಕ್ತಿಯಿಂದ ಸೇವೆ ಮಾಡತಾ ಇದ್ದಾರೆ, ಎಲ್ಲಿ ಎಂದರೆ ಸ್ಥೂಲದೇಹದಲಿ ಎಂಬುದಕ್ಕೆ

ಸೂಚನಾ ದಾವದೆಂದರೇ, ಶಿವಾದಿಗಳು ಕೂಡಾ ಸೇವೆ ಮಾಡತಾರೆ ಎಂತ ಹೇಳೋಣದರಿಂದ ಜೀವಾಂತರ್ಗತತ್ವ ರುದ್ರಾದಿಗಳಿಗೆ ಕೊಡೋದಿಲ್ಲವಾದ್ದರಿಂದ ಜೀವಾಂತರ್ಗತ ವಾಯುದೇವರ ಅಂಗೀಕಾರ ಮಾಡತಕ್ಕವರೂ ಕೂಡ, ಈ ಉಕ್ತಿ ಸ್ಥೂಲದೇಹಪರ ಅಂತಲೇ ಅಂಗೀಕರಿಸಬೇಕು. ಆದ್ದರಿಂದ ಸ್ಥೂಲ ದೇಹದಲ್ಲಿ ಬ್ರಹ್ಮಾದಿ ಶಕ್ರಾದಿಗಳು ಅಧಿಕಭಕ್ತಿಯಿಂದ ಸ್ಥೂಲದೇಹಗತ ಭಗವಂತನ ಸೇವಾಮಾಡತಾರೆ, ಅತ ಏವ ಗರುಡ ಶೇಷ ಭವಾದಿನಾಮ ಧರಿಸಿ ಸ್ವರೂಪದಲ್ಲಿ ಪವನಶಬ್ದವಾಚ್ಯನಾದ ಪರಮಾತ್ಮ ಇದ್ದಾನೆಂತ ಮುಂದಿನ ಶ್ಲೋಕಕ್ಕೆ ಈ ಪ್ರಮಾಣ ಸೂಚನಾ. ನಿತ್ಯನಿಶ್ಶೇಷಶಕ್ತಿಮಾನ್- ಜೀವಾಂತರ್ಗತ ದೇಹಾಂತರ್ಗತ ಪರಮಾತ್ಮ ಎಂಥಾವನೆಂದರೆ- ನಿತ್ಯವಾದಂಥ ತಮ್ಮ ಶಕ್ತಿಗಸಾಧ್ಯವಲ್ಲದ, ಶೇಷ-ಉಳಿದ ಕಾರ್ಯಭಾಗಗಳು ಇಲ್ಲದೇ ಇರತಕ್ಕ ಶಕ್ತಿವಂತನಾದವ. ಮೂರ್ತಯೋಷ್ಟಾವಪಿಧ್ಯೇಯಾಃ- ಧ್ಯಾನ ಮಾಡೋದಕ್ಕೆ ಯೋಗ್ಯನಾದ ಪರಮಾತ್ಮ ಸ್ವಮೂರ್ತಿಗಳಾದ ವಿಶ್ವಾದಿ ಎಂಟು ರೂಪಗಳಿಂದ ಅಷ್ಟದಳಕಮಲಪತ್ರ ಎಂಟರಲಿ ಇದ್ದಾನೆಂತ ತಾತ್ಪರ್ಯ. ಇವನನ್ನು ಶಂಖ-ಚಕ್ರಾದಿಗಳಿಂದಲೂ, ವರದಾಭಯಹಸ್ತಗಳಿಂದಲೂ ಯುಕ್ತನಾಗಿರತಕ್ಕವನಾಗಿ ಧ್ಯಾನಮಾಡಬೇಕು, ಸರ್ವಾಭರಣಭೂಷಿತದಿಂದ ಯುಕ್ತನಾದಂಥ, ಪ್ರಕಾಶಮಾನನಾದಂಥ, ವರ್ಣಾಶ್ಚ ಎಂದರೆ ವಿಶ್ವಾದಿ ಎಂಟು ರೂಪಗಳು ಭಿನ್ನಭಿನ್ನವಾದ ದೇಹಕಾಂತಿ ಎಂದರ, ವಿಶ್ವ ಶುಭ್ರವರ್ಣ, ತೈಜಸ ರಕ್ತವರ್ಣ, ಪ್ರಾಜ್ಞ, ನೀಲವರ್ಣ ಇತ್ಯಾದಿ ವರ್ಣಗಳು ಎಂತ ತಾತ್ಪರ್ಯ. ಈ ವರ್ಣಗಳಿಂದ ಯುಕ್ತನೆಂದು ಧ್ಯಾನ ಮಾಡಬೇಕು. ಸ್ಥೂಲದಲ್ಲಿ ಸ್ವಮೂರ್ತಿಮಧ್ಯವೂ, ದೇವತಾಮಧ್ಯವೂ ಎರಡೂ ಇರೋದಾಗಿ ಅದೆ. ಅಣುಸ್ವರೂಪದಲ್ಲಿ ಎಲ್ಲಾನೂ ಸ್ವಮೂರ್ತಿಮಧ್ಯಗಳೆಂತಲೇ ತಿಳಿಯಬೇಕು. **ಆದರಾತ್ ದ್ವಿರಾವೃತ್ತಿ** ಎಂಬ ವಚನಾನುಸಾರ ಪೂರ್ವೋಕ್ತ ವಿಷಯ, ಏವಂ ದೃಢೀಕರಣಾರ್ಥಂ ಆವರ್ತನ ಮಾಡತೇವೆ. ಇನ್ನು ಸಾಕ್ಷಾತ್ ಪರಮಾತ್ಮನೇ ಜೀವನಲ್ಲಿ ತತ್ತ್ವೇಶ ಎಂತ ಹೇಳಬೇಕು. ಪರಮಾತ್ಮ ತತ್ತ್ವೇಶ ರೂಪದಿಂದ ದಾವ ರೀತ್ಯಾ ಇದ್ದಾನಂದರೆ ಶ್ರೀಪಯೋಜಭವೇರಿಂದ ಪ್ರದೀಪ ವರ್ಣ ಎಂದರೆ, ಶ್ರೀರಮಾದೇವೇರಿಂದ ಸಹಿತನಾಗಿ, ಪಯೋಜಭವ

ಎಂದರೆ ಮೊದಲಾದ ಬ್ರಹ್ಮ, ಈಶ ಎಂದರೆ ವಾಯುದೇವರು ಇಂದ ಎಂದರೆ ಮೊದಲಾದ ತತ್ತ್ವೇಶ ರೂಪದಿಂದ ಪ್ರಕಾಶಮಾನನಾದವ. ವರ್ಣ ಎಂದರೆ, ದೇವತೆಗಳಲ್ಲಿ ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಎಂತ ನಾಲ್ಕು ವರ್ಣಗಳು ಹ್ಯಾಂಗೋ ತದ್ವತ್ ವರ್ಣಶಬ್ದವಾಚ್ಯನಾಗಿ ಜೀವನಲ್ಲಿ ಇರತಕ್ಕರ, ಎಲ್ಲ ಎಂದರೆ ಜೀವನ ಸ್ವರೂಪ ಭೂತತತ್ತ್ವಗಳಲ್ಲಿ ಎಂತ ತಾತ್ಪರ್ಯ. ಪಯೋಜ ಭವೇರರಿಂದ ಅಂದರೆ, ಬ್ರಹ್ಮ-ವಾಯುಗಳು ಅಂತಲೇ ಅರ್ಥವಾಗತದೆ. ಬ್ರಹ್ಮ ವಾಯು ಎಂತ ಶಬ್ದಮಾತ್ರಕ್ಕೆ, ಪದಸ್ಥರಾದ ಈ ಬ್ರಹ್ಮ-ವಾಯುಗಳಲ್ಲ. ಇನ್ನು ದಾರೆಂದರೆ, ಸ್ವಮೂರ್ತಿ ಎಂದರೆ ಪರಮಾತ್ಮನ ಅಭಿನ್ನಗಳಾದ, ಸ್ವ ಎಂದರೆ ಪರಮಾತ್ಮನ ಸ್ವಕೀಯಗಳಾದ ಮೂರ್ತಿರೂಪಗಳು. ಬ್ರಹ್ಮ ವಾಯು ತತ್ತ್ವೇಶರೂಪಗಳಿಂದ ತನ್ನಾಮಗಳಿಂದ ಜೀವನ ಸ್ವರೂಪದಲ್ಲಿ ಇದ್ದಾನೆಂದು ತಿಳಿಯಬೇಕು. ಪರಮಾತ್ಮ ಸರ್ವಶಬ್ದವಾಚ್ಯನಾದ ಕಡಿಯಿಂದ ಬ್ರಹ್ಮ-ವಾಯ್ವಾದಿ ನಾಮಗಳಿಂದ ಜೀವನ ಸ್ವರೂಪದಲ್ಲಿ ಇದ್ದಾನೆ. ಪರಮಾತ್ಮನ ನಾಮಗಳೇ ಬ್ರಹ್ಮಾದಿಗಳಿಗೆ ಕೊಟ್ಟಿದ್ದಾನೆ. ಮಧ್ಯಗ ಎಂದರೆ ಮಧ್ಯದಲ್ಲಿ ಇರತಕ್ಕವ. ದಾವದರ ಮಧ್ಯ ಎಂದರೆ, ಪೂರ್ವೋಕ್ತಪ್ರಕಾರ ಕಮಲಕರ್ಣಿಕಾ ಮಧ್ಯದಲ್ಲಿ, ಪರಮಾತ್ಮನು ತನಗೆ ತಾನೇ ಪೂರ್ವೋಕ್ತ ಪ್ರಕಾರ ಪ್ರಕಾಶಮಾನನಾಗಿ ಇದ್ದಾನೆ. ವಿಶ್ವಾದಿ ರೂಪದಿ ಸೇವೆ ಕೈಕೊಳ್ಳುತ್ತಾ, ಜೀವಾಂತರ್ಗತ ಬ್ರಹ್ಮ-ವಾಯ್ವಾದಿ ತತ್ತ್ವೇಶರು ಇಲ್ಲದೇ ಪರಮಾತ್ಮನ ಸೇವಾ ಮಾಡತಕ್ಕವರು ದಾರೆಂದರೆ, ಕಮಲಮಧ್ಯಗತನಾಗಿದ್ದು ಕಮಲದಳಗಳು ಎಂಟರಲಿ ವಿಶ್ವಾದಿ ಎಂಟು ರೂಪಗಳಿಂದ ಆವಾಸನಾಗಿ ಇದ್ದು, ಆ ಎಂಟುರೂಪಗಳಿಂದ ತನಗೆ ತಾನೇ ಸೇವೆ ಕೈಗೊಳ್ಳುತ್ತಾ, ಸೇವೆಯನ್ನು ಮಾಡುತ್ತಾ ಆ ಸೇವಾನ್ನ ಕೈಕೊಳ್ಳುತ್ತಾ ಎಂದರೆ ಸ್ವೀಕಾರ ಮಾಡುತ್ತಾ ಇದ್ದಾನೆ ಎಂತ ತಿಳಿಯಬೇಕು. ಅಷ್ಟೇ ಹೊರ್ತು ಬ್ರಹ್ಮ-ವಾಯ್ವಾದಿ ತತ್ತ್ವೇಶರು ಜೀವನ ಸ್ವರೂಪದಲ್ಲಿ ಇಲ್ಲ. ಇದಕ್ಕೆ **ಪ್ರಕಾಶ ಸಂಹಿತಾ ದ್ವಿತಿಯಾ ಪರಿಚ್ಛೇದದಲ್ಲಿ** ಉದಹರಿಸಿದ ದೃಷ್ಟಾಂತ. ಗಜ-ತುರಗಾದಿ ದೇಹಗಳೇನು, ಅದು ಅಲಂಕರಿಸಿಕೋತಕ್ಕ ಆಭರಣಗಳೇನು. ವರ್ತಮಾನದಲಿ ದೃಶ್ಯಮಾನರೂಪಗಳಿಂದಲೇ ಇರಬೇಕೆಂಬ ನೇಮವೇನು

ಎಂದರೆ, ಗಜ-ತುರಗ ಎನತಕ್ಕ ಜೀವನ ಅನಾದಿಸ್ವರೂಪಗಳು ಅಲಂಕರಿಸಿ ಕೋತಕ್ಕ ಆಭರಣಗಳು, ಜೀವನ ಸ್ವರೂಪದಲ್ಲಿ ಇದ್ದಂಥಾವೆ ಅವೆ, ಅವು ಈಶ್ವರನಿಂದ ರಚಿತವಲ್ಲ, ಅನಾದಿನಿತ್ಯವಾದವು. ಆದ್ದರಿಂದ ಅದರನ್ನ ಅನುಸರಿಸಿ ಗಜ-ತುರಗಾದಿ ದೇಹಗಳು, ಆಭರಣಗಳು ಸ್ಥೂಲತ್ವೇನ ಜಡದ್ರವ್ಯದಿಂದ ನಿರ್ಮಾಣ ಮಾಡಿದ ಎಂತ ಉಕ್ತವಾಗಿ ಅದೆ. ಆದ್ದರಿಂದ ಈ ದೃಷ್ಟಾಂತದಿಂದ ಸ್ಥೂಲದೇಹಗತ ಯಾವತ್ತೂ ಸ್ವರೂಪಸದೃಶವನ್ನು ಹಿಡಿದು ನಿರ್ಮಾಣವು. ಆದ್ದರಿಂದ ಜೀವನ ಸ್ವರೂಪದಲ್ಲಿ ತತ್ತ್ವಗಳೇನು, ತತ್ತ್ವಗತ ಅಭಿಮಾನಿದೇವತೆಗಳೇನು. ಅನಾದಿಯಿಂದ ಪರಮಾತ್ಮನೇ ಬ್ರಹ್ಮ-ವಾಯ್ವಾದಿ ನಾಮುಗಳಿಂದ ಇರೋವನಾಗಿ ಇದ್ದಾನೆ. ಅಲ್ಲಿ ಪದಸ್ಥರಾದ ಬ್ರಹ್ಮ—ವಾಯ್ವಾದಿಗಳು ಸ್ವರೂಪವನ್ನು ಅನುಸರಿಸಿ ಪರಮಾತ್ಮ ತನ್ನ ನಾಮುಗಳನ್ನ ಬ್ರಹ್ಮ-ವಾಯ್ವಾದಿ ತತ್ತ್ವೇಶರಿಗೆ ಇಟ್ಟು, ಸ್ಥೂಲದೇಹಗತತತ್ತ್ವಗಳಿಗೆ ಅಭಿಮಾನಿಗಳ ಮಾಡಿ ಇದ್ದಾನೆ ಎಂತ ತಿಳಿಯಬೇಕು. ಜೀವರುಗಳ ಸ್ವರೂಪಗಳ ಆಕಾರ ಎಂಬುದು ಸ್ಥೂಲದೇಹಗಳ ಸೃಷ್ಟಿಗೆ ಕಾರಣವಾದದ್ದು. ಕಾರಣದಲ್ಲಿ ಪರಮಾತ್ಮ ಒಬ್ಬನೇನೇ. ಕಾರ್ಯದಲ್ಲಿ ಯಾವತ್ತೂ ದೇವತೆಗಳು ತಾರತಮ್ಯಾನುಸಾರ ಅವರವರ ಯೋಗ್ಯವಾದ ಸ್ಥಾನಗಳಲ್ಲಿ ಇರುತ್ತಾರೆ. ಮತ್ತು ಗಜ-ತುರಗಾದಿ ಜೀವರಿಗೆ ಗಜ-ತುರಗಾದಿ ದೇಹಗಳು ಬರೋದಿಲ್ಲ. ಕರ್ಮವಶಾತ್ ಅನೇಕ ಸ್ಥೂಲದೇಹಗಳು ಬರುತ್ತವೆ. ಅವಶಾತ್ತಾಗಿ ಸಜಾತೀಯ ದೇಹ ಬಂದಾಗ ಮಹಾಪರಾಕ್ರಮಶಾಲಿಗಳಾಗಿ ಇರುತ್ತವೆ. ಇದರ ವಿಸ್ತಾರ ಬಹಳವಿದೆ. ಸಂಕೋಚವಾಗಿ ಮಾಡಲ್ಪಟ್ಟಿದೆ. ಜೀವಾಂತರ್ಗತ ಬ್ರಹ್ಮ-ವಾಯ್ವಾದಿಗಳು ಇಲ್ಲ ಎಂಬುದಕ್ಕೆ ಈ ಕೆಳಗೆ ಹೇಳುವ ಪ್ರಮಾಣಗಳಿಂದ ಜೀವಾಂತರ್ಗತ ಬ್ರಹ್ಮ-ವಾಯ್ವಾದಿಗಳ ನಾಮುಗಳಿಂದ ಪರಮಾತ್ಮನೇ ಇದ್ದಾನೆ ಎಂನು ತಿಳಿಯಬೇಕು.

ಪ್ರಮಾಣಗಳು ದಾವವೆಂದರೆ ವಿವರ-

**ಬೃಹದಾರಣ್ಯಕ ಭಾಷ್ಯೇ- ಮುಕ್ತಾಃ ಭಗವದ್ಭುಕ್ತ ಭೋಗಾನ್ ಭುಂಜತೇ ।**

**ಯಾನೇವಾಹಂ ಶೃಣೋಮಿ ಯಾನ್ಸ್ಪೃಶ್ಯಾಮಿ ಯಾನ್ ಜಿಘ್ರಾಮಿ ತಾನೇ ವಾಪಿ ಇದಂ ಶರೀರಂ ವಿಮುಚ್ಯ ಅನುಭವಂತೀತಿ ಶ್ರುತೇಃ । ಸಹಾಮುನಾ । ಇಂದ್ರಿಯಾಣಾಂ ಚ ಮುಕ್ತಾನಾಂ ಪ್ರೇರಕೋ ಹರಿರೇವ ಚ । ತತ್ತ್ವಾಭಿಮಾನಿದೇವಾನಾಂ ಪ್ರವೇಶೋ ನಾಸ್ತಿ ನಿಯಮ ಇತಿ ವಚನಾತ್ । ಮುಕ್ತೇಂದ್ರಿಯಾಣಾಂ ಭಗವತ್ಪ್ರೇರಣ ಏವ ॥**

ಅರ್ಥ :-

**ಇದಂ ಶರೀರಂ-** ಸ್ಥೂಲಶರೀರವನ್ನು ಕೊಡೋದಕ್ಕೆ ಕಾರಣವಾದ ಲಿಂಗಶರೀರ. **ವಿಮುಚ್ಯ-** ದೂರ ಹೋದಮ್ಯಾಲೆ, ಜೀವನ ಸ್ವರೂಪೇಂದ್ರಿಯಗಳಿಗೆ ಪ್ರೇರಕರು ದಾರೆಂದರೆ ಹೇಳತಾರೆ. ಮುಕ್ತಿ ಎಂದರೆ ಜೀವನ ಸ್ವರೂಪಅಭಿವ್ಯಕ್ತಿಯೇ ಮುಕ್ತಿ. ಇಂಥಾ ಅಭಿವ್ಯಕ್ತಿಯಾದ ಜೀವವ ಸ್ವರೂಪದಲ್ಲಿ, **ತತ್ತ್ವಾಭಿಮಾನಿ ದೇವಾನಾಂ-** ಮಹತ್ತತ್ತ್ವಾದಿ ತತ್ತ್ವಗಳಿಗೆ ಅಭಿಮಾನಿಗಳಾಗಿ ಇದ್ದು ಮುಕ್ತರಾದಂಥ ಬ್ರಹ್ಮ-ವಾಯ್ವಾದಿ ತತ್ತ್ವೇಶರಿಗೆ ಜೀವಾಂತರ್ಗತದಲ್ಲಿ, **ಪ್ರವೇಶಃ ನಾಸ್ತಿ-** ಲಿಂಗಭಂಗರಾಗಿ ಮುಕ್ತರಾದ ಜೀವರಲ್ಲಿ ಪ್ರವೇಶ ಎಂಬುದು ಇಲ್ಲ. ನಿಯಮ ಇತಿವಚನಾತ್- ಇದು ನಿಯಮ ಎಂದು ಹೇಳತಕ್ಕ, **ವಚನಾತ್**-ವಚನದ್ದೆಶೆಯಿಂದ ಸ್ವರೂಪದಲ್ಲಿ ವಾಯ್ವಾದಿಗಳ ಪ್ರವೇಶ ಎಂಬುದು ಇಲ್ಲವಾದ್ದರಿಂದ ಮುಕ್ತರ ಇಂದ್ರಿಯಗಳಿಗೆ ಭಗವಂತನ ಪ್ರೇರಣೆಯೇವೇ ಎಂತ ತಾತ್ಪರ್ಯ. ಅಮುಕ್ತಕಾಲದಲ್ಲಿ ಜೀವನ ಸ್ವರೂಪದಲ್ಲಿ ವಾಯುದೇವರನ್ನ ಅಂಗೀಕರಿಸಿದರೆ, ಮುಕ್ತಿಯಲ್ಲಿ ಅದೇ ಜೀವನ ಸ್ವರೂಪ ಇರುತ್ತದೆ. ಅಲ್ಲಿ ಬ್ರಹ್ಮದೇವರನ್ನು ಜೀವಾಂತರ್ಗತತ್ವೇನ ಅಂಗೀಕಾರ ಮಾಡಬೇಕು. ಮುಕ್ತಿಯಲ್ಲಿ ಪರಮಾತ್ಮನ ವ್ಯತಿರಿಕ್ತ ಅನ್ಯಪ್ರೇರಕನು ಇಲ್ಲ ಎಂದಮ್ಯಾಲೆ, ಸ್ಥಿತಿಕಾಲದಲ್ಲಿ ಅದರಂತೆ ಜೀವರಲ್ಲಿ ಪರಮಾತ್ಮ ಒಬ್ಬನೇ ಪ್ರೇರಕ ಎಂತ ಅರ್ಥಾತ್ ಸಿದ್ಧ. ಆದ್ದರಿಂದ ಮುಕ್ತಾಮುಕ್ತದ್ವಯಕಾಲದಲ್ಲಿ ಜೀವಾಂತರ್ಗತ ವಾಯು-ಬ್ರಹ್ಮಾದಿ ತತ್ತ್ವೇಶರಿಗೆ ಪ್ರವೇಶ ಇಲ್ಲ ಎಂತ ಈ ಪ್ರಮಾಣದ ಅರ್ಥವು. **ಯಾನೇವಾಹಂಶೃಣೋಮೀ**

ಎಂದರೆ, ಜೀವನ ಸ್ವರೂಪದೇಹದಿಂದ ಸ್ವರೂಪೇಂದ್ರಿಯಗಳಿಂದ ಕೇಳೋಣವೇ ಮೊದಲಾದ ವ್ಯಾಪಾರಗಳು ಪರಮಾತ್ಮನಿಂದ ಆಗಚವೇ ಹೊರ್ತು, ಅನ್ಯರಾದ ಬ್ರಹ್ಮಾದಿ ತತ್ತ್ವೇಶರ ವ್ಯಾಪಾರವೇ ಇಲ್ಲ ಎಂತ ತಿಳಿಯಬೇಕು.

ಪ್ರಮಾಣ – ಶಾಂಡಿಲ್ಯತತ್ತ್ವದೀಪಿಕಾ-

ಏವಂ ಸತಿ ಕರ್ತಾರಂ ಕರ್ಮಸ್ವರೂಪಂ ಸವಿಸ್ತರಂ ನಿರೂಪ್ಯ ವಿಷ್ಣುಃ ಸ್ವಯಂ ಏಕ ಏವ ಕರ್ಮಕರ್ತುಂ ಸಮರ್ಥೋಽಪಿ ಲೀಲಯಾ ತತ್ತ್ವಾಭಿಮಾನಿ ದೇವತಾಸಹಿತಸ್ಸನ್ ಕರೋತೀತಿ ಪ್ರತಿಪಾದನ ಪೂರ್ವಕಂ ತತ್ತ್ವಾಭಿಮಾನಿದೇವತಾಸ್ವರೂಪಂ ತತ್ಪ್ರಸಕ್ತಾನು ಪ್ರಸಕ್ತಂ ದರ್ಶಯನ್ ಕರ್ಮಸ್ವರೂಪಂ ಪ್ರತಿಪಾದಯತಿ ಅಸ್ಮಿನ್ ಅಧ್ಯಾಯೇ । ತತ್ರ ವಿಷ್ಣುಃ ಜೀವಾಂತರ್ಗತಸ್ಸನ್ ಜೀವಕರ್ಮ ಸ್ವಯ ಮೇವ ಕಾರಯತಿ ಉತ ದೇವತಾಸಹಿತಃ । ನಾದ್ಯಃ ದೇವದಾಪ್ರತಿ ಪಾದಕ ಶಾಸ್ತ್ರವೈಯರ್ಥ್ಯಾತ್ । ದೇವಾನಾಂ ಜೀವಶರೀರೆ ಪ್ರವೇಶವೈ ಯರ್ಥ್ಯಾತ್ । ನದ್ವಿತೀಯಃ ಸ್ವಾತಂತ್ರ್ಯಹಾನಿ ಪ್ರಸಂಗಾತ್ ಇತ್ಯತಃ ದ್ವಿತೀಯಪಕ್ಷಮಂಗೀಕೃತ್ಯ ತತ್ರೋಕ್ತಸ್ಪಷ್ಟದೋಷಂ ಸ ದೃಷ್ಟಾಂತೇನ ಪರಿಹರತಿ । ಸ್ವತಂತ್ರೋಹೀತಿ । ಸ್ವತಂತ್ರೋಽಪಿ ಸ್ವಯಂ ವಿಷ್ಣುಃ ದೇವೈಃ ತತ್ತ್ವಾಭಿಮಾನಿಭಿಃ । ಕರೋತಿ ತನು ಭೃತ್ಕರ್ಮರಾಜಾಂಗೈರಿವ ಭೂಮಿಪಃ ॥

ವಿಷ್ಣುಃ ಯದ್ಯಪಿ ಸ್ವತಂತ್ರಃ ತಥಾಪಿ ತನುಭೃತ್ಕರ್ಮಜೀವಕರ್ಮ ಕರೋತಿ ಕಾರಯತಿ । ರಾಜ್ಯಾಂಗಮಿತ್ಯಾದಿಭಿಃ ಭೂಮಿಪಃ ಯಥಾ

ಕರೋತಿ ಕಾರಯತಿ ತಥಾ ಮುಖ್ಯತ್ವಮೇವ ಉಪಸಾದಯತಿ। ಜೀವಂ ವಿನೇತಿ। ಜೀವಂ ವಿನಾ ಚ ತತ್ತ್ವೇಶಾಃ ದಕ್ಷಾಃ ಜೀವ ಕ್ರಿಯಾಸು ಚ। ತಥಾ ತತ್ತ್ವಾಭಿಧಾನ್ವಿತ್ವಾ ದಕ್ಷೋ ವಾಯುಶ್ಚ ತತ್ಕೃತೌ। ವಿನಾಂ ವಾಯುಂ ಸ್ವಯಂ ದಕ್ಷಂ ಏತತ್ ಸರ್ವ ಕ್ರಿಯಾಸು ಚ। ತತ್ತ್ವೇಶಾಃ ತತ್ತ್ವಾಭಿಮಾನಿನಃ। ದಕ್ಷಾಃ ಸಮರ್ಥಾಃ। ಏವಂ ಉತ್ತರತ್ರಾಪಿ। ತತ್ಕೃತೌ ಜೀವಕ್ರಿಯಾಕೃತೌ ಸ್ವಯಂ ವಿಷ್ಣುಃ। ಬ್ರಹ್ಮಾ ವಾಯೂ ಮಹಾತ್ಮಾನೌ ಮಹತ್ತತ್ತ್ವ ನಿಯಾಮಕೌ। ಶೇಷ ವೀಂದ್ರ ಮೃಡಾಹ್ಯೇತೇ ಅಹಂತತ್ತ್ವಾಭಿಮಾನಿ ನೌ॥

–ಶಾಂಡಿಲ್ಯತತ್ತ್ವದೀಪಿಕಾ।

ಅರ್ಥ–

ಕರ್ತವ್ಯಸ್ವರೂಪವಾದ ಕರ್ಮಸ್ವರೂಪವನ್ನು ಸವಿಸ್ತಾರವಾಗಿ ನಿರೂಪಿಸುತ್ತೇವೆ. ಗುಣಪೂರ್ಣನಾದ ಪರಮಾತ್ಮ ಸ್ವಯಂ – ತಾನೊಬ್ಬನೇ ಕರ್ಮ ಮಾಡೋದರಲ್ಲಿ ಅಂದರೆ ಜೀವನ ಕಡಿಯಿಂದ ತಾನು ಮಾಡಿ ಮಾಡಿಸೋದರಲ್ಲಿ ಸಮರ್ಥನಾದ ಕಾಲಕ್ಕೂ ಲೀಲೆಯಿಂದ ತತ್ತ್ವಾಭಿಮಾನಿದೇವತಾಸಹಿತನಾಗಿ ಮಾಡತಾನೆ ಎಂಬುದನ್ನ ಪ್ರತಿಪಾದನಪೂರ್ವಕ ತತ್ತ್ವಾಭಿಮಾನಿದೇವತಾಸ್ವರೂಪವು ತತ್ಪ್ರಸಕ್ತಾನುಪ್ರಸಕ್ತವಾಗಿ ತೋರಿಸಲ್ಪಡುತ್ತದೆ. ಹಾಗೂ ಕರ್ಮಸ್ವರೂಪ ಪ್ರತಿಪಾದನ ಮಾಡಲ್ಪಡುತ್ತದೆ.

ವಿಕಲ್ಪ–

ಜೀವಾಂತರ್ಗತನಾದ ಶ್ರೀ ಪರಮಾತ್ಮ ಜೀವನ ಕರ್ಮ ಸ್ವಯಮೇವ ತಾನೇ ಮಾಡಿಸತಾನಾ, ಇಲ್ಲಾ ದೇವತಾಸಹಿತನಾಗಿ ಮಾಡಸತಾನಾ ಎಂತ ಎರಡು ವಿಕಲ್ಪ. ಸ್ವಯಂ ತಾನೇ ಜೀವಾಂತರ್ಗತನಾಗಿ ಜೀವನ ಕರ್ತ

ಮಾಡಿಸತಾನೆ ಅಂತ ಹೇಳಿತೇ, ತತ್ತ್ವೇಶರ ದ್ವಾರಾ ಜೀವಕರ್ಮ ಮಾಡಿಸ ತಾನೆ ಎಂತ ಹೇಳತಕ್ಕ ಪ್ರಮಾಣಕ್ಕೆ ವಿರೋಧ ಪ್ರಾಪ್ತವಾಗತದೆ, ಆದ ಕಡಿಯಿಂದ ವಿರೋಧಪರಿಹಾರನಿಮಿತ್ತವಾಗಿ ಜೀವಾಂತರ್ಯಾಮಿ ತತ್ತ್ವೇಶರ ಪ್ರವೇಶ ಹೇಳಿ, ತದ್ವಾರಾ ಕರ್ಮ ಮಾಡಸತಾನೆ ಎಂತ ಹೇಳಬೇಕು, ಹಾಂಗೆ ಹೇಳೋಣದರಿಂದ ಮತ್ತೊಂದು ಪ್ರಮಾಣವಿರೋಧ ಬರುತ್ತದೆ. ದೇವತೆ ಗಳಿಗೆ ಜೀವರ ಸ್ವರೂಪಶರೀರದಲ್ಲಿ ಪ್ರವೇಶ ಇಲ್ಲ ಎಂಬ ಪ್ರಮಾಣಕ್ಕೆ ವಿರೋಧ ಪ್ರಾಪ್ತವಾಗತದೆ. ಆದಕಡಿಯಿಂದ ದ್ವಿತೀಯಪಕ್ಷವೂ ಕೂಡೋ ದಿಲ್ಲ. ಮತ್ತು ತತ್ತ್ವೇಶರ ದ್ವಾರಾ ಮಾಡಸತಾನೆ ಎಂದರೆ ಸ್ವಾತಂತ್ರ್ಯ ಹಾನಿ ಪ್ರಾಪ್ತವಾಗತದೆ.

**ಸಮಾಧಾನ**–

ದ್ವಿತೀಪಕ್ಷ ದಾವದೆಂದರೆ–ದೇವತೆಗಳ ದ್ವಾರಾ ಕರ್ಮ ಮಾಡಸತಾನೆ ಎಂಬುದು ಅಂಗೀಕಾರ ಮಾಡಿ, ಅಲ್ಲಿ ಉಕ್ತವಾದ ಅಸ್ವಾತಂತ್ರ್ಯ ಎಂಬ ದೋಷವು ದೃಷ್ಟಾಂತಸಹಿತನಾಗಿ ಪರಿಹಾರಮಾಡಲ್ಪಡುತ್ತದೆ. ಸ್ವಯಂ ವಿಷ್ಣುಃ ಸ್ವತಂತ್ರನಾದ ಕಾಲಕ್ಕೂ ಲೀಲೆಯಿಂದ ದೇವತೆಗಳ ದ್ವಾರಾ ಜೀವರ ಕಡಿಯಿಂದ ಕರ್ಮ ಮಾಡಿ ಮಾಡಿಸತಾನೆ. ಆ ಕರ್ಮ ದಾವದು ಎಂದರೆ, ತನು ಭೃತ್‌ಕರ್ಮ ಎಂತ ತಾತ್ಪರ್ಯ. ಹೀಗೆಂದರೆ ಜೀವರು ಸ್ಥೂಲದೇಹಧರಿಸಿ ಆ ದೇಹದ್ವಾರಾ ಮಾಡತಕ್ಕ ಕರ್ಮ ದಾವದೋ ಅದೇ ತನುಭೃತ್‌ಕರ್ಮ. ಈ ಜಡದೇಹದಿಂದ ಆಗತಕ್ಕ ಕರ್ಮ ಮಾತ್ರ ದೇವತೆಗಳ ದ್ವಾರಾ ಜೀವನ ಕಡಿ ಯಿಂದ ಮಾಡಿಸತಾನೆ ಎಂತ ತಾತ್ಪರ್ಯ, ಅದರನ್ನೂ ತಾನು ಯಾಕೆ ಸ್ವಯಂ ಮಾಡಬಾರದು ಎಂದರೆ, ತತ್ತ್ವಾಭಿಮಾನಿಗಳು ಯಾವತ್ತೂ ಮಂದಿ ಜೀವನ ಸ್ಥೂಲಶರೀರದಲ್ಲಿ ಇದ್ದು, ಆ ಕಾರ್ಯಗಳು ಪರಮಾತ್ಮನ ಆಜ್ಞಾವನ್ನು ಅನು ಸರಿಸಿ ಮಾಡಿ ಸಾಧನ ಮಾಡತಕ್ಕ ನೇಮ. ಅದು ಒಂದು ಸಾಧನಿ ತತ್ತ್ವೇ ಶರಿಗೆ. ಆದಕಡಿಯಿಂದ ಆಯಾ ದೇವತೆಗಳ ದ್ವಾರಾ ಆಯಾ ಕರ್ಮಗಳ ನಡೆಸಿ, ಸಾಧನಿ ಮಾಡಿಸಿ, ಆ ಕರ್ಮಫಲ ತಾರತಮ್ಯಾನುಸಾರ ದೇವತೆಗಳಿಗೆ ವಿಭಾಗ ಮಾಡಿಕೊಟ್ಟು, ದೇಹಾಧಿಷ್ಠಿತನಾದ ಜೀವನ ಯೋಗ್ಯತಾನುಸಾರ ಕಿಂಚಿತ್

ಕೊಡೋವನಾಗತಾನೆ, ತನ್ನಿಮಿತ್ತದಿಂದ ದೇವತೆಗಳ ದ್ವಾರಾ ಕರ್ಮ ಮಾಡೋಣವೇ ಹೊರ್ತು ಅಸ್ವಾತಂತ್ರ್ಯದೋಷದಿಂದ ಈಶನ ಪ್ರವೃತ್ತಿ ಅಲ್ಲ ಎಂತ ತಿಳಿಯಬೇಕು. ರಾಜಾಂಗಮಿವ ಭೂಮಿಪಃ – ರಾಜನು ರಾಜಾಂಗವನ್ನು ಭೃತ್ಯನ ದ್ವಾರ ಕಾರ್ಯಗಳ ಮಾಡಿಸಿ ಅವರಿಗೆ ಫಲ ಕೊಟ್ಟಂತೆ, ಮಹಾರಾಜನಾದ ಪರಮಾತ್ಮ ತತ್ತ್ವೇಶರಾದ ಯಾವತ್ತೂ ದೇವತೆಗಳಿಂದ ಕೆಲಸಗಳು ಮಾಡಿಸಿ ಮೋಕ್ಷಾಖ್ಯಧನವನ್ನು ಕೊಡತಾನೆ. ಆದ್ದರಿಂದ ಪರಮಾತ್ಮನಲ್ಲಿ ಅಸ್ವಾತಂತ್ರ್ಯದೋಷ ಪರಿಹಾರವಾಯಿತು. ಅಸ್ವಾತಂತ್ರ್ಯದೋಷದಿಂದ ತತ್ತ್ವೇಶರ ದ್ವಾರಾ ಕರ್ಮ ಮಾಡಿಸಿದವನಲ್ಲ ಎಂತ ತಿಳಿಯಬೇಕು. ವಿಷ್ಣು ಯದ್ಯಪಿ ಸ್ವತಂತ್ರನಾದಕಾಲಕ್ಕೂ, ತನುಭೃತ್ಕರ್ಮ ಎನತಕ್ಕ ಸ್ಥೂಲದೇಹದಿಂದ ಆಗತಕ್ಕ ಕರ್ಮ ಕರೋತಿ ಕಾರಯತಿ ಎಂದರೆ, ಬಿಂಬಕ್ರಿಯಾದ್ವಾರಾ ತಾನು ಮಾಡಿ ಮಾಡಿಸತಾನೆ ಎಂತ ತಾತ್ಪರ್ಯ. ರಾಜ್ಯಾಂಗಮಿತ್ಯಾದಿಭಿಃ ಭೂಮಿಪಃ ಯಥಾ ಕರೋತಿ ಕಾರಯತಿ ತಥಾ, ಇದರಿಂದ ಸ್ಥೂಲದೇಹದಲ್ಲಿ ದೇವತೆಗಳ ಪ್ರವೇಶ ಎಂತಲೂ, ತತ್ತ್ವೇಶರ ದ್ವಾರಾ ಕರ್ಮ ಮಾಡಿಸತಕ್ಕ ಸ್ಥಾನ ಸ್ಥೂಲದೇಹ ಎಂತಲೂ ಹೇಳಿದಂತಾಯಿತು. ತತ್ತ್ವೇಶರ ದ್ವಾರಾ ಕರ್ಮ ಮಾಡಿಸತಾನೆ ಎಂಬ ಪ್ರಮಾಣಕ್ಕೆ ಇದು ತಾತ್ಪರ್ಯ. ತತ್ತ್ವೇಶರ ಬಿಟ್ಟು ಕರ್ಮ ಮಾಡಿಸತಾನೆ ಎಂಬ ಪ್ರಮಾಣಕ್ಕೆ ಗತಿ ಹೇಳತೇವೆ. ಜೀವಂ ವಿನಾ ಚ ತತ್ತ್ವೇಶಾಃ ದಕ್ಷಾ ಜೀವಕ್ರಿಯಾಸು ಚ ಎಂದರೆ, ಜೀವಂ ವಿನಾ ಚ–ಜೀವನ ಸ್ವರೂಪ ವ್ಯತಿರಿಕ್ತವಾದ, ಚಕಾರದಿಂದ ಸ್ಥೂಲದೇಹ ಎಂತ ತಾತ್ಪರ್ಯ. ಈ ಸ್ಥೂಲದೇಹದಲ್ಲಿ ತತ್ತ್ವೇಶರು ದಕ್ಷರಾದವರು, ದಾವ ವಿಷಯದಲ್ಲಿ ದಕ್ಷರು ಎಂದರೆ, ಸ್ಥೂಲದೇಹದಲ್ಲಿ ಇದ್ದುಕೊಂಡು, ಸ್ಥೂಲದೇಹದ್ವಾರಾ ಕರ್ಮಗಳ ಮಾಡಿಸೋದಕ್ಕೆ ದಕ್ಷರು ಎಂತ ತಾತ್ಪರ್ಯ. **ಜೀವಂ ವಿನಾ** ಎಂತ ಅಂಬೋಣದರಿಂದ ಜೀವನಲ್ಲಿ ತತ್ತ್ವೇಶರು ಪ್ರವೇಶ ಎಂಬುದು ವ್ಯಾವರ್ತವಾಯಿತು.

**ತಥಾ ತತ್ತ್ವಾಭಿಧಾನ್ಯಿತ್ವಾ ದಕ್ಷೋ ವಾಯುಶ್ಚ ತತ್ಪತೌ, ತಥಾ** ಎಂದರೆ ಜೀವನಸ್ವರೂಪದಲ್ಲಿ ತತ್ತ್ವೇಶರು ಇಲ್ಲದೇನೇ ಪರಮಾತ್ಮ ಒಬ್ಬನೇ ಹ್ಯಾಂಗೆ ಕರ್ಮ ಮಾಡೋದರಲ್ಲಿ ದಕ್ಷನೋ, **ತಥಾ**-ಹಾಂಗೆ ಲಿಂಗದೇಹದಲ್ಲಿ, **ತತ್ತ್ವಾಭಿಧಾನ್ನಿತ್ವಾ**– ತತ್ತ್ವಾಭಿಮಾನಿಗಳು ಎಂತ, **ಅಭಿಧಾನ್** – ಕರಸಿಕೋತಕ್ಕ

ರುದ್ರಾದಿಗಳು ವ್ಯತಿರಿಕ್ತವಾಗಿ, **ತತ್ಕೃತೌ**- ತತು ಜೀವನ ಕರ್ಮ ಮಾಡೋದ ರಲ್ಲಿ, **ವಾಯುಃ**- ವಾಯುದೇವರು, **ದಕ್ಷಃ**- ಸಮರ್ಥರು ಎಂತ ತಿಳಿಯ ಬೇಕು. ಎಲ್ಲಿ ಅಂದರೆ, ಸ್ಥೂಲದೇಹಗತ ಸ್ವರೂಪಾಪೇಕ್ಷಯಾ ಸ್ಥೂಲ ತ್ವೇನ ಇರತಕ್ಕ ಅಣುಲಿಂಗ ಶರೀರದಲ್ಲಿ ಎಂತ ತಾತ್ಪರ್ಯ. ಇಲ್ಲಿ ರುದ್ರಾದಿ ಗಳಿಗೆ ಪ್ರವೇಶ ಎಂಬುದು ಇಲ್ಲ. ಇಲ್ಲಿ ವಾಯುದೇವರು ಒಬ್ಬರೇ ದಕ್ಷರು ಎಂತ ತಿಳಿಯಬೇಕು. **ವಿನಾವಾಯುಂ ಸ್ವಯಂ ದಕ್ಷಃ ಏತತ್ಸರ್ವ ಕ್ರಿಯಾಸು ಚ** ಎಂದರೆ, **ವಿನಾ ವಾಯುಂ**-ವಾಯುದೇವರ ವ್ಯತಿರಿಕ್ತ, **ಸ್ವಯಂ**-ರಮಾದೇವೇರು ತಾವೇ ಸ್ವಯಂ ಆಗಿ, **ದಕ್ಷಃ**-ಜೀವಕರ್ಮಮಾಡೋ ವರಲ್ಲಿ ಸಮರ್ಥರಾದವರು. ಎಲ್ಲಿ ಅಂದರೆ ಅನಾದಿಲಿಂಗದಲ್ಲಿ ಪ್ರೇರಕರು. **ಯಃ**-ದಾವ ಜೀವನ, **ತತು**-ಕರ್ಮರೂಪವಾದ, **ಕ್ರಿಯಾಸು ಚ**-ಕ್ರಿಯಾದಿ ಗಳಲ್ಲಿ ಎಂತ ತಾತ್ಪರ್ಯ. **ಕ್ರಿಯಾ**-ವ್ಯಾಪಾರರೂಪವಾದ ಕ್ರಿಯಾ ನಡಿಯ ತಕ್ಕ ಸ್ಥಾನ ಎಂಬುದು ಸ್ಥೂಲಶರೀರ, ಸ್ಥೂಲಶರೀರದಿಂದ ನಡಿಯತಕ್ಕ ಯಾವತ್ತು ಕ್ರಿಯೆಗಳು, **ತತ್ತ್ವೇಶಾಃ**-ತತ್ತ್ವಾಭಿಮಾನಿಗಳು, ತತ್ತ್ವಾಭಿ ಮಾನಿಗಳು ತಮ್ಮ ತಮ್ಮ ತತ್ತ್ವಗಳಲ್ಲಿ ಆವಾಸರಾಗಿ ಅಭಿಮಾನಿಗಳಾಗಿ ತತ್ತ್ವ ಕಾರ್ಯಗಳ ನಡಸೋ ವಿಷಯದಲ್ಲಿ, **ದಕ್ಷಾಃ**- ಸಮರ್ಥರು ಎಂತ ತಾತ್ಪರ್ಯ. **ಏವಂ ಉತ್ತರತ್ರಾಪಿ, ಏವಂ**-ಈ ಪ್ರಕಾರ ತಿಳಿಯಬೇಕು. **ಅಪಿ**-ಮತ್ತು, **ಉತ್ತರ**- ಜೀವನ ಸ್ವರೂಪಾಪೇಕ್ಷಯಾ ಉತ್ತರೋತ್ತರ ಇರತಕ್ಕ ಅನಾದಿ ಲಿಂಗ, ವೈಷಯಿಕಲಿಂಗ, ಅನಿರುದ್ಧಶರೀರ, ಸ್ಥೂಲಶರೀರ ಇವುಗಳಲ್ಲಿ ಇರತಕ್ಕ ರಮಾದೇವೇರು, ಬ್ರಹ್ಮವಾಯುಗಳು, ರುದ್ರಾದಿ ಯಾವತ್ತೂ ತತ್ತ್ವೇಶರು, **ತತ್ಕೃತೌ**- ಜೀವಕ್ರಿಯಾಕೃತೌ ಎಂತ ಅರ್ಥ. ಜೀವ ಮಾಡ ತಕ್ಕ ಕ್ರಿಯಾರೂಪವಾದ ಕರ್ಮಗಳಲ್ಲಿ ತತ್ತ್ವೇಶರು ಪರಮಾತ್ಮನ ವ್ಯತಿರಿಕ್ತ ದಕ್ಷರು. ಹ್ಯಾಂಗೆಂದರೆ, ಸ್ವಯಂ ವಿಷ್ಣುಃ ಎಂದರೆ ಪರಮಾತ್ಮನು ತತ್ತ್ವಾಭಿ ಮಾನಿಗಳಲ್ಲಿ ತಾನೇ ಇದ್ದುಕೊಂಡು ಮಾಡಿಸಿದರೆ, ತತ್ತ್ವಾಭಿಮಾನಿಗಳು ಜೀವನ ಕಡಿಯಿಂದ ಮಾಡಿಸೋದರಲ್ಲಿ ದಕ್ಷರಾಗುತ್ತಾರೆ. ತದ್ವ್ಯತಿರಿಕ್ತ ದಕ್ಷ ರಲ್ಲಿ ಎಂತ ತಾತ್ಪರ್ಯ. ಸ್ಥೂಲದೇಹಗತ ಚತುರ್ವಿಂಶತಿತತ್ತ್ವಗಳಿಗೆ ನಿಯಾ ಮಕ ದೇವತೆಗಳು ದಾರೆಂದರೆ, **'ಬ್ರಹ್ಮ ವಾಯೂ ಮಹಾತ್ಮಾನೌ ಮಹ**

ತ್ತತ್ತ್ವನಿಯಾಮಕೌ' ಬ್ರಹ್ಮ-ವಾಯುಗಳು ಮಹತ್ತತ್ತ್ವಕ್ಕೆ ಅಭಿಮಾನಿಗಳು. **'ಶೇಷವೀಂದ್ರಮೃಡಾಹ್ಯೇತೇ ಅಹಂತತ್ತ್ವಾಭಿಮಾನಿ ನೌ',** ಶೇಷ ಗರುಡ ರುದ್ರ ಇವರು ಅಹಂಕಾರತತ್ತ್ವಕ್ಕೆ ಅಭಿಮಾನಿಗಳು. ಈ ಪ್ರಕಾರ ಸ್ಥೂಲದೇಹಗತ ಚತುರ್ವಿಂಶತಿತತ್ತ್ವಗಳಿಗೆ ಅಭಿಮಾನಿದೇವತೆಗಳು ಬ್ಯಾರೆ ಬ್ಯಾರೆ ಉಂಟು. ಜೀವನಸ್ವರೂಪದಲ್ಲಿ ಪರಮಾತ್ಮ, ಅನಾದಿಲಿಂಗದಲ್ಲಿ ರಮಾ, ವೈಷಯಿಕಲಿಂಗದಲ್ಲಿ ಬ್ರಹ್ಮ-ವಾಯುಗಳು ಚತುರ್ವಿಂಶತಿ ತತ್ತ್ವಗಳಿಗೆ ಅಭಿಮಾನಿಗಳು. ಅನಿರುದ್ಧ ಸ್ಥೂಲ ಎರಡು ದೇಹದಲ್ಲಿ ಆಯಾ ತತ್ತ್ವಗಳಿಗೆ ಆಯಾ ತತ್ತ್ವದೇವತೆಗಳು ಅಭಿಮಾನಿಗಳೆಂದು ತಿಳಿಯಬೇಕು.

ಈ ಪ್ರಕರಣವೂ ಜೀವಾಂತರ್ಗತ ವಾಯುದೇವರ ಹೇಳಲಿಲ್ಲ.

**ನ್ಯಾಯವಿವರಣ ಉತ್ಕ್ರಾಂತಿಪಾದ**

**ಇಂದ್ರಿಯಸ್ಥೈಃ ಸ್ವರೂಪೈಸ್ತು ಜ್ಞಾನಿನಾ ಜನಯತ್ಯಸೌ ।**
**ಮನಃಸ್ಥೇನ ವಿಶೇಷೇಣ ಕಾಮ್ಯೈಃ ಕರ್ಮದೇವ ಚ ॥**
**ಪೃಥಕ್‌ಸ್ಥಿತೇನ ರೂಪೇಣ ಜೀವಂ ಧಾರಯತಿ ಪ್ರಭುಃ ।**
**ಜೀವಸ್ಥಿತೇನ ರೂಪೇಣ ವೇದಯತ್ಯಹಮಿಷಿತ್ಯಪಿ ॥**
**ಪ್ರಾಣ ಏಕೋವಶೀ ನಿತ್ಯಂ ಬಾಹ್ಯಾಂತಃಕರಣೇಶ್ವರಃ ।**
**ತಾನ್ಯೇತಾನ್ಯವಶಾನ್ಯೇವತಥಾಪಿ ಕೃಪಯೈವ ಸಃ ॥**
**ಪೃಥಕ್ ಶಕ್ತೋsಪಿ ತದ್ಗೈಸ್ತು ಸ್ವರೂಪೈಸ್ತದ್ಗಕಾರ್ಯಕೃತ್ ।**
**ತಸ್ಯೇಶೋ ಭಗವಾನ್ ವಿಷ್ಣುಃ ಏಕ ಏವ ಯಥಾನ್ಯಗಃ ॥**
**ಇತ್ಯಾದಿ ಶ್ರುತೇಃ ॥**

**ವ್ಯಾಖ್ಯಾನ-**

**ಮನಃಸ್ಥೇನ ವಿಶೇಷೇಣ ।**

**ಮನೋಗತೇನ ರೂಪೇಣ ಜ್ಞಾನಂ ಜನಯತಿ ।**

**ಕಾಮ್ಯೈಃ ಕರ್ಮಗತೈಃ ರೂಪೈಃ ಕರ್ಮ ಕರೋತಿ ।**

**ಪೃಥಕ್‌ಸ್ಥಿತೇನ ಬಿಂಬ ಭಗವತ್ಸನ್ನಿಧಿಗತೇನ ಪ್ರಾಣನಾಮ್ನಾ ಜೀವ ಸ್ಥಿತೇನ ಜೀವಸ್ವರೂಪಾಂತಃಕರಣಗತೇನ ಸರ್ವಾನ್ ವಶೀಕರೋತೀತಿ ವಶೀ॥**

**ಅರ್ಥ**

ಇದರಿಂದ ಜೀವಾಂತರ್ಗತ ವಾಯುದೇವರು ಇದ್ದಾರೆಂತ ಅರ್ಥ ವಾಗತಾಅದೆ. ಜೀವಶಬ್ದ ಎರಡು ಸ್ಥಾನದಲ್ಲಿ ಅನ್ವರ್ಥಕವಾಗಿ ಅದೆ, ಎಲ್ಲಿ ಅಂದರೆ ಲಿಂಗದೇಹಗತ ಪರಮಾಣುಸ್ವರೂಪದಿಂದ ಇರತಕ್ಕ ಜೀವಗೂ ಜೀವ ಎಂತಲೇ ಹೆಸರು. ಸ್ಥೂಲದೇಹಗತ ಜೀವಗೂ ಜೀವ ಎಂತಲೇ ಹೆಸರು. ಎರಡು ಪ್ರಕಾರ ಶಾಸ್ತ್ರದಲ್ಲಿ ಪ್ರಯೋಗವದೆ. **'ವಿಶ್ವಃ ಜೀವ ಮಾದಾಯ ತೈಜಸೇನ ಏಕೀಭೂಯ'** ಎಂತ ಅವಸ್ಥಾತ್ರಯಗಳು ಹೇಳೋ ಕಾಲದಲ್ಲಿ, ಜೀವನ ವಿಶ್ವ ತೆಗೆದುಕೊಂಡು ತೈಜಸನ್ನ ಸೇರತಾನೆ ಎಂತಲೂ, ತೈಜಸ ಜೀವನ್ನ ತೆಗೆದುಕೊಂಡು ಪ್ರಾಜ್ಞನ್ನ ಸೇರತಾನೆ ಎಂತಲೂ ಪ್ರಯೋಗ ಗಳವೆ. ಇದು ವ್ಯಾಪ್ತನಾದ ಜೀವನ ವಿಷಯವೇ ಹೋರ್ತು ಲಿಂಗಸ್ಥವಾದ ಪರಮಾಣು ಜೀವನ ವಿಷಯವಲ್ಲ ಎಂತಲೂ ಅನೇಕ ಪ್ರಮಾಣಗಳಿಂದ ಪ್ರಸಿದ್ಧವಾಗಿ ಅದೆ. ಆದ್ದರಿಂದ ಜೀವಶಬ್ದ ಉಭಯಸ್ಥಾನದಲ್ಲಿ ಅನ್ವರ್ಥಕ ವಾಗಿ ಅದೆ. ಆದ್ದರಿಂದ ವಿವಕ್ಷಾಭೇದದಿಂದ ಜೀವಾಂತರ್ಗತತ್ವ ವಾಯು ದೇವರಿಗೆ ಇರೋಣವು ಖರೇನೇ, ಇಲ್ಲದೆ ಇರೋಣವೂ ಖರೇನೆ. ಇದರನ್ನ ಪೂರ್ವೋಕ್ತಪ್ರಮಾಣದ ಅರ್ಥದಿಂದಲೇ ವಿವರ ಮಾಡತೇವೆ.

ಪ್ರಮಾಣಕ್ಕೆ ಅರ್ಥ –

ಇಂದ್ರಿಯಸ್ಥೈಃಸ್ವರೂಪೈಸ್ತು ಎಂದರೆ, **ಇಂದ್ರಿಯಸ್ಥೈಃ ಜಡೇಂ ದ್ರಿಯಸ್ಥೈಃ, ಸ್ವರೂಪೈಸ್ತು**– ವಿದ್ಯಮಾನಗಳಾದ ಸ್ವರೂಪೇಂದ್ರಿಯಗಳಿಗೆ, **ಜ್ಞಾನಾನಿ**–ಜ್ಞಾನಾದಿಗಳು, ಜನಯತಿ –ಹುಟ್ಟಿಸಿಕೋಡತಾರೆ. ದಾರು ಎಂದರೆ, **ಅಸೌ**– ವಾಯುದೇವರು, ದಶೇಂದ್ರಿಯಗಳಿಗೆ ದಾವದ್ವಾರ ನಿಯಮನ ಮಾಡತಾರೆ, **ಮನಃ**–ಜಡಮನಗತವ್ಯಾಪ್ತಚಿನ್ಮನ ದ್ವಾರಾ

ನಿಯಮನ ಮಾಡತಾನೆ ಎಂತ ತಾತ್ಪರ್ಯ. ಅಂದರೆ ದಶೇಂದ್ರಿಯ ವ್ಯಾಪಾರಕ್ಕೆ ಮನವು ಮುಖ್ಯಕಾರಣವು. **ತೇನ ವಿಶೇಷೇಣ ಕಾಮ್ಯೈಃ ಕರ್ಮಕೃದೇವಚ** ಎಂದರೆ, **ತೇನ**–ಆ ಮನಸ್ಸಿನ್ನ ಕೂಡಿಕೊಂಡು ಇರತಕ್ಕ, **ವಿಶೇಷೇಣ**– ಚಿನ್ಮನ ವಿಶೇಷದಿಂದ, ಜಡಮನೋವೃತ್ತಿ ವಿಶೇಷದಿಂದ, **ಕಾಮ್ಯೈಃ** ಕಾಮಾದಿ ಅರಿಷಡ್ವರ್ಗಗಳಿಂದ, **ಕರ್ಮ**–ಕರ್ಮವು, **ಕೃದೇವಚ**- ಮಾಡಸೋವರಾಗತಾರೆ. ದಾರು ಎಂದರೆ, **ಅಸೌ**– ವಾಯುದೇವರು ಎಂತ ತಾತ್ಪರ್ಯ. ವಾಯುದೇವರು ಜಡಮನದಲ್ಲಿ ವ್ಯಾಪ್ತವಾದ ಜೀವನ ಚಿನ್ಮನದಲ್ಲೀನೂ, ಜಡ ದಶೇಂದ್ರಿಯಗಳಲ್ಲಿ ವ್ಯಾಪ್ತರಾದ ಕರ್ಮಕಾರ್ಯಗಳ ನಡಸತಾರೆ. ಹೀಗೆ ಅರ್ಥ ಎಂಬುದು, **ಇಂದ್ರಿಯಸ್ಥೈಃ ಸ್ವರೂಪೈಸ್ತು** ಎಂಬ ಉಕ್ತಿಯೇ ಹೇಳತಕ್ಕ ಈ ವಿವಕ್ಷಾದಿಂದ ಜೀವಾಂತರ್ಗತತ್ವವೂ ಪರಮಾಣು ಸ್ವರೂಪಪಾವನಲ್ಲಿ ಪ್ರವೇಶ ಇಲ್ಲದ ಕಾರಣ, ಜೀವಾಂತರ್ಗತತ್ವ ಇಲ್ಲ ಎಂತಲೂ, ಉಭಯಪ್ರಮಾಣಕ್ಕೂ ಭಾದಕವಿಲ್ಲದ ಅರ್ಥ ಇದು ಎಂತ ತಿಳಿಯಬೇಕು. **ಪೃಥಕ್‌ಸೀತೇನ ರೂಪೇಣ ಜೀವಂ ಧಾರಯತಿ ಪ್ರಭುಃ** ಅಂದರೆ, ಜೀವನ ಏಕಾದಶಚಿದೇಂದ್ರಿಯಾಧಿಷ್ಠಾನಗ ರೂಪವಲ್ಲದೆ ಪೃಥಕ್‌ರೂಪ ಒಂದು. ಈ ರೂಪದಿಂದ ಜೀವನ್ನ ಧರಿಸಿದ್ದಾನೆ. ಹ್ಯಾಂಗೆಂದರೆ, **ಪೃಥಕ್‌ಸೀತೇನ ರೂಪೇಣ ಜೀವಂ** ಪ್ರತ್ಯೇಕವಾಗಿ ಇರತಕ್ಕ ರೂಪ, ಜೀವಸ್ಥೂಲದೇಹ ಮತ್ತು ಅನಿರುದ್ಧಗತ್ರ, ಅನಿರುದ್ಧದೇಹ ವಿಶಿಷ್ಟನಾದ ಜೀವನ್ನ ತನ್ನ ಪಾದಮೂಲದಲ್ಲಿ ಧಾರಿತನಾಗಿದ್ದಾನೆ. ದಾರು ಎಂದರೆ, **ಪ್ರಭುಃ**– ಜೀವೋತ್ತಮರಾದ ವಾಯುದೇವರು ಎಂತ **ತಾತ್ಪರ್ಯ. ಜೀವಸ್ಥಿತೇನ ರೂಪೇಣ ವೇದಯತ್ಯಹಮಿತ್ಯಪಿ,** ಮತ್ತು **ಜೀವಸ್ಥಿತೇನ ರೂಪೇಣ**– ಜೀವನ ಸ್ಥೂಲದೇಹದಲ್ಲಿ ದಾವ ಆಕಾರದಂತೆ ಜೀವವ್ಯಾಪ್ತನಾಗಿದ್ದಾನೋ ಅಂಥಾ ರೂಪದಿಂದಲೇ ವಾಯುದೇವರೂನೂ ವ್ಯಾಪ್ತರಾಗಿದ್ದಾರೆ. ಪ್ರಕಾಶರೂಪದಿಂದ ದೇಹಾಕಾರದಂತೆ ಜೀವ ವ್ಯಾಪ್ತನಾಗಿದ್ದಾನೆ, ಅದರಂತೆ ವಾಯುದೇವರೂನೂ ವ್ಯಾಪ್ತರಾಗಿದ್ದಾರೆ ಎಂತ ತಾತ್ಪರ್ಯ. ಪೂರ್ವೋಕ್ತಪ್ರಕಾರ ಇದ್ದು ಏನು ಮಾಡತಾರೆ ಎಂದರೆ, **ವೇದಯತಿ**–ತಿಳಸತಾರೆ. ದಾವದು ಎಂದರೆ, **ಅಹಂ**–

ನಾನು ಎಂಬ ಅಜ್ಞಾನವೂ, **ಅಪಿ**- ಮತ್ತು ನಾನಲ್ಲ ಎಂತಲೂ, **ಇತಿ**- ಈ ಎರಡು ಪ್ರಕಾರ ತಿಳಿಸತಾರೆ. **ಅಹಂಕರ್ತ** ಎಂತಲೂ, **ಅಹಂಕರ್ತನಲ್ಲ** ಎಂತಲೂ, ಉಭಯವಿಧಜ್ಞಾನ ವೇದಯತಿ- ಕಾಲಭೇದದಿಂದ ತಿಳಿಸತಾರೆ. **ಪ್ರಾಣ ಏಕೋವಶೀ ನಿತ್ಯಂ ಬಾಹ್ಯಾಂತಃಕರಣೇಶ್ವರಃ,** ವಾಯುದೇವರು ಜೀವೋತ್ತಮರಾದ ಕಡಿಯಿಂದ ವಾಯುದೇವರಿಗೆ ಅವರ ರಾದ ಸರ್ವಪ್ರಾಣಿಗಳು ವಾಯುದೇವರ ವಶರಾಗಿರುತ್ತಾರೆ. ನಿತ್ಯ ಎಂದರೆ, ಸ್ಥಿತಿಕಾಲ ಮೋಕ್ಷಕಾಲ ಸರ್ದಕಾಲದಲ್ಲಿ ಎಂತ ತಾತ್ಪರ್ಯ. ಮತ್ತು, ಬಾಹ್ಯಾಂತಃಕಶಣೇಶ್ವರಃ- ಬಾಹ್ಯ ಅಂದರೆ ಹೊರಭಾಗದಲ್ಲಿ ಇರತಕ್ಕ ಸ್ಥೂಲದೇಹದ ಜಡೇಂದ್ರಿಯಗಳಿಗೂ, **ಅಂತಃಕರಣ**- ಅಂತಃ-ಜಡೇಂದ್ರಿಯಗಳ ಒಳಗೆ ವಿದ್ಯಮಾನವಾದ ಕರಣ ಎಂದರೆ ಜೀವನ ಚಿದೇಂದ್ರಿಯಗಳು, ಇವುಗಳಿಗೆ ಈಶ್ವರನಾದವ ಎಂದರೆ, ನಿಯಮನಕ್ಕೆ ಸ್ವಾಮಿಯಾದವ. ಇದರಿಂದ ಪರಮಾಣುಸ್ವರೂಪದಲ್ಲಿ ಇಲ್ಲ ಎಂತ ತಾತ್ಪರ್ಯ, ಅದರನ್ನ ವ್ಯಾವರ್ತನ ಮಾಡಿತು. ತಾನ್ಯೇತಾನ್ಯವಶಾನ್ಯೆವ ಎಂದರೆ, ತಾನಿ ಏತಾನಿ ಅವಶಾನಿ ಏವ ಎಂತ ಪದ ಏತಾನಿ-ಸ್ಥೂಲದೇಹದಲ್ಲಿ ವ್ಯಾಪ್ತವಾಗಿ ಇರುವ ಏತಾದೃಶವಾದ ಇಂದ್ರಿಯಗಳು, ತಾನಿ-ಸ್ಥೂಲದಲ್ಲಿ ಸ್ಥೂಲವಾಗಿ ವ್ಯಾಪ್ತವಾದ ಚಿದೇಂದ್ರಿಯಗಳು, ಪರಮಾಣುಸ್ವರೂಪನಾದ ಜೀವನ ಅತ್ಯಂತ ಪರಮಾಣುಗಳಾಗಿ ಅವೆ. ತಾನಿ ಅಂದರೆ ಆ ಪರಮಾಣು ಇಂದ್ರಿಯಗಳು, ಅವಶಾನಿ-ವಾಯುದೇವರಿಗೆ ವಶವಲ್ಲ ಅಂದರೆ ವಶಗಳಲ್ಲವು. ಏವ ಅಂದರೆ, ಏವಾಕಾರದಿಂದ ನಿಶ್ಚಯ ಎಂತ ತಾತ್ಪರ್ಯ. ಪರಮಾಣುಸ್ವರೂಪದಲ್ಲಿ ಅತಿಪರಮಾಣುರೂಪದಿಂದ ಇರತಕ್ಕ ಚಿದೇಂದ್ರಿಯಗಳು ಸ್ಥೂಲೇಂದ್ರಿಯಗಳಲ್ಲಿ ಸ್ಥೂಲತ್ವೇನ ವ್ಯಾಪ್ತವಾದದ್ದರಲ್ಲಿ ಮಾತ್ರ ವಾಯುದೇವರ ಪ್ರವೇಶವೇ ಹೊರ್ತು ತದನ್ಯ ಅವಶ ಎಂತ ತಾತ್ಪರ್ಯ. **ತಥಾಪಿ ಸಃ ಪೃಥಕ್ ಶಕ್ತೋಽಪಿ ತದ್ಗೈಸ್ತುಸ್ವರೂಪೈಸ್ತದ್ಗಕಾರ್ಯಕೃತ್ ।** **ತದ್ಗೈಸ್ತು ಸ್ವರೂಪೈಃ, ತದ್ಗೈಸ್ತು** ಎಂದರೆ, ಸ್ಥೂಲದೇಹದಲ್ಲಿ ವ್ಯಾಪ್ತಗಳಾದ, **ಸ್ವರೂಪೈಃ**- ಸ್ವರೂಪೇಂದ್ರಿಯಗಳಿಂದ ವ್ಯಾಪಾರಗಳು ಮಾಡಿಸೋದಕ್ಕೆ ಸಹ ವಾಯುದೇವರು, **ಪೃಥಕ್ ಶಕ್ತೋಽಪಿ** ಎಂದರೆ, ರುದ್ರಾದಿ

ದೇವತೆಗಳ ವ್ಯತಿರಿಕ್ತ ತಾನೊಬ್ಬನೇ ಸರ್ವೇಂದ್ರಿಯಗಳ ವ್ಯಾಪಾರಗಳ ನಡಸೋದಕ್ಕೆ ಸಮರ್ಥನಾದ ಕಾಲಕ್ಕೂ, **ಕೃಪಯೈವ**– ಪರಮಕೃಪಾದಿಂದಲೇವೇ ರುದ್ರಾದಿ ದೇವತೆಗಳ ದ್ವಾರಾ, **ತದ್ಗಕಾರ್ಯ ಕೃತ್ ತದ್ಗ**– ಸ್ಥೂಲದೇಹಗತ ಜೀವನ ಚಿದೇಂದ್ರಿಯಗಳು ವ್ಯಾಪ್ತವಾಗಿ ಇರತಕ್ಕ ಕಾರ್ಯ ರುದ್ರಾದಿ ದೇವತೆಗಳ ದ್ವಾರಾ ವಾಯುದೇವರು ಮಾಡಸತಾರೆ ಎಂತ ತಾತ್ಪರ್ಯ. ಇಲ್ಲಿ ಸ್ಥೂಲದೇಹದಲ್ಲಿ ವ್ಯಾಪ್ತವಾದ ಚಿದೇಂದ್ರಿಯಗಳ ವಿಷಯವಾಯಿತು. ಇನ್ನು ಪರಮಾಣುಸ್ವರೂಪದಲ್ಲಿ ನಿಯಾಮಕರು ದಾರು; ಅಲ್ಲಿ ತತ್ತ್ವೇಶರ ದಾರನ ಅಂದರೆ **ತಸ್ಯೇಶೋ ಭಗವಾನ್ ವಿಷ್ಣುಃ, ತಸ್ಯ** ಅಂದರೆ ಚಿದ್ರೇಂದ್ರಿಯಗಳಿಂದ ಸ್ಥೂಲದೇಹದಲ್ಲಿ ಪ್ರಕಾಶತೋ ಅಂಶದಿಂದ ವ್ಯಾಪ್ತನಾದ ಜೀವರ ಪರಮಾಣರೂಪವಾದ ಅಂಶಿಯಲ್ಲಿ, **ಈಶಃ**–ನಿಯಾಮಕನಾದವ **ಭಗವಾನ್** ಎಂದರೆ ಷಡ್ಗುಣೈಶ್ವರ್ಯಸಂಪನ್ನನಾದ. **ವಿಷ್ಣುರೇವ** ಎಂದರೆ ಸ್ಥೂಲದೇಹದಲ್ಲಿ ವಾಯು ರುದ್ರಾದಿಗಳು ಹ್ಯಾಂಗೆ ತತ್ತ್ವಾಭಿಮಾನಿಗಳಾಗಿ ನಿಯಾಮಕರೋ ತದ್ವತ್ ಅಣುಸ್ವರೂಪದಲ್ಲಿ ವಿಷ್ಣು ನಿಯಾಮಕನೆಂತ ತಾತ್ಪರ್ಯ. **ಏವಶಬ್ದ**ದಿಂದ ನಿಶ್ಚಯವು, **ಯಥಾನ್ಯೈಸ್ತೈಃ** ಅನ್ಯವಾದ ಸ್ಥೂಲದೇಹದಲ್ಲಿ ದೇವತೆಗಳು. **ಯಥಾ** ಹ್ಯಾಂಗೋ, **ತಥಾ**–ಹಾಂಗೆ ಸ್ವರೂಪದಲ್ಲಿ **ತೈಃ**– ಆ ದೇವತಾನಾಮಗಳಿಂದ ವಿಷ್ಣು ಇರುತ್ತಾನೆಂತ ಶ್ರುತಿತಾತ್ಪರ್ಯ. ಈ ಅರ್ಥಕ್ಕೆ ಅನುಸರಿಸಿದ ಪ್ರಮಾಣಗಳು ಹಿಂದೆ ಉದಹರಿದ್ದೇವೆ. ಅಣೂನಾಮಪಿ ಜೀವಾನಾಂ ಪ್ರಕಾಶೋ ವ್ಯಾಪಕೋ ಭವೇತಿ, ಇದು ಸ್ಥೂಲದೇಹದಲ್ಲಿ ಜೀವ ಒಂದಂಶದಿಂದ ಪ್ರಕಾಶರೂಪದಿಂದ ವ್ಯಾಪಕ ಎಂತ ಹೇಳತಾರೆ. ಈ ವ್ಯಾಪ್ತಿಯಲ್ಲಿ ವಾಯುದೇವರ ಪ್ರವೇಶ ಎಂತ ತಾತ್ಪರ್ಯ. ರುದ್ರಾದಿ ದೇವತೆಗಳಿಗೆ ಕೂಡ ಉಂಟಲ್ಲ ಅಂದರೆ, ವಾಯುದೇವರೋಪಾದಿಯಲ್ಲಿ ರುದ್ರಾದಿ ದೇವತೆಗಳಿಗೆ ಇಲ್ಲ. ಹ್ಯಾಂಗೆಂದರೆ, ವಾಯುದೇವರ ವ್ಯಾಪ್ತಿ ಪ್ರಕಾಶದಲ್ಲಿ ಎಂಬುದು, ಪ್ರಕಾಶದಲ್ಲಿ ಪ್ರಕಾಶಾಂತರ ವ್ಯಾಪ್ತಿ ಎಂಥಾದ್ದೆಂದರೆ, ಪ್ರಕಾಶದಲ್ಲಿ ಘಟ-ಘಟಾದಿಗಳು ಇದ್ದಂತೆ, ಕ್ಷೀರದಲ್ಲಿ ಕಠಿಣದ್ರವ್ಯ ಇದ್ದಂತೆ, ಈ ರೀತ್ಯಾ ವ್ಯಾಪ್ತಿಯಲ್ಲಿ ಭೇದ. ಜೀವೋತ್ತಮರಾದ ಕಡಿಯಿಂದ ವಾಯುದೇವರಿಗೆ ಇಂಥಾ ಸಾಮರ್ಥ್ಯ ಉಂಟು ಎಂತ ತಿಳಿಯಬೇಕು.

**ವ್ಯಾಖ್ಯಾನದ ಅರ್ಥ**

ಮನಸ್ಥೇನ ವಿಶೇಷೇಣ, ಮನಸ್ಥಾನಗತ, ವಿಶೇಷೇಣ ಚಿನ್ಮಾನ ವಿಶೇಷದಿಂದಲೂ, ಜಡಮನವೃತ್ತಿ ವಿಶೇಷದಿಂದಲೂ, ಮನೋಗತೇನ ರೂಪೇಣ–ಮನಗತ ವಾಯುರೂಪದಿಂದ, ಜ್ಞಾನಂ ಜನಯತಿ–ಜ್ಞಾನ ವನ್ನು ಹುಟ್ಟಿಸತಾನೆ. ಕಾಮ್ಯೈಃ–ಕಾಮಗತರೂಪೈಃ ಎಂತ ವ್ಯಾಖ್ಯಾನ. ಮತ್ತು ವಾಯುದೇವರು ಕಾಮಾದಿ ಆರರಲ್ಲಿ ಇರತಕ್ಕ ತನ್ನ ರೂಪಗಳಿಂದ ಕರ್ಮ ಕರೋತಿ-ಕರ್ಮವನ್ನು ಮಾಡಸತಾನೆ ಕಾರಯತಿ ಎಂತ ಅಧ್ಯಾಹಾರ ಮಾಡಿಕೋಬೇಕು. ಪೃಥಕ್‌ಸ್ಥಿತೇನ ಎಂಬುವದಕ್ಕೆ ವ್ಯಾಖ್ಯಾನ-ಬಿಂಬಭಗ ವತ್ಸನ್ನಿಧಿಗತೇನ ಪ್ರಾಣನಾಮ್ನಾ ಎಂದರೆ, ಬಿಂಬನಾದ ಮೂಲೇಶ ಭಗವಂತನ ಸನ್ನಿಧಿ ಪಾದಮೂಲದಲ್ಲಿ ಸನ್ನಿಧಾನದಿಂಲಿ, ಪ್ರಾಣನಾಮ್ನಾ–ಪ್ರಾಣ ಎಂತ ನಾಮದಿಂದ ಕರೆಸಿ ಇರೋವನಾಗಿದಾನೆ, ಇವನೇ ಜೀವಾಧಾರ. ಜೀವ ಸ್ಥಿತೇನ ಎಂದರೆ, ಜೀವಸ್ವರೂಪಾಂತಃಕರಣಗತೇನ ಎಂತ ವ್ಯಾಖ್ಯಾನ, ವ್ಯಾಪ್ತವಾದ ಜೀವಸ್ವರೂಪಭೂತವಾದ, ಅಂತಃ– ಸ್ಥೂಲದೇಹದ ಅಂತಃ ಪ್ರತಿಯಾದ, ಕರಣ-ಏಕಾದಶೇಂದ್ರಿಯಗಳ, ಗತೇನ–ಗತವಾದ ರೂಪದಿಂದ ಸರ್ವಾನ್–ಸರ್ವವನ್ನೂ, ವಶಿಕರೋತೀತಿ–ಜೀವಕೃತಕರ್ಮಗಳು ಯಾವತ್ತು ತನ್ನ ಕ್ರಿಯಾದ್ವಾರಾ ಜೀವಗೆ ವಶಮಾಡತಾನೆಂತ ತಾತ್ಪರ್ಯ. ಈ ಪ್ರಕಾರ ಸ್ಥೂಲದೇಹಗತ ಜೀವನ ಚಿದೇಂದ್ರಿಯಗಳಲ್ಲಿ ವಾಯುದೇವರು ಪೂರ್ವೋಕ್ತ ರೀತ್ಯಾ ವ್ಯಾಪ್ತರಾಗಿ ಇದ್ದು, ತದ್ವಾರಾ ಸ್ಥೂಲದೇಹದಿಂದ ಸಕಲಕಾರ್ಯಗಳು ಮಾಡಸತಾರೆ ಎಂತ ತಾತ್ಪರ್ಯ. ಈ ಪ್ರಮಾಣಾನುಸಾರ ಜೀವಾಂತರ್ಗತ ಬ್ರಹ್ಮ-ವಾಯ್ವಾದಿಗಳಿಗೆ ಪ್ರವೇಶ ಎಂಬು ಇಲ್ಲ ಎಂತ ತಿಳಿಯಬೇಕು.

**ಪ್ರಮಾಣ :-**

ಅವ್ಯಕ್ತಾದ್ಯಾಃ ಪೃಥಿವ್ಯಂತಾಃ ಯೇ ತತ್ವಾದ್ಯಾಸುರಾಃ ಸ್ಮೃತಾಃ ।
ಶರೀರಿಣಾಂ ಶರೀರಸ್ಥಾಸ್ತೇ ತತ್ವಸ್ಥಾಶ್ಚ ನಿತ್ಯಶಃ ।
ವಿಷ್ಣುನಾ ಪ್ರೇರಿತಾಸ್ಸರ್ವೇ ಕಾರಯಂತ್ಯನಿಶಂ ಕ್ರಿಯಾಃ ।

ತೇಷುಸ್ಥಿತ್ವಾ ಸ್ವಯಂ ವಿಷ್ಣುಃ ತತ್ತ್ವಾಖ್ಯೇಷು ಶರೀರೇಷು ।
ತತ್ತ್ವಾದ್ಯೈಃ ಕಾರಯತ್ಯದ್ಧಾ ಪೃಥಕ್ ಶಕ್ತಾ ನ ತೇ ಯತಃ ।
ವಿಷ್ಣುರ್ವಾಯುಂ ಪುರಸ್ಕೃತ್ಯ ಸರ್ವೇಷ್ವೇತೇಷು ಸಂಚರನ್ ।
ಕರೋತಿ ಕಾರಯತ್ಯದ್ಧಾ ಜಗತ್ಕಾರ್ಯಮತಂದ್ರಿತಃ ।
ರಾಜಾಮಾತ್ಯಸ್ಥಳಾಧ್ಯಕ್ಷ ಪ್ರಜಾಧೀನಾ ಜಗತ್ಕ್ರಿಯಾಃ ।
ತಥಾ ವಿಷ್ಣುಮರುತ್ತಂತ್ರಾ ಪ್ರತಿಜೀವಕೃತಾಃ ಕ್ರಿಯಾಃ ।
ಏತೇ ಜೀವಾಃ ವಿಷ್ಣು ತಂತ್ರಾಃ ಕರ್ತಾರಶ್ಚೋತ್ತರೋತ್ತರಂ ।
ಜೀವಂ ವಿನಾ ತು ತತ್ತ್ವೇಶಾಃ ದಕ್ಷಾ ಜೀವಕ್ರಿಯಾಸುಚ ।
ವಿನಾ ವಾಯುಂ ಸ್ವಯಂ ದಕ್ಷಃ ಶತ್ತತ್ಸರ್ವ ಕ್ರಿಯಾಸು ಚ ।
ವಿಷ್ಣುಂ ವಿನಾ ತಥಾ ಸರ್ವೇ ನಾಪಿ ಕಿಂಚ ಕ್ಷಮಾಯುತಾಃ ।
ಅಧಿಕಾರಸ್ಯಂ ಹೇತುತ್ವಾತ್ತೇಷಾಂ ಮುಕ್ತೌ, ತಥಾ ಹರಿಃ ।
ಅಧಿಕಾರಂ ಪ್ರಾಪಯಿತ್ವಾ ತತೋ ಮೋಕ್ಷಂ ದದಾತಿ ಚ ।
ತತ್ತ್ವಹ್ವಾನಾಂ ದೇವತಾನಾಂ ಆತ್ಮಾರಂಭ ಸ್ವಯಂ ಹರಿಃ ।
ಏವಂ ಜ್ಞಾತ್ವಾ ಚ ಕರ್ತೃತ್ವಂ ಜಾನಿಯಾಚ್ಚ ಕ್ರಿಯಾಫಲಂ ॥
ಇತಿ ಶಾಂಡಿಲ್ಯತತ್ತ್ವೇ ॥

ಅರ್ಥ

ಅವ್ಯಕ್ತಾದ್ಯಾಃ ಪಥಿವ್ಯಂತಾಃ— ಅವ್ಯಕ್ತಾದಿಗಳೇ ಆರಂಭಮಾಡಿ ಪೃಥಿವೀ ಅಂತ್ಯದವರಿಗೂನೂ. ಯೇ ತೆತ್ತ್ವಾದ್ಭಾಸುರಾಃ ಸ್ಮೃತಾಃ— ಎಂದರೆ, ಯೇದಾವಗಳಾದಂಥಾ. ತ್ವತತ್ತ್ವಾತ್—ಎಂದರೆ ಚತುರ್ವಿಂಶತಿ ತತ್ತ್ವಗಳ ದೆಶೆಯಿಂದ, ಭಾಸುರಾಃ—ಪ್ರಕಾಶಮಾನವಾಗಿ ಅವೆ ಎಂತ, ಸ್ಮೃತಾಃ—ಹೇಳಲ್ಪಡತದೆ. ದಾವದು ಎಂದರೆ. ಶರೀರಿಣಾಂ—ಶರೀರ ಉಳ್ಳವ ಶರೀರಿ ಅಂತ ಹೆಸರು, ಇವ ದಾರು ಎಂದರೆ ಸ್ವರೂಪಕ್ಕೆ ಅನ್ಯ

ವಾದ ಜಡ ಶರೀರಗಳು ಉಳ್ಳ ಜೀವ ಎಂತ ತಾತ್ಪರ್ಯ. ಆದ್ದರಿಂದ ಶರೀರ ಎಂದರೆ ಜೀವರುಗಳ. **ಶರೀರಾಸ್ತೇ** ಎಂದರೆ, ಶರೀರಸ್ವರೂಪಭೂತ ವಾದ ಶರೀರದಲ್ಲಿ. **ಸ್ಥಾಃ**—ಇರತಕ್ಕ, **ತೇ**—ಪೂರ್ವೋಕ್ತ ಚತುರ್ವಿಂಶತಿ ತತ್ತ್ವಗಳು **ತತ್ತ್ವಸಾಕ್ಷಿ** ನಿತ್ಯಶಃ-ಜೀವನ ಸ್ವರೂಪದೇಹಗತ ತತ್ತ್ವಗಳೇನು, ತತ್ತ್ವಸಾಕ್ಷಿ ತತ್ತ್ವಗತ ಭಗವದ್ರೂಪಗಳೇನು, **ನಿತ್ಯಶಃ**-ಅನಾದ್ಯನಂತ ಕಾಲಕ್ಕು ನಿತ್ಯಗಳಾಗಿ ಇರತಕ್ಕದ್ದು ಜೀವನ ಸ್ವರೂಪಭೂತ ತತ್ತ್ವಗಳಿಗೆ ಪ್ರೇರಕರು ದಾರು ಎಂದರೆ. **ವಿಷ್ಣುನಾಪ್ರೇರಿತಾಸ್ಸರ್ವೇ**– ಜೀವನ ಸ್ವರೂಪಭೂತ ವಾದ, **ಸರ್ವೇ**-ಸಮಸ್ತವಾದ ಚತುರ್ವಿಂಶತಿ ತತ್ತ್ವಗಳು. **ವಿಷ್ಣುನಾ**– ವಿಷ್ಣುವಿನಿಂದ. **ಪ್ರೇರಿತಾಃ**– ಪ್ರೇರಿತಗಳಾಗಿ ಇರೋದಾಗಿ ಅದೆ. **ಕಾರಯುತ್ಯನಿಶಂ ಕ್ರಿಯಾಃ**– ಜೀವನ ಸ್ವರೂಪದಲ್ಲಿ ವಿಷ್ಣುವಿನಿಂದ ಪ್ರೇರಿತ ನಾಗಿ ಆ ಪ್ರೇರಣೆ ಕ್ರಿಯಾ ಎಂಬುದು, **ಅನಿಶಂ**–ರಾತ್ರಿ ಹಗಲುಗಳಲ್ಲಿ ಸ್ಥೂಲದೇಹದಿಂದ ಕ್ರಿಯಾದಿಗಳು ನಡೆಯುತದೆ ಎಂತ ತಾತ್ಪರ್ಯ. ಈ ಪ್ರಮಾಣವು ಜೀವನ ಸ್ವರೂಪದಲ್ಲಿ ಪರಮಾತ್ಮನ ಪ್ರೇರಣೆ ಹೇಳಿತೇ ಹೊರ್ತು, ಬ್ರಹ್ಮವಾಯಾದಿಗಳ ಪ್ರೇರಣೆ ಹೇಳಲಿಲ್ಲ. ಆದ್ದರಿಂದ ಬ್ರಹ್ಮ-ವಾಯಾದಿ ಗಳ ಪ್ರವೇಶ ಎಂಬುದು ಕೂಡಲಾರದು.

## ಹದಿನಾಲ್ಕನೇ ಶ್ಲೋಕದ ಅರ್ಥ

ಶರೀರ ಎಂದರೆ ಜೀವರುಗಳಲ್ಲಿ ವಿದ್ಯಮಾನಗಳಾದ, **ತೇಷು**-ಜೀವರ ಸ್ವರೂಪಭೂತತತ್ತ್ವಗಳಲ್ಲಿ, **ವಿಷ್ಣುಃ** –ವಿಷ್ಣುರೂಪಿ ಪರಮಾತ್ಮ **ಸ್ವಯಂ**– ತಾನೊಬ್ಬನೇವೇ, **ಸ್ಥಿತ್ವಾ** ಇದ್ದವನಾಗಿ. **ಕಾರಯುತಿ**-ಪ್ರೇರಣಾದಿಗಳು ಮಾಡೋವನಾಗತಾನೆ. **ಅಥ**–ಅನಂತರದಲ್ಲಿ ಅಂದರೆ. ಸ್ವರೂಪದೇಹಕ್ಕೆ ಅನಂತರದಲ್ಲಿ ಇರತಕ್ಕ. **ತತ್ತ್ವತ್**-ಚತುರ್ವಿಂಶತಿತತ್ತ್ವಗಳ ದೆಶೆಯಿಂದ ಯುಕ್ತವಾದಂಥಾ, **ಕೇಷು**–ಕೆಲವು ಶರೀರಗಳುಳ್ಳ, ಕೆಲವು ಶರೀರಗಳು ದಾವದು ಎಂದರೆ, ಲಿಂಗ ವೈಷಯಿಕ ಅನಿರುದ್ಧ ಸ್ಥೂಲಶರೀರಗಳು ಎಂತ ತಾತ್ಪರ್ಯ. ಈ ಶರೀರಗಳಲ್ಲಿ **ಕೈಃ**– ದಾರಗಳಿಂದ (ದಾವುದರಗಳಿಂದ), **ತತ್ತ್ವಾತ್**- ಚತುರ್ವಿಂಶತಿತತ್ತ್ವಗಳ ದೆಶೆಯಿಂದ, **ಕಾರಯುತಿ**–ವ್ಯಾಪಾರ

ಗಳು ಮಾಡಿಸಲ್ಪಡತವೆ. ಆ ದೇವತೆಗಳಾದರೋ. **ಪೃಥಕ್ ಶಕ್ತಾ**-ಪರಮಾತ್ಮನ ವ್ಯತಿರಿಕ್ತ ಪೃಥಕ್ಕಾಗಿಮಾಡಿಸೋ ವಿಷಯದಲ್ಲಿ, **ಶಕ್ತಾಃ**-ಶಕ್ತರು, **ನ**-ಆಗೋದಿಲ್ಲ. **ಯತಃ**-ದಾವಕಾರಣ ದೆಶೆಯಿಂದ ಅಸ್ವತಂತ್ರರಾದ ಕಾರಣದೆಶೆಯಿಂದ ಪೃಥಕ್ ಶಕ್ತರಲ್ಲ ಎಂತ ತಾತ್ಪರ್ಯವು. ಈ ಪ್ರಮಾಣ ದಿಂದಲೂ ಜೀವಾಂತರ್ಗತತ್ವ ಬ್ರಹ್ಮ-ವಾಯುಗಳಿಗೆ ಕೊಡೋದಿಲ್ಲ. **ಸ್ವಯಂ ವಿಷ್ಣುಃ** ಎಂತ ಪ್ರಯೋಗ ಇರೋಣದರಿಂದ ಬ್ರಹ್ಮ-ವಾಯುಗಳ ವ್ಯಾವರ್ತನ ಮಾಡೋದಾಯಿತು.

## ಹದಿನೈದನೇಯ ಶ್ಲೋಕದ ಅರ್ಥ

ತತ್ತ್ವೇಶರು ಅಸ್ವತಂತ್ರರಾದ್ದರಿಂದಲೇ, **ಅಥ**-ಅನಂತರದಲ್ಲಿ, **ವಿಷ್ಣುಂ ವಾಯುಂ ಪುರಸ್ಕೃತ್ಯ**-ವಿಷ್ಣುರೂಪಿ ಪರಮಾತ್ಮ ವಾಯುದೇವರನ್ನು ಮುಂದೆ ಮಾಡಿಕೊಂಡು, **ಸರ್ವೇಷ್ವೇತೇಷು**- **ಸರ್ವೇಷು**-ಸಮಸ್ತರಾದ ಪ್ರಾಣಿಗಳು, **ಏತೇಷು**-ಸ್ವರೂಪಕ್ಕೆ ಅನ್ಯವಾದ ದೇಹಗಳಲ್ಲಿ, **ಸಂಸ್ಮರನ್**-ಛಂದಾಗಿ ಸ್ಮರಿಸೋವನಾಗು. ಎಂತ ಅಂದರೆ **ಕರೋತಿ ಕಾರಯತಿ** ಎಂತ ಸ್ಮರಿಸು ಎಂತ ತಾತ್ಪರ್ಯ. **ಕರೋತಿ**-ಜೀವನ ಸ್ವರಸಪದಲ್ಲಿ ಪರಮಾತ್ಮ ಒಬ್ಬನೇ ಪ್ರೇರಣಗಳ ಮಾಡತಾನೆ. **ಕಾರಯತಿ**-ತದನ್ಯದೇಹಗಳಲ್ಲಿ ವಾಯುದೇವ ರನು ಮುಂದೆ ಮಾಡಿಕೊಂಡು. ಆ ವಾಯುದೇವರ ದ್ವಾರಾ ಮಾಡಸತಾನೆ. **ಅಂಥ ಜಗತ್ಕಾರ್ಯಮತಂದ್ರಿತಃ ಅರ್ಥ**-ಜೀವನ ಸ್ವರೂಪಾನಂತರದಲ್ಲಿ ಇರ ತಕ್ಕ ದೇಹಕಾರ್ಯಗಳು. **ಅತಂದ್ರಿತಃ**-ಅತೀಂದ್ರಿಯನಾಗಿ ಇರತಕ್ಕ ಪರ ಮಾತ್ಮನ ದೆಶೆಯಿಂದ ಜಗತ್ಕಾರ್ಯ ಜೀವರ ಕಡಿಯಿಂದ ಕಾರ್ಯರೂಪವಾದ ಕರ್ಮ ವನ್ನು ವಾಯುದೇವರನ್ನ ಮುಂದೆ ಮಾಡಿಕೊಂಡು ಮಾಡಸತಾನೆ ಎಂತ ತಾತ್ಪರ್ಯ.

## ಹದಿನಾರನೆ ಶ್ಲೋಕದ ಅರ್ಥ

ಅರ್ಥ - **ರಾಜಾಮಾತ್ಯಸ್ಥಳಾಧ್ಯಕ್ಷ** - ರಾಜಮಹಾರಾಜನಾದ ಪರಮಾತ್ಮ, **ಅಮಾತ್ಯ** - ತನ್ನ ಭೃತ್ಯರಾದ ಜೀವರ, **ಸ್ಥಳ** ಎಂದರೆ ಜೀವರ ಸ್ವರೂಪದೇಹದ ಸ್ಥಳದಲ್ಲಿ, **ಅಧ್ಯಕ್ಷ** — ತಾನೊಬ್ಬನೇ

ಅಧ್ಯಕ್ಷನಾಗಿ, **ಅಧೀನಾ**—ತನ್ನ ಒಬ್ಬನ ಆಧೀನದಿಂದ ಇರತಕ್ಕ, **ಜಗತ್ಕ್ರಿಯಾಃ**—ಜಗತ್ತು ಜೀವರ ದೆಶೆಯಿಂದ, ಕ್ರಿಯಾ ಎಂದರೆ ಪ್ರೇರಣ ಕ್ರಿಯಾದಿಗಳ, **ಪ್ರದ**—ಪ್ರ—ಧಂದಾಗಿ. **ಜ**—ಉತ್ಪತ್ತಿ ಮಾಡೋವನಾಗತಾನೆ. ಇಲ್ಲಿ ಬ್ರಹ್ಮ—ವಾಯ್ವಾದಿಗಳ ಪ್ರವೇಶವಿಲ್ಲವು. ಅಧ್ಯಕ್ಷಶಬ್ದದಿಂದ ಬ್ರಹ್ಮವಾಯವ್ವಾದಿಗಳ ತತ್ತ್ವೇಶರ ವ್ಯಾವರ್ತನನೆಂದು ತಿಳಿಯಬೇಕು. ವಿಷ್ಣುವಾಯ್ವಾದಿ ಪ್ರವೇಶ ಎಲ್ಲಿ ಅಂದರೆ, **ತಥಾ**-ಹಾಂಗೆ ಎಂದರೆ ಸ್ವರೂಪದೇಹದಲ್ಲಿ ಪರಮಾತ್ಮ ಹ್ಯಾಂಗೆ ಪ್ರೇರಕನೋ ಹಾಂಗೆ, **ವಿಷ್ಣುಃ**- ಗುಣಪೂರ್ಣನಾದ ಪರಮಾತ್ಮ, **ಮರುತಃ**-ವಾಯುದೇವರು ಇರತಕ್ಕ, **ತತ್ರ**-ಮ್ಯಾಲೆ ಹೇಳಲ್ಪಟ್ಟ ಸ್ವರೂಪದೇಹ ವ್ಯತಿರಿಕ್ತ ಅನ್ಯವಾದ ವೈಷಯಿಕ ದೇಹದಾರಭ್ಯ **ಜೀವಕೃತ್**-ಜೀವರಿಂದ ಮಾಡಲ್ಪಡುವ, ಕ್ರಿಯಾ-ವ್ಯಾಪಾರಗಳ, ಪ್ರ-ಧಂದಾಗಿ, ಜ-ಉತ್ಪತ್ತಿ ಮಾಡತಾನೆ. ಎಂದರೆ, ಸ್ವರೂಪದೇಹದ ವ್ಯತಿರಿಕ್ತ ಅನ್ಯದೇಹಗಳಲ್ಲಿ ವಾಯುದೇವರ ದ್ವಾರಾ ಕರ್ಮ ಉತ್ಪತ್ತಿ ವಿಷ್ಣು ಮಾಡತಾನೆಂತ ತಾತ್ಪರ್ಯ. ತತ್ರ-ಸ್ವರೂಪದೇಹಕ್ಕೆ, ಅನ್ಯವಾದ ದೇಹ ಎಂತಯಾ ೯ ಅರ್ಥ ಮಾಡಬೇಕು, ಸ್ವರೂಪದೇಹ ಎಂತಲೇ ಅರ್ಥ ಮಾಡೋಣವೆಂದರೆ ಕೂಡದು. ದೃಷ್ಟಾಂತಸಹಿತವಾದ ಪ್ರಮಾಣ ಆದ್ದರಿಂದ ಸ್ವರೂಪದೇಹದ ದೃಷ್ಟಾಂತ ತದನ್ಯದೇಹಗಳ ದೃಷ್ಟಾಂತ, ಆದ್ದರಿಂದ ಕೂಡದು.

**ಏತೇ ಜೀವಾಃ ವಿಷ್ಣುತಂತ್ರಾಃ ಕರ್ತಾರಶ್ಚೋತ್ತರೋತ್ತರಂ । ಜೀವಂ ವಿನಾ ತು ತತ್ತ್ವೇಶಾಃ ದಕ್ಷಾ ಜೀವಕ್ರಿಯಾಸು ಚ,** ಏತೇ— ಈ ಪೂರ್ವೋಕ್ತರಾದ, **ಜೀವಾಃ**-ಯಾವತ್ತೂ ಜೀವರು, **ವಿಷ್ಣುತಂತ್ರಾಃ**-ಸ್ವರೂಪದಲ್ಲಿ ವಿಷ್ಣು ಒಬ್ಬನಿಂದಲೇ ತಂತ್ರವುಳ್ಳವರೇ ಹೊರ್ತು, **ಬ್ರಹ್ಮ**-ವಾಯುಗಳಿಂದ ತಂತ್ರರಲ್ಲ, **ತಂತ್ರ**-ಅಂದರೆ ಪ್ರೇರಣಾದಿಗಳು **ಕರ್ತಾರಶ್ಚೋತ್ತರೋತ್ತರಂ** — ಬ್ರಹ್ಮ-ವಾಯ್ವಾದಿಗಳು, **ಕರ್ತಾರಃ**— ಕರ್ಮ ಮಾಡಿಸೋ ವಿಷಯದಲ್ಲಿ ಕರ್ತರಾಗುತ್ತಾರೆ. ಎಲ್ಲಿ ಅಂದರೆ, **ಉತ್ತರೋತ್ತರಂ**- ಸ್ವರೂಪದೇಹಕ್ಕೆ ಅನ್ಯವಾದ ಉತ್ತರೋತ್ತರ ಇರತಕ್ಕ ದೇಹಗಳಲ್ಲಿ ಎಂತ ತಾತ್ಪರ್ಯ. ಹಾಂಗೆ ಅರ್ಥ ಎಂಬುದು ಸಿದ್ಧಾಂತ. ಹ್ಯಾಂಗೆಂದರೆ, **ಜೀವಂ ವಿನಾ ತು ತತ್ತ್ವೇಶಾಃ**, ಎಂದರೆ ಜೀವನ ವಿನಹವಾಗಿ, **ತತ್ತ್ವೇಶಾಃ**-

ತತ್ತ್ವೇಶರು, **ದಕ್ಷಾಃ ಜೀವಕ್ರಿಯಾಸು ಚ** - ಜೀವನ ವ್ಯತಿರಿಕ್ತವಾಗಿ ಅನ್ಯದೇಹಗಳಲ್ಲಿದ್ದು ಜೀವಕ್ರಿಯಾ ಮಾಡಿಸೋ ವಿಷಯದಲ್ಲಿ ದಕ್ಷರೇ ಹೊರ್ತು, ಜೀವನ ಸ್ವರೂಪದಲ್ಲಿ ಪ್ರವೇಶಮಾಡಿ ಕರ್ಮ ಮಾಡಿಸೋ ವಿಷಯ ದಲ್ಲಿ ಸಮರ್ಥರಾಗೋದಿಲ್ಲ.

**ಪ್ರಮಾಣದ ಅರ್ಥ**-

ಇದರ ಮ್ಯಾಲೆ ಬ್ರಹ್ಮ-ವಾಯುಗಳು ತತ್ತ್ವೇಶರಲ್ಲ ಎಂದು ಹೇಳಿ ಕೊಂಡು, ಜೀವಾಂತರ್ಗತತತ್ತ್ವೇಶರಿಗೆ ಪ್ರವೇಶವಿಲ್ಲವೇ ಹೊರ್ತು, ತತ್ತ್ವೇಶರು ಅಲ್ಲದ ಬ್ರಹ್ಮ-ವಾಯುಗಳಿಗೆ ಪ್ರವೇಶ ಉಂಟು ಎಂತ ಹೇಳು ತೇವೆ ಎಂದರೆ ಕೂಡಲಾರದು. ಬ್ರಹ್ಮ-ವಾಯುಗಳು ಮಹತ್ತತ್ತ್ವಕ್ಕೆ ಈಶರು ಎಂಬುದು ಸರ್ವಪ್ರಮಾಣಗಳಿಂದಲೂ ಸಿದ್ಧವು. ಆದ್ದರಿಂದ ತತ್ತ್ವೇಶರು ಅಲ್ಲ ಎಂಬ ಸಂಭಾವನ ಅಸಂಭಾವಿತವು. **ವಿಷ್ಣುಂ ವಿನಾ ತಥಾ ಸರ್ವೇ ನಾಪಿ ಕಿಂ ಚ ಕ್ಷಮಾಯುತಾಃ ||** ಎಂದರೆ, **ಯಥಾ**- ಹ್ಯಾಂಗೆ ವಿಷ್ಣು ಪರಾಪೇಕ್ಷೆ ಇಲ್ಲದೇನೇ ಜೀವನ ಸ್ವರೂಪದಲ್ಲಿ ಜೀವಕೃತ ಕರ್ಮ ಮಾಡತಾನೋ, **ತಥಾ**-ಹಾಂಗೆ, **ಸರ್ವೇ**-ಸಮಸ್ತರಾದಂಥಾ **ಬ್ರಹ್ಮ**- ವಾಯ್ವಾದಿ ತತ್ತ್ವೇಶರು, ಅಪಿ-ಮತ್ತು ಎಂದರೆ ಸ್ಥೂಲದೇಹದಿಂದ ಸ್ವರೂ ಪಕ್ಕೆ ಅನ್ಯವಾದ ದೇಹಗಳಲ್ಲಿ ಕರ್ಮ ಮಾಡಿಸೋ ವಿಷಯದಲ್ಲಿ, **ವಿಷ್ಣು ವಿನಾ**- ವಿಷ್ಣು ವ್ಯತಿರಿಕ್ತ, **ಕಿಂ ಚ ಕ್ಷಮಾಯುತಾಃ**-ಕಿಂಚಿತ್ತಾದರೂ, ಕ್ಷಮಾ- ಸಾಮರ್ಥ್ಯದಿಂದ, **ಯುತಾಃ**-ಯುಕ್ತರಾದವರು, **ನ**-ಆಗೋದಿಲ್ಲ. **ಅಧಿಕಾ ರಸ್ಯ ಹೇತುತ್ವಾತ್**-ಅಧಿಕಾರವೆಂದರೆ ಈ ತತ್ತ್ವಾಭಿಮಾನಿ ಅಧಿಕಾರವನು ಕೊಟ್ಟು ಈ ಕಾರಣದ ದೆಸೆಯಿಂದ, **ತೇಷಾಂ**- ಈ ತತ್ತ್ವೇಶರುಗಳು, **ಉಕ್ತೌ**-ಮ್ಯಾಲೆ ಉಕ್ತವಾದಂಥ ಸ್ವರೂಪಕ್ಕೆ ಅನ್ಯವಾದ ದೇಹಗಳಲ್ಲಿ ತತ್ತ್ವೇಶರು ಇದ್ದಾರೆ. ದೃಷ್ಟಾಂತ, ಪರಮಾತ್ಮ ಸ್ವರೂಪದೇಹದಲ್ಲಿ **ಯಥಾ**-ಹ್ಯಾಂಗೋ, **ತಥಾ**-ಹಾಂಗೆ, ಹರಿಃ- ಪರಮಾತ್ಮನು, **ಅಧಿ ಕಾರಂ ಪ್ರಾಪಯಿತ್ವಾ**- ಪರಮಾತ್ಮ ಸ್ವರೂಪದೇಹದಲ್ಲಿ ದಾವ ದಾವ

ತತ್ತ್ವಕ್ಕೆ ದಾವ ದಾವ ನಾಮಗಳಿಂದ ಅಭಿಮಾನಿಯಾಗಿ ಇದ್ದಾನೋ **ತದ್ವತ್**- ಸ್ವರೂಪಕ್ಕೆ ಅನ್ಯವಾದ ದೇಹಗಳಲ್ಲಿ ವಿದ್ಯಮಾನವಾದ ತತ್ತ್ವಗಳಲ್ಲಿ ಆಯಾ ತತ್ತ್ವನಾಮಗಳನ್ನು ತತ್ತ್ವೇಶರಿಗೆ ಕೊಟ್ಟು, ಆಯಾ ತತ್ತ್ವಗಳಿಗೆ, **ಅಧಿಕಾರಂ**-ಅಧಿಕಾರವನ್ನು, **ಪ್ರಾಪಯಿತ್ವಾ**- ಪ್ರಾಪ್ತಿಯನ್ನು ಉಂಟುಮಾಡಿ ಆಯಾ ತತ್ತ್ವಕಾರ್ಯಗಳ ಆಯಾ ಅಭಿಮಾನಿದೇವತೆಗಳಿಂದ ಮಾಡಿಸಿ, ತದ್ವಾರಾ ಜೀವನ ಕಡಿಯಿಂದ ಮಾಡಿಸಿ, **ತತಃ**-ಅನಂತರದಲ್ಲಿ, **ಮೋಕ್ಷಂ ದದಾತಿ ಚ**- ಮೋಕ್ಷವನ್ನು ಕೋಡೋವನಾಗತಾನೆ. ತತ್ತ್ವೇಶರು ಜೀವನ ಕಡಿಯಿಂದ ಕರ್ಮ ಮಾಡಿಸತಕ್ಕ ತತ್ತ್ವಜರಾದಂಥಾ, **ದೇವಾನಾಂ**-ದೇವತೆಗಳಿಗೆ, ಆರಂಭ-ಪ್ರಥಮತಃ ಅವರವರ ಸ್ವರೂಪದಲ್ಲಿ **ಆತ್ಮಾ**-ಸ್ವಾಮಿಯಾದ ಬಿಂಬರೂಪಿ ಪರಮಾತ್ಮನಾದ, **ಹರಿಃ**-ಹರಿಯು, **ಸ್ವಯಂ**-ತಾನೇ ಪ್ರೇರಿಸೋವನಾಗತಾನೆ. ಎಂದರೆ, ತೃಣಜೀವರ ಆರಂಭ ಮಾಡಿ ಬ್ರಹ್ಮಾಂತವರೆಗೆ ಜೀವನ ಸ್ವರೂಪದಲ್ಲಿ ಹರಿ ಒಬ್ಬನೇ ಪ್ರೇರಕ ಅಷ್ಟೇ ಹೊರ್ತು, ಒಬ್ಬ ಜೀವನ ಸ್ವರೂಪದಲ್ಲಿ ಇನ್ನೊಬ್ಬ ಜೀವ ಪ್ರವೇಶ ಮಾಡಿ, ಆ ಜೀವನ ದ್ವಾರಾ ಸ್ವರೂಪಕ್ಕೆ ಪ್ರೇರಣೆ ಅಂಬೋದು ಇಲ್ಲ. **ಏವಂ ಜ್ಞಾತ್ವಾ ಚ ಕರ್ತೃತ್ವಂ**-ಈ ಪ್ರಕಾರವಾಗಿ ಪರಮಾತ್ಮನ ಕರ್ತೃತ್ವವನ್ನೂ, ಜೀವನ ಕರ್ತೃತ್ವವನ್ನೂ ತಿಳಿದು, **ಜಾನೀಯಾಚ್ಚ ಕ್ರಿಯಾಫಲಂ**- ಮೋಕ್ಷಫಲವನ್ನು ಹೊಂದುತ್ತಾನೆಂದು ಅರಿಯೋವನಾಗಬೇಕು.

**ಪ್ರಮಾಣ**-

**ತತ್ತತ್ಕರ್ಮಫಲಂ ಜ್ಞಾತ್ವಾಶ್ರದ್ಧಾವಾನ್ ಜಾಯತೇ ಯತಃ । ಶ್ರದ್ಧಾ ಜನಿತ್ರಿ, ಧರ್ಮಾಣಾಂ ಶ್ರದ್ಧಾ ಮಾತಾ ಪರಾಮತಾ । ಶ್ರದ್ಧಾಹೀನಾಃ ಕ್ರಿಯಾಃ ಸರ್ವಾ ನ ಫಲಂತಿ ಕದಾಚನ ॥ ಶಾಂಡಿಲ್ಯತತ್ತ್ವೇ ॥**
ಈ ಪ್ರಕಾರ ಪ್ರಮಾಣಗಳು.

ಇರೋಣದರಿಂದ ಜೀವಾಂತರ್ಗತ ವಾಯುದೇವರ ಪ್ರವೇಶ ಉಂಟು ಎಂತ ಹೇಳೋದಕ್ಕೆ ಹ್ಯಾಂಗೆ ಕೂಡೀತು ? ಕೂಡಲಾರದು. ಇದರಕಿಂತಲೂ ನಿರವಕಾಶ ಪ್ರಮಾಣಗಳು ಇದ್ದರೆ ಅಂಗೀಕಾರವೇ. ತತ್ತ್ವೇಶರು ಇಲ್ಲದೇ

ಕರ್ಮಮಾಡೋ ಸ್ಥೂಳ ಜೀವನ ಸ್ವರೂಪವು. ಆದ್ದರಿಂದ ಉಭಯಪ್ರಮಾಣಕ್ಕೂ ವಿರೋಧ ಬಾರದಂತೆ ಸಮನ್ವಯವಾಯಿತು. ಇನ್ನು ಮುಂದಿನ ಶ್ಲೋಕದಲ್ಲಿ ಪ್ರಮಾಣಗಳು ಉದಹರಿಸತೇವೆ.

ಜೀವನಸ್ವರೂಪದಲ್ಲಿ ತತ್ತ್ವಾಭಿಮಾನಿಭಗವದ್ರೂಪಗಳ ಹೆಸರು.—

೧. ಶಕ್ತಿ, ೨. ಪ್ರತಿಷ್ಠಾ, ೩. ಸಂವಿತ್, ೪. ಸ್ಫೂರ್ತಿ, ೫. ಪ್ರಕೃತಿ, ೬. ಕಳಾ, ೭, ವಿದ್ಯಾ, ೮. ಮತಿ, ೯. ನಿಯತಿ, ೧೦. ಮಾಯಾ, ೧೧. ಕಾಲ, ೧೨. ಪುರುಷ.

ಈ ಹನ್ನೆರಡು ಭಗವದ್ರೂಪಗಳು ಇಪ್ಪತ್ತನಾಲ್ಕು ಭಗವದ್ರೂಪಗಳಿಂದ ಜೀವನಸ್ವರೂಪದಲ್ಲಿ ತತ್ತ್ವನಿಯಾಮಕಗಳಾಗಿ ಇದ್ದಾವೆಂತ ತಾತ್ಪರ್ಯ. ॥೧೧॥

## (೨) ಭಾವ ಪ್ರಕಾಶಿಕೆ– ವ್ಯಾಖ್ಯಾನ

ಜೀವನ ಸ್ವರೂಪದ ಒಳಗೂ ಹೊರಗೂ ಸಹ ಪರಮಾತ್ಮನು ವ್ಯಾಪ್ತನಾಗಿದ್ದು, ಜೀವರ ಯೋಗ್ಯತೆಯನ್ನನುಸರಿಸಿ, ಅವನು ಮಾಡಬೇಕಾದ ಕರ್ಮಗಳನ್ನು ತಾನು ಮಾಡಿ ಮಾಡಿಸಿ, ಸ್ಥೂಲದೇಹದಲ್ಲಿ ವ್ಯಕ್ತಪಡಿಸಿ, ತಾನು ನಿರ್ಲೇಪನಾಗಿರುವನು.

**"ಲಕ್ಷ್ಮೀಧರಾಭ್ಯಾಂಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।**
**ಮೂರ್ತಯೋಷ್ಟಾವಪಿ ಧ್ಯೇಯಾಶ್ಚಕ್ರಶಂಖವರಾಭಯೈಃ ॥**
**ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣಭೂಷಿತಾಃ ।"**

—ಇತ್ಯಾದಿ ತಂತ್ರಸಾರ ಪ್ರಮಾಣ ರೀತ್ಯಾ, ಈ ಶರೀರದಲ್ಲಿಯೂ, ಸ್ವರೂಪದೇಹದಲ್ಲಿಯೂ ಸಹ ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ-ಎಂಬ ೮ ರೂಪಗಳೂ, ಶಂಖ ಚಕ್ರಗಳನ್ನು ಎರಡು ಕೈಗಳಲ್ಲಿ ಧರಿಸಿಕೊಂಡು ಅಭಯ, ವರದಹಸ್ತಗಳೆರಡರಿಂದ ಕೂಡಿ, ಸರ್ವಾಭರಣ ಭೂಷಿತನಾಗಿ, ಪ್ರಜ್ವಲಿಸುವ ಕಾಂತಿ

ಯುಳ್ಳ ರೂಪಗಳಿಂದ ಬಿಂಬರೂಪಿಯಾದ ಶ್ರೀಮನ್ನಾರಾಯಣನು ಶ್ರೀದೇವಿ ಭೂದೇವಿ ಸಮೇತನಾಗಿ, ಬ್ರಹ್ಮ ವಾಯುಗಳಿಂದ ಸೇವಿತನಾಗಿರುವನೆಂದು ಶ್ರೀಮದಾಚಾರ್ಯರ ವಾಕ್ಯದಿಂದ ಸಿದ್ಧವಾಗುವುದು. ಜೀವನ ಸ್ವರೂಪ ದಲ್ಲಿಯೂ ಪರಮಾತ್ಮನ ಪ್ರವೇಶವನ್ನು ತಿಳಿದರೇನೇ ವ್ಯಾಪಕನು ತಾನಾಗಿ -ಎಂಬುದರ ಅರ್ಥ ಪೂರ್ಣವಾಗುತ್ತದೆ. ॥೧೧॥

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) !-**

"ವ್ಯಾಪಕನು -" ಇತಿ ॥ ಪಯೋಜ - ಪದ್ಮಮ್ ॥ "ಪ್ರದೀಪ ವರ್ಣಾಶ್ಚ" - ಇತ್ಯುಕ್ತೇಃ ॥೧೧॥

**ಕನ್ನಡಾರ್ಥ :—**

ಜೀವನ ಸ್ವರೂಪ ದೇಹದಲ್ಲಿ ವ್ಯಾಪಕನಾಗಿರುವ ಶ್ರೀ ಹರಿಯ ಚಿಂತನಾ ಕ್ರಮವನ್ನು ವಿವರಿಸುತ್ತಾರೆ, "ವ್ಯಾಪಕನು"- ಎಂಬ ಪದ್ಯದಿಂದ. ಪಯೋಜ -ವೆಂದರೆ ಕಮಲ ಎಂದರ್ಥ.

ವಿಶ್ವಾದಿ ರೂಪಗಳು "ಪ್ರದೀಪವರ್ಣ ಯುಕ್ತವಾಗಿವೆ"- ಎಂದು ತಂತ್ರಸಾರದಲ್ಲಿ ಉಕ್ತವಾಗಿದೆ, ॥೧೧॥

**(೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ :–**

**"ಆತ್ಮ ಅಂತರಾತ್ಮೇತಿ ಹರಿರೇಕ ಏವಂ ದ್ವಿಧಾಸ್ಥಿತಃ ।**
**ನಿವಿಷ್ಟೋ ಹೃದಯೇ ನಿತ್ಯಂ ರಸಂ ಪಿಬತಿ ಕರ್ಮಜಮ್ ॥"**

–ಎಂಬ ಸೂತ್ರಭಾಷ್ಯಾನುಸಾರ ಸ್ಥೂಲಹೃತ್ಕಮಲದಲ್ಲಿ ಆತ್ಮ ಎಂತಲೂ ಸ್ವರೂಪದೇಹದಲ್ಲಿ ಅಂತರಾತ್ಮ ಎಂತಲೂ ಇದ್ದು.

**"ಸ್ವಮೂರ್ತಿಗಣಮಧ್ಯಗಃ ಯುಕ್ತಾಃ ಪ್ರದೀಪವರ್ಣಾಶ್ಚ "**
–ಎಂಬ ತಂತ್ರಸಾರ ರೀತ್ಯಾ, ದೇಹಸ್ಥ ಬಹು ಭಗವದ್ರೂಪಗಳ ಮಧ್ಯೆ

ಪ್ರಕಾಶಮಾನನಾಗಿ ಬ್ರಹ್ಮಾದಿಗಳಿಂದ ಸೇವೆ ತೆಗೆದುಕೊಳ್ಳುತ್ತಾ, ಇದ್ದಾನೆಂದು ಹೇಳುತ್ತಾರೆ– "ವ್ಯಾಪಕೇತಿ" ॥೧೧॥

## (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವಾಂತರ್ಬಹಿರ್ವ್ಯಾಪ್ತ ನಾರಾಯಣರೂಪ ಚಿಂತನಾಪ್ರಕಾರ ತಿಳಿಸುತ್ತಾರೆ, ವ್ಯಾಪಕನೆಂದು. ಜೀವಸ್ವರೂಪದೇಹದ ಒಳಹೊರಗೆ ವ್ಯಾಪಕನಾಗಿ, ಜೀವಕೃತಕರ್ಮಗಳನ್ನು ಆಚರಿಸಿ ಅಂದರೆ, ಜ್ಞಾನೇಚ್ಛಾಕ್ರಿಯೆಗಳನ್ನು ವ್ಯಕ್ತಿಮಾಡಿ, ಕರ್ಮಲೇಪರಹಿತನಾಗಿ, ಪ್ರದೀಪವರ್ಣ ವಿಶ್ವಾದಿ ಸ್ವಮೂರ್ತಿಗಣ ಮಧ್ಯಗತ ನಾರಾಯಣನು ರಮಾದೇವಿ, ಪಯೋಜಭವನೆಂಬ ಬ್ರಹ್ಮ, ಈರನೆಂಬ ವಾಯು ಮುಂತಾದವರಿಂದ ಸೇವೆ ತೆಗೆದುಕೊಳ್ಳುತ್ತಾ ಇರುವನು. ॥೧೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವನ ಸ್ವರೂಪದೇಹದ ಒಳಹೊರಗೆ ವ್ಯಾಪ್ತನಾಗಿರುವ ಶ್ರೀ ಪರಮಾತ್ಮನ ವಿಚಾರ ಮತ್ತು ಅವನ ಕಾರ್ಯ ವಿಶೇಷಗಳನ್ನು ತಿಳಿಸುತ್ತಾರೆ— **ವ್ಯಾಪಕನು**– ಎಂಬ ಪ್ರಸಕ್ತ ೧೧ನೆಯ ಪದ್ಯದಿಂದ.

೧. ಜೀವರ ಸ್ವರೂಪದೇಹವು ಪರಮ ಸೂಕ್ಷ್ಮವಾದುದು. ಅತ್ಯಣುರೂಪದಲ್ಲಿರುವ ಸಮಸ್ತಜೀವರಾಶಿಗಳ ಸ್ವರೂಪದೇಹಗತನಾಗಿ, ಅದಕ್ಕಿಂತಲೂ ಸೂಕ್ಷ್ಮತರನಾಗಿ ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ, ಈ ಭಗವದ್ರೂಪಕ್ಕೆ **ಅಂತರ್ಯಾಮಿ** ಎನ್ನುತ್ತೇವೆ. ಇಂತಹ ಅಂತರ್ಯಾಮಿರೂಪಿ ಶ್ರೀ ಪರಮಾತ್ಮನು ಸ್ವರೂಪದೇಹದ ಒಳಗೂ ಮತ್ತು ಹೊರಗೂ ವ್ಯಾಪಕನಾಗಿದ್ದಾನೆ. (ವ್ಯಾಪಕನು ತಾನಾಗಿ ಜೀವ ಸ್ವರೂಪದೇಹದ ಒಳಹೊರಗೆ). ಸ್ವರೂಪದೇಹಗತ ಸೂಕ್ಷ್ಮ ಚಿನ್ಮನಸ್ಸು, ಬುದ್ಧಿ, ಚಿತ್ತ ಮುಂತಾದ

ಅಂತರ್ಭಾಗಗಳಲ್ಲಿ ವ್ಯಾಪ್ತನಾಗಿದ್ದಾನೆ. ಅಂತೆಯೇ ಸ್ವರೂಪದೇಹದ ಬಾಹ್ಯಗತ ಕರಚರಣಾದ್ಯವಯವಗಳಲ್ಲಿ ವಿತತನಾಗಿದ್ದಾನೆ.

**ಪ್ರಮಾಣ:**

**"ಆತ್ಮ ಅಂತರಾತ್ಮೇತಿ ಹರಿರೇಕ ಏವ ದ್ವಿಧಾಸ್ಥಿತಃ ।**
**ನಿವಿಷ್ಟೋ ಹೃದಯೇ ನಿತ್ಯಂ ರಸಂ ಪಿಬತಿ ಕರ್ಮಜಮ್" ॥**

**—ಸೂತ್ರಭಾಷ್ಯ ಪ್ರಮಾಣ.**

ಅಂದರೆ ಆತ್ಮ ಶಬ್ದವಾಚ್ಯನಾಗಿ ಇತರ ದೇಹಗಳಲ್ಲಿಯೂ **ಅಂತರಾತ್ಮ** ಶಬ್ದವಾಚ್ಯನಾಗಿ ಸ್ವರೂಪ ದೇಹದಲ್ಲಿಯೂ ಎರಡು ರೂಪಗಳಿಂದ ಇದ್ದಾನೆ. ಅನಾದ್ಯನಂತಕಾಲಕ್ಕೂ (ನಿತ್ಯಂ) ಜೀವರನ್ನು ಎಡಬಿಡದೇ ಪರಮಾಪ್ತನೆಂದೆನಿಸಿ, **ಅಂತರಾತ್ಮ**ನಾಮಕಬಿಂಬನು ಸ್ವರೂಪದೇಹಗತ ಹೃದಯಸ್ಥಾನದಲ್ಲಿದ್ದು, ಅವನೇ (ತಾನಾಗಿ) (ಹರಿರೇಕ ಏವ) ಸ್ವರೂಪಗತ ವ್ಯಾಪಾರಗಳನ್ನು ಮಾಡುತ್ತಾನೆ.

೨. ಜೀವರು ಸ್ವತಂತ್ರರಲ್ಲ. ಜೀವರ ಸ್ವರೂಪಗತಧರ್ಮಗಳಾದ **(1) ಜ್ಞಾನಶಕ್ತಿ. (2) ಇಚ್ಛಾಶಕ್ತಿ ಮತ್ತು (3) ಕ್ರಿಯಾಶಕ್ತಿ**ಗಳು ಭಗವಧೀನವಾಗಿವೆ. ಅಂದರೆ ಜೀವರ ಕರ್ತೃತ್ವಶಕ್ತಿ **ಪರಾಧೀನವಾದದ್ದು.** ಇಲ್ಲಿ **ಪರ** ಶಬ್ದಕ್ಕೆ ಸರ್ವೋತ್ತಮನಾದ ಶ್ರೀ ಹರಿ ಎಂದರ್ಥ. ಜೀವನ ಸ್ವರೂಪ, ಸ್ವರೂಪಗತ ಸಮಸ್ತ ಧರ್ಮಗಳೂ ಪರಾಧೀನವೇ, ಜೀವನು ಸ್ವತಂತ್ರನಾಗಿ ಏನೂ ಮಾಡಲಾರ. ಬಿಂಬನ **ಪ್ರೇರಣೆಯಿಂದಲೇ** ಜೀವನ ಸಕಲ ಕ್ರಿಯೆಗಳ ಅಭಿವ್ಯಕ್ತಿ. ಜೀವನ ಸ್ವರೂಪಗತ **ಜ್ಞಾನ**ದಲ್ಲಿದ್ದು, ಜ್ಞಾನಕ್ಕೆ ಪ್ರೇರಕನಾಗಿದ್ದಾನೆ. ಅಂತೆಯೇ ಇಚ್ಛಾದಲ್ಲಿದ್ದು ಇಚ್ಛಾಪ್ರೇರಕನಾಗಿಯೂ, **ಕ್ರಿಯಾ**ದಲ್ಲಿದ್ದು ಕ್ರಿಯಾಪ್ರೇರಕನಾಗಿಯೂ ಬಿಂಬನ ವ್ಯಾಪಾರ. ಇದಕ್ಕೆ **ಬಿಂಬಕ್ರಿಯಾ** ಎನ್ನುವರು. **"ಬಿಂಬ ಚಲಿಸಿದರೆ ಪ್ರತಿಬಿಂಬ ಚಲಿಸುವುದು."** ಈ ನಿಯಮದ ಪ್ರಕಾರ, ಜೀವನ ಅಧಿಷ್ಠಾನದಲ್ಲಿ ನಡೆಯು

ತ್ತಿರುವ ಕಾಯಕ, ವಾಚನಿಕ, ಮಾನಸಿಕವಾದ ಸಮಸ್ತಕಾರ್ಯಗಳೂ ಬಿಂಬನ ಪ್ರೇರಣೆಯಿಂದಲೇ ಪ್ರವರ್ತಿತನಾಗಿ ನಡೆಯುತ್ತಿರುವುವು. ಈ ಭಾವವನ್ನೇ ದಾಸರಾಯರು— **ಜೀವಕೃತಕರ್ಮಗಳನಾಚರಿಸಿ**— ಎಂದಿದ್ದಾರೆ. ಜೀವರಲ್ಲಿ ಜ್ಞಾನೇಚ್ಛಾಕ್ರಿಯಾ ಧರ್ಮಗಳು ಇವೆ. ಆದರೆ ಪರಾಧೀನವಾಗಿವೆ. ಬಿಂಬನ ಪ್ರೇರಣೆಯಾದರೆ ಅವುಗಳ ಕ್ರಿಯಾಭಿವ್ಯಕ್ತಿ. ಇಲ್ಲದಿದ್ದರೆ ಇಲ್ಲ, ಜೀವನು ಅಸ್ವಂತ್ರನಾದ್ದರಿಂದಲೂ, ಪರಾಧೀನಕರ್ತೃತ್ವವುಳ್ಳವನಾದ್ದರಿಂದಲೂ, ಅನಾದಿ ಕರ್ಮವಿಮೋಚನೆಗೆ ಕಾರಣವಾದ ಸಮಸ್ತ ಸಾಧನೆಗಳೂ ದೇಹದ ದ್ವಾರವೇ ನಡೆಯುವ ಸಕಲ ವ್ಯಾಪಾರಗಳನ್ನು ಜೀವನ ಹೆಸರಿನಲ್ಲಿ ಅವನ ಪರವಾಗಿ ಬಿಂಬರೂಪಿ ಶ್ರೀ ಪರಮಾತ್ಮನು ತಾನೇ ಅಂತರ್ಯಾಮಿ ರೂಪದಿಂದ ಮಾಡಿಸುತ್ತಾನೆ. ಇದರಿಂದ ಪ್ರತಿಬಿಂಬಭೂತನಾದ ಜೀವನಿಗೆ ಕರ್ಮಾನುಭವ.

೩. ಜೀವಕೃತಕರ್ಮಗಳನ್ನು ಸ್ವರೂಪಯೋಗ್ಯತೆಗೆ ಅನುಗುಣವಾಗಿ, ಜೀವರ ಅನಾದಿಕರ್ಮವನನ್ನು ಸರಿಸಿ (ಕರ್ಮವಿಮೋಚನೆಗಾಗಿ) ಬಿಂಬನಾದ ಶ್ರೀಹರಿಯೇ ಆಚರಿಸುತ್ತಿದ್ದರೂ, ಅವನಿಗೆ ಆ ಕರ್ಮಗಳ ಲೇಪವಿಲ್ಲ. (ನಿರ್ಲೇಪನಾಗಿಹ) ಆ ಕರ್ಮಗಳ ಸಂಬಂಧವೂ ಅವನಿಗಿಲ್ಲ, ಕರ್ಮನಾಮಕನಾಗಿ, ಕರ್ಮವಾಚ್ಯನಾಗಿ, ಕರ್ಮಪತಿ ಎಂದೆನಿಪ ಬಿಂಬನು ಕರ್ಮಗಳಿಗೆ ನಿಯಾಮಕನಾಗಿದ್ದು, ಬಿಂಬಕ್ರಿಯಾದ್ವಾರಾ, ಕರ್ಮಗಳ ಅಭಿವ್ಯಕ್ತಿ ಮಾಡುತ್ತಾ. ತತ್ಸಂಬಂಧಕರ್ಮಫಲಭೋಗವನ್ನು ಜೀವರಿಗೆ ಕೊಡುವನು.

**ಇದೇ– "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ"– ಎಂಬ ಗೀತಾವಾಕ್ಯದ ತಾತ್ಪರ್ಯ.**

ಅಂದರೆ, ಕರ್ಮದ ಬೀಜಗಳು ಅನಾದಿಕಾಲದಿಂದ ಜೀವನ ಲಿಂಗದೇಹಗತವಾಗಿದೆ. ಆದರೆ ಅವುಗಳ ಅಭಿವ್ಯಕ್ತಿ, ಪ್ರೇರಕ ಶಕ್ತಿ ಶ್ರೀ ಪರಮಾತ್ಮನದು. ಕರ್ಮಫಲಪ್ರದನೂ ಬಿಂಬನೇ ಎಂದು ತಾತ್ಪರ್ಯ. ಇಂತಾ

ಕರ್ಮಪರಂಪರೆಗಳಿಂದ ನಿರ್ಲೇಪನಾಗಿ, ವಿಕಾರಶೂನ್ಯನಾಗಿ, ಶಶ್ವದೇಶ ಪ್ರಕಾರನಾಗಿ ಜೀವರಿಂದ ಪರಮ ವಿಲಕ್ಷಣನಾಗಿದ್ದಾನೆ.

೪. ಶ್ರೀ ಪರಮಾತ್ಮನ ಪರಿವಾರ ಅಪಾರ. ತ್ರಿಗುಣಾಭಿಮಾನಿಗಳಾದ, ಶ್ರೀ ಲಕ್ಷ್ಮೀದೇವಿಯರು, ಪದ್ಮನಾಭರೂಪೀ ಶ್ರೀ ಪರಮಾತ್ಮನ ಸುವರ್ಣಾತ್ಮಕವಾದ ನಾಭೀಕಮಲದಲ್ಲಿ (ಲಕ್ಷ್ಮ್ಯಾತ್ಮಕ) ಉತ್ಪನ್ನರಾದ ಶ್ರೀ ಚತುರ್ಮುಖಬ್ರಹ್ಮದೇವರು (ಪಯೋಜಭವ), ಮಹಾಪ್ರಳಯ ಕಾಲದಲ್ಲೂ ಸದಾ ಜಾಗ್ರತರಾಗಿ, ಭಗವದ್ವಿಷಯದಲ್ಲಿ ಅಜ್ಞಾನಾದಿಗಳ ದೋಷಗಳು ಲವಲೇಶವೂ ಇಲ್ಲದಿರುವ, ಸಮ್ಯಕ್‌ಜ್ಞಾನಯುಕ್ತರಾದ ಪರಿಶುಕ್ಲತ್ರಯದಲ್ಲಿ ಒಬ್ಬರಾದ ಈರನಾಮಕ ಶ್ರೀ ವಾಯುದೇವರು ಇವರೇ ಮೊದಲಾದ ಸಮಸ್ತ ದೇವತಾಗಣದಿಂದ ಸಂಸೇವ್ಯಮಾನನಾಗಿದ್ದಾನೆ.

೫. ರಮಾಬ್ರಹ್ಮಾದಿ ಸಕಲ ದೇವತಾ ಸಮೂಹದಿಂದ ಸೇವ್ಯಮಾನನಾದ ಬಿಂಬರೂಪಿ ಶ್ರೀ ಪರಮಾತ್ಮನು ಪ್ರದೀಪವರ್ಣ ವಿಶಿಷ್ಟನಾಗಿದ್ದಾನೆ. ಅಂದರೆ ಜ್ಞಾನಾನಂದಮಯಶರೀರದಿಂದ ಪ್ರಕಾಶಮಾನವಾಗಿ ಹೊಳೆಯುವ ದೇಹಕಾಂತಿ ಮತ್ತು ವರ್ಣವುಳ್ಳವನು.

೬. ಇಂತಹ ಪ್ರದೀಪವರ್ಣಯುಕ್ತನಾದ ಬಿಂಬನು ವಿಶ್ವಾದಿ ಅನಂತಾನಂತ ತನ್ನ ರೂಪಗಳಿಂದ **(ಸ್ವಮೂರ್ತಿ)** ಸ್ವರೂಪದೇಹ ಹಾಗೂ ಇತರ ದೇಹಗಳ ಹೃದಯಾಕಾಶದಲ್ಲಿರುವ ಹೃತ್ಕಮಲದ ಕರ್ಣಿಕಾಮಧ್ಯದಲ್ಲಿ ಪ್ರಕಾಶಮಾನನಾಗಿ ವಿರಾಜಿಸುತ್ತಿದ್ದಾನೆ, **(ಮಧ್ಯಗ ತಾ ಪೊಳೆವ)**

**ಪ್ರಮಾಣ–**

> **"ಲಕ್ಷ್ಮೀಧರಾಭ್ಯಾಂಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।**
> **ಮೂರ್ತಯೋಷ್ಟಾವತು ಧ್ಯೇಯಾಶ್ಚಕ್ರ ಶಂಖ ವರಾಭಯೈಃ ।**
> **ಯುಕ್ತಾಃ ಪ್ರದೀಪವರ್ಣಾಶ್ಚ ಸರ್ವಾಭರಣಭೂಷಿತಾಃ ॥**

**–ತಂತ್ರಸಾರ ಪ್ರಮಾಣವಾಕ್ಯ.**

ಅಂದರೆ ಶ್ರೀರಮಾದಿದೇವತಾವರ್ಗದಿಂದ ಸಂಸೇವ್ಯಮಾನನಾದ, ವಿಶ್ವ, ತೈಜಸ, ಪ್ರಾಜ್ಞ, ತುರ್ಯ, ಆತ್ಮ, ಅಂತರಾತ್ಮ, ಪರಮಾತ್ಮ, ಜ್ಞಾನಾತ್ಮ ಎಂಬ ಎಂಟು ರೂಪಗಳಿಂದ (**ಅಷ್ಟಾವತು**), ಶಂಖಚಕ್ರಗದಾ ಪದ್ಮ, ಅಭಯ, ವರದಹಸ್ತಗಳಿಂದ ಯುಕ್ತನಾಗಿರುವ, ಸರ್ವಾಭರಣ ಭೂಷಿತನಾದ, ಪ್ರದೀಪವರ್ಣಯುಕ್ತವಾದ ಹೃದ್ಗುಹಾನಿವಾಸಿಯಾದ ಹೃತ್ಕಮಲದ ಅಷ್ಟದಳಗಳಲ್ಲಿ ನಿವಾಸಿಯಾದ ಶ್ರೀಮನ್ನಾರಾಯಣನನ್ನು ಧ್ಯಾನಿಸಬೇಕೆಂದು (ಧ್ಯೇಯಶ್ಚ) ತಾತ್ಪರ್ಯ.

**ವಿಶೇಷ ವಿಚಾರ :-**

**(೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ :-**

(೧) ಸ್ವರೂಪದೇಹದಲ್ಲಿ ವ್ಯಾಪ್ತಿ ಮತ್ತು ವ್ಯಾಪಾರಗಳು ಶ್ರೀ ಪರಮಾತ್ಮನಿಗೇ ಸಂಬಂಧಿಸಿದ್ದು. ಅಲ್ಲಿ ವಾಯ್ವಾದಿ ಇತರ ದೇವತೆಗಳ ವ್ಯಾಪ್ತಿ ವ್ಯಾಪಾರಗಳಿಲ್ಲ. ಇದನ್ನು ಸ್ವರೂಪದೇಹದ **ಒಳಗೆ** ಅಂದರೆ ಜೀವನ ಸ್ವರೂಪದೇಹದಲ್ಲಿ ಎಂದು ಅರ್ಥಮಾಡಿ, **ಹೊರಗೆ** ಅಂದರೆ, ಅನಿರುದ್ಧಾದಿ ಸ್ಥೂಲದೇಹ ಪರ್ಯಂತ ಇತರ ದೇವತೆಗಳ ವ್ಯಾಪ್ತಿ, ವ್ಯಾಪಾರಗಳುಂಟು ಎಂದು ಹೇಳಿರುತ್ತಾರೆ. ॥೧೧॥

## ಪದ್ಯ(೧೨)

**ಮೂಲ :**

**ಗರುಡ ಶೇಷ ಭವಾದಿ ನಾಮವ ।**
**ಧರಿಸಿ ಪವನ ಸ್ವರೂಪದೇಹದಿ ।**
**ಕರಣನಿಯಾಮಕನು ತಾನಾಗಿಪ್ಪ ಹರಿಯಂತೆ ॥**
**ಸರಸಿಜಾಸನ ವಾಣಿ ಭಾರತಿ ।**
**ಭರತನಿಂದೊಡಗೂಡಿ ಲಿಂಗದಿ ।**
**ಇರುತಿಹರು ಮಿಕ್ಕಾದಿತೇಯರಿಗಿಲ್ಲವಾಸ್ಥಾನ ॥ ॥೧೨॥**

**ಅವರಣಿಕೆ :**

ಸ್ವರೂಪದೇಹದಲ್ಲಿ ಬಿಂಬರೂಪಿ ಶ್ರೀ ಪರಮಾತ್ಮನ ವ್ಯಾಪಾರ ವಿಶೇಷ ಗಳು ಹಾಗೂ ಶ್ರೀಹರಿಯ ಕಾರುಣ್ಯಬಲವಿಶೇಷದಿಂದ ಜೀವರ ಸ್ವರೂಪದೇಹ ದಲ್ಲಿ ಪ್ರಕಾಶತೋವ್ಯಾಪ್ತರಾಗಿದ್ದು, ಗರುಡ, ಶೇಷ, ರುದ್ರಾದಿ ನಾಮ ಗಳಿಂದ ವಿದ್ಯಮಾನರಾಗಿ ಶ್ರೀ ವಾಯುದೇವರು ಕರಣನಿಯಾಮಕರಾಗಿದ್ದಾ ರೆಂದೂ, ಬ್ರಹ್ಮ. ಸರಸ್ವತಿ. ಭಾರತೀದೇವಿಯರು ಭರತನಾಮಕರಾದ ಶ್ರೀ ವಾಯುದೇವರಿಂದ ಸಹಿತರಾಗಿ ಲಿಂಗದೇಹದಲ್ಲಿದ್ದಾರೆ. ಉಳಿದ ತತ್ತ್ವದೇಪತೆಗಳಿಗೆ ಅಲ್ಲಿ ಆವಾಸವಿಲ್ಲವೆಂದು ತಿಳಿಸುತ್ತಾರೆ. **ಗರುಡ ಶೇಷ ಭವಾದಿ**– ಎಂಬ ಪ್ರಸಕ್ತ ಸಂಧಿಗತ ೧೨ ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ :**

**ಗರುಡ** = ಊರ್ಧ್ವಗಮನಶಕ್ತಿವುಳ್ಳವನಾದ್ದರಿಂದ "ಗರುಡ" ಎಂತಲೂ, **ಶೇಷ** = ಎಲ್ಲಾ ತತ್ತ್ವಾಭಿಮಾನಿದೇವತೆಗಳು ಬಿಟ್ಟುಹೋದರೂ, ತಾನು ಮಾತ್ರ ಅವಶಿಷ್ಟನಾಗಿ ದೇಹದಲ್ಲಿರುವ ಶಕ್ತಿಯುತನಾದ್ದರಿಂದ "ಶೇಷ" ಎಂಬ ಅಭಿಧಾನದಿಂದಲೂ. **ಭವ** = ಮಂಗಳ ಸ್ವರೂಪನಾದ್ದರಿಂದ "ಭವ" ಎಂಬ ಹೆಸರಿನಿಂದಲೂ, **ಆದಿ** = ಗರುಡ, ಶೇಷ, ಭವ ಇವೇ ಮುಂತಾದ, **ನಾಮವ** = ಹೆಸರುಗಳನ್ನು **ಧರಿಸಿ** = ಧಾರಣ ಮಾಡಿಕೊಂಡವನಾಗಿ. **ಪವನ** = ಅತ್ಯಂತ ಪವಿತ್ರನಾದ್ದರಿಂದ ಪವನನಾಮಕ ಶ್ರೀ ವಾಯುದೇವರು **ಸ್ವರೂಪದೇಹದಿ** = ಜೀವರ ಸ್ವರೂಪದೇಹದಲ್ಲಿ **ಹರಿಯೆಂತೆ** = ಬಿಂಬ ರೂಪಿ ಶ್ರೀ ಪರಮಾತ್ಮನು ಆಯಾಯಾ ತತ್ವೇಶರನಾಮದಿಂದ ಹೇಗೆ ಇದ್ದಾನೆಯೋ ಹಾಗೆ, **ಕರಣನಿಯಾಮಕನು** = ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡವನಾಗಿ, **ತಾನಾಗಿ ಇಪ್ಪ** = ಪರಮಾತ್ಮನು ವಿದ್ಯಮಾನ ನಾಗಿದ್ದಾನೆ. **ಸರಸೀಜಾಸನ** = ಶ್ರೀ ಪರಮಾತ್ಮನ ನಾಭೀಕಮಲವನ್ನೇ ಪೀಠವಾಗಿ ಉಳ್ಳ, ಅಂದರೆ ಪದ್ಮೋಭವರಾದ ಶ್ರೀ ಚತುರ್ಮುಖ ಬ್ರಹ್ಮ ದೇವರು, **ವಾಣಿ** = ವಾಗಾಭಿಮಾನಿಯಾದ ಸರಸ್ವತಿ, **ಭಾರತಿ** = ಭರತ

ನಾಮಕರಾದ ಶ್ರೀ ವಾಯುದೇವರ ಪತ್ನಿ ಶ್ರೀ ಭಾರತೀದೇವಿ, **ಭರತನಿಂದ** = ಶ್ರೀ ವಾಯುದೇವರಿಂದ **ಒಡಗೂಡಿ** = ಸಹಿತರಾಗಿ, **ಲಿಂಗದಲಿ** = ಅನಾದಿಲಿಂಗಶರೀರದಲ್ಲಿ **ಇರುತಿಹರು** = ಇದ್ದಾರೆ, **ಮಿಕ್ಕಾದ** = ಅವರನ್ನುಳಿದು ಇತರರಾದ **ಅದಿತೇಯರಿಗೆ** = ಗರುಡ, ಶೇಷಾದಿತತ್ತ್ವಾಭಿಮಾನಿ ದೇವತೆಗಳಿಗೆ **ಆ ಸ್ಥಾನ ಇಲ್ಲ** = ಲಿಂಗದೇಹದಲ್ಲಿ ಸ್ಥಾನವಿಲ್ಲ ॥೧೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವನ ಸ್ವರೂಪದಲ್ಲಿ, ಅನಾದಿಲಿಂಗದಲ್ಲಿ, ಅಣುಲಿಂಗದಲ್ಲಿ ತತ್ತ್ವ ನಿಯಾಮಕ ದೇವತೆಗಳನ್ನ ಹೇಳತಾರೆ.

ಗರುಡ ಶೇಷ ಭವಾದಿ ನಾಮವ ಧರಿಸಿ ಪವನ ಸ್ವರೂಪದೇಹದಿ ಕರಣ ನಿಯಾಮಕನು ತಾನಾಗಿಪ್ಪ ಹರಿಯಂತೆ- ಎಂದರೆ ಹರಿ ಬಿಂಬರೂಪಿ ಶ್ರೀ ಪರಮಾತ್ಮನು ಗರುಡನಾಮದಿಂದಲೂ, ಶೇಷನಾಮದಿಂದಲೂ, ಭವನಾಮದಿಂದಲೂ, ಇತ್ಯಾದಿ ನಾಮಗಳ ಧರಿಸಿ, ಪವನಸ್ವರೂಪದೇಹದಿ-ವಾಯುದೇವರ ಸ್ವರೂಪದೇಹದಲ್ಲೇನು, ದೇಹದಿ ಎಂದರೆ, ವಾಯುದೇವರ ಸ್ಥೂಲದೇಹದಲ್ಲೇನು, ಕರಣ ನಿಯಮಕನಾಗಿಪ್ಪ- ದಾರು ಎಂದರೆ, ಹರಿ, ವಾಯುದೇವರ ಸ್ವರೂಪ, ಬಾಹ್ಯ ಎರಡರಲ್ಲೂ ಪರಮಾತ್ಮ ಪೂರ್ವೋಕ್ತ ನಾಮಗಳಿಂದ ಇಂದ್ರಿಯನಿಯಾಮಕನಾಗಿದ್ದಾನೆ. ವಾಯುದೇವರ ಸ್ವರೂಪ ದೇಹದಲ್ಲಿ ಹ್ಯಾಂಗೆ ಹರಿನಿಯಾಮಕನೋ, ತದ್ವತ್, ಗರುಡ, ಶೇಷ ಭವಾದಿ ನಾಮಗಳ ಧರಿಸಿ, ಬ್ರಹ್ಮ, ವಾಣಿ, ಭಾರತೀ, ಭರತರಿಂದೊಡಗೂಡಿ ಲಿಂಗದಿ ಇರುತಿಹರು. ಸರ್ವಪ್ರಾಣಿಗಳ ಅಣುಲಿಂಗ ಶರೀರದಲ್ಲಿ ಇರೋವವರಾಗಿದ್ದಾರೆ. ಅನ್ಯರಾದ ಗರುಡಾದಿಗಳಿಗೆ ಇಲ್ಲಿ ಪ್ರವೇಶವಿಲ್ಲ.

ವಾಯುದೇವರಿಗೆ ಜೀವಂತರ್ಯಾಮಿ ಪ್ರವೇಶ ಇಲ್ಲ ಎಂತಲೇ ಸಿದ್ಧವು. ಮತ್ತು ಇದರ ವಿಶೇಷವೇ ಹೇಳುತ್ತೇವೆ.

**ಶ್ಲೋಕಾರ್ಥ–**

ಹರಿ ಜೀವಾಂತರ್ಗತನಾದ, ಜೀವಗೆ ಬಿಂಬನಾದ ಹರಿನಾಮಕ ಶ್ರೀ ಪರಮಾತ್ಮ **"ಜೀವೇ ವಿಷ್ಣುಃ ಹರಿನಾಮಕೇನ ಬಿಂಬರೂಪೇಣ ಮುಖೇ ಮುಖಮಿತ್ಯನೇನ ಕ್ರಮೇಣ ಆಸ್ತೇ"**
**–ಇತಿ ಷೋಡಶ ಗ್ರಂಥೇ**

ಇದೇ ಪ್ರಕಾರವೇ ಸ್ಥೂಲದೇಹಗತ ಬಿಂಬನ್ನ ಅನ್ವಯಿಸಬೇಕು. ಈ ಹರಿನಾಮಕ ಶ್ರೀ ಪರಮಾತ್ಮ ಜೀವಾಂತರ್ಗತನಾದ, ಅಗ್ರೇಶನಾದ ಬಿಂಬನಾದವನು. ಪವನ–ಪವಿತ್ರನಾದ್ದರಿಂದ ವಾಯುದೇವರು. ಗರುಡ ಊರ್ಧ್ವಗಮನ ಶಕ್ತಿ ಇರುವುದರಿಂದ ಗರುಡ ದೇವರು, ಶೇಷ-ಎಲ್ಲಾ ತತ್ತ್ವಾಭಿಮಾನಿದೇವತೆಗಳೂ ದೇಹ ಬಿಟ್ಟು ಹೋದರೂನೂ, ಅವಶಿಷ್ಟನಾಗಿ ದೇಹದಲ್ಲಿರುವ ಶಕ್ತಿ ಇಂದ ಶೇಷದೇವರು, ಭವ-ಶುಭರೂಪನಾದ್ದರಿಂದ ರುದ್ರದೇವರು. ಆದಿ–ಮೊದಲಾದ ತತ್ತ್ವದೇವತೆಗಳ, ನಾಮವ ಧರಿಸಿ—ನಾಮಗಳನ್ನು ಧರಿಸಿದವನಾಗಿ, ಸ್ವರೂಪದೇಹದಿ—ಜೀವರ ಸ್ವರೂಪದೇಹದಲ್ಲಿ ವಿದ್ಯಮಾನವಾದ ಇಂದ್ರಿಯಾದಿ ಚತುರ್ವಿಂಶತಿತತ್ತ್ವ ದೇವತಗಳಿಗೆ, ನಿಯಾಮಕನು—ಪ್ರೇರಣೆಮಾಡತಕ್ಕವನು, ತಾನಾಗಿಪ್ಪ-ಬಿಂಬರೂಪಿ ಶ್ರೀಹರಿ ಪವನಾದಿರೂಪಗಳು ತಾನೇ ಆಗಿ, ಆಯಾತತ್ತ್ವಗಳಲ್ಲಿ ಇರೋವನಾಗಿದ್ದಾನೆ. ಇದರ ಮುಂದಿನ ೧೩ ನೆಯ ಶ್ಲೋಕದ ರೀತ್ಯಾ, ಅನಾದಿಲಿಂಗದಲ್ಲಿ ರಮಾದೇವೇರು ಚತುರ್ವಿಂಶತಿನಾಮಗಳಿಂದ ನಿಯಾಮಕರು. ಈ ಅನಾದಿ ಲಿಂಗದಲ್ಲೂ ಬ್ರಹ್ಮ ವಾಯ್ವಾದಿ ನಾಲ್ಕುಮಂದಿಗಳೂ ಇಲ್ಲ. ಈ ಅನಾದಿಲಿಂಗದಿಂದ ಜನಿತವಾದ ಸಾದಿಲಿಂಗವಾದ ಅನಾದಿಲಿಂಗಕ್ಕೆ ಆವರ್ತವಾದ ಅಣುಲಿಂಗದಲ್ಲಿ ಬ್ರಹ್ಮ, ವಾಯು, ಸರಸ್ವತೀ, ಭಾರತೀ ಇವರುಗಳೇ ಇದ್ದಾರೆ. ಈ ಅಣುಲಿಂಗದಲ್ಲಿ, ಹರಿಯಂತೆ–ಜೀವನ ಸ್ವರೂಪ

ದಲ್ಲಿ ಪವನ ಗರುಡಾದಿ ನಾಮಗಳಿಂದ ಹರಿ ಹ್ಯಾಂಗೆ ನಿಯಾಮಕನೋ, ಆ ಪರಮಾತ್ಮನೋಪಾದಿಯಲ್ಲಿ ಗರುಡ ಶೇಷಭವಾದಿನಾಮಗಳಿಂದ ಸರಸಿ ಜಾಸನ–ಬ್ರಹ್ಮದೇವರು, ವಾಣಿ-ಸರಸ್ವತೀ ದೇವೇರು, ಭಾರತೀದೇವೇರು, ಭರತ-ವಾಯು ದೇವರು.

**ಪ್ರಮಾಣ :**

**"ಪ್ರಾಣೋಽಪಿ ಭರತೋನಾಮ ಸರ್ವಸ್ಯ ಭರಣಾಚ್ಛ್ರುತಃ ರತತ್ವಾದ್ವ್ಯಾತ್ಮಕೇ ವಿಷ್ಣ್ವವಥವಾಪಿ ಜಗದ್ಭೃತೇಃ ॥ ಭರತೋ ವಾಯುರುದ್ದಿಷ್ಟಃ ಭಾರತೀ ತತ್ಸರಸ್ವತೀ" ॥**

**—ಇತಿ ನಾಮಸಂಹಿತಾಯಾಂ ಇತಿ ಭಾಗವತ ತಾತ್ಪರ್ಯೇ ॥**

ಮಹಾಭಾರತತಾತ್ಪರ್ಯನಿರ್ಣಯ ಉಕ್ತಿ ಇರುವುದರಿಂದಲೂ, ಇಂಥಾ ವಾಯುದೇವರು ಸರಸಿಜಾಸನ, ವಾಣಿ ಭಾರತಿ, ಭರತರಿಂದೊಡಗೂಡಿ—ಈ ಪ್ರಕಾರ ನಾಲ್ವರೂ ಕೂಡಿಕೊಂಡು, ಲಿಂಗದಿ—ಪೂರ್ವೋಕ್ತ ಅಣುಲಿಂಗದಲ್ಲಿ, ಇರುತಿಹರು—ಇರುವವರಾಗಿದ್ದಾರೆ. ಮಿಕ್ಕ—ಈ ಬ್ರಹ್ಮಾದಿ ನಾಲ್ವರ ವ್ಯತಿರಿಕ್ತ, ಮಿಕ್ಕಿರುವ, ಆದಿತೇಯರಿಗೆ—ರುದ್ರಾದಿ ದೇವತೆಗಳಿಗೆ, ಆಸ್ಥಾನ—ಈ ಬ್ರಹ್ಮಾದಿಗಳಿರುವ ಅಣಲಿಂಗದಲ್ಲಿ, ಇಲ್ಲ- ಪ್ರವೇಶವೇನು, ಆವಾಸಸ್ಥಾನವೇನು, ಇಲ್ಲ ಎಂತ ಅರ್ಥ. ಇದರ ವಿವರ-

೧. ಜೀವನಲ್ಲಿ ಶ್ರೀ ಪರಮಾತ್ಮ. ೨. ಅನಾದಿಲಿಂಗದಲ್ಲಿ ರಮಾದೇವೇರು. ೩. ಸಾದಿಲಿಂಗ ಅಥವಾ ಅಣುಲಿಂಗದಲ್ಲಿ ಬ್ರಹ್ಮವಾಯುಗಳು—ಈ ರೀತ್ಯಾ, ತಾರತಮ್ಯಾನುಸಾರ ವ್ಯಾಪ್ತಿ. ಆವಾಸಸ್ಥಾನ ಎಂತ ತಿಳಿಯಬೇಕು. ಇದಕ್ಕೆ ಇನ್ನೂ ಕೆಲವು **ಪ್ರಮಾಣಗಳು**

೧. ಭಾಗವತ ತಾತ್ಪರ್ಯ ದೀಪಿಕಾ–

"ಮುಕ್ತಾನಾಂ ಸ್ವರೂಪದೇಹಃ ಇಚ್ಛಯಾ ಶುದ್ಧಸತ್ತ್ವಾತ್ಮಕ ಪ್ರಾಕೃತದೇಹಗ್ರಹಣಂ ಚ ವಿದ್ಯತೇ॥ ಪ್ರಾಕೃತದೇಹಾದಪಿ ಭೋಗಾನ್ ಭುಂಜತೇ ॥ ಪ್ರಾಕೃತಸ್ಯ ಪೂರ್ವವತ್ ಮುಕ್ತಾಃ ಸ್ವನಿಯಮಾಕಾಃ ದೇವಾಃ ನಿಯಂತಾರಾಃ ಸಂತಿ ರುದ್ರೋ ಬ್ರಹ್ಮೇತಿ ಕ್ರಮಶಃ ತೇಷು ಚೈವೋತ್ತಮೋತ್ತಮಾಃ" ॥ ಇತಿ.

೨. ಬೃಹದಾರಣ್ಯಕ ಭಾಷ್ಯೇ ಮೈತ್ರೇಯ ಬ್ರಾಹ್ಮಣ ಖಂಡ ಪ್ರಮಾಣ—

"ಬ್ರಹ್ಮರುದ್ರಾದಯೋ ಜೀವಾಃ ದುಃಖಿನಃ ತತ್ಪ್ರಸಾದತಃ ।
ದುಃಖಂ ಮುಕ್ತಾನಿಜಾನಂದಂ ಪ್ರಾಪ್ನುಯುಃ ನಿತ್ಯಮಂಜಸಾ ॥
ಮುಕ್ತಾನಾಮಪಿ ಸರ್ವೇಷಾಂ ವಿಷ್ಣುರೇವ ನಿಯಾಮಕಃ ।
ಏವಂ ವಿಷ್ಣುಃ ಸದಾ ಭಿನ್ನಃ ಮುಕ್ತಾ ಬ್ರಹ್ಮಾದಿಕಾ ಗಣಾಃ॥
ಏವಂ ನಿಯಂತಾ ಭಗವಾನ್ ಪೂರ್ಣಃ ಚಿತ್ಸದ್ಗುಣಾರ್ಣವಃ ॥
ಏಕ ಏವ ಪರೋ ವಿಷ್ಣುಃ ನಿಯಮ್ಯಶ್ಚ ಸದೋದಿತಃ ॥"

ಅರ್ಥ

ಈ ಪ್ರಮಾಣಗಳಲ್ಲಿ ಲಿಂಗಭಂಗರಾಗಿ ಸ್ವರೂಪದೇಹದಿಂದ ಯುಕ್ತರಾಗಿರುವ ಯಾವತ್ತೂ ಮುಕ್ತಜೀವರಿಗೂ, ವಿಷ್ಣುವೇ ನಿಯಾಮಕನು ಎಂತಲೂ, ಅನ್ಯರಾದ ಬ್ರಹ್ಮವಾಯುಗಳ ವ್ಯಾವರ್ತನಮಾಡಿ ಅದೆ, ಆದ್ದರಿಂದ ಜೀವನ ಸ್ವರೂಪದಲ್ಲಿ ಈ ನಾಲ್ಕು ಮಂದಿಗಳ ಪ್ರವೇಶವಾಗಲೀ, ನಿಯಾಮಕತ್ವವಾಗಲೀ ಇಲ್ಲ ಎಂದು ಏರ್ಪಡುತ್ತದೆ. ಮತ್ತು "ಏಕ ಏವ"- ಎಂತಲೂ ಇರುವುದರಿಂದ ನಿಶ್ಚಯಿಸಿ ಹೇಳಿದಂತೆ ಅರ್ಥ.

ಪ್ರಮಾಣ (ಪವಮಾನ ಸಂಹಿತಾ)–

"ಜೀವಾಸ್ತು ತ್ರಿವಿಧಾಃ ಪ್ರೋಕ್ತಾಃ ಉತ್ತಮಾಧಮಮಧ್ಯಮಾಃ ।
ಉತ್ತಮಾಃ ದೇವತಾಃ ಪ್ರೋಕ್ತಾ ಋಷ್ಯಾದ್ಯಾಃ ಮಧ್ಯಮಾಃ ಸ್ಮೃತಾಃ ॥
ಅಧಮಾ ಮಾನುಷೋತ್ಕೃಷ್ಟಾಃ ತೇ ಚಾಪಿ ತ್ರಿವಿಧಾಃ ಸ್ಮೃತಾಃ ॥
ಸಾತ್ವಿಕಾ ರಾಜಸಾಸ್ತತ್ರ ತಾಮಸಾದಿ ಪ್ರಭೇದತಃ ॥
ತೇಷು ಸರ್ವೇಷು ಜೀವೇಷು ದೇಹೇಷು ಚ ವಸತ್ಯಯಂ ।
ಪವಮಾನಾಭಿಧೋ ವಾಯುಃ ಉತ್ತಮಾನಾಂ ಶರೀರತಃ ॥
ಸ್ವರೂಪೇಂದ್ರಿಯ ದೇಹೇಷು ಮಾತರಿಶ್ವಾಭಿಧಾನತಃ ।
ಸ್ಥೂಲದೇಹಗತಸ್ಸೋಽಪಿ ಮುಖ್ಯಪ್ರಾಣಾಭಿಧೋ ಹಿ ಚ ॥
ಧತ್ತೇ ಲಿಂಗಶರೀರಸ್ಥಃ ಸೂತ್ರನಾಮಾ ಮಹಾಪ್ರಭುಃ ।
ಸೂಕ್ಷ್ಮದೇಹಗತಸ್ಸೋಽಪಿ ಸೂಕ್ಷ್ಮರೂಪೀತಿ ಚೋಚ್ಯತೇ ॥
ಮಧ್ಯಮಾಧಮ ದೇಹೇಷು ಪ್ರಾಣಾಪಾನಾಭಿಧಾನತಃ ।
ಪೂರ್ವೋಕ್ತೇಷು ಚ ಸರ್ವೇಷು ಸ್ಥೂಲದೇಹೇಂದ್ರಿಯಾದಿಷು॥
ಸ್ವರೂಪದೇಹ ಬುದ್ಧ್ಯಾದಿಸ್ಥಿತಸ್ತೇನ ಮಹಾಪ್ರಭುಃ ।
ಪ್ರೇರಯತ್ಯಖಿಲಂ ವಿಶ್ವಂ ಜಂಗಮಾಂ ಜಂಗಮಂ ತಥಾ ॥
ತತ್ತದೇಹಗತಪ್ರಾಣಃ ತತ್ತದೇಹಸ್ಥಮೂರ್ತಿನಾ ।
ಅನಿರುದ್ಧಾದಿನಾಮ್ನಾ ಹಿ ಸರ್ವಪ್ರೇರಕರೂಪವಾನ್" ॥– ಇತಿ

ಅರ್ಥ—

ತೇಷು ಸರ್ವೇಷು = ಪೂರ್ವೋಕ್ತ ಸಮಸ್ತರ, ದೇಹೇಷು = ಸ್ಥೂಲದೇಹಗಳಲ್ಲಿ, ಜೀವೇಷು ಚ = ಸ್ಥೂಲದೇಹದಲ್ಲಿ ಪ್ರಕಾಶತೋ

ವ್ಯಾಪ್ತರಾದ ಜೀವರಲ್ಲೂ, **ಅಯಂ ಪವನಾಭಿಧೋ ವಾಯುಃ**— ಈ ಪವನ ಎಂತ ನಾಮಯುಕ್ತರಾದ ವಾಯು ದೇವರು, ವಸತಿ— ವಾಸನಾಗಿ ಇದ್ದಾರೆ (ಇದು ಸಮೂಹತ್ವೇನ ಹೇಳಿದ್ದು) ಇದರ ವಿವರ—

**ಉತ್ತಮಾನಾಂ ಶರೀರಗಃ**—ಉತ್ತಮ ಜೀವರ ಶರೀರಗತ ವಾಯು ರೂಪಗಳು ದಾವುವೆಂದರೆ, **ದೇಹೇಷು**—ಉತ್ತಮ ಸ್ಥೂಲಶರೀರಗಳಲ್ಲಿ ವ್ಯಾಪ್ತವಾದ. **ಸ್ವರೂಪೇಂದ್ರಿಯ**—ಸ್ವರೂಪೇಂದ್ರಿಯಗಳಲ್ಲಿ, **ಮಾತರಿಶ್ವಾಭಿಧಾನತಃ**—ಮಾತರಿಶ್ವಾ ಎಂಬ ನಾಮದಿಂದ ಇದ್ದಾನೆ. **ಸೋಽಪಿ** —ಅದೇ ಮಾತರಿಶ್ವನೇ **ಮುಖ್ಯ ಪ್ರಾಣಾಭಿಧೋ ಹಿ ಚ**—ಮುಖ್ಯ ಪ್ರಾಣ ಎಂತ ನಾಮದಿಂದ ಯುಕ್ತನಾದವನು. ಈ ನಾಮದಿಂದ **ಸ್ಥೂಲ ದೇಹಗತ ಸ್ಸೋಽಪಿ**—ಸ್ಥೂಲದೇಹಗತನಾಗಿದ್ದು, ಅದೇ ವಾಯುದೇವರು **ಸ್ಥೂಲದೇಹಗತ**—ಸೂಕ್ಷ್ಮ ದೇಹಸಂಕೇತವಾದ ಅನಿರುದ್ಧಶರೀರದಲ್ಲಿ ಇದ್ದಾರೆ. ದಾವ ನಾಮದಿಂದ ಎಂದರೆ, **ಸೂಕ್ಷ್ಮರೂಪೀತಿ ಜೋಚ್ಯತೇ** —ಸೂಕ್ಷನಾಗಿ ಇದ್ದಾನಾದ್ದರಿಂದ ಸೂಕ್ಷ್ಮರೂಪಿ ಎಂತ ಹೇಳತಾರೆ (ಜೀವಶಬ್ದ ವ್ಯಾಪ್ತಪರ ಯಾಕೆ ಮಾಡಬೇಕು, ಅಣುವಾದ ಜೀವಪರವೇ ಯಾಕೆ ಮಾಡಬಾರದೆಂದರೆ)– **ಪೂರ್ವೋಕ್ತೇಷು ಚ ಸರ್ವೇಷು**— ಪೂರ್ವೋಕ್ತರಾದ ಸಮಸ್ತಪ್ರಾಣಿಗಳ, **ಸ್ಥೂಲದೇಹೇಂದ್ರಿಯಾದಿಷು** —ಸ್ಥೂಲದೇಹದಲ್ಲಿ ವಿದ್ಯಮಾನಗಳಾದ ಸ್ಥೂಲೇಂದ್ರಿಯಾದಿಗಳಲ್ಲಿ, **ಸ್ವರೂಪದೇಹ ಬುದ್ಧ್ಯಾದಿ**— ಅಣುವಾದ ಜೀವನ ಸ್ವರೂಪವೇನು ಅದನ್ನನುಸರಿಸಿದ ಬುದ್ಧ್ಯಾದಿ ಇಂದ್ರಿಯಗಳೇನು, **ಸ್ಥಿತಸ್ತೇನ**—ಪ್ರಕಾಶ ತೋವ್ಯಾಪ್ತಗಳಾಗಿ ಇರೋದಾಗಿ ಅವೆ. ಈ ಕಾರಣದಿಂದ, **ಮಹಾಪ್ರಭುಃ ಪ್ರೇರಯತಿ**—ಮಹಾಪ್ರಭುಗಳಾದ ವಾಯುದೇವರು ಇಂಥಾ ಜೀವರಲ್ಲಿ ಇದ್ದು ಪ್ರೇರಿಸುತ್ತಾರೆ, ಜೀವಶಬ್ದಸಂಗಡ ಸ್ಥೂಲದೇಹವೂ ಪ್ರಯೋಗ ಒಂದು ಅಂತ್ಯದಲ್ಲಿ ಸ್ಥೂಲದೇಹಗತ ಸ್ವರೂಪೇಂದ್ರಿಯಗಳೆಂದು ಪ್ರಯೋಗ ಮಾಡಿ ಇರೋಣದರಿಂದ, ಜೀವನ ಅಣುಸ್ವರೂಪದಲ್ಲಿ ವಾಯುದೇವರು ಇಲ್ಲ. ವ್ಯಾಪ್ತಜೀವನದಲ್ಲಿ ವಾಯುದೇವರ ವ್ಯಾಪ್ತಿ ಎಂಬುದೇ ಸಿದ್ಧವಾಗ ತದೆ. ಜೀವಾಂತರ್ಗತ ವಾಯುದೇವರು ಎಂಬುದು ಪ್ರಕಾಶತೋವ್ಯಾಪ್ತ

ವಾದ ಜೀವಪರ. ಈ ವ್ಯಾಪ್ತಿಯಲ್ಲಿ ರುದ್ರಾದಿಗಳ ವ್ಯಾಪ್ತಿ ಅಂಗಕ್ಕೆ ಅಂಗಿ ತೊಟ್ಟೋಪಾದಿಯಲ್ಲಿ ವಾಯುದೇವರ ವ್ಯಾಪ್ತಿ ಒಂದು. ದೀಪಪ್ರಕಾಶ ದಲ್ಲಿ ಮತ್ತೊಂದು ದೀಪಪ್ರಕಾಶ ಸೇರಿ ಇದ್ದಂತೆ, ವಾಯುದೇವರ ವಾಪ್ತಿ ಎಂತ ವೈಲಕ್ಷಣ್ಯ ತಿಳಿಯಬೇಕು. ಅವಶಿಷ್ಟಾರ್ಥ ಪ್ರಮಾಣಗಳಿಂದ ಗ್ರಾಹ್ಯ. ಈ ರೀತ್ಯಾ ಅನೇಕ ಪ್ರಮಾಣಗಳಿವೆ. ಅನಾದಿಲಿಂಗದಲ್ಲಿ ವಾಯು ದೇವರು ಮೊದಲಾದ ನಾಲ್ಕರ ಪ್ರವೇಶವಿಲ್ಲ ಎಂಬುದಕ್ಕೆ ಪ್ರಮಾಣಗಳು, ಇದರ ಮುಂದಿನ ಶ್ಲೋಕವಾದ— **ಜೀವನಕೆ ತುಷದಂತೆ ಲಿಂಗವು**--ಎಂಬ ಶ್ಲೋಕದಲ್ಲಿ ಕೇವಲವಾಗಿ ಲಿಂಗದೇಹಕ್ಕೆ—ಅಧಿದೇವತೆ ಮಹಾಲಕುಮಿ ಎನಿಪಳು— ಎಂತ ಹೇಳಿ ಇರೋಣದರಿಂದ ವಾಯುದೇವರೇ ನಾಲ್ವರು ವ್ಯಾವರ್ತರಾದರು.

**(೧) ಶ್ರೀ ವಿಜಯದಾಸರ ವಾಕ್ಯ—(ಲಿಂಗಪರಿಚ್ಛೇದ ಸುಳಾದಿ)—**

**ಅಲ್ಲಲ್ಲಿದ್ದ ಪರಿಚ್ಛೇದಕ್ಕೆ ಕರ್ತಳಾಗಿಪ್ಪಳು ।**
**ಶ್ರೀ ಭೂ ದುರ್ಗಾನಾಮದಿ ತತ್ತರಿಸುತಿಪ್ಪಳು।**
**ಶಿರದಲ್ಲಿ ನೆತ್ತಿಯ ದ್ವಾರವನ್ನು ಪಾದದಲ್ಲಿ ಮುಚ್ಚಿ ।**
**ಪೂರ್ತಿ ಜ್ಞಾನ ಕೊಡುತಲಿಪ್ಪಳು ।**
**ತತ್ತ್ವಶರು ಲಿಂಗದೇಹದಲ್ಲಿ ಇಲ್ಲ ।**
**ಎತ್ತ ನೋಡಿದರತ್ತ ಶ್ರೀ ವ್ಯಾಪ್ತಳು ।**
**ಕರ್ತನು ಸರ್ವಜ್ಞ ವಿಜಯವಿಠ್ಠಲರೇಯ ।**
**ಅತ್ಯಂತ ಮಹಿಮನು ಸಕಲರಿಗೆ ಪ್ರೇರಕ ॥**

**(೨) ಜೀವಾಖ್ಯ ಸುಳಾದಿ—**

**ಪರಮೇಷ್ಠಿ ರೂಪ ಲಿಂಗದ ಕೊನಿ ಸುತ್ತಿನಲ್ಲಿ ।**
**ಇರುತಿಪ್ಪರು ನಂದಂತೆ ಸಂಚರಿಸುವ ।**

ಸರಿಯೆನ್ನಿ ಜಡಕೆ ಚೇತನ ಐದಲೆಂದು ।
ಹರಿ ಇಚ್ಛಾ ಇಂಥಾದ್ದೇ ಬಲು ವಿಚಿತ್ರ ।
ಕರುಣಾಸಾಗರ ನಮ್ಮ ವಿಜಯವಿಠ್ಠಲರೇಯ
ತರತಮಗುಣದಿಂದ ವ್ಯಕ್ತವ ಮಾಳ್ಪ ॥

(೩) ಅನ್ನಮಯಕೋಶ ಸುಳಾದಿ-

"ನವ ಪಂಚ ಪಂಚ ಮಾಲೆ" ಎಂಬ ಸುಳಾದಿ- (ತಾಳ ೫)

ಲಿಂಗದಲಿ ಚತುರ್ವಿಂಶತಿ ತತ್ತ್ವಕಾರಣರೂಪವಾಗಿ ।
ಪ್ರತಿಪ್ರತಿದಿವಸಕ್ಕೆ ಕೊಡುತಿಪ್ಪ ಭರಿತವಾದ ।
ಕಾಲಕ್ಕೂ ಹೆಚ್ಚು ಕುಂದುಗಳಿಲ್ಲ ।
ತತ್ತ್ವೇಶರು ಇಲ್ಲ. ಮುಖ್ಯಾಭಿಮಾನಿ ಲಕುಮಿ ।
ಶತಾನಂದ ವಾಯು ಸರಸ್ವತಿ ಭಾರತಿಗಳುಂಟು ।
ತೃತೀಯ ಪರಿಚ್ಛೇಧವಾಗಿದ್ದ ಲಿಂಗದೇಹದ ಬಾಹ್ಯದಲ್ಲಿ।
ನಮ್ಮ ವಿಜಯ ವಿಠ್ಠಲದೇಯ ಸದ್ಗತಿಯನು ।
ಕೊಡುವನು ಇದನ ತಿಳಿದವಗೆ ॥

ಈ ಮೂರು ವಿಧ ಪ್ರಮಾಣವೂ ಜಗನ್ನಾಥದಾಸರ ವಾಕ್ಯ, ಇದೇ ಸಂಧಿಗತ ೧೩ನೆಯ ಶ್ಲೋಕದ ಪ್ರಮಾಣವೂ ಏಕವಾಕ್ಯಗತವಾಗಿ ವಾಯ್ವಾದಿ ನಾಲ್ಕು ಮಂದಿಗಳಿಗೆ ಅನಾದಿಲಿಂಗದಲ್ಲಿ ಇಲ್ಲ ಎಂತ ಏರ್ಪಡೋದಾಯಿತು. ಇದರಿಂದಲೇ ಅಣುವಾದ ಜೀವನಲ್ಲಿ ವಾಯ್ವಾದಿಗಳ ಪ್ರವೇಶ ಇಲ್ಲ ಎಂತಲೂ, ಜೀವಾಂತರ್ಗತ ವಾಯ್ವಾದಿಳ ಪ್ರವೇಶ ಹೇಳತಕ್ಕ ಪ್ರಮಾಣ ಗತ ಜೀವಶಬ್ಧ ಸ್ಥೂಲದೇಹದಲ್ಲಿ ವ್ಯಾಪ್ತನಾದ ಜೀವಪರ ಎಂತಲೂ ಸ್ಪಷ್ಟ ವಾಗುತ್ತದೆ. ಶ್ರೀಜಗನ್ನಾಥರಾಯರ ವರ್ತಮಾನ ಶ್ಲೋಕದಲ್ಲಿ ಬ್ರಹ್ಮ ವಾಯ್ವಾದಿಗಳಿಗೆ ಲಿಂಗದಲ್ಲಿ ಪ್ರವೇಶ ಉಂಟು ಎಂಬ ಲಿಂಗಶರೀರ ಎಂಬುದು

ಸಾದಿಯಾದ ಅಣುಲಿಂಗ ಎಂತಲೇ ಸಿದ್ಧವು. ಅದನ್ನು ವಿವರಿಸುತ್ತೇವೆ.

ಪ್ರಕಾಶಸಂಹಿತಾ ಪ್ರಮಾಣ

"ಜಡಾಖ್ಯ ಪ್ರಕೃತಿಸ್ಸರ್ವಜೀವಾನಾಂ ಲಿಂಗರೂಪಿಣೀ ।
ಪ್ರಕೃತೇಃ ಗರ್ಭಗಾ ಜೀವಾ ಲಿಂಗದೇಹಯುತಾ ಮತಾಃ ॥
ಅನಾದಿಕಾಲಮಾರಭ್ಯ ಜೀವಾಃ ಸಂಸೃತಿಬದ್ಧಗಾಃ ।
ಯಲ್ಲಿಂಗಬ್ಧದಶ್ಚ ಯದಾ ಸೂಕ್ಷ್ಮ ದೇಹಾಪ್ತಿರಿಷ್ಯತೇ ।
ತತಃ ಪೂರ್ವಕ್ಷಣೇ ಸರ್ವಗುಣವ್ಯೆಷಮ್ಯಮಿಷ್ಯತೇ ॥
ಲಿಂಗದೇಹಸ್ಯ ಮಧ್ಯಸ್ಥೋ ರಜೋಭಾಗಃ ಪ್ರಕೀರ್ತಿತಃ ।
ಭೂರ್ನಾಮ್ನೀ ಇಂದಿರಾ ತತ್ರ ಚೇಷ್ಟಕಾ ತಸ್ಯಮಾನಿನೀ ॥
ತದ್ಯಕ್ಷಿಣೇ ಸತ್ತ್ವಭಾಗಃ ತತ್ರ ಶ್ರೀಃ ಚೇಷ್ಟಕಾಮತಾ ।
ತದ್ವಾಮೇತು ತಮೋ ಭಾಗಃ ತತ್ರ ದುರ್ಗಾಽಭಿಮಾನಿನೀ ॥
ಏಕೈಕಸ್ಮಿನ್ ಪರಿಚ್ಛೇದೇಪ್ಯನಂತಾಃ ಪರಮಾಣವಃ ।
ಸಂತಿ ತತ್ರ ನಿಯಂತಾರೋ ವಿಷ್ಣುಬ್ರಹ್ಮಶಿವಾತ್ಮಕಾಃ ॥
ನಾರಾಯಣೋಽನಂತಗುಣಃ ಶ್ರೀಃ ತ್ರಿರೂಪಾಭಿಮಾನಿನೀ ।
ಜಡಾನಾಂ ಪ್ರಕೃತೌ ಚಾಪಿ ಲಿಂಗದೇಹಸ್ತಥೈವಲೆ ।
ಸಂತ್ಯನಂತಾಣವಸ್ತೇಷು ಪೂರ್ವೋಕ್ತಾಃ ಕಾರ್ಯಸಾಧಕಾಃ ॥
ತತೋ ನಾರಾಯಣೋ ದೇವೋವ್ಯೆಷಮ್ಯಾವಸ್ಥಯಾ ಯುತಾಂ।
ಜಡಾಖ್ಯಪ್ರಕೃತಿಂ ಸಮ್ಯಕ್ ಚೇಷ್ಟಯಾಮಾಸ ವಿಶ್ವಸೃಟ್ ।
ತತೋ ಬಿಂದುತ್ರಯಂ ಜಾತಂ ಚೇತಿ ರಜಸ್ತಮಃ ॥
ಊರ್ಧ್ವದೇಶೇ ಸತತ್ತ್ವಬಿಂದುಃರಜೋಬಿಂದುಃ ತತ್ತ್ಯೋಽಪ್ಯಧಃ ।

**ತದಧೋಭೂತ್ತನೋಬಿಂದುಃ ಸ್ಥೂಲಸ್ಯಾದ್ಯಾಃ ತ್ರಿಬಿಂದವಃ।**
**ಶ್ರೀ ಭೂ ದುರ್ಗೇತರೂಪಾಣಿ ಕ್ರಮಾತ್ರಿಗುಣಮಾನಿನೀ।**
**ವಿಷ್ಣುಃ ಬ್ರಹ್ಮ ಶಿವಶ್ಚೇತಿ ಬಿಂದುತ್ರಯನಿಯಾಮಕಾಃ ||**
**ಬ್ರಹ್ಮ ವಾಯೂ ಸಭಾರ್ಯೌ ದೌತ್ರಿರೂಪಾಭಿಮಾನಿನೌ।**
**ಸತ್ತ್ವಾದಿ ಬಿಂದುಷು ಶ್ರೀಶಮಾಶ್ರಿತಾ ನಶ್ವರೇಷು ವೈ ||**

ಎಂತ ಪ್ರಮಾಣಗಳು ಇರುವುದರಿಂದ ಅನಾದಿಲಿಂಗದಲ್ಲಿ ವಾಯುಪ್ರವೇಶ ವಿಲ್ಲವೆಂತಲೂ, ಆ ಅನಾದಿಲಿಂಗದಿಂದ ಅಣುಲಿಂಗ ಉತ್ಪತ್ತಿ. ಅಲ್ಲಿ ಬ್ರಹ್ಮ ವಾಯ್ವಾದಿ ನಾಲ್ವರ ಆವಾಸವೆಂತಲೂ ತಾತ್ಪರ್ಯ. ಅನಾದಿಲಿಂಗದಲ್ಲಿ ಬ್ರಹ್ಮವಾಯುಗಳ ಅಭಿಮಾನವಾಗಲೀ ಪ್ರವೇಶವಾಗಲಿ ಇಲ್ಲ. ಅನಾದಿ ಯಿಂದ ಜಡಪ್ರಕೃತಿರೂಪವಾದ ಲಿಂಗಶರೀರ ತೃಣಜೀವ ಆರಂಭಮಾಡಿ ಬ್ರಹ್ಮಾಂತವರಿಗೂ ಅವರವರ ಸ್ವರೂಪಾಭಿವ್ಯಕ್ತಿ ಆಗದಂತೆ ಬಂಧಕರೂಪ ದಿಂದ ಅದೆ. ಸರ್ವಪ್ರಾಣಿಗಳೂ ಲಿಂಗದೇಹದ ಗರ್ಭದಲ್ಲಿ ಆವಾಸವಾಗಿ ಇದ್ದಾರೆ. ಈ ಜೀವರಿಗೆ ದಾವಾಗಾದರೆ ಸೂಕ್ಷ್ಮದೇಹಗಳ ಕೊಡಬೇಕೆಂತ ಇಚ್ಛಾ ಬರತದೋ ಅದಕ್ಕೆ ಪೂರ್ವದಲ್ಲಿ ಗುಣವೈಷಮ್ಯ ಐದಿಸಿ, ಸೂಕ್ಷ್ಮಶರೀರ ಕೊಡುತಾನೆ. ಈ ಅನಾದಿ ಲಿಂಗಶರೀರ ತ್ರಿಗುಣದಿಂದ ಯುಕ್ತವಾಗಿ ಮೂರು ಆವರಣದಿಂದ ಸಹಿತವಾದದ್ದು. ಮಧ್ಯ ಭಾಗದಲ್ಲಿ ರಜೋಗುಣ ಇದಕ್ಕೆ ಭೂದೇವೇರು ಅಭಿಮಾನಿಗಳು, ಇದಕ್ಕೆ ಮ್ಯಾಲೆ ಸತ್ತ್ವಾವರಣ. ಈ ಆವರಣದ ಮಧ್ಯದಲ್ಲಿ ಜೀವ ಇದ್ದಾನೆ. ಈ ಸತ್ತ್ವಗುಣಕ್ಕೆ ಶ್ರೀದೇವೇರು ಅಭಿಮಾನಿಗಳು. ಇದರ ಮ್ಯಾಲೆ ತೃತೀ ಯಾವರಣವು. ಇದಕ್ಕೆ ದುರ್ಗಾದೇವೇರು ಅಭಿಮಾನಿಗಳು. ಇಲ್ಲಿ ಭಗವ ದ್ರೂಪಗಳು ದಾವುದೆಂದರೆ, ರಜೋಗುಣದಲ್ಲಿ ಬ್ರಹ್ಮರೂಪೀ ಶ್ರೀ ಪರ ಮಾತ್ಮ, ತಮೋಗುಣದಲ್ಲಿ ರುದ್ರರೂಪೀ ಶ್ರೀ ಪರಮಾತ್ಮ, ಸತ್ತ್ವಗುಣ ದಲ್ಲಿ ವಿಷ್ಣುರೂಪೀ ಶ್ರೀ ಪರಮಾತ್ಮ. ಪೂರ್ವೋಕ್ತ ಅನಾದಿಲಿಂಗಗತನಾದ ನಾರಾಯಣದೇವರು ಗುಣವೈಷಮ್ಯ ಐದಿಸೋ ನಿಮಿತ್ತದಿಂದಲೂ ಜೀವರ ಉದ್ಧಾರಾರ್ಥ ಆಲೋಚನಿ ಮಾಡಿ ಈ ಲಿಂಗದೇಹದ ಗುಣತ್ರಯ ಮಧ್ಯಗತ ಸ್ಥೂಲಸೃಷ್ಟಿಗೆ ಕಾರಣವಾದ ಪರಮಾಣು ರೂಪವಾದ ಬಿಂದು ತ್ರಯಗಳ

ಈ ಲಿಂಗದೇಹದಿಂದ ಸೃಷ್ಟಿ ಮಾಡಿ, ಪೂರ್ವೋಕ್ತ ಮೂರು ಬಿಂದುಗಳಾದ ಗುಣತ್ರಯಾತ್ಮಕ ಬಿಂದುತ್ರಯಗಳಿಗೆ ಕ್ರಮಾತ್ ಮೂರು ರೂಪನಾದ ಪರಮಾತ್ಮನೂ, ಮೂರುರೂಪಗಳಾದ ರಮಾರೂಪಗಳ ಸಹಿತವಾಗಿ ಈ ಬಿಂದುತ್ರಯಗಳಿಗೆ ಅಭಿಮಾನಿಗಳಾಗಿದ್ದಾರೆ. ಅಷ್ಟೇಹೊರ್ತು ಅನಾದಿ ಲಿಂಗಕ್ಕೆ ಬ್ರಹ್ಮವಾಯುಗಳು ಅಭಿಮಾನಿಗಳಲ್ಲ. ಈ ಬ್ರಹ್ಮವಾಯುಗಳು ಭಾರ್ಯಾಸಹಿತರಾಗಿ ಈ ಬಿಂದುತ್ರಯಗಳಿಗೆ ಅಮುಖ್ಯಾಭಿಮಾನಿಗಳಾಗಿ, ದೂರವಾಗಿದ್ದು, ಅಭಿಮಾನಿಗಳೆಂದು ತಾತ್ಪರ್ಯ. ಲಿಂಗದೇಹದಿಂದ ಹೊರಬಂದ ಬಿಂದುತ್ರಯಗಳಿಗೆ ಅಭಿಮಾನಿಗಳು. ಎಂತ ಹೇಳತಕ್ಕ ಉಕ್ತಿ ಅನಾದಿ ಲಿಂಗದೇಹದಲ್ಲಿ ಬ್ರಹ್ಮ ವಾಯ್ವಾದಿ ಪ್ರವೇಶ ವಿಷಯವನ್ನು ವ್ಯಾವರ್ತನ ಮಾಡಿತು. ಆದ್ದರಿಂದ ಈ ಸಂಧಿಗತ ೧೨ ಮತ್ತು ೧೩ನೆಯ ಶ್ಲೋಕಗಳಿಗೆ ಬಾಧಕ ಬರಲಿಲ್ಲ. ಈ ೧೨ನೇ ಶ್ಲೋಕಗತ ಗರುಡ ಶೇಷ ಭವಾದಿ ನಾಮವ ಧರಿಸಿ ಪವನ ಸ್ವರೂಪದಲ್ಲಿ ಇದ್ದಾನೆಂಬ ಪವನಶಬ್ದ ವಿಷ್ಣುಸಹಸ್ರನಾಮೋಕ್ತರೀತ್ಯಾ ಪರಮಾತ್ಮನ ಪರವೇ ಹೊರ್ತು ವಾಯುಪರವಲ್ಲ.

**ಪ್ರಮಾಣ**

**"ರಜಸ್ತಮೋ ಬಿಂದುಗತೇ ವೈಷಮ್ಯೇ ಜಗದೀಶ್ವರಃ ।**
**ಬ್ರಹ್ಮ ಸಂರಕ್ಷಣಾತ್ಮಾತು ಸಮುದ್ಧೃತ್ಯ ರರಕ್ಷತುಃ ॥**
**ತತೋ ವಿಷ್ಣುಃ ಸತ್ತ್ವಬಿಂದುಗತಃ ಸನ್ನಿಧ್ಯಯುತ್ಯಜಃ ।**
**ಸತ್ತ್ವಾವರಣಮಾದ್ಯಂತಂ ಚಕ್ರೇ ತತ್ರ ವೃತ್ತೋಕ್ತಮಂ ॥**
**ರಜೋಬಿಂದುಗತೋ ಬ್ರಹ್ಮನಾಮಕಸ್ತದಧಃ ಸ್ಥಿತೇ ।**
**ದಿಶೇ ತೃತೀಯಾವರಣಂ ಚಕ್ರೇ ರಾಜಸನಾಮಕಂ ॥**
**ತಮೋಬಿಂದುಸ್ಥಿತೋ ರುದ್ರಸ್ತಮಸಾವರಣಂ ವ್ಯಧಾತ್ ।**
**ತದ್ಧಿತತೀಯಾವರಣಂ ರಾಜಸಸ್ಯೈವ ಗರ್ಭಗಮ್" ॥**

**ಅರ್ಥ**

ಅನಾದಿಲಿಂಗದ ಮೇಲೆ ಬಿಂದುತ್ರಯಾವರಣಗಳು ಸೇರಿ ಗುಣತ್ರಯಾ

ವರೆಗೂವಾಯಿತು. ಈ ಗುಣತ್ರಯದ್ದೊಳಗೆ ರಜೋಗುಣದ ಅಂಶಗಳ ತೆಗೆದುಕೊಂಡು ಗುಣತ್ರಯಗಳನ್ನು ವೈಷಮ್ಯವೈದಿಸಿದಾನಂತರ, ವೈಷಯಿಕಾವರಣವನ್ನು ಬಿಂದುತ್ರಯಾವರಣದ ಮ್ಯಾಲೆ ಮಾಡಿದ ಆ ಅವರಣಗಳು ಮಾಡಿದ ಕ್ರಿಯಾ ಹ್ಯಾಗೆಂಥರೆ-ಪ್ರಥಮಾವರಣ ವೈಷಯಿಕ ಸತ್ವಾವರಣ. ಎರಡನೇದು ವೈಷಯಿಕ ರಜೋಆವರಣ. ಮೂರನೇದು ವೈಷಯಿಕ ತಮೋ ಆವರಣ. ಈ ಪ್ರಕಾರ ವೈಷಯಿಕಾವರಣಗಳು ಮಾಡೋವನಾದ. ಇದೇ ಗುಣವೈಷಮ್ಯ ಶರೀರ. ಇದಕ್ಕೆ ಅಣುಲಿಂಗ ಎಂತ ಹೆಸರು. ಇದಕ್ಕೆ ಅಭಿಮಾನಿಗಳುದಾರೆಂದರೆ- ಬ್ರಹ್ಮ ವಾಯ್ವಾದಿಗಳು.

ಪ್ರಮಾಣ

"ವಿಷ್ಣು ಬ್ರಹ್ಮಶಿವಾದ್ಯಾಶ್ಚ ಬ್ರಹ್ಮವಾಯೂ ಸಭಾರ್ಯಕೌ॥
ಶ್ರೀಭೂ ದುರ್ಗಾಸಾಧ್ಯ ಮಧ್ಯ ತೃತೀಯಾವರಣೇಷು ವೈ ॥
ತತ್ತದಾತ್ಮಾ ಸ್ಥೂಲದೇಹೇ ತ್ರಿಗಣೇಷ್ವಭಿಮಾನಿನೌ ।
ಆದ್ಯಂ ಶುಕ್ಲಂ ದ್ವಿತೀಯಂಚ ರಕ್ತಂ ನೀಲಂ ತೃತೀಯಕಂ ॥
ರಜೋಗುಣಾಖ್ಯ ವೈಷಮ್ಯಾತ್ ತ್ರಿಗುಣಾವರಣಾಂತರೇ ।
ಮಹದಾವರಣಂ ಚಕ್ರೇ ಬ್ರಹ್ಮನಾಮಾ ಸ ಭೂಪತಿಃ ॥
ಚತುರ್ಥಾವರಣಾ ತತ್ರ ವಿಷ್ಣು ಬ್ರಹ್ಮ ಶಿವಾತ್ಮಕೈಃ ।
ಜಾತಾಭ್ಯಾಂ ಬ್ರಹ್ಮವಾಯುಭ್ಯಾಂ ಜಾತೌ ಚ ತ್ರಿರೂಪಕೌ ॥
ಸಭಾರ್ಯೌ ಬ್ರಹ್ಮವಾಯೂ ಚ ಮಹತ್ತತ್ವಾಭಿಮಾನಿನೌ ।
ಮಹತ್ತತ್ವನಿಯಂ ತೇಷಾಂ ಆನಂದಾಖ್ಯಹರಿಃ ಸ್ವಯಂ ॥
ಆನಂದನಾಮ್ನಸ್ತನಯೌ ಬ್ರಹ್ಮವಾಯೂಮಹದ್ಗತೌ ॥
ರಜೋಗುಣಸ್ಯ ವೈಷಮ್ಯಾತ್ ಸತ್ವಾಂಶೇನ ಮನಃಕಳಾ ।
ರಜೋಂಶೇಣೇಂದ್ರಿಯಾಣಾಂ ದಶಾನಾಂ ಚ ಕಳಸ್ತಥಾ ।

**ತತ್ಸಾಂಶೇನ ಚ ತನ್ಮಾತ್ರಾ ಕಳಾಃ ಪಂಚಮಹದ್ಗತಾಃ ॥**

**ಅಭಿವಂತಿ ಕಣಾ ನಿತ್ಯಾಃ ಷೋಡಶಾಪಿ ಸದಾನತಾಃ ।**

**ಮಹತ್ತತ್ತ್ವಾದ್ವಿಕುರ್ವಾಣಃ ಬ್ರಹ್ಮಣಃ ಸ್ಥೂಲದೇಹತಃ ॥"**

**ಇದರ ಅರ್ಥ**

ವೈಷಯಿಕ ಲಿಂಗಕ್ಕೆ ಅಭಿಮಾನಿಗಳು ವಿಷ್ಣು, ಬ್ರಹ್ಮ. ಶಿವ ಈ ಭಗವದ್ರೂಪಗಳೂನೂ, ಶ್ರೀ. ಭೂ. ದುರ್ಗಾರೂಪಗಳಿಂದ ರಮಾದೇವೇರು, ಬ್ರಹ್ಮವಾಯುಗಳೂ ತಮ್ಮ ಭಾರ್ಯಯರಿಂದ ಸಹಿತರಾಗಿ ಸ್ಥೂಲದೇಹಗತ ತ್ರಿಗುಣಗಳಿಗೆ ಅಭಿಮಾನಿಗಳು, ವೈಷಯಿಕಶರೀರ ಎಂಬುದು ಸತ್ತ್ವ, ರಜ, ತಮ ಈ ಪ್ರಕಾರ ವೈಷಮ್ಯದಿಂದ ಐದಿದ ಗುಣತ್ರಯಗಳು, ವೈಷಯಿಕ ಶರೀರ ಎಂತ ಕರಿಸೋದಾಯಿತು. ವೈಷಯಿಕ ಗುಣತ್ರಯಗಳಿಂದ ಬ್ರಹ್ಮರೂಪೀ ಶ್ರೀ ಪರಮಾತ್ಮ ಮಹತ್ತತ್ತ್ವಾವರಣವನ್ನು ಮಾಡಿದ. ಇದೇ ಚತುರ್ಥಾವರಣ. ಇದೇವೇ ಸ್ಥೂಲದೇಹದಲ್ಲಿ ಮಹತ್ತತ್ತ್ವ ಎಂತ ಕರೆಸುತದೆ. ಇದಕ್ಕೆ ಬ್ರಹ್ಮವಾಯ್ವಾದಿ ನಾಲ್ಕು ಮಂದಿ ಇದರಲ್ಲಿ ಇದ್ದುಕೊಂಡು ಜೀವರಿಗೆ ನಿಯಾಮಕರು. ತದ್ವ್ಯತಿರಿಕ್ತಸ್ಥಾನಗಳಿಗೆ ಅಭಿಮಾನಿಗಳೇ ಹೊರ್ತು ನಿಯಾಮಕರಲ್ಲ. ವೈಷಮ್ಯಾತ್ಮಕಸತ್ತ್ವಗುಣದಿಂದ ಮನಸ್ಸು, ವೈಷಮ್ಯಾತ್ಮಕರಜೋಗುಣದಿಂದ ದಶೇಂದ್ರಿಯಗಳು, ವೈಷಮ್ಯಾತ್ಮಕ ತಮೋಗುಣದಿಂದ ಪಂಚತನ್ಮಾತ್ರಗಳು. ಈ ಪ್ರಕಾರ ಉತ್ಪತ್ತಿಯಾಗಿ ಷೋಡಶಕಳಾತ್ಮಕ ಮಹತ್ತತ್ತ್ವ ಉತ್ಪತ್ತಿಯು. ಈ ಪ್ರಕಾರ ಉತ್ಪತ್ತಿಯಾಗಿ ಅನಂತರದಲ್ಲಿ ಅಂಡದ ಹೊರಗೆ ಸೂಕ್ಷ್ಮದೇಹವೇನು, ಸ್ಥೂಲದೇಹವೇನು ಹೊಂದಿದ ಬ್ರಹ್ಮವಾಯುಗಳು, ಇನ್ನೂ ತತ್ತ್ವೇಶರುಗಳನ್ನು ಪಿಂಡಾಂಡದಲ್ಲಿ ಅವರವರ ಆವಾಸಕ್ಕೆ ಯೋಗ್ಯವಾದ ಸ್ಥಾನದಲ್ಲಿ ಶ್ರೀ ಪರಮಾತ್ಮ ಪ್ರವೇಶ ಮಾಡಿಸಿದ್ದಾನೆ. ಮಹರಾವರಣದಲ್ಲಿ ಬ್ರಹ್ಮವಾಯುಗಳ ಆವಾಸ, ಅಭಿಮಾನಿತ್ವ, ನಿಯಾಮಕತ್ವ ಉಂಟು. ವೈಷಯಿಕ ಶರೀರದಲ್ಲಿ ಪ್ರವೇಶ ಮಾತ್ರವೇ, ನಿಯಾಮಕತ್ವ ಇಲ್ಲ. ಬಿಂದುತ್ರಯಾವರಣದಲ್ಲಿ ಪ್ರವೇಶ

ಇಲ್ಲ. ದೂರದಿಂದ ಅಭಿಮಾನವು. ಅನಾದಿಲಿಂಗದಲ್ಲಿ ದೂರದಿಂದಲೂ ಅಭಿಮಾನವಿಲ್ಲ. ಈ ರೀತ್ಯಾ ಇರೋಣದರಿಂದ ಜೀವಾಂತರ್ಗತ ಈ ನಾಲ್ಕು ಮಂದಿಗೆ ಪ್ರವೇಶವೂ ಇಲ್ಲ. ಅವಶಿಷ್ಟ ಶ್ಲೋಕಾರ್ಥವನ್ನು ವೈಸಿ ನೋಡಿ ಕೊಳ್ಳಬೇಕು. ಸ್ಥೂಲಶರೀರದಲ್ಲಿ ಜೀವನ ಸ್ವರೂಪೇಂದ್ರಿಯಗಳಲ್ಲಿ ಬ್ರಹ್ಮ ವಾಯು ರುದ್ರಾದಿ ನಾಲ್ಕು ಮಂದಿಗಳಿಗೆ ವಿಶೇಷ ಒಂದು ಅದೆ. ಅದು ಏನೆಂದರೆ, ದೀಪಪ್ರಕಾಶದಲ್ಲಿ ದೀಪಾಂತರಪ್ರಕಾಶ ಪ್ರವೇಶವತ್. ಕ್ಷೀರ ದಲ್ಲಿ ಉದಕಪ್ರವೇಶವತ್. ಅಣುಲಿಂಗದಾರಭ್ಯ ಸ್ಥೂಲದೇಹದವರೆವಿಗೂ ವ್ಯಾಪ್ತವಾಗಿರತಕ್ಕ ಜೀವೇಂದ್ರಿಯಗಳಲ್ಲಿ ಪ್ರವೇಶ. ರುದ್ರಾದಿಗಳಿಗೆ ಹಾಂಗಲ್ಲ. ದೀಪಪ್ರಕಾಶದಲ್ಲಿ ವಿದ್ಯಮಾನಗಳಾದ ಘಟಪಟಾದಿವತ್, ಕ್ಷೀರದಲ್ಲಿ ಕಠಿಣದ್ರವ್ಯವತ್ ವ್ಯಾಪ್ತಿ. ಇದೇ ವಿಶೇಷ ಇನ್ನು ಪೂರ್ವೋಕ್ತ ಪ್ರಮಾಣಗಳಿಗೆ ಅರ್ಥವಿಶದವಾಗಿ ಬರಿಯೋದು ಅಸಾಧ್ಯವಾದ ಪ್ರಯುಕ್ತ ಮುಖ್ಯಾರ್ಥವೇ ಬರಿಯಲ್ಪಟ್ಟಿತು- ಎಂತ ತಿಳಿಯತಕ್ಕದ್ದು ಎಂತ ತಾತ್ಪರ್ಯ. ॥೧೨॥

## (೨) "ಭಾವಪ್ರಕಾಶಿಕೆ" ವ್ಯಾಖ್ಯಾನ

ಜೀವನಸ್ವರೂಪದೇಹದಲ್ಲಿ ಇಂದ್ರಿಯಪ್ರೇರಕರಾಗಿ ವಾಯುದೇವರು ಇರುವರೆಂದು ಹೇಳುತ್ತಾರೆ,

ವಾಯುದೇವರು ಅಹಂಕಾರತತ್ತ್ವಾದಿಗಳಿಗೆ ಅಭಿಮಾನಿಗಳಾದ ಗರುಡ, ಶೇಷ, ರುದ್ರ, ಆದಿಶಬ್ದದಿಂದ ಇತರ ತತ್ತ್ವಾಭಿಮಾನಿ ದೇವ ತೆಗಳನ್ನೂ ತೆಗೆದುಕೊಳ್ಳಬೇಕು. ಇಂತಹ ತತ್ತ್ವಾಭಿಮಾನಿದೇವತೆಗಳ ರೂಪವನ್ನು ನಾಮವನ್ನು ತಾನೇ ಸ್ವೀಕರಿಸಿ, ಶ್ರೀಪರಮಾತ್ಮನು ಹೇಗೆ ಜೀವನ ಸ್ವರೂಪಾಂತಕರಣಪ್ರೇರಕನೋ, ಹಾಗೆ ವಾಯುದೇವರು ಇಂದ್ರಿಯ ಪ್ರೇರಕರಾಗಿರುವರು. ಆದರೆ ಮುಖ್ಯಪ್ರೇರಕನು ಪರಮಾತ್ಮನು. ಆ ಪರಮಾತ್ಮನ ವಶದಲ್ಲಿದ್ದು, ಜೀವನು ಮಾಡಬೇಕಾದ ಕಾರ್ಯಗಳನ್ನು ರಾಜಕಾರ್ಯವನ್ನು ಭೃತ್ಯರು ನಡೆಸುವಂತೆ. ನಡೆಸುತ್ತಾ, ಮಿಕ್ಕದೇವತೆ

ಗಳನ್ನು ವಶಮಾಡಿಕೊಂಡು ಇರುವರು. ವಾಯುದೇವರಿಗೆ ಸ್ವರೂಪದೇಹದಲ್ಲಿ ಪ್ರವೇಶವಿಲ್ಲದೆಂದು ಕೆಲವರ ಅಭಿಪ್ರಾಯ. ದಾಸರಾಯರು ಈ ಪದ್ಯದಲ್ಲಿ– **"ಹರಿಯಂತೆ ಪವನ"** ಎಂಬೀ ವಾಕ್ಯದಿಂದ ವಾಯುದೇವರಿಗೆ ಸ್ವರೂಪದೇಹದಲ್ಲಿ ಪ್ರವೇಶ ಉಂಟೆಂಬುದನ್ನು ಸ್ಪಷ್ಟಮಾಡಿರುವರು. ಇದಕ್ಕೆ ಆಧಾರವಾಗಿ **ಶ್ರೀಮದಾಚಾರ್ಯರ** ವಾಕ್ಯವೂ ಇರುವುದು.

**ನ್ಯಾಯವಿವರಣದಲ್ಲಿ—**

**"ಇಂದ್ರಿಯಸ್ಥೈಃ ಸ್ವರೂಪಸ್ಥೈಸ್ತು । ಸುಜ್ಞಾನಂ ಜನಯತ್ಯಸೌ ॥**
**ಮನಸ್ಥೇನ ವಿಶೇಷೇಣ । ಕಾರ್ಯೈಃ ಕರ್ಮ ಕೃದೇವಸಃ ॥**
**ಪೃಥಕ್ಸ್ಥಿತೇನ ರೂಪೇಣ । ಜೀವಂ ಧಾರಯತಿ ಪ್ರಭುಃ ।**
**ಜೀವಸ್ಥಿತೇನ ರೂಪೇಣ । ವೇದಯತ್ಯಹಮಿತ್ಯಪಿ ॥**
**ಪ್ರಾಣಏಕೋ ವಶೀ ನಿತ್ಯಂ । ಬಾಹ್ಯಂತಃಕರಣೇಶ್ವರಃ ॥**
**ತಾನ್ಯೇತಾನಿವ ತಾನ್ಯೇನ ತಥಾಪಿ ಕೃಪಯೈವಸಃ ॥**
**ಪೃಥಕ್ ಶಕ್ತೋऽಪಿ ತದ್ಗೈಸ್ತು । ಸ್ವರೂಪೈಸ್ತದ್ಗಕಾರ್ಯಕೃತ್ ॥**
**ತಸ್ಯೇಶೋ ಭಗವಾನ್ ವಿಷ್ಣುರೇವನೋವ ಯಥಾಕ್ರಮಮ್ ॥"**

ಅಂದರೆ, ಜೀವನಸ್ವರೂಪದಲ್ಲಿ ವಾಯುದೇವರು ಇಂದ್ರಿಯಾಭಿಮಾನಿ ದೇವತೆಗಳ ಸ್ವರೂಪವನ್ನು ಧರಿಸಿ, ಜೀವನು ಮಾಡಬೇಕಾದ ಕರ್ಮಗಳನ್ನು ಮಾಡುವರು. ಮತ್ತೆ ಮಾಡಿಸುವರು. ಮನಸ್ಸಿನ ಅಭಿಮಾನಿರೂಪದಿಂದ ಜೀವರಿಗೆ ಜ್ಞಾನವನ್ನು ಹುಟ್ಟಿಸುವರು. ಭಗವತ್ಸನ್ನಿಧಿಗತವಾದ ಮುಖ್ಯ ಪ್ರಾಣ ರೂಪದಿಂದ ಜೀವರನ್ನು ಧರಿಸಿ ಇರುವರು. ಜೀವನ ಸ್ವರೂಪದೇಹದ ಇಂದ್ರಿಯಗತ ರೂಪದಿಂದ "ನಾನು" ಎಂಬ ಅಭಿಮಾನವನ್ನು ಹುಟ್ಟಿಸುವರು. ಹೀಗೆ ಪ್ರಾಣದೇವರು ಒಬ್ಬರು, ಎಲ್ಲರನ್ನು ವಶಮಾಡಿಕೊಂಡಿರುವುದರಿಂದ, **"ವಶೀ"**–ಎಂಬ ಹೆಸರನ್ನು ಪಡೆದಿರುವರು. ಸ್ವರೂಪದೇಹದ ಇಂದ್ರಿಯಗಳಿಗೂ, ಹೊರಗಿನ ಲಿಂಗಶರೀರದ ಇಂದ್ರಿಯಗಳಿಗೂ ಸಹ ಅಧಿ

ಪತಿಗಳಾಗಿರುವರು. ಇಂದ್ರಿಯಗಳೆಲ್ಲವೂ ವಾಯುದೇವರ ವಶದಲ್ಲಿಯೇ ಇರುವುವು. ತಮಗೆ ತಮ್ಮ ರೂಪದಿಂದಲೇ ಸಕಲೇಂದ್ರಿಯ ಪ್ರೇರಣಾಶಕ್ತಿ ಇದ್ದರೂ, ತತ್ತ್ವೇಶರಲ್ಲಿ ಕರುಣದಿಂದ ಬೇರೆ ಬೇರೆ ತತ್ತ್ವೇಶರ ರೂಪ ರೂಪವನ್ನು ಧರಿಸಿ, ಕಣ್ಣು, ಕಿವಿ ಮೊದಲಾದ ಇಂದ್ರಿಯಗಳಿಂದ ಕಾರ್ಯ ವನ್ನು ಮಾಡಿಸುವರು. ಇಂತಹ ವಾಯುದೇವರಿಗೆ ಈಶನು ಪರಮಾತ್ಮ ನೊಬ್ಬನೇ-ಎಂದು **ನ್ಯಾಯವಿವರಣದ** ವಾಕ್ಯಾರ್ಥವು. ಈ ಅರ್ಥವು **ತಾಮ್ರಪರ್ಣೀಯ ಟಿಪ್ಪಣಿ**ಯನ್ನನುಸರಿಸಿ ಬರೆಯಲ್ಪಟ್ಟಿರುವುದು. ಇದ ಲ್ಲದೆ,

**ಭಾಗವತ ತಾತ್ಪರ್ಯ ದೀಪಿಕಾದಲ್ಲಿ-**

**"ಸ್ವರೂಪೇಂದ್ರಿಯದೇಹೇಷು ಮಾತರಿಶ್ವಾಭಿಧಾನತಃ ।**
**ಪತ್ತೇ ಲಿಂಗಶರೀರಸ್ಥಃ ಸೂತ್ರನಾಮಾ ಮಹಾಪ್ರಭುಃ ॥"**

ಅಂದರೆ, ಜೀವನ ಸ್ವರೂಪದೇಹದ ಇಂದ್ರಿಯಗಳಲ್ಲಿ **ಮಾತರಿಶ್ವಾ** ಎಂಬ ನಾಮದಿಂದಲೂ, ಲಿಂಗಶರೀರದಲ್ಲಿ **ಸೂತ್ರ** ನೆಂಬ ಹೆಸರಿನಿಂದಲೂ ವಾಸ ಮಾಡುವರೆಂಬ **ಪವನಸಂಹಿತಾ ಪ್ರಮಾಣ**ವನ್ನು ಉದಾಹರಿಸಿಸುವರು. ಈ ಆಧಾರಗಳಿಂದ ದಾಸರಾಯರು ಇಲ್ಲಿ ಹೇಳಿರುವ ವಾಕ್ಯಪ್ರಮಾಣಗಳಿಂದ ಊರ್ಜಿತವೆಂದು ಕಾಣುವುದು. ಲಿಂಗಶರೀರದಲ್ಲಿ ಬ್ರಹ್ಮ, ಸರಸ್ವತೀ, ಭಾರತೀ ಇವರು. ಭರತ ಎಂದರೆ ವಾಯುದೇವರು ಅವರಿಂದೊಡಗೂಡಿ ವಾಸಮಾಡುವರು. ಈ ದೇಹದಿ ಇತರ ತತ್ತ್ವಾಭಿಮಾನಿ ದೇವತೆಗಳಿಗೆ ಪ್ರವೇಶವಿಲ್ಲ.

**"ರತತ್ವಾದ್ಭಾತ್ಮಕೇ ವಿಷ್ಣಾವಥವಾಪಿ ಸ್ವಯಂ ಭೃತೇಃ ।**
**ಭರತೋ ವಾಯುರುದ್ದಿಷ್ಟೋ ಭಾರತೀ ತತ್ಸರಸ್ವತೀ ॥"**

**—ಎಂಬ ಭಾಗವತ ದಶಮ ತಾತ್ಪರ್ಯಾನುಸಾರ,** "ಭ" ಎಂಬ ಪರ ಮಾತ್ಮನಲ್ಲಿ ರತರಾಗಿರುವುದರಿಂದ **ಭರತ** ಎಂತಲೂ, ಅಥವಾ ಸಕಲ ಜನ ರನ್ನು ಭರಣ ಮಾಡುವುದರಿಂದ ಭರತ ಎಂದೂ ವಾಯುದೇವರಿಗೆ **ಹೆಸರು.**

ಭರತನ ಸತಿಯಾದುದರಿಂದ **ಭಾರತೀ** ಎಂದು ಅವರ ಪತ್ನಿಗೆ ಹೆಸರಾಯಿತು. ಈ ಆಧಾರದ ಮೇಲೆ ವಾಯುದೇವರಿಗೆ ದಾಸರಾಯರು **ಭರತ** ಎಂಬ ಶಬ್ದ ವನ್ನು ಪ್ರಯೋಗಮಾಡಿರುವರು. ॥೧೨॥

**(೩) ಭಾವದರ್ಪಣ ಟೀಕಾ ವ್ಯಾಖ್ಯಾನ :-**

ಈಗ ಜೀವನ ಸ್ವರೂಪದೇಹದಲ್ಲಿ ವಾಯುದೇವರೇ ಕಾರ್ಯನಿಯಾಮಕರಾಗಿ ಕಾರ್ಯ ನಡೆಸುತ್ತಾರೆಂದು ಹೇಳುತ್ತಾರೆ-"ಗರುಡೇತಿ".

ಸಲಿಂಗರಾದ ಮಾತರಿಶ್ವದೇವರು ಜೀವನ ಸ್ವರೂಪದಲ್ಲಿ ಇದ್ದಾರೆಂತಲೂ- ಇಲ್ಲ ಎಂತಲೂ ವಿಪ್ರತಿಪತ್ತಿಯು. ಇಲ್ಲೇ ಇಲ್ಲವೆಂದು ಪೂರ್ವ ಪಕ್ಷ-ಹಾಗಾದರೆ ಸ್ವರೂಪದಲ್ಲಿ ವಾಯುದೇವರು ಇದ್ದದ್ದೇ ಆದರೆ ರುದ್ರಾದಿಗಳಿಗೂ ಅಲ್ಲಿ ಸ್ಥಿತಿ ಉಂಟಾಗಲಿ ಎಂದರೆ-ಅದಕ್ಕೆ ಉತ್ತರ-

ಈತನಕಿಂತ ಅವರರಾದ್ದರಿಂದ ಸುಷುಪ್ತಿಕಾಲದಲ್ಲಿ ಅವರಿಗೆ ಸುಪ್ತಿ ಆಗುವುದರಿಂದ ಅಲ್ಲಿ ಸ್ಥಿತಿ ಉಂಟಾಗೋದಿಲ್ಲ. ಇದಲ್ಲದೇ ಸ್ವರೂಪಲಿಂಗಾನಿರುದ್ಧ ಸ್ಥೂಲ ಈ ನಾಲ್ಕು ದೇಹದಲ್ಲಿ ವಾಯುದೇವರು ತಾವೇ ವ್ಯಾಪ್ತರಾಗಿದ್ದು, ಜಾಗರೂಕರಾಗಿ ಎಂಭತ್ತಾರುಸಾವಿರದಾ ನಾನ್ನೂರು ಶ್ವಾಸಜಪ ಮಾಡುತ್ತಾರೆಂದು **ನಾಡಿಪ್ರಕರಣ ಸಂಧಿ-44 ನೆಯ ಪದ್ಯದಲ್ಲಿ** ಈ ಗ್ರಂಥ ಕರ್ತೃಗಳೇ ಹೇಳಿರುತ್ತಾರೆ. ಅದು ಯಾವುದೆಂದರೆ-

## ೪೪ ನೆಯ ಪದ್ಯ

**ಈರೆರಡು ದೇಹದೊಳಿದ್ದು ಸ ।**
**ಮೀರದೇವನು ಶ್ವಾಸಜಪ ನಾ ।**
**ನೂರಧಿಕವಾಗಿಪ್ಪ ಎಂಭತ್ತಾರು ಸಾಹಸ್ರ ॥**
**ತಾ ರಚಿಸುವನು ದಿವಸ ಒಂದಕೆ ।**
**ಮೂರುವಿಧ ಜೀವರೊಳಗಿದ್ದು ಖ ।**
**ರಾರಿ ಕರುಣಾಬಲವಿದೆಂತುಟೋ ಪವನರಾಯನೊಳು ॥೪೪॥**

-ಎಂದು ಆತನ ಗುಣ ಹೊಗಳಿರೋಣದರಿಂದ ಜೈವೀಯ ಸ್ವರೂಪದೇಹ ಪ್ರವೇಶ ಉಂಟೆಂದು ನಿಶ್ಚೈಯಿಸತಕ್ಕದ್ದು. ಈ ವಿಷಯದಲ್ಲಿ ಶ್ರೀಮದಾ **ಚಾರ್ಯರ ಸಾಕ್ಷಾತ್ ಶಿಷ್ಯರಾದ ನರಹರಿತೀರ್ಥರು ಶ್ರೀ ಭಾಗವತ ತಾತ್ಪರ್ಯಕ್ಕೆ ದೀಪಿಕಾ** ಮಾಡತಕ್ಕ ಕಾಲದಲ್ಲಿ ಹೇಳಿರೋ ಕ್ರಮ ಏನೆಂದರೆ–

**ಪ್ರಮಾಣ—**

"ಜೀವಾಸ್ತು ತ್ರಿವಿಧಾಃ ಪ್ರೋಕ್ತಾ ಉತ್ತಮಾಧಮ ಮಧ್ಯಮಾಃ ।
ಉತ್ತಮಾ ದೇವತಾ ಪ್ರೋಕ್ತಾ ಋಷ್ಯಾದ್ಯಾ ಮಧ್ಯಮಾಃ ಸ್ಮೃತಾಃ ॥
ಅಧಮಾ ಮಾನುಷೋತ್ಕೃಷ್ಟಾಸ್ತೇಚಾಪಿ ತ್ರಿವಿಧಾಃ ಸ್ಮೃತಾಃ ।
ಸಾತ್ವಿಕ ರಾಜಸಾಸ್ತತ್ರ ತಾಮಸಾದಿ ಪ್ರಭೇದಿತಃ ॥
ತೇಷು ಸರ್ವೇಷು ಜೀವೇಷು ದೇಹೇಷು ಚ ವಸತ್ಯಯಂ ।
ಸ್ವರೂಪೇಂದ್ರಿಯ ದೇಹೇಷು ಮಾತರಿಶ್ವಾಭಿಧಾನತಃ
ಧತ್ತೇ ಲಿಂಗಶರೀರಸ್ಥಃ ಸೂತ್ರನಾಮಾ ಮಹಾಪ್ರಭುಃ ।
ಸೂಕ್ಷ್ಮದೇಹಗತಃ ಸೋಽಪಿ ಪವಮಾನೇ ಚೋಚ್ಯತೇ ॥
ಸ್ಥೂಲದೇಹಗತಃ ಸೋಽಪಿ ಮುಖ್ಯಪ್ರಾಣಾಭಿಧೋಹಿ ಚ ।
ಮಧ್ಯಮಾಧಮ ದೇಹೇಷು ಪ್ರಾಣಾಪಾನಾಭಿಧಾನತಃ ॥
ಪೂರ್ವೋಕ್ತೇಷು ಚ ಸರ್ವೇಷು ಸ್ಥೂಲದೇಹೇಂದ್ರಿಯಾದಿಷು ।
ಸ್ವರೂಪದೇಹ ಬುದ್ಧ್ಯಾದಿಸ್ಥಿತತ್ವೇನ ಮಹಾಪ್ರಭುಃ ॥
ಪ್ರೇರಯತ್ಯಖಿಲಂ ವಿಶ್ವಂ ಜಂಗಮಾಜಂಗಮಂ ತಥಾ ।
ತತ್ತದ್ದೇಹಗತ ಪ್ರಾಣಾಸ್ತತ್ತದ್ದೇಹಸ್ಥ ಮೂರ್ತಿನಾ ॥
ಅನಿರುದ್ಧಾದಿ ನಾಮ್ನಾಹಿ ಸರ್ವಪ್ರೇರಕ ಮೂರ್ತಿನೇತಿ ॥"

**–ಪವಮಾನ ಸಂಹಿತಾಯಾಂ ॥**

ಮತ್ತು ಈ ವಿಷಯದಲ್ಲಿ ಶ್ರೀ ಸರ್ವಜ್ಞರಾಯರ ಉಕ್ತಿಯು ಇರುತ್ತದೆ.
ಉಕ್ತಂಚ ನ್ಯಾಯವಿವರಣೇ :–

"ಇಂದ್ರಿಯಸ್ಥೈಃ ಸ್ವರೂಪೈಸ್ತುಜ್ಞಾಂ ಜನಯತ್ಯಸೌ ।
ಮನಸ್ಥೇನ ವಿಶೇಷೇಣ ಕಾಮ್ಯೈಃ ಕರ್ಮಕೃದೇವ ಸಃ ॥
ಪೃಥಕ್ಸ್ಥಿತೇನ ರೂಪೇಣ ಜೀವಂ ಧಾರಯತಿ ಪ್ರಭುಃ ।
ಜೀವಸ್ಥಿತೇನ ರೂಪೇಣ ವೇದಯೇತ್ಯಹಮಿತ್ಯಪಿ ॥
ಪ್ರಾಣ ಏಕೋ ವಶೀ ನಿತ್ಯಂ ಬಾಹ್ಯಾಂತಃಕರಣೇಶ್ವರಃ ।
ತಾನ್ಯೇತಾನಿ ವಶಾನ್ಯೇವ ತಥಾಪಿ ಕೃಪಯೈವ ತಃ ॥
ಪೃಥಕ್ ಶಕ್ತೋಽಪಿ ತದ್ಗೈಸ್ತು ಸ್ವರೂಪೈಸ್ತದ್ಗಕಾರ್ಯಕೃತ್ ।
ತಸ್ಯೇಶೋ ಭಗವಾನ್ವಿಷ್ಣುಃ ಸ್ವಯಮೇವ ಯಥಾಕ್ರಮಮಿತಿ ॥"

—ಎಂಬ ಪ್ರಮಾಣಕ್ಕೆ ವ್ಯಾಖ್ಯಾನ ತಾಮ್ರಪರ್ಣೀಯರು :—

"ಮನಸ್ಥೇನ ವಿಶೇಷೇಣ ಮನೋಗತೇನ ರೂಪೇಣ ಜ್ಞಾನಂ ಜನಯತಿ ಕಾಮ್ಯೈಃ ಕಾಮಗತೈಃ ಕರ್ಮ ಕರೋತಿ ಪೃಥಕ್ಸ್ಥಿತೇನ ಭಗವತ್ಸನ್ನಿಧಿಗತೇನ ಮುಖ್ಯಪ್ರಾಣೇನ ಜೀವಸ್ಥಿತೇನ ಜೀವಸ್ವರೂಪಾಂತಃಕರಣಗತೇನ ಸರ್ವಾನ್ ವಶೀಕರೋತೀತಿ ವಶೀ ಇತ್ಯರ್ಥಃ ॥"

ಇದಲ್ಲದೆ ಶ್ರುತಿಪ್ರಮಾಣ :—

"ಘೌರ್ಮಾಸವಂತಾ ತ್ರಿವೃತವ್ಯಾ ಪತುಸ್ತ್ರಯೋರ್ಜುಷ್ಟಿಂ ಮಾತರಿಶ್ವಾ ಜಗಾಮ ॥"

ಇದರರ್ಥ–

ಸ್ವರೂಪದೇಹದಲ್ಲಿ ದೀಪ್ತವಾದ ವ್ಯಾಪ್ತವಾದ ಭಗವದ್ರೂಪಗಳ ಸೇವಾ ಮಾಡೋದ್ದಕ್ಕೋಸ್ಕರ ವಾಯುದೇವರು ಕೂಡಾ ಪ್ರವೇಶ ಮಾಡಿ

ದ್ದಾರೆಂದು ತಾತ್ಪರ್ಯನಿರ್ಣಯ ಟಿಪ್ಪಣಿಯಲ್ಲಿ ಉಕ್ತವಾಗಿದೆ. ತತ್ಪ್ರಯುಕ್ತ ಜೈವೀಯ ಸ್ವರೂಪಾಂತ ಶ್ರೀಹರಿಯು ಹ್ಯಾಗೆ ಇದ್ದಾನೋ, ತದ್ವತ್ ರುದ್ರಾದಿ ತತ್ತ್ವೇಶರ ನಾಮಧಾರಣ ಮಾಡಿಕೊಂಡು ವಾಯುದೇವರು ಸ್ವರೂಪಾಂತಃಕರಣದಲ್ಲಿದ್ದು, ಜೀವರ ಕಾರ್ಯ ನಡೆಸುತ್ತ ಸರ್ವರನ್ನು ವಶಮಾಡಿಕೊಂಡು ಇದ್ದಾರೆಂಬೋದೇ ಸಿದ್ಧವಾದ ಪ್ರಮೇಯ ತಿಳಿಯಬೇಕು. ।ಭರತೇತಿ। ಭಾಸಾಮಕ ಎಂದರೆ, ಪ್ರಕಾಶರೂಪವಾದ ಪರಮಾತ್ಮನಲ್ಲಿ ರತಿ ಉಳ್ಳವರಾದ ಪ್ರಯುಕ್ತ ವಾಯುದೇವರಿಗೆ **ಭರತ** ಎಂಬ ನಾಮ.

**ಉಕ್ತಂಚ ಶ್ರೀ ಭಾಗವತ ತಾತ್ಪರ್ಯೇ :—**

**"ರತತ್ವಾ ದ್ಭಾನಾಮಕೇ ವಿಷ್ಣಾವಿತ್ಯುಕ್ತೇಃ ॥"**

ಮತ್ತು ಸಮಸ್ತರನ್ನು ಭರಣ ಮಾಡತಕ್ಕವನಾದ್ದರಿಂದಲೂ **ಭರತ** ಎಂಬ ನಾಮ.

**ಉಕ್ತಂಚ ಶ್ರೀ ಮನ್ಮಹಾಭಾರತತಾತ್ಪರ್ಯ ನಿರ್ಣಯೇ :–**

**"ಪ್ರಾಣೋಹಿ ಭರತೋನಾಮ ಸರ್ವಸ್ಯ ಭರಣಾಚ್ಛ್ರುತ ಇತಿ ॥"**

ಜೀವನಸ್ವರೂಪದ ಮೇಲಿಹ ಲಿಂಗದೇಹದಲ್ಲಿ ಬ್ರಹ್ಮ, ವಾಯು, ಸರಸ್ವತೀ, ಭಾರತೀ ಈ ನಾಲ್ಕು ಮಂದೀನೂ ಇದ್ದು, ಅಲ್ಲಿ ಕಾರ್ಯ ನೆರವೇರಿಸುತ್ತಾರೆಂದು ತಿಳೀ ತಕ್ಕದ್ದು. ॥೧೨॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

ಸಂಕ್ಷಿಪ್ಯ ಉಕ್ತಾಂ ಸ್ವರೂಪಸ್ಥಿತಿಂ ವಾಯೋಃ ವ್ಯನಕ್ತಿ "ಗರುಡ" ಇತೀ ಅತ್ರ ಕೇಚಿತ್ ನ ಸಹಂತೇ ಸಮೀರಸ್ಯ ಸ್ಥಿತಿಂ ಲಿಂಗಸ್ವರೂಪಯೋಃ । "ಪ್ರಾಣನಾಮವ್ನ ಜೀವಗತಃ" । "ಥತ್ತೇ ಲಿಂಗಶರೀರಸ್ಥಃ" । "ಸೂತ್ರನಾಮ" ಇತಿ ರುದ್ರಾದ್ಯಧಿಕ ಮಹಾತ್ಮ್ಯೋಕ್ತ್ಯರ್ಥಂ ಪ್ರಸಕ್ತ "ಜೀವಸ್ಥಿತೇರ

ರೂಪೇಣ ವೇದಯತಿ ಅಹಮಪಿ-" ಇತಿ ಪವಮಾನಸಂಹಿತಾ-ನ್ಯಾಯವಿವರಣ ಪ್ರಮಾಣಃ ಇತ್ಯುಪೇಕ್ಷ್ಯಾಃ ॥೧೨॥

**ಕನ್ನಡಾರ್ಥ :**

ಪೂರ್ವೋಕ್ತ ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟ ವಾಯುದೇವರ ಜೀವನ ಸ್ವರೂಪ ಮತ್ತು ಲಿಂಗದೇಹಗಳಲ್ಲಿ ವ್ಯಾಪ್ತಿ ಮತ್ತು ಮಹಿಮೆಗಳನ್ನು ವಿಶದ ಪಡಿಸುತ್ತಾರೆ. "ಗರುಡ"-ಎಂಬ ಈ ಪದ್ಯದಿಂದ. "ವಾಯುದೇವರು ಜೀವರ ಲಿಂಗ ಹಾಗೂ ಸ್ವರೂಪ ಶರೀರಗಳಲ್ಲಿ ವ್ಯಾಪಿಸಿರುವರು-" ಎಂಬ ವಿಷಯವನ್ನು ಕೆಲವರು ಒಪ್ಪುವುದಿಲ್ಲ. "ಪ್ರಾಣ" ಎಂಬ ಹೆಸರಿನಿಂದ ಜೀವನಲ್ಲಿ ಇರುತ್ತಾನೆ. ಲಿಂಗಶರೀರದಲ್ಲಿದ್ದು ಇಂದ್ರಿಯಾದಿಗಳ ನಿಯಾಮಕನಾಗಿದ್ದಾನೆ. ಇವನೇ ಸೂತ್ರನಾಮಕ ವಾಯುವು"- ಎಂಬುದಾಗಿ "ರುದ್ರಾದಿಗಳಿಗಿಂತಲೂ ಅಧಿಕವಾದ ಮಹಾತ್ಮ್ಯೆಯು ವಾಯುದೇವರಿಗಿದೆ-" ಎಂದು ತಿಳಿಸುವ ಪ್ರಸಂಗ ವಿಶೇಷಗಳಲ್ಲಿ ಉದಾಹರಿಸಲಾಗಿದೆ. ಇದಕ್ಕೆ **ಪವಮಾನ ಸಂಹಿತಾ ವಾಕ್ಯವೇ ಪ್ರಮಾಣವು.**

"ಜೀವರ ಸ್ವರೂಪದೇಹದಲ್ಲಿ ಇರುವ ರೂಪದಿಂದ"- "ನಾನು (ಅಂದರೆ ವಾಯುದೇವರು) ಎಂದು ತಿಳಿದುಕೊಳ್ಳುತ್ತೇನೆ. (ವೇದಯತಿ ಅಹಮಪಿ)" ಎಂದು ಉಕ್ತವಾಗಿದೆ. ಈ ಅಭಿಪ್ರಾಯವನ್ನೇ **ನ್ಯಾಯವಿವರಣವು** ಅನುಮೋದಿಸುತ್ತದೆ. ಆ ಕಾರಣದಿಂದ- "ವಾಯುದೇವರಿಗೆ ಜೀವನ ಸ್ವರೂಪದೇಹದಲ್ಲಿ ವ್ಯಾಪ್ತಿ ಇಲ್ಲ"- ಎಂಬ ಮತವೂ ಮತ್ತು ಅದನ್ನ ಅಂಗೀಕರಿಸುವವರೂ ಮನ್ನಣೆಗೆ ಯೋಗ್ಯರಲ್ಲ, ನಿಂದ್ಯರು. ॥೧೨॥

## (ಇ) ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವಸ್ವರೂಪ ಶ್ವಾಸನಿಯಾಮಕ ಪ್ರಾಣೇಶ. ಲಿಂಗಶರೀರಸ್ಥ ಬ್ರಹ್ಮ-ವಾಯ್ವಾದಿ ಸ್ಮರಣೋಪಾಸನೆ ತಿಳಿಸುತ್ತಾರೆ, ಗರುಡ ಎಂದು. ಶ್ರೀಹರಿಯು ಗರುಡ ಶೇಷ ರುದ್ರಾದಿನಾಮಗಳ ಧರಿಸಿ, ಜೀವನಸ್ವರೂಪದೇಹದಲ್ಲಿರುವ

ಹಾಗೆ ಪವಿತ್ರನಾದ್ದರಿಂದ ಪವನನಾಮಕ ಪ್ರಾಣದೇವರು, ಊರ್ಧ್ವಗಮನ ಶಕ್ತಿ ನಿಮಿತ್ತ ಗರುಡನೆಂತಲೂ. ಎಲ್ಲಾ ತತ್ತ್ವಾಭಿಮಾನಿಗಳೂ ದೇಹ ಬಿಟ್ಟು ಹೋದರೂ, ತಾನು ಅವಶಿಷ್ಟನಾಗಿ ದೇಹದಲ್ಲಿರುವ ಶಕ್ತಿಯುಳ್ಳ ಕಾರಣ ಶೇಷನೆಂತಲೂ, ಶುಭರೂಪನಾದ್ದರಿಂದ ಭವ ಎಂತಲೂ ಮೊದಲಾದ ಹೆಸರುಗಳನ್ನು ಧರಿಸಿ, ದೇವರ ಅಧೀನನಾಗಿ ಅಂದರೆ, ತತ್ಪ್ರತಿಬಿಂಬರೂಪದಿಂದ ಜೀವಸ್ವರೂಪ, ಚಿತ್ತ, ಮನಸ್ಸು, ಕಣ್ಣು ಮೊದಲಾದ ಕರಣಗಳಿಗೆ ನಿಯಾಮಕನಾಗಿರುವನು. ಸರಸಿಜಾಸನನೆಂಬ ಬ್ರಹ್ಮನು, ವಾಯುದೇವರು, ವಾಣಿ ಎಂಬ ಸರಸ್ವತೀ ಭಾರತೀ ಸಹ ಲಿಂಗದೇಹದಲ್ಲಿರುವರು, ಇತರ ದೇವತೆಗಳು ದೆ ಲಿಂಗದೇಹದಲ್ಲಿ ಇಲ್ಲ ಎಂತ ಅರ್ಥ.

ಘರ್ಮಾಸಮಂತಾತ್ತ್ರಿವೃತಂ ವ್ಯಾಪತುಸ್ತಯೋರ್ಜುಷ್ಟಿಂ ।
ಮಾತರಿಶ್ವಾಜಗಾಮ' ಎಂಬ **ಶ್ರುತ್ಯರ್ಥವು** ವಿವರಿಸಲ್ಪಟ್ಟಿತು. ॥೧೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವನ ಸ್ವರೂಪದೇಹದಲ್ಲಿ ವಾಯುದೇವರ ವ್ಯಾಪ್ತಿಯ ವಿಚಾರವನ್ನು ತಿಳಿಸುತ್ತಾರೆ ೧೨ ನೆಯ ಪ್ರಸಕ್ತ ಪದ್ಯದಿಂದ.

ತತ್ತ್ವಜಿಜ್ಞಾಸುಗಳಿಗೆ ಇದೊಂದು ಪ್ರಮುಖ ವಿಷಯ. ಚರ್ಚೆಗೆ ಸಾಕಾದಷ್ಟು ಆಸ್ಪದವಿದೆ. ಜೀವನಸ್ವರೂಪದೇಹದಲ್ಲಿ ವಾಯುದೇವರಿಗೆ ಸರ್ವಥಾತ್ಮನಾ ಪ್ರವೇಶವೇ ಇಲ್ಲ, ಇಷ್ಟೇ ಅಲ್ಲ. ಅನಾದಿ ಲಿಂಗದೇಹರಲ್ಲೂ ಸಹ ವಾಯುದೇವರ ವ್ಯಾಪ್ತಿ ಇಲ್ಲ. ಇದು **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ** ಖಚಿತಾಭಿಪ್ರಾಯವು.

ಆದರೆ ಇತರ ವ್ಯಾಖ್ಯಾನಕಾರರೆಲ್ಲರೂ ಜೀವರ ಸ್ವರೂಪದೇಹದಲ್ಲಿ ವಾಯುದೇವರ ಸ್ಥಿತ್ವವನ್ನು ಪ್ರಮಾಣಪ್ರಮಿತವಾಗಿ ಸಮರ್ಥಿಸಿರುತ್ತಾರೆ.

**ಸಂಕರ್ಷಣ ಒಡೆಯರೂ** ಸಹ ಅನೇಕ ಪ್ರಮಾಣಗಳನ್ನು ಉದಹರಿಸಿ, ತಮ್ಮ ವಾದಕ್ಕೆ ಪುಷ್ಟಿಯನ್ನು ಕೊಟ್ಟಿರುತ್ತಾರೆ. ಇದು ವಿಚಾರಾಂಶ.

೧. ಸಮಸ್ತ ತ್ರಿವಿಧಜೀವರ ಸ್ವರೂಪದೇಹ ಅತ್ಯಂತಸೂಕ್ಷ್ಮ. ಕುದುರೆಯ ಬಾಲದ ತುದಿಯ ಹತ್ತುಸಾವಿರದ ಒಂದು ಅಂಶ ಎಷ್ಟು ಅತ್ಯಣುರೂಪದಲ್ಲಿರುವುದೋ, ಆ ಪರಿಮಾಣದಲ್ಲಿ ಬ್ರಹ್ಮಾದಿ ತೃಣಾಂತ ಸಮಸ್ತಜೀವರ ಸ್ವರೂಪದೇಹವು ಪರಿಮಿತವಾಗಿದೆ. ಈ ಪ್ರಮಾಣದಲ್ಲಿ ನ್ಯೂನಾಧಿಕಗಳು ಎಂದಿಗೂ ಇಲ್ಲ–ಎಂದು ಪೂರ್ವೋಕ್ತ ಪದ್ಯಗಳಲ್ಲಿ ಸ್ಪಷ್ಟ ಉಲ್ಲೇಖವಿದೆ. ಹಾಗಿದ್ದರೆ, ಅತ್ಯಣುರೂಪವಾದ ಜೀವರ ಸ್ವರೂಪದಲ್ಲಿ ಅಷ್ಟೇ ಗಾತ್ರ ಪರಿಮಿತಿಯುಳ್ಳ ವಾಯುದೇವರ ಪ್ರವೇಶ ಹೇಗೆ ಸಾಧ್ಯ ? ಎಂಬುದು ಒಂದು ಪೂರ್ವಪಕ್ಷ, ಹಾಗಿದ್ದ ಪಕ್ಷದಲ್ಲಿ ಅಸೃಜ್ಯರಾಶಿಯಲ್ಲಿರುವ ಜೀವರಲ್ಲಿ ವಾಯುದೇವರ ಪ್ರವೇಶ ಎಂದಾಯಿತು ? ಹೀಗೆ ಆಗಲು ಸಾಧ್ಯವೇ ? ಎಂದು ಅದೇ ಪಕ್ಷವನ್ನು ಹಿಡಿದು ವಾದಿಸುವರ ಇನ್ನೊಂದು ಪ್ರಶ್ನೆ.

ಇರಲಿ. ಪ್ರಸಕ್ತ ೧೨ನೆಯ ಪದ್ಯದ ಪ್ರಕಾರ- **ಪವನ ಗರುಡ ಶೇಷ ಭವಾದಿ ನಾಮವ ಧರಿಸಿ ಸ್ವರೂಪದೇಹದಿ ಕರುಣನಿಯಾಮಕನು ತಾನಾಗಿಪ್ಪ ಹರಿಯಂತೆ**— ಎಂಬ ಸ್ಪಷ್ಟ ದಾಸರಾಯರ ವಾಕ್ಯವಿದೆ, **ತಾನಾಗಿಪ್ಪ ಹರಿಯಂತೆ**-ಎಂಬ ಶಬ್ದ ಪ್ರಯೋಗವಿರುವುದರಿಂದ **ಹರಿಯು ಪವನನ ಸ್ವರೂಪದೇಹದಿ**-ಎಂಬುದಾಗಿ ಅರ್ಥಮಾಡಲು ಸಾಧ್ಯವಿಲ್ಲ.

೨. ಅಂತರಾತ್ಮನಾಮಕನಾದ ಶ್ರೀ ಪರಮಾತ್ಮನು ಜೀವರ ಸ್ವರೂಪದೇಹದಲ್ಲಿ ಕೇಶವಾದಿ ಕೃಷ್ಣಾಂತರೂಪದಿಂದ ಶಿರಾದಿ ಪಾದಾಂತ್ಯ ಸಮಗ್ರ ವ್ಯಾಪಿಸಿ, ಆ ಸ್ವರೂಪೇಂದ್ರಿಯಗಳಿಗೆ ಮುಖ್ಯನಿಯಾಮಕನಾಗಿದ್ದಾನೆ. ಹಾಗೆ ಇಪ್ಪ ಹರಿಯಂತೆ ಶ್ರೀ ವಾಯುದೇವರು **ಮಾತರಿಶ್ವಾ** ಎಂಬ ನಾಮಧೇಯರಿಂದ ಅವರಿಗಿಂತ ಅವರರಾದ ಗರುಡ ಶೇಷ, ಭವ ಇತ್ಯಾದಿ ತತ್ತ್ವದೇವತೆಗಳ ಹೆಸರುಗಳನ್ನು ತಾನೇ ಧಾರಣಮಾಡಿಕೊಂಡು, ವ್ಯಾಪ್ತರಾಗಿದ್ದಾರೆಂದು ಪ್ರಮಾಣ ವಾಕ್ಯಗಳಿವೆ.

**ಭಾಗವತತಾತ್ಪರ್ಯದೀಪಿಕಾ ಪ್ರಮಾಣ :—**

"ಸ್ವರೂಪೇಂದ್ರಿಯ ದೇಹೇಷು ಮಾತರಿಶ್ವಾಭಿಧಾನತಃ ।
ಧತ್ತೇ ಲಿಂಗಶರೀರಸ್ಥೋ ಸೂತ್ರನಾಮಾ ಮಹಾಪ್ರಭುಃ ॥"

ಶ್ರೀಮದಾಚಾರ್ಯರ ನಾಲ್ವರು ಶಿಷ್ಯರಲ್ಲಿ ಒಬ್ಬರಾಗಿದ್ದ ಶ್ರೀ ನರಹರಿತೀರ್ಥರು ಭಾಗವತ ತಾತ್ಪರ್ಯ ದೀಪಿಕಾ ಎಂಬ ಗ್ರಂಥವನ್ನು ರಚಿಸಿರುತ್ತಾರೆ. ಪೂರ್ವೋಕ್ತ ಗ್ರಂಥ ಘಟಿತಪ್ರಮಾಣವು ಪವಮಾನ ಸಂಹಿತಾ ಪ್ರಮಾಣದ ಆಧಾರದ ಮೇಲೆ ಬರೆಯಲ್ಪಟ್ಟಿದೆ, ಅಂತೆಯೇ ಜೀವನಸ್ವರೂಪ ದೇಹಕ್ಕೆ ಆವರ್ಕವಾಗಿರುವ ಅನಾದಿ ಲಿಂಗದೇಹದಲ್ಲಿ ಸೂತ್ರ ಎಂಬ ಹೆಸರಿನಿಂದ ಮಹಾಪ್ರಭು. ಎಂದರೆ ಜೀವೋತ್ತಮರಾದ ಶ್ರೀ ವಾಯುದೇವರು ಸ್ಥಿತರಾಗಿದ್ದಾರೆ ಎಂದು ಪ್ರಮಾಣದ ತಾತ್ಪರ್ಯವು.

೩. ಸ್ವರೂಪದೇಹದಲ್ಲಿ ಶ್ರೀ ವಾಯುದೇವರ ವ್ಯಾಪ್ತಿ ಒಪ್ಪಿದರೆ, ರುದ್ರಾದಿಗಳಿಗೂ ಸಹ ಉಂಟಾಗಬೇಕಲ್ಲ ? ಎಂಬ ಸಂಶಯ ಬಂದರೆ, ಅದಕ್ಕೆ ಪರಿಹಾರ.

ಗರುಡ ಶೇಷ ಭವಾದಿ ತತ್ತ್ವದೇವತೆಗಳು ಶ್ರೀ ವಾಯುದೇವರಿಗಿಂತ ಅವರರು. ಸುಷುಪ್ತಿಕಾಲದಲ್ಲಿ ಅವರಿಗೂ ಸಹ ಸುಷುಪ್ತ್ಯವಸ್ಥಾ ಉಂಟಾಗುವುದು. ಇದರಿಂದ ಜೀವನ ಸ್ವರೂಪೇಂದ್ರಿಯಗಳಲ್ಲಿ ಗರುಡ ಶೇಷಾದಿಗಳ ಸ್ಥಿತ್ವವಿಲ್ಲವೆಂದು ಸಿದ್ಧವಾಗುವುದು. ಅವರ ಸ್ಥಿತ್ವ ಮತ್ತು ವ್ಯಾಪಾರಾದಿಗಳೆಲ್ಲವೂ ಜೀವರ ಸ್ಥೂಲಶರೀರದಲ್ಲಿಯೇ.

೪. ಶ್ರೀ ವಾಯುದೇವರು ಶ್ರೀ ಪರಮಾತ್ಮನ ಪ್ರಥಮಾಂಗಭೂತರು. ಅಂದರೆ ಶ್ರೀಮನ್ನಾರಾಯಣನಿಗೆ ಪ್ರಪ್ರಥಮಪ್ರತೀಕರು. ಇವರಲ್ಲಿ ಭಗವತ್ಸನ್ನಿಧಾನ ವಿಶೇಷ ಇತರ ಸಮಸ್ತ ದೇವತೆಗಳಿಗಿಂತಲೂ ಅಧಿಕ, ಇದರಿಂದ ಶ್ರೀ ಪರಮಾತ್ಮನ ಪರಮಾಧಿಕ್ಯರೂಪವಾದ ಅನುಗ್ರಹಕ್ಕೆ ಪಾತ್ರರು.

ಅವನ ವಿಶೇಷ ಸನ್ನಿಧಾನಯುಕ್ತರಾಗಿ ಜೀವನ ಸ್ವರೂಪೇಂದ್ರಿಯಗಳಲ್ಲಿ ಹರಿಯಂತೆ ಅಮುಖ್ಯ ವೃತ್ತಿಯಿಂದ ನಿಯಾಮಕರಾಗಿದ್ದಾರೆ ಎಂದು ತಿಳಿಯಬೇಕು. ಶ್ರೀಹರಿಯೇ ಪರಮ ಮುಖ್ಯವೃತ್ತಿಯಿಂದ ಪ್ರವರ್ತಕನು ಹಾಗೂ ನಿಯಾಮಕನು. ಅವನ ಆಜ್ಞೆಗೆ ಒಳಪಟ್ಟು, ಅವನ ಆದೇಶದಂತೆ ಶ್ರೀ ವಾಯುದೇವರು ನಿಯಾಮಕರು. ಇವರು ತತ್ತ್ವದೇವತೆಗಳನ್ನು ತಮ್ಮ ವಶದಲ್ಲಿಟ್ಟುಕೊಂಡಿರುವುದರಿಂದ ಶ್ರೀ ವಾಯುದೇವರಿಗೆ ವಶೀ ಎಂದು ನಾಮಧೇಯ.

**ಪ್ರಮಾಣ :—**

**"ಇಂದ್ರಿಯಸ್ಥೈಃ ಸ್ವರೂಪೈಸ್ತು । ಮಜ್ಞಾನಂ ಜನಯತ್ಯಸೌ ॥**
**ಮನಸ್ಥೇಣ ವಿಶೇಷೇಣ । ಕಾಮ್ಯೈಃ ಕರ್ಮಕೃದ್ದೇವಸಃ ॥**
**ಪೃಥಕ್‌ಸ್ಥಿತೇನ ರೂಪೇಣ । ಜೀವಂ ಧಾರಯತಿ ಪ್ರಭುಃ ।**
**ಜೀವಸ್ಥಿತೇನ ರೂಪೇಣ । ವೇದಯತ್ಯಹಮಿತ್ಯಪಿ ॥**
**ಪ್ರಾಣ ಏಕೋ ವಶೀ ನಿತ್ಯಂ । ಬಾಹ್ಯಂತಃಕರಣೇಶ್ವರಃ ॥"**

**—ಎಂದು ಶ್ರೀಮದಾಚಾರ್ಯರ ನ್ಯಾಯವಿವರಣದ ಪ್ರಮಾಣವಿದೆ.**

ಎಂದರೆ, (1) ಶ್ರೀ ವಾಯುದೇವರು ಜೀವನ ಸ್ವರೂಪದೇಹದ ಇಂದ್ರಿಯಗತ ರೂಪಗಳಿಂದ **ನಾನು** (**ವೇದಯತಿ ಅಹಂ ಇತಿ**) ಎಂಬ ಅಭಿಮಾನವನ್ನು ಹುಟ್ಟಿಸುವರು. (2) ಪ್ರಾಣದೇವರು ತಾವೊಬ್ಬರೇ (**ಪ್ರಾಣ ಏಕಃ**) ಎಲ್ಲರನ್ನೂ ನಿಯಂತ್ರಿಸುತ್ತಾ (ಗರುಡ ಶೇಷ ಭವಾದಿಗಳನ್ನು) **ವಶೀ** (**ವಶೀ ನಿತ್ಯಂ**) ಎಂಬ ಹೆಸರನಿಂದ ಪ್ರಖ್ಯಾತರಾಗಿದ್ದಾರೆ. (3) ಸ್ವರೂಪದೇಹದ ಇಂದ್ರಿಯಗಳಿಗೂ ಮತ್ತು ಅದಕ್ಕೆ ಆವರ್ಕವಾಗಿರುವ ಹೊರಗಿನ ಲಿಂಗಶರೀರಗತಇಂದ್ರಿಯಗಳಿಗೂ ಅಧಿಪತಿಗಳಾಗಿರುವರು, (**ಬಾಹ್ಯಂತಃಕರಣೇಶ್ವರಃ**)

ಇಂತು, ತ್ರಿವಿಧಸಮಸ್ತಜೀವರ ಜೀವಸ್ವರೂಪೇಂದ್ರಿಯಗಳಲ್ಲಿ ಪರಮಮುಖ್ಯವೃತ್ತಿಯಿಂದ ನಿಯಾಮಕನಾದ ಶ್ರೀಹರಿಯಂತೆ, ಅವನ

ಆಜ್ಞಾಧಾರಕರಾಗಿ, ಅವನ ವಿಶೇಷಾನುಗ್ರಹದಿಂದ, ಅವನಿಂದ ಪ್ರೇರಿತರಾಗಿ, ಶ್ರೀ ವಾಯುದೇವರು ಗರುಡ, ಶೇಷ ಭವ ಇತ್ಯಾದಿ ನಾಮಗಳಿಂದ ಸ್ವರೂಪದೇಹದಲ್ಲಿ ವ್ಯಾಪ್ತರಾಗಿ ಕರಣನಿಯಾಮಕರಾಗಿರುವರು ಎಂದು ಸಿದ್ಧವಾಗುವುದು.

೫. ಜೀವನಸ್ವರೂಪಕ್ಕೆ ಸುತ್ತಲೂ ಭತ್ತದ ಕಾಳಿಗೆ ಹೊಟ್ಟಿನಂತೆ ಅನಾದಿಲಿಂಗದೇಹವು ಆವರಣರೂಪದಲ್ಲಿದೆ. ಇದು ಅನಾದಿ. ಮನಸ್ಸು, ಪಂಚಜ್ಞಾನೇಂದ್ರಿಯಗಳು ಪಂಚಕರ್ಮೇಂದ್ರಿಯಗಳು ಮತ್ತು ಪಂಚತನ್ಮಾತ್ರಗಳು ಈ ೧೬ ಕಳೆಗಳಿಂದ ಯುಕ್ತವಾಗಿದೆ. ಅಂದರೆ ಅನಾದಿಲಿಂಗಶರೀರವು ಷೋಡಶಕಳಾತ್ಮಕವಾದದ್ದು. ಮೂಲಪ್ರಕೃತಿಯ ಸಹಜಧರ್ಮಗಳಾದ ಸತ್ತ್ವ, ರಜಸ್ತಮೋಗುಣಗಳೆಂಬ ಗುಣತ್ರಯಗಳು ಸೂಕ್ಷ್ಮರೂಪದಲ್ಲಿ ಅನಾದಿಲಿಂಗಗತವಾಗಿವೆ, ಅಂದರೆ ಲಿಂಗಶರೀರವು ತ್ರಿಗುಣಾತ್ಮಕವಾದದ್ದು. ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿಯು. ಅವ್ಯಕ್ತತತ್ತ್ವದ ಸ್ಥಾನವು. ಇದಕ್ಕೆ ಶ್ರೀ ಭೂ ದುರ್ಗಾ ರೂಪಗಳಿಂದ ಶ್ರೀ ಲಕ್ಷ್ಮೀದೇವಿಯು ಅಭಿಮಾನಿಯು. ಇಂತಹ ರಮಾಭಿಮನ್ಯಮಾನವಾದ, ತ್ರಿಗುಣಾತ್ಮಕವಾದ, ಷೋಡಶಕಳಾತ್ಮಕವಾದ ಈ ಅನಾದಿಲಿಂಗಶರೀರವೇ ಅನಾದಿಕರ್ಮದ ಬೀಜಸ್ಥಾನವು. ತ್ರಿಗುಣಗಳ ವೈಷಮ್ಯದಿಂದ ಕರ್ಮಾಭಿವ್ಯಕ್ತಿ. ಈ ಅನಾದಿಕರ್ಮ ಪರಂಪರೆಯೇ ಬಂಧನಕ್ಕೆ ಕಾರಣವು. ಜೀವನಸ್ವರೂಪದೇಹದ ಸುತ್ತಲೂ **ಸಾವಕಾಶವಾಗಿ** ಹೊಂದಿಕೊಂಡಿರುವ ಈ ಅನಾದಿಲಿಂಗವನ್ನು ಶ್ರೀ ಪರಮಾತ್ಮನು ಅಘಟನಾಘಟನಶಕ್ತಿಯಿಂದ ತನ್ನ ಇಚ್ಛಾಮಾತ್ರದಿಂದಲೇ ಉಪಚಯಗೊಳಿಸಿ, ಅಪ್ರಾಕೃತಸ್ವರೂಪದೇಹಕ್ಕೆ ಪ್ರಾಕೃತದ ಸಂಪರ್ಕವನ್ನುಂಟುಮಾಡುವದು. ಇದೇ ಶ್ರೀಹರಿಯ ಇಚ್ಛಾರೂಪವಾದ ಬಂಧಕ ಶಕ್ತಿಯು. ಇದರಿಂದಲೇ ಜೀವನಿಗೆ "ನಾನು ನನ್ನದು"-ಎಂಬ ಅಹಂ ಮಮಕಾರಗಳ ಪ್ರಪ್ರಥಮ ಉತ್ಪತ್ತಿ. ಇದೇ ಸಂಸಾರರೂಪವಾದ ಭವಬಂಧನಕ್ಕೆ ಕಾರಣವಾಗುವುದು. ಅಲ್ಲಿಂದ ಅನಾದಿಲಿಂಗಶರೀರದ ಮೇಲೆ ಅನಿರುದ್ಧ ಶರೀರದ ನಿರ್ಮಾಣ. ಇದರಲ್ಲಿ ಆ ಜೀವನು ಮುಂದೆ ಜನಿಸಬೇಕಾದ ಯೋನಿಗಳಿಗೆ ಕಾರಣವಾದ ಕರ್ಮಪರಂಪರೆಯು ಸಂಚಯವು ಕಾರಣರೂಪದಲ್ಲಿರುವುದು. ಈ ಕರ್ಮಕಾರಣ

ಸರಣಿಯ ಕ್ರಿಯೆ ಅನಾದಿಲಿಂಗದೇಹದಿಂದ ಅನಿರುದ್ಧ ದೇಹಕ್ಕೆ ವ್ಯಾಪ್ತವಾಗಿ, ಅದರ ಮೂಲಕ ಸ್ಥೂಲದೇಹಗಳ ಉತ್ಪತ್ತಿ. ಮಾನವಜನ್ಮ ಬಂದಾಗ, ಈ ಸ್ಥೂಲಶರೀರ ಅತ್ಯಮೂಲ್ಯವಾದುದು. ದೇವಮಂದಿರವಾದ ಈ ಸಾಧನ ಶರೀರದಿಂದಲೇ ಸಕಲ ಸಾಧನೆಗಳ ಸ್ಥಿತಿ. ಅದರಿಂದ ಜ್ಞಾನ, ಭಕ್ತಿ, ವೈರಾಗ್ಯಗಳ ಪ್ರಾಪ್ತಿ, ತನ್ಮೂಲಕ ಶ್ರೀಹರಿಯ ಪರಮಾನುಗ್ರಹ. ಅದರಿಂದ ಅಪರೋಕ್ಷಜ್ಞಾನ ಪ್ರಾಪ್ತಿ, ಆಗ ಸಂಚಿತ ಆಗಾಮಿಕರ್ಮಗಳ ನಿವೃತ್ತಿ. ತದನಂತರ ಪ್ರಾರಬ್ಧಕರ್ಮಭೋಗ, ಕರ್ಮಕ್ಷಯಾನಂತರ ವಿರಜಾನದಿಯಲ್ಲಿ ಆದ್ಯ ಬ್ರಹ್ಮಣಾಸಹ ಸ್ನಾನ, ಅದರಿಂದ ಲಿಂಗಭಂಗ. ಸ್ಥೂಲದೇಹದಲ್ಲಿ ಸಾಧನೆ ಮಾಡಿಸುತ್ತಿರುವ ಶ್ರೀ ವಾಯುದೇವರ ವಿನಂತಿಯನ್ನು ಮನ್ನಿಸಿ, ಲಕ್ಷ್ಮೀದ್ವಾರಾ ಮುಕ್ತಿಪ್ರದನಾದ ವಾಸುದೇವನು ಪರಮಾಚ್ಛಾಧಿಕವೆಂಬ ಆವರಣವನ್ನು ಅಪಸರಣಗೊಳಿಸಿ, ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಾನಂದಭಾಗ್ಯವನ್ನು ಕರುಣಿಸುವನು. ಆಗ ಮುಕ್ತಾವಸ್ಥೆಯಲ್ಲಿ ಜೀವರ ಸ್ವರೂಪಯೋಗ್ಯತೆಗೆ ಅನುಸಾರವಾಗಿ ತನ್ನ ಬಿಂಬದರ್ಶನ ಭಾಗ್ಯವನ್ನೀಯುತ್ತಾ, ತನ್ಮೂಲಕ ಜೀವರ ಆನಂದವನ್ನು ಅವರಿಗೇ ಕೊಡುವನು.

೬. ಹೀಗೆ ತನುಚತುಷ್ಟಯಗಳ ವಿವರ, **ಅನಾದಿಲಿಂಗದೇಹದಲ್ಲಿ** ಶ್ರೀ ವಾಯುದೇವರು ನಾಭೀಕಮಲೋದ್ಭವರಾದ ಚತುರ್ಮುಖಬ್ರಹ್ಮದೇವರು (ಸರಸಿಜಾಸನ) ವಾಗಾಭಿಮಾನಿಗಳಾದ ಸರಸ್ವತೀ (ವಾಣಿ), ತಮ್ಮ ನೀತ ಪತ್ನಿಯರಾದ ಭಾರತೀದೇವಿಯರು ಈ ಮೂವರಿಂದೊಡಗೂಡಿ **ಭರತ** ಎಂಬ ನಾಮಧೇಯದಿಂದ ಇದ್ದಾರೆ.

ಈ ವಿಷಯವನ್ನ ಪ್ರಸಕ್ತ ಪದ್ಯದಲ್ಲಿ ದಾಸರಾಯರು– **ಸರಸಿಜಾಸನ ವಾಣಿ ಭಾರತಿ ಭರತನಿಂದೊಡಗೂಡಿ ಲಿಂಗದಿ ಇರುತಿಹನು**-ಎಂದು ತಿಳಿಸುತ್ತಾರೆ. **ಭರತ** ಎಂಬ ಶಬ್ದಾರ್ಥ ವಿವರಣೆ–

(1) ಭ = ಪ್ರಕಾಶಮಾನವಾದ, ಅಂದರೆ ಸಚ್ಚಿದಾನಂದಾತ್ಮಕ ಶರೀರವುಳ್ಳ ಕೋಟಿ ಸೂರ್ಯ ಪ್ರಕಾಶಮಾನವಾದ, ಶ್ರೀ ಪರಮಾತ್ಮನಲ್ಲಿ **ರತ** =

ಯಾವಾಗಲೂ ನಿರವಧಿಕ ರತಿ ಅಂದರೆ ಭಕ್ತಿಯುಳ್ಳವನಾದ್ದರಿಂದ ಶ್ರೀ ವಾಯುದೇವರಿಗೆ **ಭರತ** ಎಂದು ನಾಮ.

(2) ಸರ್ವರನ್ನು ಭರಣ ಅಥವಾ ಧಾರಣ ಮಾಡಿಕೊಂಡು ಆಶ್ರಯ ದಾತನಾದುದರಿಂದ ಭರತನೆಂದು ಕರೆಯುವರು.

**ಪ್ರಮಾಣ :-**

(೧) **"ರತತ್ವಾದ್ಭಾನಾಮಕೇ ವಿಷ್ಣಾವಿತ್ಯುಕ್ತೇಃ ॥"**

**ಶ್ರೀ ಭಾಗವತ ತಾತ್ಪರ್ಯ ನಿರ್ಣಯ.**

(೨) **"ಪ್ರಾಣೋಹಿ ಭರತೋನಾಮ ಸರ್ವಸ್ಯ ಭರಣಾಚ್ಛ್ರುತ ಇತಿ ॥"**

**-ಶ್ರೀ ಮನ್ಮಹಾಭಾರತ ತಾತ್ಪರ್ಯ ನಿರ್ಣಯ.**

೭, ಬ್ರಹ್ಮ, ಸರಸ್ವತೀ. ವಾಯು, ಭಾರತೀ ಈ ನಾಲ್ವರನ್ನು ಬಿಟ್ಟು, ಉಳಿದ ಗರುಡ, ಶೇಷ ರುದ್ರಾದಿದೇವತೆಗಳಿಗೆ ಅನಾದಿಲಿಂಗ ಶರೀರದಲ್ಲಿ ವ್ಯಾಪ್ತಿ ಇಲ್ಲ ಎಂದು. **ಮಿಕ್ಕಾದಿತೇಯರಿಗಿಲ್ಲವಾಸ್ಥಾನ**— ಎಂದು ಹೇಳಿರುತ್ತಾರೆ. ಅವರೆಲ್ಲರೂ ಅನಿರುದ್ಧ ಶರೀರದಲ್ಲಿ ಶ್ರೀ ವಾಯು ದೇವರ ವಶದಲ್ಲಿದ್ದು, ಸ್ಥೂಲದೇಹದಲ್ಲಿ ವ್ಯಾಪಾರಗಳನ್ನು ಮಾಡು ವರು.

೮. **ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ,** ಶ್ರೀ ವಾಯುದೇವರಿಗೆ ಜೀವನ ಸ್ವರೂಪದೇಹದಲ್ಲಿ ಪ್ರವೇಶವಾಗಲೀ, ವ್ಯಾಪ್ತಿ ಯಾಗಲೀ, ವ್ಯಾಪಾರಾದಿಗಳಾಗಲೀ ಸುತರಾಂ ಇಲ್ಲವೇ ಇಲ್ಲವೆಂದು ಖಡಾ ಖಂಡಿತವಾಗಿ ಹೇಳಿರುತ್ತಾರೆ. ಆವರೂ ಸಹ ಮೇಲಿನ **ಪವಮಾನ ಸಂಹಿತಾ, ನ್ಯಾಯ ವಿವರಣ,** ಇತ್ಯಾದಿ ಗ್ರಂಥಗಳಿಂದ ಪ್ರಮಾಣಗಳನ್ನು ಉದ್ಧರಿಸು ತ್ತಾರೆ.

ಇಲ್ಲಿ ಗಮನಿಸಬೇಕಾದ ಹಾಗೂ ವಿವೇಚಿಸಬೇಕಾದ ವಿಷಯಗಳು,

(೧) ಶ್ರೀ ವಾಯುದೇವರು ಜೀವಕೋಟಿಯಲ್ಲಿ ಹಿರಿಯರು.

ಜೀವೋತ್ತಮರಾದ್ದರಿಂದ ತ್ರಿವಿಧಜೀವರ ಸ್ವರೂಪಯೋಗ್ಯತೆಯನ್ನು ಸಾಕಲ್ಯೇನ ಬಲ್ಲವರು. ಜೀವರ ಸ್ವರೂಪವು ಪರಮಮುಖ್ಯವೃತ್ತಿಯಿಂದ ಭಗವದಧೀನವಾಗಿರುವುದು. ಭಗವದಾಜ್ಞೆಯಿಂದ. ಶ್ರೀಹರಿಯ ನಂತರ ಸಮಸ್ತ ಜೀವರ ಸಾಧನಾದಿಗಳಿಗೆ ಶ್ರೀ ವಾಯುದೇವರೇ ಅವಾಂತರ ಪ್ರವರ್ತಕರು.

**"ಸ್ವರೂಪೇಂದ್ರಿಯದೇಹೇಷು ಮಾತರಿಶ್ವಾಭಿಧಾನತಃ ।**
**ಧತ್ತೇ ಲಿಂಗಶರೀರಸ್ಥಃ ಸೂತ್ರನಾಮಾ ಮಹಾಪ್ರಭುಃ ॥"**

**—ಎಂದು ಭಾಗವತತಾತ್ಪರ್ಯ ದೀಪಿಕಾ ಪ್ರಮಾಣವಿರುವುದರಿಂದ** ಸ್ವರೂಪದ ಇಂದ್ರಿಯಗಳಲ್ಲಿ **ಮಾತರಿಶ್ವಾ** ಎಂಬ ಹೆಸರಿನಿಂದಲೂ ಅನಾದಿ ಲಿಂಗಶರೀರದಲ್ಲಿ **ಸೂತ್ರ** ಎಂಬ ನಾಮಧೇಯದಿಂದಲೂ **ಮಹಾಪ್ರಭು** ಅಂದರೆ ಜೀವೋತ್ತಮರಾದ ಶ್ರೀ ವಾಯುದೇವರು ಸ್ಥಿತರಾಗಿದ್ದಾರೆ ಎಂದು ಸಿದ್ಧವಾಗುವುದು.

**ಶ್ರೀ ಸಂಕರ್ಷಣ ಒಡೆಯರೂ ಸಹ** ತಮ್ಮ ವ್ಯಾಖ್ಯಾನದಲ್ಲಿ **ಮಹಾಪ್ರಭುಃ** ಎಂಬ ಶಬ್ದಕ್ಕೆ **ಶ್ರೀ ವಾಯುದೇವರು** ಎಂತಲೇ ಅರ್ಥಮಾಡಿರುತ್ತಾರೆ. ಅಂದರೆ, ಸ್ವರೂಪೇಂದ್ರಿಯಗಳಲ್ಲಿ ಹಾಗೂ ಅನಾದಿ ಲಿಂಗದೇಹದಲ್ಲಿ ವಾಯುದೇವರ ವ್ಯಾಪ್ತಿ ಸಿದ್ಧವಾಯಿತು.

**(೨) "ಘರ್ಮಾಸಮಂತಾ ತ್ರಿವೃತವ್ಯಾಪತುಸ್ತಯೋರ್ಜುಷ್ಟಂ ಮಾತರಿಶ್ವಾ ಜಗಾಮ ॥"**
**–ಎಂಬ ಶೃತಿ ಪ್ರಮಾಣವಿದೆ.**

ಇದರಂತೆ, ಮಾತರಿಶ್ವಾ ಎಂಬ ಹೆಸರಿನಿಂದ ಸ್ವರೂಪದೇಹಗತ ಇಂದ್ರಿಯಗಳಲ್ಲಿ ಪ್ರವೇಶಿಸಿದ್ದಾರೆ (ಜಗಾಮ) ಎಂದು ಸ್ಪಷ್ಟವಾಗುವುದು.

ಇದಲ್ಲದೆ, **ತಾಮ್ರವರ್ಣಿಯ ವ್ಯಾಖ್ಯಾನದ ಪ್ರಕಾರ-**

**"ಮನಸ್ಥೇನ ವಿಶೇಷೇಣ ಮನೋಗತೇನ ರೂಪೇಣ ಜ್ಞಾನಂ ಜನಯತಿ ಕಾಮ್ಯೈಃ ಕಾಮಗತ್ಯೈಃ ಕರ್ಮಕರೋತಿ ಪೃಥಕ್‌ಸ್ಥಿತೇನ ಭಗವತ್ಸನ್ನಿಧಿಗತೇನ ಮುಖ್ಯಪ್ರಾಣೇನ ಜೀವಸ್ಥಿತೇನ ಜೀವಸ್ವರೂಪಾಂತಃಕರಣಗತೇನ ಸರ್ವಾನ್ ವಶೀ ಕರೋತಿ ವಶೀ ಇತ್ಯರ್ಥಃ ||"**

ಈ ಪ್ರಮಾಣದಂತೆ, ಭಗವಂತನ **ವಿಶೇಷಸನ್ನಿಧಾನಯುಕ್ತರಾಗಿ** (ಭಗವತ್ಸನ್ನಿಧಿಗತೇನ) ಮುಖ್ಯಪ್ರಾಣದೇವರು, ಅವರೇ **ಮಾತರಿಶ್ವಾ** ನಾಮಾಭಿದರು (ಮುಖ್ಯಪ್ರಾಣೇನ) ಜೀವ ಸ್ವರೂಪದೇಹಗತ ಇಂದ್ರಿಯಗಳಲಿದ್ದು (ಜೀವಸ್ಥಿತೇನ ಜೀವಸ್ವರೂಪಾಂತಃಕರಣಗತೇನ), ತಮಗಿಂತ ಅವರರಾದ ಗರುಡ ಶೇಷ ಭವಾದಿ ಸಮಸ್ತತತ್ತ್ವದೇವತೆಗಳನ್ನಲ್ಲದೆ, ತ್ರಿವಿಧ ಜೀವರನ್ನು (ಸರ್ವಾನ್) ತಮ್ಮ ವಶದಲ್ಲಿ ಇಟ್ಟು ಕೊಂಡಿರುವರು. (ವಶೀಕರೋತಿ). ಈ ಕಾರಣದಿಂದಲೇ ಶ್ರೀ ವಾಯುದೇವರಿಗೆ **ವಶೀ** ಎಂದು ಹೆಸರು. (ವಶೀ ಇತ್ಯರ್ಥಃ)

ಶ್ರೀ ವಾಯುದೇವರು, ಶ್ರೀಹರಿಯು ಸ್ವರೂಪದೇಹಾದ್ಯಂತ ಕೇಶವಾದಿ ಕೃಷ್ಣಾಂತ ಭಗವದ್ರೂಪಗಳಿಂದ ಹೇಗೆ ವ್ಯಾಪ್ತನಾಗಿದ್ದು, ಕಾರ್ಯ ಮಾಡಿಸುತ್ತಾನೆಯೋ **(ಹರಿಯಂತೆ)**, ಅಂತೆಯೇ ಅವನ ಪ್ರಥಮಾಂಗರಾಗಿದ್ದು, ಅವನ ಆಜ್ಞಾಧಾರಕನಾಗಿ, ಅವನಿಂದ ಪ್ರೇರಿತರಾಗಿ, ಸ್ವರೂಪದೇಹದ ಅವಯವಗಳಲ್ಲಿ ನಿಯಾಮಕರಾಗಿದ್ದಾರೆ. ಸ್ವರೂಪಗತ ಕ್ರಿಯೆಗಳನ್ನು ಶ್ರೀ ಪರಮಾತ್ಮನೇ ಬಿಂಬಕ್ರಿಯಾ ದ್ವಾರಾ ಶ್ರೀ ವಾಯುದೇವರದ್ವಾರಾ ಮಾಡಿ ಮಾಡಿಸುತ್ತಿರುವನು ಎಂದು ತಾತ್ಪರ್ಯ. **ಮಾತರಿಶ್ವಾ** ಎಂಬ ಹೆಸರು **ಪರಮಮುಖ್ಯ** ವೃತ್ತಿಯಿಂದ ಶ್ರೀ ಪರಮಾತ್ಮನಿಗೆ ಸಲ್ಲುವುದು. ತದನಂತರ ಶ್ರೀ ವಾಯುದೇವರಿಗೆ.

(೨) ಅನಾದಿಲಿಂಗದೇಹವು ತ್ರಿಗುಣಾತ್ಮಕವಾದದ್ದು. ಮೂಲ ಪ್ರಕೃತಿಯ ಧರ್ಮಗಳಾದ ಸತ್ತ್ವ ರಜಸ್ತಮೋಗುಣಗಳೆಂಬ ಗುಣತ್ರಯ

ಗಳು ಸೂಕ್ಷ್ಮವಾಗಿದ್ದು, ಅವುಗಳಿಗೆ ಸಾಕ್ಷಾತ್ ಶ್ರೀ ಲಕ್ಷ್ಮೀದೇವಿಯೇ ಶ್ರೀ ಭೂ ದುರ್ಗಾ ರೂಪಗಳಿಂದ ಅಭಿಮಾನಿಗಳಾಗಿದ್ದಾರೆ. ಈ ಕಾರಣದಿಂದ ಅನಾದಿಲಿಂಗದೇಹದಲ್ಲಿ ಶ್ರೀ ಲಕ್ಷ್ಮೀದೇವಿಯರಿಗೆ ವ್ಯಾಪ್ತಿ ಮತ್ತು ನಿಯಾಮಕತ್ವ ಮಾತ್ರವೇ ಹೊರ್ತು, ಬ್ರಹ್ಮ, ವಾಯು, ಭಾರತೀ, ಸರಸ್ವತಿಯರಿಗಲ್ಲ – **ಇದು ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ತಾತ್ಪರ್ಯ.**

ಅನಾದಿಲಿಂಗವು ತ್ರಿಗುಣಾತ್ಮಕವಾದದ್ದು, ರಮಾಭಿಮನ್ಯಮಾನ ವಾಗಿರುವುದು ನಿಜವೇ. ಅಲ್ಲಿ ಬಿಂಬನಾದ ಶ್ರೀಹರಿಯು ವಿಶ್ವ. ತೈಜಸ ಮತ್ತು ಪ್ರಾಜ್ಞ ರೂಪಗಳಿಂದ, ಶ್ರೀ, ಭೂ, ದುರ್ಗಾ ರೂಪಗಳಾದ ಶ್ರೀ ಲಕ್ಷ್ಮೀದೇವಿಯಲ್ಲಿ ಅಂತಸ್ಥಿತನಾಗಿದ್ದು ಗುಣಕಾರ್ಯಮಾಡಿ ಮಾಡಿಸು ವನು. ಪರಮ ಮುಖ್ಯವೃತ್ತಿಯಿಂದ ಶ್ರೀ ಪರಮಾತ್ಮನೇ ಮುಖ್ಯನಿಯಾ ಮಕನು. ಅವನ ಆಜ್ಞಾಧಾರಕಳಾಗಿ ಶ್ರೀ ರಮಾ, ಅದರಂತೆಯೇ ಶ್ರೀ ಲಕ್ಷ್ಮೀನಾರಾಯಣ ವಶದಲ್ಲಿದ್ದು ಅವರಿಂದ ಪ್ರೇರಿತರಾಗಿ ಭರತ ನಾಮಕರಾಗಿ ಶ್ರೀ ವಾಯುದೇವರು ಅನಾದಿಲಿಂಗದಲ್ಲಿದ್ದಾರೆ ಎಂದು ತಿಳಿಯುವುದು ಶಾಸ್ತ್ರಾರ್ಥಕ್ಕೆ ವಿರೋಧ ಬರುವುದಿಲ್ಲ. ಸ್ವರೂಪೇಂದ್ರಿಯಗಳಲ್ಲಿಯೇ ಭಗವತ್ಸನ್ನಿಧಾನಯುಕ್ತರಾಗಿ ಇದ್ದಾರೆಂದಮೇಲೆ, ಆದರ ಹೊರಗಿನ ಆವರ್ತ ಪ್ರಕೃತಿ ಸಂಬಂಧವಾದ ಅನಾದಿಲಿಂಗದಲ್ಲಿ ಭಗವಧೀನರಾಗಿ, ಶ್ರೀ ಲಕ್ಷ್ಮಿಯ ವಶದಲ್ಲಿದ್ದಾರೆ ಎನ್ನುವುದು ಅಯುಕ್ತವೇನಲ್ಲ.

**(೪) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ–**

ಅನಾದಿ ಲಿಂಗದ ಮೇಲೆ ಸೃಷ್ಟಿಕಾಲದಲ್ಲಿ ಲಿಂಗೋಪಾದಾನದಿಂದ ಲಿಂಗ ದೇಹಗತ ತ್ರಿಗುಣಗಳ ಸಂಕಲನದಿಂದ ಒಂದು ಶರೀರ ಉತ್ಪತ್ತಿಯಾಯಿತು, ಇದಕ್ಕೆ **ಅಣುಲಿಂಗ** ಅಥವಾ **ವೈಷಯಿಕ ಲಿಂಗ** ಎಂದು ಹೆಸರು. ಈ ರೀತಿ ಇನ್ನೊಂದು ಲಿಂಗಶರೀರದ ಪ್ರಸ್ತಾಪವಿದೆ. ಈ ಅಣುಲಿಂಗವು ಸಾದಿ ಯಾದದ್ದು, ಈ ಅಣುಲಿಂಗದಲ್ಲಿ ಬ್ರಹ್ಮ, ವಾಯು, ಸರಸ್ವತಿ ಮತ್ತು ಭಾರತೀ ಈ ನಾಲ್ವರು ಇದ್ದಾರೆ ಎಂದು ಹೇಳಿರುತ್ತಾರೆ. ಇತರ ವ್ಯಾಖ್ಯಾನ

ಕಾರರಾರೂ ಈ ಅಣುಲಿಂಗದ ವಿಚಾರವನ್ನೇ ಹೇಳಿಲ್ಲ. ಅಲ್ಲದೆ ಶ್ರೀಮದ್ಧರಿಕಥಾಮೃತಸಾರದ ಉದ್ದಕ್ಕೂ ಯಾವ ಪದ್ಯದಲ್ಲಿಯೂ ಅಣುಲಿಂಗ– ಎಂತ ಶಬ್ದ ಪ್ರಯೋಗ ಕಂಡುಬಂದಿಲ್ಲ. ಈ ಅಣುಲಿಂಗದ ಬಗ್ಗೆ ಕೊಟ್ಟಿರುವ ಪ್ರಮಾಣಗಳಲ್ಲಿಯೂ ಸಹ ಆ ಶಬ್ದಾರ್ಥ ಪ್ರಯೋಗವಿಲ್ಲ. ಪ್ರಾಕಾರಾಂತವಾಗಿ ಅರ್ಥಮಾಡಬೇಕಾಗುತ್ತದೆ, ಈ ದೂರಾನ್ವಯವನ್ನು ಒಪ್ಪಿದರೆ, ಅಣುಲಿಂಗದ ವಿಚಾರ ಪರಿಶೀಲಿಸಬೇಕಾಗುತ್ತದೆ.

ಇದಲ್ಲದೆ ಇದೇ ಶ್ರೀಮದ್ಧರಿಕಥಾಮೃತಸಾರದಲ್ಲಿ **ನಾಡೀ ಪ್ರಕರಣ ಸಂಧಿಗತ 44 ನೆಯ ಪದ್ಯವನ್ನ ಪರಿಶೀಲಿಸಿದರೆ–**

**ಈರೆರಡು ದೇಹದೊಳೊಗಿದ್ದು ಸ ।**
**ಮೀರ ದೇವನು ಶ್ವಾಸಜಪ ನಾ ।**
**ಲೂರಧಿಕವಾಗಿಪ್ಪ ಎಂಭತ್ತಾರುಸಾಹಸ್ರ ॥**
**ತಾ ರಚಿಸುವನು ದಿವಸ ಒಂದಕೆ ।**
**ಮೂರುವಿಧ ಜೀವರೊಳಗಿದ್ದು ಖ ।**
**ರಾರಿ ಕರುಣಾಬಲವಿದೆಂತುಟೋ ಪವನರಾಯನೊಳು ॥೪೪॥**

ಪದ್ಯದಲ್ಲಿ **ಈರೆರಡು ದೇಹದೊಳಗಿದ್ದು** – ಎಂದು ಸ್ಪಷ್ಟ ನಿರೂಪಣೆ ಇದೆ. ಈರೆರಡು, ಎಂದರೆ ೨ × ೨ = ೪ ಎಂದರ್ಥ, ಅಂದರೆ ತನುಚತುಷ್ಟಯಗಳೆಂದರ್ಥವಾಗುವುದು. ಅವೇ ಪ್ರಸಿದ್ಧವಾದ (1) ಸ್ಥೂಲದೇಹ. (2) ಅನಿರುದ್ಧದೇಹ. (3) ಲಿಂಗದೇಹ ಮತ್ತು (4) ಸ್ವರೂಪದೇಹಗಳೆಂಬ ನಾಲ್ಕು ಪ್ರಕಾರವಾದ ದೇಹಗಳು. **ಇವುಗಳೊಳಗಿದ್ದು ಸಮೀರ ದೇವನು** – ಎಂದಿರುವುದರಿಂದ ಮಹಾಪ್ರಳಯಕಾಲದಲ್ಲಿಯೂ ಜಾಗ್ರತನಾಗಿದ್ದು, ಜ್ಞಾನತಿರೋಧಾನವಿಲ್ಲದ ಸರ್ವಜ್ಞರಾದ ಶ್ರೀ ವಾಯುದೇವರಿಗೆ **ಸಮೀರ (ಸಮ್ಯಕ್ ಈರಃ)** ಎಂದು ಹೆಸರು. ಇಂತಹ ಸಮೀರಾಭಿದ ಶ್ರೀವಾಯುದೇವರು ತನುಚತುಷ್ಟಯ.ಗಳಲ್ಲಿದ್ದು, ಶ್ವಾಸಜಪ ಪ್ರತಿ

ದಿವಸದಲ್ಲಿಯೂ ತ್ರಿವಿಧ ಜೀವರೊಳಗಿದ್ದು ತಾವೇ ರಚಿಸುವರು, ಎಂದು ಸ್ಪಷ್ಟೋಕ್ತಿ ಇದೆ. ಪ್ರತಿ ದೇಹದಲ್ಲಿಯೂ ದಿನದ ೨೪ ತಾಸುಗಳಲ್ಲಿ ೨೧,೬೦೦ ಶ್ವಾಸ ಜಪಗಳಂತೆ. ನಾಲ್ಕು ದೇಹಗಳಲ್ಲಿ ೨೧,೬೦೦ × ೪ = ೮೬,೪೦೦ ಆಗುವುದು. ಈ ಸಂಖ್ಯೆಯನ್ನೇ ದಾಸರಾಯರು- **ನಾನೂರಧಿಕವಾಗಿಪ್ಪ ಎಂಭತ್ತಾರು ಸಹಸ್ರ**-ಎಂದಿದ್ದಾರೆ. ಅಂದರೆ ಎಂಭತ್ತಾರು ಸಹಸ್ರ + ಮೇಲೆ ನಾನೂರು = ಎಂಭತ್ತಾರು ಸಾವಿರದ ನಾನೂರು (೮೬,೪೦೦) ಆಗುವುದು ಈ ಸಂಖ್ಯೆ ಲೆಕ್ಕಕ್ಕೆ ಸರಿಹೋಗುವುದು.

**ಶ್ರೀಸಂಕರ್ಷಣಒಡೆಯರು** ಮಹಾ ಜ್ಞಾನಿಗಳು, ಶ್ರೀಮದುತ್ತರಾದಿಮಠದ ಮಹಾಪೀಠಿಗೆಯಲ್ಲಿ ವಿರಾಜಮಾನರಾಗಿದ್ದ **ಶ್ರೀ ಸತ್ಯಪರಾಯಣತೀರ್ಥರಿಂದ** ಯಾತ್ಯಾಶ್ರಮ ಪಡೆದ ಮಹಾನುಭಾವರು, ಸಕಲ ಶಾಸ್ತ್ರಕೋವಿದರು. ವಿದ್ವನ್ಮಣಿಗಳು. ಶಾಸ್ತ್ರಪರಿಚಯವಿರುವ ಆ ಮಹಾಜ್ಞಾನಿಗಳು ಪ್ರಮಾಣ ಪ್ರಮಿತರಾಗಿಯೇ ತತ್ವಗಳನ್ನು ನಿರೂಪಿಸುವರು. ಆದರೆ ಜೀವನಸ್ವರೂಪ ದೇಹದಲ್ಲಿ ವಾಯುದೇವರ ಪ್ರವೇಶ, ಅವರ ಅಸ್ತಿತ್ವ. ಕಾರ್ಯ ಈ ಪ್ರಮುಖ ಅಂಶಗಳೇ ವಿಚಾರಣೀಯ. ಹಾಗೆ ಅಭಿಪ್ರಾಯ ವಿರೋಧ ಬಂದಾಗ, ಶ್ರುತಿಸ್ಮೃತಿಗಳ ಪ್ರಮಾಣವಲ್ಲದೇ, ಗ್ರಂಥಕರ್ತೃಗಳ ಅರ್ಥನಿರೂಪಣೆಯನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಬೇಕಾಗುವುದು. ಪ್ರಮಾಣದ ಬಲಾಧಿಕ್ಯದಿಂದ ವಿವೇಚಿಸಬೇಕು. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನದ ಪ್ರಕಾರ ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವದಲ್ಲಿ ಅವರ ವ್ಯಾಪ್ತಿಯನ್ನು ಒಪ್ಪಬೇಕೆಂದು ಹೇಳಿರುವರು. ಹೃತ್ಕಮಲದ ಕರ್ಣಿಕಾಮಧ್ಯ ಇರುವ ಮೂಲೇಶನ ಪಾದಾಶ್ರಿತನಾಗಿ ಶ್ರೀ ವಾಯುದೇವರು ಇದ್ದಾರೆ. ಆ ವಾಯುದೇವರ ಪಾದಶ್ರಿತನಾಗಿರುವ ಜೀವನಿಗೆ ಶ್ರೀ ವಾಯುಗೋಳಕ ದ್ವಾರವೇ ಭಗವದಪರೋಕ್ಷ ದ್ವಾರಾ ಬಿಂಬದರ್ಶನ ಇತ್ಯಾದಿ ತತ್ತ್ವಗಳ ಆಧಾರಗಳ ಮೇಲೆ ಈ ಕೆಳಕಂಡ ವಿಷಯಗಳನ್ನು ವಿವೇಚಿಸಬಹುದು.

(೧) ವಾಯುದೇವರು ಸ್ಥೂಲಶರೀರಗತರಾಗಿ, ದೇಹಾದ್ಯಂತ ಹಬ್ಬಿ ಹರಡಿರುವ ೭೨,೦೦೦ ಸಂಖ್ಯಾಕವಾದ ನಾಡೀವ್ಯೂಹದಲ್ಲ **ಬೃಹತೀ**

**ಋಗ್ವಾಚ್ಯನಾದ** ಶ್ರೀ ಪರಮಾತ್ಮನನ್ನು ಸೇವಿಸುತ್ತಾ ಬೃಹತೀನಾಮಕರಾಗಿ ಸಂಚರಿಸುತ್ತಾ. ದಿನ ಒಂದಕ್ಕೆ ಪ್ರತಿ ಜೀವರಲ್ಲೂ ೨೧,೬೦೦ ಶ್ವಾಸ ಮಂತ್ರಗಳ ಜಪಮಾಡುತ್ತಾ, ಹಂಸನಾಮಕ ಪರಮಾತ್ಮನ ಪಾದಾರವಿಂದಗಳಲ್ಲಿ ಆ ಶ್ವಾಸಜಪ ಫಲವನ್ನು ಅರ್ಪಿಸುತ್ತಾ, ತ್ರಿವಿಧ ಜೀವರಿಗೆ ಅವರವರ ಸ್ವರೂಪಯೋಗ್ಯತೆಗೆ ತಕ್ಕಂತೆ ನಿತ್ಯಸುಖ, ಸುಖ ದುಃಖಮಿಶ್ರತವಾದ ಫಲ ಮತ್ತು ಅಪಾರ ದುಃಖಗಳನ್ನು ಶ್ರೀಹರಿಯ ಆಜ್ಞಾಧಾರಕರಾಗಿ ಕೊಡುತ್ತಿರುವರು.

(೨) ಶ್ರೀ ವಾಯುದೇರು ಶ್ರೀ ಪರಮಾತ್ಮನಿಗೆ ಪ್ರಥಮಾಂಗಭೂತರು. ಶ್ರೀಹರಿಗೆ ಮುಖ್ಯಪ್ರತೀಕರಾದ ಶ್ರೀವಾಯುದೇವರಲ್ಲಿ ಭಗವತ್ಸನ್ನಿಧಾನ ವಿಶೇಷ ಇತರ ಎಲ್ಲಾ ದೇವತೆಗಳಿಂತಲೂ ಅಧಿಕ. ಇದರಿಂದ ಭಗವಧೀನರಾಗಿ, ಅವನ ಪ್ರೇರಣೆಯಂತೆ ತನುಚತುಷ್ಟಯಗಳಲ್ಲಿ (ಈರೆರಡು ದೇಹಗಳಲ್ಲಿ) ವ್ಯಾಪ್ತರಾಗಿರುವ ಶಕ್ತಿ ದೈವದತ್ತವಾಗಿದೆ.

(೩) ಅಸೃಜ್ಯರಾಶಿಯಲ್ಲಿ ಜೀವರ ಸ್ವರೂಪದಲ್ಲಿ ವ್ಯಾಪ್ತರಾಗಿದ್ದರೇ ಸೃಷ್ಟಿಯಾದ ನಂತರ ಅವರ ಪ್ರವೇಶ ಯಾವಾಗ ? ಇತ್ಯಾದಿ ಪ್ರಶ್ನೆಗಳಿಗೆ ಸಮಾಧಾನ:-

(1) ಅಸೃಜ್ಯರಾಶಿಯಲ್ಲಿ ಜೀವರ ಸ್ವರೂಪದೇಹದಲ್ಲಿ ಶ್ರೀ ಪರಮಾತ್ಮನೇ **ಮಾತರಿಶ್ವಾ** ಎಂಬ ಅಭಿಧಾನದಿಂದ ಶ್ವಾಸಕಾರ್ಯ ಮಾಡಿಸುತ್ತಾನೆ.

(2) ಸಾವಕಾಶವಾಗಿಪ್ಪ ಲಿಂಗ ಶರೀರದ ಉಪಶಯದಿಂದ ಸ್ವರೂಪ ಶರೀರಕ್ಕೆ ಅನಾದಿಕರ್ಮ ಸಂಬಂಧ ಏರ್ಪಡುವುದು ಶ್ರೀಶನ ಇಚ್ಛೆಯಿಂದ. ಆಗ ಸೃಷ್ಟಿಯು ಆರಂಭ ಅನಾದಿಲಿಂಗಶರೀರವು ಪ್ರಾರಬ್ಧಕರ್ಮಬೀಜದ ಕೇಂದ್ರ, ಆ ಕರ್ಮಕ್ಷಯವಾಗುವುದಕ್ಕೆ ಬೇಕಾಗುವ ಸಾಧನ ಸಲಕರಣೆಗಳ ಕ್ರಮಾಗತಿಯೇ ಜನನ ಮರಣಾಖ್ಯವಾದ ತ್ರಿಗುಣಗಳ ಕಾರ್ಯರೂಪವಾದ ಈ ಸಂಸಾರಬಂಧನವು. ಇದಕ್ಕಾಗಿಯೇ ಅನಿರುದ್ಧ ದೇಹದ ನಿರ್ಮಾಣ ಮತ್ತು ಸ್ಥೂಲದೇಹದ ಪ್ರಾಪ್ತಿ,

(3) ಸಾಧನ ಶರೀರಿವೆಂಬ ಈ ಸ್ಥೂಲಶರೀರದಲ್ಲಿ ಜೀವನು ದೇಹಾದ್ಯಂತ ಸರ್ವಾಂಗಾದಿಗಳಲ್ಲಿ ಪ್ರಕಾಶಿತೋವ್ಯಾಪ್ತನಾಗಿದ್ದಾನೆ. ಪ್ರಕಾಶಿತೋವ್ಯಾಪ್ತನಾದ ಜೀವದಲ್ಲಿ ಶ್ರೀ ವಾಯುದೇವರ ಪ್ರವೇಶ (ವ್ಯಾಪ್ತಿ) ಎಂದು ವ್ಯಾಖ್ಯಾನಕಾರರ ಪ್ರಕಾರ ಪರಿಗಣಿಸಿದರೆ. ಶ್ವಾಸಮಂತ್ರಗಳನ್ನು ತಾವೇ ರಚಿಸಿ, ಜೀವರ ಸ್ಥೂಲದೇಹದಲ್ಲಿ ಶ್ವಾಸಕ್ರಿಯಾರೂಪವಾದ ಕಾರ್ಯ ಮಾಡಿಸುತ್ತಾ ಆ ಮಂತ್ರ ಜಪ ಸಮರ್ಪಣೆಯನ್ನು ಜೀವನ ಬಿಂಬನಿಗೂ ಸುದೇಹಸ್ಥ ಬಿಂಬನಿಗೂ ಐಕ್ಯಚಿಂತನೆಮಾಡಿ. ಅವನ ಚರಣಕಂಜಗಳಲ್ಲಿ ಅಹರ್ನಿಶಿ ಅರ್ಪಿಸುತ್ತಾ (ಬ್ರಹ್ಮಕಲ್ಪ ಪರ್ಯಂತ), ತ್ರಿವಿಧಜೀವರಿಗೆ ಅವರವರ ಸ್ವರೂಪಯೋಗ್ಯತಾನುಸಾರ ಗತಿಪ್ರದರಾದ ಶ್ರೀಪವನರಾಯ್ವರಲ್ಲಿ ಈಶನ ಪರಮಾನುಗ್ರಹ ಅದೆಂತುಟೋ ಎಂದು ಉದ್ಗಾರ ತೆಗದಿರುತ್ತಾರೆ ದಾಸರಾಯರು. ತ್ರಿವಿಧಜೀವರ ಗತಿಪ್ರಾಪ್ತಿ ಲಿಂಗದೇಹ ಭಂಗವಾದ ನಂತರ. ವಿರಜಾನದಿಯ ಸ್ನಾನದಿಂದ ಮುಕ್ತಿಯೋಗ್ಯಚೇತನರ ಲಿಂಗಭಂಗವೂ, ನಿತ್ಯ ಸಂಸಾರಿಗಳ (ರಾಜಸರ) ಲಿಂಗ ಭಂಗವು **ಶ್ರೀವಾಯುದೇವರ ಹುಂಕಾರದಿಂದಲೂ** ಮತ್ತು ತಮೋಯೋಗ್ಯರ ಲಿಂಗಭಂಗವು **ಶ್ರೀ ವಾಯುದೇವರ ಗದಾಪ್ರಹಾರದಿಂದಲೂ** ಆಗುವುದೆಂದು ಶಾಸ್ತ್ರೋಕ್ತ ಪ್ರಮಾಣಗಳಿರುವುದರಿಂದ, ನಾಲ್ಕು ದೇಹಗಳಲ್ಲಿಯೂ ಶ್ರೀ ವಾಯುದೇವರ ವ್ಯಾಪ್ತಿಯನ್ನು ಒಪ್ಪುವುದಕ್ಕೆ ಶಾಸ್ತ್ರವಿರೋಧ ರೂಪವಾದ ಬಾಧಕವೇನೂ ಬರುವುದಿಲ್ಲ.

(4) ಶ್ರೀ ಪರಮಾತ್ಮನ ಪ್ರೇರಣೆ ಶ್ರೀ ವಾಯುದೇವರಿಗೆ. ಶ್ರೀ ವಾಯುದೇವರ ಪ್ರೇರಣೆ ತತ್ತ್ವೇಶರ ದ್ವಾರಾ ಜೀವರಿಗೆ ಹೀಗೆ ಜೀವರಿಗೆ ಸ್ವೋತ್ತಮರಾದ ತತ್ತ್ವಾಭಿಮಾನಿ ದೇವತೆಗಳು ಬಿಂಬರು. ಅವರಿಗೆ ಶ್ರೀ ವಾಯುದೇವರು ಬಿಂಬರು ಶ್ರೀ ವಾಯುದೇವರಿಗೆ ಶ್ರೀ ಲಕ್ಷ್ಮೀನಾರಾಯಣನು ಪರಮಮುಖ್ಯವೃತ್ತಿಯಿಂದ ಸರ್ವಪ್ರಕಾರಗಳಲ್ಲಿಯೂ ಮುಖ್ಯ ಬಿಂಬನು. ಹೀಗೆ ತಾರತಮ್ಯ ಕ್ರಮಾನುಸಾರ ಬಿಂಬ–ಪ್ರತಿಬಿಂಬಗಳ ಕ್ರಿಯಾಸರಣಿ ಇರುವುದರಿಂದ, ಜೀವರ ಸ್ವರೂಪೇಂದ್ರಿಯಗಳಲ್ಲಿ ವಾಯುದೇವರಲ್ಲಿ ಅಂತಸ್ಥಿತವಾಗಿ ತಾವೇ **ಮಾತರಿಶ್ವ** ಎಂಬ ಅಭಿಧಾನದಿಂದ ವ್ಯಾಪಾರ

ನಡೆಸಿ, ನಡಯಿಸಿರುತ್ತಿರುವನು. ಈ ಶ್ರೀ ಪರಮಾತ್ಮನ ಸರ್ವಕ್ರಿಯಾ ಪ್ರವರ್ತನ ದೃಷ್ಟಿಯಿಂದ ಸ್ಥೂಲ ಅನಿರುದ್ಧ, ಲಿಂಗ ಮತ್ತು ಸ್ವರೂಪಗಳಲ್ಲಿ ಶ್ರೀ ವಾಯುದೇವರ (ಪ್ರಕಾಶತೋ ವ್ಯಾಪ್ತಿ) ವ್ಯಾಪ್ತಿಯನ್ನು ಒಪ್ಪುವುದು ಯುಕ್ತವು. ಶ್ರೀ ಸಂಕರ್ಷಣ ಒಡೆಯ ವ್ಯಾಖ್ಯಾನವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿರುವ ಮಾಡುತ್ತಿರುವ ಭಗವದ್ಭಕ್ತರು. ಇವರ ವ್ಯಾಖ್ಯಾನೆಗಳನ್ನು ಅವಲೋಕಿಸಿ. ಪರಮ ಮುಖ್ಯವಾದ ಈ ಪ್ರಮೇಯ ವಿಚಾರದಲ್ಲಿ ಜಿಜ್ಞಾಸೆ (ಪ್ರಮಾಣ ಪ್ರಮಿತನಾಗಿ) ಮಾಡಬೇಕೆಂದು ವಿನಂತಿ. ಪಂಡಿತೋತ್ತಮರು ಈ ವಿಷಯದಲ್ಲಿ ಪ್ರಮಾಣಸಹಿತ (ಅರ್ಥವಿವರಣೆಯೊಂದಿಗೆ) ಮಾರ್ಗದರ್ಶನ ತೋರಿದರೆ. ಅವರ ವಿಚಾರಧಾರೆಯನ್ನು ಮುಂದಿನ ಸಂಪುಟದಲ್ಲಿ ಪ್ರತ್ಯೇಕವಾಗಿ ಪ್ರಕಟಿಸಲಾಗುವುದು. ಇದು ಅತ್ಯಂತ ಮುಖ್ಯವಿಚಾರ. ಇದರ ಸ್ಪಷ್ಟವಾದ ಜ್ಞಾನವಿಲ್ಲದಿದ್ದರೆ. ಸಾಧನೆಯಾಗಲಾರದು, ಶ್ರೀ ಹರಿವಾಯುಗುರುಗಳ ಅನುಗ್ರಹಪ್ರಾಪ್ತಿಗಾಗಿ ಆಕಾಂಕ್ಷೆಪಡುವ ಪ್ರತಿ ಸಜ್ಜನರೂ ಈ ತತ್ತ್ವದ ಕಡೆಗೆ ವಿಚಾರಪೂರ್ಣವಾದ ಜಿಜ್ಞಾಸೆ ನಡೆಸಲೇಬೇಕು. ತನ್ಮೂಲಕ ತತ್ತ್ವನಿಶ್ಚಯವಾಗುವುದು. ॥೧೨॥

## ಪದ್ಯ (೧೩)

**ಮೂಲ**

**ಜೀವನಕೆ ತುಷವಂತೆ ಲಿಂಗವು ।**
**ಸಾವಕಾಶದಿ ಪೊಂದಿ ಸುತ್ತಲು ।**
**ಪ್ರಾವರಣರೂಪದಲಿ ಇಪ್ಪುದು ಭಗವದಿಚ್ಛೆಯಲಿ ॥**
**ಕೇವಲ ಜಡಪ್ರಕೃತಿಯುದಕಧಿ ।**
**ದೇವತೆಯು ಮಹಲಕುಮಿ ಎನಿಪಳು ।**
**ಆ ವಿರಜೆಯು ಸ್ನಾನಪರಿಯಂತರದಿ ಹತ್ತಿಹುದು ॥ ॥೧೩॥**

**ಅವತರಣಿಕೆ**

ಜೀವನ ಸ್ವರೂಪದೇಹದ ಸುತ್ತಲೂ ಆವರಣರೂಪದಲ್ಲಿರುವ ಅನಾದಿ ಲಿಂಗದೇಹ ಮತ್ತು ಅದರ ಅಭಿಮಾನಿ ದೇವತೆಯ ವಿವರಗಳನ್ನು ತಿಳಿಸುತ್ತಾರೆ- **ಜೀವನಕೆ-** ಎಂಬ ಪ್ರಸಕ್ತಸಂಧಿಗತ ೧೩ನೆಯ ಈ ಪದ್ಯದಿಂದ ಅತ್ಯಂತ ಸೂಕ್ಷ್ಮರೂಪದಲ್ಲಿರುವ ಜೀವರ ನಿತ್ಯವಾದ ಸ್ವರೂಪದೇಹದ ಸುತ್ತಲೂ ಹೊರಭಾಗದಲ್ಲಿ **ಲಿಂಗಶರೀರವು** ಆವರಣರೂಪದಲ್ಲಿದೆ. ಅಕ್ಕಿಯ ಕಾಳಿನ ಸುತ್ತಲೂ ಹೊರಗಡೆ ಆವರ್ಕವಾಗಿರುವ ಹೊಟ್ಟು (ತುಷ) ಇರುವಂತೆ, ಸ್ವರೂಪ ದೇಹದ ಸುತ್ತಲೂ ಲಿಂಗದೇಹವು ಸಾವಕಾಶವಾಗಿ ಇದೆ. ಲಿಂಗದೇಹವು ಅನಾದಿಯಾದದ್ದು. ಅನಾದಿ ಲಿಂಗದೇಹದ ಒಳಾವರಣಕ್ಕೂ ಸ್ವರೂಪದೇಹದ ಹೊರಾವರಣಕ್ಕೂ ಸ್ಥಳವಿದೆ. ಅಂದರೆ ಸಾವಕಾಶ ಹೊಂದಿದೆ. ಶ್ರೀ ಪರಮಾತ್ಮನ ಇಚ್ಛೆಯಂತೆ ಇರುವ ಅನಾದಿಲಿಂಗಕ್ಕೆ ಜಡಪ್ರಕೃತಿಯ ಸಹಜಧರ್ಮಗಳಾದ ತ್ರಿಗುಣಗಳಿಗೆ ಅಭಿಮಾನಿಯಾದ **ಶ್ರೀ ಲಕ್ಷ್ಮಿದೇವಿಯರು** ಅಧಿದೇವತೆಯು. ಲಕ್ಷ್ಮ್ಯಾತ್ಮಕವಾದ ವಿರಜಾನದಿಯ ಸ್ನಾನ ಪರ್ಯಂತ, (ಮುಕ್ತಿಯೋಗ್ಯ ಜೀವರ ವಿಷಯದಲ್ಲಿ) ಈ ಅನಾದಿಲಿಂಗವು ಸ್ವರೂಪಕ್ಕೆ ಸಂಪರ್ಕ ಹೊಂದಿರುವುದು. ॥೧೩॥

**ಪ್ರತಿಪದಾರ್ಥ**

**ಜೀವನಕೆ** = ಪ್ರತಿ ಜೀವರ ಸ್ವರೂಪದೇಹದ ಸುತ್ತಲೂ. **ತುಷದಂತೆ** = ಅಕ್ಕಿಕಾಳಿಗೆ ಸುತ್ತಲೂ ಆವರಿಸಿರುವ ಹೊಟ್ಟಿನಂತೆ, **ಲಿಂಗವು** = ಅನಾದಿಯಾದ ಲಿಂಗಶರೀರವು, **ಸಾವಕಾಶದಿ** = ಸ್ವರೂಪದೇಹಕ್ಕೂ ಮಧ್ಯೆ ಅವಕಾಶ (ಸ್ಥಳ) ವಿರುವಂತೆ, **ಸುತ್ತಲೂ** = ಜೀವನ ಸ್ವರೂಪ ದೇಹದ ಮೇಲೆ ಆವರಣರೂಪದಲ್ಲಿ **ಪೊಂದಿ** = ಹೊಂದಿಕೊಂಡು, (ಅನಾದಿನಿತ್ಯವಾದ ಸ್ವರೂಪದೇಹದೊಡನೆ ಲಿಂಗಶರೀರವು ಅನಾದಿಯಾಗಿದ್ದು) **ಪ್ರಾವರಣರೂಪದಲಿ** = ಅಕ್ಕಿಯ ಸುತ್ತಲೂ ತುಷ (ಹೊಟ್ಟು) ಇರುವಂತೆ ಸುತ್ತಲೂ ಆವರ್ಕವಾಗಿ **ಭಗವದಿಚ್ಛೆಯಲಿ** = ಶ್ರೀ ಪರಮಾತ್ಮನ ಸಂಕಲ್ಪದಂತೆ **ಇಪ್ಪದು** = ಇರುವುದು. **ಕೇವಲ** = ಅತ್ಯಂತ

ಸೂಕ್ಷ್ಮರೂಪದಲ್ಲಿರುವ (ಮೂಲ) **ಜಡಪ್ರಕೃತಿ** = ತ್ರಿಗುಣಾತ್ಮಕವಾದ ಮೂಲಪ್ರಕೃತಿಯು (ಇದು ಜಡವಾದುದು) **ಇದಕೆ** = ಜಡಸ್ವರೂಪದ ಈ ಮೂಲಪ್ರಕೃತಿಗೆ **ಅಧಿದೇವತೆಯು** = ಅಭಿಮಾನಿದೇವತೆಯಾಗಿ **ಮಹ ಲಕುಮಿ** = ಜಗನ್ಮಾತೆಯಾದ ಮಹಾಲಕ್ಷ್ಮಿಯೇ **ಎನಿಪಳು** = ಅಭಿಮಾನಿ ಎಂದು ಕರೆಯಿಸುವಳು, **ಆ ವಿರಜೆಯ ಸ್ನಾನಪರಿಯಂತರದಿ** = ಪರಮಾತ್ಮನ ಸ್ವೇದಾಪಳೆನಿಪ ಲಕ್ಷ್ಮ್ಯಾತ್ಮಕ ವಿರಜಾನದಿಯ ಸ್ನಾನವಾಗುವ ವರೆಗೂ **ಹತ್ತಿಹುದು** = ಜೀವರ ಸ್ವರೂಪದೇಹಕ್ಕೆ ಸೇರಿಕೊಂಡಿರುವುದು. ॥೧೩॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯ ವ್ಯಾಖ್ಯಾನ

ಅನಾದಿಲಿಂಗಶರೀರಕ್ಕೆ ಅಭಿಮಾನಿಗಳು ಅದವರ ಸ್ಥಿತಿಯನ್ನು ಹೇಳತಾರೆ.

ಅಕ್ಕಿ ಹೊಟ್ಟು ಹ್ಯಾಂಗೆ ತದಾಕಾರವಾಗಿ ಸುತ್ತಿಕೊಂಡು ಇರುತ್ತದೋ ಅದರಂತೆ ಅಂದರೆ, ನೆಲ್ಲಿನಾಗೆ ಆದರ ಮ್ಯಾಲೆ ಹೊಟ್ಟು ಸುತ್ತಿಕೊಂಡು ಅಕ್ಕಿಗೆ ಹೊಟ್ಟಿಗೆ ಒಳಭಾಗದಲ್ಲಿ ಪರಸ್ಪರ ಅವಕಾಶದಿಂದ ಯುಕ್ತವಾಗಿರುತ್ತದೆ. ದಾವಾಗದರೆ ಇಚ್ಛ ಉತ್ಪನ್ನವಾಗಿ ಬೀಜ ಬಿತ್ತೋ ನಿಮಿತ್ತ ಆದಿಯಲ್ಲಿ ನೀರಿನಲ್ಲಿ ನೆನೆಹಾಕಲೂ, ಆಗ್ಗೆ ಹೊಟ್ಟಿಗೂ ಒಳಗಿನ ಅಕ್ಕಿಗೂ ನಿರವಕಾಶದಿಂದ ಸಂಬಧವಾಗಿ ಅಂಕುರವಾದ ನಂತರ ಅದರನ್ನು ಭೂಮಿಯಲ್ಲಿ ಬಿತ್ತುತ್ತಾನೆ. ತುಷದಂತೆ ಎಂಬುದಕ್ಕೆ ಇದು ತಾತ್ಪರ್ಯ– ಇದರೋಪಾದಿಯಲಿ ಬ್ರಹ್ಮಾದಿ ತೃಣಾಂತ ತ್ರಿವಿಧ ಜೀವರೆಂಬ ಬೀಜಗಳಿಗೆ ಅನಾದಿಲಿಂಗ ಶರೀರವೆಂಬ ಹೊಟ್ಟು ಸಾವಕಾಶದಿಂದ ಹೊಂದಿಕೊಂಡು, ಜೀವನ ಮ್ಯಾಲೆ ಸುತ್ತಲೂ ತದಾಕಾರದಿಂದ ಕವಚದೋಪಾದಿಯಲಿ, ಛಂದಾಗಿ ಆವರಣ ರೂಪದಿಂದ ಇರೋದಾಗಿ ಅದೆ, (ಇಂಥಾಕಾಲದಲ್ಲಿ ಜೀವರಿಗೆ ಜಾಗ್ರತಿ ಇಲ್ಲ, ಕರ್ಮವ್ಯಾಪಾರವೂ ಇಲ್ಲ. ಅನಾದಿ ಕರ್ಮ, ಲಿಂಗದ ತೃತೀಯ ಪರಿಚ್ಛೇಧದಲ್ಲಿ ಶಕ್ತ್ಯಾತ್ಮನಾ ಪ್ರವಾಹತ್ವಯೋಗ್ಯತಾದಿಂದ ಇರುತ್ತದೆ.

ಜೀವದಲ್ಲಿ ಅಂಕುರವ್ಯಕ್ತಿ ಇಲ್ಲದೇ ಶಕ್ತ್ಯಾತ್ಮನಾ ಇದ್ದಂತೆ ಎಂತ ದೃಷ್ಟಾಂತ) ಈ ಅನಾದಿಲಿಂಗ ಜಡಪ್ರಕೃತ್ಯಾತ್ಮಕವಾದದಂಥಾದ್ದು. ಇದು ಈಶ್ವರನಿಂದ ರಚಿತವಲ್ಲದ್ದು. ಅತ್ಯಂತವಾಗಿ ಶ್ರೀ ಪರಮಾತ್ಮನ ಇಚ್ಛಾನುಸಾರ ಅದೆ. ಪೂರ್ವೋಕ್ತ ದೃಷ್ಟಾಂತಾನುಸಾರ ಲಿಂಗದಲ್ಲಿ ಜೀವರೋದಕ ಉತ್ಪತ್ತಿಮಾಡಿ ಅದರಿಂದ ಲಿಂಗದೇಹ ತೋಯಿಸಿ, ತದ್ದ್ವಾರಾ ಜೀವರಿಗೆ ಲಿಂಗದೇಹ ನಿರವಕಾಶದಿಂದ ಸಂಬಂಧಮಾಡಿ ಎಚ್ಚರಿಕೆ ಕೊಟ್ಟು, ಲಿಂಗಗತಗುಣತ್ರಯು ಗಳಿಂದ ವೈಷಮ್ಯ ಐದಿಸಿ ಜೀವದ ವ್ಯಾಪ್ತಿ ಲಿಂಗಗತಅನಾದಿಕರ್ಮದಲ್ಲಿ ಪ್ರವೇಶ ಮಾಡಿಸಿ, ತದ್ದ್ವಾರಾ ಬೀಜಾಂಕುರದೋಪಾದಿಯಲ್ಲಿ ಕರ್ಮಾಂಕುರ ಉಂಟುಮಾಡುತ್ತಾನೆ ಎಂತ ದೃಷ್ಟಾಂತರೀತ್ಯಾ ದೃಷ್ಟಾಂತ. ಭಗವಂತ ತನ್ನ ಇಚ್ಛಾದಿಂದ ಮಾಡುತಾನೆ. ಬಾಹ್ಯಾಲಿಂಗದಲ್ಲಿ ಬೆವರನೆ ಪುಟ್ಟಿಸಿ ತೋಯಿದಾ ವಸನದೋಪಾದೀಲಿ ಪೆಚ್ಚಿಸಲು ಆಗ್ಗೆ ಜ್ಞಾನೇಚ್ಛಾಪ್ರಯತ್ನ ಜೀವಕ್ಕೆ ಉಂಟು, ತತ್ಪೂರ್ವದಲ್ಲಿ ಇಲ್ಲ' ಎಂತ **ವಿಜರಾಯರಾಯರ** ವಾಕ್ಯ. ಇದರನ್ನು ಅನುಸರಿಸಿ **ಪ್ರಕಾಶಸಂಹಿತಾ ವಾಕ್ಯವೂ** ಇದೆ. ಈ ಅನಾದಿಲಿಂಗ ಶರೀರಕ್ಕೆ ಅಭಿಮಾನಿದೇವತೆ ಅಕ್ಷರಳಾದ ರಮಾದೇವೇರು. ಇದಕ್ಕೆ ಮಾತ್ರ ರಮಾದೇವೇರನ್ನ ಹೇಳಿದ್ದರಿಂದ ಬ್ರಹ್ಮಾದಿ ನಾಲ್ಕುಮಂದಿ ವ್ಯಾವರ್ತರಾದರು. ವಿರಜಾನದಿಯು ಸ್ನಾನದವರೆಗೆ (ಅನಾದಿಲಿಂಗ) ಹತ್ತಿಕೊಂಡು ಇರುತ್ತದೆ. ಈ ವಿರಜಾನದಿಸ್ನಾನ ದಾವಾಗಾದರೆ ಆಗತದೋ ಆಗ ಬಿಟ್ಟು ಹೋಗುತದೆ ಎಂತ ಅರ್ಥ.

**ವಿಶೇಷಾರ್ಥ**

ಈ ವಿರಜಾನದಿ ಎರಡು ಪ್ರಕಾರ. ಅಂಡಸೃಷ್ಟಿಕಾಲಕ್ಕೆ ಅಂಡಕ್ಕೆ ಕಾರಣವಾದ ವೀರ್ಯ ಲಕ್ಷ್ಮೀದೇವೇರಲ್ಲಿ ಇಡೋಕಾಲದಲ್ಲಿ ದೇಹದಿಂದ ಉತ್ಪನ್ನವಾದ ರಮಾಭಿಮನ್ಯಮಾನವಾದ ಸ್ವೇದೋದಕವೇ ವಿರಜಾಖ್ಯ ಭಾಗೀರಥಿನದಿ, ಇದು ಒಂದು. ಪುರುಷನಾಮಕ ಬ್ರಹ್ಮನ ಸೃಷ್ಟಿಕಾಲಕ್ಕೆ ವಾಸುದೇವನ ದೇಹದಿಂದ ಉತ್ಪನ್ನವಾದ ರಮಾತ್ಮಕ ಸ್ವೇದೋದಕ, ಇದು ಒಂದು ವಿರಜಾಖ್ಯ ಭಾಗೀರಥೀ ನದಿ. ಅಂತೂ ಈ ಎರಡೂ ವಿರಜಾನದಿಗಳೇ, ಇದಕ್ಕೆ ಆರ ಎಂತಲೂ ಣ್ಯ ಎಂತಲೂ ಹೆಸರು ಅದೆ.

ತುಷ ಅಂದರೆ ಹೊಟ್ಟು ಇದಕ್ಕೆ ಪ್ರಮಾಣ

**ಕೃದ್ಧೋಲ್ಕಾದೀನಿ ರೂಪಾಣಿ ಸೂಕ್ಷ್ಮದೇಹೇ ಚ ಸಂತಿ ವೈ ।**
**ಶಕ್ತಿಮಾ ತಂಡುಲಸ್ಯೇವ ಲಿಂಗದೇಹಸ್ತದಂತರೇ ।**
**ಷಟ್‌ದಶಕಳಾಸಂಯುಕ್ತೋ ಜೀವಸ್ಯಾವರಣೇನ ವೈ ॥**

**ಎಂತ ಬ್ರಹ್ಮಾಂಡ ಪುರಾಣ ವೆಂಕಟಗಿರಿ ಮಾಹಾತ್ಮ್ಯೇ, ಅಧ್ಯಾತ್ಮಮಾಲಿಕಾ ವರ್ಣನಂನಾಮ ಏಕೋತ್ತರಶತತಮೋಧ್ಯಾಯಃ ॥**

ಸಾವಕಾಶದಿ-ಎಂದರೆ ಅನಾದಿಲಿಂಗಶರೀರ ನಿರವಕಾಶದಿಂದ ಕ್ಷೀರನೀರವತ್ ಆಗಿನ್ನೂ, ಅಣುಲಿಂಗಶರೀರ ಅಕ್ಕಿಹೊಟ್ಟಿನೋಪಾದಿಯಲ್ಲಿ ಅವಕಾಶ ಸಹಿತವಾಗಿನ್ನೂ ಇರುತ್ತದೆ. ಇದು ಎರಡೂ ಅಲ್ಲದೆ ಅನಿರುದ್ಧ ಶರೀರವೂ ಜೀವಾಕಾರವೇ. ಇದಕ್ಕೂ ಪ್ರಮಾಣವೇನೆಂದರೆ, ತುಷದೃಷ್ಟಾಂತವೇ ಪ್ರಮಾಣ, ಲಿಂಗದೇಹಕ್ಷೀರನೀರವತ್ ಎಂದರೆ ಸಾವಕಾಶವಾಗಲಿಲ್ಲ, ನಿರವಕಾಶವಾಯಿತು. ಸೃಷ್ಟಿಗೆ ಪೂರ್ವದಲ್ಲಿ ಅನಾದಿಲಿಂಗ ಸಾವಕಾಶವಾಗಿ ಇದ್ದು, ಸೃಷ್ಟಿಗೆ ಪೂರ್ವದಲ್ಲಿ ಪರಮಾತ್ಮ ನಿರವಕಾಶದಿಂದ ಸಂಬಂಧ ಮಾಡ ತಾನೆ, ತತ್ಪೂರ್ವದಲ್ಲಿ ಸಾವಕಾಶವೇ ಕೇವಲಶಬ್ದದಿಂದ ಬ್ರಹ್ಮವಾಯುಗಳ ವ್ಯಾವರ್ತನ ಮಾಡುತ್ತದೆ ಎಂತ ತಾತ್ಪರ್ಯ ॥೮೩॥

**(೨) ಭಾವ ಪ್ರಕಾಶಿಕೆ- ವ್ಯಾಖ್ಯಾನ**

ಲಿಂಗಶರೀರದ ಲಕ್ಷಣವನ್ನು ಹೇಳುತ್ತಾರೆ. ಭತ್ತದ ಕಾಳುಗಳಮೇಲೆ ಹೇಗೆ ಹೊಟ್ಟು ಅವರಿಸಿಕೊಂಡಿರುವುದೋ ಹಾಗೆ ಭಗವದಿಚ್ಛೆಯಿಂದ ಜೀವನಸ್ವರೂಪ ದೇಹದಮೇಲೆ ಆವರಣರೂಪವಾಗಿ ಲಿಂಗಶರೀರವು ಸ್ವರೂಪ ದೇಹವಿರುವುದಕ್ಕೆ ಒಳಗೆ ಅವಕಾಶವನ್ನು ಕೊಟ್ಟು, ಮೇಲೆ ಸುತ್ತಿಕೊಂಡಿರುವುದು. ಈ ಲಿಂಗಶರೀರದ ಅಭಿಮಾನಿಯರಾಗಿ ಮಹಾಲಕ್ಷ್ಮೀದೇವಿಯರೆ, ಜಡಪ್ರಕೃತಿಯರೂಪದಿಂದ ಇರುವರು. ಈ ಲಿಂಗಶರೀರವು ವಿರಜಾ ನದಿ

ಸ್ನಾನಪರ್ಯಂತ ಸ್ವರೂಪದೇಹಕ್ಕೆ ಅಂಟಿಕೊಂಡಿರುವುದು. ವಿರಜಾನದಿ ಸ್ನಾನವಾದಕೂಡಲೇ ಲಿಂಗಶರೀರ ಭಂಗವಾಗುವುದು. ॥೧೩॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ

ಕೇಸಕ್ಕಿಯ ಮೇಲಿನ ಹೊಟ್ಟಿನಂತೆ ಜೀವನ ಸ್ವರೂಪದ ಮೇಲೆ ಲಿಂಗ ದೇಹ ಆಚ್ಛಾದನಸ್ವರೂಪವಾಗಿ ಇರುತ್ತದೆ ಎಂತ ಹೇಳೇತ್ತಾರೆ – **ಜೀವನೇತಿ** ॥ ಪ್ರಾವರಣೇತಿ ॥

**"ತತ್ತದಾಕಾರ ಸದೃಶೌ ಲಿಂಗದೇಹೈರ್ನಾದಿಭಿಃ ।**

**ಕಂಚುಕೈರಿವಸಂಚ್ಛನಾತತ್ತ್ವರ್ಣೈಃ ಪೃಥಕ್ಪೃಥಗಿತಿ ॥**

**—ವಿಷ್ಣುರಹಸ್ಯೋಕ್ತೇಃ ॥**

"ಕೇವಲಜಡಪ್ರಕೃತೇತಿ ॥

**"ಜಡಪ್ರಕೃತಿಃ ಸರ್ವಜೀವಾನಾಂ ಲಿಂಗರೂಪಿಣೇತಿ ॥"**

**–ಪ್ರಕಾಶಸಂಹಿತೋಕ್ತೇಃ ॥ ॥೧೩॥**

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

"ಜೀವನಿಗೆ"– ಇತಿ ॥ "ಲಿಂಗಂ ಸ್ವರೂಪಸದೃಶಂ ಮುಕ್ತಾವಲ್ಯಾಂ ಉದಾಹೃತಮ್"॥ "ತತ್ತದಾಕಾರ ಸದೃಶೈಃ ಲಿಂಗದೇಹೈಃ ಅನಾದಿಭಿಃ ॥ ಕಂಚುತೈಃ ಇವ ಸಂಛನ್ನಾಃ ತತ್ತದ್ವರ್ಣೈಃ ಅನಾಧಿಭಿಃ"॥–ಇತಿ ವಿಷ್ಣು ರಹಸ್ಯೇ॥ "ತುಷವಲ್ಲಿಂಗದೇಹೇತಿ–" ॥ ಇತಿ ಪ್ರಕಾಶಸಂಹಿತಾಯಾಂಚ ॥ ಪೊಂದಿ—ಹೊಂದಿ, ಪ್ರಕೃತಿ ಪದಂ ಪೂರ್ವ ಮನ್ವೇತಿ ॥೧೩॥

**ಕನ್ನಡಾರ್ಥ :**

"ಲಿಂಗಶರೀರವು ಜೀವರ ಸ್ವರೂಪದೇಹಕ್ಕೆ ಸದೃಶವಾಗಿರುವುದು" ಎಂದು **ಮುಕ್ತಾವಳಿ** ಎಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುತ್ತದೆ.

"ಆಯಾಯಾ ಸ್ವರೂಪದೇಹದ ಆಕಾರಗಳಿಗೆ ಸದೃಶವಾಗಿ ಅನಾದಿ ಲಿಂಗದೇಹಗಳಿಂದ ಆ ವರ್ಣಗಳ ಕಂಚುಕ (ವಸ್ತ್ರ) ಗಳಂತಿರುವ ಲಿಂಗದೇಹ

ಗಳಿಂದ ಜೀವರು ಆಚ್ಛಾದಿತರಾಗಿರುತ್ತಾರೆ"- ಎಂದು **ವಿಷ್ಣುರಹಸ್ಯ**ದಲ್ಲಿ ಉಕ್ತವಾಗಿದೆ,

"ಲಿಂಗದೇಹವು ಭತ್ತದ ಮೇಲಿರುವ ಕವಚ (ತುಷ) ದಂತೆ ಸ್ವರೂಪ ದೇಹಕ್ಕೆ ಆವರಣವಾಗಿದೆ"-ಎಂದು **ಪ್ರಕಾಶಸಂಹಿತೆ**ಯಲ್ಲಿ ಹೇಳಲಾಗಿದೆ.

"ಪ್ರಕೃತಿ"-ಎಂಬ ಪದವನ್ನು ಹಿಂದಿನ "ಜಡ" ಎಂಬ ಪದಕ್ಕೆ ಅನ್ವಯಿಸ ಬೇಕು. "ಪ್ರಕೃತಿಯು ಕೇವಲ ಜಡ ಇದಕ್ಕೆ ಅಧಿದೇವತೆಯು ಮಹಲಕುಮಿ ಎನಿಪಳು" ಎಂದು ವಾಕ್ಯಪೂರ್ಣಮಾಡಬೇಕು. ॥೧೩॥

## (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಲಿಂಗಶರೀರ ಇರುವ ರೀತಿ ತಿಳಿಸುತ್ತಾರೆ ಜೀವನಕೆ ಎಂದು. ಜ್ಞಾನರೂಪ ನಾದ ಜೀವನಿಗೆ, ಸಾವಕಾಶದಿ ಎಂದರೆ, ಮೇಲೆ ಮೇಲೆ ಒಂದೊಂದು ಆವರಣ ಇರುವುದಕ್ಕೆ ಅವಕಾಶ ಕೊಟ್ಟು ಸತ್ತ್ವ-ರಜಸ್ತಮವೆಂಬ ಮೂರು ಆವರಣ ರೂಪದಿಂದ, ಧಾನ್ಯಕ್ಕೆ ಹೊಟ್ಟು ಮೇಲೆ ಆವರಣವಾಗಿರುವಂತೆ ಈಶ್ವರೇಚ್ಛೆ ಯಿಂದ ಇರುವುದು. ಕೇವಲ ಜಡಪ್ರಕೃತಿ ಎಂದರೆ. ಮಹತ್ತತ್ತ್ವ ಮೊದ ಲಾದ ರೂಪಾಂತರವನ್ನು ಹೊಂದದೆ ಇರುವ ಶುದ್ಧ ಜಡಸ್ವರೂಪವಾದ್ದರಿಂದ ಇದಕ್ಕೆ ಮಹಾಲಕ್ಷ್ಮಿಯು ಮುಖ್ಯಾಭಿಮಾನಿಯು. ಇದು ಸಜ್ಜೀವರಿಗೆ ವಿರಜಾನದಿಸ್ನಾನ ಪರಿಯಂತ ಸಂಬಂಧಿಸಿರುವುದೆಂತ ತಿಳಿಯಬೇಕೆಂದರ್ಥ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವನಸ್ವರೂಪದೇಹದ ಸುತ್ತಲೂ ಆವರಣರೂಪದಲ್ಲಿರುವ ಲಿಂಗ ಶರೀರದ ವಿವರ ತಿಳಿಸುತ್ತಾರೆ ಪ್ರಸಕ್ತ ೧೩ನೆಯ ಪದ್ಯದಿಂದ.

೧. ಪ್ರತಿಜೀವರ ಸ್ವರೂಪದೇಹವು ಅತ್ಯಣು ರೂಪದಲ್ಲಿದ್ದು, ಅತ್ಯಂತ ಸೂಕ್ಷ್ಮವಾಗಿರುವುದು. ಸ್ವರೂಪ ಶರೀರವು ಅನಾದಿನಿತ್ಯವಾದುದು. ಅದಕ್ಕೆ ಎಂದೆಂದಿಗೂ ನಾಶವಿಲ್ಲ. ಅಪ್ರಾಕೃತ ಗುಣಧರ್ಮಗಳಿಂದ ಯುಕ್ತವಾಗಿ ಚಿದಾ ನಂದಾತ್ಮಕವಾಗಿರುವುದು.

೨. ಇಂತಹ ಜೀವನ ಸ್ವರೂಪದೇಹದ ಸುತ್ತಲೂ **ಲಿಂಗಶರೀರವಿದೆ.** ಸ್ವರೂಪ ದೇಹಕ್ಕೂ ಮತ್ತು ಲಿಂಗದೇಹಕ್ಕೂ ಮಧ್ಯೆ ಸುತ್ತಲೂ ಅವಕಾಶ ವಿದೆ. ಹೀಗೆ ಸಾವಕಾಶವಾಗಿಪ್ಪ ಲಿಂಗದೇಹವನ್ನು ಸುಂದರವಾದ ದೃಷ್ಟಾಂತ ದಿಂದ ನಿರೂಪಿಸುತ್ತಾರೆ, ಅಕ್ಕಿಕಾಳಿನ ಸುತ್ತಲೂ ಹೊಟ್ಟು (ತವಡು ಆವರಿಸಿ) ಕೊಂಡಿರುವುದು. ಈ ಹೊಟ್ಟಿಗೆ **ತುಷ** ಎಂದು ಹೆಸರು. ಅಕ್ಕಿಯ ಕಾಳಿಗೆ ತುಷವು ಯಾವ ರೀತಿ ಆವರಿಸಿಕೊಂಡಿರುವುದೋ, ಅಂತೆಯೇ ಲಿಂಗಶರೀರವು ಸ್ವರೂಪದೇಹದ ಸುತ್ತಲೂ ಆವರಣರೂಪವಾಗಿ ಸಾವಕಾಶವಾಗಿ ಹೊಂದಿ ಕೊಂಡಿದೆ. (ಗಜ್ಜುದಲ್ಲಿನ ಬೀಜದಂತೆ) ಈ ಲಿಂಗದೇಹವು ಅನಾದಿಯಾದದ್ದು. ಈ ಅನಾದಿಲಿಂಗವು ಶ್ರೀ ಪರಮಾತ್ಮನ ಇಚ್ಛೆಯಂತೆ ಜೀವನ ಸ್ವರೂಪ ದೇಹಕ್ಕೆ ಪ್ರಾವರಣ ರೂಪವಾಗಿ ಹೊಂದಿಕೊಂಡಿದೆ. ಆದರೆ ಲಿಂಗಶರೀರವು ಈಶ್ವರನಿಂದ ನಿರ್ಮಿತವಲ್ಲ. ಅನಾದಿನಿತ್ಯವಾದ ಸ್ವರೂಪಶರೀರದ ಸಹ ಅನಾದಿ ಕಾಲದಿಂದಲೂ ಇದೆ.

ಪ್ರಮಾಣ–

"ತುಷವಲ್ಲಿಂಗ ದೇಹೇತಿ॥"

—ಇತಿ ಪ್ರಕಾಸಂಹಿತಾಯಾಂ॥

ಇಂತಹ ಲಿಂಗಶರೀರವು ಆಯಾಯಾ ಸ್ವರೂಪದೇಹದ ಆಕಾರಗಳಿಗೆ ಸದೃಶವಾಗಿರುತ್ತದೆ. ಅನಾದಿಯಿಂದ ಜೀವರು ಈ ಆವರಣದಿಂದ ಆಚ್ಛಾ ಧಿತರಾಗಿದ್ದಾರೆ.

ಪ್ರಮಾಣ–

(೧) "ಲಿಂಗಂ ಸ್ವರೂಪ ಸದೃಶಮ್"

—ಇತಿ ಮುಕ್ತಾವಳಿ ಗ್ರಂಥೇ॥

**(೨) "ತತ್ತದಾಕಾರ ಸದೃಶೈಃ ಲಿಂಗದೇಹೈಃ ಅನಾದಿಭಿಃ।**
**ಕಂಚುಕೈಃ ಇವ ಸಂಚ್ಛನ್ನಾಃ ತತ್ತದ್ವರ್ಣೈಃ ಅನಾದಿಭಿಃ॥"**
**—ಇತಿ ವಿಷ್ಣುರಹಸ್ಯೇ**

೩. ಈ ಅನಾದಿಲಿಂಗವು ತ್ರಿಗುಣಾತ್ಮಕವಾದದ್ದು. ಅಂದರೆ ಸತ್ತ್ವ, ರಜ, ತಮೋಗುಣಗಳೆಂಬ ಪ್ರಾಕೃತ ಗುಣತ್ರಯಗಳಿಂದ ಯುಕ್ತವಾಗಿದೆ. ಮೂಲಪ್ರಕೃತಿಯು ಜಡ ಹಾಗೂ ಅತ್ಯಂತಸೂಕ್ಷ್ಮ. ಈ ಜಡ ಪ್ರಕೃತಿಯ ಸಹಜ ಧರ್ಮಗಳೇ ಸತ್ತ್ವಾದಿ ಗುಣತ್ರಯಗಳು. ಮೂಲಜಡ ಪ್ರಕೃತಿಯ ಗುಣವೈಷಮ್ಯದಿಂದಲೇ **ಅವ್ಯಕ್ತತತ್ತ್ವದ ಸೃಷ್ಟಿಯು.** ಇದರಿಂದ ಲಿಂಗದೇಹವು ಅವ್ಯಕ್ತತತ್ತ್ವಾತ್ಮಕವಾವದ್ದು. ಇದಕ್ಕೆ ಅಭಿಮಾನಿಯು **ಶ್ರೀಲಕ್ಷ್ಮೀದೇವಿ** ಜಗನ್ಮಾತೆಯಾದ ಶ್ರೀಲಕ್ಷ್ಮೀದೇವಿಯರು ಮೂಲ ಪ್ರಕೃತಿಗೆ ಅಭಿಮಾನಿಗಳು, ಗುಣತ್ರಯಂಗಳ ಆಭಿಮಾನಿಯಾದ ಶ್ರೀರಮಾ ಅವ್ಯಕ್ತತತ್ತ್ವಕ್ಕೆ ಅಭಿಮಾನಿಗಳು. ಅನಾದಿ ಲಿಂಗಶರೀರವು ಷೋಡಶ ಕಳಾತ್ಮಕವಾದದ್ದು.

| | | |
|---|---|---|
| (1) | ಮನಸ್ಸು | = ೧ |
| (2) | ಜ್ಞಾನೇಂದ್ರಿಯಗಳು | = ೫ |
| (3) | ಕರ್ಮೇಂದ್ರಿಯಗಳು | = ೫ |
| (4) | ತನ್ಮಾತ್ರಾಗುಣಗಳು | = ೫ |
| | ಒಟ್ಟು | = ೧೬ ಕಳೆಗಳು, |

ಅನಾದಿಲಿಂಗದೇಹವು ಮೂರು ಆವರಣಗಳಿಂದ ಕೂಡಿದೆ

(1) ಪ್ರಥಮಾವರಣದಲ್ಲಿ (ಅತ್ಯಂತ ಒಳಗಿನ) **ಮನಸ್ಸು** (ಸಂಸ್ಕಾರ ರೂಪವಾದದ್ದು)

(2) ದ್ವಿತೀಯಾವರಣದಲ್ಲಿ **ಪಂಚಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳು**

(3) ತೃತೀಯಯವರಣದಲ್ಲಿ **ತನ್ಮಾತ್ರಾಪಂಚಕಗಳು.**

೪. ಅನಾದಿ ಕರ್ಮಪರಂರೆಯ ಬೀಜವು ಈ ಲಿಂಗೆಶರೀರಗತವಾಗಿದೆ. ತ್ರಿಗುಣಗಳ ವ್ಯಾಪಾರವೇ ಬಂಧರೂಪವಾದ ಸಂಸಾರಕ್ಕೆ ಕಾರಣ, ಈ ವ್ಯಾಪಾರ ಸರಣಿಯು ಅನಾದಿಕರ್ಮದ ದ್ವಾರಾ ಪ್ರವರ್ತನವಾಗುವುದು. ಕೇವಲ ಪ್ರಕೃತಿಸಂಬಂಧವಾದ ಲಿಂಗಶರೀರಕ್ಕೂ ಅನಾದಿನಿತ್ಯ ಹಾಗೂ ಅಪ್ರಾಕೃತವಾದ ಸ್ವರೂಪಶರೀರಕ್ಕೂ ಸಂಬಂಧವನ್ನು ಶ್ರೀ ಪರಮಾತ್ಮನು ತನ್ನ ಅಚಿಂತ್ಯಾದ್ಭುತ ಶಕ್ತಿಯಿಂದ ಉಂಟುಮಾಡುವನು. ಇದಕ್ಕೆ ದಾಸ ರಾಯರು **ಭಗವದಿಚ್ಛೆಯಲಿ** ಎಂದಿದ್ದಾರೆ.

೪. ಸ್ವರೂಪದೇಹದ ಮೇಲೆ ಭಗವಧಿಚ್ಛೆಯಿಂದ ಉಂಟಾದ ಲಿಂಗೋಪಾದಾನರೂಪವಾದ ಉಪಚಯಕಾರ್ಯದಿಂದಾಗಿ, ಸೃಷ್ಟಿ ಪ್ರಾರಂಭ ಅಂದಿನಿಂದ ಜೀವನಿಗೆ ಕರ್ಮಸಂಬಂಧ. ತನ್ಮೂಲಕ ಸಂಸಾರಬಂಧನ. ಭವಬಂಧಕನು ಶ್ರೀ ಪರಮಾತ್ಮನೇ ಆಗಿರುವುದರಿಂದ, ಆ ಕರ್ಮವಿಮೋಚಕನೂ ಅವನೇ. ಶ್ರೀಶನ ಪರಮಪ್ರಸಾದದಿಂದಲೇ ಕರ್ಮವಿಮೋಚನೆಯಾಗಿ ಜೀವನಿಗೆ ಸ್ವಸ್ವರೂಪಗತ ಆನಂದದ ಅಭಿವ್ಯಕ್ತಿಯಾಗಬೇಕು. ಅದೇ ಪರಮ ಪುರುಷಾರ್ಥರೂಪವಾದ **ಮೋಕ್ಷವು (ಮುಕ್ತಿ)** "ಮುಕ್ತಿ"–ಎಂದರೆ ಅನಾದಿ ಕರ್ಮಪರಂಪರೆಯಿಂದ ಬಿಡುಗಡೆ. ತ್ರಿಗುಣಗಳ ಭವಣೆಯಿಂದ ಮೋಕ್ಷ, ಹೀಗೆ ಅನಾದಿಕರ್ಮವಿಮೋಚನೆಗೆ **ಲಿಂಗಭಂಗವೇ** ಮುಖ್ಯಕಾರಣ, ತ್ರಿವಿಧ ಜೀವರಿಗೂ ಲಿಂಗಭಂಗ ಉಂಟೆಂದು ಶಾಸ್ತ್ರಸಮತವಿಚಾರ.

(೧) ಮುಕ್ತಿಯೋಗ್ಯ ಚೇತನರಿಗೆ ವಿರಜಾನದಿಯ **ಸ್ನಾನದಿಂದ** ಲಿಂಗಭಂಗ

(೨) ನಿತ್ಯಸಂಸಾರಿಗಳಾದ ರಾಜಸರಿಗೆ **ಶ್ರೀವಾಯುದೇವರ ಹೂಂಕಾರದಿಂದ ಲಿಂಗಭಂಗ.**

(೩) ತಮೋಯೋಗ್ಯಜೀವರಾದ ತಾಮಸರಿಗೆ **ಶ್ರೀವಾಯುದೇವರ ಗದಾ ಪ್ರಹಾರದಿಂದ ಲಿಂಗಭಂಗ.**

ಸೂಕ್ಷ್ಮಸೃಷ್ಟಿಯಕಾಲದಲ್ಲಿ **ವಾಸುದೇವ**ರೂಪಿ ಪರಮಾತ್ಮನು **ಮಾಯಾ ನಾಮಕ**ಳಾದ ಶ್ರೀಲಕ್ಷ್ಮೀದೇವಿಯಲ್ಲಿ ತನ್ನ ವೀರ್ಯವನ್ನಿಟ್ಟನು, ಅಂದರೆ ಸೃಷ್ಟಿಯಾಗಲಿ ಎಂದು ಇಚ್ಛೆಮಾಡಿದ. ಆಗ **ಪುರುಷನಾಮಕ** ಬ್ರಹ ದೇವರ ಸೃಷ್ಟಿ. ಆ ಕಾಲದಲ್ಲಿ ವಾಯುದೇವನ ದೇಹದಿಂದ ಉತ್ಪತ್ತಿಯಾದ ಸ್ವೇದೋದಕವೇ (ಬೆವರು) ವಿರಾಜಾ ಎಂದೆನಿಸಿತು. ಇದು ರಮಾಭಿಮನ್ಯ ಮಾನವಾದದ್ದು. ಇಂತಹ ಲಕ್ಷ್ಮ್ಯಾತ್ಮಕವಾದ ವಿರಾಜಾನದಿಯು ಸ್ನಾನ ಪರ್ಯಂತರ, ಅನಾದಿ ಲಿಂಗದೇಹವು ಸ್ವರೂಪದೇಹಕ್ಕೆ ಹೊಂದಿಕೊಂಡಿರು ವುದು. ವಿರಜಾನದಿಯ ಸ್ನಾನಾನಂತರ ಲಿಂಗಭಂಗ ತದ್ವಾರಾ ಕರ್ಮವಿಮೋ ಚನೆ. ತದನಂತರ ವಾಸುದೇವನ ಪ್ರಸಾದದಿಂದ ಸ್ವರೂಪಾನಂದಾವಿರ್ಭಾವ ರೂಪವಾದ ಮುಕ್ತಿರೂಪದ ನಿತ್ಯಾನಂದ ಪ್ರಾಪ್ತಿ. ॥೧೩॥

# ಪದ್ಯ (೧೪)

**ಮೂಲ :**

ಆರಧಿಕದಶಕಳೆಗಳ್ಳು ಶ ।
ರೀರವನಿರುದ್ಧಗಳ ಮಧ್ಯದಿ ।
ಸೇರಿ ಇಪ್ಪವು ಜೀವ ಪರಮಾಚ್ಛಾಧಿಕದ್ವಯವು ॥
ಬಾರದಂದದಿ ದಾನವರತಿ ।
ದೂರಗೈಸುವ ಶ್ರೀಜನಾರ್ದನ ।
ಮೂರುಗುಣದೊಳಗಿಪ್ಪನೆಂದಿಗು ತ್ರಿವೃತುವೆಂದೆನಿಸಿ ॥ ॥೧೪॥

**ಅವರಣಿಕೆ :**

ಜೀವಾಚ್ಛಾಧಿಕ ಮತ್ತು ಪರಮಾಚ್ಛಾಧಿಕ ಹಾಗೂ ಲಿಂಗಶರೀರದಲ್ಲಿ ಶ್ರೀ ಪರಮಾತ್ಮನ ವ್ಯಾಪಾರ ವಿಶೇಷಗಳನ್ನು ವಿವರಿಸುತ್ತಾರೆ- **ಆರಧಿಕ** ಎಂಬ ಪ್ರಸಕ್ತ ಸಂಧಿಗತ ೧೪ನೆಯ ಈ ಪದ್ಯದಿಂದ.

ಹದಿನಾರು (ಆರಧಿಕದಶ) ಕಳೆಗಳುಳ್ಳದ್ದು ಅನಾದಿಲಿಂಗಶರೀರ. ಮಹತ್ತತ್ವದ ಉಪಾದಾನಕಾರಣವಾಗಿ ಅಹಂಕಾರತತ್ತ್ವದ ಸೃಷ್ಟಿ. ಮಹತ್ತತ್ತ್ವೋಪಚಯರೂಪ ಅಹಂಕಾರ ತತ್ತ್ವಾತ್ಮಕವಾದ ಅನಿರುದ್ಧ ಶರೀರ. ಈ ಶರೀರದ್ವಯಗಳ ನಡುವೆ (೧) ಜೀವಾಚ್ಛಾಧಿಕ ಮತ್ತು (೨) ಪರಮಾಚ್ಛಾಧಿಕ ಎಂಬ ಎರಡು ಆವರಣಗಳಿವೆ. ಇಲ್ಲಿ ದೈತ್ಯರು ಪ್ರವೇಶಿಸದಂತೆ, ಶ್ರೀಜನಾರ್ದನರೂಪೀ ಶ್ರೀ ಪರಮಾತ್ಮನು, ದಾನವರನ್ನು ದೂರ ಓಡಿಸುತ್ತಾ, ಸತ್ವರಜಸ್ತಮಾದಿ ಗುಣತ್ರಯಂಗಳಲ್ಲಿ **ತ್ರಿವೃತು** ಎಂಬ ನಾಮಧೇಯದಿಂದ ವಿರಾಜಮಾನನಾಗಿದ್ದಾನೆ- ॥೧೪॥

**ಪ್ರತಿಪದಾರ್ಥ :**

**ಆರಧಿಕ ದಶ**=ಹದಿನಾರು ಸಂಖ್ಯಾಕವಾದ (ದಶ=೧೦. ಅದರ ಮೇಲೆ ೬ ಅಧಿಕ ಎಂದರೆ ೧೦+೬=೧೬) **ಕಳೆಗಳುಳ್ಳ**=ತತ್ತ್ವಯುಕ್ತವಾದ ಲಕ್ಷಣಗಳಿಂದ ಕೂಡಿದ್ದ, **ಶರೀರ**=ಅನಾದಿ ಲಿಂಗಶರೀರ, **ಅನಿರುದ್ಧಗಳ**=ಅನಿರುದ್ಧ ಶರೀರ **ಮಧ್ಯದಿ**=ಇವೆರಡು ಶರೀರಗಳ ನಡುವೆ, **ಜೀವಾಚ್ಛಾಧಿಕ**=ಜೀವನಸ್ವರೂಪವನ್ನು ಮುಚ್ಚಿಕೊಂಡಿರುವ ಆವರಣ ಮತ್ತು **ಪರಮಾಚ್ಛಾಧಿಕ**=ಪರಮಾತ್ಮನನ್ನು ಅಚ್ಛಾದಿಸಿರುವ ಆವರಣ ಎಂಬ ಎರಡು ಆವರಣಗಳು **ಇಪ್ಪವು**=ವಿದ್ಯಮಾನವಾಗಿ ಇವೆ. **ದಾನವರನು**=ದುಷ್ಟಶಕ್ತಿಗಳಾದ ದೈತ್ಯರುಗಳನ್ನು, **ಬಾರದಂದದಿ**=ಜೀವನ ಸನ್ನಿಹಕ್ಕೆ ಬರಗೊಡದಂತೆ, ಅತಿ **ದೂರಗೈಸುತ**=ಬಹುದೂರಕ್ಕೆ ಅಟ್ಟುತ್ತಾ, **ಶ್ರೀಜನಾರ್ದನ**=ಲಕ್ಷ್ಮೀರಮಣನಾದ(ಶ್ರೀ) ದುಷ್ಟಜನಮರ್ದಕವಾದ ಶ್ರೀ

ಪರಮಾತ್ಮನು. **ತ್ರಿವೃತು ಎಂದೆನಿಸು**="ತ್ರಿಗುಣಕಾರ್ಯಗಳ ಪ್ರೇರಕನು" ಎಂದು ಕರೆಯಿಸಿ ಕೊಳ್ಳುತ್ತಾ, **ಎಂದಿಗೂ**=ಯಾವಾಗಲೂ, (ಅನಾದಿ ಕಾಲದಿಂದಲೂ) **ಮೂರು ಗುಣದೊಳಗೆ**=ಸತ್ತ್ವ, ರಜ, ತಮ ಎಂಬ ಪ್ರಾಕೃತವಾದ ಲಿಂಗಶರೀರಗತ ಗುಣತ್ರಯಂಗಳಲ್ಲಿ ಇಪ್ಪ=ವಿದ್ಯಮಾನನಾಗಿದ್ದಾನೆ. ॥೧೪॥

# ವ್ಯಾಖ್ಯಾನಗಳು

## (೧) ಸಂಕರ್ಷಣ ಒಡೆಯರ ವ್ಯಾಖ್ಯಾನ

ಜೀವಾಚ್ಛಾಧಿಕ ಪರಮಾಚ್ಛಾದಿಕ ಇರೋ ಸ್ಥಾನ ಹೇಳತಾರೆ.

ಹದಿನಾರು ಕಳಾ ಉಳ್ಳದ್ದು ಅಂದರೆ, ದಶೇಯಿಂದ್ರಗಳು, ಪಂಚ ಭೂತಗಳು, ಮನಸ್ಸು ಅಂತು ಹದಿನಾರು ಕಳೆಗಳು. ಇಂಥಾ ಕಳೆಗಳುಳ್ಳ ಲಿಂಗಶರೀರ, ಅಣುಲಿಂಗಶರೀರ, ಮಹತ್ತತ್ತ್ವಶರೀರ, ಅನಿರುದ್ಧಶರೀರ ಈ ನಾಲ್ಕೂ ಷೋಡಶಕಳಾತ್ಮಕವೇ. ಲಿಂಗಶರೀರನಾದ ಅಣುಲಿಂಗಶರೀರ, ಇದರಿಂದ ಮಹತ್ತಾತ್ವತ್ಮಕಶರೀರ, ಇದರಿಂದ ಅಹಂಕಾರಾತ್ಮಕವಾದ ಅನಿರುದ್ಧಾದಿ ಶರೀರಗಳ ಮಧ್ಯದಲ್ಲಿ ಜೀವಾಚ್ಛಾದಿಕವೇನು, ಪರಮಾಚ್ಛಾದಿಕವೇನೂ ಇವು ಎರಡೂ–ಉಪಲಕ್ಷಣಯಾ ತದನ್ಯಗಳೂ ಗ್ರಾಹ್ಯ–ಸೇರಿ ಇರೋದಾಗಿ ಇದೆ. ದೈತ್ಯರು, ಅನಿರುದ್ಧಶರೀರಗತ ದೈತ್ಯರು ಮಹತ್ತತ್ತ್ವಶರೀರ ಅಣುಲಿಂಗಶರೀರ ಅನಾದಿಲಿಂಗಶರೀರ ಈ ಶರೀರಗಳಲ್ಲಿ ಮೀರಿ ಬಾರದಂತೆ ಅತ್ಯಂತ ದೂರ ಮಾಡುತ್ತಾ, ಶ್ರೀದೇವೇರ ಸಮೇತನಾದ ಜನಾರ್ದನನಾಮಕ ಶ್ರೀ ಪರಮಾತ್ಮ, ಜೀವರ ಮ್ಯಾಲೆ ಮೂರು ಪ್ರಕಾರ ಸುತ್ತಿಕೊಂಡು ಇರತಕ್ಕ, ಅನಾದಿಲಿಂಗಸಾಂಕೇತವಾದ ಸಾತ್ತ್ವಿಕಾದಿ ಮೂರು ಗುಣಗಳೊಳಗೆ ಮೂರು ರೂಪದಿಂದ ತದಾಕಾರದಿಂದ ಇದ್ದು, ತ್ರಿವೃತು ಎಂತ ನಾಮದಿಂದ ಕರಸಿದವನಾಗಿ, ಲಿಂಗದೇಹ ಭಂಗವಾಗೋವರಿಗೂ, ಈ ಮಧ್ಯದಲ್ಲಿ ಎಂದಿಗೂ ಬಿಡದೇ ಇರೋವನಾಗಿದ್ದಾನೆ.

**ವಿಶೇಷಾರ್ಥ–**

ಲಿಂಗಶರೀರ ಎಂಬುದು ಏಳು ಆವರಣಯುಕ್ತವಾದದ್ದು. ೧. ಜೀವನ ವ್ಯಾಲೆ ಈಶ್ವರೇಚ್ಛಾ, ೨. ಜೀವಾಚ್ಛಾದಿಕ, ೩. ಪರಮಾಚ್ಛಾದಿಕ, ೪. ಲಿಂಗದೇಹ (ಈ ಲಿಂಗದ ತೃತೀಯ ಪರಿಚ್ಛೇದವಾದ ತಮಃಪರೀಚ್ಛೆದ ದಲ್ಲಿ) ೫. ಅವಿದ್ಯಾ, ೬. ಕಾಮ, ೭. ಕರ್ಮ, ಅಂತು ಏಳು ಪ್ರಕಾರ ಆವರಣಗಳು. ಇವು ಅನಾದಿಗಳು, ಇದರ ಅಂಶಗಳೇ ಪರಂಪರಾ ಸ್ಥೂಲ ದೇಹಗಳಲ್ಲಿ ಪರಿಣಮಿಸುತ್ತಾ ಇರುತ್ತವೆ. ಹಾಗೆ ಅಣುಲಿಂಗ, ಮಹತ್ತತ್ತ್ವ. ಅಹಂಕಾರಾಖ್ಯ, ಅನಿರುದ್ಧ ಈ ಶರೀರಗಳ ಮಧ್ಯದಲ್ಲಿ ಸೇರಿ ಇರುತ್ತವೆ. ॥೧೪॥

## (೨) ಭಾವಪ್ರಕಾಶಿಕೆ" ವ್ಯಾಖ್ಯಾನ

ಮೇಲೆ ಹೇಳಿದ ಷೋಡಶಕಳೆಗಳುಳ್ಳ ಲಿಂಗಶರೀರಕ್ಕೂ ಮತ್ತು ಅನಿರುದ್ಧ ಶರೀರಕ್ಕೂ ಮಧ್ಯದಲ್ಲಿ ಜೀವಾಚ್ಛಾದಿಕವೆಂತಲೂ, ಪರಮಾಚ್ಛಾದಿಕವೆಂತಲೂ **"ಅಜೇದ್ವಾ ಪ್ರಕೃತೀ ದುಷ್ಟೇಃ"—ಎಂಬ ಭಾಗವತ ತಾತ್ಪರ್ಯ ವಾಕ್ಯದಂತೆ,** ದುಷ್ಟವಾದ ಎರಡು ಪ್ರಕೃತಿಗಳು ಸೇರಿಕೊಂಡಿರುವುವು. ಲಿಂಗಶರೀರವು ಷೋಡಷ ಕಳೆಗಳುಳ್ಳದ್ದು ಎಂಬ ವಿಷಯವು **ಸಂಧಿ ೪ – ಪದ್ಯ ೨** ರಲ್ಲಿ ಬಂದಿದೆ. ಆದ್ದರಿಂದ ಇಲ್ಲಿ ಬರೆಯುವ ಅವಶ್ಯಕವಿಲ್ಲ. ಅಕ್ಕಿಯ ಮೇಲೆ ತವಡು ಒಂದು ಆವರಕ, ಅದರ ಮೇಲೆ ಹೊಟ್ಟು ಒಂದು ಆವರ್ಕವಾಗಿ ಹೇಗೆ ಭತ್ತವೆಂದೆನಿಸಿಕೊಂಡಿರುವುದೋ ಹಾಗೆ ಜೀವಾಚ್ಛಾದಿಕ ಮತ್ತು ಪರಮಾಚ್ಛಾದಿಕಗಳೆಂಬ ಎರಡು ಅಂಟಿಕೊಂಡಿರುವುವು. ಜೀವಾಚ್ಛಾದಿಕವು ಜೀವಸ್ವರೂಪವೇ ಕಾಣದಂತೆ ಆವರಿಸಿಕೊಂಡಿರುವುದು. ಈ ವಿಷಯದಲ್ಲಿ **ಶ್ರುತಿಗೀತೆಯು ಆಧಾರ :–** ರಮಾ ದೇವಿಯರು ಶ್ರುತಿರೂಪರಾಗಿ ಪರಮಾತ್ಮನನ್ನು ಪ್ರಾರ್ಥಿಸಿರುವರು.

**ಶ್ರುತಿಗೀತೆಯ ಪ್ರಥಮ ಶ್ಲೋಕ :–**

**"ಜಯಜಯ ಜಹ್ಯಜಾಮಜಿತದೋಷ ಗೃಹೀತ ಗುಣಾಂ"**

**"ಹೇ ಅಜಿತ ! ದೋಷ ಗೃಹೀತ ಗುಣಾಂ ಅಜಾಂ ಜಹಿ॥"**

ಯಾವಾಗಲೂ ಯಾರಿಗೂ ಸೋಲದ ಎಲೈ ದೇವ ! ಗುಣಗಳನ್ನು ನುಂಗಿ ದೋಷವನ್ನೇ ಪ್ರಕಟಿಸುತ್ತಿರುವ ಅಜಾಂ = ಜೀವಾಚ್ಛಾದಿಕ ಸ್ವರೂಪವಾದ ದುಷ್ಟಪ್ರಕೃತಿಯನ್ನು, ಜಹಿ = ನಾಶಗೊಳಿಸು-ಎಂದು ಪ್ರಾರ್ಥನೆ ಮಾಡಿರುವರು. ಜೀವಾಚ್ಛಾದಿಕದ ಒಳಭಾಗದಲ್ಲಿ ಪರಮಾಚ್ಛಾದಿಕವು ಪರಮಾತ್ಮನ ಸ್ವರೂಪವು ಜೀವನಿಗೆ ಕಾಣಗೊಡಿಸದೇ ಪರದೆ (ತೆರೆ) ಯಂತಿರುವುದು. ಅಂತಹ ಪರಮಾಚ್ಛಾದಿಕವೆಂಬ ದುಷ್ಟ ಪ್ರಕೃತಿಯನ್ನು "ಜಹಿ" ದೂರಮಾಡು ಎಂಬ **ಶ್ರುತಿವಾಕ್ಯ**ದಿಂದ ಇವೆರಡು ಪ್ರಕೃತಿಗಳು ಇರುವಾಗ ಜೀವನಿಗೆ ತನ್ನ ಸ್ವರೂಪವೇ ಆಗಲೀ, ಪರಮಾತ್ಮನ ಸ್ವರೂಪವೇ ಆಗಲಿ ಕಾಣಿಸುವುದಿಲ್ಲ. ಜೀವಾಚ್ಛಾದಿಕವು ನಾಶವಾದರೆ ಜೀವನ ಸ್ವರೂಪವು ಕಾಣುವುದು. ಜೀವನಿಗೂ ಪರಮಾತ್ಮನಿಗೂ ಮಧ್ಯೆ ತೆರೆಹಾಕಿದಂತೆ ಪರಮಾಚ್ಛಾದಿಕವಿರುವುದು. ಆ ತೆರೆಯೂ ಹೋದರೆ ಪರಮಾತ್ಮನ ಸ್ವರೂಪವು ಕಾಣಬರುವುದು. ಇದೇ ವಿಷಯವನ್ನೇ **ವಿಷ್ಣು ರಹಸ್ಯ**ದಲ್ಲಿಯೂ ಹೇಳಿರುವರು. ತ್ರಿಗುಣಾತ್ಮಕವಾದ ಲಿಂಗಶರೀರದಲ್ಲಿ ಪರಮಾತ್ಮನಿದ್ದು, ದೈತ್ಯರ ಪ್ರವೇಶವಿಲ್ಲದಂತೆ ಜೀವರನ್ನು ಪಾಲಿಸುತ್ತಿರುವನು. ॥೧೪॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃಮೂಲ) :-

"ಆರಧಿಕ"–ಇತಿ ॥ ಜೀವಗುಣಾಚ್ಛಾದಿಕಾ ಜೀವಾನಾಂ ಹರ್ಯ್ಯಪರೋಕ್ಷ ವಿಘಟಿಕಾ ಪರಮಾಚ್ಛಾದಿಕಾ ॥ ದಶಮಸ್ಕಂಧ ತಾತ್ಪರ್ಯೇ ಶ್ರುತಿಗೀತಾ ಪ್ರಬೋಧನೇ ಋಗ್ಭಾಷ್ಯಗೀತಾ ತಾತ್ಪರ್ಯ್ಯ ಯಾದುಪತ್ಯ ಸುಧಾಸುಚ॥ ಸತ್ತತ್ವ ರತ್ನಮಾಲಾಯಾಂ ತಟ್ಟೀಕಾರ್ಯ್ಯಾ ಯಾ ಚ ವಿಚಾರಿತಮ್ ॥ ಪ್ರಮೇಯಮೇತತ್ ಘಟನಾ ಕೃತಾಹರೆ ಸುಘಟ್ಟನೇ ॥ ಪ್ರಮೇಯ ಮುಕ್ತಾವಲ್ಯಾಂ ತು ಪ್ರಮಾಣೀಕೃತ್ಯ ಗಾರುಡಂ "ನಿತ್ಯ ಸಂಸಾರಿಣೀಂ ಈಶ ಅಪಪಾಸಾರ್ಯ್ಯಾನ್ಯಾಂ ಹನ ಪ್ರಭೋ ॥ ವಿಜ್ಞಾಪನೇ ತೀಂ ದಿರೋಕ್ತೇಃ ಸುಖದುಃಖ ಪ್ರದಾನತಃ ॥ ಜೀವದ್ವಯಂಚೈತ ದೇಹೇ ಸ್ಥಿತಂ ವ್ಯಾಜ್ ಪೂರ್ವಕೋ ಮಹಾನ್॥ ಘಟ್ಯ ಧಾತುರಿತಿ ದ್ವೇಷಿತಾಂ ಅಸ್ಯಾವ್ಯಕ್ತಿ ತದ್ಧೃತಿಮ್॥" ಇತಿ ಪ್ರಕಾಶರತ್ನಮಾಲಾಯಾಂ ಸುವಿಚಾರಿತಮ್ ॥೧೪॥

**ಕನ್ನಡಾರ್ಥ :**

ಜೀವರ ಗುಣಧರ್ಮಗಳನ್ನು ಜೀವನಿಗೆ ತಿಳಿಯಗೊಡದಂತೆ ಆವರಿಸಿರುವ ತೆರೆಗೆ **ಜೀವಾಚ್ಛಾದಿಕಾ** ಎಂದು ಹೆಸರು. ಜೀವರಿಗೆ ಪರಮಾತ್ಮನ ಅಪರೋಕ್ಷಜ್ಞಾನವಾಗದಂತೆ ಪ್ರತಿಬಂಧಕವಾಗಿರುವ ಆವರಣವು **ಪರಮಾಚ್ಛಾದಿಕಾ** ಎನಿಸುವುದು. ಈ ವಿಷಯವು **ಶ್ರುತಿಗೀತಾವ್ಯಾಖ್ಯಾನ** ಪ್ರಸಂಗದಲ್ಲಿ **ಭಾಗವತ ದಶಮಸ್ಕಂದ ತಾತ್ಪರ್ಯ ವ್ಯಾಖ್ಯಾನ- ಗೀತಾ ತಾತ್ಪರ್ಯ—ಋಗ್ಭಾಷ್ಯ-ಸುಧಾಯೂಮಪತ್ಯಾ-** ಮುಂತಾದ ಮೂಲ ಟೀಕಾ ಟಿಪ್ಪಣಿ ಗ್ರಂಥಗಳಲ್ಲಿ ವಿಸ್ತಾರವಾಗಿ ನಿರೂಪಿತವಾಗಿದೆ. **ಸತ್ತತ್ವರತ್ನಮಾಲಾ** ಹಾಗೂ ಅದರ ಟೀಕಾದಲ್ಲಿಯೂ ವಿವರಿಸಲ್ಪಟ್ಟಿದೆ. ಈ **ಪ್ರಮೇಯ**ವು **"ವ್ಯಾಘಟ್ಟೆ ಮೋಕ್ಷ ಪಡವೀಂ"** ಎಂಬ ಶ್ಲೋಕವ್ಯಾಖ್ಯಾನ ಪ್ರಸಂಗದಲ್ಲಿ ಉಕ್ತವಾಗಿದೆ. **ಪ್ರಮೇಯಮುಕ್ತಾವಲಿಯಲ್ಲಿ ಗರುಡ ಪುರಾಣ ವಾಕ್ಯದಿಂದ** ಸಮರ್ಥಿಸಲ್ಪಟ್ಟಿದೆ. "ನಿತ್ಯ ಸಂಸಾರವನ್ನು ತಂದೊಡ್ಡುವ ಪ್ರಕೃತಿಬಂಧದಲ್ಲಿ ಒಂದನ್ನು ಅಪಸರಣಮಾಡು. ಇನ್ನೊಂದನ್ನು ನಾಶಪಡಿಸು" ಎಂದು ಆ ವಾಕ್ಯದ ತಾತ್ಪರ್ಯ. ಅಂದರೆ (೧) ಜೀವಾಚ್ಛಾದಿಕವನ್ನು ಸಂಹರಿಸು. (೨) ಪರಮಾಚ್ಛಾದಿಕವಾದುದನ್ನು ಅಪಸರಣ ಮಾಡು ಎಂದು ಭಗವಂತನಲ್ಲಿ ಪ್ರಾರ್ಥನಾರೂಪವಾದ ಶ್ಲೋಕಾಭಿಪ್ರಾಯವು. **ಘಟ** ಎಂಬ ಧಾತುವು ಅತಿ ದ್ವೇಷಾರ್ಥಸೂಚಕ. ಅನೇಕ ಸುಖದುಃಖಗಳಿಗೆ ಕಾರಣವಾಗಿರುವ ಈ ಎರಡು ದುಷ್ಟ ಪ್ರಕೃತಿಗಳು. ಈ ಪ್ರಕೃತಿಗಳಿಗೆ ಅಭಿಮಾನಿಗಳಾದ ದುರ್ದೇವತೆಗಳನ್ನು ಕುರಿತಾದ ವಿಷಯವು ಪ್ರತಿ ಜೀವರಲ್ಲಿ ಈ ಎರಡು ದುರ್ದೇವತೆಗಳು ಜೀವದ್ವಯಾವಿಷ್ಟರಾಗಿದ್ದಾರೆ. ಪ್ರಕೃತಿಸಂಬಂಧವಾದ ಸುಖಕ್ಕೆ ದೇವತೆಗಳು ಮತ್ತು ದುಃಖಾದಿ ಭೋಗಗಳಿಗೆ ಅವರ ವಶದಲ್ಲಿರುವ ದೈತ್ಯರು ಕಾರಣರು. ಈ ಇಂತಹ ಜೀವಾಚ್ಛಾದಿಕೆಯ ಹನನ ಎಂದರೆ, ನಾಶವಾಗಬೇಕಾದರೆ, ಆ ದುರ್ದೇವತೆಗಳಿಂದ ಅಭಿಮನ್ಯಮಾನವಾದ ಚಿತ್‌ಪ್ರಕೃತಿಗೆ ನಾಶ ಎಂದರ್ಥ. ಇನ್ನೊಂದು ಅಚಿತ್‌ಪ್ರಕೃತಿ ಸಂಬಂಧವಾದ ಪರಮಾಚ್ಛಾದಿಕಾ, ಅಚಿತ್ ಪ್ರಕೃತಿಗೆ ನಾಶವಿಲ್ಲ. ಈ ಕಾರಣದಿಂದ ಪರಮಾಚ್ಛಾದಿಕದ ಅಪಸರಣ ಕ್ರಿಯ ಎಂಬ **ವ್ಯಾಘಟ್ಟನ**ವೆಂದು ತಿಳಿಯಬೇಕು.

ಪರಮಾಚ್ಛಾದಿಕವು ನಿತ್ಯ ಸಂಸಾರಿಣಿಯಾದ್ದರಿಂದ, ಆದಕ್ಕೆ ತಮಃ ಪ್ರಾಪ್ತಿ ಎಂಬ ಪರಿಹಾರವಿಲ್ಲ ಎಂದು ತಾತ್ಪರ್ಯಾರ್ಥ. ॥೧೪॥

## (ಆ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವ–ಪರಮಾತ್ಮರನ್ನು ತಿಳಿಸದೇ ಇರುವ ಎರಡು ಆವರಣಗಳು ಇರುವ ಸ್ಥಾನ ಮುಂತಾದ್ದನ್ನು ತಿಳಿಸುತ್ತಾರೆ, ಆರಧಿಕವೆಂದು. ಆರಧಿಕದಶಕಳೆಗಳುಳ್ಳ ಶರೀರ ಎಂದರೆ, ಜ್ಞಾನೇಂದ್ರಿಯಗಳು ಕಣ್ಣು ಮೊದಲಾದದ್ದು ಐದು, ಕರ್ಮೇಂದ್ರಿಯಗಳೆಂಬ ಕೈ ಬಾಯಿ ಮೊದಲಾದ್ದು ಐದು, ಸ್ಪರ್ಶರೂಪ ರಸ ಗಂಧವೆಂಬ ಪರಮಸೂಕ್ಷ್ಮ ತನ್ಮಾತ್ರಗಳೈದು, ಮನಸ್ಸು ಒಂದು ಸಹಾ ಸೇರಿ ಹದಿನಾರು ಕಳೆ ಎಂದರೆ, ಭಾಗಗಳುಳ್ಳ ಲಿಂಗಶರೀರದಲ್ಲಿ, ಸತ್ತ್ವ ರಜ ತಮ ಎಂಬ ಮೂರು ಗುಣಗಳಲ್ಲಿ ದುಷ್ಟಮರ್ದಕ ಜನಾರ್ದನದೇವರು ತ್ರಿವೃತು ಎಂದೆನಿಸಿ ಎಂದರೆ, ಸತ್ತ್ವಾವರಣ ಮನಸ್ಸಿನಲ್ಲೂ, ರಜೋಆವರಣದಲ್ಲಿರುವ ಪಂಚಜ್ಞಾನ ಪಂಚಕರ್ಮೇಂದ್ರಿಯಗಳಲ್ಲೂ, ತಮೋ ಆವರಣದಲ್ಲಿರುವ ಪಂಚತನ್ಮಾತ್ರಗಳಲ್ಲೂ ವ್ಯಾಪಿಸಿ ಇರುವದ್ದರಿಂದ ತ್ರಿವೃತು ನಾಮಕನಾಗಿ, ಈ ಲಿಂಗಶರೀರದ ಮೇಲೆ ಅನಿರುದ್ಧಶರೀರದ ಒಳಗೆ. ಹೀಗೆ ಎರಡು ಶರೀರ ಮಧ್ಯದಲ್ಲಿ, ಜೀವ–ಪರಮಾಚ್ಛಾದಿಕವೆಂಬ ಜೀವನನ್ನೂ ಪರಮಾತ್ಮನನ್ನೂ ತಿಳಿಸದಂತೆ ತೆರೆಗಳ ಹಾಗೆ ಇರುವ ಎರಡಾವರಣದಲ್ಲಿದ್ದು, ಪಾಪಪ್ರೇರಕ ತತ್ತ್ವಾಭಿಮಾನಿ ದಾನವರನ್ನು ಅದರಲ್ಲಿ ಪ್ರವೇಶಿಸದ ಹಾಗೆ ಸದಾ ದೂರ ಮಾಡುತ್ತಾ ನಿಯಮಿಸುವನೆಂದರ್ಥ.

**ಪ್ರಮಾಣ–:**

**ಇಂದ್ರಿಯಾಣಿದಶೈಕಂಚ ಮನಸ್ತನ್ಮಾತ್ರಕಾಸ್ತಥಾ ।**
**ಪಂಚೈವಂ ಷೋಡಶಕಳಂ ಲಿಂಗದೇಹಮನಾದಿಮತ್ । ಇತಿ**
**ವಿಷ್ಣುರಹಸ್ಯೇ ॥**

**ನಾರಿಕೇಳ ಫಲಾಕಾರಂ ಪರಿಚ್ಛೇದತ್ರಯಾತ್ಮಕಂ ।**
**ಮೂರ್ಧ್ನಿಚ್ಛಿದ್ರಯುತಂ ದಿವ್ಯರತ್ನವದ್ಭಾಸ್ವರಂ ಸದಾ ॥**

ವಿಷ್ಣುನಾರಮಯಾಚ್ಛನ್ನಛಿದ್ರಂ ಗರ್ಭಾವಕಾಶವತ್ ।
ಸೃಷ್ಟ್ಯಾಲಯೋ ರಮಾತಸ್ಯ ಮಾನಿನೀ ಚ ನಿರಂತರಂ ॥
ಸೃಷ್ಟ್ಯಾವೇದಾ ಬ್ರಹ್ಮ ವಾಯೂ ಸಭಾರ್ಯ್ಯಾವಭಿಮಾನಿನೌ ।
ರಜಸ್ಸತ್ತ್ವ ತಮಸ್ಸಂಜ್ಞ ಭಾವತ್ರಯ ಸಮನ್ವಿತಂ ॥
ಸತ್ತ್ವಭಾಗಃ ಶುಕ್ಲವರ್ಣಃ ರಕ್ತವರ್ಣಸ್ತು ರಾಜಸಃ ।
ನೀಲವರ್ಣಸ್ತಮೋಭಾಗ ಇತಿ ಭಾಗತ್ರಯಾನ್ವಿತಃ ॥
ಜ್ಞಾನಕರ್ಮೇಂದ್ರಿಯ ಕಳಾಃ ರಜೋಭಾಗೇ ವ್ಯವಸ್ಥಿತಾಃ ।
ತಮೋಭಾಗಗತಾಃ ಪಂಚತೆನ್ಮಾತ್ರಾ ಸಂಜ್ಞಿತಾಃ ಕಳಾಃ ॥
ಮನಃ ಕಳಾ ಸತ್ತ್ವಭಾಗಗತಾ ಸರ್ವಪ್ರಧಾನಿಕಾ ॥

ಹೀಗೆ ಪ್ರಕಾಶ ಸಂಹಿತೆಯ ಅರ್ಥ ಇದರಿಂದ ವಿವರಿಸಲ್ಪಟ್ಟಿತು. ॥೧೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರಿಗೆ ಆವರ್ಕವಾಗಿರುವ ಪ್ರಕೃತಿ ಪ್ರತಿಬಂಧಕ ರೂಪವಾದ ಜೀವಾಚ್ಛಾಧಿಕ ಮತ್ತು ಪರಮಾಚ್ಛಾಧಿಕ ಎಂಬ ಎರಡು ಆವರಣಗಳ ವಿಚಾರವನ್ನು ತಿಳಿಸುತ್ತಾರೆ. **ಆರಧಿಕ ದಶ** — ಎಂಬ ಪ್ರಸಕ್ತ ೧೪ ನೆಯ ಪದ್ಯದಿಂದ.

೧. ಜೀವನ ಸ್ವರೂಪದೇಹದ ಸುತ್ತಲೂ ಆವರಣರೂಪದಲ್ಲಿರುವ **ಲಿಂಗಶರೀರವು** ಅನಾದಿಯಾದದ್ದು. ಈ ಅನಾದಿ ಲಿಂಗದೇಹವು ಸ್ವರೂಪ ಶರೀರಕ್ಕೆ ಅಕ್ಕಿಯ ಕಾಳಿಗೆ ತವಡಿನಂತೆ ಸಾವಕಾಶವಾಗಿ ಹೊಂದಿಕೊಂಡಿದೆ, ಈ ಲಿಂಗಶರೀರವು ಹದಿನಾಱು ಕಲೆಗಳಿಂದ ಯುಕ್ತವಾಗಿದೆ.

ಷೋಡಶ ಕಳೆಗಳ ವಿವರ :-

| | | |
|---|---|---|
| 1. | ಜ್ಞಾನೇಂದ್ರಿಯಗಳು | = ೫ |
| 2. | ಕರ್ಮೇಂದ್ರಿಯಗಳು | = ೫ |
| 3. | ಭೂತಪಂಚಕಗಳು | = ೫ |
| 4. | ಮನಸ್ಸು | = ೧ |
| | ಒಟ್ಟು | = ೧೬ ಕಳೆಗಳು. |

೨. ಅನಾದಿ ಲಿಂಗಶರೀರದ ಸುತ್ತಲೂ ಆವರಣ ರೂಪದಲ್ಲಿ **ಅನಿರುದ್ಧ ಶರೀರ**ವಿದೆ. ಇದರಲ್ಲಿ ಜೀವನ ಅನಾದಿ ಕರ್ಮಪರಂಪರೆಗನುಗುಣವಾಗಿ ಪ್ರಾಪ್ತವಾಗುವ ಯೋನಿಗಳಿಗೆ ಕಾರಣವಾದ ಸೂಕ್ಷ್ಮಾಂಶವಿದೆ, ಲಿಂಗಶರೀರವು ಕರ್ಮಶರೀರವಾದರೆ, ಅನಿರುದ್ಧ ಶರೀರವು ಕಾರಣ ಶರೀರವೆನಿಸುವುದು, ತ್ರಿಗುಣಗಳ ವೈಷಮ್ಯದಿಂದ ಸೃಷ್ಟವಾದ ಅವ್ಯಕ್ತತತ್ತ್ವದ ಸ್ಥಾನವು ಲಿಂಗ ಶರೀರದ್ದು. ಮಹತ್ತತ್ತ್ವೋಪಾದಾನದಿಂದ ಸೃಷ್ಟವಾದ ಅಹಂಕಾರ ತತ್ತ್ವವು ಅನಿರುದ್ಧ ಶರೀರದ ಸೃಷ್ಟಿಗೆ ಕಾರಣವು. ಅನಾದಿಲಿಂಗದೇಹದ ಮೇಲೆ ಶ್ರೀ ಪರಮಾತ್ಮನಿಂದ ಲಿಂಗೋಪಾದಾನಕಾರಣದಿಂದ ಅನಿರುದ್ಧ ಶರೀರದ ಸೃಷ್ಟಿ.

೩. ಪೂರ್ವೋಕ್ತ ಅನಾದಿ ಲಿಂಗಶರೀರ ಮತ್ತು ಅನಿರುದ್ಧ ಶರೀರ ಇವುಗಳ ನಡುವೆ ಎರಡು ಆವರ್ಕಗಳಿವೆ. (ತೆರೆ)

(1) ಜೀವಾಚ್ಛಾದಿಕ.

(2) ಪರಮಾಚ್ಛಾದಿಕ.

೪. **ಜೀವಾಚ್ಛಾದಿಕ:-**

ಜೀವನ ಗುಣಧರ್ಮಗಳನ್ನು, ಅಂದರೆ, ಜೀವನ ಸ್ವರೂಪವನ್ನು

ಜೀವನಿಗೆ ತಿಳಿಯಗೊಡದಂತೆ ಆವರಿಸಿಕೊಂಡಿರುವ ತೆರೆ (ಪರದೆ)ಗೆ **ಜೀವಾ ಚ್ಛಾಧಿಕ** ಎಂದು ಹೆಸರು. ಜೀವನನ್ನು ಮರೆಮಾಡಿರುವ ತೆರೆ ಎಂದರ್ಥ. ಇದರ ಅಪಸರಣವಾಗದ ಹೊರ್ತು, ಸ್ವರೂಪಜ್ಞಾನವು ಜೀವನಿಗಾಗುವು ದಿಲ್ಲ.

೫. **ಪರಮಾಚ್ಛಾಧಿಕ :–**

ಜೀವರಿಗೆ ಪರಮಾತ್ಮನ ಅಪರೋಕ್ಷವಾಗದಂತೆ ಪ್ರತಿಬಂಧಕವಾಗಿರುವ ಆವರಣಕ್ಕೆ **ಪರಮಾಚ್ಛಾಧಿಕ** ಎಂದು ಹೆಸರು, ಈ ಆವರ್ತಕವು ಜೀವ ನಿಂದ ಬಿಂಬನಾದ ಶ್ರೀ ಪರಮಾತ್ಮನನ್ನು ಮರೆಮಾಡಿಸುವುದು.

ಇವೆರಡೂ ಆಚ್ಛಾಧನಗಳು ದುಷ್ಟವಾದ ಪ್ರಕೃತಿಸಂಬಂಧವಾದವು. ಭಗವದನುಗ್ರಹದಿಂದ ಅಪರೋಕ್ಷಜ್ಞಾನ ಪ್ರಾಪ್ತಿ. ಶ್ರೀಪರಮಾತ್ಮನ ಪರಮ ಪ್ರಸಾದದಿಂದ ಜೀವಾಚ್ಛಾಧಿಕವು ನಾಶವಾಗುವುದು. ಆಗ ಜೀವನಿಗೆ ಸ್ವಸ್ವರೂಪ ದರ್ಶನ ದ್ವಾರಾ ತಾನು ಯಾರೆಂಬ ಜ್ಞಾನವುಂಟಾಗುವುದು.

ಪ್ರಕೃತ್ಯಭಿಮನ್ಯಮಾನವಾದ ಪೂರ್ವೋಕ್ತ ಆಚ್ಛಾಧನಾದ್ವಯಗಳು ಜೀವದ್ವಯಾವಿಷ್ಟವಾಗಿವೆ. ಅಂದರೆ ದೇವತೆಗಳು ಮತ್ತು ಅವರ ವಶದಲ್ಲಿ ದೈತ್ಯರು ಅಭಿಮಾನಿಗಳಾಗಿದ್ದಾರೆ. ಇದರಿಂದ ಜೀವನಿಗೆ ಸುಖ ದುಃಖಗಳಿಗೆ ಕಾರಣವಾಗಿರುವ ದುಷ್ಟಪ್ರಕೃತಿ ಬಂಧಕಚ್ಛಾದ್ವಯಗಳಾಗಿವೆ. ಸುಖವು ದೇವತೆಗಳಿಂದಲೂ. ದುಃಖವೂ ದೈತ್ಯರಿಂದಲೂ ಉಂಟಾಗುವುವು. ಇದನ್ನು (ಜೀವಾಚ್ಛಾಧಿಕ) ಪರಿಹರಿಸು. ಅಂದೆರೆ ನಾಶಮಾಡು ಎಂದು ಜೀವರ ಪರವಾಗಿ ಶ್ರೀರಮಾದೇವಿಯರು ಶ್ರುತಿರೂಪರಾಗಿ ಪರಮಾತ್ಮನನ್ನು ಪ್ರಾರ್ಥಿಸಿರುವರು.

**ಶ್ರುತಿಗೀತೆಯ ಪ್ರಮಾಣ :–**

**"ಜಯಜಯ ಜಹ್ಯಜಾಮ ಜಿತ ದೋಷ ಗೃಹೀತ ಗುಣಾಂ"**

**ಹೇ ಅಜಿತ ! ದೋಷ ಗೃಹೀತ ಗುಣಾಂ ಅಜಾಂ ಜಹಿ ॥"**

ಎಂದರೆ **ಹೇ ಅಜಿತೆ**=ಅಜೇಯನಾದ ಅನಂತಾನಂತರೂಪಗಳಿಂದ ವಿರಾಜಮಾನನಾದ ಅಜಿತನಾಮ ಪರಮಾತ್ಮನೇ, **ಅಜಾಂ**=ಜೀವಾಚ್ಛಾಧಿಕರೂಪವಾದ ದುಷ್ಟಪ್ರಕೃತಿಯನ್ನು **ಜಹಿ**=ನಾಶಗೊಳಿಸು. ಆ ಆವರ್ಕವನ್ನು ಸಂಪೂರ್ಣವಾಗಿ ಪರಿಹರಿಸು ಎಂದು ಶ್ಲೋಕಾಭಿಪ್ರಾಯವು,

ಅಂತೆಯೇ, ನಿತ್ಯಸಂಸಾರವನ್ನು ತಂದೊಡ್ಡುವ ಪ್ರಕೃತಿಬಂಧರೂಪದಲ್ಲಿರುವ ಪರಮಾಚ್ಛಾಧಿಕವೆಂಬ ಇನ್ನೊಂದು ತೆರೆಯನ್ನು ಅಪಸರಣ ಮಾಡು, ಅಂದರೆ, ಶ್ರೀ ಪರಮಾತ್ಮನ ಸ್ವರೂಪದರ್ಶನಕ್ಕೆ ಪ್ರತಿಬಂಧಕವಾಗಿರುವ ತೆರೆಯನ್ನು ಸರಿಸು ಎಂದರ್ಥ. ಜೀವಾಚ್ಛಾಧಿಕಕ್ಕೆ ನಾಶ ಮತ್ತು ಪರಮಾಚ್ಛಾಧಿಕಕ್ಕೆ ಅಪಸರಣ. ಜೀವಾಚ್ಛಾದಿಕವು **ಚಿತ್** ಪ್ರಕೃತಿ ಸಂಬಂಧವಾದ್ದರಿಂದ ಅದಕ್ಕೆ ನಾಶವಿದೆ. ಪರಮಾಚ್ಛಾಧಿಕವು ಅಚಿತ್ ಪ್ರಕೃತಿ ಸಂಬಂಧವಾದ್ದರಿಂದ ನಾಶವಿಲ್ಲ. ಅಪಸರಣಮಾತ್ರ, **(ಶ್ರೀ ಜಂಬುಖಂಡಿ ವಾದಿರಾಜಾಚಾರ್ಯರ ವ್ಯಾಖ್ಯಾನ ಪ್ರಕಾರ)**

೪. ಇಂತಹ ಆಚ್ಛಾದನಾಗರನಾಗಿ ಪರಮಕರುಣಾಳುವಾದ ಶ್ರೀ ಪರಮಾತ್ಮನು **ಜನಾರ್ದನ** ನಾಮಕನಾಗಿ ಇರುವನು. ಅಂದರೆ ದುಷ್ಟರನ್ನು ಸಂಹರಿಸುವುದರಿಂದ ಶ್ರೀ ಪರಮಾತ್ಮನಿಗೆ **ಜನಾರ್ದನ**ನೆಂದು ಹೆಸರು. ಇಂತಹ ಜನಾರ್ದನ ರೂಪೀ ಶ್ರೀಹರಿಯು ದುಷ್ಟರಾದ ದೈತ್ಯರು ಜೀವನ ಸಮೀಪಕ್ಕೆ ಬಾರದಂತೆ, ಅವರನ್ನು ಅತಿದೂರದಲ್ಲಿ ಓಡಿಸುತ್ತಾ, ದುಷ್ಟರಾದ ದಾನವರ ಬಾಧೆಯಿಂದ ಜೀವರನ್ನು ರಕ್ಷಿಸುತ್ತಿರುವನು.

೫. ಲಿಂಗಶರೀರವು ಸತ್ವ, ರಜಸ್ತಮೋಗುಣಗಳೆಂಬ ಪ್ರಾಕೃತವಾದ ಗುಣತ್ರಯಾತ್ಮಕವಾದದ್ದು. ಇಂತಹ ತ್ರಿಗುಣಗಳಲ್ಲಿ ಶ್ರೀ ಪರಮಾತ್ಮನು ಇದ್ದು, ಗುಣತ್ರಯವ್ಯಾಪಾರಗಳನ್ನು ಅಭಿವ್ಯಕ್ತಿಗೊಳಿಸಿ, ನಡೆಯಿಸುವನು, ಇದರಿಂದ ಶ್ರೀ ಪರಮಾತ್ಮನಿಗೆ **ತ್ರಿವೃತು** ಎಂದು ಹೆಸರು.

ಹೀಗೆ ತ್ರಿವೃನ್ನಾಮಕವಾದ ಶ್ರೀ ಪರಮಾತ್ಮನು ತ್ರಿಗುಣಗಳ ವ್ಯಾಪಾರವನ್ನು ನಡೆಯಿಸುತ್ತಾ ತದ್ವಾರ ಜೀವರ ಅನಾದಿ ಕರ್ಮ ಪರಂಪರೆಗನುಗುಣವಾಗಿ ಕಾರ್ಯ ಕಾರಣರೂಪದಿಂದ ಕರ್ಮಫಲಪ್ರದನಾಗಿದ್ದಾನೆ. ॥೧೪॥

## ಪದ್ಯ(೧೫)

**ಮೂಲ :**

**ರುದ್ರ ಮೊದಲಾದಮರರಿಗೆ ಅನಿ ।**
**ರುದ್ಧ ದೇಹದ ಮನೆಯೆನಿಸುವುದು ।**
**ಇದ್ದು ಕೆಲಸವ ಮಾಡರಲ್ಲಿಂದಿತ್ತ ಸ್ಥೂಲದಲಿ ॥**
**ಕ್ರುದ್ಧ ಖಳ ದಿವಿಜರು ಪರಸ್ಪರ ।**
**ಸ್ಪರ್ಧಿಯಿಂದಲಿ ದ್ವಂದ್ವಕರ್ಮ ಸ ।**
**ಮೃದ್ಧಿಗಳನಾಚರಿಸುವರು ಪ್ರಾಣೇಶನಾಜ್ಞೆಯಲಿ ॥೧೫॥**

**ಅವತರಣಿಕೆ–**

ರುದ್ರಾದಿ ತತ್ತ್ವದೇವತೆಗಳ ಆವಾಸಸ್ಥಾನ ಹಾಗೂ ಸ್ಥೂಲಶರೀರದಲ್ಲಿ ದೇವದೈತ್ಯರ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ. **ರುದ್ರ ಮೊದಲಾದ** ಎಂಬ ಪ್ರಸಕ್ತ ಸಂಧಿಗತ ೧೫ ನೆಯ ಈ ಪದ್ಯದಿಂದ.

ಅನಾದಿಲಿಂಗದೇಹದ ಸುತ್ತಲೂ ಜನ್ಮಾಂತರಗಳಿಗೆ ಕಾರಣನಾದ ಅನಿರುದ್ಧ ಶರೀರದಲ್ಲಿ ರುದ್ರಾದಿ ತತ್ತ್ವದೇವತೆಗಳು ಆವಾಸವಾಗಿದ್ದಾರೆ. ಅಲ್ಲಿ ಅವರ ವ್ಯಾಪ್ತಿಯೇ ಹೊರ್ತು, ತತ್ತ್ವಕಾರ್ಯವಿಲ್ಲ. ಅನಿರುದ್ಧಶರೀರದ ಬಾಹ್ಯಾವರ್ಕವಾದ ಸ್ಥೂಲಶರೀರದಲ್ಲಿ ಚತುರ್ವಿಂಶತಿ ತತ್ತ್ವಗಳ ಅಭಿಮಾನಿಗಳಾದ ದೇವತೆಗಳೂ ಹಾಗೂ ದೈತ್ಯರೂ ಇದ್ದು, ಪರಸ್ಪರ ಸ್ಪರ್ಧಾತ್ಮಕವಾಗಿ

ಶುಭಾಶುಭ (ಪುಣ್ಯ-ಪಾಪ) ಗಳೆಂಬ ದ್ವಂದ್ವ ಕರ್ಮಗಳ ಪರಂಪರೆಯನ್ನು ಆಚರಿಸುವರು. ಜೀವೋತ್ತಮರಾದ (ಪ್ರಾಣೇಶ) ವಾಯುದೇವರ ಆಜ್ಞೆಯಿಂದ ದೇವ ದಾನವರ ಕಾರ್ಯ ಸಾಧನಶರೀರವೆಂದೆನಿಪ ಸ್ಥೂಲದೇಹದಲ್ಲಿ. ॥೧೫॥

**ಪ್ರತಿಪದಾರ್ಥ -**

**ರುದ್ರ ಮೊದಲಾದ**=ರುದ್ರದೇವರೇ ಆದಿಯಾಗಿ, **ಅಮರರಿಗೆ**= ತತ್ತ್ವಾಭಿಮಾನಿ ದೇವತೆಗಳಿಗೆ, **ಅನಿರುದ್ಧದೇಹವೆ** = ಅನಿರುದ್ಧ ಶರೀರವೆಂಬುವುದೇ, **ಮನೆಯೆನಿಸುವುದು**=ಆವಾಸಸ್ಥಾನವಾಗಿರುವುದು. **ಇದ್ದು** =ಆ ಅನಿರುದ್ಧ ಶರೀರದಲ್ಲಿದ್ದರೂ ಕೂಡ, **ಕೆಲಸವ**=ತಮಗೆ ಸಂಬಂಧಿಸಿದ ತತ್ತ್ವಕಾರ್ಯಗಳನ್ನು, **ಮಾಡರು**=ಮಾಡುವುದಿಲ್ಲ. ಅಂದರೆ ಅನಿರುದ್ಧ ಶರೀರದಲ್ಲಿ ರುದ್ರಾದಿದೇವತೆಗಳ ವ್ಯಾಪ್ತಿಮಾತ್ರ ; ಕಾರ್ಯವಿಲ್ಲ ಎಂದು ತಾತ್ಪರ್ಯ. **ಅಲ್ಲಿಂದಿತ್ತ**=ಅನಿರುದ್ಧ ಶರೀರದ ಆಚೆ ಇರತಕ್ಕ **ಸ್ಥೂಲದಲಿ** =ಸ್ಥೂಲಶರೀರದಲ್ಲಿ **ಕ್ರುದ್ಧ**=ಕ್ರೋಧವಶರಾದ **ಖಳ** = ದೈತ್ಯರು **ದಿವಿಜರು**=ದೇವತೆಗಳು **ಪರಸ್ಪರ ಸ್ಪರ್ಧಿಯಿಂದಲಿ**=ಒಬ್ಬರಿಗೊಬ್ಬರು ಪೈಪೋಟಿಯಿಂದ **ಪ್ರಾಣೇಶನಾಜ್ಞೆಯಲಿ**=ಜೀವೋತ್ತಮರಾದ ಮುಖ್ಯಪ್ರಾಣದೇವರ ಆಜ್ಞೆಗೆ ಒಳಪಟ್ಟು, **ದ್ವಂದ್ವಕರ್ಮ**=ಪಾಪ ಕರ್ಮಗಳನ್ನು ದೈತ್ಯರು ಮತ್ತು ಪುಣ್ಯ ಕರ್ಮಗಳನ್ನು ದೇವತೆಗಳು **ಸಮೃದ್ಧಿಗಳನು**= ಶುಭಾಶುಭ ಕರ್ಮಗಳ ಸಮೂಹಗಳ ಯಥೇಚ್ಛವಾಗಿ **ಆಚರಿಸುವರು**= ಮಾಡುತ್ತಾರೆ. ॥೧೫॥

## ವ್ಯಾಖ್ಯಾನಗಳು

### ೧) ಸಂಕರ್ಷಣ ಒಡೆಯ ವ್ಯಾಖ್ಯಾನ

ರುದ್ರಾದಿ ತತ್ತ್ವೇಶರ ಆವಾಸಸ್ಥಾನ ಹೇಳತಾರೆ.

ರುದ್ರದೇವರ ಆರಂಭಮಾಡಿ ಇಂದ್ರದೇವರೇ ಮೊದಲಾದ ಯಾವತ್ತೂ ದೇವತೆಗಳಿಗೆ ಅನಿರುದ್ಧಶರೀರವೇ ಆವಾಸಕ್ಕೆ ಯೋಗ್ಯವಾದ ಮನಿ ಎಂತ ಅನಿಸೋದಾಗತದೆ. (ಇದರ ಮ್ಯಾಲೆ ಇವರ ವ್ಯಾಪ್ತಿ ಇಲ್ಲ). ಈ ಅನಿರುದ್ಧ ಶರೀರದಲ್ಲಿ ಇದ್ದು ಈ ಶರೀರ ದ್ವಾರಾ ಕೆಲಸ ಮಾಡೋದಿಲ್ಲ, ಈ ಶರೀರ ಗಳೂ ಸ್ಥೂಲದೇಹವತ್ ಕೆಲಸ ಮಾಡೋದಿಲ್ಲ. ಅನಿರುದ್ಧಶರೀರಕ್ಕೆ ಈಚೇಲಿ ಇರತಕ್ಕ ಅನ್ಯವಾದ ಮೂಲಜಡಪ್ರಕೃತಿಯಿಂದ ನಿರ್ಮಿತವಾದ ಸ್ಥೂಲಶರೀರದಲ್ಲಿ ಅನಿರುದ್ಧಶರೀರಗತ ಕ್ರೋಧವಶರಾದ ದೈತ್ಯರು, ಅನಿರುದ್ಧಶರೀರಗತ ದೇವತೆಗಳು, ಈ ಯಾವತ್ತೂ ಮಂದಿ ಒಬ್ಬರಿಗೊಬ್ಬರಲ್ಲಿ ದ್ವೇಷದಿಂದ ಇದ್ದು, ಜೀವೋತ್ತಮರಾದ ವಾಯುದೇವರ ಆಜ್ಞಾದಿಂದ ಅಂಶ ವಿಶೇಷಗಳಿಂದ ಸ್ಥೂಲದೇಹದಲ್ಲಿ ವ್ಯಾಪ್ತರಾಗಿದ್ದು, ತದ್ದ್ವಾರಾ ಪಾಪ ಕರ್ಮ ದೈತ್ಯರು, ಪುಣ್ಯಕರ್ಮ ದೇವತೆಗಳು ಈ ಪ್ರಕಾರ ಎರಡು ವಿಧ ಕರ್ಮಗಳ ಸಮೂಹ ಯಥೇಷ್ಟವಾಗಿ ತಾವು ಮಾಡಿ, ಜೀವನಕಡಿಯಿಂದ ಸ್ಥೂಲ ದೇಹದ್ವಾರಾ ಆಚರಿಸುವಂತೆ ಮಾಡತಾರೆ. ದೇವತಾಧೀನರು ದೈತ್ಯರು, ದೈತ್ಯಾಧೀನರು ದೇವತೆಗಳಲ್ಲ, ಕ್ಷೀರನೀರವತ್ ಸೇರಿ ಇದ್ದಾರೆ. ಕ್ಷೀರದಲ್ಲಿ ಉದಕ ಸೇರಿದರೂ ಕ್ಷೀರಪ್ರಾಚುರ್ಯದೋಷಾದಿಯಲ್ಲಿ ದೇವತೆಗಳು ಕ್ಷೀರಸದೃಶರು, ಉದಕ ಸದೃಶರು ದೈತ್ಯರು ಎಂತ ತಾತ್ಪರ್ಯ.

**ತಾತ್ಪರ್ಯ-**

ಅನಿರುದ್ಧದೇಹಗತ ದೇವ-ದೈತ್ಯರು ಒಂದಂಶದಿಂದ ಸ್ಥೂಲದೇಹದಲ್ಲಿ ಇದ್ದು, ಅನಿರುದ್ಧದೇಹಗತ ವಾಯುದೇವರು ಪರಮಾತ್ಮನ ಸಹಿತರಾಗಿ ಸ್ಥೂಲದೇಹದಲ್ಲಿ ಒಂದಂಶದಿಂದ ಇದ್ದು, ಕ್ರಿಯಾದಿಗಳ ದೇವತೆಗಳ ದ್ವಾರಾ ತಾವು ತಾರತಮ್ಯಾನುಸಾರ ಮಾಡಿ ಜೀವನಕಡಿಯಿಂದ ಮಾಡಸತಾರೆ. ಮತ್ತು ದೇವತೆಗಳಲ್ಲಿ ದೈತ್ಯರು, ದೈತ್ಯರಲ್ಲಿ ದೇವತೆಗಳು ಇದ್ದು, ಅವರವರು ಪ್ರಾಣದೇವರ ಆಜ್ಞಾದಿಂದ ಪಾಪ-ಪುಣ್ಯಗಳ ಮಾಡಸತಾರೆ. ದೈತ್ಯರು ಜೀವನ ಕಡಿಯಿಂದ ಪಾಪಕಾರ್ಯ ಮಾಡಿಸಬೇಕಾದರೆ. ತದಂತರ್ಗತ ದೇವತೆಗಳ ಪ್ರೇರಣೆಯಿಂದಲೇ ಮಾಡಸತಾರೆ. ಸ್ವತಃ ಮಾಡೋದಿಲ್ಲ. ದೇವತೆಗಳು

ದೈತ್ಯರಲ್ಲಿ ಸೋಹಂ ಉಪಾಸನಾದಿ ಕರ್ಮಗಳ ದೈತ್ಯರ ದ್ವಾರಾ, ವಾಯುದೇವರ ಆಜ್ಞಾದಿಂದ ತಾವು ಮಾಡಿ ದೈತ್ಯರ ಕಡಿಯಿಂದ ಮಾಡಿಸಿ, ತದ್ವಾರಾ ಜೀವನ ಕಡಿಯಿಂದ ಮಾಡಸತಾರೆ ಎಂತ ತಾತ್ಪರ್ಯ.

ವಿಶೇಷಾರ್ಥ—ಪ್ರಮಾಣ

ತ್ವಗಾದಿಸಪ್ತಧಾತೂನಾಮಂತರನ್ನಮಯಾದಿಕಂ ।
ಸಂಕೋಶಪಂಚಮಂ ದೇಹೇ ವರ್ತತೇ ಕಂಚುಕೋ ಯಥಾ ॥
ಅನ್ನಾದಿಮಯಕೋಶೇಷು ತತ್ರನ್ನಾಮ ಹರಿಸ್ಸದಾ ॥
ತೇಷಾಮಂತಃ ಪ್ರದೇಶೇsಪಿ ಸೂಕ್ಷ್ಮಸೃಷ್ಟಿವಿನಿರ್ಮಿತಾಃ ।
ಅನಿರುದ್ಧಾದಿ ದೈವೈಸ್ತು ದೇಹಸ್ಥೈಃ ಶಬ್ದವಾಚಕಾಃ ।
ಲಿಂಗದೇಹೋ ಹರಿಸ್ಸದಾ ನೇಷ್ಟಂತೇ ಕಂಚುಕಂ ಸ್ಥಿತಾಃ ।
ಸ್ಥೂಲದೇಹಾಪಾದಕಶ್ಚ ತಂಡುಲಾಶ್ಚ ತುಷಾಯಥಾ ॥
ಅನಿರುದ್ಧಾದಿ ರೂಪಾಣಿ ತೇಷು ದೇಹೇಷು ಸಂತಿ ವೈ ।

ರಕ್ತಿಮಾ ತಂಡುಲಸ್ಯೇವ ಲಿಂಗದೇಹಸ್ತದಂತರೇ ॥ ಇತಿ ಬ್ರಹ್ಮಾಂಡೆ ಪುರಾಣೇ ವೆಂಕಟಗಿರಿಮಹಾತ್ಮ್ಯೇ ಸೂತ-ಋಷಿಸಂವಾದೇ ಅಧ್ಯಾತ್ಮ ಮಾಲಿಕಾವರ್ಣನಂ ನಾಮ ಏಕೋತ್ತರಶತಮೋಧ್ಯಾಯಃ ॥

ಅರ್ಥ-

ತ್ವಗಾದಿ ಸಪ್ತಧಾತುಗಳಿಂದ ಯುಕ್ತವಾದ ಸ್ಥೂಲಶರೀರ ಅನ್ನಮಯಾದಿ ಕೋಶಗಳಿಂದ ಯುಕ್ತವಾದದ್ದು, ಐದನೇ ದೇಹ, ಇದಕ್ಕೆ ಅನಿರುದ್ಧ ದೇಹ ಅಂತ ಹೆಸರು, ಈ ಅನಿರುದ್ಧ ಶರೀರ ಐದನೇ ಶರೀರ ಹ್ಯಾಂಗೆ ಅಂದರೇ, ಜೀವನ ಸ್ವರೂಪದೇಹ ಒಂದು. ಈ ಶರೀರದ ಮ್ಯಾಲೆ ಇರತಕ್ಕ ಶರೀರಗಳು-ಅನಾದಿಯಿಂದಲೂ ಇರತಕ್ಕ ಲಿಂಗಶರೀರ ಒಂದು, ಇದರ ಮ್ಯಾಲೆ ಅಣುಲಿಂಗಶರೀರ, ಇದೇ ಇಪ್ಪತ್ತನಾಲ್ಕು ಗುಣಗಳಿಂದ ಯುಕ್ತ

ವಾದ ವೈಷಯಿಕ ಶರೀರ. ಈ ಅಣುಲಿಂಗದಿಂದ ಯುಕ್ತವಾದ ಮಹತ್ತತ್ತ್ವ ಶರೀರದಿಂದ ಉತ್ಪನ್ನವಾದ ಅಹಂಕಾರತತ್ತ್ವಶರೀರ. ಇಲ್ಲಿ ಗರುಡಶೇಷ ರುದ್ರರು ಭಾರ್ಯಾಸಹಿತರಾಗಿ ಆವಾಸ. ಇಲ್ಲಿ ಷಣ್ಮಹಿಷಿಯರು ಕೂಡಾ ಆವಾಸ. ಅನಿರುದ್ಧ ಶರೀರ, ಇದನೂ ಮಹತ್ತತ್ತ್ವಗಳಿಂದಲೇ ಉತ್ಪತ್ತಿ, ಅಹಂಕಾರ ತತ್ತ್ವಕ್ಕೆ ಸದೃಶವಾದ ಅನ್ಯವಾದ ಶರೀರ. ರುದ್ರಾದಿಗಳ ಸಹಿತ ಇಂದ್ರಾದಿ ಯಾವತ್ತೂ ತತ್ತ್ವಾಭಿಮಾನಿಗಳು ಇರತಕ್ಕ ಶರೀರ. ಹಾಂಗೇ ದೈತ್ಯರೂನೂ ಈ ಶರೀರದಲ್ಲೇ ಆವಾಸರು. ಅಂತು ಐದು ಶರೀರಗಳಿಗೆ ಪಂಚಕೋಶಾತ್ಮಕ ಶರೀರವೆಂಬ ಅನಿರುದ್ಧಶರೀರ ಐದನೇದು ಎಂದು ಪ್ರಮಾಣಸಿದ್ಧವು. ಐದನೇ ದಾದ ಪಂಚಕೋಶಾತ್ಮಕ ದೇಹವೂ ಇರೋದಾಗಿ ಅದೆ. ಅಂಗಿ ಹ್ಯಾಂಗೋ ಹಾಂಗೆ ಎಂತ ತಾತ್ಪರ್ಯ. ದಾವದಕ್ಕೆ ಅಂಗಿ ಎಂದರೆ ಲಿಂಗಶರೀರಕ್ಕೆ ಅಂಗಿ. ಈ ದೃಷ್ಟಾಂತದಿಂದ ಅನಿರುದ್ಧಶರೀರ ಜೀವಾಕಾರ ಎಂತ ತಿಳಿಯಬೇಕು, ಲಿಂಗಶರೀರ ಜೀವಾಕಾರ, ಇದಕ್ಕೆ ಸಾಕಾರ ಅನಿರುದ್ಧಶರೀರವಾದ ಮೇಲೆ ಜೀವಾಕಾರವೇ ಸರಿ. ಅನ್ನಮಯಾದಿ ಕೋಶಗಳಲ್ಲಿ ಅನ್ನಾದಿರೂಪ ಅನ್ನಾದಿ ನಾಮದಿಂದ ಪರಮಾತ್ಮ ಸದಾ ಇದ್ದಾನೆ. ಈ ಅನ್ನಮಯಕೋಶ ಒಳ ಭಾಗದಲ್ಲಿರತಕ್ಕ ಅವಕಾಶಪ್ರದೇಶದಲ್ಲಿ ಆದರಧೇ ಸೂಕ್ಷ್ಮಸೃಷ್ಟಿಯನ್ನು ಚಂದಾಗಿ ಮಾಡೋವನಾಗತಾನೆ. ಆ ಸೂಕ್ಷ್ಮಸೃಷ್ಟಿದಾವುದು ಎಂದರೆ, ಅನಿರುದ್ಧದೇಹಸ್ಥ ತತ್ತ್ವಗಳಲ್ಲಿ ದೇವತೆಗಳು ಆವಾಸರಾದವರು, ಒಂದಂಶ ದಿಂದ ಕ್ರಿಯಾ ಮಾಡಸೋದಕ್ಕೆ ಸ್ಥೂಲದೇಹದಲ್ಲಿ ವ್ಯಾಪ್ತರಾಗತಾರೆ, ಆಗ್ಯೆ ಅವರವರು ತಮ್ಮ ತಮ್ಮ ತತ್ತ್ವಗಳ ಸಂಗಡ ಕೂಡಾ ಅಂಶಗಳು ಹೊರಟು, ಆಯಾ ತತ್ತ್ವಗಳಲ್ಲಿ ಅವರವರು ವಾಸಮಾಡಿ, ಆಯಾ ತತ್ತ್ವಸಮೇತರಾಗಿ ಸ್ಥೂಲದೇಹಗತ ತತ್ತ್ವಗಳಲ್ಲಿ ಆವಾಸರಾಗಿದ್ದು, ಈ ಸ್ಥೂಲದೇಹ ನಾಶ ವಾದರೆ ತಮ್ಮ ತಮ್ಮ ತತ್ತ್ವಸಹಿತವಾದ ಅಂಶಗತ ಅನಿರುದ್ಧಶರೀರವನ್ನು ಸೇರುತ್ತಾರೆ. ಆನಿರುದ್ಧಾಪೇಕ್ಷಯಾ ಸ್ಥೂಲಶರೀರ ಅತ್ಯಂತವಾದ ಅನಿತ್ಯತ್ವ ವುಳ್ಳದ್ದು. ಅದರಿಂದ ಅನಿರುದ್ಧಗತ ತತ್ತ್ವಾಂಶದಿಂದಲೇ ಸ್ಥೂಲದಲ್ಲಿ ಇರ ಬೇಕು. ಇಂಥಾ ತತ್ತ್ವಗಳ ಪಂಚಕೋಶ ಸೂಕ್ಷ್ಮವಾಗಿ ಸೃಷ್ಟಿಮಾಡತಾನೆ. ಅನಿರುದ್ಧಾದಿ ಭಗವದ್ರೂಪಗಳಾದರೋ ದೇಹದಲ್ಲಿದ್ದು ದೇಹಶಬ್ದವಾಚ್ಯ

ಕಾಗಿದ್ದಾರೆ. ದಾವ ದೇಹವೆಂದರೆ ವಿವರ— ೧. ಜೀವನ ಸ್ವರೂಪದಲ್ಲಿ ಅನಿರುದ್ಧನಾಮಕ ಪರಮಾತ್ಮ, ೨. ಅನಾದಿಲಿಂಗಶರೀರದಲ್ಲಿ ನಾರಾಯಣ, ೩. ಅಣುಲಿಂಗಶರೀರದಲ್ಲಿ ವಾಸುದೇವ, ೪. ಮಹತತ್ತ್ವಶರೀರದಲ್ಲಿ ಸಂಕರ್ಷಣ, ೫. ಅಹಂಕಾರ ತತ್ತ್ವಶರೀರದಲ್ಲಿ ಪ್ರದ್ಯುಮ್ನ, ೬. ಅನಿಕುದ್ಧ ಶರೀರದಲ್ಲಿ ಅನಿರುದ್ಧ, ಅಂತು ಆರರಲ್ಲಿ ಸ್ವರೂಪದೇಹವ್ಯತಿರಿಕ್ತ ಐದು ಶರೀರಗಳು. ಈ ಶರೀರಗಳು ಒಂದಕ್ಕೊಂದು ಕಂಚುಕಾಕಾರದಿಂದ ಅವೆ. ॥೧೫॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ :-

ರುದ್ರ ಮೊದಲಾದ ದೇವತೆಗಳಿಗೆ ಲಿಂಗಶರೀರದಲ್ಲಿ ಪ್ರವೇಶವಿಲ್ಲವೆಂದು ಮೇಲಿನ ಪದ್ಯದಲ್ಲಿ ಹೇಳಿದರು. ಹಾಗಾದರೆ ಅವರ ಪ್ರವೇಶ ಎಲ್ಲಿಯುವರೆಗೆ ಅಂದರೆ, ಅದನ್ನು ಹೇಳುತ್ತಾರೆ.

ರುದ್ರ ಮೊದಲಾಧ ತತ್ತ್ವೇಶರು ಅನಿರುದ್ಧ ಶರೀರದಲ್ಲಿ ವಾಸವಾಗಿದ್ದು, ಇಂದ್ರಿಯ ವ್ಯಾಪಾರಗಳನ್ನು ಮಾಡದೆ ಇರುವರು. ಏಕೆಂದರೆ ಆ ಶರೀರದಲ್ಲಿ ಇಂದ್ರಿಯ ವ್ಯಾಪಾರಗಳು ಇರುವುದಿಲ್ಲ. ಅದರಿಂದೀಚೆಗೆ ಇರುವ ಸ್ಥೂಲ ದೇಹದಲ್ಲಿ ತತ್ತ್ವಾಭಿಮಾನಿಗಳಾದ ದೇವತೆಗಳೂ ದೈತ್ಯರೂ ಸಹ ಇರುವರು. ಪರಸ್ಪರ ಈ ಎರಡು ಗುಣಗಳು ದ್ವೇಷದಿಂದ ಪಾಪಕರ್ಮಗಳನ್ನು ದೈತ್ಯರೂ, ಪುಣ್ಯಕರ್ಮಗಳನ್ನು ದೇವತೆಗಳೂ, ಹೀಗೆ ಪ್ರಾಣದೇವರ ಆಜ್ಞಾಧಾರಕರಾಗಿ ಸ್ಥೂಲದೇಹದಿಂದ ಮಾಡಿಸುತ್ತಿರುವರು. ॥೧೫॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ :-

ರುದ್ರಾದಿ ದೇವತೆಗಳು ಅನಿರುದ್ಧಶರೀರದಲ್ಲಿದ್ದು, ಕೆಲಸಮಾತ್ರ ಮಾಡದೇ, ಸ್ಥೂಲದೇಹದಲ್ಲಿದ್ದು, ಸ್ಥೂಲದೇಹದ ಕಾರ್ಯ ಸರ್ವದಾ ನಡೆಸುತ್ತಾರೆಂದು ಹೇಳುತ್ತಾರೆ. "ರುದ್ರೇತಿ" "ಪ್ರಾಣೇಶೇತಿ"–ವಾಯು ದೇವರ ಆಜ್ಞಾನುಬದ್ಧರಾಗಿ ಎಂಬರ್ಥ. ॥೧೫॥

**(೪) ವ್ಯಾಸದಾಸ ಸಿದ್ಧಾಂತ ಕೌಮುದೀ–**

"ರುದ್ರ"-ಇತಿ ॥ ಇತ್ತ-ಇದ್ದ ॥ ದ್ವಂದ್ವೇತಿ– ಅನುಪದಂ ವಕ್ಷ್ಯಾಮಃ ॥ "ರುದ್ರ ಮೊದಲಾದ"–ಎಂಬ ಪ್ರಸಕ್ತ ಪದ್ಯದಲ್ಲಿ "ಇತ್ತ" ಎಂಬ ಪಾಠಾಂತರ ವನ್ನು ಕಲ್ಪಿಸಿದಂತೆ ಕಾಣಿಸುತ್ತದೆ.

"ದ್ವಂದ್ವ"–ಇದರ ಶಬ್ದಾರ್ಥವಿವರಣೆಯನ್ನು ಮುಂದೆ ವಿವರಿಸು ತ್ತೇವೆ. ॥೧೫॥

**(೫) ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ :-**

ಅನಿರುದ್ಧಶರೀರವಿರುವ ಬಗೆ ತಿಳಿಸುತ್ತಾರೆ. ರುದ್ರ ಎಂದು ಮೇಲೆ ಹೇಳಿದ ಜೀವಾಚ್ಛಾಧಿಕ–ಪರಮಾಚ್ಛಾಧಿಕಾವರಣ ಇವೆರಡರ ಮೇಲಿರುವ ಅನಿರುದ್ಧದೇಹವೇ ರುದ್ರ ಮೊದಲಾದ ದೇವತೆಗಳಿಗೆ ಸ್ಥಾನವೆನಿಸುವುದು. ಆ ರುದ್ರಾದಿದೇವತೆಗಳು ಸ್ಥೂಲದೇಹದಲ್ಲಿದ್ದು ಪ್ರೇರಿಸುವುದಿಲ್ಲವು. ಕ್ರೋಧ ಯುಕ್ತ ತತ್ತ್ವಾಭಿಮಾನಿ ಅಸುರರು ತತ್ತ್ವೇಶ ದೇವತೆಗಳು ಸಹಾ ಪರಸ್ಪರ ಸ್ಪರ್ಧೆಯಿಂದಲಿ ಎಂದರೆ, ಜೀವರ ಅನಾದಿಕರ್ಮಾನುಗುಣ ದೇವತೆಗಳು ಪುಣ್ಯ ಪ್ರೇರಿಸಿದರೆ, ನಾವು ಪಾಪ ಪ್ರೇರಿಸುವೆವು ಎಂದು ವಿರೋಧ ನಡತೆಯಿಂದ ದ್ವಂದ್ವವೆಂಬ ಪುಣ್ಯ–ಪಾಪ ಕರ್ಮ ಸಮೃದ್ಧಿ ಎಂದರೆ, ಹೆಚ್ಚಾಗಿ ಪ್ರಾಣೇಶ ನಾಜ್ಞೆಯಿಂದ ಸ್ಥೂಲದೇಹದಲ್ಲಿದ್ದು ಮಾಡಿಸುವರು. ॥೧೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸ್ವರೂಪಶರೀರ ಮತ್ತು ಅನಾದಿಲಿಂಗಶರೀರ ವಿಚಾರವನ್ನು ಪೂರ್ವ ಪದ್ಯದಲ್ಲಿ ತಿಳಿಸಿ, **ರುದ್ರ ಮೊದಲಾದ**-ಪ್ರಕೃಸ್ತ ೧೫ ನೆಯ ಪದ್ಯದಿಂದ ಅನಿರುದ್ಧಶರೀರಗತ ರುದ್ರಾದಿ ದೇವತೆಗಳ ವಿಚಾರ ಮತ್ತು ಸ್ಥೂಲಶರೀರದಲ್ಲಿ ದೇವ ದೈತ್ಯರ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ,

೧. ಅನಾದಿನಿತ್ಯವಾದ ಸ್ವರೂಪದೇಹದ ಸುತ್ತಲೂ ಕವಚರೂಪವಾಗಿ ಅನಾದಿಲಿಂಗಶರಿರವಿದೆ. ಅದರಮೇಲೆ ಜೀವಾಚ್ಛಾದಿಕ ಮತ್ತು ಪರಮಾಚ್ಛಾದಿಕ ಎಂಬ ಪ್ರಕೃತಿ ಸಂಬಂಧವಾದ ಎರಡು ಆವರ್ಕಗಳಿವೆ. ಅವುಗಳ ಸುತ್ತಲೂ ಅನಿರುದ್ಧ ಶರೀರವಿದೆ. ಸ್ವರೂಪದೇಹವು ಚಿದಾತ್ಮಕವಾಗಿದ್ದು. ಅಪ್ರಾಕೃತ ಗುಣಯುಕ್ತವಾದದ್ದು. ಪ್ರಕೃತ್ಯಾತ್ಮಕ ಗುಣತ್ರಯಂಗಳ ವೈಷಮ್ಯದಿಂದ ಅವ್ಯಕ್ತತತ್ತ್ವದ ಸೃಷ್ಟಿ. ಗುಣತ್ರಯಾತ್ಮಕವಾದ ಷೋಡಶಕಲಾಯುಕ್ತ ಲಿಂಗಶರೀರವು ಅವ್ಯಕ್ತತತ್ವಾತ್ಮಕವಾದುದು. ಇದಕ್ಕೆ ಅಭಿಮಾನಿಗಳು ಶ್ರೀ ಲಕ್ಷ್ಮೀದೇವಿಯು. ಅವ್ಯಕ್ತ ತತ್ತ್ವದಿಂದ ಮಹತ್ತತ್ವದ ಸೃಷ್ಟಿಯು. ಮಹತತ್ತ್ವ ದಿಂದ ಜನ್ಯವಾದುದು ಅಹಂಕಾರ ತತ್ತ್ವವು. ಗುಣಗಳ ಸಮ್ಮೇಳನದಿಂದ ಈ ತತ್ತ್ವಗಳ ಸೃಷ್ಟಿಯು ತಾರತಮ್ಯಾನುಸಾರವಾಗಿ. ಮಹತ್ತತ್ವದ ಉಪಾ ದಾನ ಕಾರಣರೂಪವಾದ ಅಹಂಕಾರ ತತ್ತ್ವವು ಅನಿರುದ್ಧ ಶರೀರದ ಸೃಷ್ಟಿಗೆ ಕಾರಣವು. ಅನಾದಿ ಕರ್ಮ ಬೀಜವು ಲಿಂಗಶರೀರಗತವಾಗಿದೆ. ಈ ಕಾರಣದಿಂದ ಲಿಂಗಶರೀರಕ್ಕೆ **ಕರ್ಮಶರೀರ**ದೆಂದು ಹೆಸರು. ಇಂತಹ ಅನಾದಿ ಕರ್ಮದ ಕಾರಣವಾಗಿ ಜೀವನಿಗೆ ನಾನಾ ಜನ್ಮಗಳ ಪ್ರಾಪ್ತಿ. ೮೪ ಲಕ್ಷಯೋನಿಗಳಲ್ಲಿ ಜೀವನ ಸಂಚಾರ. ಜೀವನಿಗೆ ಪ್ರಾಪ್ತವಾಗುವ ಜನ್ಮಾಂತರಗಳ ಅಂಕುರವು ಅನಿರುದ್ಧ ಶರೀರದಲ್ಲಿದೆ. ಇದರಿಂದ ಅನಿರುದ್ಧ ಶರೀರಕ್ಕೆ **ಕಾರಣಶರೀರ** ವೆಂದು ಹೆಸರು. ಅಹಂಕಾರ ತತ್ತ್ವಾಭಿಮಾನಿ ಗಳಾದ ಗರುಡ, ಶೇಷ, ರುದ್ರ ಮತ್ತು ಅವರ ಪತ್ನಿಯರಾದ ಸೌಪರ್ಣೀ ವಾರುಣೀ ಮತ್ತು ಪಾರ್ವತಿ ಈ ದೇವತೆಗಳು ಅನಿರುದ್ಧ ಶರೀರದಲ್ಲಿ ಆವಾಸ ವಾಗಿದ್ದಾರೆ. ಅವರ ವಶದಲ್ಲಿ ಮನೋಭಿಮಾನಿಗಳಾದ ಇಂದ್ರಾದಿ ಇತರ ತತ್ವೇಶರು ಪತ್ನೀಸಹಿತರಾಗಿ ಅನಿರುದ್ಧ ಶರೀರದಲ್ಲಿ ವ್ಯಾಪ್ತರಾಗಿದ್ದಾರೆ. ಈ ಅಭಿಪ್ರಾಯವನ್ನು ದಾಸರು ಪ್ರಸಕ್ತಪದ್ಯದಲ್ಲಿ **ರುದ್ರನೊದಲಾದಮರರಿಗೆ ಅನಿರುದ್ಧದೇಹವೆ ಮನೆಯೆನಿಸುವುದು** ಎಂದು ನಿರೂಪಿಸಿರುತ್ತಾರೆ. **ಮನೆ** ಎಂದರೆ ಆವಾಸಸ್ಥಾನ ಎಂದರ್ಥ.

೨. ಅನಿರುದ್ಧದೇಹದಲ್ಲಿ ತತ್ತ್ವಗಳುಸೂಕ್ಷ್ಮ ರೂಪದಲ್ಲಿದ್ದರೂ ರುದ್ರಾದಿದೇವತೆಗಳಿಗೆ ತತ್ತ್ವಕಾರ್ಯರೂಪವಾದ ವ್ಯಾಪಾರವಿಲ್ಲ. ಅನಿ

ಶುದ್ಧ ಶರೀರದಲ್ಲಿ ವ್ಯಾಪ್ತಿ (ಸ್ಥಿತ್ವ)ಯೇ ಹೊರತು ಕಾರ್ಯವಿಲ್ಲ (ಇದ್ದು **ಕೆಲಸವ ಮಾಡರು**) ಈ ತತ್ತ್ವವನ್ನು **ಶ್ರೀ ಜಗನ್ನಾಥದಾಸವರ್ಯರು ಶ್ರೀ ಭಾರತೀದೇವಿಯರ ಪರವಾದ ಪದದಲ್ಲಿ ಹೀಗೆ ನಿರೂಪಿಸಿದ್ದಾರೆ:—**

**ರಾಗ-ಶಂಕರಾಭರಣ** **ಅಟತಾಳ**

**ಭಾರತೀ-ಮಜ್ಜನನೀ-ಭಾರತೀ ||ಪ||**
**ಗುಣತ್ರಯಾತ್ಮಕನಾದ ಲಿಂಗ-ದೊಳು**
**ಅಣುರೂಪಳಾಗಿ ತುರಂಗ-ಮುಖ**
**ಅನಿಲಾಂತರ್ಗತ ಪಾಂಡುರಂಗ-ನಂಘ್ರಿ**
**ವನಜಯುಗಳ ಮತ್ತ ಭೃಂಗ- ||ಅಪ||**
**ಎನಿಸಿ ತತ್ತ್ವಕಾರ್ಯ ಅನಿರುದ್ಧದೇಹಸ್ಥ**
**ಅನಿಮಿಷರೊಳು ಪೊಕ್ಕು ದ್ವಿನವ ರೂಪದಿ ನಾಳ್ಪೆ || ||೪||**

ಅಂದರೆ, ಅನಿರುದ್ಧ ದೇಹದಲ್ಲಿರುವ ರುದ್ರಾದಿ ತತ್ತ್ವೇಶರಲ್ಲಿ ಅಂತಸ್ಥಿತರಾಗಿದ್ದು ಶ್ರೀವಾಯುದೇವರು ಭಾರತೀಸಹಿತರಾಗಿ ವ್ಯಾಪಾರ ಮಾಡಿ ಮಾಡಿಸುವರು. ಈ ತತ್ತ್ವಕ್ರಿಯಾರೂಪವಾದ ವ್ಯಾಪಾರ ಅನಿರುದ್ಧ ದೇಹದಮೇಲೆ ಆವರಣರೂಪದಲ್ಲಿರುವ ಸಾಧನಶರೀರವೆಂದೆನಿಸುವ **ಸ್ಥೂಲ ಶರೀರದಲ್ಲಿ.** ಅನಿರುದ್ಧ ಶರೀರದಲ್ಲಿ ತತ್ತ್ವಾಭಿಮಾನಿದೇವತೆಗಳೂ ಮತ್ತು ದೈತ್ಯರೂ ಇಬ್ಬರೂ ಇದ್ದಾರೆ. ಅವರಿಬ್ಬರ ವ್ಯಾಪ್ತಿಮಾತ್ರ ಅನಿರುದ್ಧ ಶರೀರದಲ್ಲಿ ತತ್ತ್ವಕಾರ್ಯಗಳಿಲ್ಲ.

೬, ಭಗವದ್ವೇಷಿಗಳಾದ ದೈತ್ಯರ ಕಾರ್ಯ ಸ್ಥೂಲಶರೀರದಲ್ಲಿ. ತಮೋಯೋಗ್ಯರಾದ ದೈತ್ಯರು ತಮ್ಮ ಸ್ವರೂಪಯೋಗ್ಯತೆಗನುಗುಣವಾಗಿ ಕಾರ್ಯ ಭಗವತ್ಪ್ರೇರಣೆಯಿಂದ ಮಾಡುತ್ತಾರೆ. ಪಾಪಕಾರ್ಯಗಳು ದೈತ್ಯರ ದ್ವಾರಾ ನಡೆಯುವುದರಿಂದ, ದೇವತೆಗಳಮೇಲೆ ದ್ವೇಷ ಸಾಧಿಸುವುದ

**ಖಿಂದ ಕ್ರುದ್ಧ ಖಳರು** ಎಂದಿದ್ದಾರೆ. ಕ್ರೋಧವಶರಾಗಿ ದೈತ್ಯರು (ಖಳರು) ಸ್ಥೂಲದೇಹದಲ್ಲಿದ್ದು ಪಾಪಕಾರ್ಯಗಳನ್ನು ಮಾಡುತ್ತಾರೆ. ಅಂತೆಯೇ ತತ್ವಾಭಿಮಾನಿ ದೇವತೆಗಳು ಜೀವನ ಕರ್ಮಾನುಸಾರ ಭಗವದಧೀನರಾಗಿ ಪುಣ್ಯಕಾರ್ಯಗಳನ್ನು ಮಾಡುವರು, ಆ ದೇವತೆಗಳೇ ದೈತ್ಯರಲ್ಲಿದ್ದು ಪಾಪ ಕಾರ್ಯಗಳನ್ನು ಮಾಡಿಸುವರು ಆ ಕರ್ಮಲೇಪ ಅವರಿಗಿಲ್ಲ. ಕೇವಲ ಭಗವತ್ಪ್ರೀತಿಗಾಗಿ, ಅವನ ಪ್ರೇರಣೆಯಿಂದಲೇ ತತ್ತ್ವದೇವತೆಗಳ ಕಾರ್ಯ.

೭. ಶ್ರೀವಾಯುದೇವರು ಜೀವೋತ್ತಮರು, ಅವರ ಆಜ್ಞಾಧೀನರಾಗಿ (**ಪ್ರಾಣೇತನಾಜ್ಞೆಯಲಿ**) ದೇವ ದಾನವರ ತತ್ತ್ವಕಾರ್ಯ ಈ ಸ್ಥೂಲ ದೇಹದಲ್ಲಿ ನಡೆಯುತ್ತಿರುವುವು. ದೇವತೆಗಳಿಂದ ಪುಣ್ಯಕಾರ್ಯವೂ ಮತ್ತು ದಾನವರಿಂದ ಪಾಪಕಾರ್ಯವೂ ಸಮಾನಾಂತರವಾಗಿ ನಡೆಯುತ್ತಿರುವುದರಿಂದ **ದ್ವಂದ್ವ ಕರ್ಮ** ಎಂದು ಹೇಳಿರುತ್ತಾರೆ. ಇಂತಹ ಶುಭಾಶುಭ ರೂಪವಾದ ದ್ವಂದ್ವಕರ್ಮಗಳು ಅನಾದಿಕರ್ಮಪರಂಪರೆಯ ಮೂಲದಿಂದ ಸಂಚಿತಾಗಾಮಿಗಳ ರೂಪದಲ್ಲಿ ಸಮೂಹವಾಗಿ (**ಸಮೃದ್ಧಿಗಳ**) ದೇಹ ದೈತ್ಯರಿಂದ ಶ್ರೀ ಪ್ರಾಣದೇವರ ಆಜ್ಞಾನುಸಾರವಾಗಿ ನಡೆಯುತ್ತಿರುವುವು. ಬಿಂಬನಾದ ಶ್ರೀಪರಮಾತ್ಮನ ಪ್ರೇರಣೆ ಶ್ರೀಪ್ರಾಣದೇವರಿಗೆ. ಶ್ರೀಪ್ರಾಣದೇವರ ಪ್ರೇರಣೆ ದೇವತೆಗಳು ಮತ್ತು ಅವರ ದ್ವಾರಾ ದೈತ್ಯರಿಗೆ ಇಂತು ತತ್ತ್ವಕಾರ್ಯಗಳು ದೇವದೈತ್ಯರಿಂದ ಶ್ರೀಹರಿವಾಯುಗಳ ಪ್ರೇರಣಾನುಸಾರ ನಡೆದು, ತತ್ಫಲ ರೂಪವಾದ ಸುಖದುಃಖಾನುಭವಗಳು ಸ್ಥೂಲದೇಹದಲ್ಲಿ ಪ್ರಕಾಶತೋವ್ಯಾಪ್ತನಾದ ಜೀವನಿಗೆ ಉಂಟಾಗುವುವು. ॥೧೫॥

## ಪದ್ಯ (೧೬)

**ಮಹಿಯೊಳಗೆ ಸುಕ್ಷೇತ್ರತೀರ್ಥದಿ ।**
**ತುಹಿನ ವರುಷ ವಸಂತಕಾಲದಿ ।**
**ದೈಹಿಕ ದೈಶಿಕ ಕಾಲಿಕತ್ರಯ ಧರ್ಮಕರ್ಮಗಳ ॥**
**ದ್ರುಹಿಣ ಮೊದಲಾದಮರರೆಲ್ಲರು ।**
**ವಹಿಸಿ ಗುಣಗಳನನುಸರಿಸಿ ಸ ।**
**ನ್ನಿಹಿತರಾಗಿದ್ದೆಲ್ಲರೊಳು ಮಾಡುವರು ವ್ಯಾಪಾರ ॥** ॥೧೬॥

ದೈಹಿಕ. ದೈಶಿಕ ಮತ್ತು ಕಾಲಿಕ ಎಂಬ ಪ್ರಕಾರವಾದ ಕರ್ಮಗಳನ್ನು ಬ್ರಹ್ಮಾದಿ ತತ್ತ್ವದೇವತೆಗಳು ನಮ್ಮ ಸ್ಥೂಲದೇಹದಲ್ಲಿ ಅಧಿಷ್ಟಿತರಾಗಿದ್ದು, ಮಾಡಿ ಮಾಡಿಸುತ್ತಾರೆಂಬ ವಿಷಯವನ್ನು ನಿರೂಪಿಸುತ್ತಾರೆ **ಮಹಿಯೊಳಗೆ** ಎಂಬ ಪ್ರಸಕ್ತ ಸಂಧಿಗತ ೧೬ನೆಯ ಈ ಪದ್ಯದಿಂದ.

ಶ್ರೀಹರಿವಾಯುಗಳ ಪ್ರೇರಣಾನುಸಾರ ಬ್ರಹ್ಮಾದಿ ಸಕಲ ತತ್ತ್ವೇಶರು, ನಮ್ಮ ಸ್ಥೂಲದೇಹಗತರಾಗಿ ಜೀವನ ಸ್ವರೂಪಯೋಗ್ಯತೆಯನ್ನನುಸರಿಸಿ, ದೇಹದ ದ್ವಾರಾ ನಡೆಯುವ ಕ್ರಿಯಾದಿಗಳು. ದೇಶ ಮತ್ತು ಕಾಲೋಚಿತವಾದ ಧರ್ಮಕರ್ಮಗಳನ್ನು ಶ್ರೀ ಪರಮಾತ್ಮನ ಆಜ್ಞಾಧಾರಕರಾಗಿ ತಮ್ಮ ತಮ್ಮ ತತ್ತ್ವಕಾರ್ಯಗಳನ್ನು ಎಸಗುತ್ತಾ ಜೀವನ ದ್ವಾರಾ ತ್ರಿವಿಧ ಜೀವರ ಯೋಗ್ಯತಾನುಸಾರ, ವಿದ್ಯಮಾನರಾಗಿದ್ದಾರೆ. ॥೧೬॥

**ಮಹಿಯೊಳಗೆ** = ಭರತಖಂಡವೆಂಬ ಈ ಭೂಮಿಯಲ್ಲಿ, **ಸುಕ್ಷೇತ್ರ ತೀರ್ಥದಿ** = ಸಮೀಚೀನವಾದ ಬದರಿ, ವೆಂಕಟಾಚಲ, ಶ್ರೀರಂಗ, ಅಯೋಧ್ಯಾ, ಮಧುರಾದಿ ಕ್ಷೇತ್ರಗಳು, ಗಂಗಾದಿ ತೀರ್ಥಗಳಲ್ಲಿ, **ತುಹಿನ** = ಮಂಜು ಮುಸುಕಿರುವ ಚಳಿಗಾಲವಾದ ಹಿಮಂತಋತು, (ಧನುರ್ಮಾಸ ಇತ್ಯಾದಿ) **ವರುಷ** = ಮಳೆಗಾಲವಾದ ವರ್ಷಋತು, **ವಸಂತಕಾಲದಿ** =

ಬೇಸಿಗೆ ಕಾಲವಾದ ವಸಂತಋತು ಇತ್ಯಾದಿ ವರ್ಷದ ಕಾಲಪ್ರಬೇಧಗಳಲ್ಲಿ, **ದೈಹಿಕ** = ದೇಹಸಂಬಂಧವಾದ, **ದೈಶಿಕ** = ಆಯಾಯಾ ದೇಶಗಳಿಗೆ ಸಂಬಂಧವಾದ, **ಕಾಲಿಕ** = ಕಾಲಸಂಬಂಧವಾದ **ತ್ರಯ** = ಈ ರೀತಿ ಮೂರು ಪ್ರಕಾರವಾದ, **ಧರ್ಮ** = ವಯೋಗುಣವಾಗಿ, ಕಾಲ ಮತ್ತು ದೇಶ ಸಂಬಂಧವಾದ ನಿಯಮಗಳು, **ಕರ್ಮಗಳ** = ವರ್ಣಾಶ್ರಮೋಚಿತವಾದ, ತೀರ್ಥಕ್ಷೇತ್ರಾದಿ ದೇಶಸಂಬಧವಾದ, ಚಾತುರ್ಮಾಸ್ಯಾದಿ ಮಾಸ, ಋತುಗಳಿಗೆ ಸಂಬಂಧಿಸಿದ ಕರ್ಮಗಳನ್ನು, **ದ್ರುಹಿಣ ಮೊದಲಾದ** = ಚತುರ್ಮುಖ ಬ್ರಹ್ಮದೇವರೇ ಆದಿಯಾಗಿ **ಅಮರರೆಲ್ಲರು** = ತತ್ತ್ವಾಭಿಮಾನಿ ದೇವತೆಗಳೆಲ್ಲರೂ, **ವಹಿಸಿ** = ಶ್ರೀಹರಿಯ ಆಜ್ಞಾಧಾರಕನಾಗಿ, ಜೀವನ ಪರವಾಗಿ ವಹಿಸಿಕೊಂಡು, **ಗುಣಗಳನು** = ಜೀವನ ಸ್ವರೂಪಯೋಗ್ಯತೆಯು **ಅನುಸರಿಸಿ** = ಅನುಸಾರವಾಗಿ **ಎಲ್ಲರೊಳು** = ತ್ರಿವಿಧಜೀವರಲ್ಲಿ, **ಸನ್ನಿಹಿತರಾಗಿದ್ದು** = ದೇಹೇಂದ್ರಿಯಾದಿಗಳಲ್ಲಿ ವಿದ್ಯಮಾನರಾಗಿದ್ದು, **ವ್ಯಾಪಾರ** = ಕರ್ಮರೂಪವಾದ ತತ್ತ್ವಕಾರ್ಯಗಳನ್ನು, **ಮಾಡುವರು** = ಬಿಂಬಪ್ರೇರಣಾನುಸಾರ ನಡೆಯಿಸುವರು. ॥೧೬॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅನಿರುದ್ಧ ಶರೀರಗತ ದೇವತೆಗಳೇ ಸ್ಥೂಲದೇಹದಲ್ಲಿ ಇದ್ದು ತದ್ವಾರಾ ವ್ಯಾಪಾರಗಳ ಮಾಡಸತಾರಂತ ಹೇಳತಾರೆ.

ಈ ಭರತಖಂಡ ಭೂಮಿಯೊಳಗೆ ಶಾಸ್ತ್ರೋಕ್ತಧರ್ಮಗಳ ಅನುಸರಿಸಿ, ದೇಹ ಸಂಬಂಧಿಗಳು ಹಾಂಗೇ ಬಾಂಧವಾ ವಿಷ್ಣುಭಕ್ತಾಶ್ಚ ಎಂಬ ಏಕದ್ರುಶ ಭಗವತ್ಸಂಬಧಿಗಳು ಇವರ ವಿಷಯಕವಾದಂಥ ದೇಶಾಂತರಕ್ಕೆ ಸಂಬಂಧಿಸಿದ

ಸಮೀಚೀನವಾದ ಬದರಿ, ಶ್ರೀರಂಗಾದಿ ಕ್ಷೇತ್ರಗಳೇನು, ಗಂಗಾದಿತೀರ್ಥಗಳಲ್ಲೇನು ಆಯಾಕ್ಷೇತ್ರ-ತೀರ್ಥಗಳಿಗೆ ಹೋದ ಕಾಲದಲ್ಲಿ ಅಲ್ಲಲ್ಲಿ ಮಾಡತಕ್ಕ ತದ್ವಿಷಯಕವಾದಂಥ ಕಾಲಿಕ ಸಾಂಕೇತವಾದ, ಹಿಮಕಾಲ ಅಲ್ಲದೆ ಮಂಜು ಕಾಲ, ವರ್ಷಾಕಾಲ, ಬಿಸಿಲುಗಾಲ ಇತ್ಯಾದಿ ಕಾಲಗಳಿಗೆ ಸಂಬಂಧಿಸಿದ, ಮೂರು ವಿಧವಾದ ಸ್ನಾನ ಸಂಧ್ಯಾವಂದನ ಪಿತೃಕಾರ್ಯ ದೇವರಪೂಜಾ ಭಗವದ್ಭಕ್ತರ ಬಂಧುಗಳ ಪೂಜಾ ಇತ್ಯಾದಿ ತ್ರಿವಿಧ ಕರ್ಮಗಳು, ಸ್ಥೂಲದೇಹಗತ ಬ್ರಹ್ಮದೇವರೇ ಮೊದಲಾದ ತತ್ತ್ವಾಭಿಮಾನಿ ದೇವತೆಗಳು ಯಾವತ್ತೂ ಮಂದಿ ಸೇರಿದವರಾಗಿ, ದೇಹಗತ ಬಿಂಬನ್ನ ಆಜ್ಞಾವನ್ನು ಧಾರಣಮಾಡಿ, ಸ್ವರೂಪ ಸ್ವಭಾವಯೋಗ್ಯತಾ ಗುಣಗಳ ಅನುಸರಿಸಿ, ಅಂಥಾ ಜ್ಞಾನಾನುಸಂಧಾನವೇ ಪ್ರೇರಿಸಿ, ತ್ರಿವಿಧಜೀವರೊಳು ದೇಹೇಂದ್ರಿಗಳಲ್ಲಿ ಸನ್ನಿಧಾನದಿಂದ ಯುಕ್ತರಾಗಿ ಇದ್ದು, ಕರ್ಮರೂಪವಾದ ಕೆಲಸಗಳ ಮಾಡಸತಾರೆ. ಜೀವನಾದವ ತತ್ತ್ವೇಶರ ದ್ವಾರಾ ಸ್ಥೂಲದೇಹದಿಂದ ಮಾಡೋವನಾಗತಾನೆ. ಈ ರೀತ್ಯಾ ತ್ರಿವಿಧಕರ್ಮದಲ್ಲಿ ಅನುಸಂಧಾನವಿರಬೇಕಂತ ತಾತ್ಪರ್ಯ.

**ವಿಶೇಷಾರ್ಥ–**

ದೈಹಿಕ ಕರ್ಮವೆಂದರೆ, ದೇಹದಿಂದ ತೀರ್ಥಕ್ಷೇತ್ರಾಟನ ಮಾಡೋಣವೇ ದೈಹಿಕಕರ್ಮ. ದೈಶಿಕ ಕರ್ಮ ವಿಂದರೆ, ಆಯಾ ತೀರ್ಥಕ್ಷೇತ್ರಗಳಲ್ಲಿ ವಿದ್ಯುಕ್ತಾನುಸಾರ ಮಾಡತಕ್ಕ ಸ್ನಾನಾದಿ ಕರ್ಮಗಳಿಗೆ ದೈಶಿಕಕರ್ಮ ಎಂತ ತಾತ್ಪರ್ಯ. ಕಾಲಿಕಕರ್ಮ ಎಂವರೆ, ಆಯಾ ಋತುಕಾಲಗಳನ್ನು ಅನುಸರಿಸಿ ಮಾಡತಕ್ಕ ಕರ್ಮಗಳಿಗೆ ಕಾಲಿಕಕರ್ಮ ಎಂತ ನಾಮ ॥೧೬॥

## (೨) ಭಾವಪ್ರಕಾಶಿಕೆ" ವ್ಯಾಖ್ಯಾನ

ಮೇಲಿನ ಪದ್ಯದಲ್ಲಿ ದೇವತೆಗಳು ಪುಣ್ಯಕರ್ಮಗಳನ್ನೂ, ದೈತ್ಯರು ಪಾಪಕರ್ಮಗಳನ್ನೂ ಮಾಡಿಸುವರೆಂದು ಹೇಳಿದರು. ಅದರಲ್ಲಿ ದೇವತೆಗಳು ಮಾಡಿಸುವ ಪುಣ್ಯಕರ್ಮಗಳನ್ನು ಹೆಸರಿಸುತ್ತಾರೆ–

ಈ ಭರತಖಂಡದಲ್ಲಿರುವ ಶ್ರೀರಂಗ, ತಿರುಪತಿ, ಪಂಢರಾಪುರ, ಅಯೋಧ್ಯಾ, ಮಧುರೆ ಮೊದಲಾದ ಪುಣ್ಯಕ್ಷೇತ್ರಗಳು. ಗಂಗಾ, ಗೋದಾವರಿ ಮೊದಲಾದ ತೀರ್ಥಗಳು. ಇವುಗಳಲ್ಲಿ ಮಾಡಬೇಕಾದ, ದೇಹ ಸಂಬಂಧವಾದ, ಮುಂಡನಾದಿಗಳು, ದೇಶಸಂಬಂಧವಾದ ತೀರ್ಥಶ್ರಾದ್ಧಾದಿಗಳು, ಇವುಗಳನ್ನು ಚಾತುರ್ಮಾಸ, ಮಾಘಾದಿಮಾಸಗಳು, ಚೈತ್ರ ವೈಶಾಖಾದಿ ವಸಂತಕಾಲ, ಇಂತಹ ಕಾಲಸಂಬಂಧವಾದ ಸ್ನಾನ ದಾನಾದಿಗಳು ತ್ರಿವಿಧವಾದ ಧರ್ಮ, ಅಂದರೆ ಕ್ಷೇತ್ರಗಳಲ್ಲಿ ಛತ್ರಕಟ್ಟಿಸುವುದು, ಕೆರೆ ಕಟ್ಟಿಸುವುದು, ಅನ್ನದಾನ, ಪುರಾಣ ಶ್ರವಣ ಇತ್ಯಾದಿಗಳಿಗೆ ಹೆಸರು, ಇಂತಹಾ ಧರ್ಮಗಳನ್ನು, ಕರ್ಮಗಳಲ್ಲಿ ನಿತ್ಯ, ನೈಮಿತ್ತಿಕವೆಂದು ಎರಡು ವಿಧ. ಸಂಧ್ಯಾವಂದನ, ಶ್ರಾದ್ಧಾದಿಗಳು,- ನಿತ್ಯ ಕರ್ಮಗಳು, ವಿಷ್ಣು ಪಂಚಕ ಮೊದಲಾದವು ನೈಮಿತ್ತಿಕ ಕರ್ಮಗಳು. ಇಂತಹ ಧರ್ಮ ಕರ್ಮಗಳನ್ನು, ಬ್ರಹ್ಮಾದಿ ತತ್ತ್ವೇಶರೆಲ್ಲರೂ ಕೂಡಿ, ಜೀವನ ಭಾರವನ್ನು ತಾವೇ ವಹಿಸಿ, ಅವರವರ ಯೋಗ್ಯತೆಯನ್ನನುಸರಿಸಿ, ಅವರವರಲ್ಲಿದ್ದು ಮಾಡಿಸುವರು, ॥೧೬॥

## (೨) ಭಾವದರ್ಪಣ ಟೀಕಾ ವ್ಯಾಖ್ಯಾನ

ತುಹಿನ–ಹಿಮಕಾಲ ವರ್ಷ–ಮಳೆಗಾಲ ವಸಂತ–ಚೈತ್ರವೈಶಾಖ ಮಾಸವೆಂಬರ್ಥ "ದೈಹಿಕ"—ಎಂದರೆ, ಕಾಯಕ ಕರ್ಮವೆಂಬರ್ಥ,

"ನಿತ್ಯಂ ನೈಮಿತ್ತಿಕಂಕಾಮ್ಯಸ್ನಾನಂ ಶೌಚಾದಿಕಂ ತು ಯತ್ ।
ಕ್ರಿಯತೇ ಕಾಯಕಂ ತಸ್ಯಪುಣ್ಯಂ ಪಾಪಮಥಾಬ್ರುವೇ ॥
ನಿತ್ಯಂನೈಮಿತ್ತಿಕಂ ಕರ್ಮಸರ್ವಥಾ ನ ಕ್ರಿಯೇತ ಚೇತ್ ।
ಕಾಯಸಾ ಧ್ಯಾನಿಷಿದ್ಧಸ್ಯ ಕೃತಿಃ ಕಾಯಕ ಪಾತಕಮಿತ್ಯಾದಿ" ॥

ಎಂದು-ವಿಷ್ಣುರಹಸ್ಯದಲ್ಲಿ ಹೇಳಿದಂತೆ ದೈಶಿಕ ಕಾಲಿಕ ಎನಿಸತಕ್ಕದ್ದು ದ್ರುಹಿಣ–ಬ್ರಹ್ಮ ॥೧೬॥

## (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ)

ಉಕ್ತಂ ಕರ್ಮತ್ರಯಂ ವ್ಯನಕ್ತಿ–"ಮಹಿ" ಇತಿ ॥ ತುಹಿನಃ–ಹಿಮ

**ಮಹಿಯೊಳಗೆ**—ಎಂಬ ಪ್ರಸಕ್ತ ಪದ್ಯದಿಂದ ಬ್ರಹ್ಮ (ದ್ರುಹಿಣ) ಮೊದಲಾದ ದೇವತಾವರ್ಗ ದೈಹಿಕ. ಕಾಲಿಕ ಎಂಬ ಮೂರು ಪ್ರಕಾರವಾದ ಕರ್ಮಗಳನ್ನು ಮಾಡಿಸುವ ರೀತಿಯನ್ನು ವಿವರಿಸುತ್ತಾರೆ. ತುಹಿನ-ಎಂದರೆ, ಹಿಮ ಎಂಬರ್ಥ. ॥೧೬॥

## (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಮೇಲೆ ಹೇಳಿದ ತತ್ತ್ವೇಶರ ಬಗೆ ತಿಳಿಸುತ್ತಾರೆ, ಮಹಿಮೆಯೊಳಗೆ ಎಂದು. ಭೂಮಿಯಲ್ಲಿ ಸುಕ್ಷೇತ್ರತೀರ್ಥಾದಿ ಸಮಸ್ತ ಭೂಪ್ರದೇಶದಲ್ಲೂ, ತುಹಿನವೆಂಬ ಹಿಮಕಾಲ, ವರ್ಷವೆಂಬ ಮಳೆಗಾಲ, ವಸಂತವೆಂಬ ಚೈತ್ರ ಮೊದಲಾದ ಸಕಲಕಾಲದಲ್ಲೂ, ದೈಹಿಕವೆಂಬ ಸ್ನಾನ ಭೋಜನಾದಿಗಳನ್ನೂ, ದೈಶಿಕವೆಂಬ ದೇಶಸಂಬಂಧವಾದ ಸಂಚಾರಾದಿ ಕ್ರಿಯೆಗಳನ್ನೂ, ಕಾಲಿಕ ವೆಂಬ ಸಂಧ್ಯಾದಿಕ್ರಿಯೆಗಳನ್ನು ಸಹ ದ್ರುಹಿಣ ಎಂಬ ಬ್ರಹ್ಮದೇವರು ಮೊದ ಲಾದ ತತ್ತ್ವಾಭಿಮಾನಿಗಳು ಎಲ್ಲಾ ಜೀವರಲ್ಲೂ ಸನ್ನಿಹಿತರಾಗಿದ್ದು, ಆಯಾಯ ಜೀವರ ಅನಾದಿಕಾಲಕರ್ಮಗುಣಾನುಸರಿಸಿ, ವಹಿಸಿ, ಸರ್ವಕರ್ಮ ಗಳನ್ನೂ ಪ್ರೇರಣಮಾಡಿ ನಡೆಸುವರೆಂದರ್ಥ. ॥೧೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಅನಿರುದ್ಧದೇಹಸ್ಥ ತತ್ತ್ವದೇವತೆಗಳು ಮತ್ತು ದೈತ್ಯಸ್ಥೂಲದೇಹದಲ್ಲಿದ್ದು ದ್ವಂದ್ವಕರ್ಮಗಳನ್ನು ಶ್ರೀಹರಿವಾಯುಗಳ ಆದೇಶದಂತೆ ಜೀವನ ದ್ವಾರಾ ಮಾಡಿಸುವ ಕಾರ್ಯಗಳನ್ನು ತಿಳಿಸಿದರು.

ಬ್ರಹ್ಮಾದಿ ದೇವತೆಗಳು ಸ್ಥೂಲದೇಹದ ದ್ವಾರಾ ಮಾಡಿಸುವ ದೈಹಿಕ, ದೈಶಿಕ, ಕಾಲಿಕ ಎಂಬ ಕರ್ಮತ್ರಯಗಳ ವಿಚಾರವನ್ನು ತಿಳಿಸುತ್ತಾರೆ– **ಮಹಿಯೊಳಗೆ** ಎಂಬ ಪ್ರಸಕ್ತ ೧೬ನೆಯ ಪದ್ಯದಿಂದ.

೧. ನಮ್ಮ ಭರತಖಂಡವು ಧರ್ಮಭೂಮಿ. ಹಾಗೆಯೇ ಕರ್ಮ ಭೂಮಿಯೂ ಹೌದು. ವೇದಾಧಿಕಾರ, ಅಧ್ಯಯನಕ್ರಮ ಶಾಸ್ತ್ರವಿಚಾರ ಇತ್ಯಾದಿ ವಿದ್ಯುಕ್ತವಾದ ಕ್ರಮದಲ್ಲಿ ಸತ್ಸಾಧನೆಮಾಡಿ, ತನ್ಮೂಲಕ

ಶ್ರೀಹರಿಯ ಪರಮಪ್ರಸಾದ ಪ್ರಾಪ್ತಿಯಾಗಬೇಕಾದರೆ ಈ ಭರತಖಂಡದಲ್ಲೇ ಜನ್ಮವೆತ್ತಬೇಕೆಂದು ಪ್ರಾಜ್ಞರ ವಚನ. ಈ ದೃಷ್ಟಿಯಿಂದಲೇ ದಾಸರಾಯರು **ಮಹಿಯೊಳಗೆ** ಎಂದು ಶಬ್ದಪ್ರಯೋಗ ಮಾಡಿಸುತ್ತಾರೆ. ಮಹಿ-ಎಂದರೆ ಭೂಮಿ ಎಂದರ್ಥ. ಅಂದರೆ ಕರ್ಮಭೂಮಿಯಾದ ಈ ಭರತಖಂಡವೆಂದು ಗ್ರಹಿಸಿಬೇಕು.

೨. ಇಂತಹ ಪರಮಪಾವನವಾದ ಭರತಖಂಡದಲ್ಲಿ ಅನೇಕ ಪುರಾಣ ಪ್ರಸಿದ್ಧ ಕ್ಷೇತ್ರಗಳಿವೆ. ಪಾಪಕ್ಷಾಳನಗೈಯುವ ಪುಣ್ಯ ನದಿಗಳಿವೆ, ಇವುಗಳಿಗೆ **ಸುಕ್ಷೇತ್ರ ತೀರ್ಥ**ಗಳೆಂದು ಹೆಸರು. ಪುರಾತನವಾದ, ಪುಣ್ಯತಮವೆಂದೆನಿಸಿದ ಶ್ರೀರಂಗ, ಬದರೀ, ಗಯಾ, ಪ್ರಯಾಗ, ಕಾಶಿ, ನೈಮಿಷಾರಣ್ಯ, ಶ್ರೀಕೃಷ್ಣಪರಮಾತ್ಮನ ಲೀಲಾವಿಹಾರ ಕ್ಷೇತ್ರಗಳಾದ ಮಧುರಾ, ದ್ವಾರಕಾ, ಶ್ರೀರಾಮಚಂದ್ರನ ಜನ್ಮಭೂಮಿ ಅಯೋಧ್ಯಾ ಇತ್ಯಾದಿ ಪುಣ್ಯಕ್ಷೇತ್ರಗಳೆಲ್ಲವೂ **ಸುಕ್ಷೇತ್ರ**ಗಳೆನಿಸುವುವು.

ಶ್ರೀವಿಷ್ಣುಪಾದೋದ್ಭವೆಯಾದ ಸುರನದಿ ಎಂದು ಪ್ರಸಿದ್ಧವಾದ ಗಂಗಾ, ಯಮುನಾ, ಗೋದಾವರಿ, ಕಾವೇರಿ, ತುಂಗಭದ್ರಾ, ಕೃಷ್ಣಾ ಇತ್ಯಾದಿ ಪಾವನ ನದಿಗಳು **ಸುತೀರ್ಥಗಳು.** ಇವುಗಳ ಸ್ಥಾನ ಪುಣ್ಯತಮವಾದ ಈ ಭರತಖಂಡವು.

೩. ಇಂತಹ ಭೂಮಂಡಲದಲ್ಲಿ ಸುಪ್ರಸಿದ್ಧವಾದ ಸುತೀರ್ಥಕ್ಷೇತ್ರಗಳಿಂದ ಯುಕ್ತವಾದ ಭರತಖಂಡದಲ್ಲಿ, ಸತ್ಕರ್ಮಾಚರಣೆ ಶ್ರೀಹರಿ ವಾಯುಗಳ ಅನುಗ್ರಹಕ್ಕೆ ಕಾರಣವು. ತನ್ಮೂಲಕ ಭವಬಂಧರೂಪವಾದ ಕರ್ಮವಿಮೋಚನೆ. ತದ್ವಾರಾ ಪರಮಪುರುಷಾರ್ಥ ರೂಪವಾದ ಸ್ವರೂಪಾನಂದಾವಿರ್ಭಾವ ರೂಪದ ಮೋಕ್ಷ ಪ್ರಾಪ್ತಿ. ಇದನ್ನು ಹೊಂದಲಿಕ್ಕಾಗಿ ಸಮಸ್ತ ಜೀವರೂ ನಡೆಯಿಸುವ ಕರ್ಮಗಳು ಮೂರು ಪ್ರಕಾರ :-

(೧) ದೈಹಿಕ ಕರ್ಮಗಳು. (೨) ದೈಶಿಕ ಕರ್ಮಗಳು, ಮತ್ತು (೩) ಕಾಲಿಕ ಕರ್ಮಗಳು.

### ೪. ದೈಹಿಕ ಕರ್ಮಗಳು-

ನಮ್ಮ ಸ್ಥೂಲದೇಹವು ಸಾಧನಶರೀರವು. ಇದು ಸರ್ವತ್ರವ್ಯಾಪ್ತನಾದ ಬಿಂಬನ ಮಂದಿರ. ಇದರ ಸ್ವಚ್ಛತೆಗಾಗಿ, ದೇಹಗತ ಇಂದ್ರಿಯಗಳ ದ್ವಾರಾ ಸತ್ಕರ್ಮಗಳನ್ನು ಆಚರಿಸಬೇಕು. ಶಾಸ್ತ್ರೋಕ್ತ ಪ್ರಕಾರ, ನಿತ ಸ್ನಾನ, ಸಂಧ್ಯಾ, ಜಪ, ದೇವಪೂಜಾ, ಪ್ರದಕ್ಷಿಣೆ, ನಮಸ್ಕಾರಾದಿಗಳು; ಗುರು-ಹಿರಿಯರ ಸೇವಾ, ಸಚ್ಛಾಸ್ತ್ರಗಳ ಸ್ವಾಧ್ಯಾಯ ಪ್ರವಚನಾದಿಗಳು ಎಂಬ **ನಿತ್ಯಕರ್ಮಗಳು**] ದೇಹಗತ ಜ್ಞಾನೇಂದ್ರಿಯ, ಕರ್ಮೇಂದ್ರಿಯ, ಮನ ಮೊದಲಾದ ಪಂಚಮನೋವೃತ್ತಿಗಳ ದ್ವಾರಾ ನಡೆಯುವುದರಿಂದ, ಈ ಕರ್ಮ ಪರಂಪರೆಗೆ **ದೈಹಿಕ ಕರ್ಮಗಳು** (ದೇಹಕ್ಕೆ ಸಂಬಂಧಿಸಿದ) ಎಂದು ಹೆಸರು.

### ೫. ದೈಶಿಕ ಕರ್ಮಗಳು-

ಪ್ರತಿದಿನದಲ್ಲಿಯೂ ದೈತ್ಯರ ಪ್ರೇರಣೆಯಿಂದ ನಡೆಯುತ್ತಿರುವ ದುಷ್ಕರ್ಮರೂಪವಾದ ಪಾಪಸಮೂಹಗಳ ಪರಿಹಾರಕ್ಕಾಗಿ, ತೀರ್ಥಕ್ಷೇತ್ರಯಾಟನೆ ಮಾಡುವುದು ಶಾಸ್ತ್ರಸಮ್ಮತವು. ತಿರುಪತಿ, ಶ್ರೀ ಮುಷ್ಣ ಮುಂತಾದ ಸ್ವಯಂ ವ್ಯಕ್ತಕ್ಷೇತ್ರಗಳ ಸಂದರ್ಶನ, ಬದರೀ, ಅಯೋಧ್ಯಾ, ರಾಮೇಶ್ವರ ಇತ್ಯಾದಿ ಪುಣ್ಯಕ್ಷೇತ್ರಗಳ ಯಾತ್ರೆ, ಕಾಶಿ, ಗಯಾ, ಪ್ರಯಾಗ ಮುಂತಾದ ಪುಣ್ಯಕ್ಷೇತ್ರಗಳಲ್ಲಿ ಆಚರಿಸುವ ಪಿತೃದೇವತೆಗಳ ಪ್ರೀತ್ಯರ್ಥವಾದ ಶ್ರಾದ್ಧಾದಿ ಕರ್ಮಗಳು, ಮುಂಡನಾದಿಗಳು, ಅಯಾಯಾ ಕ್ಷೇತ್ರಗತ ತೀರ್ಥ, ನದೀ, ಸಮುದ್ರ ಇತ್ಯಾದಿಗಳಲ್ಲಿ ತೀರ್ಥಾಭಿಮಾನಿದೇವತೆಗಳ ಸ್ಮರಣಪೂರ್ವಕ, ಆಯಾಯಾ ಕ್ಷೇತ್ರಜ್ಞನಾದ ಭಗವನ್ಮೂರ್ತಿಗಳ ಧ್ಯಾನ ದ್ವಾರಾ, ಸ್ನಾನಾದಿಗಳು ಇತ್ಯಾದಿ ಸುಕ್ಷೇತ್ರತೀರ್ಥಗಳಲ್ಲಿ ಮಾಡುವ ಕರ್ಮಗಳು **ದೈಶಿಕ ಕರ್ಮಗಳು**. (ದೇಶಕ್ಕೆ ಸಂಬಂಧಿಸಿದ ಕರ್ಮಗಳು)

**೬. ಕಾಲಿಕ ಕರ್ಮಗಳು-**

ಸ್ವಸ್ಥಳದಲ್ಲಿ ಇರುವಾಗ, ಕಾಲಕಾಲಕ್ಕೆ ಮಾಡುವ ದಿನ, ಪಕ್ಷ, ಮಾಸ, ಋತು ಸಂಬಂಧವಾದ ಕರ್ಮಪ್ರಕರಣಗಳು. ಏಕಾದಶೀವ್ರತ, ಚಾತುರ್ಮಾಸ್ಯವ್ರತ, ಭೀಷ್ಮಪಂಚಕ, ವಿಷ್ಣುಪಂಚಕ, ಇತ್ಯಾದಿಗಳ ಜೊತೆ, ಸತ್ಯನಾರಾಯಣ, ವರಮಹಾಲಕ್ಷ್ಮೀ. ಅನಂತಪದ್ಮನಾಭ, ಗಣೇಶಚತುರ್ಥೀ ಇತ್ಯಾದಿ ವ್ರತಾಚರಣೆಗಳು. ಇವೆಲ್ಲವೂ ಕಾಲಮಾನಗಳಿಗೆ ಸಂಬಂಧಿಸಿದ ಕರ್ಮಗಳು. ಇವುಗಳು **ಕಾಲಿಕಕರ್ಮಗಳೆನಿಸುವುವು.**

ಅಲ್ಲದೆ ಮಾಸ ಮತ್ತು ಋತುಗಳಿಗೆ ಸಂಬಂಧಿಸಿದಂತೆ, (೧) **ತುಹಿನ-** ಎಂದರೆ ಹಿಮಗಾಲ. ಮಾರ್ಗಶೀರ ಮತ್ತು ಪುಷ್ಯಮಾಸಗಳು ಹೇಮಂತ ಋತುವಿನಲ್ಲಿ ಮಾಡುವ ಧನುರ್ಮಾಸವ್ರತಗಳು, ಕಾವೇರಿ ತುಲಾ ಸ್ನಾನಾದಿಗಳು. (೨) **ವರುಷ-**ವರ್ಷ ಎಂದರೆ ಮಳೆಯ ಧಾರೆ ಎಂಬರ್ಥ. ಅಂದರೆ ಮಳೆಗಾಲ. ಆಷಾಢದಿಂದ ಕಾರ್ತೀಕದವರೆಗೆ ಮಳೆಗಾಲದಲ್ಲಿ ಮಾಡುವ ಚಾತುರ್ಮಾಸಾದಿ ವ್ರತಗಳು, ತೀರ್ಥಸ್ನಾನ, ಪಿತೃಪಕ್ಷಗಳಲ್ಲಿ ಮಾಡುವ ಶ್ರಾದ್ಧಾದಿಕರ್ಮಗಳು ಇತ್ಯಾದಿ. (೩) **ವಸಂತಕಾಲದಿ**-ಚೈತ್ರ, ವೈಶಾಖ ಮಾಸಗಳು ವಸಂತ ಋತುವಿನ ಕಾಲ. ಅಂದರೆ ಬೇಸಿಗೆ ಕಾಲದಲ್ಲಿ ಮಾಡುವ ಪಾನಕಪೂಜೆ, ಪಂಕದಾನಾದಿಗಳು ಇತ್ಯಾದಿ. ಮೇಲ್ಕಂಡ ತುಹಿನ, ವರ್ಷ, ವಸಂತ ಕಾಲಗಳಲ್ಲಿ ಮಾಡುವ ಋತು ಧರ್ಮಗಳೆಲ್ಲವೂ **ಕಾಲಿಕ ಕರ್ಮಗಳೇ.**

೭. ಇಂತು ದೈಹಿಕ, ದೈಶಿಕ ಮತ್ತು ಕಾಲಿಕ ಎಂಬ ಕರ್ಮತ್ರಯಂಗಳು, ವರ್ಣ, ಆಶ್ರಮ, ದೇಶಕಾಲೋಚಿತವಾದ ಧರ್ಮಗಳ ಆಚರಣೆ (ವೇದೋಕ್ತ ನಿಯಮಗಳು) ಈ ಪ್ರಕಾರ ಸಮಸ್ತ ಧರ್ಮ ಕರ್ಮಗಳೂ ನಮ್ಮ ಶರೀರದ ದ್ವಾರಾ ನಡೆಯುವುವು. ಚತುರ್ಮುಖಬ್ರಹ್ಮಾದಿ **(ದ್ರುಹಿಣ)** ತತ್ತ್ವದೇವತೆಗಳು ಚತುರ್ವಿಂಶತಿತತ್ತ್ವಗಳಲ್ಲಿ ಸನ್ನಿಹಿತರಾಗಿದ್ದು, ಶ್ರೀಹರಿವಾಯುಗಳ ಪ್ರೇರಣಾನುಸಾರ ಈ ಧರ್ಮಕರ್ಮಗಳಿಗೆ

ಪ್ರೇರಕರಾಗಿ ನಡೆಯಿಸುವರು. ಇಂತಹ ಬ್ರಹ್ಮಾದಿದೇವತೆಗಳು ಶ್ರೀ ಪರಮಾತ್ಮನ ಅಧೀನ. ತದ್ವಾರಾ ತ್ರಿವಿಧ ಜೀವರೂ ಆ ತತ್ವೇಶರ ಅಧೀನ. ಈ ಕಾರಣದಿಂದಲೆ ಪ್ರಾತಃಕಾಲದಲ್ಲಿ

**"ನಮೋಽಸ್ತು ತಾತ್ತ್ವಿಕಾ ದೇವಾ ವಿಷ್ಣುಭಕ್ತಿಪರಾಯಣಾಃ ।**
**ಧರ್ಮಮಾರ್ಗೇ ಪ್ರೇರಯಂತು ಭವಂತಃ ಸರ್ವ ಏವ ಹಿ ॥"**

ಎಂದು- "ಎಲೈ ತಾತ್ತ್ವಿಕ ದೇವತೆಗಳಿರಾ ! ನೀವು ವಿಷ್ಣುಭಕ್ತಿಪರಾಯಣರು. ವಿಷ್ಣು ಪದಕಂಜಾಮೃತ ಪಾನಾಸಕ್ತ ಬಂಡುಣಿಗಳು. ನಮ್ಮ ಮನಸ್ಸನ್ನು ಮತ್ತು ಸರ್ವ ಇಂದ್ರಿಯಗಳನ್ನು ನಿರಂತರ ಧರ್ಮಮಾರ್ಗದಲ್ಲಿ ಪ್ರೇರಿಸಿರಿ"-ಎಂದು ಪ್ರಾತಃಸ್ಮರಣೀಯರಾದ ಬ್ರಹ್ಮಾದಿ ತತ್ತ್ವೇಶರನ್ನು ಪ್ರಾರ್ಥಿಸುವ ಸಂಪ್ರದಾಯವಿದೆ.

೮. ಇಂತಹ ತತ್ತ್ವೇಶರು ತ್ರಿವಿಧ ಜೀವರಲ್ಲಿಯೂ ಇದ್ದಾರೆ. ಆಯಾಯಾ ಜೀವರ ಸ್ವರೂಪಯೋಗ್ಯತಾಗುಣಗಳಿಗೆ ಅನುಸಾರವಾಗಿ, ಅವರ ಭಾರವನ್ನು ತಾವೇ ವಹಿಸಿಕೊಂಡು. ಅವರ ಪರವಾಗಿ ಸರ್ವ ಧರ್ಮ ಕರ್ಮಗಳನ್ನೂ ನಡೆಯಿಸುತ್ತಿರುವರು. (ಮಾಡುವರು ವ್ಯಾಪಾರ) ಜೀವರ ಅನಾದಿ ಕರ್ಮ, ಅವರ ಸ್ವರೂಪಯೋಗ್ಯತೆಗಳನ್ನು ಅನುಸರಿಸಿ. ಈಶನಾಜ್ಞೆಯಿಂದ ಬ್ರಹ್ಮಾದಿ ತತ್ತ್ವೇಶರು ಧರ್ಮಕರ್ಮ ಪ್ರವರ್ತಕರಾಗಿರುವುದರಿಂದ, ಅವರಿಗೆ ಜೀವರ ಸಂಬಂಧವಾದ ಕರ್ಮಲೇಪಗಳಿಲ್ಲ. ಕೇವಲ ಭಗವತ್ಕಾರ್ಯಸಾಧಕರಾಗಿ, ಭಗವತ್ಪ್ರೀತಿಗೋಸ್ಕರ ಮಾಡುವ ವ್ಯಾಪಾರಗಳು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾಭಿಪ್ರಾಯವು. ॥೧೬॥

# ಪದ್ಯ (೧೭)

ಮೂಲ :

ಕೇಶ ಸಾಸಿರವಿಥ ವಿಭಾಗವ ।
ಗೈಸಲೆನಿತನಿತಿಹ ಸುಷುಮ್ನವು ।
ಆ ಶಿರಾಂತದಿ ವ್ಯಾಪಿಸಿಹುದೀ ದೇಹಮಧ್ಯದಿ ॥
ಆ ಸುಷುಮ್ನಕೆ ವಜ್ರಕಾರ್ಯ ಪ್ರ ।
ಕಾಶಿನೀ ವೈದ್ಯುತಿಗಳಿಹವು ಪ್ರ ।
ದೇಶದಲಿ ಪಶ್ಚಿಮಕೆ ಉತ್ತರ ಪೂರ್ವ ದಕ್ಷಿಣಕೆ ॥ ॥೧೭॥

ಅವರಣಿಕೆ :

ಸ್ಥೂಲದೇಹಗತ ಸುಷುಮ್ನಾ ನಾಡಿ ಹಾಗೂ ಅದರ ಶಾಖಾಪ್ರಭೇದಗಳನ್ನು ತಿಳಿಸುತ್ತಾರೆ–**ಕೇಶ ಸಾಸಿರವಿಥ**–ಎಂಬ ಪ್ರಸಕ್ತ ಸಂಧಿಗತ ೧೮ ನೆಯ ಈ ಪದ್ಯದಿಂದ.

ಸೂಕ್ಷ್ಮವಾದ ಒಂದು ಕೂದಲನ್ನು ಉದ್ದವಾಗಿ (ನೀಳವಾಗಿ) ಒಂದು ಸಾವಿರ ಭಾಗಗಳಾಗಿ ಸೀಳಿದರೆ, ಬರುವ ಸಾವಿರದನೇ ಒಂದು ಅಂಶದಷ್ಟು ಪರಮ ಸೂಕ್ಷ್ಮವಾಗಿ **ಸುಷುಮ್ನಾನಾಡಿಯು** ಇರುವುದು. ಇದಕ್ಕೆ **ಬ್ರಹ್ಮನಾಡೀ** ಎಂತಲೂ ಹೆಸರು. ಇದು ತುಂದಿ ಎಂಬ ಮೂಲಾಧಾರದಿಂದ ಪ್ರಾರಂಭಿಸಿ, ದೇಹದ ಮಧ್ಯದಲ್ಲಿ ನೇರವಾಗಿ ಬ್ರಹ್ಮರಂಧ್ರಪರ್ಯಂತ ಏಕಾಂಡವಾಗಿ ವ್ಯಾಪಿಸಿದೆ. ಇದೇ ಮಧ್ಯಗತನಾಡಿಯು. ಇದಕ್ಕೆ ನಾಲ್ಕು ದಿಕ್ಕುಗಳಲ್ಲಿ ಸುತ್ತಲೂ (೧) ವಜ್ರಿಕಾ. (೨) ಆರ್ಯಕಾ. (೩) ಪ್ರಕಾಶಿನೀ ಮತ್ತು (೪) ವೈದ್ಯುತೀ ಎಂಬ ಶಾಖಾ ನಾಡಿಗಳು ಇದ್ದು, ಅವುಗಳಿಂದ ಕವಲೊಡೆದ ೭೨,೦೦೦ ನಾಡಿಗಳು ದೇಹಾದ್ಯಂತ ಹಬ್ಬಿ ಹರಡಿವೆ. ॥೧೭॥

**ಪ್ರತಿಪದಾರ್ಥ :**

**ಕೇಶ**=ತಲೆಯಲ್ಲಿರುವ (ಶಿರಗತ) ಒಂದು ಕೂದಲನ್ನು ತೆಗೆದುಕೊಂಡು, **ಸಾಸಿರವಿಥ**=ಅದನ್ನು ನೀಳವಾಗಿ ಒಂದು ಸಾವಿರ ಭಾಗಗಳಾಗಿ, **ವಿಭಾಗಗೈಸಲು**=ಸೀಳಿ, ಭಾಗಗಳನ್ನಾಗಿ ಮಾಡಿದರೆ, **ಎನಿತು**=ಬರುವ ಸಾವಿರದ ಒಂದನೆಯ ಅಂಶದಷ್ಟು, **ಅನಿತು**=ಅಷ್ಟು ಸೂಕ್ಷ್ಮವಾದ ಭಾಗ ಬರುವುದೋ **ಸುಷುಮ್ನವು** = ಸುಷುಮ್ನಾನಾಡಿಯು, **ಇಹ**=ಇರೋದಾಗಿ ಇದೆ. **ಆ**=ಮೂಲಾಧಾರವಾದ ತುಂದಿಯಿಂದ ಪ್ರಾರಂಭಿಸಿ. **ಶಿರಾಂತದಿ**=ಶಿರಮಧ್ಯಗತ ಬ್ರಹ್ಮರಂಧ್ರ ಪರ್ಯಂತ. **ಈ ದೇಹಮಧ್ಯದಿ** = ಈ ಸ್ಥೂಲಶರೀರದ ಮಧ್ಯದಲ್ಲಿ (ಬೆನ್ನು ಹುರಿಯ ಉದ್ದಕ್ಕೂ) **ವ್ಯಾಪಿಸಿಹುದು** = ನೇರವಾಗಿ ಹಬ್ಬಿ ಹರಡಿದೆ. **ಆ ಸುಷುಮ್ನಕೆ** = ಅಂತಹ ಸುಷುಮ್ನಾನಾಡಿಗೆ **ಪಶ್ಚಿಮಕೆ**=ಪಶ್ಚಿಮ ದಿಕ್ಕಿನಲ್ಲಿ **ವಜ್ರಿಕಾ**=ವಜ್ರಿಕಾ ಎಂಬ ಹೆಸರಿನ ನಾಡಿಯೂ, **ಉತ್ತರ** = ಉತ್ತರದಿಕ್ಕಿನಲ್ಲಿ **ಆರ್ಯಾ**= ಆರ್ಯಾ ಎಂಬ ನಾಡಿಯೂ, **ಪೂರ್ವ**=ಪೂರ್ವದಿಕ್ಕಿಗೆ **ಪ್ರಕಾಶಿನೀ**= ಪ್ರಕಾಶಿನೀ ಎಂಬ ಹೆಸರಿನ ನಾಡಿಯೂ, **ದಕ್ಷಿಣಕೆ**=ದಕ್ಷಿಣ ದಿಕ್ಕಿನಲ್ಲಿ, **ವೈದ್ಯುತಿ**=ವೈದ್ಯುತಿ ಎಂಬ ನಾಡಿಯೂ, **ಪ್ರದೇಶದಲ್ಲಿ**=ಸುಷುಮ್ನಾನಾಡಿಯ ಸುತ್ತಲೂ ನಾಲ್ಕು ಸ್ಥಾನಗಳಲ್ಲಿ **ಇಹವು**=ಶಾಖೆಗಳಾಗಿ ಒಡೆದು ವ್ಯಾಪಿಸಿವೆ. ॥೧೭॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ–

ಹಿಂದೆ ಸ್ವರೂಪದೇಹದಾರಭ್ಯ ಅನಿರುದ್ಧ ಶರೀರದವರೆಗೂ ದೇಹಗಳ ವಿಚಾರ ಹೇಳಿ, ಈಗ ಸ್ಥೂಲದೇಹದ ವಿಚಾರ ಹೇಳುತಾರೆ.

ಶಿರಗತ ಶಿಖಾದಲ್ಲಿ ವಿದ್ಯಮಾನವಾದ ಒಂದು ಕೂದಲು ತೆಗೆದುಕೊಂಡು ಸಾವಿರವಿಧವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ನಾರಿನ ಹಾಂಗೆ ಸೀಳಿದರೆ, ಅದರೊಳಗೆ ಒಂದುಭಾಗ ಎಷ್ಟು ಸಣ್ಣದೋ ಅಷ್ಟು ಮಾತ್ರ ಸಣ್ಣದಾದ ಸುಷುಮ್ನಾ ನಾಡಿಯು ಇರೋದಾಗಿ ಅದೆ. ಈ ನಾಡಿ, ಎಂದರೆ ಮೂಲಾಧಾರ ಆರಂಭ ಮಾಡಿ, ದೇಹಕ್ಕೆ ಅಂತವಾದ ಶಿರ ಪರಿಯಂತ ವ್ಯಾಪಿಸಿ ಬ್ರಹ್ಮರಂಧ್ರ ಸೇರಿ, ಈ ಸ್ಥೂಲದೇಹಮಧ್ಯದಲ್ಲಿ ಇರೋದಾಗಿ ಅದೆ. ಆ ಸುಷುಮ್ನಾನಾಡಿಗೆ ಪಶ್ಚಿಮಭಾಗಕ್ಕೆ ವಜ್ರಿಕಾ ನಾಡಿ, ಉತ್ತರಭಾಗಕ್ಕೆ ಆರ್ಯಾನಾಮಕ ನಾಡೀ, ಪೂರ್ವಭಾಗಕ್ಕೆ ಪ್ರಕಾಶಿನೀ ನಾಡಿ, ದಕ್ಷಿಣಭಾಗಕ್ಕೆ ವೈದ್ಯುತೀನಾಡೀ ಪೂರ್ವಾದಿ ನಾಲ್ಕು ದಿಕ್ಕಿನಲ್ಲೂನೂ ನಾಲ್ಕು ನಾಡಿಗಳಾಗಿ ಇರೋವಾಗಿ ಅವೆ. ಮಧ್ಯ ಸುಷುಮ್ನಾನಾಡೀ ಅಂತು ಐದು ನಾಡಿಗಳು ಮೂಲಾಧಾರ ಮೊದಲು ಮಾಡಿ ಬ್ರಹ್ಮರಂಧ್ರಪರಿಯಂತ ವ್ಯಾಪಿಸಿ ಅವೆ ಎಂತ ತಾತ್ಪರ್ಯ.

**ವಿಶೇಷಾರ್ಥ–**

ಮೂಲಾಧಾರ ಎಂದರೆ, ವೃಷಣಾಸನಮಧ್ಯಗತ ತುಂದಿಯಲ್ಲಿ ಉತ್ಪನ್ನವಾಗಿ ಬ್ರಹ್ಮರಂಧ್ರದವರಿಗೂ ವ್ಯಾಪಿಸಿ ಅದೆ. ದೇಹಮಧ್ಯ ಎಂದರೆ ಎಡ-ಬಲ ಭಾಗಗಳ ತಪ್ಪಿಸಿ ಮಧ್ಯಭಾಗ ಎಂತ ತಾತ್ಪರ್ಯ. **'ಸುಷುಮ್ನಾ ಪಂಚಪ್ರಭೇಧಿನೀ'** ಎನತಕ್ಕ ನಾಡಿಗಳು ಮೇಲೆ ಹೇಳಿದ್ದೆ ಎಂತ ತಿಳಿಯಬೇಕು. ॥೧೭॥

**(೧) ಭಾವಪ್ರಕಾಶಿಕೆ ವ್ಯಾಖ್ಯಾನ–**

ದೇಹದ ಮಧ್ಯದಲ್ಲಿರುವ ಸುಷುಮ್ನಾನಾಡಿಯ ಲಕ್ಷಣವನ್ನು ಹೇಳುತ್ತಾರೆ. ಒಂದು ಕೂದಲನ್ನು ಸಾವಿರಭಾಗವಾಗಿ ಸೀಳಿದರೆ ಎಷ್ಟಿರುವುದೋ ಅಷ್ಟು ಸಣ್ಣದಾಗಿ ವೃಷಣದ ಮೂಲಸ್ಥಾನ ಮೊದಲು ತಲೆಯ ಬ್ರಹ್ಮರಂಧ್ರದವರೆಗೂ ಮಧ್ಯದಲ್ಲಿ ಸುಷುಮ್ನಾನಾಡಿ ಇರುವುದು, ಈ ನಾಡಿಯು ಐದು ಪ್ರಭೇದಗಳಿಂದ ಕೂಡಿರುವುದು. ಅವುಗಳಿಗೆ ಐದು ಹೆಸರುಗಳುಂಟು (೧) ಮಧ್ಯದಲ್ಲಿ ಸುಷುಮ್ನಾನಾಡಿ, (೨) ಪಶ್ಚಿಮಕ್ಕೆ ಅಂದರೆ ಹಿಂಭಾಗಕ್ಕೆ ವಜ್ರಿಕಾ ನಾಡಿ, (೩) ಪೂರ್ವಕ್ಕೆ ಅಂದರೆ ಸುಷುಮ್ನಾನಾಡಿಯು ಮುಂಭಾ

ಗಕ್ಕೆ ಪ್ರಕಾಶಿನೀನಾಡಿ. (೪) ದಕ್ಷಿಣಕ್ಕೆ ಅಂದರೆ ಬಲಕ್ಕೆ ವೈದ್ಯುತೀನಾಡಿ. (೫) ಉತ್ತರಕ್ಕೆ ಅಂದರೆ ಎಡಕ್ಕೆ ಆರ್ಯಕಾನಾಡಿ. ಈ ವಿಷಯವನ್ನು ೮ ನೆಯ ಸಂಧಿಯ ೩ ನೆಯ ಪದ್ಯದ ವ್ಯಾಖ್ಯಾನದಲ್ಲಿ ವಿವರ ಮಾಡಿರುವುದು. ಈ ಒಂದೇ ಸುಷುಮ್ನಾನಾಡಿಯೇ ೫ ಭಾಗದಲ್ಲಿ ೫ ಹೆಸರುಗಳಿಂದ ಕೂಡಿರುವು ದೆಂದು ತಿಳಿಯಬೇಕು. ॥೧೭॥

## (೩) "ಭಾವದರ್ಪಣ ಟೀಕಾ"-ವ್ಯಾಖ್ಯಾನ

ಈಗ ಕೇಶ ಸಾವಿರಭಾಗ ಮಾಡಿ ಅದರಲ್ಲಿ ಒಂದು ಭಾಗ ಎಷ್ಟು ಪರಿ ಮಿತವೋ ಅಷ್ಟು ಪರಿಮಿತಿಯಿಂದೇ ಮೂಲಾಧಾರಮಾರಭ್ಯ ಶಿರಾಂತ ವ್ಯಾಪಿ ಸಿರುತ್ತದೆಂತ ಹೇಳಿದ್ದಲ್ಲದೇ ನಾಡಿಗಳ ವಿವರ ಮಾಡುತ್ತಾರೆ_"ಕೇಶೇತಿ"॥

"ಆ ಸುಷುಮಕ್ಕೆ"-ಎಂಬ ಪದವನ್ನು ಸುಷುಮ್ನಾನಾಡಿಯಲ್ಲಿ ಎಂದು ಸಪ್ತ ಮ್ಯಂತವಾಗಿ ಅರ್ಥಮಾಡಬೇಕು. ಏಕೆಂದರೆ, ಈ ಪದ್ಯದಲ್ಲಿ ಹೇಳಲ್ಪಟ್ಟ ನಾಡಿಗಳು ಸುಷುಮ್ನಾನಾಡಿಯೊಳಗಿದ್ದು, ಬ್ರಹ್ಮನಾಡಿಯೂ ಈ ನಾಡಿಯೂ ಸೇರಿ ಈ ನಾಡೀಪಂಚಕವು ಸಷುಮ್ನಾ ಎಂದು ಕರೆಸಿಕೊಳ್ಳುತ್ತದೆ. ಪ್ರಕಾಶಿನ್ಯಾದಿ ನಾಡಿಗಳು ಹೊರಗೆ ಇರುವವೆಂದು ಹೇಳಿದ ಪಕ್ಷದಲ್ಲಿ ಕೇವಲ ಪ್ರಮಾಣಗಳಿಗೂ ವಿರೋಧ ಬರುತ್ತದೆ. ಆದ್ದರಿಂದ ಸಪ್ತಮ್ಯರ್ಥವೇ ಮಾಡಬೇಕು.

ಪ್ರಮಾಣ-

"ಮಧ್ಯಾಂಶ ಬ್ರಹ್ಮನಾಡ್ಯಂತು ಧ್ಯೇಯೋ ನಾರಾಯಣೋರುಣಃ ।
ತತ್ಪುರಾಂಶ ಪ್ರಕಾಶಿನ್ಯಾಂ ವಾಸುದೇವೋಸಿತ ಪ್ರಭಃ ॥
ದಕ್ಷಾಂಶ ವೈದ್ಯುತಾ ಸಂಸ್ಥಃ ಪಿಂಗಃ ಸಂಕರ್ಷಣೋಽಚ್ಯುತಃ ।
ಪೃಷ್ಠಾಂಶ ವಜ್ರಿಕಾ ಸಂಸ್ಥಃ ಪ್ರದ್ಯುಮ್ನೋ ಹರಿತ ಪ್ರಭಃ ॥
ಆರ್ಯಕಾಯಾಂಗತಶ್ಚಿಂತ್ಯೋ ನಿಲವರ್ಣೋಽನಿರುದ್ಧಃ ॥"

–ಎಂಬುದಾಗಿ ಮಾನಸ ಸ್ಮೃತಿ ಅದೆ. ಇದಕ್ಕೂ ವಿರೋಧ ಬರುತ್ತದೆ. ಮತ್ತು

"ತನುಮಧ್ಯದಿರುವ ಬ್ರಹ್ಮನಾಡಿಗೆ ಪೂರ್ವ
ಸುವರ ಪ್ರಕಾಶಿನಿ ದಕ್ಷಾಂಶ ವೈದ್ಯುತವು
ಘನವಜ್ರವು ಪಶ್ಚಿಮಕೆ ಆರ್ಯವೆ ಉತ್ತರಕೆ
ಇನಿತು ಪಂಚಕ ಸೇರಿ ಸುಷುಮ್ನಾ ಎನಿಸುವುದು ||"

–ಎಂದು ಲಘುಮಾನ ಪೂಜಾಸುಳಾದಿಯಲ್ಲಿ ಪುರಂದರದಾಸರಾಜರು ಹೇಳಿದ್ದಾರೆ. ಇದರ ವಿರೋಧವು ಬರುತ್ತದೆ. ಮತ್ತು

"ಮೂಲಾಧಾರಂ ಸಮಾರಭ್ಯ ತ್ವಾಮೂರ್ಧಾ ಸಮೃಜುಸ್ಥಿತಾ |
ಮಧ್ಯೇ ಸುಷುಮ್ನಾ ವಿಜ್ಞೇಯಾ ವಜ್ರಕಾಯಾ ಪ್ರಕಾಶಿನೀ ||
ವೈದ್ಯುತಾ ಬ್ರಹ್ಮನಾಡೀತು ಸೈವ ಪಂಚಪ್ರಭೇದಿನೀ ||"

—ಎಂಬುದಾಗಿ ತಂತ್ರಸಾರ ವಾಕ್ಯವಿರುತ್ತದೆ.

"ಸೈವ"-ಎಂದರೆ. ಸುಷುಮ್ನಾನಾಡಿಯು ಪಂಚಭೇದ ಉಳ್ಳದ್ದು ಎಂದು ಅರ್ಥಮಾಡಿದರೆ, ಶ್ರೀಮತ್ಸರ್ವಜ್ಞರ ಉಕ್ತಿಗೂ ಸುಳಾದಿ ಪ್ರಮಾಣಗಳಿಗೂ ವಿರೋಧ ಬರೋದಿಲ್ಲವೆಂದು ಸೂಚಿಸಿದೆ. ಜ್ಞಾನಿಗಳು ಹ್ಯಾಂಗೆ ನಿರ್ಣಯಿಸುತ್ತಾರೋ ಅದರಂತೆ ನಡೆಯುಬಹುದು. "ಪ್ರದೇಶ"ದಲ್ಲಿ ಎಂದರೆ, ಚತುರ ದಿಕ್ಪ್ರದೇಶದಲ್ಲಿ ಎಂಬರ್ಥ. ||೧೭||

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ) :-

"ಕೇಶ"–ಇತಿ || ಆಮೂರ್ಧಾನಂ ಋಜುಸ್ಥಿತೇಃ || ಇತ್ಯುಕ್ತೇಃ

ಪ್ರಸಕ್ತ ಪದ್ಯದಿಂದ ಸುಷುಮ್ನಾನಾಡಿಯ ವಿವರ ಹೇಳುತ್ತಾರೆ. ಆಶಿರಾಂತದಿ ವ್ಯಾಪಿಸಿಹುದೀ ದೇಹ ಮಧ್ಯದಲ್ಲಿ"– ಎಂದು ಹೇಳಿದ ಉಕ್ತಿಗೆ– "ನಾಭಿಯ ಮೂಲಾಧಾರದಿಂದ ಪ್ರಾರಂಭಿಸಿ ಬ್ರಹ್ಮರಂಧ್ರದವರೆಗೆ ಸರಳವಾಗಿ (ನೇರವಾಗಿ—ಋಜು) ಹೊರಟಿರುವುದೇ ಸುಷುಮ್ನಾನಾಡಿ ಎಂದು— "ಆಮೂರ್ಧಾನಂ" ಎಂಬ ವಚನವು ಆಧಾರವಾಗಿದೆ. ||೧೭||

## (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಅನಿರುದ್ಧದೇಹದ ಮೇಲೆ ಆವರಣ, ಸುಷುಮ್ನಾನಾಡಿ ಇರವ ಬಗೆ ಮುಂತಾದ್ದನ್ನು, ಕೇಶ ಎಂದು ತಲೆಕೂದಲನ್ನು ಸಾವಿರಭಾಗ ಮಾಡಿದರೆ ಅದರ ಒಂದು ಭಾಗ ಎಷ್ಟು ಸೂಕ್ಷ್ಮವಿರುವುದೋ ಅಷ್ಟು ಪ್ರಮಾಣವಿರುವ ಸುಷುಮ್ನಾನಾಡಿ ಎಂಬ ಒಂದು ಮುಖ್ಯನಾಡಿ, ನಾಭಿ ಕೆಳಗಿನ ತುಂದಿ ಎಂಬ ಮೂಲಾಧಾರ ಆರಂಭಿಸಿ, ಶಿರಸ್ಸಿನ ತನಕ ಈ ಸ್ಥೂಲದೇಹ ಮಧ್ಯದಲ್ಲಿ ಅನಿರುದ್ಧದೇಹದ ಮ್ಯಾಲೆ ಆವರಣರೂಪದಿಂದ ವ್ಯಾಪಿಸಿ ನೆಟ್ಟಗೆ ನಿಂತಿರುವುದು, ಆ ಸುಷುಮ್ನಾನಾಡಿಗೆ ಸುತ್ತಲೂ ಪಶ್ಚಿಮ ಉತ್ತರ ಪೂರ್ವ ದಕ್ಷಿಣ ಈ ನಾಲ್ಕು ದಿಗ್ಭಾಗದಲ್ಲೂ ವಜ್ರ, ಆರ್ಯ ಪ್ರಕಾಶಿನೀ ವೈದ್ಯುತಿಗಳೆಂಬ ನಾಲ್ಕು ನಾಡಿಗಳಿರುವುವು.

**ಪ್ರಮಾಣ :-**

ಮೂಲಾಧಾರಂ ಸಮಾರಭ್ಯ ಯಾವನ್ಮೂರ್ಧಾನಮಾಸ್ಥಿತಾ ।
ಮಧ್ಯೇ ಸುಷುಮ್ನಾ ವಿಜ್ಞೇಯ ವಜ್ರಿಕಾರ್ಯ ಪ್ರಕಾಶಿನೀ ॥
ವೈದ್ಯುತಾ ಬ್ರಹ್ಮನಾಡೀತು, ಸೈವ ಪಂಚಪ್ರಭೇದಿನೀ ।
ಹರಿರ್ನಿಲಶ್ಶಿತಃ ಪಿಂಗ ಲೋಹಿತಶ್ಚಾತ್ರ ಕೇಶವಃ ॥
ಪ್ರದ್ಯುಮ್ನಾದಿ ಸ್ವರೂಪೇಣ ಧೇಯಸ್ಸಿದ್ಧಿಮಭೀಪ್ಸಿತಾ ॥
ಇತ್ಯಾದಿ ಶ್ರೀಮತಂತ್ರಸಾರಾರ್ಥವು ವಿವರಿಸಲ್ಪಟ್ಟಿತು ॥೧೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಸ್ಥೂಲದೇಹಗತ ಬ್ರಹ್ಮಾದಿ ತತ್ವೇಶರಾದ ದೇವತೆಗಳು. ಶ್ರೀಶನಾಜ್ಞಾನುಸಾರ, ದೈಹಿಕ, ದೈಶಿಕ, ಕಾಲಿಕ ಎಂಬ

ಕರ್ಮತ್ರಯಂಗಳನ್ನು ತ್ರಿವಿಧಜೀವರ ಸ್ವರೂಪಯೋಗ್ಯತಾನುಸಾರ ನಡೆಯಿಸುತ್ತಾರೆಂದು ತಿಳಿಸಿ. **ಕೇಶಸಾವಿರವಿಧ** ಎಂಬ ಪ್ರಸಕ್ತ ೧೭ನೆಯ ಪದ್ಯದಿಂದ, ಸ್ಥೂಲದೇಹದ ಮಧ್ಯದಲ್ಲಿ ನೇರವಾಗಿ ವ್ಯಾಪಿಸಿರುವ ಅತಿಸೂಕ್ಷ್ಮವಾದ ಸುಷುಮ್ನಾನಾಡಿಯ ವಿವರಗಳನ್ನು ತಿಳಿಸುತ್ತಾರೆ.

(೧) ನಮ್ಮ ತಲೆಯಲ್ಲಿನ ಒಂದು ಕೂದಲನ್ನು ನೀಳವಾಗಿ ಒಂದು ಸಾವಿರಭಾಗಗಳಾಗಿ ಸೀಳಿದರೆ, ಅದರ ಒಂದಂಶವು ಕೂದಲಿನ ಸಾವಿರದ ಒಂದನೇ ಭಾಗದಷ್ಟಿರುವುದು. ಈ ಪರಿಮಾಣವು ಪರಮಸೂಕ್ಷ್ಮವಾದುದು. ಇಷ್ಟೇ ಸೂಕ್ಷ್ಮತಮವಾದ ಪರಿಮಿತಿಯುಳ್ಳದ್ದು ಸುಷುಮ್ನಾನಾಡಿಯು.

(೨) ಈ ಸುಷುಮ್ನಾನಾಡಿಗೆ **ಮಧ್ಯನಾಡಿ** ಎಂತಲು, **ಬ್ರಹ್ಮನಾಡಿ** ಎಂತಲೂ, ಹೆಸರು, ಇದು ಸಾಮಾನ್ಯ ಇಂದ್ರಿಯಗಳಿಗೆ ಗೋಚರವಲ್ಲದ್ದು, ಅತೀಂದ್ರಿಯ ಹಾಗೂ ಜಾಜ್ವಲ್ಯಮಾನವಾದದ್ದು. ವೃಷಣಗಳ ನಡುವೆ ಮೂಲಾಧಾರವಾದ ಗೆಡ್ಡೆ ಇದೆ. ಇದಕ್ಕೆ **ತುಂದಿ** ಎಂದು ಹೆಸರು. ಇದು ಸುಷುಮ್ನಾನಾಡಿಯ ಪ್ರಾರಂಭದ ಸ್ಥಾನವು. ಈ ಪ್ರಧಾನನಾಡಿಯು ನೇರವಾಗಿ ಮೂಲಾಧಾರದಿಂದ ಹೊರಟು, ದೇಹದ ಮಧ್ಯಭಾಗದಲ್ಲಿ ವ್ಯಾಪಿಸಿ, ಶಿರಗತ ಬ್ರಹ್ಮರಂಧ್ರದವರೆಗೂ ಹೋಗಿರುವುದು. ಇದು ಸರಳವಾಗಿ ನೇರವಾಗಿರುವುದರಿಂದ, ಇದಕ್ಕೆ **ಋಜುನಾಡಿ** ಎಂತಲೂ ಹೆಸರು. ದೇಹಗತ ಸಪ್ತಕಮಲಗಳಿಗೆ ಈ ನಾಡಿಯೇ ಆಧಾರವು. ಸ್ಥೂಲದೇಹದಲ್ಲಿ ಹಬ್ಬಿ ಹರಡಿರುವ ೭೨,೦೦೦ ನಾಡಿಗಳಿಗೆ ಸುಷುಮ್ನವೇ ಆಶ್ರಯವು. ಈ ಅಭಿಪ್ರಾಯವನ್ನೇ ದಾಸರಾಯರು—**ಸುಷುಮ್ನಾವು ಆ ಶಿರಾಂತದಿ ವ್ಯಾಪಿಸಿ ಹುದೀದೇಹಮಧ್ಯದಿ**-ಎಂದು ಹೇಳಿರುವರು.

ಪ್ರಮಾಣ

**"ಮೂಲಾಧಾರಂ ಸಮಾರಭ್ಯತ್ವಾಮೂರ್ಧಾನಮೃಜುಸ್ಥಿತಾ ।"**
–ಎಂದು **ತಂತ್ರಸಾರವಾಕ್ಯ ಪ್ರಮಾಣವಿದೆ.**

ಇಂತಹ ಸುಷುಮ್ನಾನಾಡಿಯೇ ಐದು ಪ್ರಕಾರವಾಗಿ ಇದೆ. ಇವುಗಳಿಗೆ ಐದು ಪ್ರತ್ಯೇಕ ಹೆಸರುಗಳಿವೆ.

(೧) ಮಧ್ಯನಾಡಿ (ಬ್ರಹ್ಮನಾಡಿ) (೨) ವಜ್ರಿಕಾ (೩) ಆರ್ಯಕಾ (೪) ಪ್ರಕಾಶಿನೀ ಮತ್ತು (೫) ವೈದ್ಯುತೀ–ಎಂದು ಪಂಚಪ್ರಭೇಧವುಳ್ಳದ್ದು.

### ೪. ಬ್ರಹ್ಮನಾಡಿ

ಇದು ಸುಷುಮ್ನಾನಾಡಿಯ ಮಧ್ಯಭಾಗವು. ಇಲ್ಲಿಯೇ **ಕ್ಷ–ಕಾರ ವಾಚ್ಯವಾದ ಶ್ರೀಲಕ್ಷ್ಮೀನರಸಿಂಹ ದೇವರು** ವಿದ್ಯಮಾನರಾಗಿದ್ದು. ನರ ವ್ಯೂಹಗಳ ರಕ್ಷಣೆ, ತನ್ಮೂಲಕ ಸಮಗ್ರ ಸ್ಥೂಲದೇಹದ ವ್ಯವಸ್ಥಾಕ್ರಮಕ್ಕೆ ನಿಯಾಮಕರಾಗಿ ಜೀವಾಧಾರರಾಗಿರುವರು.

### ೫. ವಜ್ರಿಕಾನಾಡಿ–

ಇದು ಬ್ರಹ್ಮನಾಡಿಯ ಹಿಂಭಾಗದಲ್ಲಿ ಅಂದರೆ ಪಶ್ಚಿಮ ದಿಶೆಯಲ್ಲಿರುವುದು. ಇದು ಹರಿದ್ವರ್ಣವಾಗಿರುವುದು (ಹಸಿರು ವರ್ಣ) ಈ ನಾಡಿಯಲ್ಲಿ **ಪ್ರದ್ಯುಮ್ನ**ನಾಮಕ ಶ್ರೀಪರಮಾತ್ಮನಿರುವನು. ಆ ಭಗವದ್ರೂಪದ ಬಣ್ಣವು ಹರಿದ್ವರ್ಣವಾಗಿರುವುದರಿಂದ ವಜ್ರಿಕಾನಾಡಿಯು ಆದೇ ವರ್ಣವಿಶಿಷ್ಟವಾಗಿರುವುದು.

### ೬. ಆರ್ಯಕಾನಾಡಿ

ಬ್ರಹ್ಮನಾಡಿಯ ಉತ್ತರಕ್ಕೆ ಅಂದರೆ ಎಡಪಾರ್ಶ್ವಕ್ಕೆ ಇರುವ ನಾಡಿಯೇ **ಆರ್ಯಕಾನಾಡಿಯು.** ಇದು ನೀಲವರ್ಣವಾಗಿರುವುದು, ಇಲ್ಲಿ ಅನಿರುದ್ಧನಾಮಕ ಶ್ರೀಹರಿಯ ಇದ್ದಾನೆ.

### ೭. ಪ್ರಕಾಶಿನೀನಾಡಿ

ಮಧ್ಯನಾಡಿಯ ಮುಂಭಾಗದಲ್ಲಿ ಅಂದರೆ ಪೂರ್ವಕ್ಕೆ ಇರುವ ನಾಡಿಗೆ

**ಪ್ರಕಾಶಿನೀ** ಎಂದು ಹೆಸರು. ಇದು ಶ್ವೇತವರ್ಣಯುಕ್ತವಾಗಿ ಪ್ರಕಾಶಮಾನವಾಗಿರುವುದು. ಈ ನಾಡೀಗತ ಭಗವದ್ರೂಪವು **ವಾಸುದೇವನು.**

**೮. ವೈದ್ಯುತೀನಾಡೀ**

ಮಧ್ಯನಾಡಿಯ ಬಲಪಾರ್ಶ್ವಕ್ಕೆ ಅಂದರೆ ದಕ್ಷಿಣಕ್ಕೆ ಇರುವ ನಾಡಿಯೇ **ವೈದ್ಯುತೀ** ಎಂದೆನಿಸಿದೆ. ಇದು ಪೀತವರ್ಣವಾಗಿದ್ದು **ಸಂಕರ್ಷಣ** ನಾಮಕ ಶ್ರೀಪರಮಾತ್ಮನು ಆ ನಾಡಿಯ ಮುಖ್ಯಾಭಿಮಾನಿಯು.

ಪೂರ್ವೋಕ್ತ ಪಂಚನಾಡಿಗಳೂ ಸೇರಿ **ಸುಷುಮ್ನಾನಾಡಿಯಾಗಿದೆ.** ಮಧ್ಯನಾಡಿಯ ಸುತ್ತಲೂ ವಲಯಾ ಕಾಲದಲ್ಲಿ ನಾಲ್ಕು ದಿಕ್ಕುಗಳಿಗೆ ನಾಲ್ಕು ನಾಡಿಗಳು ಒಂದು ಪಾತ್ರೆಯಲ್ಲಿ ಇನ್ನೊಂದುಪಾತ್ರೆ ಇಟ್ಟಂತೆ, ದಳ ವ್ಯೂಹದಲ್ಲಿ, ದಳಗಳು ಸೇರಿರುವಂತೆ ಇವೆ, ಈ ನಾಲ್ಕು ನಾಡಿಗಳೂ ಮಧ್ಯಗತನಾಡಿಯಿಂದ ಹೊರಗಿಲ್ಲ, ಇದೇ **ಮುಖ್ಯವಿಚಾರಾಂಶವು.** ಈ ತತ್ತ್ವವನ್ನು ತಿಳಿಸುವುದಕ್ಕಾಗಿ ದಾಸವರ್ಯರು **ಪ್ರದೇಶದಲಿ** ಎಂದು ಶಬ್ದ ಪ್ರಯೋಗ ಮಾಡಿರುತ್ತಾರೆ. ಅಂದರೆ ಅದೇ ಸ್ಥಾನದಲ್ಲಿ ಏಕಕೇಂದ್ರೀಯವಾಗಿ (ವಲಯಾಕಾರವಾಗಿ) ಎಂದರ್ಥ,

**ಪ್ರಮಾಣ**

(೧) **"ಸುಷುಮ್ನಾ ಪಂಚಪ್ರಬೇಧಿನೀ"**

(೨) **ಇದಲ್ಲದೆ ಮಾನಸಸ್ಮೃತಿ ವಾಕ್ಯ—**

**"ಮಧ್ಯಾಂಶ..............................ನಾರಾಯಣೋರುಣಃ।**

**..............................ನೀಲವರ್ಣೋऽನಿರುದ್ಧಃ ॥"**

(ಈ ಪ್ರಮಾಣದ ಪೂರ್ಣ ಪಂಕ್ತಿಯನ್ನು **ಭಾವದರ್ಪಣ ಟೀಕಾ-ವ್ಯಾಖ್ಯಾನ**ದಲ್ಲಿ ನೋಡುವುದು).

**ಸುಷುಮ್ನಾ ನಾಡಿಯ ಪಂಚ ಪ್ರಭೇದಗಳನು ತೋರಿಸುವ ಪಟ್ಟಿ**

| ಕ್ರಮ ಸಂಖ್ಯೆ | ನಾಡಿಯ ಹೆಸರು | ಸ್ಥಾನ | ದಿಕ್ಕು | ವರ್ಣ | ಅಂತರ್ಗತಭಗವದ್ರೂಪ |
|---|---|---|---|---|---|
| ೧ | ಮಧ್ಯನಾಡಿ | ಮಧ್ಯಭಾಗ | ಕೇಂದ್ರ | ಅರುಣ | ಶ್ರೀ ನಾರಾಯಣ |
| ೨ | ಪ್ರಕಾಶಿನೀ | ಮುಂಭಾಗ | ಪೂರ್ವ | ಶ್ವೇತ | ಶ್ರೀವಾಸುದೇವ |
| ೩ | ನೈದ್ಯುತೀ | ಬಲಪಾರ್ಶ್ವ | ದಕ್ಷಿಣ | ಪೀತ | ಶ್ರೀಸಂಕರ್ಷಣ |
| ೪ | ವಜ್ರಿಕಾ | ಹಿಂಭಾಗ | ಪಶ್ಚಿಮ | ಹರಿದ್ವರ್ಣ | ಶ್ರೀಪ್ರದ್ಯುಮ್ನ |
| ೫ | ಆರ್ಯಕಾ | ಎಡಪಾರ್ಶ್ವ | ಉತ್ತರ | ನೀಲವರ್ಣ | ಶ್ರೀಅನಿರುದ್ಧ |

ಮೇಲಿನ ಪಟ್ಟಿಯಿಂದ ಪಂಚ ಪ್ರಬೇಧಯುಕ್ತವಾದ ಸುಷುಮ್ನಾನಾಡೀಗತ ಭಗವದ್ರೂಪಗಳ ಉಪಾಸನಾ ಕ್ರಮವನ್ನು ತಿಳಿಯಲು ಅನುಕೂಲವಾಗುವುದು. ॥೧೭॥

## ಪದ್ಯ (೧೮)

**ಮೂಲ**

**ಆ ನಳಿನಭವ ನಾಡಿಯೊಳಗೆ ತ್ರಿ ।**
**ಕೋಣ ಚಕ್ರವು ಇಪ್ಪುದಲ್ಲಿ ಕೃ ।**
**ಶಾನು ಮಂಡಲ ಮಧ್ಯಗನು ಸಂಕರುಷಣಾಹ್ವಯನು ॥**
**ಹೀನ ಪಾಪಾತ್ಮಕ ಪುರುಷನ ದ ।**
**ಹನಗೈಸುತ ದಿನದಿನದಿ ವಿ ।**
**ಜ್ಞಾನಮಯ ಶ್ರೀವಾಸುದೇವನ ಐದಿಸುವ ಕರುಣಿ ॥೧೮॥**

**ಅವತರಣಿಕೆ**

ಬ್ರಹ್ಮನಾಡೀಗತ ತ್ರಿಕೋಣ ಮಂಡಲ, ಅಲ್ಲಿರುವ ಭಗವದ್ರೂಪಗಳ ವ್ಯಾಪಾರಗಳನ್ನು ತಿಳಿಸುತ್ತಾರೆ-**ಆ ನಳಿನಭವ ನಾಡಿಯೊಳಗೆ**-ಎಂಬ ಪ್ರಸಕ್ತ ೧೭ನೆಯ ಈ ಪದ್ಯದಿಂದ.

ಸುಷುಮ್ನಾನಾಡೀಗತ ಮಧ್ಯಸ್ಥಾನವಾದ ಕೇಂದ್ರದಲ್ಲಿ ಇರುವ ಬ್ರಹ್ಮನಾಡಿಯಲ್ಲಿ ತ್ರಿಕೋಣ ಮಂಡಲವಿದೆ. ಇವು ಕ್ರಮವಾಗಿ ಸೂರ್ಯಮಂಡಲ, ಚಂದ್ರಮಂಡಲ ಮತ್ತು ಅಗ್ನಿಮಂಡಲ ಎಂತ ಮೂರು ಪ್ರಕಾರ ಇವುಗಳ ಪೈಕಿ ಅಗ್ನಿಮಂಡಲಗತ ಶ್ರೀಸಂಕರ್ಷಣನಾಮಕ ಪರಮಾತ್ಮನು ಪಾಪಪುರುಷನಾದ ಕಲಿಯನ್ನು ದಹನಮಾಡುವನು. ಪಾಪ ಪುರುಷನ ಪ್ರಭಾವದಿಂದ ಜೀವನನ್ನು ದೂರಗೈಸಿ ವಿಜ್ಞಾನಕೋಶಾಭಿಮಾನೀ ಪುರುಷನಾಮಕ ಶ್ರೀವಾಸುದೇವನ ಸನ್ನಿಧಿಯನ್ನು ಸೇರಿಸುವನು. ॥೧೮॥

**ಆ ನಳಿನಭವನಾಡಿಯೊಳು**=ಆ ಬ್ರಹ್ಮನಾಡಿಯಲ್ಲಿ (ನಳಿನ-ನಾಭೀಕಮಲ ಭವ-ಉತ್ಪನ್ನರಾದ ಶ್ರೀಚತುರ್ಮುಖ ಬ್ರಹ್ಮದೇವರು) **ತ್ರಿಕೋಣ ಚಕ್ರವು**=ಸೂರ್ಯ, ಚಂದ್ರ ಮತ್ತು ಅಗ್ನಿ ಎಂಬ ಮೂರು ಮೂಲೆಯ ಮಂಡಲವು **ಇಪ್ಪದು**=ವಿದ್ಯಮಾನವಾಗಿದೆ, **ಅಲ್ಲಿ**=ಆ ತ್ರಿಕೋಣ ಮಂಡಲದಲ್ಲಿ **ಕೃಶಾನು ಮಂಡಲ**=ಅಗ್ನಿ ಮಂಡಲದ, **ಮಧ್ಯಗನು**=ಮಧ್ಯಗತನಾಗಿ, **ಸಂಕರ್ಷಣಾಹ್ವಯನು**=ಸಂಕರ್ಷಣನಾಮಕ ಶ್ರೀ ಪರಮಾತ್ಮನು, **ಹೀನ**=ಪರಮನೀಚನಾದ, **ಪಾಪಾತ್ಮಕ ಪುರುಷನ**=ಕಲಿಸ್ವರೂಪನಾದ ಪಾಪಪುರುಷನನ್ನು, **ಹಾನಿಗೈಸುವ**=ಭಸ್ಮ ಮಾಡುತ್ತಾ (ದಹಿಸುತ್ತಾ) **ದಿನದಿನದಿ**=ಪ್ರತಿ ದಿವಸದಲ್ಲೂ, **ಕರುಣೀ**=ಕರುಣಾಳುವಾದ ಶ್ರೀಹರಿಯು, **ವಿಜ್ಞಾನಮಯ**=ವಿಜ್ಞಾನ ಕೋಶಾಭಿಮಾನಿಯಾದ ಆ ಜ್ಞಾನಮಯ **ವಾಸುದೇವ**=ಬ್ರಹ್ಮರಂಧ್ರಗತ ಸಹಸ್ರದಳಗಳಲ್ಲಿ ವಿಶ್ವಾದಿ ರೂಪಗಳಿಂದ ವಿಶಿಷ್ಟನಾದ ಪುರುಷನಾಮಕ ಶ್ವೇತವರ್ಣಾತ್ಮಕ ವಾಸುದೇವನೊಡನೆ **ಐದಿಸುವ**=ಅಮೃತವರ್ಷಸುರಿಸಿ ಮೈಲಿಗೆಯಾದ ದೇಹವನ್ನು ಪವಿತ್ರಗೊಳಿಸಿ, ಜೀವನನ್ನು ಸೇರಿಸುತ್ತಾನೆ. ॥೧೮॥

## ವ್ಯಾಖ್ಯಾನಗಳು

### (೪) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಪಾಪಪುರುಷನ ದಹನವಿಚಾರ ಹೇಳುತಾರೆ. ಪೂರ್ವೋಕ್ತ ಬ್ರಹ್ಮದೇವರ ನಾಮಧೇಯವಾದ ಉಪನಾಮ ಸುಷುಮ್ನಾಖ್ಯನಾಡೀಒಳಗೆ, ಬ್ರಹ್ಮನಾಡೀ ಒಳಗೆ, ಅಷ್ಟದಳಕಮಲದ ಅಧೋಭಾಗದಲ್ಲಿ ಮೂರು ಮೂಲೆಯುಕ್ತವಾದ ಚಕ್ರವು ಇರೋದಾಗಿ ಅದೆ. ಆ ತ್ರಿಕೋಣಚಕ್ರದಲ್ಲಿ ಅಗ್ನಿಮಂಡಲ ಇರೋದಾಗಿ ಅದೆ. ಈ ಅಗ್ನಿಮಂಡಲ ಮಧ್ಯಗತನಾಗಿ ಸಂಕರ್ಷಣನಾಮಕ ಪರಮಾತ್ಮನು (೮ ನೇ ಸಂಧಿ ೪ ನೇ ಶ್ಲೋಕದಲ್ಲಿ ಪ್ರದ್ಯುಮ್ನನಿಂದ ಶೋಷಣ ಮಾಡಿದ) ಅತ್ಯಂತ ನೀಚನಾದ ಪಾಪಮಯಶಕಾರ

ಯುಕ್ತನಾದ ಕಲಿಪುರುಷನ ದಹನ ಮಾಡುತ್ತಾ ಪ್ರತಿದಿನದಲ್ಲಿಯೂ ದಹನದಿಂದ ಸ್ಮಶಾನಸದೃಶನಾದ ದೇಹವನ್ನ, ಅತ್ಯಂತ ಕರುಣಾವುಳ್ಳ ಶಿರಗತ ವರ್ತುಲ ಮಂಡಲ ಮಧ್ಯಗತನಾದ, ವರುಣಾಂತರ್ಗತನಾದ, ಶ್ವೇತವರ್ಣ ವಿಶಿಷ್ಟನಾದ, ವಿಜ್ಞಾನಮಯ ಸಾಂಕೇತನಾದ ವಾಸುದೇವನು, ಶಿರದಲ್ಲಿ ಬ್ರಹ್ಮನಾಡಿ ಒಳಗೆ ಇದ್ದು. ಅಲ್ಲಿಂದ ಅಮೃತವೃಷ್ಟಿ ಸುರಿಸಿ, ಸ್ಮಶಾನ ಸದೃಶವಾದ ಮೈಲಗಿಯಾದ ದೇಶವನ್ನು ಪವಿತ್ರ ಮಾಡತಾನೆ. ಪಾಪಪುರುಷನ ದಹನ ಕಾಲದಲ್ಲಿ ಹೃದಯಗತ ಬಿಂಬನ್ನ ಶಿರಗತ ವಾಸುದೇವನ ಕೂಡಾ ಸೇರಿಸಿ, ಅಮೃತವೃಷ್ಟಿ ವಾಸುದೇವ ಐದಿಸಿದ ನಂತರ ಪುನಃ ಹೃದಯ ಸ್ಥಾನದಲ್ಲಿ ಇಡೋವನಾಗಬೇಕು. ದಹಿತನಾದ ಪಾಪಪುರುಷನಿಗೆ ಮುಹೂರ್ತಕ್ಕೆ ಒಂದಾವರ್ತಿ ಉತ್ಪತ್ತಿಯು. ಈ ಪಾಪಪುರುಷನ ಎಡಭಾಗ ಉತ್ತರ ದಿಕ್ಕು ಆಯಾನಾಮಕ ಪಿಂಗಳನಾಡಿಯಲ್ಲಿ ಇರುತ್ತಾನೆ. ಪುಣ್ಯ ಪುರುಷ ಬಲಭಾಗದ ದಕ್ಷಿಣ ದಿಕ್ಕಿನಲ್ಲಿ ವೈದ್ಯುತೀನಾಮಕ ಇಳಾನಾಡೀ ಒಳಗೆ ಇರುತ್ತಾನೆ, ಪುಣ್ಯಪುರುಷ ವಾಯುದೇವರು. ಈ ವಾಯುದೇವರನ್ನು ನಾಭೀಕಮಲ ಅಧೋಭಾಗ ಷಟ್ಕೋಣ ಮಂಡಲಕ್ಕೆ ತಂದು, ಅಲ್ಲಿ ಪೂಜಾದಿಗಳ ಮಾಡಿ, ಅಲ್ಲಿಂದ ಹೃದಯ ಅಷ್ಟದಳಕಮಲ ಅಧೋಭಾಗ ತ್ರಿಕೋಣ ಮಂಡಲಕ್ಕೆ ತಂದು, ಅಲ್ಲಿ ಪೂಜಾದಿಗಳ ಮಾಡಿ, ದೇಹದಲ್ಲಿ ಪುಣ್ಯ ಪುರುಷನ್ನ ಆವಾಹನ ಮಾಡಿ ಕರ್ಮ ಮಾಡಬೇಕು.

**ಪುಣ್ಯಪುರುಷನ ಧ್ಯಾನಶ್ಲೋಕ :**

**ಅಶ್ವಮೇಧ ಶಿರಸ್ಕಂ ಚ ಮಹಾದಾನ ಭುಜದ್ವಯಂ ।**
**ಸೋಮಪಾನಹೃದಾ ಯುಕ್ತಂ ಬ್ರಹ್ಮಚರ್ಯ ಕಟಿದ್ವಯಂ ।**
**ತತ್ವಂ ಯೋಗ ಪದದ್ವಂದ್ವ ಸಾಂಗೋಪಾಂಗ ಶುಭಕ್ರಿಯಂ ।**
**ಸರ್ವತ್ರಿತಾಂಗರೋಮಾಣಂ ದಯಾದಾಕ್ಷಿಣ್ಯಲೋಚನಂ ।**

**ಸಾರ್ಧತ್ರಿಕೋಟಿತೀರ್ಥಾಂಗಂ ಸರ್ವದೇವಮಯಂ ವಿಭುಂ।**
**ಸಿಂಹಾಸನೇ ಸಮಾಸೀನಂ ದೇವದೇವ ನಮಸ್ಕೃತಂ।**
**ಸರ್ವಾಯುಧೈರ್ಯುಪೇತಂ ಚ ಕುಕ್ಷೌ ಧ್ಮರಂ ವಿಚಿಂತಯೇತ್॥**

ಏವಂ ರೀತ್ಯಾ ಪುಣ್ಯಪುರುಷನ್ನ ಧ್ಯಾನ ಮಾಡಬೇಕಂತ ತಾತ್ಪರ್ಯ. ॥೧೮॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ :-

ಇದರರ್ಥವನ್ನು ೮ನೆಯ ಸಂಧಿಯ ವ್ಯಾಖ್ಯಾನದಲ್ಲಿ ಸ್ಪಷ್ಟಮಾಡಿರುತ್ತದೆ.

**"ತ್ರಿಕೋಣಮಂಡಲಮಧ್ಯಸ್ಥೋ ರಕ್ತವರ್ಣೋ ಅಗ್ನಿಬೀಜ ವಾಚ್ಯಃ ಅಗ್ನ್ಯಂತರ್ಯಾಮಿ ಸಂಕರ್ಷಣೋ ಭಗವಾನ್ ಮಚ್ಛರೀರ ಸ್ಥಂಪಾಪ ಪುರುಷಂ ಅಗ್ನಿನಾನಿರ್ದಹತು॥"**

-ಎಂಬ ಮಂತ್ರಾರ್ಥವನ್ನೇ ಇಲ್ಲಿ ಹೇಳಿರುತ್ತದೆ. ಮಧ್ಯಗತ ಸುಷುಮ್ನಾ ನಾಡಿಗೆ ಬ್ರಹ್ಮನಾಡಿ ಎಂದು ಹೆಸರು. ಈ ನಾಡಿಗೆ ಸೇರಿ ಹೃದಯಾಕಾಶ ದಲ್ಲಿ ತ್ರಿಕೋಣಮಂಡಲಮಧ್ಯದಲ್ಲಿ ಅಗ್ನಿಶಬ್ದವಾಚ್ಯನಾದ ಅಗ್ನ್ಯಂತರ್ಗತ ಸಂಕರ್ಷಣನು ಪ್ರತಿದಿನದಲ್ಲಿಯೂ ಪಾಪಪುರುಷನನ್ನು ದಹಿಸುವನು. ಅವನು ಬ್ರಹ್ಮನ ವರದಿಂದ ರಾತ್ರಿ ಪುನಃ ಬದುಕುವನು. ಮಂತ್ರಜಾಪಕರ ಹೃದಯದಲ್ಲಿದ್ದ ಪಾಪಿಯನ್ನು ಪುನಃ ದಹಿಸುವನು. ತದನಂತರ ಶಿರೋಗತ ವಾಸುದೇವಮೂರ್ತಿಯು ದೇಹವನ್ನು ಪವಿತ್ರವನ್ನಾಗಿ ಮಾಡಿ, ಜ್ಞಾನ ಪ್ರದನಾಗುವನು. ॥೧೮॥

## (೨) ಭಾವದರ್ಪಣ ಟೀಕಾ ವ್ಯಾಖ್ಯಾನ

"ಆ ನಳಿನ ಭವೇತಿ" ॥ ಎಂಟನೇ ಸಂಧಿ ನಾಲ್ಕನೆಯ ಪದ್ಯಕ್ಕೆ ಬರೆದ ರ್ಥವೇ ಇಲ್ಲಿ ಪದ್ಯಾರ್ಥ ಆದ್ದರಿಂದ ಆಲ್ಲೇ ನೋಡತಕ್ಕದ್ದು. ॥೧೮॥

### (೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃಮೂಲ)

"ಆ ನಳಿನಭವ ಇತಿ"॥ ಪದ್ಯಾರ್ಥವು ಸುಲಭವಾಗಿರುವುದರಿಂದ ವ್ಯಾಖ್ಯಾನ ಬರೆದಿರುವುದಿಲ್ಲ.

### (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಸುಷ್ಮುಮ್ನಾ ಎಂಬ ಬ್ರಹ್ಮನಾಡಿಯಲ್ಲಿ, ಅಗ್ನಿಮಂಡಲಸ್ಥ ಸಂಕರ್ಷಣ ಚಿಂತನಾದಿಪ್ರಕಾರ ತಿಳಿಸುತ್ತಾರೆ. "ಆ ನಳಿನ" ಎಂದು ಆ ಸುಷುಮ್ನಾ ಎಂಬ ಬ್ರಹ್ಮನಾಡಿಯಲ್ಲಿ ಹೃದಯಾಧೋಭಾಗದಲ್ಲಿ, ತ್ರಿಕೋಣಚಕ್ರ ಅಗ್ನಿ ಮಂಡಲದಲ್ಲಿ ಸಂಕರುಷಣರೂಪ ದೇವರು, ನೀಚ ಪಾಪಪುರುಷನೆಂಬ ಕಲಿಯನ್ನು ದಹಿಸಿ, ದೇಹಾದಿ ಶುದ್ಧಿಯನ್ನು ಸದಾ ಕೊಟ್ಟು, ಶಿರಸ್ಥಿತ ಸಹಸ್ರದಳಚಕ್ರ ವರುಣಮಂಡಲಗತ ವಿಜ್ಞಾನಸ್ವರೂಪ ವಾಸುದೇವನನ್ನು ಹೊಂದಿಸಿ, ಅಮೃತವೃಷ್ಟಿ ದ್ವಾರಾ, ದೇಹಾದಿಗಳನ್ನು ದಿನದಿನದಲ್ಲೂ ಪವಿತ್ರಮಾಡುವನೆಂದು ಸ್ಮರಿಸಬೇಕೆಂದರ್ಥ. ವಾಯುಮಂಡಲಸ್ಥ ಪ್ರದ್ಯುಮ್ನ ನಿಂದ ಕಲಿಶೋಷಣೆ, ಮಾತೃಕಾಸಂಧಿ ೪ನೆಯ ಪದ್ಯದಲ್ಲಿ ತಿಳಿಸಿರುವುದ ರಿಂದ ಇಲ್ಲಿ ಹೇಳಿಲ್ಲವೆಂದಭಿಪ್ರಾಯ ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸೂಕ್ಷ್ಮತಮವಾದ ಸುಷುಮ್ನಾನಾಡಿಯ ವಿಚಾರವನ್ನು ಹಿಂದಿನ ಪದ್ಯದಲ್ಲಿ ತಿಳಿಸಿ, **ಆ ನಳಿನಭಾವನಾಡಿಯೊಳಗೆ**–ಎಂಬ ಪ್ರಸಕ್ತ ೧೮ನೆಯ ಪದ್ಯದಿಂದ, ಆ ಸುಷುಮ್ನಾನಾಡೀ ಮಧ್ಯಗತ ಬ್ರಹ್ಮನಾಡಿಯೊಳಗೆ ಇರುವ ತ್ರಿಕೋಣಾಕಾರದ ಅಗ್ನಿಮಂಡಲ, ಅಲ್ಲಿ ಶ್ರೀಸಂಕರ್ಷಣನಿಂದ ಪಾಪ ಪುರುಷ ವಿಸರ್ಜನಾಕಾರ್ಯ ಇತ್ಯಾದಿ ವಿವರಗಳನ್ನು ತಿಳಿಸುತ್ತಾರೆ.

೧. ಸುಷುಮ್ನಾನಾಡಿಯ ಮಧ್ಯಭಾಗಕ್ಕೆ **ಬ್ರಹ್ಮನಾಡಿ** ಎಂದು ಹೆಸರು. ಇದನ್ನೇ ದಾಸರಾಯರು ಆ **ನಳಿನಭವನಾಡಿಯೊಳಗೆ** ಎಂದು ನಿರೂಪಿಸಿರುತ್ತಾರೆ. ಅಂದರೆ ನಳಿನ–ಪದ್ಮನಾಭರೂಪೀ ಶ್ರೀ ಪರಮಾತ್ಮನ ನಾಭಿಯಿಂದ ಉತ್ಪನ್ನವಾದ ಲಕ್ಷ್ಮ್ಯಾತ್ಮಕವಾದ ಸುವರ್ಣಾತ್ಮಕವಾದ ಚತುರ್ದಶದಳ ಯುಕ್ತವಾದ ಕಮಲವೆಂದರ್ಥ. ಈ ಕಮಲದಲ್ಲಿ ಭವ–ಉತ್ಪನ್ನರಾದ (ಕಮಲೋದ್ಭವರಾದ) ಚತುರ್ಮುಖ ಬ್ರಹ್ಮದೇವರು, ಬ್ರಹ್ಮದೇವರ ಹೆಸರೇ ಈ ನಾಡಿಗಿರುವುದರಿಂದ ಸುಷುಮ್ನಾನಾಡೀಗತ ಮಧ್ಯನಾಡಿಗೆ **ಬ್ರಹ್ಮನಾಡೀ** ಎಂದು ಹೆಸರು.

೨. ಇಂತಹ ಬ್ರಹ್ಮನಾಡಿಯ ಒಳಗೆ ಅಷ್ಟದಳಕಮಲವಿದೆ. ಅದರಲ್ಲಿ ಅರುಣವರ್ಣಕಾಂತಿಯುಕ್ತವಾಧ **ಶ್ರೀಮನ್ನಾರಾಯಣನು** ಅಷ್ಟಭುಜಯುಕ್ತನಾಗಿ, ಅಷ್ಟಾಯುಧಗಳನ್ನು ಹಿಡಿದು, ಅಷ್ಟದಳಗಳಲ್ಲಿ ಸಂಚರಿಸುತ್ತಿರುವನು. ಇಂತಹ ಅಷ್ಟದಳದ ಅಧೋಭಾಗದಲ್ಲಿ ಮೂರು ಮೂಲೆಗಳಿಂದ ಕೂಡಿದ ತ್ರಿಕೋಣಮಂಡಲವಿದೆ. ಇದೇ **ಅಗ್ನಿಮಂಡಲವು** ಇದನ್ನು **ಕೃಶಾನುಮಂಡಲ** ವೆಂದು ದಾಸವರ್ಯರು ಕರೆದಿರುತ್ತಾರೆ. (ಕೃಶಾನು -ಅಗ್ನಿ).

೩. ಇಂತಹ ತ್ರಿಕೋಣಾಕಾರವಾದ ಅಗ್ನಿಮಂಡಲದ ಮಧ್ಯದಲ್ಲಿ **ಶ್ರೀ ಸಂಕರ್ಷಣನಾಮಕ** ಪರಮಾತ್ಮನು ವಿದ್ಯಮಾನನಾಗಿದ್ದಾನೆ. ಶ್ರೀ ಸಂಕರ್ಷಣನು ರಕ್ತವರ್ಣವಿಶಿಷ್ಟನು. ಅಗ್ನಿಮಂತ್ರಬೀಜವಾಚ್ಯನಾಗಿದ್ದಾನೆ. ಅಗ್ನ್ಯಂತರ್ಯಾಮಿಯಾಗಿದ್ದಾನೆ.

**ಪ್ರಮಾಣ :–**

**"ತ್ರಿಕೋಣಮಂಡಲಮಧ್ಯಸ್ಥೋ ರಕ್ತವರ್ಣೋ ಅಗ್ನಿಬೀಜವಾಚ್ಯಃ|| ಅಗ್ನ್ಯಂತರ್ಯಾಮಿ ಸಂಕರ್ಷಣೋ ಭಗವಾನ್ ಮಚ್ಛರೀರಸ್ಥಂ ಪಾಪಪುರುಷಂ ಅಗ್ನಿನಾ ನಿರ್ದಹತು||"**

೪. ಪೂರ್ವೋಕ್ತ ಪದ್ಯಗಳಲ್ಲಿ **ಪಾಪಪುರುಷನ** ಲಕ್ಷಣಗಳನ್ನು ತಿಳಿಸಿದ್ದಾರೆ. ಭಯಂಕರ ಸ್ವರೂಪವಾದ ಆ ಪಾಪಪುರುಷನೇ ಕಲಿಯು. ಪರಮ ನೀಚನಾದ ಆ ಕಲಿಯು ನಮ್ಮ ಸ್ಥೂಲದೇಹದಲ್ಲಿ ಮಿಕ್ಕ ದೈತ್ಯರೊಂದೊಡಗೂಡಿ, ಪಾಪಕಾರ್ಯಗಳನ್ನು ಮಾಡಿಸುವನು. ಇದರಿಂದ ನಮ್ಮ ದೇಹ ಮಲಿನವಾಗುವುದು. ಮೈಲಿಗೆಯಾದ ಈ ದೇಹವನ್ನು ಶುದ್ಧಿಗೊಳಿಸುವ ಕಾರ್ಯ ಬ್ರಹ್ಮನಾಡೀಗತ ತ್ರಿಕೋಣ ಅಗ್ನಿಮಂಡಲ ಮಧ್ಯಸ್ಥನಾದ ಶ್ರೀ ಸಂಕರ್ಷಣನಿಗೆ ಸೇರಿದ್ದು. ಅಗ್ನಿಬೀಜವಾಚ್ಯನಾದ ಆ ಸಂಕರ್ಷಣನು ಅಗ್ನ್ಯಂತರ್ಗತನಾಗಿದ್ದು ಆ ಪಾಪಪುರುಷನನ್ನು ದಹಿಸುವನು. ಈ ಪಾಪ ಪುರುಷನ ದಹನ ಕಾರ್ಯವು ಅಗ್ನಿಮಂಡಲಗತನಾದ ಶ್ರೀ ಸಂಕರ್ಷಣನಿಂದ ನಡೆಯುವುದು.

೫. ಈ ಕ್ರಿಯೆಯನಂತರ ಶ್ರೀ ಸಂಕರ್ಷಣನು ಹೃದಯಕಮಲಗತ ಬಿಂಬನನ್ನು ಶಿರಗತ ಬ್ರಹ್ಮರಂಧ್ರಕ್ಕೆ ಒಯ್ಯುವನು. ಶಿರದಲ್ಲಿ ಬ್ರಹ್ಮರಂಧ್ರವಿದೆ. ಅಲ್ಲಿ ಸಹಸ್ರದಳ ಯುಕ್ತವಾದ ಕಮಲವಿದೆ. ಅಲ್ಲಿ ವಿಶ್ವಾದಿಸಹಸ್ರ ರೂಪಗಳಿಂದ ವಿಶಿಷ್ಟನಾದ **ಶ್ರೀವಾಸುದೇವ** ನಾಮಕ ಪರಮಾತ್ಮನು ವಿದ್ಯಮಾನನಾಗಿದ್ದಾನೆ. ವಜ್ರಕಾಂತಿಯುಳ್ಳ ಶ್ರೀವಾಸುದೇವನಿಗೆ **ಪುರುಷ**ನೆಂದು ಹೆಸರು. ವಾಸುದೇವನೇ ಅಮೃತಸದೃಶನಾದ ಮೋಕ್ಷಪ್ರದನು. ಅಲ್ಲಿ ವಾಸುದೇವನಿಂದ ಅಮೃತ ವರ್ಷವಾಗುವುದು. ಆಗ ಪಾಪಪುರುಷನ ಸಂಪರ್ಕದಿಂದ ಅಪವಿತ್ರವಾದ ದೇಹವು ನಿರ್ಮಲವಾಗುವುದು. ಶ್ರೀವಾಸುದೇವನು ವಿಜ್ಞಾನಮಯಕೋಶಾಭಿಮಾನಿಯು. ಇದರಿಂದ ಜೀವನಿಗೆ ಭಗವತ್ಸಂಬಂಧವಾದ ಜ್ಞಾನ ಉಂಟಾಗುವುದು.

೬. ಈ ರೀತಿಯಲ್ಲಿ ಅಗ್ನಿಮಂಡಲ ಮಧ್ಯವರ್ತಿ ಶ್ರೀಸಂಕರ್ಷಣನಿಂದ ಪಾಪಪುರುಷದಹನ ಕ್ರಿಯೆಯು ಪ್ರತಿದಿನವೂ ನಡೆಯುತ್ತಿರುವುದು. ಬ್ರಹ್ಮದೇವರ ವರದಿಂದ ಕಲಿಸ್ವರೂಪ ಆ ಪಾಪಪುರುಷನು ರಾತ್ರಿ ಪುನಃ ಬದುಕುವನು. ಆಗ ಮಂತ್ರಸಿದ್ಧಿಯನ್ನು ಪಡೆದವರ ಹೃದಯಗನಾದ ಶ್ರೀ ಸಂಕರ್ಷಣನು ಪುನಃ ಆ ಪಾಪಿಯನ್ನು ದಹಿಸುವನು. ಇಂತು, ಪಾಪರಹಿತನನ್ನಾಗಿ

ಜೀವನನ್ನು ಮಾಡಿ ಮಲಿನವಾದ ದೇಹವನ್ನು ಶ್ರೀವಾಸುದೇವನ ಅಮೃತ ಸದೃಶವಾದ ಕೃಪಾಕಟಾಕ್ಷದಿಂದ ಶುದ್ಧಗೊಳಿಸಿ, ಸಾಧನ ಶರೀರವಾದ ಈ ಸ್ಥೂಲದೇಹದ ದ್ವಾರಾ ನಾನಾ ಇಂದ್ರಿಯವ್ಯಾಪಾರಗಳನ್ನು ಮಾಡಿ ಮಾಡಿ ಸುತ್ತಿರುವ ಆ ಶ್ರೀಹರಿ ಅದೆಂತಹ ಪರಮಾದ್ಭುತಚರಿತ ಹಾಗೂ ಪರಮ ಕರುಣಾಳು ! ॥೧೮॥

## ಪದ್ಯ (೧೯)

**ಮಧ್ಯನಾಡಿಯ ಮಧ್ಯದಲಿ ಹೃ ।**
**ತ್ಪದ್ಮಮೂಲದಿ ಮೂಲಪತಿ ಪದ ।**
**ಪದ್ಮ ಮೂಲದಲಿಪ್ಪ ಪವನನ ಪಾದಮೂಲದಲಿ ॥**
**ಪೊಂದಿಕೊಂಡಿಹ ಜೀವ ಲಿಂಗಾನಿ ।**
**ರುದ್ಧದೇಹ ವಿಶಿಷ್ಟನಾಗಿ ಕ ।**
**ಪರ್ದಿ ಮೊದಲಾದಮರರೆಲ್ಲರು ಕಾದುಕೊಂಡಿಹರು ॥ ॥೧೯॥**

**ಅವತರಣಿಕೆ–**

ಹಿಂದಿನ ಪದ್ಯದಲ್ಲಿ ಬ್ರಹ್ಮನಾಡಿಯಲ್ಲಿರುವ ಅಗ್ನಿಮಂಡಲಸ್ಥನಾದ ಶ್ರೀ ಸಂಕರ್ಷಣನನಿಂದ ನೀಚನಾದ ಪಾಪಪುರುಷನ ದಹನ ಕಾರ್ಯವನ್ನು ತಿಳಿಸಿ, ಪ್ರಸಕ್ತ ಸಂಧಿಗತ ೧೯ನೆಯ-**ಮಧ್ಯನಾಡಿಯ**–ಎಂಬ ಪದ್ಯದಿಂದ ಹೃತ್ಪದ್ಮದಲ್ಲಿ ವಿದ್ಯಮಾನನಾಗಿರುವ ಮೂಲೇಶನಾಮಕ ಪರಮಾತ್ಮನದ ಪಾದಮೂಲದಲ್ಲಿರುವ ಶ್ರೀಮುಖ್ಯಪ್ರಾಣದೇವರ ಪಾದಾಶ್ರಿತನಾಗಿ ಲಿಂಗಾನಿರುದ್ಧ ದೇಹಸಹಿತನಾದ ಜೀವನಿರುವನು ಎಂದು ತಿಳಿಸುತ್ತಾರೆ.

ಬ್ರಹ್ಮನಾಡಿಯ ಮಧ್ಯದಲ್ಲಿ ಅಷ್ಟದಳ ಹೃತ್ಪದ್ಮವಿದೆ. ಇದರಲ್ಲಿ ಮೂಲೇಶ ನಾಮಕ ಬಿಂಬನಿದ್ದಾನೆ. ಆ ಬಿಂಬನ ಪಾದಪದ್ಮಗಳಲ್ಲಿ ಆಶ್ರಿತರಾಗಿ

ಶ್ರೀಪವನರಾಯರಿದ್ದಾರೆ. ಪವನನ ಪದಪದ್ಮದಲ್ಲಿ ಜೀವನು ಅನಾದಿಲಿಂಗ ಹಾಗೂ ಅನಿರುದ್ಧದೇಹಸಹಿತನಾಗಿ ಆಶ್ರಯ ಹೊಂದಿಕೊಂಡಿದ್ದಾನೆ. ರುದ್ರಾದಿ ತತ್ತ್ವದೇವತೆಗಳೆಲ್ಲರೂ ಅನಿರುದ್ಧದೇಹದಲ್ಲಿದ್ದು, ಆ ಜೀವನಿಗೆ ರಕ್ಷಕರಾಗಿದ್ದಾರೆಂದು ಪದ್ಯದ ತಾತ್ಪರ್ಯಾಭಿಪ್ರಾಯ ॥೧೯॥

**ಪ್ರತಿಪದಾರ್ಥ :**

**ಮಧ್ಯನಾಡಿಯು** = ಸುಷುಮ್ನಾನಾಡಿಯು ಕೇಂದ್ರವಾದ ಮಧ್ಯನಾಡಿ ಎಂದೆನಿಪ ಬ್ರಹ್ಮನಾಡಿಯು **ಮಧ್ಯದಲಿ** = ಮಧ್ಯಭಾಗದಲ್ಲಿ (ಕೇಂದ್ರದಲ್ಲಿ) **ಹೃತ್ಪದ್ಮಮೂಲದಿ** = ಅಷ್ಟದಳಾತ್ಮಕವಾದ ಹೃತ್ಕಮಲದ ಕರ್ಣಿಕಾಮೂಲದಲ್ಲಿ (ಬುಡದಲ್ಲಿ) **ಮೂಲಪತಿ** = ಅಷ್ಟಬಾಹುಗಳಿಂದ ಯುಕ್ತನಾದ ಅಂಗುಷ್ಠಾಗ್ರಪರಿಮಿತನಾದ **ಮೂಲೇಶನಿದ್ದಾನೆ. ಪದಪದ್ಮಮೂಲದಲಿಪ್ಪ** = ಅಂತಹ ಬಿಂಬರೂಪೀ ಮೂಲೇಶನ ಪಾದಪದ್ಮಗಳ ಮೂಲಎಂದರೆ ಉಂಗುಷ್ಟಗೆಳ ಮಧ್ಯದಲ್ಲಿ. (ಮೂಲೇಶನಿಗೆ ಪಾದ್ವಯಗಳು. ಆ ಎರಡು ಪಾದಗಳ ಹೆಬ್ಬೆರಳಿನ ನಡುವೆ) **ಇಪ್ಪ** = ಶ್ರೀ ಪರಮಾತ್ಮನ ಪಾದಾಶ್ರಿತರಾಗಿ ಇರುವ, **ಪವನನ** = ಪರಮಪಾವನಮೂರ್ತಿಯಾದ ಶ್ರೀ ಮುಖ್ಯಪ್ರಾಣದೇವರ, **ಪಾದಮೂಲದಲಿ** = ಉಭಯ ಪಾದಗಳ ಅಂಗುಷ್ಟದ ಮಧ್ಯದಲ್ಲಿ **ಲಿಂಗ** = ಅನಾದಿಲಿಂಗಶರೀರ, **ಅನಿರುದ್ಧದೇಹ** = ಅನಿರುದ್ಧಶರೀರ **ವಿಶಿಷ್ಟನಾಗಿ** ಲಿಂಗಾನಿರುದ್ಧದೇಹಗಳಿಂದ ಸಹಿತನಾಗಿ, **ಜೀವ** = ಜೀವನು **ಪೊಂದಿಕೊಂಡಿಹ** = ಹರಿವಾಯುಗಳ ಆಶ್ರಯದಲ್ಲಿ ಹೊಂದಿಕೊಂಡಿದ್ದಾನೆ. **ಕಪರ್ದಿ ಮೊದಲಾದ** = ಮಹರುದ್ರದೇವರು ಮೊದಲಾದ **ಅಮರರೆಲ್ಲರು** = ಅಷ್ಟದಳಗಳಲ್ಲಿ ಅಷ್ಟದಿಕ್ಕುಗಳಲ್ಲಿರುವ ಅಷ್ಟದಿಕ್ಪಾಲಕರಾದ ದೇವತೆಗಳು **ಕಾದುಕೊಂಡಿಹರು** = ಮೂಲೇಶನ ಹಾಗೂ ಪ್ರಾಣದೇವರ ಸೇವಾರ್ಥವಾಗಿ ಆಸಕ್ತಮನವುಳ್ಳವರಾಗಿ ಜೀವನನ್ನು ರಕ್ಷಿಸುತ್ತಿದ್ದಾರೆ. ॥೧೯॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ದೇಹದಲ್ಲಿ ಜೀವರು ಇರತಕ್ಕ ವಿಚಾರ ಅಂದರೆ ಸ್ಥಾನ ಹೇಳತಾರೆ. ಮೂಲಾಧಾರ ಆರಂಭಮಾಡಿ, ದೇಹಮಧ್ಯದಲ್ಲಿ ಹೊರಟು, ಶಿರಬ್ರಹ್ಮರಂಧ್ರ ಪರಿಯಂತ ವ್ಯಾಪಿಸಿ ಇರುವಂಥ, ಬ್ರಹ್ಮನಾಡಿಯಾದ ಸುಷುಮ್ನಾನಾಡಿಯು ಸಮಾನ ಮಧ್ಯಭಾಗ ಪ್ರದೇಶದ ನಾಡೀ ಒಳಭಾಗದಲ್ಲಿ, ಹೃದಯಕ್ಕೆ ಸಮಾನಸ್ಥಾನದಲ್ಲಿ ಅಷ್ಟದಳಪದ್ಮ, ಈ ಕಮಲಮಧ್ಯದಲ್ಲಿ ಕರ್ಣಿಕಾ ಅದೆ. ಇದರ ಅಧೋಭಾಗವಾದ ಕರ್ಣಿಕಾಮೂಲದಲ್ಲಿ, ಅಷ್ಟಬಾಹುಗಳಿಂದ ಯುಕ್ತನಾದ ದಳಸಂಚಾರಿಯಾದ, ಅಂಗುಷ್ಠಾಗ್ರಪರಿಮಿತನಾದ ಮೂಲೇಶ ಇರೋವನಾಗಿದ್ದಾನೆ. ಈ ಮೂಲೇಶನಾಮಕ ಪರಮಾತ್ಮನ ಪಾದಗಳೆಂಬೊ ಪದ್ಮಗಳ ಮೂಲದಲ್ಲಿ ಎಂದರೆ, ಪಾದಕ್ಕೆ ಮೂಲ ಉಂಗುಷ್ಟಗಳೆರಡು, ಈ ಉಭಯ ಉಂಗುಷ್ಟಗಳ ಮಧ್ಯದಲ್ಲಿ ಇರತಕ್ಕ ಶ್ರೀವಾಯುದೇವರ ಪಾದಕ್ಕೆ ಮೂಲವಾದ ಉಂಗುಷ್ಟಗಳ ಮಧ್ಯದಲ್ಲಿ ಸಾದಿ, ಅನಾದಿಲಿಂಗ ಶರೀರ, ಅನಿರುದ್ಧಶರೀರ ದೇಹದಿಂದ ಸಹಿತನಾಗಿ ಜೀವನಾದವನು ಪೊಂದಿಕೊಂಡು ಇರೋವನಾಗಿದ್ದಾನೆ. ರುದ್ರದೇವರೇ ಮೊದಲಾದ ಅಷ್ಟದಿಕ್ಪಾಲಕರಾದ ಯಾವತ್ತೂ ದೇವತೆಗಳು ಆಯಾ ದಿಕ್ಕುಗಳ ಆಯಾದಳಗಳಲ್ಲಿ ಮೂಲೇಶನ, ಪ್ರಾಣದೇವರ ಸೇವಾರ್ಥ ಕಾದುಕೊಂಡು ಇರೋವರಾಗಿದ್ದಾರೆ ಎಂತ ತಾತ್ಪರ್ಯ.

**ವಿಶೇಷಾರ್ಥ–**

ಅಷ್ಟದಿಕ್ಪಾಲಕರು ಎಲ್ಲಿ ಕಾದಿಕೊಂಡಿದ್ದಾರೆ ಎಂದರೆ, ಅಷ್ಟದಿಕ್ಕುಗಳಿಗೆ ವ್ಯಾಪಿಸಿರುವ ಅಷ್ಟದಳಗಳಲ್ಲಿ ಕಾದುಕೊಂಡು ಇದ್ದಾರೆ. (೧೮ನೇ ಶ್ಲೋಕದಲ್ಲಿ ಹೇಳಿದಪ್ರಕಾರ) ಈ ಅಷ್ಟದಳಕಮಲಕ್ಕೆ ಅಧೋಭಾಗದಲ್ಲಿ

ಇರತಕ್ಕ ತ್ರಿಕೋಣ ಮಂಡಲದಲ್ಲಿ ದಹನಮಾಡಿ ಶರೀರಶುದ್ಧಿ, ಅದನಂತರ ದಕ್ಷಿಣಭಾಗದಲ್ಲಿ ಇರತಕ್ಕ ಜಯದೇವನೆಂಬ ಪುಣ್ಯಪುರುಷನ ಆವಾಹನ ಮಾಡಬೇಕು. ಹ್ಯಾಂಗೆಂದರೆ– ದಕ್ಷಿಣಭಾಗ ಸ್ಪರ್ಶಮಾಡಿಕೊಂಡು ಪುಣ್ಯ ಪುರುಷನಧ್ಯಾನ ಮಾಡಬೇಕು, ಪುಣ್ಯಪುರುಷನ ಧ್ಯಾನ ೧೮ನೇ ನುಡಿ ವ್ಯಾಖ್ಯಾನದಲ್ಲಿ ಹೇಳಿ ಅದೆ, ಇಂಥಾ ಪುಣ್ಯಗಳಿಂದ ಶರೀರವಾಗಿ ಉಳ್ಳ ಹನುಮದ್ದೇವರನ್ನು ಧ್ಯಾನಮಾಡಿ ಷಟ್ದಳಪದ್ಮಕ್ಕೆ ಅಧೋಭಾಗ ಷಟ್ಕೋಣ ವಾಯುಮಂಡಲದಲ್ಲಿ ಆವಾಹನ ಮಾಡಿ, ಷೋಡಶೋಪಚಾರಪೂಜಾ ಮಾಡಿ. ಆ ರೂಪದಿಂದ ಭೀಮರೂಪವನ್ನ ಧ್ಯಾನ ಮಾಡಿ, ಭೀಮದೇವರ ಧ್ಯಾನಶ್ಲೋಕದಿಂದ ಧ್ಯಾನಮಾಡಿ, ಹನುಮರೂಪದಿಂದ ಭೀಮರೂಪ ತೆಗೆದುಕೊಂಡು, ಅಷ್ಟದಳಕಮಲ ಅಧೋಭಾಗಗತ ತ್ರಿಕೋಣವನ್ನ ಮಂಡಲದಲ್ಲಿ ಆವಾಹನ ಮಾಡಿ ಷೋಡಶಪೂಜಾ ಮಾಡಬೇಕು. ತದ್ವತ್ ಮಧ್ವಾಚಾರ್ಯರ ಧ್ಯಾನಶ್ಲೋಕದಿಂದ ಧ್ಯಾನಮಾಡಿ, ಭೀಮ ರೂಪದಿಂದ ತೆಗೆದುಕೊಂಡು ಶಿರದಲ್ಲಿ ಆವಾಹನಮಾಡಿ ಷೋಡಶಪೂಜಾ ಮಾಡಬೇಕು. ಇಲ್ಲಿಗೆ ದೇಹಶುದ್ಧವಾಯಿತು. ಇಡಾ ಪಿಂಗಳಾ ನಾಡಿಗಳ ಎರಡರಲ್ಲಿ ಎಡನಾಡಿಯಲ್ಲಿ ಪಾಪಪುರುಷ, ಬಲನಾಡಿಯಲ್ಲಿ ಪುಣ್ಯಪುರುಷ ಈ ಪ್ರಕಾರ ತಿಳಿಯಬೇಕು.

ಮೂಲೇಶಾದಿ ವಿಚಾರಕ್ಕೆ **ಪ್ರಮಾಣಗಳು—ಬ್ರಹ್ಮಾಂಡಪುರಾಣೇ ವೇಂಕಟಗಿರಿಮಹಾತ್ಮ್ಯೇ ಸೂತ-ಋಷಿಸಂವಾದೇ ಅಧ್ಯಾತ್ಮಮಾಲಿಕಾ ವರ್ಣನಂ ನಾಮ ಏಕೋತ್ತರಶತತಮೋಽಧ್ಯಾಯದಲ್ಲಿಯೂ, ಬೃಹಚ್ಛ ಲಾರಿಯಲ್ಲಿಯೂ, ಬೃಹದ್ಭಾಷ್ಯದಲ್ಲಿಯೂ** ಅದೆ. ಜೀವಾಂಗುಷ್ಠ ಪರಿಮಿತದಿಂದ ಜೀವಾಕಾರನಾದಂಥ ಆಕಾರ ಉಳ್ಳ ಅಗ್ರೇಶನಾಮಕ ಪರ ಮಾತ್ಮ ಆತ್ಮ ಎಂತಲೂ ಪ್ರಾಜ್ಞ ಎಂತಲೂ ಹೆಸರು ಉಳ್ಳವನಾಗಿ ವಿಯೋಗ ರಹಿತನಾಗಿ ಸರ್ವದಾ ಸರ್ವಕಾಲದಲ್ಲಿ ಜೀವಾಂತರ್ಗತನಾಗಿ ಇರೋವನಾಗಿ ದ್ದಾನೆ, ಈ ಅಗ್ರೇಶನ ಆಕಾರ ಎಂಥಾದ್ದೆಂದರೆ ಜೀವವತ್ ಇರತಕ್ಕದ್ದು, ಜ್ಞಾನಾನಂದವೇ ಸ್ವರೂಪವಾಗಿ ಉಳ್ಳವ. ಅನಾದ್ಯನಂತಕಾಲಕ್ಕೂ, ಮುಕ್ತಾ ಮುಕ್ತದ್ವಯಕಾಲದಲ್ಲೂ ಇದೇ ರೀತ್ಯಾನೇ ಇರತಕ್ಕವ. ಈ ಪ್ರಕಾರ

ಜೀವಾಂತರ್ಗತದಲ್ಲಿ ಇರೋವನಾಗಿದ್ದಾನೆ. ಜೀವನಾದರೋ ಯೋಗ್ಯತಾನುಸಾರ ಜ್ಞಾನಾನಂದಸ್ವರೂಪ ಉಳ್ಳವ. ಇಂಥಾ ಜೀವನು ಅನುಭವಿಸತಕ್ಕ ಅವಿದ್ಯಾಕಾಮಕರ್ಮಗಳು ಸದಾ ಸರ್ವಕಾಲದಲ್ಲಿ ವಿಷ್ಣುಸಂಕಲ್ಪಾನುಸಾರದಿಂದ ಲಿಂಗಶರೀರದಲ್ಲಿ ವಿದ್ಯಮಾನಗಳಾಗಿ ಇಂಥಾ ಲಿಂಗಶರೀರ, ಜೀವಗೆ ಅನಾದಿ ಕಾಲದಿಂದ ಸಂಬಂಧವಾಗಿ ಅದೆ. ಈ ಅವಿದ್ಯಾಕಾಮಕರ್ಮಗಳು ಲಿಂಗದಲ್ಲಿ ಎಲ್ಲಿ ಅವೆ ಅಂದರೆ, ತೃತೀಯಪರಿಚ್ಛೇದವಾದ ತಮಃಪರಿಚ್ಛೇದವಾದ ಅಂಕುರರೂಪವಾದ ವ್ಯಾಪಾರರಹಿತವಾಗಿ ಬೀಜಾತ್ಮನಾ ಇರೋದಾಗಿ ಅದೆ. ಇಂಥ ಲಿಂಗದೇಹಕ್ಕೆ ನಾಶ ಎಂಬುದು ಎಂದಿಗೂ ಇಲ್ಲ. ಏನಾಗತದೆ ಎಂದರೆ, ಲಿಂಗದೇಹ ಭಂಗಾರ್ಥವಾಗಿ ಪರಮಾತ್ಮ ಉಪಾಸನಾ ಮಾಡಿದರೆ ಭಗವದಪರೋಕ್ಷಾನಂತರದಲ್ಲಿ ಪ್ರಾರಬ್ಧಕರ್ಮದಿಂದ ಜಾಯಮಾನವಾತಕ್ಕ ಆಯಾ ದೇಹಗಳು ಚರಮದೇಹಗಳು ಎನಿಸುತ್ತವೆ. ಆಯಾ ದೇಹಗಳ ತ್ಯಾಗ ಮಾಡತಾ ಇರತಾನೆ, ಅಯಾ ದೇಹಗಳಿಂದ ಮಾಡತಕ್ಕ ಕರ್ಮಗಳು ಜನ್ಮಾಂತರಕ್ಕೆ ಕಾರಣಗಳಲ್ಲ. ಪ್ರಾರಬ್ಧಕರ್ಮ ಜನ್ಮಗಳು ಎಷ್ಟು ಐದಬೇಕೆಂದು ಕ್ಲುಪ್ತವೋ ಅಷ್ಟು ಮಾತ್ರ ಜನ್ಮಗಳು ಧರಿಸಿ ಪ್ರಾರಬ್ಧಕರ್ಮದೇಹಗಳ ತ್ಯಾಗ ಮಾಡತಾನೆ. ತದನಂತರ ಸ್ಥೂಲದೇಹಕ್ಕೆ ಕಾರಣವಾದ ಸೂಕ್ಷ್ಮ ಶರೀರ ಎನತಕ್ಕ ಅನಿರುದ್ಧಶರೀರ ಸರ್ವದಾ ಕಂಚುಕದೋಪಾದಿಯಲ್ಲಿ ಅಸಂಬಂಧವಾಗಿ ಸೀಳ್ಳಕಾಗಿ (ಸಡಿಲವಾಗಿ) ಲಿಂಗಕೆ ಮ್ಯಾಲೆ ಸುತ್ತಿಕೊಂಡು ಇರುತ್ತದೆ. ಇದು ಸರ್ಪಕಂಚುಕ, (ಹಾವುಪೊರೆ) ಹ್ಯಾಂಗೆ ಬಿಡೋದಾಗ ತದೋ ತದ್ವತ್ ಬಿಡೋವನಾಗತಾನೆ. ತದ್ವತ್ ಲಿಂಗದೇಹವು ವಿರಜಾ ನದೀಸ್ನಾನದಿಂದ ಲಕ್ಷ್ಮ್ಯಾತ್ಮಕವಿರಜಾನದಿಯಲ್ಲಿ ಬಿಡೋವನಾಗತಾನೆ. ಅಲ್ಲಿ ತೇಲತಾ ಇರತದೆ, ಪ್ರಳಯಕಾಲಕ್ಕೆ ವಿರಜಾ ಲಕ್ಷ್ಮಿಯಲ್ಲಿ ಏಕೀಭೂತವಾಗೋ ಕಾಲಕ್ಕೆ ರಮಾದೇವೇರ ಉದರದಲ್ಲಿ ಇರತದೆ. ಅಷ್ಟೇ ಹೊರ್ತು ಲಿಂಗದೇಹಕ್ಕೆ ನಾಶ ಎಂಬುದು ಇಲ್ಲ. ನಾಶಶಬ್ದ ಭಂಗಪರ್ಯಾಯ- ಭಂಗ ಎಂದರೆ ಜೀವನ ಬಿಟ್ಟು ದೂರ ಇರೋಣ. ಲಿಂಗಭಂಗಾನಂತರ ಅಹಂ ಮಮತಾ ಎಂಬ ಉಕ್ತಿ ಜೀವಗೆ ಅನ್ವರ್ಥಕವು. ಅಹಂ ಎಂದರೆ ನಾನು (ಜೀವ), ಮಮ ಎಂದರೆ ನನ್ನ ಕರ್ಮ ಎಂತ ತಾತ್ಪರ್ಯ. ಇಂಥಾ ಜೀವ

ಸೃಷ್ಟವಾಗಬೇಕಾದರೆ, ಲಿಂಗದೇಹಸ್ಥ ಪೂರ್ವೋಕ್ತ ಅಂಕುರರಹಿತವಾಗಿ ಶಕ್ತ್ಯಾತ್ಮನಾ ಇರತಕ್ಕ ಕರ್ಮವೇ ಕಾರಣವು. ಜೀವರಾಶಿಗಳು ಅನಾದಿ ಯಿಂದ ಅಸೃಜ್ಯರಾಗಿ ರಾಶೀಭೂತರಾಗಿ ಬಿದ್ದು ಇರ್ತಾರೆ. ದಾವ ಕರ್ಮವೂ ಮಾಡೋದಿಲ್ಲ. ಸುಷುಪ್ತಿ ಐದಿರುತ್ತಾರೆ. ॥೧೯॥

## (೨) ಭಾವಪ್ರಕಾಶಿಕೆ ವ್ಯಾಖ್ಯಾನ

ಜೀವನಿರುವ ಸ್ಥಾನವನ್ನು ಹೇಳುತ್ತಾರೆ. ದೇಹದ ಮಧ್ಯದಲ್ಲಿರುವ ಸುಷುಮ್ನಾ ನಾಡಿಗೆ ಸೇರಿಕೊಂಡು ಎಂಟು ದಳಗಳುಳ್ಳ ಕಮಲ ಒಂದಿರುವುದು. ಆ ಕಮಲದಲ್ಲಿ ಅಗ್ರೇಶ, ಮೂಲೇಶ, ಪ್ರಾದೇಶ-ಎಂಬ ಮೂರು ಮೂರ್ತಿ ಗಳು ಕಮಲದ ಮೇಲಿನ ದಳಗಳಲ್ಲಿಯೂ, ಬುಡದ ದಳಗಳಲ್ಲಿಯೂ, ಮಧ್ಯದಲ್ಲಿಯೂ ಇರುವರು. ಅವುಗಳಲ್ಲಿ ಕೆಳಗಿನ ದಳಗಳಲ್ಲಿ ಮೂಲೇಶನಾಮಕ ಶ್ರೀ ಪರಮಾತ್ಮನ ಪಾದಮೂಲದಲ್ಲಿ ಪ್ರಾಣದೇವರು ಇರುವರು. ಆ ಪ್ರಾಣದೇವರು ಮೇಲೆ ಹೇಳಿದ ಮೂರು ಮೂರ್ತಿಗಳಿಗೂ, ಅಭಿಮುಖ ರಾಗಿ ಕೈಮುಗಿದುಕೊಂಡು ನಿಂತಿರುವರು. ಅವರ ಪಾದವನ್ನು ಆಶ್ರಯಿಸಿ ಕೊಂಡು, ಲಿಂಗಶರೀರ ಮತ್ತು ಅನಿರುದ್ಧ ಶರೀರಗಳಿಂದ ಕೂಡಿದ ಜೀವನಿರು ವನು. ರುದ್ರದೇವರು ಮೊದಲಾದ ಅಷ್ಟದಿಕ್ಪಾಲಕರು ಎಂಟು ದಳಗಳಲ್ಲಿ ಭಗವತ್ಸೇವಾಪರರಾಗಿ ಕಾದುಕೊಂಡಿರುವರು. ಇದಕ್ಕೆ ಆಧಾರ ವಾಕ್ಯ ಗಳು—

"ವಿಷ್ಣು ಮೂರ್ಲೇಶ ಇತಿ ತು ವಿಜ್ಞಾನಾತ್ಮೇತಿ ತಂ ವಿದುಃ ।
ತಸ್ಮಾದಗ್ರೇಶ ಮೂಲೇಶ ಪ್ರಾದೇಶ ಇತಿ ನಾಮಕಾಃ ॥
ಮೂರ್ತಯಃ ಸಂತಿ ಹೃತ್ಪದ್ಮೇತ್ರಯ ಆನಂದರೂಪಿಣಃ ।
ವರ್ತತೇ ಮೂಲೇಶಪಾದ ಸನ್ನಿಧೌ ಪ್ರಾಣನಾಮಕಃ ।
ಬದ್ಧಾಂಜಲಿಃ ಸ್ವರೂಪಾಣಾಂ ತ್ರಯಾಣಾಂ ಪರತಃ ಸದಾ ॥
ಪೂರ್ವಾಭಿಮುಖ ತಚ್ಛೈವ ವರ್ತತೇ ಜೀವ ಏವತು ।
ಮುಖ್ಯಪ್ರಾಣ ಪದಾಂಭೋಜಸನ್ನಿಧೌ ತದ್ವದೇವಹಿ ॥"

**–ಎಂಬ ಮುಕ್ತಿ ತತ್ತ್ವಗ್ರಂಥ ವಾಕ್ಯಗಳಲ್ಲಿ** ಉಕ್ತವಾದ ಅರ್ಥವನ್ನೇ ದಾಸ ದಾಯರು ಇಲ್ಲಿ ಹೇಳಿರುವರು. ॥೧೯॥

**(೩) ಭಾವದರ್ಪಣ ಟೀಕಾ ವ್ಯಾಖ್ಯಾನ :-**

ಬ್ರಹ್ಮನಾಡೀ ಮಧ್ಯದಲ್ಲಿ ಬಿಂಬನ ಪಾದಾಶ್ರಯ ಮಾಡಿದ ಮುಖ್ಯ ಪ್ರಾಣೇಶನ ಪಾದಮೂಲಾಶ್ರಯ ಮಾಡಿಕೊಂಡು ಜೀವ ಇದ್ದಾನೆಂದು ಹೇಳುತ್ತಾರೆ- "ಮಧ್ಯನಾಭೇತಿ" ॥

**ಮುಕ್ತಿ ತತ್ತ್ವ ಗ್ರಂಥಸ್ಥ ಪ್ರಮಾಣ-**

**"ವಿಷ್ಣು ಮೂಲೇಶ ಇತಿ..........................................**

**.................................................... ತದ್ವದೇವಹಿ ॥"**

(ಈ ಪ್ರಮಾಣದ ಪೂರ್ಣ ವಾಕ್ಯರೂಪವನ್ನು **ಭಾವಪ್ರಕಾಶಿಕಾ ವ್ಯಾಖ್ಯಾನ** ದಲ್ಲಿ ಕೊಟ್ಟಿದೆ) ಅನಿರುದ್ಧ ದೇಹೇತಿ— ಪ್ರಮಾಣ—

**"ಚತುರ್ದಶದಳಾತ್ಮಾಸಾವನಿರುದ್ಧಾಖ್ಯ ದೇಹತಃ ।**
**ಅನಿರುದ್ಧಾಪ್ತದೇಹತ್ವಾದ್ದೇಹಸ್ತಚ್ಛಬ್ದವಾಚಕಃ ॥"**

**—ಎಂತ ಮುಕ್ತಿತತ್ತ್ವ ಪ್ರಮಾಣ ವಾಕ್ಯವಿದೆ.** ಕರ್ಪದಿ—ರುದ್ರ ಎಂಬಂರ್ಥ. ॥೧೯॥

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :**

"ಮಧ್ಯೇ"–ಇತಿ ॥ "ಮಧ್ಯೇ ಸುಷುಮ್ನಾ"—ಇತ್ಯುಕ್ತೇಃ ॥" ತಸ್ಯಾಂ ವಿಷುಃ ಮೇ ಹೃದಯಾಂಭೋಜೇ ಸುಷುಮ್ನಾನಾಡಿ ಮಧ್ಯಗೇ ! ದಿವ್ಯ ದೇವಮಯೇ ಪೀಠೇ ವೈಕುಂಠೇ ಇವ ಮೋದತೇ"—ಇತಿ **ರತ್ನಮಾಲಾ** ॥ "ಮೂಲೇಶ ಚರಣಾಧಃ ಶ್ರೀ ಮುಖ್ಯಪ್ರಾಣಃ ಕೃತಾಂಜಲಿಃ" ॥ ಇತಿ— ಉಪಾಸಾಯಾಂ **ಏಕಾದಶ ಭಾಗವತ ತಾತ್ಪರ್ಯೇ** ॥ "ತೇನೈವ ಕ್ರಮ

ಯೋಗೇನ ಪ್ರಾಣಂ ದೃಷ್ಟ್ವೈವ **ಹರಿಂ** ತಥಾ ॥ ಏಷ್ಟ್ವಾ ಮುಕ್ತಿ ಪದವೀ ನಾನ್ಯ ಥಾ ತು ಕಥಂಚನ"—**ಇತಿ ಛಾಂದೋಗ್ಯೇಚ** ॥ "ಏವಂ ವಿದಿತ್ವಾ ಸಂಸಾರಾತ್ ಮುಕ್ತಿಮೇಶ್ಯತ್ಯಸಂಶಯಃ " ॥ಇತಿ॥ "ಬಿಂಬರೂಪಿ ಹರಿಂ ದೃಷ್ಟ್ವೈವ ಹರಿಪಾದಾಬ್ಜ ಸಂಸ್ಥಿತಮ್ । ಸ್ವಂಚ ಪಶ್ಯತ್ಯಾಪರೋಕ್ಷ್ಯಾತ್ ನಿವೃತ್ತಾಶೇಷಬಂಧನಃ"—ಇತಿ **ರತ್ನಮಾಲಾಯಾಂ** ॥ "ಯದಾ ಸ್ವರೂಪಂ ಜಾನಾತಿ" — **ಇತಿ ದ್ವಿತೀಯ ತಾತ್ಪರ್ಯೇ** ॥ ತತ್ರೈವ—"ತ್ಯಕ್ತ್ವಾ ದೇಹಾದ್ಯಾತ್ಮಭಾವಂ ಜೀವರೂಪಿ ಹೃದಿಸ್ಥಿತೇ । ದೃಷ್ಟ್ವಾತ್ಮ ಭಾವಂ ತಂ ಚಾಪಿ ಹರಿಪಾದಾಬ್ಜ ಸಂಸ್ಥಿತಮ್" ॥ ಇತಿ ಸಮಾಧಿಯೋಗೇ ಸಂಪೂರ್ಣೇ ಹೃದಿ ಪಶ್ಯತಿ ಕೇಶವಮ್ ॥ ಜೀವಂ ತತ್ಪ್ರತಿಬಿಂಬಂ ಚ"—**ಇತಿ ಏಕಾದಶ ತಾತ್ಪರ್ಯೇ.** ॥೧೯॥

**ಕನ್ನಡಾನುವಾದ—**

ಜೀವನ ಸ್ಥಿತ್ವವನ್ನು ಈ ಪದ್ಯದಲ್ಲಿ ವಿವರಿಸುತ್ತಾರೆ, "ಸುಷುಮ್ನಾ" ನಾಡಿಗೆ ಮಧ್ಯನಾಡಿ ಎಂದು ಹೆಸರು. "ಈ ಸುಷುಮ್ನಾ ನಾಡಿಯ ಮಧ್ಯ ಗತ ನನ್ನ—ಹೃತ್ಪದ್ಮದಲ್ಲಿ ಮನೋಹರವಾದ ದಿವ್ಯದೇವಮಯ ಪೀಠದಲ್ಲಿ ವೈಕುಂಠದಲ್ಲಿ ಮೋದಿಸುತ್ತಿರುವಂತೆ ಪರಿಶೋಭಿಸುತ್ತಾ ಶ್ರೀಮನ್ನಾರಾಯಣನು ವಿದ್ಯಮಾನನಾಗಿದ್ದಾನೆ"—ಎಂದು **ಸತ್ತತ್ತ್ವರತ್ನಮಾಲಾ ಗ್ರಂಥ ದಲ್ಲಿ** ಉಕ್ತವಾಗಿದೆ. ಇಂತಹ ಸುಷುಮ್ನಾನಾಡೀ ಮಧ್ಯಗತ ಹೃತ್ಕಮಲದ ಮೂಲದಲ್ಲಿ ನಾರಾಯಣನಿದ್ದಾನೆ, ಆ ನಾರಾಯಣನೇ ಮೂಲೇಶನು. ಆ ಮೂಲೇಶನ ಚರಣಾರವಿಂದಗಳ ಕೆಳಗೆ ಮುಖ್ಯಪ್ರಾಣನು ಕೈಜೋಡಿಸಿ ಉಪಾಸಿಸುತ್ತಿದ್ದಾನೆ" ಎಂದು **ಉಪಾಸನಾ ಗ್ರಂಥದಲ್ಲಿ** ಹೇಳಲಾಗಿದೆ. **ಏಕಾದಶ ಭಾಗವತ ತಾತ್ಪರ್ಯದಲ್ಲಿ** —"ಇದೇ ಕ್ರಮಯೋಗದಿಂದಲೇ ಪ್ರಾಣನನ್ನೂ ಮತ್ತು ಅವನಿಂದ ಆರಾಧಿತ ಚರಣಾಬ್ಜ ಶ್ರೀಹರಿಯನ್ನೂ ಸಾಕ್ಷಾತ್ಕರಿಸಿಕೊಂಡ ನಂತರದಲ್ಲಿಯೇ ಮುಕ್ತಿ ಪ್ರಾಪ್ತಿಯೇ ಹೊರತು ಅನ್ಯಥಾ ಗತಿ ಇಲ್ಲ"— ಎಂದು ಉಕ್ತವಾಗಿದೆ. "ಹೀಗೆ ತಿಳಿದು ಉಪಾಸನೆ ಮಾಡು ವವನು ಖಂಡಿತವಾಗಿಯೂ ಸಂಸಾರದಿಂದ ಮುಕ್ತನಾಗುವನು"—ಎಂದು **ಛಾಂದೋಗ್ಯ ಭಾಷ್ಯದಲ್ಲಿ** ನಿರೂಪಿತವಾಗಿದೆ. ॥೧೯॥

(೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ–

ಈ ಬ್ರಹ್ಮನಾಡಿ ಮಧ್ಯ ಹೃತ್ಪದ್ಮಸ್ಥ ನಾರಾಯಣನ ಪಾದಶ್ರಿತ ಪ್ರಾಣದೇವರ ಚರಣದಲ್ಲಿ ಜೀವ ಆಶ್ರಯಿಸಿರುವನೆಂಬ ಚಿಂತನೆ ತಿಳಿಸುತ್ತಾರೆ– ಮಧ್ಯ ಎಂದು. ಮಧ್ಯದಲ್ಲಿರುವ ಸುಷುಮ್ನಾನಾಡೀ ಮಧ್ಯ ಹೃದಯ ಪದ್ಮದ ಮೂಲದಲ್ಲಿ ಮೂಲರೂಪ ನಾರಾಯಣನಿರುವನು. ಆತನ ಪಾದಾಶ್ರಿತ ಪ್ರಾದೇವರ ಚರಣದ ಕೆಳಗೆ ಜೀವನು ಲಿಂಗಶರೀರ ಅನಿರುದ್ಧ ಶರೀರ ಸಹಿತ ನಾಗಿ ಆಶ್ರೈಸಿರುವನು. ಕರ್ಪದಿ ಎಂಬ ರುದ್ರದೇವರೇ ಮೊದಲಾದದೇವತೆ ಗಳು ಈ ಜೀವನನ್ನು ಕಾಯುವರು ಎಂದು ತಿಳಿಯಬೇಕೆಂದರ್ಥ.

ಪ್ರಮಾಣ—

**ಅಂಗುಷ್ಠಪರಿಮಾಣೇತಃ ಮೂಲೇಶಾಖ್ಯೋऽಸ್ತಿವೈ ಹರಿಃ |**
**ಮುಖ್ಯಪ್ರಾಣೋऽಂಜಲಿಂ ಬಧ್ವಾ ಮೂಲೇಶಾಂಘ್ರಿಮುಪಾಶ್ರಿತಃ ||**
**ಮೂಲೇಶಸ್ಯಾಭಿ ಮುಖ್ಯೇನ ವರ್ತತೇ ಜೀವಸಂಯುತಃ ||**
ಇತ್ಯಾದಿ **ಅಧ್ಯಾತ್ಮಮಾಲಾರ್ಥ**ವು ನಿರೂಪಿಸಲ್ಪಟ್ಟಿತು. ||೧೯||

# ಸರ್ವವ್ಯಾಖ್ಯಾನಸಾರಸಂಗ್ರಹ

ಬ್ರಹ್ಮನಾಡೀಗತ ಅಗ್ನಿಮಂಡಲಸ್ಥನಾದ ಶ್ರೀ ಸಂಕರ್ಷಣನು ಪರಮ ನೀಚನಾದ ಕಲಿಸ್ವರೂಪೀ ಪಾಪಪುರುಷನನ್ನು ಅಗ್ನಿವಾಚ್ಯನಾಗಿದ್ದು, ಅಗ್ನೀ ಮಂತ್ರದಿಂದ ದಹಿಸಿ, ಶರೀರದ ಮಾಲಿನ್ಯವನ್ನು ಪರಿಹರಿಸಿ, ಶುದ್ಧಿ ಗೊಳಿಸುವನು–ಎಂದು ಹಿಂದಿನ ಪದ್ಯದಲ್ಲಿ ತಿಳಿಸಿ, ಈಗ ಹೃತ್ಪದ್ಮದ ಕರ್ಣಿಕಾಮೂಲದಲ್ಲಿ ಮೂಲೇಶನ ಪಾದಾಶ್ರಿತರಾಗಿರುವ ಶ್ರೀಮುಖ ಪ್ರಾಣರ ಪಾದಾವಲಂಬಿಯಾಗಿ ಇರುವ ಜೀವನ ವಿಚಾರ ತಿಳಿಸುತ್ತಾರೆ— **ಮಧ್ಯನಾಡಿಯು**–ಎಂಬ ಪ್ರಸಕ್ತ ೧೯ ನೆಯ ಪದ್ಯದಿಂದ.

೧. ಸುಷುಮ್ನಾ ನಾಡಿಯು ಪಂಚಪ್ರಭೇದವುಳ್ಳದ್ದು. ಈ ಐದು ನಾಡಿಗಳ ಪೈಕಿ ಅತ್ಯಂತ ಸೂಕ್ಷ್ಮವಾದ ಸುಷುಮ್ನಾನಾಡಿಯ ಮಧ್ಯದಲ್ಲಿರ ತಕ್ಕ ನಾಡಿಗೆ **ಮಧ್ಯನಾಡೀ** ಎಂದು ಹೆಸರು. ಈ ಮಧ್ಯನಾಡಿಯನ್ನೇ **ಬ್ರಹ್ಮನಾಡೀ** ಎಂತಲೂ ಕರೆಯುವರು.

೨. ಇಂತಹ ಬ್ರಹ್ಮನಾಡಿಯ ಮಧ್ಯದಲ್ಲಿ (ಕೇಂದ್ರದಲ್ಲಿ) **ಹೃತ್ಕಮಲ** ವಿದೆ. ಇದು ಹೃದಯಾಕಾಶದಲ್ಲಿ (ಬ್ರಹ್ಮನಾಡಿಯ ಕೇಂದ್ರ-ದಹರಾಕಾಶ) ಅಷ್ಟದಳಗಳುಳ್ಳ ಕದುಲವು. ಇದರ ಎಂಟು ದಳಗಳಲ್ಲಿ ಬಿಂಬರೂಪೀ ಶ್ರೀ ಪರಮಾತ್ಮನು ಸರ್ವಾಭರಣಭೂಷಿತನಾಗಿ, ಅಷ್ಟಬಾಹುಗಳಿಂದ ಯುಕ್ತನಾಗಿ ಅಷ್ಟಾಯುಧಗಳನ್ನು ಧರಿಸಿ, ಹೃತ್ಪದ್ಮದ ಎಂಟು ದಳಗಳಲ್ಲಿ ವಲಯಾಕಾರ ನಾಗಿ ಸಂಚರಿಸುತ್ತಿರುವನು. ಅವನಿಗೆ **ಮೂಲೇಶ**ನೆಂದು ನಾಮ. ಮೂಲೇ ಶನು ಹೃತ್ಕಮಲದ ಕರ್ಣಿಕಾಬುಡದಲ್ಲಿ **(ಹೃತ್ಪದ್ಮ ಮೂಲದಿ)** ವಿದ್ಯಮಾನ ನಾಗಿದ್ದಾನೆ, ಬಿಂಬರೂಪಿಯಾದ ಈ ಮೂಲೇಶನಾಮಕ ಶ್ರೀ ಪರಮಾತ್ಮ ನನ್ನೇ ಶ್ರೀ ದಾಸರಾಯರು **ಮೂಲಪತಿ** ಎಂದಿದ್ದಾರೆ.

**ಪ್ರಮಾಣ –**

**"(ಮಧ್ಯೇ ಸುಷುಮ್ನಾ) ತಸ್ಯಾಂ ವಿಷ್ಣುಃ ಮೇ ಹೃದಯಾಂಭೋಜೇ। ಸುಷುಮ್ನಾನಾಡಿಮಧ್ಯಗೇ ದಿವ್ಯ ದೇವಮಯೀ ಪೀಠೇ ವೈಕುಂಠೇ ಇವ ಮೋದತೇ ॥"**

**—ಇತಿ ಸತ್ತತ್ತ್ವರತ್ನಮಾಲಾ ವಾಕ್ಯ**

ಹೃತ್ಪದ್ಮದ ಕರ್ಣಿಕಾಮೂಲವು ಮೂಲಪತಿಯ ನಿವಾಸಸ್ಥಾನವು. ಇದು ಮನೋಹರವಾದ ದಿವ್ಯ ದೇವಮಯ ಪೀಠದಂತಿದೆ. ಅಲ್ಲಿ ಮೂಲೇಶ ನಾಮಕ ಶ್ರೀವಿಷ್ಣುವು ಶ್ರೀಮನ್ನಾರಾಯಣರೂಪದಿಂದ ಮುಕ್ತಿಧಾಮವಾದ ವೈಕುಂಠದಲ್ಲಿ ಹೇಗೋ ಹಾಗೆ ಆನಂದಮಯನಾಗಿ ವಿಹರಿಸುವನು. ಈ ತತ್ತ್ವವು **ಸತ್ತತ್ತ್ವರತ್ನಮಾಲಾಗ್ರಂಥದಲ್ಲಿ** ಉಕ್ತವಾಗಿದೆ.

೩. ಅಂತಹ ಮೂಲೇಶನ ಪಾದಪದ್ಮಗಳಲ್ಲಿ **ಶ್ರೀ ಮುಖ್ಯಪ್ರಾಣ ದೇವರು** ಆಶ್ರಯ ಹೊಂದಿ ವಿದ್ಯಮಾನರಾಗಿದ್ದಾರೆ. ಮೂಲೇಶನ ಉಭಯ ಪಾದಗಳ ಉಂಗುಷ್ಟಗಳ ಮಧ್ಯಪ್ರದೇಶದಲ್ಲಿ ಮುಖ್ಯಪ್ರಾಣರು, ಬಿಂಬನಿಗೆ ಅಭಿಮುಖವಾಗಿ ಕೈ ಜೋಡಿಸಿ ನಿಂತಿದ್ದಾರೆ.

**ಪ್ರಮಾಣಗಳು—**

**(೧) "ಮೂಲೇಶ ಚರಣಾಧಃ ಶ್ರೀ ಮುಖ್ಯಪ್ರಾಣಃ ಕೃತಾಂಜಲಿಃ ||" —ಇತಿ ಉಪಾಸನಾಗ್ರಂಥೇ**

**(೨) "ವಿಷ್ಣುರ್ಮೂಲೇಶ ಇತಿ ತು ವಿಜ್ಞಾನಾತ್ಮೇತಿ ತಂ ವಿದುಃ |**
**ತಸ್ಮಾದಗ್ರೇಶ ಮೂಲೇಶ ಪ್ರಾದೇಶ ಇತಿನಾಮಕಾಃ ||**
**ಮೂರ್ತಯಃ ಸಂತಿ ಹೃತ್ಪದ್ಮೇತ್ರಯ ಆನಂದರೂಪಿಣಃ ||**
**ವರ್ತತೇ ಮೂಲೇಶಪಾದ ಸನ್ನಿಧೌ ಪ್ರಾಣನಾಮಕಃ |**
**ಬದ್ಧಾಂಜಲಿಃ ಸ್ವರೂಪಾಣಾಂ ತ್ರಯಾಣಾಂ ಪರತಃ ಸದಾ||**
**—ಇತಿ ಮುಕ್ತಿತತ್ತ್ವಗ್ರಂಥೇ**

೪. ಶ್ರೀಹರಿಯು ಮುಖ್ಯಪ್ರಾಣದೇವರ ಪಾದಪದ್ಮಗಳಲ್ಲಿ ಅವರ ಪಾದಾಶ್ರಿತನಾಗಿ ಜೀವನಿರುವನು. ಅನಾದಿಲಿಂಗದೇಹ ಮತ್ತು ಅನಿರುದ್ಧ ದೇಹ ಸಹಿತನಾಗಿ ಜೀವನು ಮುಖ್ಯಪ್ರಾಣರಿಗೆ ಅಭಿಮುಖನಾಗಿರುವನು. ಈ ಕಾರಣದಿಂದಲೇ ಜೀವನಿಗೆ ಬಿಂಬದರ್ಶನವು **ವಾಯುಗೋಳಕದ ದ್ವಾರವೇ** ಆಗುವುದು. ಈ ಕಾರಣದಿಂದಲೇ ಜೀವೋತ್ತಮರಾದ ಶ್ರೀ ವಾಯುದೇವರು ಸಕಲ ಮುಕ್ತಿಯೋಗ್ಯ ಜೀವರ ಪಾಲಿಗೆ ಪರಮತಾರಕರು. ತ್ರಿವಿಧ ಜೀವರೂ ಈ ರೀತಿ ಇದ್ದಾರೆ. ರಜೋ ಹಾಗೂ ತಮೋ ಜೀವರಿಗೆ ಅವರವರ ಯೋಗ್ಯತಾನುಸಾರ ಶ್ರೀ ವಾಯುದೇವರು ಮೂಲಪತಿಯ ಆದೇಶದಂತೆ ವ್ಯಾಪಾರಗಳನ್ನು ಮಾಡಿಸುವರು.

ಪ್ರಮಾಣ-

(೧) "ಪೂರ್ವಾಭಿಮುಖ ತಶ್ಚೈವ ವರ್ತತೇ ಜೀವ ಏವತು ।
ಮುಖ್ಯಪ್ರಾಣ ಪದಾಂಭೋಜಸನ್ನಿಧಾ ತದ್ವದೇವಹಿ ॥"
—ಇತಿ ಮುಕ್ತಿತತ್ತ್ವಗ್ರಂಥೇ

(೨) "ಏವಂ ವಿದಿತ್ವಾ ಸಂಸಾರಾತ್ ಮುಕ್ತಿಮೇಶ್ಯತ್ಯಸಂಶಯಃ ।
ಬಿಂಬರೂಪಂ ಹರಿಂ ದೃಷ್ಟ್ವಾ ಹರಿಪಾದಾಬ್ಜಸಂಸ್ಥಿತಂ ॥
ಸ್ವಂಚ ಪಶ್ಯತ್ಯಪರೋಕ್ಷ್ಯಾತ್ ನಿವೃತ್ತಾಶೇಷಬಂಧನಃ ॥"
....ಇತಿ ಸತ್ತತ್ತ್ವರತ್ನಮಾಲಾಯಾಂ

(೩) "ಅಂಗುಷ್ಟ ಪರಿಮಾಣೇಶಃ ಮೂಲೇಶಾಖ್ಯೋಽಸ್ತ್ವಿನ್ವೈ ಹರಿಃ ।
ಮುಖ್ಯಪ್ರಾಣೋಽಂಜಲಿಂ ಬಧ್ವಾ ಮೂಲೇಶಾಂಘ್ರಿ
ಮುಪಾಶ್ರಿತೌ ॥
ಮೂಲೇಶ ತಸ್ಯಾಭಿಮುಖ್ಯೇನ ವರ್ತತೇ ಜೀವಸಂಯುತಃ ॥"
—ಇತಿ ಅಧ್ಯಾತ್ಮಮಾಲಾಯಾಂ

೩. ಹೃತ್ಕಮಲದ ಎಂಟು ದಳಗಳಲ್ಲಿ ಎಂಟು ದಿಕ್ಕುಗಳಲ್ಲಿ ರುದ್ರಾದಿ (ಕರ್ಪದಿ) ಅಷ್ಟದಿಕ್ಪಾಲಕರು ಶ್ರೀ ಮುಖ್ಯಪ್ರಾಣದಿಂದ ಸ್ತುತ್ಯಮಾನನಾದ ಮೂಲೇಶನನ್ನು ಸೇವಿಸುತ್ತಾ ಇದ್ದಾರೆ. ಶ್ರೀ ಹರಿವಾಯುಗಳ ಸೇವಾಕಾಂಕ್ಷಿಗಳಾಗಿ ದಳಸ್ಥರಾಗಿದ್ದು, ಆಯಾಯಾ ದಳಗಳಲ್ಲಿ ಬಿಂಬನು ಸಂಚರಿಸುತ್ತಿರುವಾಗ, ಅವನನ್ನು ಸಂಸೇವಿಸುತ್ತಾ, ಜೀವನಿಗೆ ರಕ್ಷಕರಾಗಿದ್ದಾರೆ ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾರ್ಥವು. ॥೧೯॥

## ಪದ್ಯ (೨೦)

**ಮೂಲ**

**ನಾಳಮಧ್ಯದಲ್ಲಿಪ್ಪ ಹೃತ್ಕೀ ।**
**ಲಾಲಜದೊಳಿಪ್ಪಷ್ಟದಳದಿ ಕು ।**
**ಲಾಲ ಚಕ್ರದ ತೆರದಿ ಚರಿಸುವ ಹಂಸನಾಮಕನು ॥**
**ಕಾಲಕಾಲಗಳಲ್ಲಿ ಎಣ್ದೆಸೆ ।**
**ಪಾಲಕರ ಕೈಸೇವೆಗೊಳುತ ಕೃ ।**
**ಪಾಳು ಅವರವರಭಿಲಾಷೆಗಳ ಪೂರೈಸಿಕೊಡುತಿಪ್ಪ ॥ ॥೨೦॥**

**ಅವತರಣಿಕೆ**

ಬ್ರಹ್ಮನಾಡಿಯ ಮಧ್ಯದಲ್ಲಿ ಇರುವ ಹೃತ್ಕಮಲದ ಎಂಟು ದಳಗಳಲ್ಲಿ ಶ್ರೀ ಪರಮಾತ್ಮನ ಸಂಚಾರಕ್ರಮವನ್ನು ತಿಳಿಸುತ್ತಾರೆ–**ನಾಳಮಧ್ಯದಲ್ಲಿಪ್ಪ**– ಎಂಬ ಪ್ರಸಕ್ತ ಸಂಧಿಗತ ೨೦ ನೆಯ ಈ ಪದ್ಯದಿಂದ.

ಬ್ರಹ್ಮನಾಡಿಯ ನಾಳ ಮಧ್ಯದಲ್ಲಿ ದಹರಾಕಾಶದಲ್ಲಿ ಹೃತ್ಕಮಲವಿದೆ. ಇದು ಅಷ್ಟದಳಾತ್ಮಕವಾದದ್ದು. ಈ ಎಂಟು ದಳಗಳಲ್ಲಿ **ಹಂಸನಾಮಕ** ಬಿಂಬರೂಪೀ ಶ್ರೀ ಮೂಲೇಶನು ವಲಯಾಕಾರದಲ್ಲಿ ಸಂಚರಿಸುತ್ತಿರುವನು. ಕುಂಬಾರನ ಚಕ್ರ ತಿರುಗುವಂತೆ ಶ್ರೀ ಪರಮಾತ್ಮನ ಸಂಚಾರ ಈ ಅಷ್ಟದಳ ಗಳಲ್ಲಿ. ಆಯಾಯಾ ಕಾಲಕ್ಕೆ ಆಯಾಯಾ ದಳಗಳಿಗೆ ಹಂಸನು ಬಂದಾಗ, ಆಯಾಯಾ ದಿಕ್ಕಿನಲ್ಲಿರುವ ದಳಸ್ಥಿತ ಅಷ್ಟದಿಕ್ಪಾಲಕರಿಂದ ಸಂಸೇವ್ಯಮಾನ ನಾಗಿದ್ದು, ಅವರವರ ಗತಿಯ ನೀಡಲೋಸುಗ ಜೀವರನ್ನು ಸೃಷ್ಟಿಗೆ ತಂದಿ ರುವ ಶ್ರೀ ಪರಮಾತ್ಮನು ಆಯಾಯಾ ದಳ, ಅವುಗಳಸ್ಥಾನ, ದಳಗತ

ದಿಕ್ಪಾಲಕರ ಅಧಿಷ್ಠಾನಗತನಾಗಿ, ಜೀವರ ಅಭಿಲಾಷೆಗಳನ್ನು ಪೂರ್ಣ ಮಾಡುವನು-ಎಂದು ನಿರೂಪಿಸುತ್ತಾರೆ. ॥೨೦॥

**ಪ್ರತಿಪದಾರ್ಥ–**

**ನಾಳ**=ಸೂಕ್ಷ್ಮವಾದ ಸುಷುಮ್ನಾನಾಡಿಯ, **ಮಧ್ಯದಲಿ**=ಮಧ್ಯ ಪ್ರದೇಶದಲ್ಲಿ (ಆದಿ ಮತ್ತು ಅಂತ್ಯ ಸ್ಥಾನಗಳಿಗೆ ಸಮಾನವಾಗಿರುವ ಕೇಂದ್ರ ದಲ್ಲಿ) **ಇಪ್ಪ**=ಹೊಂದಿಕೊಂಡಿರುವ **ಹೃತ್ಕೀಲಾಲಜದೊಳು**=ಹೃತ್ಪದ್ಮ ದಲ್ಲಿ (ಹೃತ್-ಹೃದಯ, ಕ್ರೀಲಾಲಜ-ಕಮಲ, ಕೀಲಾಲ-ನೀರು, ಜ-ಅದರಲ್ಲಿ ಉತ್ಪನ್ನವಾದದ್ದು-ಕೀಲಾಲಜ, ಅಂದರೆ, ಕಮಲವೆಂದರ್ಥ, ಅಂದರೆ ಹೃತ್ಕಮಲ ಎಂಬ ತಾತ್ಪರ್ಯ) **ಇಪ್ಪ**=ಇರುವ, **ಅಷ್ಟದಳ ದಲಿ**=ಎಂಟು ದಳಗಳಲ್ಲಿ (ಹೃತ್ಪದ್ಮವು ಅಷ್ಟದಳಯುಕ್ತವಾದದ್ದು), **ಹಂಸ ನಾಮಕನು**=ಹಂಸ ಎಂಬ ಹೆಸರಿನ ಶ್ರೀಮನ್ನಾರಾಯಣನು, **ಕುಲಾಲ ಚಕ್ರದ ತೆರದಿ**=ಕುಂಬಾರನ ಚಕ್ರವು ತಿರುಗುತ್ತಿರುವೋಪಾದಿಯಲ್ಲಿ, **ಚರಿಸುವ**=ವಲಯಾಕಾರದಲ್ಲಿ ಸಂಚರಿಸುತ್ತಿರುವನು. **ಕಾಲಕಾಲಗಳಲ್ಲಿ**= ಯಾವ ಯಾವ ಕಾಲಗಳಲ್ಲಿ ಯಾವ ಯಾವ ದಳಗಳಲ್ಲಿ ಸಂಚಾರಮಾಡ ಬೇಕೆಂದು ಶ್ರೀ ಪರಮಾತ್ಮನ ಇಚ್ಛೆಯಾಗುವುದೋ, ಆಯಾಯಾ ಕಾಲ ಗಳಲ್ಲಿ, **ಯೆಣ್ದೆಸೆ ಪಾಲಕರ**=ಅಷ್ಟದಳಗತ ಅಷ್ಟದಿಕ್ಪಾಲಕರಿಂದ (ಎಂಟು+ ದೆಸೆ=ಎಣ್ದೆಸೆ, ಯಣ್-ಎಂಟು, ದೆಸೆ-ದಿಕ್ಕು. ಅಂದರೆ ಎಂಟು ದಿಕ್ಕು ಗಳು ಎಂತ ಅರ್ಥ) **ಕೈಸೇವೆಗೊಳುತ**=ಕೈಯಿಂದ ಸೇವಾ ಸ್ವೀಕಾರ ಮಾಡುತ್ತಾ, **ಕೃಪಾಳು**=ಜೀವರ ಉದ್ಧಾರಾರ್ಥವಾಗಿ ಸರ್ವವ್ಯಾಪಾರ ಗಳನ್ನೂ ಬಿಂಬಕ್ರಿಯಾದ್ವಾರಾ ಎಸಗುತ್ತಿರುವ ಕರುಣಾಸಮುದ್ರನಾದ ಶ್ರೀ ಪರಮಾತ್ಮನು **ಅವರವರಭಿಲಾಷೆಗಳ**=ಆಯಾಯಾ ಜೀವರ ಅಭಿಲಾಷೆ ಗಳನ್ನು **ಪೂರೈಸಿಕೊಡುತ್ತಿಪ್ಪ**=ಅವರವರ ಪೂರ್ವಕರ್ಮಾನುಸಾರವಾಗಿ ಸಲಿಸುತ್ತಿರುವನು. ॥೨೦॥

# ವ್ಯಾಖ್ಯಾನಗಳು

## (೪) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಮೂಲೇಶನ ವ್ಯಾಪಾರ ಹೇಳತಾರೆ.

ಸುಷುಮ್ನಾ ನಾಡೀ ಒಳಗೆ ಆದ್ಯಂತದವರಿಗೂ ಇರುವ ದ್ವಾರದ, ಈ ನಾಳದ ಒಳಗೆ ಹೃದಯಕ್ಕೆ ಸರಿಯಾದ ಮಧ್ಯಭಾಗದಲ್ಲಿ ಇರುವಂಥಾ ಹೃತ್ಕಮಲದಲ್ಲಿ ಇರತಕ್ಕ ಮೂಲೇಶ, ಉಪನಾಮ ಹಂಸ ಎಂತ ನಾಮ ಯುಕ್ತನಾಗಿ ಹೃದಯಕಮಲದ ಎಂಟು ದಳಗಳಲ್ಲಿ ಕುಂಬಾರನ ಚಕ್ರ ತಿರುಗುವೋಪಾದಿಯಲ್ಲಿ, ಮೂಲೇಶ ತನ್ನ ಪಾದಮೂಲಗತ ಪ್ರಾಣ ದೇವರು, ಪ್ರಾಣದೇವರ ಪಾದಮೂಲಗತ ಅನಿರುದ್ಧ ಶರೀರ ವಿಶಿಷ್ಟನಾದ ಜೀವ, ಇಷ್ಟು ಮಂದಿಗಳ ಸಹಿತನಾಗಿ ತಿರುಗುತ್ತಾ, ದಾವ ದಾವ ಕಾಲ ಗಳಲ್ಲಿ ದಾವ ದಾವ ದಳದಲ್ಲಿ ಸಂಚಾರ ಮಾಡತಾನೋ ಆಯಾ ಕಾಲ ಗಳಲ್ಲಿ, ಆಯಾ ದಳಗತ ಅಷ್ಟದಿಕ್ಪಾಲಕರ ಸೇವೆ ಸ್ವೀಕಾರ ಮಾಡುತ್ತಾ ದಯಾಳುವಾದ ಹಂಸನಾಮಕ ಮೂಲೇಶನು ಆಯಾ ಪ್ರಾಣಿಗಳ ಅಭಿಲಾಷೆ ಎಂದರೆ, ದಾವ ದಾವ ದಳಸಂಚಾರದಿಂದ ದಾವ ದಾವ ಅಭಿಲಾಷೆ ಜೀವರಿಗೆ ಉಂಟಾಗಬೇಕೋ ಅಂಥ ದಳಸಂಚಾರದಿಂದ, ಅದನ್ನನುಸರಿಸಿ ಅಭಿಲಾಷೆ ಉತ್ಪತ್ತಿ ಮಾಡಿ ಆ ಆ ಅಭಿಲಾಷೆಯನ್ನು ಪೂರ್ವಕರ್ಮಾನುಸಾರವಾಗಿ, ತನ್ನ ಸಂಕಲ್ಪಾನುಸಾರ ದೇಹಗತ ತತ್ತ್ವಾಭಿಮಾನಿಗಳ ದ್ವಾರ ಪೂರ್ಣಮಾಡಿ, ಅವರಿಗೂ ಹಾಂಗೆ ದೇಹಗತನಾದ ಜೀವಗೂ, ಅವರವರ ಯೋಗ್ಯತಾ ತಾರತಮ್ಯಾನುಸಾರ ಕೊಡತಾ ಬಿಂಬರೂಪಿ ಪರಮಾತ್ಮ ದೇಹದಲ್ಲಿ ಇರೋವ ನಾಗಿದ್ದಾನೆ. ಮೂಲೇಶ ಅಭಿಲಾಷೆ ಉಂಟುಮಾಡತಕ್ಕವ, ಅಗ್ರೇಶನಾಮಕ ಬಿಂಬ ಅದರನ್ನ ಪೂರ್ಣಮಾಡಿ ವಿಭಾಗಮಾಡಿ ಕೊಡತಕ್ಕವನೆಂದು ತಾತ್ಪರ್ಯ. ॥೨೦॥

(೧) ಭಾವಪ್ರಕಾಶಿಕೆ ವ್ಯಾಖ್ಯಾನ–

ಪೂರ್ವಪದ್ಯದಲ್ಲಿ ಹೃದಯಕಮಲದ ಎಂಟು ದಳಗಳಲ್ಲಿ ದಿಕ್ಪಾಲಕರು ಇರುವರೆಂದು ಹೇಳಿದರು. ಮುಂದಿನ ಐದು ಪದ್ಯಗಳಿಂದ ಹಂಸನಾಮಕ ಪರಮಾತ್ಮನು ಹೃತ್ಕಮಲದ ಎಂಟು ದಳಗಳಲ್ಲಿ ಸುತ್ತುತ್ತಾ, ಜೀವರ ಪುಣ್ಯಪಾಪಾದಿ ಕರ್ಮಗಳ ಪ್ರೇರಣೆ ಮಾಡುವನೆಂದು ಹೇಳುತ್ತಾರೆ. ಸುಷುಮ್ನಾನಾಡಿಯ ಮಧ್ಯಪ್ರದೇಶದಲ್ಲಿ ಹೃದಯಕಮಲದ ಎಂಟು ದಳಗಳಲ್ಲಿ ಕುಂಬಾರನ ಚಕ್ರವು ತಿರುಗುವಂತೆ ಹಂಸನಾಮಕ ಪರಮಾತ್ಮನು ಸುತ್ತುತ್ತಾ, ಅಷ್ಟದಿಕ್ಪಾಲಕರಿಂದ ಸೇವೆಯನ್ನು ಸ್ವೀಕರಿಸಿಕೊಂಡು, ಕರುಣಾಳುವಾದ ಶ್ರೀಹರಿಯು ಅವರವರ ಮನೋಭೀಷ್ಟಗಳನ್ನು ಪೂರೈಸುತ್ತಿರುವನು. ॥೨೦॥

(೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ

"ನಾಳಮಧ್ಯೇತಿ" ॥ ಹೃತ್ಕೀಲಾಲ–ಹೃತ್ಕಮಲ. ಕುಲಾಲ–ಕುಂಬಾರ. ಯೆಣ್ದೆಸೆ– ೮ ದಿಕ್ಕುಗಳು. ॥೨೦॥

(೪) ವ್ಯಾಸದಾಸ ಸಿದ್ಧಾಂತ ಕೌಮುದೀ–

"ನಾಲ"—ಇತಿ ॥ ಕೀಲಾಲಜಮ್ — ಪದ್ಮಮ್ ॥ ಎಣ್ = ಎಂಟು.

ಶ್ರೀಮನ್ನಾರಾಯಣನು ಹೃತ್ಕಮಲ ನಿವಾಸಿಯಾಗಿ ಹಂಸರೂಪದಿಂದ ಕಮಲದ ಎಂಟು ದಳಗಳಲ್ಲಿ ಸಂಚರಿಸುತ್ತಿರುವನು. ಆಯಾಯಾ ದಳಗತ ಅಷ್ಟದಿಕ್ಪಾಲಕರ ಸೇವೆಯನ್ನು ಕೈಗೊಳ್ಳುತ್ತಾ ಅವರನ್ನು ಅನುಗ್ರಹಿಸುತ್ತಿರುವನು. ಕೀಲಾಲಜವೆಂದರೆ, ಪದ್ಮವೆಂದರ್ಥ. ಎಣ್ದೆಸೆಗೆ ಎಂದರೆ— ಎಂಟು ದಿಕ್ಕುಗಳು" ಎಂದರ್ಥ. ॥೨೦॥

## (ಖ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಮೇಲೆ ಹೇಳಲ್ಪಟ್ಟ ಹೃತ್ಕಮಲದಮಧ್ಯಸ್ಥ ನಾರಾಯಣನು ಹಂಸ ನಾಮಕನಾಗಿ ಆ ಕಮಲದ ಸುತ್ತಲೂ ಪ್ರಹರಿ ತಿರುಗಿ ಮಾಡಿಸುವ ವ್ಯಾಪಾರಗಳನ್ನು ನಾಳ ಮಧ್ಯ ಎಂಬ ಪದ್ಯ ಮೊದಲು, ಹೃದಯದೊಳಗೆ ಎಂಬುವ ಪದ್ಯದ ತನಕ ಐದು ಪದ್ಯದಿಂದ ತಿಳಿಸುತ್ತಾರೆ. ನಾಳವೆಂಬುವ ಸುಷುಮ್ನಾನಾಡಿಯ ಮಧ್ಯದಲ್ಲಿರುವ, ಹತ್ಕೀಲಾಲಜವೆಂಬ ಅಷ್ಟದಳ ಕಮಲದಲ್ಲಿ ಹಂಸನಾಮಕದೇವರು, ಕುಲಾಲಚಕ್ರವೆಂಬ ಕುಂಬಾರನ ಚಕ್ರದಂತೆ ಎಂಟು ದಳದಲ್ಲೂ ಕಾಲಕಾಲದಲ್ಲಿ ಕ್ರಮವಾಗಿ ಸುತ್ತುತ್ತಾ, ಆಯಾಯ ದಿಕ್ಪಾಲಕರ ಸೇವೆಯನ್ನು ಸ್ವೀಕರಿಸಿ, ಅವರ ಇಷ್ಟಾರ್ಥಗಳನ್ನು ದಯದಿಂದ ಕೊಡುತ್ತಾ ಪೂರ್ತಿಸುವನು ॥೨೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಬ್ರಹ್ಮನಾಡಿಯ ಮಧ್ಯದಲ್ಲಿ ಹೃತ್ಪದ್ಮದ ಕರ್ಣಿಕಾಮೂಲದಲ್ಲಿ ಇರುವ ಮೂಲೇಶನ ವಿಚಾರ, ಅವನ ಪಾದಾಶ್ರಿತರಾಗಿ ಅಂಜಲೀಬದ್ಧರಾಗಿ ನಿಂತಿರುವ ಶ್ರೀಮುಖ್ಯಪ್ರಾಣದೇವರು, ಅವರ ಪಾದಾವಲಂಬಿಯಾಗಿ ಲಿಂಗಾನಿರುದ್ಧ ಶರೀರ ಸಹಿತನಾದ ಜೀವನ ವಿಚಾರವನ್ನು ಹಿಂದಿನ ಪದ್ಯದಲ್ಲಿ ತಿಳಿಸಿ, ಹೃತ್ಕಮಲಗತ ಅಷ್ಟದಳಗಳಲ್ಲಿ ಸಂಚರಿಸುತ್ತಾ, ಆಯಾಯತಾದಳ ಸಂಸ್ಥಿತ ದಿಕ್ಪಾಲಕರಿಂದ ಸಂಸೇವ್ಯಮಾನನಾದ, ಹಂಸನಾಮಕ ಶ್ರೀ ಪರಮಾತ್ಮನ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ–ನಾಳಮಧ್ಯದಲಿಪ್ಪ ಎಂಬ ಪ್ರಸಕ್ತ ೨೦ನೆಯ ಪದ್ಯದಿಂದ.

೧. ಸುಷುಮ್ನಾನಾಡಿಯು ಅತ್ಯಂತ ಸೂಕ್ಷ್ಮನಾಡಿಯು, ಅತೀಂದ್ರಿಯ ವಾಗಿದ್ದು, ಕಾಂತಿಯುಕ್ತವಾಗಿರುವುದು. ಮೂಲಾಧಾರದಿಂದ ಹೊರಟು

ನೇರವಾಗಿ ಶರೀರದ ಮಧ್ಯದಲ್ಲಿ ಬ್ರಹ್ಮರಂಧ್ರವನ್ನು ಸೇರುವುದು, ಇದು ವಕ್ರವಿಲ್ಲದೆ ಸರಳವಾಗಿ ಅಂದರೆ, ನೇರವಾಗಿರುವುದರಿಂದ ಇದಕ್ಕೆ **ಋಜು ನಾಡಿ** ಎಂದೂ ಹೆಸರು. (ಋಜು ಶಬ್ದ ಬ್ರಹ್ಮವಾಚಕವು) ಇಂತಹ ಸುಷುಮ್ನಾನಾಡಿಯ ಮಧ್ಯಭಾಗವೇ ಬ್ರಹ್ಮನಾಡಿಯು. ಇದನ್ನು **ನಾಡಿ** ಎಂದಿದ್ದಾರೆ ಶ್ರೀದಾಸರಾಯರು, ಇಂತಹ ನಾಳದ ಮಧ್ಯದಲ್ಲಿ ಹೃತ್ಕಮಲ ವಿದೆ, ಕೀಲಾಲ-ಎಂದರೆ ನೀರು, ಜ-ಅಂದರೆ ನೀರಿನಲ್ಲಿ ಉತ್ಪನ್ನವಾದದ್ದು ಕಮಲ ಎಂದರ್ಥ. ಕೀಲಾಲಜ ಎಂದರೆ ಪದ್ಮ ಅಥವಾ ಕಮಲವು. ಹೃತ್ಕಮ ಲವನ್ನು **ಹೃತ್ಕೀಲಾಲಜ** ಎಂದಿದ್ದಾರೆ. ಇಂತಹ ಹೃತ್ಪದ್ಮವು ಎಂಟು ದಳಗಳುಳ್ಳದ್ದು. ಈ ಎಂಟು ದಳಗಳಿಗೂ ಎಂಟು ವರ್ಣಗಳಿವೆ.

೨. ಹೃತ್ಕೀಲಾಲಜದ ಅಷ್ಟದಳಗಳಲ್ಲಿ **ಹಂಸ** ನಾಮಕ ಪರಮಾತ್ಮನು ವಲಯಾಕಾರದಲ್ಲಿ ಸಂಚರಿಸುತ್ತಿರುವನು. ಬಿಂಬರೂಪೀ ಮೂಲೇಶನೇ ಹಂಸನಾಮಕನು. ಅಂತಹ ಹಂಸರೂಪೀ ಶ್ರೀಪರಮಾತ್ಮನು ಅಷ್ಟಾಯುಧಗ ಳನ್ನು ಧರಿಸಿ, ಅಷ್ಟಬಾಹುಗಳಿಂದ ಯುಕ್ತನಾಗಿ ಸರ್ವಾಭರಣಭೂಷಿತ ನಾಗಿ ದಳಗಳಲ್ಲಿ ಸಂಚರಿಸುವನು. ಶ್ರೀಪರಮಾತ್ಮನ ಸಂಚಾರಗತಿಯನ್ನು ಶ್ರೀದಾಸರಾಯರು ಮನೋಹರವಾದ ಉಪಮಾನದಿಂದ ತಿಳಿಸುತ್ತಾರೆ. ಕುಲಾಲ-ಎಂದರೆ ಕುಂಬಾರನು. ಗಡಿಗೆಗಳನ್ನು ಮಾಡುವ ಕುಂಬಾರನು ಗಡಿಗೆಗೆ ರೂಪರೇಷೆಗಳನ್ನು ಕೊಟ್ಟು ತಿದ್ದುವುದಕ್ಕಾಗಿ ಚಕ್ರವನ್ನು ಉಪ ಯೋಗಿಸುವನು. ಈ ಚಕ್ರಕ್ಕೆ **ಕುಲಾಲಚಕ್ರ**ವೆಂದು ಹೆಸರು, ಈ **ಉಪ**ಮಾನವು ಅತ್ಯಂತ ಸಮಂಜಸವಾಗಿದೆ. ಅದನ್ನು ಹೀಗೆ ವಿವರಿಸಬಹುದು.

(1) ಕುಂಬಾರನು ಗಡಿಗೆಗಳನ್ನು ಮಾಡುವ ಕರ್ತೃ (2) ಜೇಡಿ ಮಣ್ಣು ಮೂಲದ್ರವ್ಯ, ಇದಕ್ಕೆ ಉಪಾದಾನಕಾರಣವೆನ್ನುವರು,(3) ಬೆಂಕಿ, ನೀರು, ಗಾಳಿ ಮುಂತಾದವು ಸಹಕಾರಿ ಸಾಮುಗ್ರಿಗಳು. (4) ಗಡಿಗೆಯ ನಿರ್ಮಾಣಕ್ಕೆ ಕುಲಾಲಚಕ್ರ ಕೋಲು ಇವು ಉಪಯೋಗಸಾಮುಗ್ರಿಗಳು. ಕುಂಬಾರನು ನಿಮಿತ್ತಕರ್ತನು. ಅಂತೆಯೇ ಜಗತ್ಸೃಷ್ಟಿಗೆ ಮೂಲಕಾರಣ ನಾದ ಶ್ರೀಪರಮಾತ್ಮನು ಮೂಲಪ್ರಕೃತಿಯನ್ನು ಉಪಾದಾನಕಾರಣವನ್ನಾಗಿಸಿ

ಕೊಂಡು, ಈ ಜಗತ್ಸೃಷ್ಟಿ ಮಾಡುವನು. ಮೂಲಪ್ರಕೃತಿಗೆ ಶ್ರೀಲಕ್ಷ್ಮಿದೇವಿ ಅಭಿಮಾನಿಯು. ಹೀಗೆ ಪುರುಷನಾಮಕನಾದ ಶ್ರೀಹರಿಯು ಪ್ರಕೃತಿನಾಮಕಳಾದ ರಮಾದ್ವಾರಾ ಮೂಲಪ್ರಕೃತಿಯ ಸಹಜ ಧರ್ಮಗಳಾದ ತ್ರಿಗುಣಗಳ ವೈಷಮ್ಯದಿಂದ ಸೃಷ್ಟಿಯನ್ನು ಮಾಡುವನು. ಮಣ್ಣು ಮೂಲದ್ರವ್ಯ, ಅದನ್ನು ಹಾಗೆಯೇ ಉಪಯೋಗಿಸಿದರೆ ನೀರನ್ನು ತುಂಬಲು ಸಾಧ್ಯವಿಲ್ಲ. ಅದರಿಂದ ಗಡಿಗೆ ಸೃಷ್ಟಿಯಾಗಬೇಕು. ಆಗ ಆದರ ಸಾರ್ಥಕ್ಯ ಹಾಗೂ ಉಪಯೋಗ. ಅಂತೆಯೇ ಜಗಜ್ಜನ್ಮಾದಿಕಾರಣನಾದ ಶ್ರೀಪರಮಾತ್ಮನು ಮೂಲಪ್ರಕೃತಿಯನ್ನು ಉಪಾದಾನಮಾಡಿ ತನ್ಮೂಲಕ ಗುಣವೈಷಮ್ಯಕ್ರಮದಿಂದ ಜಗತ್ತನ್ನು ನಿರ್ಮಿಸುವನು. ಇದೇ ಸ್ಥೂಲರೂಪವಾದ ಬ್ರಹ್ಮಾಂಡವು. ಅದರ ಸೂಕ್ಷ್ಮರೂಪವೇ ಪಿಂಡಾಂಡವಾದ ಸ್ಥೂಲಶರೀರ. ಅನಾದಿ ಲಿಂಗ ದೇಹ ಮತ್ತು ಸೂಕ್ಷ್ಮವಾದ ಅನಿರುದ್ಧ ಶರೀರ ಇವುಗಳಿಂದ ಸಹಿತನಾದ ಜೀವನಿಗೆ ಇಂತಹ ಪಿಂಡಾಂಡರೂಪವಾದ ಸ್ಥೂಲಶರೀರವನ್ನು ಕೊಟ್ಟು, ತಾನು ಅವನಿಗೆ ಪರಮಾಪ್ತನಾಗಿದ್ದು, ನಿತ್ಯಾವಿಯೋಗಿ ಬಿಂಬನೆಂದೆನಿಸಿ, ಅವನ ದ್ವಾರಾ ಸಕಲ ವ್ಯಾಪಾರಗಳನ್ನು ನಡೆಯಿಸಿ ಕರ್ಮಕ್ಷಯಾನಂತರ ಲಿಂಗಭಂಗಗೈಸಿ, ಸ್ವರೂಪಸುಖವನ್ನೀಯುವನು.

೩. ಜೀವರ ಅನಾದಿಕರ್ಮಕ್ಕೆ ಅನುಸಾರವಾಗಿ. ಶ್ರೀಪರಮಾತ್ಮನ ನಿಯಮನದಂತೆ, ಜೀವರ ದ್ವಾರಾ ವ್ಯಾಪಾರಗಳು ನಡೆಯುತ್ತಿರುವುವು. ಈ ಕ್ರಿಯೆಗಳನ್ನು ಮಾನಸಿಕ, ದೈಹಿಕ ಹಾಗೂ ವಾಚನಿಕ ರೂಪದಲ್ಲಿ ಬಿಂಬನು ಮಾಡಿ ಮಾಡಿಸುತ್ತಿರುವನು. ಈ ಕ್ರಿಯೆಗಳೆಲ್ಲವೂ ಕಾಲಾಧೀನವಾದುವು, ಅಂದರೆ ಕಾಲಕ್ಕನುಗುಣವಾಗಿ ಕಾರ್ಯಗಳ ನಿರ್ವಹಣೆ ಹೀಗೆ ಕಾರಣ-ಕ್ರಿಯೆ-ಕಾಲ ಈ ತ್ರಿಸೂತ್ರಗಳ ಸಂಬಂಧ. ಶ್ರೀಪರಮಾತ್ಮನು, ಕಾಲಸ್ವರೂಪನು. ಕಾಲಾಂತರ್ಗತನಾಗಿ ಕಾಲನಿಯಾಮಕನೆನಿಸಿ, ಯಾವ ಯಾವ ಕಾಲಗಳಲ್ಲಿ ಯಾವಯಾವ ಕರ್ಮಗಳನ್ನು ಜೀವರ ದ್ವಾರಾಮಾಡಿಸಬೇಕೋ ಅಂದರೆ ಕಾಲಧರ್ಮಕ್ಕನುಗುಣವಾಗಿ ಕ್ರಿಯೆಗಳನ್ನು ನಿಯಮನ ಮಾಡುತ್ತಿರುವನು. ಯಾವ ಯಾವ ಕಾಲಗಳಲ್ಲಿ ಯಾವ ಯಾವ ಕರ್ಮಗಳು ನಡೆಯಬೇಕೋ, ಅದರಂತೆ ಸತ್ಯಸಂಕಲ್ಪನಾದ ಹಂಸನಾಮಕ ಬಿಂಬರೂಪೀ

ಶ್ರೀಪರಮಾತ್ಮನು ಆಯಾಯಾ ದಳಗಳಲ್ಲಿ ಬಂದಾಗ, ತತ್ತತ್ಕರ್ಮಗಳನ್ನು ಮಾಡಿ ಮಾಡಿಸುವನು. ಈ ವಿಷಯವನ್ನು ದಾಸರಾಯರು ಕಾಲಕಾಲಗಳಲ್ಲಿ ಎಂದಿರುವನು.

೪. ಬ್ರಹ್ಮನಾಡೀ ಮಧ್ಯಗತ ಹೃತ್ಪದ್ಮವು ಅಷ್ಟದಳಾತ್ಮಕವಾದದ್ದು. ಇದರ ಎಂಟು ದಳಗಳಲ್ಲಿ ಆಯಾಯಾ ದಿಕ್ಕುಗಳಿಗನುಗಣವಾಗಿ ಅಷ್ಟದಿಕ್ಪಾಲಕರಿದ್ದಾರೆ. ಅದರ ವಿವರ ಇಂತಿದೆ.

| ಕ್ರಮ ಸಂಖ್ಯೆ | ದಿಕ್ಕು | ಪಾರ್ಶ್ವ | ದಿಕ್ಪಾಲಕರು |
|---|---|---|---|
| 1 | ಪೂರ್ವ | ಮುಂಭಾಗ | ಇಂದ್ರ |
| 2 | ಆಗ್ನೇಯ | ಪೂರ್ವ-ದಕ್ಷಿಣ ಮಧ್ಯಗತ ಮೂಲೆ | ಅಗ್ನಿ |
| 3 | ದಕ್ಷಿಣ | ಬಲಪಾರ್ಶ್ವ | ಯಮ |
| 4 | ನೈರುತ್ಯ | ದಕ್ಷಿಣ-ಪಶ್ಚಿಮ ಮಧ್ಯಗತ ಮೂಲೆ | ನಿಋುರುತಿ |
| 5 | ಪಶ್ಚಿಮ | ಹಿಂಭಾಗ | ವರುಣ |
| 6 | ವಾಯುವ್ಯ | ಪಶ್ಚಿಮ-ಉತ್ತರ ಮಧ್ಯಗತ ಮೂಲೆ | ಪ್ರವಹ ವಾಯು |
| 7 | ಉತ್ತರ | ಎಡಭಾಗ | ಕುಬೇರ |
| 8 | ಈಶಾನ್ಯ | ಉತ್ತರ-ಪೂರ್ವ ಮಧ್ಯಗತ ಮೂಲೆ | ಮಹರುದ್ರದೇವರು |

ಹೀಗೆ ಆಯಾಯಾದಿಕ್ಕಿನಲ್ಲಿರುವ ದಳಗಳಲ್ಲಿ ಬಂದಾಗ, ಆಯಾಯಾ ದಳಗತ ದಿಕ್ಪಾಲಕರಿಂದ ಸಂಸೇವ್ಯಮಾನನಾಗಿ, ಅವರಿಂದ ಸೇವೆಯನ್ನು ಸ್ವೀಕರಿಸಿ ಆ ದೇವತೆಗಳನ್ನು ಅನುಗ್ರಹಿಸುವನು. ಆಯಾಯಾ ದಿಕ್ಪಾಲಕರಾದ ದೇವತೆಗಳ ದ್ವಾರಾ, ಶ್ರೀ ಮುಖ್ಯಪ್ರಾಣದಲ್ಲಿ ತಾನೇ ನಿಂತು, ಪ್ರೇರಿಸಿ, ಜೀವರಿಗೆ ಕಾಲಕಾಲಕ್ಕೆ ಉಚಿತವಾದ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಈ ಕಾರ್ಯಗಳ ವಿವರಗಳನ್ನು ಮುಂದಿನ ಪದ್ಯಗಳಲ್ಲಿ ಶ್ರೀ ದಾಸರಾಯರು ತಿಳಿಸುತ್ತಾರೆ. ಇಂತಹ ಅಷ್ಟದಿಕ್ಪಾಲಕರನ್ನು ಎಣ್ದೆಸೆ **ಪಾಲಕರು** ಎಂದಿದ್ದಾರೆ, ಎಣ್-ಎಂಟು ದೆಸೆ-ದಿಕ್ಕು. ಅಂದರೆ ಎಣ್ದೆಸೆ-ಎಂಟು ದಿಕ್ಕುಗಳು. ಎಣ್ದೆಸೆ ಪಾಲಕರು ಎಂದರೆ, ಇಂದ್ರಾದಿ ರುದ್ರಾಂತ ಅಷ್ಟದಿಕ್ಪಾಲಕರೆಂದರ್ಥ,

೫. ಜೀವರನ್ನು ಉದ್ಧರಿರಲೋಸುಗ, ಅಪ್ರಾಕೃತವಾದ ಸ್ವರೂಪ ದೇಹಕ್ಕೆ ಪ್ರಕೃತಿ ಸಂಬಂಧವಾದ ಅನಾದಿ ಲಿಂಗಶರೀರವನ್ನು ಉಪಚಯ ದ್ವಾರಾ, ಸಂಪರ್ಕ ಹೊಂದಿಸಿ ತನ್ಮೂಲಕ ಆನಾದಿಲಿಂಗದೇಹಗತ ಕರ್ಮ ಬೀಜಗಳ ಅಂಕುರ ದ್ವಾರಾ ಭವಬಂಧನ ರೂಪವಾದ ಸಂಸಾರಕ್ಕೆ ಸಿಲುಕಿಸಿ, ದುಸ್ತರವಾದ ಭವಶರಧಿಯಲ್ಲಿ ದಿಕ್ಕುಗಾಣದೆ ತೊಳಲಾಡತ್ತಿರುವ ಜೀವರನ್ನು ಲಿಂಗಭಂಗದ್ವಾರಾ ಕರ್ಮಕ್ಷಯಗೈಸಿ ಪ್ರಕೃತಿಸಂಬಂಧವಾದ ಪ್ರತಿಬಂಧಕ ವನ್ನು ದೂರಗೈಸಿ, ಸಚ್ಚೇತನರಿಗೆ ಸ್ವರೂಪಾನಂದಾವಿರ್ಭಾವರೂಪವಾದ ಮೋಕ್ಷಾನಂದವನ್ನು ಕರುಣಿಸುವುದರಿಂದ ಶ್ರೀ ಪರಮಾತ್ಮನನ್ನು **ಕೃಪಾಳು** ಎಂದಿದ್ದಾರೆ.

೬. ಇಂತಹ ಕೃಪಾಳುವಾದ ಬಿಂಬನು ಜೀವರ ಮನೋಭೀಷ್ಟಗಳನ್ನು ಸಲಿಸುತ್ತಾ, ಪರಮಾಪ್ತನಾಗಿ ಜೀವರನ್ನು ಎಂದೆಂದಿಗೂ ಬಿಡದೆ, ನಿತ್ಯಾವಿ ಯೋಗಿಯಾಗಿ ಸಂರಕ್ಷಿಸುತ್ತಿರುವನು. ಇದಲ್ಲವೇ ಪರಮಕರುಣಾಸಮುದ್ರ ನಾದ ಬಿಂಬರೂಪೀ ಆ ಪರಮಾತ್ಮನ ಅತ್ಯದ್ಭುತ ವ್ಯಾಪಾರ ! ॥೨೦॥

# ಪದ್ಯ (೨೧)

**ವಾಸವಾನುಜ ರೇಣುಕಾತ್ಮಜ ।**
**ದಾಶರಥಿ ವೃಜಿನಾರ್ದನವುಲಜ ।**
**ಲಾಶಯಾಲಯ ಹಯವದನ ಶ್ರೀಕಪಿಲ ನರಸಿಂಹ ॥**
**ಈ ಸುರೂಪದಿ ಅವರವರ ಸಂ ।**
**ತೋಷ ಪಡಿಸುತ ನಿತ್ಯಸುಖಮಯ ।**
**ವಾಸವಾಗಿಹ ಹೃತ್ಕಮಲದೊಳು ಬಿಂಬನೆಂದೆನಿಸಿ ॥ ॥೨೧॥**

**ಅವತರಣಿಕೆ :**

ಹೃತ್ಕಮಲದ ಅಷ್ಟದಳಗತ ದಿಕ್ಪಾಲಕರಿಂದ ಸಂಸೇವ್ಯಮಾನನಾದ ಹಂಸನಾಮಕ ಶ್ರೀ ಪರಮಾತ್ಮನ, ಅಷ್ಟದಳಾಂತರ್ಗತ ಭಗವದ್ರೂಪಗಳನ್ನು ತಿಳಿಸುತ್ತಾರೆ-**ವಾಸವಾನುಜ** ಎಂಬ ಪ್ರಸಕ್ತಸಂಧಿಗತ ೨೧ ನೆಯ ಈ ಪದ್ಯದಿಂದ.

ಹೃತ್ಕಮಲದ ಅಷ್ಟದಳಗಳಲ್ಲಿ ಅಷ್ಟದಿಕ್ಪಾಲಕರಿಂದ ಸಂಸೇವಿಸಲ್ಪಡುತ್ತಿರುವ ಅಷ್ಟ ಭಗವದ್ರೂಪಗಳು ಕ್ರಮವಾಗಿ ಉಪೇಂದ್ರ, ಶ್ರೀ ಪರಶುರಾಮ ರಾಮಚಂದ್ರ, ಜನಾರ್ದನ, ಮತ್ಸ್ಯ, ಹಯವದನ, ಕಪಿಲ ಮತ್ತು ನರಸಿಂಹ, ಆಯಾಯಾದಳಗಳಲ್ಲಿ ಬಿಂಬನಾದ ಹಂಸನಾಮಕ ಪರಮಾತ್ಮನು ಸಂಚರಿಸುತ್ತಿರುವಾಗ, ಆಯಾಯಾದಳಗತ ದಿಕ್ಪಾಲಕರಿಂದ ಸೇವೆಯನ್ನು ಸ್ವೀಕರಿಸುವನು. ಅವರನ್ನು ಅನುಗ್ರಹಿಸಿ ಸಂತೋಷಪಡಿಸುವನು. ಇಂತಹ ಜ್ಞಾನಾನಂದ ಮಯನಾದ ಶ್ರೀ ಪರಮಾತ್ಮನು ಹೃತ್ಕಮಲನಿವಾಸಿಯಾಗಿದ್ದು ಜೀವರಿಗೆ ಬಿಂಬನೆನಿಸಿದ್ದಾನೆ ॥೨೧॥

## ಪ್ರತಿಪದಾರ್ಥ

**ವಾಸವಾನುಜ** = ಇಂದ್ರ ದೇವರ ತಮ್ಮನಾಗಿ ಅವತರಿಸಿದ ಉಪೇಂದ್ರ ನಾಮಕನು ಪೂರ್ವದಳಗತ ಇಂದ್ರದೇವರಿಂದ ಸಂಸೇವ್ಯಮಾನನು. **ರೇಣು ಕಾತ್ಮಜ** = ಜಮದಗ್ನಿಋಷಿಪತ್ನಿಯಾದ ರೇಣುಕಾದೇವಿಯ ಪುತ್ರನಾದ ಶ್ರೀಪರಶುರಾಮ (ಆಗ್ನೇಯ ದಳಗತ ಅಗ್ನಿಯಿಂದ ಸೇವ್ಯ). **ದಾಶರಥಿ** = ದಶರಥನ ಪುತ್ರ ಶ್ರೀರಾಮಚಂದ್ರಮೂರ್ತಿ (ದಕ್ಷಿಣ ದಿಕ್ಪಾಲಕ ಯಮ ದೇವರಿಂದ ಸೇವ್ಯನಾಗಿ) **ವೃಜಿನಾರ್ದನ** = ಪಾಪಿಗಳಾದ ದೈತ್ಯರನ್ನು ಸಂಹರಿಸುವ ಹಾಗೂ ಪಾಪಪರಿಹಾರಕನಾದ ಜನಾರ್ದನನು (ನೈರುತ್ಯ ದಳ ಗತ ನಿರಋತಿಯಿಂದ ಸಂಸೇವ್ಯಮಾನನಾಗಿ). **ಅಮಲಜಲಾಶಯಾಲ** = ಪರಿಶುದ್ಧವಾದ ಜಲಗಳಿಗೆ ಆಶ್ರಯವಾದ ತಟಾಕಾದಿಗಳೇ ಮನೆಯನ್ನಾಗಿ ಉಳ್ಳ ಮತ್ಸ್ಯರೂಪಿ ಶ್ರೀಪರಮಾತ್ಮ(ಪಶ್ಚಿಮದಿಕ್ಪಾಲಕ ವರುಣನಿಂದಸೇವ್ಯನು) **ಹಯವದನ** = ಹಯಗ್ರೀವರೂಪೀ ಶ್ರೀಪರಮಾತ್ಮನು (ವಾಯವ್ಯ ದಳಗತ ಪ್ರವಹವಾಯುವಿನಿಂದ ಸೇವ್ಯನಾಗಿ) **ಶ್ರೀಕಪಿಲ** = ತಪೋನಿಧಿಯಾದ ಕಪಿಲನಾಮಕನು (ಉತ್ತರದಿಕ್ಪಾಲಕನಾದ ಕುಬೇರನಿಂದ ಸೇವ್ಯನು) ಮತ್ತು **ನರಸಿಂಹ** = ನರಸಿಂಹನಾಮಕ ಶ್ರೀಹರಿಯು (ಈಶಾನ್ಯದಿಕ್ಪಾಲಕರಾದ ಶ್ರೀ ಮಹರುದ್ರ ದೇವರಿಂದ ಸಂಸೇವಿತ ಭಗವದ್ರೂಪ) **ಈಸುರೂಪದಿ** = ಹೀಗೆ ಅಷ್ಟವಿಧವಾದ ದಿವ್ಯ ಭಗವದ್ರೂಪಗಳಿಂದ, **ಅವರವರ** = ಆಯಾಯಾ ದಳಗತ ದಿಕ್ಪಾಲಕರಿಂದ ಉಪಾಸ್ಯಮಾನನಾಗಿದ್ದು, **ಸಂತೋಷಪಡಿಸುತ** = ತನ್ನ ದಿವ್ಯದರ್ಶನವನ್ನು ಅವರಿಗೆ ತೋರಿಸಿ, ಆನಂದ ಪಡಿಸುತ್ತಾ, **ನಿತ್ಯಸುಖಮಯ** = ನಿತ್ಯಾನಂದಸ್ವರೂಪಿಯಾದ ಮೂಲೇಶನಾಮಕ ಶ್ರೀ ಪರಮಾತ್ಮನು, **ಹೃತ್ಕಮಲದೊಳು** = ಹೃತ್ಪದ್ಮದಲ್ಲಿ (ಕರ್ಣಿಕಾದ ಮೂಲ ದಲ್ಲಿ) **ಬಿಂಬನೆಂದೆನಿಸಿ** = ಜೀವರಿಗೆ ಬಿಂಬನಾಮಕನಾಗಿ, **ವಾಸನಾಗಿಹ** = ನೆಲೆಸಿದ್ದಾನೆ. ||೨೦||

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ–

ಅಷ್ಟದಳದಲ್ಲಿ ಅಷ್ಟದಿಕ್ಪಾಲಕರ ಉಪಾಸ್ಯ ಭಗವದ್ರೂಪಗಳು ಎಂಟು ಅವೆ ಎಂತ ಹೇಳತಾರೆ.

ಇಂದ್ರದೇವರ ಅನುಜನಾದ ಉಪೇಂದ್ರನಾಮಕ ಪರಮಾತ್ಮ ಪೂರ್ವ ದಳದಲ್ಲಿ ಇಂದ್ರದೇವರಿಂದ ಉಪಾಸ್ಯನು. ಜಮದಗ್ನಿಋಷಿಪತ್ನಿಯಾದ ರೇಣುಕಾದೇವಿಯ ಮಗನಾದ ಶ್ರೀ ಪರಶುರಾಮದೇವರು ಅಗ್ನಿದಳದಲ್ಲಿ ಅಗ್ನಿದೇವರಿಂದ ಉಪಾಸ್ಯನು. ದಶರಥರಾಯನ ಪುತ್ರ ಸೀತಾಪತಿಯಾದ ಶ್ರೀರಾಮಚಂದ್ರದೇವರು ದಕ್ಷಿಣದಿಕ್ಕಿನಲ್ಲಿ ಯಮದೇವರಿಂದ ಉಪಾಸ್ಯನು. ಪಾಪಿಗಳಾದ ದೈತ್ಯರ ಸಂಹಾರ ಮಾಡತಕ್ಕ ವೃಜಿನಾರ್ದನರೂಪಿ ಪರಮಾತ್ಮ ನೈರುತ್ಯದಿಕ್ಕಿನಲ್ಲಿ ಇರುವ ದಳದಲ್ಲಿ ನಿರಋತಿಯಿಂದ ಉಪಾಸ್ಯನು. ಪರಿಶುದ್ಧಗಳಾದ ಜಲಗಳಿಗೆ ಆಶ್ರಯಭೂತವಾದ ತಟಾಕಾದಿಗಳೇ ಮನೆಯಾಗಿ ಉಳ್ಳ ಮತ್ಸ್ಯರೂಪಿ ಪರಮಾತ್ಮನು ಪಶ್ಚಿಮದಿಕ್ಕಿನಲ್ಲಿ ಇರುವ ದಳದಲ್ಲಿ ವರುಣದೇವರಿಂದ ಉಪಾಸ್ಯನು. ಹಯವದನ ದೇವರು. ವಾಯುವ್ಯ ದಿಕ್ಕುದಳದಲ್ಲಿ ಪ್ರವಹವಾಯು, ಇವನ ಉಪಾಸ್ಯ ಹಯವದನ ಮೂರ್ತಿಯು, ತಪಸ್ಸೇ ಐಶ್ವರ್ಯ ಎಂತ ಪ್ರದರ್ಶನ ಮಾಡಿದ ಕಪಿಲನಾಮಕ ಪರಮಾತ್ಮ ಉತ್ತರದಿಕ್ಕುದಳದಲ್ಲಿ ಕುಬೇರನಿಂದ ಉಪಾಸ್ಯನು. ಈ ಪ್ರಕಾರ ದಿವ್ಯರೂಪಗಳಿಂದ ಆಯಾ ದಳಗಳಲ್ಲಿ ಇದ್ದು, ಆಯಾದಳಗತ ದಿಕ್ಪಾಲಕರಿಂದ ಸೇವಾ ತೆಗೆದುಕೊಳ್ಳುತ್ತಾ, ಆಯಾ ದಿಗ್ದೇವತೆಗಳ ತನ್ನ ದರ್ಶನದಿಂದ ಸಂತೋಷಪಡಿಸುತ, ಸದಾ ಸುಖವೇ ಸ್ವರೂಪವಾಗಿ ಉಳ್ಳ ಮೂಲೇಶನು, ಹೃದಯಕಮಲದೊಳಗೆ ಬಿಂಬ ಎಂದು ಕರೆಸಿದವನಾಗಿ ವಾಸವಾಗಿ ಇರೋವನಾಗಿದ್ದಾನೆ. ಮೂಲೇಶ ಅಗ್ರೇಶ ಪ್ರಾದೇಶ ಭಗವದ್ರೂಪಗಳೂನೂ ಬಿಂಬ ಸಾಂಕೇತರೇವೆ. ಅದರದರಲ್ಲಿ ಮುಖ್ಯಬಿಂಬ ಅಗ್ರೇಶ ಎಂತ ತಾತ್ಪರ್ಯ. ॥೨೧॥

(೨) **ಭಾವಪ್ರಕಾಶಿಕೆ-ವ್ಯಾಖ್ಯಾನ**—

ಎಂಟು ದಿಕ್ಪಾಲಕರಿಂದ ಎಂಟು ರೂಪಗಳಿಂದ ಉಪಾಸ್ಯನಾಗಿರುವನೆಂದು ಹೇಳುತ್ತಾರೆ. ಹೃದಯಕಮಲದ ಅಷ್ಟದಳಗಳಲ್ಲಿ ಉಪೇಂದ್ರ, ಪರಶುರಾಮ, ರಾಮ, ಜನಾರ್ದನ, ಮತ್ಸ್ಯ, ಹಯಗ್ರೀವ, ಕಪಿಲ, ನರಸಿಂಹ—ಎಂಬ ೮ ರೂಪಗಳಿಂದ ಇಂದ್ರ, ಅಗ್ನಿ ಮೊದಲಾದ ದಿಕ್ಕುಗಳಲ್ಲಿ ಬಿಂಬನೆಂಬ ಹೆಸರಿನಿಂದ ಆನಂದಸ್ವರೂಪನಾದ ಸ್ವಾಮಿಯು ಅವರವರ ಯೋಗ್ಯತಾನುಸಾರವಾಗಿ ಅವರವರನ್ನು ಸಂತೋಷಪಡಿಸುತ್ತಾ ವಾಸ ಮಾಡುತ್ತಿರುವನು. ॥೨೧॥

(೩) **ಭಾವದರ್ಪಣ ವ್ಯಾಖ್ಯಾನವನ್ನು** ಈ ಪದ್ಯಕ್ಕೆ ವ್ಯಾಖ್ಯಾನಕಾರರು ಬರೆದಿಲ್ಲ. ಉಪೇಂದ್ರ ಎಂದರೆ ಇಂದ್ರನ ತಮ್ಮ- ಎಂದಿಷ್ಟು ಮಾತ್ರ ಹೇಳಿದ್ದಾರೆ.

(೪) **ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದಿ** (ಸಂಸ್ಕೃತ ಮೂಲ)—

"**ವಾಸವೇತಿ**"॥ ಓಂ "ದಧಾನೋ ಗೋಮದ ಶ್ವವತ್ಸುವೀರ್ಯ ಮಾದಿತ್ಯ ಜೂತ ವಿಧತೇ ॥ ಸದಾರಾಯಾ ಪುರುಸ್ಪೃಹಾ ತಮಿಂದ್ರಂ ದಾನಮೀಮಹೇ" (ಶಿವಸಾನಮ್) ॥ ಓಂ ॥ ಭಕ್ತೇಭ್ಯಃ ಗವಾಶ್ವಾದಿ ಕರೋತಿ ಇತಿ ಕಃ ॥ ಸೌರಾದಿ ಪ್ರಕಾಶಃ ಪಃ ದಾತವ್ಯತ್ವೇನ ಅಸ್ತಿ ಇತಿ ಪಿಃ ॥ ಜಗತ್ ಪರಿವರ್ತಯತಿ ಇತಿ ಲಃ ॥ ಸರ್ವತ್ರ ಕರ್ಮಧಾರಯೇ ಕಪಿಲಃ ॥ ವಾಮನಃ । ಜಲಾಶಯಾಲಯಃ ನಾರಾಯಣಃ ಓಂ ॥ ರೋದಸೀ ಮಹೀ ಸಮೀಚೀ ಸಮಜಗ್ರಭೀತ್ ॥ ತಮೋಭಿರಿಂದ್ರ ತೇ (ತಂ) ಗುಹಃ॥ ಯ ಇಂದ್ರಯತಸ್ತ್ವಾ ಭೃಗವೋ ಯೇ ಚ ತುಷ್ಟುವುಃ ॥ ॥ ಓಂ ॥ ಅನೇನ ವಾಸಃ ಸ್ವವಿಹಿತ ಕರ್ಮಾನುಷ್ಠಾನೇನ ಅವಸ್ಥಾನಮ್ ॥ ತತ್ ವಾರಯತಿ ಇತಿ ವಾಸವಃ ಅಸುರಃ ತಮೋರೂಪಃ ॥ ತಂ ಅನುಸಮ್ಯಕ್ ಜಯತಿ ಹರತಿ ತತ್ ವಾಸವಾನುಜಃ ॥೨೧॥

**ಕನ್ನಡಾನುವಾದ**

ಹೃತ್ಪದ್ಮಗತ ಕಪಿಲಾದಿ ಅಷ್ಟರೂಪಗಳನ್ನು ತಿಳಿಸುತ್ತಾರೆ. **ಕಪಿಲ** ಎಂಬ ನಾಮವು **ಬೃಹತೀ ಮಂತ್ರ**ದಲ್ಲಿ ವಿವರಿಸಲ್ಪಟ್ಟಿದೆ.

ಭಕ್ತಜನರಿಗೆ ಗೋವು ಅಶ್ವಾದಿ ಸಂಪತ್ತುಗಳನ್ನು ಕೊಡುವುದರಿಂದ "ಕ" ಎಂದು ಹೆಸರು.

ಸೂರ್ಯನಿಗ ಪ್ರಕಾಶಪ್ರದನಾದುದರಿಂದ "ಪಿ" ಎನಿಸಿಕೊಳ್ಳುವನು.

ನಾನಾ ಪ್ರಕಾರವಾಗಿ ಜಗತ್ತನ್ನು ಪ್ರವರ್ತಿಸುವುದರಿಂದ "ಲ" ಎಂತ ನಾಮಧೇಯ. ಇಂತು ಐಶ್ವರ್ಯ ಪ್ರದತ್ವ, ಪ್ರಕಾಶಪ್ರದತ್ವ ಮತ್ತು ಜಗತ್ಪ್ರವರ್ತಕತ್ವ ಈ ಮಹಾ ಗುಣಯುಕ್ತನಾದ ಶ್ರೀ ಪರಮಾತ್ಮನು **ಕಪಿಲ** ಶಬ್ದ ವಾಚ್ಯನಾಗಿದ್ದಾನೆ.

**ವಾಸವಾನುಜ**–ಎಂದರೆ, **ಉಪೇಂದ್ರ** ಎಂದರ್ಥ. ಈ ವಿಷ್ಣುವಿನ ನಾಮವು ಬೃಹತೀ ಋಙ್ಮಂತ್ರದಲ್ಲಿ ನಿಷ್ಪತ್ತಿಯಾಗಿದೆ.

ತಮತಮಗೆ ವಿಹಿತವಾದ ಕರ್ಮಗಳಲ್ಲಿ ಆಸಕ್ತನಾಗಿ ಅನುಷ್ಠಾನ ಮಾಡುವುದಕ್ಕೆ **ವಾಸ** ಎಂದರ್ಥ. ಇಂತಹ ವಿಹಿತ ಕರ್ಮಾನುಷ್ಠಾನ ಕಾರ್ಯ ವ್ಯವಸ್ಥೆಯನ್ನು (ವಾಸ) "ವ"–ಎಂದರೆ ಪ್ರತಿಬಂಧಿಸುವ ತಮೋರೂಪೀ ಅಸುರರು **ವಾಸವ**–ಎನಿಸುವರು. ಇಂತಹ ತಮೋಸ್ವರೂಪೀ ಅಸುರರನ್ನು **ಅನು**—ಎಂದರೆ ಚೆನ್ನಾಗಿ (ಪುನಃ ಸಮೀಪಿಸದಂತೆ) "ಜ" ಜಯಿಸುವವನು ಯಾವನೋ ಅವನೇ **ವಾಸವಾನುಜ**ನು (ವಾಸವ-ಅನು–ಜ)

**ಜಲಾಶಯಾಲಯ** ಎಂದರೆ ಕ್ಷೀರಸಮುದ್ರ ಶಾಯಿಯಾದ **ಶ್ರೀಮನ್ನಾರಾಯಣ** ಎಂದರ್ಥ. ॥೨೦॥

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ವಾಸವಾನುಜನೆಂಬ ಉಪೇಂದ್ರಮೂರ್ತಿ ಎಂತಲೂ, ರೇಣುಕಾತ್ಮಜನೆಂಬ ಪರಶುರಾಮನೆಂತಲೂ, ದಾಶರಥಿ ಎಂಬ ರಾಮನೆಂತಲೂ, ಪಾಪ ಪರಿಹಾರಕ ಜನಾರ್ದನನೆಂತಲೂ, ಅಮಲಜಲಾಶಯಾಲಯ ಎಂಬ ಸಮುದ್ರಶಾಯಿ ಎಂತಲೂ, ಹಯವದನನೆಂತಲೂ, ಶ್ರೀ ಕಪಿಲ ನರಸಿಂಹ ಇದೇ ಮೊದಲಾದ ಗುರುಪ್ರದತ್ತ ಸುರೂಪನಾಮಗಳಿಂದ, ಮೇಲೆ ಹೇಳಿದ ಹೃತ್ಕಮಲದಲ್ಲಿದ್ದು, ಬಿಂಬಮೂರ್ತಿ ಎನಿಸಿ ಆಯಾಯಾ ಜನರನ್ನು ಸಂತೋಷಪಡಿಸುತ್ತಾ, ಮೂಲರೂಪ ಸುಖಪೂರ್ಣ ನಾರಾಯಣನೇ ಇರುವನೆಂದು ತಿಳಿಯಬೇಕೆಂದರ್ಥ. ॥೨೧॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಬಿಂಬಮೂರ್ತಿಯಾದ ಮೂಲೇಶನಾಮಕ ಶ್ರೀ ಪರಮಾತ್ಮನು ಹೃತ್ಕಮಲದ ಅಷ್ಟದಳಗಳಲ್ಲಿ ಸಂಚರಿಸುತ್ತಾ, ಆಯಾಯಾ ದಳಗತ ದಿಕ್ಪಾಲಕರಾದ ದೇವತೆಗಳಿಂದ ಸಂಸೇವ್ಯಮಾನನಾಗಿ, ಅವರನ್ನು ಅನುಗ್ರಹಿಸುವನು ಎಂದು ತಿಳಿಸಿ, ಅಂತಹ ಹೃತ್ಪದ್ಮದ ಅಷ್ಟದಳಾಂತರ್ಗತ ಭಗವದ್ರೂಪಗಳ ವಿವರ ತಿಳಿಸುತ್ತಾರೆ- **ವಾಸವಾನುಜ**-ಎಂಬ ಪ್ರಸಕ್ತ ೨೧ ನೆಯ ಪದ್ಯದಿಂದ.

೧. ಹೃತ್ಪದ್ಮಕ್ಕೆ ಮುಂಭಾಗವು ಪೂರ್ವದಿಕ್ಕು. ಈ ಪೂರ್ವದೆಶೆಯ ದಳದಲ್ಲಿ ವಿದ್ಯಮಾನವಾಗಿರುವ ಭಗವದ್ರೂಪವು **ಉಪೇಂದ್ರನು.** ಉಪೇಂದ್ರನಾಮಕ ಶ್ರೀ ಪರಮಾತ್ಮನನ್ನು **ವಾಸವಾನುಜ**—ಎಂದಿದ್ದಾರೆ ದಾಸರಾಯರು. ವಾಸವ-ಎಂದರೆ ಸ್ವರ್ಗಾಧಿಪತಿ ದೇವೇಂದ್ರ. ಅನುಜ- ಇಂದ್ರದೇವರ ತಮ್ಮ. ಇಂದ್ರನಿಗೆ ಪದವಿ ಭ್ರಷ್ಟತ್ವ ಉಂಟಾಗಲು, ಸಮಸ್ತ

ದೇವತಾವೃಂದದಿಂದ ಪ್ರಾರ್ಥ್ಯಮಾನನಾದ ಶ್ರೀಹರಿಯು **ಉಪೇಂದ್ರ** ನಾಮಕನಾಗಿ ಸ್ವರ್ಗಾಧಿಪತ್ಯ ಮಾಡಿ, ಪುನಃ ಇಂದ್ರನಿಗೆ ರಾಜ್ಯವನ್ನು ಕೊಟ್ಟನು. ಇದರಿಂದ ಅವನಿಗೆ **ವಾಸವಾನುಜ** ಎಂದು ಹೆಸರು.

ಈ ಶಬ್ದಾರ್ಥವು **ಬೃಹತೀ ಋಙ್ಮಂತ್ರ**ದಲ್ಲಿ ವರ್ಣಿತವಾಗಿದೆ. **ವಿಹಿತ** ವಾದ ಕರ್ಮಾನುಷ್ಠಾನ ವ್ಯವಸ್ಥೆ ಹಾಗೂ ಅಂತಹ ಕರ್ಮಾನುಷ್ಠಾನಪರರಿಗೆ **ವಾಸ**-ಎಂದು ಹೆಸರು. ಅಂತಹ ವ್ಯವಸ್ಥೆ ಮತ್ತು ಅನುಷ್ಠಾನ ಉಳ್ಳವರಿಗೆ ಪ್ರತಿಬಂಧಕವನ್ನುಂಟುಮಾಡುವ ತಮೋರೂಪೀ ಅಸುರರಿದ್ದಾರೆ. ಅಂತಹ ಅಸುರರನ್ನು **ವ** (ಪ್ರತಿಬಂಧಕವನ್ನುಂಟು ಮಾಡುವವರು) ಎಂದು ಕರೆಯುವರು, ಅವರನ್ನು, **ಅನು**-ಎಂದರೆ ಚೆನ್ನಾಗಿ, ಪುನಃ ಸಮೀಪಕ್ಕೆ ಬಾರದಂತೆ, **ಜ**-ಜಯಿಸುವವನು ಯಾವನೋ ಅಂತಹ ಶ್ರೀ ಪರಮಾತ್ಮನಿಗೆ **ವಾಸವಾನುಜ** ಎಂತ ನಾಮ.

೨. ಹೃತ್ಕಮಲದ ಆಗ್ನೇಯ ದಿಕ್ಕಿನಲ್ಲಿ ಚಿಂತಿಸಬೇಕಾದ ಭಗವ ದ್ರೂಪವು **ಶ್ರೀ ಪರಶುರಾಮ ರೂಪ.** ಇದನ್ನು **ರೇಣುಕಾತ್ಮಜ** ಎಂದಿದ್ದಾರೆ ದಾಸರಾಯರು. ಶ್ರೀ ಜಮದಗ್ನಿ ಋಷಿಗಳ ಪತ್ನಿ ರೇಣುಕಾದೇವಿ ಯಲ್ಲಿ ಪ್ರಕಟರಾದವರೇ **ಭಾರ್ಗವರಾಮ** (ಪರಶುರಾಮ). **ಅಗ್ನಿ** ಆಗ್ನೇಯ ದಿಕ್ಕಿನ ಅಧಿಪತಿ. ಅಗ್ನಿಯಿಂದ ಉಪಾಸ್ಯನಾದವನು ರೇಣುಕಾತ್ಮಜನಾದ ಪರಶುರಾಮರೂಪನು.

೩. ಹೃತ್ಪದ್ಮದ ಬಲಭಾಗದಲ್ಲಿರುವುದು ದಕ್ಷಿಣ ದಿಕ್ಕು. ಈ ದಳ ದಲ್ಲಿ **ಶ್ರೀರಾಮ** ಎಂಬ ಭಗವದ್ರೂಪದ ಚಿಂತನೆ. ಇದನ್ನು **ದಾಶರಥಿ** ಎಂದು ತಿಳಿಸಿದ್ದಾರೆ. ದಶರಥ ಮಹಾರಾಜನ ಜ್ಯೇಷ್ಠ ಪತ್ನಿ ಕೌಸಲ್ಯಾದೇವಿಯ ಉದರದಲ್ಲಿ ಪ್ರಾದುರ್ಭವಿಸಿದ ಶ್ರೀಮನ್ನಾರಾಯಣನೇ ದಾಶರಥಿಯಾದ ಶ್ರೀ ರಾಮಚಂದ್ರಮೂರ್ತಿ. ದಕ್ಷಿಣ ದಿಕ್ಪಾಲಕನಾದ **ಯಮದೇವರಿಂದ** ಉಪಾಸ್ಯನು.

೪, ಹೃತ್ಕಂಜಕ್ಕೆ ನೈರುತ್ಯ ದಿಕ್ಕಿನಲ್ಲಿ ದಳಗತ ಭಗವದ್ರೂಪವು **ಜನಾರ್ದನನು.** ಈ ರೂಪವನ್ನು ದಾಸರಾಯರು **ವೃಜಿನಾರ್ದನ** ಎಂದಿದ್ದಾರೆ. ವೃಜಿನ-ಎಂದರೆ ಪಾಪಗಳು. ಅಂತಹ ಪಾಪಕಾರ್ಯಗಳಿಗೆ ಕಾರಣರಾದ ದೈತ್ಯರನ್ನು ಸಂಹರಿಸುವುದರಿಂದ ಶ್ರೀ ಪರಮಾತ್ಮನಿಗೆ ಜನಾರ್ದನ ಎಂದು ಹೆಸರು. ನೈರುತ್ಯ ದಳಗತ **ನಿರಋತಿ** ಎಂಬ ದಿಕ್ಪಾಲಕನಿಂದ ಉಪಾಸ್ಯನಾಗಿ ಜನಾರ್ದನ ರೂಪೀ ಬಿಂಬನಿದ್ದಾನೆ.

೫. ಅದೇ ಬಿಂಬನು ಹೃತ್ಕೀಲಾಲಜದ ಹಿಂಭಾಗ, ಅಂದರೆ ಪಶ್ಚಿಮಕ್ಕೆ ಬಂದಾಗ, ಅಲ್ಲಿ ಅವನ ರೂಪೋಪಾಸನೆ **ಮತ್ಸ್ಯ ಮೂರುತಿ ಎಂದು.** ಇದನ್ನು **ಅಮಲ ಜಲಾಶಾಲಯ** ಎಂಬ ಶಬ್ದ ಪ್ರಯೋಗದಿಂದ ತೋರಿಸಿದ್ದಾರೆ. ಅಮಲ-ಎಂದರೆ ಪರಿಶುದ್ಧವಾದ, ಜಲ-ನೀರಿಗೆ, ಆಶಯ— ಆಶ್ರಯರೂಪವಾದ ಸರೋವರ, ನದೀ ಮುಂತಾದ ಜಲಾಶಯಗಳಲ್ಲಿರುವ ಮತ್ಸ್ಯರೂಪೀ ಶ್ರೀ ಪರಮಾತ್ಮ. ವೇದೋದ್ಧಾರಕನಾದ ಮತ್ಸ್ಯಾವತಾರಿ ಶ್ರೀಹರಿಯು ಅಗಾಧವಾದ ಸಮುದ್ರವೆಂಬ ಜಲರಾಶಿಯಲ್ಲಿ ಮುಳುಗಿ, ಸೋಮಕ ದೈತ್ಯನನ್ನು ಕೊಂದು, ವೇದಗಳನ್ನು ಚತುರ್ಮುಖ ಬ್ರಹ್ಮದೇವರಿಗಿತ್ತ ಕರುಣಾಸಮುದ್ರ. ಪಶ್ಚಿಮ ದಿಕ್ಕಿಗೆ ಅಧಿಪತಿ **ವರುಣ.** ವರುಣನಿಂದ ಉಪಾಸ್ಯನಾದ ಮತ್ಸ್ಯಮೂರುತಿಯು ಚಿಂತನೆ ಪಶ್ಚಿಮದಳದಲ್ಲಿ. **ಬೃಹತೀ ಋಜ್ಮಂತ್ರದಲ್ಲಿ** ಅಮಲಜಲಾಶಾಲಯ ಎಂಬುದಕ್ಕೆ ಕ್ಷೀರಸಮುದ್ರ ಶಾಯಿಯಾದ **ಶ್ರೀಮನ್ನಾರಾಯಣ** ಎಂದು ವರ್ಣಿತವಾಗಿದೆ.

೬. ಹಂಸನಾಮಕ ಶ್ರೀ ಪರಮಾತ್ಮನನ್ನು ವಾಯುವ್ಯ ದಿಗ್ಗತ ದಳದಲ್ಲಿ **ಹಯವದನ** ಎಂದು ಚಿಂತಿಸಬೇಕು. ವಾಯುವ್ಯ ದಿಕ್ಪಾಲಕ **ಪ್ರವಹ ವಾಯು.** ಇವನಿಂದ ಸಂಸ್ಸೇವ್ಯಮಾನನಾಗಿ ಹಯವದನ ಮೂರ್ತಿಯು ವಾಯುವ್ಯ ದಳದಲ್ಲಿರುವನು.

೭. ಹೃತ್ಕಮಲದ ಉತ್ತರ ದಿಕ್ಕಿನ ದಳದಲ್ಲಿ **ಕಪಿಲನಾಮಕ** ಶ್ರೀ ಪರಮಾತ್ಮನ ರೂಪೋಪಾಸನೆ, **ಕುಬೇರನು** ಉತ್ತರದಿಕ್ಕಿಗೆ ಅಧಿ

ಪತಿಯು, ಅಂತಹ ಯಕ್ಷರಾಜನಾದ ಕುಬೇರನಿಂದ ಉಪಾಸ್ಯಮಾನನಾಗಿ ಕಪಿಲನಾಮಕ ಶ್ರೀಹರಿಯು ಹೃತ್ಕಂಜದ ಎಡಪಾರ್ಶ್ವಗತ ಉತ್ತರ ದಳ ದಲ್ಲಿದ್ದು, ವ್ಯಾಪಾರ ಮಾಡಿ ಮಾಡಿಸುವನು. **ಕಪಿಲ**-ಎಂಬ ಶಬ್ದಾರ್ಥವು **ಬೃಹತೀ ಖಜ್ಮಂತ್ರ**ದಲ್ಲಿ ವರ್ಣಿತವಾಗಿದೆ.

(1) ಗೋ ಅಶ್ವಾದಿ ಸಂಪತ್ಪ್ರದನಾದ್ದರಿಂದ- ಕ ಎಂದು ಹೆಸರು.
(2) ಸೂರ್ಯನ ಪ್ರಕಾಶಕ್ಕೆ ಕಾರಣನಾದ್ದರಿಂದ- ಪಿ ಎಂತ ನಾಮ.
(3) ಜಗತ್ತನ್ನೇ ಪ್ರವರ್ತಿಸುವುದರಿಂದ, ಲ ಎಂದು ಹೆಸರು.

ಹೀಗೆ, ಐಶ್ವರ್ಯಪ್ರದತ್ವ, ಸೂರ್ಯತೇಜೋಪ್ರದತ್ವ ಮತ್ತು ಜಗತ್ಪ್ರವರ್ತಕತ್ವ ಉಳ್ಳ ಶ್ರೀ ಪರಮಾತ್ಮನು **ಕಪಿಲ**ನಾಮಕನು.

ತಪಸ್ಸಿಗೆ ಮುಖ್ಯಾಭಿಮಾನಿಯಾದ್ದರಿಂದ **ಕಪಿಲ**ನೆಂದು ಕರೆಯುವರು.

೮. ಹೃದಂಬುಜದ ಈಶಾನ್ಯ ಮೂಲೆಯ ದಳಗತ ಭಗವದ್ರೂಪ **ನರಸಿಂಹ.** ಈಶಾನ್ಯ ದಿಕ್ಪತಿಗಳಾದ **ಶ್ರೀ ಮಹರುದ್ರದೇವರಿಂದ** ಉಪಾಸ್ಯನಾಗಿ, ಸಂಸೇವ್ಯಮಾನನಾಗಿ ನೃಸಿಂಹರೂಪೀ ಭಗವಂತನು ಈಶಾನ್ಯ ದಳದಲ್ಲಿ ವಿದ್ಯಮಾನನಾಗಿದ್ದಾನೆ.

೯. ಹೀಗೆ ಅಷ್ಟದಿಕ್ಪಾಲಕರಿಂದ ಉಪಾಸ್ಯಮಾನನಾಗಿ, ಹೃತ್ಪದ್ಮದ ಅಷ್ಟದಳಗಳಲ್ಲಿ ಉಪೇಂದ್ರಾದಿ ನರಸಿಂಹ ಪರ್ಯಂತ ಅಷ್ಟ**ರೂಪಗಳಿಂದ** ಸಂಚರಿಸುತ್ತಾ, ಆಯಾಯಾ ದಳಗತ ದಿಕ್ಪಾಲಕರಿಂದ ಸೇವೆಯನ್ನು ಸ್ವೀಕರಿಸುವನು. ಅವರ ದ್ವಾರಾ, ಸ್ಥೂಲದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಜೀವನಿಗೆ ವಿವಿಧ ಮನೋವೃತ್ತಿಗಳಿಗೆ ಪ್ರೇರಕನಾಗಿರುವನು. ನಿತ್ಯ ಜ್ಞಾನಾನಂದಮಯನಾದ ಆನಂದ ಸ್ವರೂಪನಾದ ಆ ಹಂಸನಾಮಕನೇ **ಬಿಂಬ**ನೆಂದು ಕರೆಯಿಸುತ್ತಾನೆ. ಹೃತ್ಕಮಲಕರ್ಣಿಕಾಗತ ಮೂಲೇಶ, ಅಗ್ರೇಶ, ಪ್ರಾದೇಶಗಳೆಂಬ ಭಗವನ್ಮೂರ್ತಿ ತ್ರಯಗಳೇ ಬಿಂಬರೂಪವು. ಅಂತಹ ಬಿಂಬನ ಹೃತ್ಕಂಜದ ಎಂಟು ದಳಗಳಲ್ಲಿ ಭಗವದ್ರೂಪಗಳು, ದಿಕ್ಪಾಲಕರ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ಪಕ್ಷಿನೋಟದಿಂದ ಕೊಡಲಾಗಿದೆ.

| ಕ್ರಮ ಸಂಖ್ಯೆ | ದಿಕ್ಕು | ಪಾರ್ಶ್ವ | ದಿಕ್ಪಾಲಕರು | ಭಗವದ್ರೂಪ |
|---|---|---|---|---|
| ೧ | ಪೂರ್ವ | ಮುಂಭಾಗ | ಇಂದ್ರ | ಉಪೇಂದ್ರ |
| ೨ | ಆಗ್ನೇಯ | ಪೂರ್ವ–ದಕ್ಷಿಣ ಗತಮೂಲೆ, | ಅಗ್ನಿ | ಪರಶುರಾಮ |
| ೩ | ದಕ್ಷಿಣ | ಬಲಭಾಗ | ಯಮ | ಶ್ರೀರಾಮ |
| ೪ | ನೈರುತ್ಯ | ದಕ್ಷಿಣ–ಪಶ್ಚಿಮ ಗತಮೂಲೆ, | ನಿರಋುತಿ | ಜನಾರ್ದನ |
| ೫ | ಪಶ್ಚಿಮ | ಹಿಂಭಾಗ | ವರುಣ | ಮಾತ್ಸ್ಯ |
| ೬ | ವಾಯುವ್ಯ | ಪಶ್ಚಿಮ–ಉತ್ತರ ಗತಮೂಲೆ. | ಪ್ರವಹವಾಯು | ಹಯವದನ |
| ೭ | ಉತ್ತರ | ಎಡಭಾಗ | ಕುಬೇರ | ಕಪಿಲ |
| ೮ | ಈಶಾನ್ಯ | ಉತ್ತರ–ಪೂರ್ವ ಗತಮೂಲೆ, | ರುದ್ರದೇವರು | ನರಸಿಂಹ |

# ಪದ್ಯ (೨೨)

**ಸುರಪನಾಲಯಕೈದಿದೊಡೆ ಮನ ।**
**ವೆರಗುವುದು ಸತ್ಪುಣ್ಯಮಾರ್ಗದಿ ।**
**ಬರಲು ವಹ್ನಿಯ ಮನೆಗೆ ನಿದ್ರಾಲಸ್ಯ ಹಸಿತೃಷೆಯು ॥**
**ತರಣಿತನಯ ನಿಕೇತನದಿ ಸಂ ।**
**ಭರಿತ ಕೋಪಾಟೋಪ ತೋರುವು ।**
**ದರವಿದೂರನು ನಿರಋತಿಯಲಿ ಬರೆ ಪಾಪಗಳ ಮಾಳ್ಪ ॥೨೨॥**

**ಅವತರಣಿಕೆ-**

ಹಿಂದಿನ ಪದ್ಯದಲ್ಲಿ ಬಿಂಬಮೂರ್ತಿ ಹಂಸನಾಮಕ ಶ್ರೀ ಪರಮಾತ್ಮನು ಉಪೇಂದ್ರಾದಿ ನರಸಿಂಹ ಪರ್ಯಂತ ಅಷ್ಟ ಭಗವದ್ರೂಪಗಳಿಂದ ಹೃತ್ಪದ್ಮದ ಅಷ್ಟದಳಗಳಲ್ಲಿ ಸಂಚರಿಸುತ್ತಾ, ಆಯಾಯಾ ದಳಗತ ದಿಕ್ಪತಿಗಳಿಂದ ಉಪಾಸ್ಯನಾಗಿದ್ದಾನೆಂದು ತಿಳಿಸಿ, ಈಗ ಪೂರ್ವ, ಆಗ್ನೇಯ, ದಕ್ಷಿಣ ಮತ್ತು ನೈರುತ್ಯ ಈ ನಾಲ್ಕು ದಿಕ್ಕಿನಲ್ಲಿರುವ ದಳಗತ ಭಗವದ್ರೂಪಗಳ ವ್ಯಾಪಾರ ವಿಶೇಷಗಳನ್ನು ತಿಳಿಸುತ್ತಾರೆ. **ಸುರಪನಾಲಯಕೈದಿದೊಡೆ**-ಎಂಬ ಪ್ರಸಕ್ತ ಸಂಧಿಗತ ೨೨ ನೆಯ ಈ ಪದ್ಯದಿಂದ, ॥೨೨॥

**ಪ್ರತಿಪದಾರ್ಥ-**

**ಸುರಪನಾಲಯಕೆ** = ದೇವತೆಗಳ ಅಧಿಪತಿಯಾದ ಇಂದ್ರದೇವರು ಇರುವ ಪೂರ್ವದಿಕ್ಕಿನ ದಳದಲ್ಲಿ (ಸುರಪ—ದೇವತೆಗಳ, ಅರಸು-ಇಂದ್ರ ದೇವರು, ಆಲಯ- ಅವರ ನಿವಾಸಸ್ಥಾನ- ಪೂರ್ವದಿಶೆ) **ಐದಿದೊಡೆ**= ಮೂಲೇಶನಾದ ಬಿಂಬನು ಪ್ರವೇಶಿಸಿದಾಗ, **ಮನ** = ಜೀವರ ಮನಸ್ಸು

**ಸತ್ಪುಣ್ಯಮಾರ್ಗದಿ**=ಸಮೀಚೀನವಾದ ಪುಣ್ಯ ಕರ್ಮಾನುಷ್ಠಾನಗಳ ಹಾದಿಯಲ್ಲಿ, **ಎರಗುವುದು** = ಪ್ರೇರಿಸಲ್ಪಡುವುದು. ಅಂದರೆ ಇಂದ್ರದೇವರಿಂದ ಉಪಾಸ್ಯನಾದ ಉಪೇಂದ್ರನಾಮಕನು ಪೂರ್ವದಳಕ್ಕೆ ಬಂದಾಗ ಜೀವರ ಮನಸ್ಸನ್ನು ಪುಣ್ಯ ಕಾರ್ಯಾಚರಣೆಯಲ್ಲಿ ಪ್ರೇರಿಸುವನು. **ವಹ್ನಿಯು** = ಅಗ್ನಿಯ, **ಮನೆಗೆ** = ನಿವಾಸಸ್ಥಾನವಾದ ಆಗ್ನೇಯ ದಿಕ್ಕಿನಲ್ಲಿರುವ ದಳಕ್ಕೆ, **ಬರಲು**=ಬಿಂಬನು ಬಂದಾಗ, **ನಿದ್ರೆ** = ನಿದ್ರಾವಸ್ಥೆ, **ಆಲಸ್ಯ**=ಸೋಮಾರಿತನ, **ಹಸಿ** = ಹಸಿವೆ, **ತೃಷೆಯು** = ನೀರಡಿಕೆ ಉಂಟಾಗುವುವು. ಅಂದರೆ, ಪರಶುನಾಮಕ ಬಿಂಬನು ಅಗ್ನಿಯ ದಳವಾದ ಆಗ್ನೇಯದಿಕ್ಕಿಗೆ ಬಂದಾಗ ಜೀವರಿಗೆ ನಿದ್ರೆ-ಸೋಮಾರಿತನ- ಕ್ಷುತ್ಪಿಪಾಸ ಉಂಟಾಗುವುವು. **ತರಣಿತನಯು**=ಸೂರ್ಯಪುತ್ರನಾದ ಯಮದೇವರ, **ನಿಕೇತನದಿ**=ಆವಾಸಸ್ಥಾನವಾದ ದಕ್ಷಿಣ ದಿಕ್ಕಿನ ದಳಕ್ಕೆ ಬಂದಾಗ, **ಸಂಭರಿತ**=ಭಂದಾಗಿ (ತುಂಬಿದ), **ಕೋಪಾಟೋಪ**=ಕ್ರೋಧ, ಆರ್ಭಟ ಇತ್ಯಾದಿ, **ತೋರುವುದು**=ಕಂಡುಬರುವುದು, ಅಂದರೆ, ಶ್ರೀ ರಾಮನಾಮಕ ಬಿಂಬನು ಯಮದೇವರ ದಿಕ್ಕಾದ ದಕ್ಷಿಣಗತ ದಳಕ್ಕೆ ಬಂದಾಗ, ಜೀವನಿಗೆ ಎದ್ದು ತೋರುವ ಕೋಪ, ಆರ್ಭಟಗಳನ್ನು ಪ್ರೇರಿಸುತ್ತಾನೆ. **ಅರವಿದೂರನು** = ದೋಷದೂರನಾದ ಮೂಲೇಶನು, **ನಿರಋತಿಯಾಲಿ** = ನಿರಋತಿಯ ಆವಾಸಸ್ಥಾನವಾದ ನೈರುತ್ಯ ದಿಕ್ಕಿನ ದಳದಲ್ಲಿ, **ಬರೆ**=ಬಂದಾಗ, **ಪಾಪಗಳ**=ಪಾಪ ಕಾರ್ಯಗಳನ್ನು, **ಮಾಳ್ಪ**=ಜೀವನಿಂದ ಮಾಡಿಸುವನು. ಅಂದರೆ, ಜನಾರ್ದನರೂಪೀ ಶ್ರೀ ಪರಮಾತ್ಮನು ನೈರುತ್ಯ ದಳವನ್ನು ಪ್ರವೇಶಿಸಿದಾಗ, ಜೀವರು ಭಗವತ್ಪ್ರೇರಣೆಯಿಂದ ಪಾಪಕಾರ್ಯಗಳನ್ನು ಮಾಡುವರು. ॥೨೨॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಮೂಲೇಶನ ಅಷ್ಟದಳ ಸಂಚಾರದಿಂದ ಜೀವರಿಗೆ ಆಗತಕ್ಕ ಮನೋ ವಿಕಾರವನ್ನು ಹೇಳತಾರೆ.

ಮೂಲೇಶನು ಪೂರ್ವದಳವಾದ ಇಂದ್ರದೇವರ ಮನಿಯಲ್ಲಿ ಬಂದರೆ, ಸಮೀಚೀನವಾದ ಪುಣ್ಯಮಾರ್ಗದಲ್ಲಿ ಜೀವನ ಮನಸ್ಸು ಎರಗುವುದು (ಪ್ರೇರಿ ಸೋವನಾಗತಾನೆ). ಈ ಮೂಲೇಶ ಆಗ್ನೇಯದಿಕ್ಕು ದಳವಾದ ಅಗ್ನಿದೇವರ ಮನಿಗೆ ಬಂದರೆ, ಜೀವಗೆ ನಿದ್ರೆಯೇನು ಪಾಲುಮಾರಿಕೆಯೇನು ಕ್ಷುತ್ಪಿಪಾಸೆ ಉಂಟಾಗತದೆ. ಸೂರ್ಯಪುತ್ರನಾದ ಯಮದೇವರ ಮನಿ ಎಂದರೆ ದಕ್ಷಿಣ ದಿಕ್ಕು ದಳದಲ್ಲಿ ಮೂಲೇಶ ಬಂದರೆ. ಜೀವಗೆ ಛಂದಾಗಿ ಕೋಪವೇನು ಕೇವಲ ಆರ್ಭಟವೇನು ಇದರನ್ನ ಉಂಟುಮಾಡತಾನೆ. ದೋಷದೂರನಾದ ಮೂಲೇಶನು ನೈಋತ್ಯದಿಕ್ಕಿನ ದಳದಲ್ಲಿ ಬಂದರೆ ಜೀವನಾದವ ಮೂಲೇಶ ನಿಂದ ನಾನಾವಿಧವಾದ ಪಾಪಕರ್ಮಗಳ ಮಾಡೋವನಾಗತಾನೆ. ॥೨೨॥

## (೨) ಭಾವಪ್ರಕಾಶಿಕೆ ವ್ಯಾಖ್ಯಾನ

೨೦ ನೆಯ ಪದ್ಯದಲ್ಲಿ ಹಂಸರೂಪೀ ಶ್ರೀ ಪರಮಾತ್ಮನು ಎಂಟು ದಳ ಗಳಲ್ಲಿರುವ ದಿಕ್ಪಾಲಕರಿಂದ ಸೇವಿತನಾಗಿ, ಕುಂಬಾರನ ಚಕ್ರದಂತೆ ಎಂಟು ದಳಗಳಲ್ಲಿ ಸುತ್ತುತ್ತಿರುವನೆಂದು ಹೇಳಿದ್ದರು. ಈಗ ಮೂರು ಪದ್ಯಗಳಿಂದ ಯಾವ ಯಾವ ದಳಗಳಲ್ಲಿದ್ದಾಗ, ಯಾವ ಯಾವ ಕಾರ್ಯಗಳನ್ನು ಮಾಡಿಸುವ ನೆಂಬುದನ್ನು ಹೇಳುತ್ತಾರೆ—

ಇಂದ್ರನಿರುವ ಪೂರ್ವದಳದಲ್ಲಿ ಪರಮಾತ್ಮನು ಬಂದರೆ, ಉತ್ತಮ ವಾದ ಪುಣ್ಯ ಮಾರ್ಗದಲ್ಲಿ ಮನಸ್ಸು ಪ್ರವೇಶಿಸುವುದು. ಅಗ್ನಿ ಇರುವ

ದಳಕ್ಕೆ ಬಂದರೆ. ಜೀವನಿಗೆ ನಿದ್ರಾ, ಪಾಲಮಾರಿಕೆ, ಹಸಿವು, ಬಾಯಾರಿಕೆ ಮೊದಲಾದವು ಸಂಭವಿಸುವುವು. ಯಮನಿರುವ ದಕ್ಷಿಣದಳಕ್ಕೆ ಬರಲು, ಪ್ರಬಲವಾದ ಕೋಪದ ಆರ್ಭಟವು ಸಂಭವಿಸುವುದು. ದೋಷದೂರನಾದ ಶ್ರೀಹರಿಯು ನೈಋತಿಯ ದಳಕ್ಕೆ ಬರಲು, ಜೀವನಿಗೆ ಪಾಪ ಮಾಡುವ ಬುದ್ಧಿಯು ಹುಟ್ಟುವುದು. ॥೨೨॥

**(೩) ಭಾವದರ್ಪಣ ಟೀಕಾ – ವ್ಯಾಖ್ಯಾನವನ್ನು ಪ್ರಸಕ್ತ ಪದ್ಯಕ್ಕೆ ಕೊಟ್ಟಿಲ್ಲ.** ಪದ್ಯ ಸೂಚನೆ ಮಾತ್ರ ಇದೆ.

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)**

ಹರೇಃ ಚರಣಕ್ರಮೇಣ ಅಷ್ಟದಲೇಷು ವೈಚಿತ್ರ್ಯಮಾಹ- "ಸುರಪ"- ಇತಿ ॥ ಪೂರ್ವಸ್ಯಾಂ ಪುಣ್ಯಬುದ್ಧಿಃ ಸ್ಯಾತ್ ಆಗ್ನೇಯ್ಯಾಂ ಕ್ಷುತ್ತೃಡಾದಿಕಂ ॥ ಯಾಮ್ಯೇ ದಲೇ ಕ್ರೂರಬುದ್ಧಿಃ ನೈಋತ್ಯಾಂ ಪಾಪ ಬುದ್ಧಿಕೃತ್ ॥ ಇತಿ ಹೃದಯ ಪದ್ಮ ವಿಚಾರೇ. ॥೨೨॥

**ಕನ್ನಡಾರ್ಥ–**

ಹೃದಯಾಷ್ಟದಳಕಮಲದಲ್ಲಿ ಹಂಸರೂಪೀ ಶ್ರೀಹರಿಯ ಸಂಚಾರದಿಂದ ಜೀವನಿಗೆ ಸಂಭವಿಸುವ ನಾನಾ ಪ್ರಕಾರವಾದ ಮನೋವೃತ್ತಿಗಳ ವಿಷಯವನ್ನು ಹೇಳುತ್ತಾರೆ—"ಸುರಪನಾಲಯ ಕೈದಿದರೆ"-ಎಂಬ ಪದ್ಯದಿಂದ.

ಶ್ರೀ ಹಂಸನು ಪೂರ್ವದಲ್ಲಿಯ ದಲಕ್ಕೆ ಬಂದರೆ, ಮನಸ್ಸು ಪುಣ್ಯದಲ್ಲಿ ಪ್ರವರ್ತಿತವಾಗುವುದು. ಆಗ್ನೇಯ ದಿಕ್ಕಿನ ದಲದಲ್ಲಿ ಸಂಚರಿಸುತ್ತಿರುವಾಗ, ಹಸಿವೆ, ನೀರಡಿಕೆ ಇತ್ಯಾದಿ ಉಂಟಾಗುವುವು. ದಕ್ಷಿಣದಳಕ್ಕೆ ಬಂದರೆ, ಕ್ರೂರಬುದ್ಧಿ, ಕೋಪ ತಾಪಗಳು ಸಂಭವಿಸುವುವು. ನೈರುತ್ಯ ದಲದಲ್ಲಿ ಪ್ರವೇಶಿಸಿದರೆ, ಪಾಪ ಕಾರ್ಯಗಳಲ್ಲಿ ತೊಡಗುವ ಮನೋವೃತ್ತಿ ಪ್ರೇರಿತವಾಗುವುದು."

ಈ ವಿವರಗಳು **ಹೃದಯಪದ್ಮ ವಿಚಾರದಲ್ಲಿ** ಉಕ್ತವಾಗಿವೆ. ॥೨೨॥

**(ಆ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ**

ಮೇಲೆ ಹೇಳಿದ ಅಷ್ಟದಳ ಕಮಲದಲ್ಲಿದ್ದು ಸುತ್ತಿ ತಿರುಗುವ ಹಂಸ ರೂಪವು, ಸುರಪನಾಲಯವೆಂಬ ಇಂದ್ರ ದಿಕ್ಕಿಗೆ ಬಂದರೆ, ಸತ್ಪುಣ್ಯ ಮಾರ್ಗದಲ್ಲಿ ಮನಸ್ಸು ಹೊಂದುವುದು. ವಹ್ನಿ ಎಂಬ ಅಗ್ನಿಯ ದಿಕ್ಕಿಗೆ ಬಂದರೆ, ನಿದ್ರಾ ಆಲಸ್ಯ ಹಸಿವೆ ಬಾಯಾರಿಕೆ ಸಹಾ ಉಂಟಾಗುವುದು. ತರಣಿತನಯನೆಂಬ ಯಮದಿಕ್ಕಿನಲ್ಲಿ ಸಂಪೂರ್ಣ ಕೋಪಾಟೋಪ ತೋರುವುದು. ದೋಷದೂರ ಹಂಸನು ನಿರಋತಿ ದಿಕ್ಕಿನಲ್ಲಿದ್ದರೆ ಪಾಪ ಕಾರ್ಯಗಳು ನಡೆಯುವುವು. ॥೨೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಹಂಸನಾಮಕ ಶ್ರೀ ಪರಮಾತ್ಮನು ಬಿಂಬನೆಂದೆನಿಸಿ, ಬ್ರಹ್ಮನಾಡಿಯ ಮಧ್ಯದಲ್ಲಿರುವ ಹೃತ್ಕೀಲಾಲಜದ ಅಷ್ಟದಳಗಳಲ್ಲಿ ಸಂಚರಿಸುತ್ತಿರುವಾಗ, ಆಯಾಯಾ ದಳಗತ ದಿಕ್ಪಾಲಕರಿಂದ ಉಪೇಂದ್ರಾದಿ ನರಸಿಂಹ ಪರ್ಯಂತ ಅಷ್ಟ ಭಗವದ್ರೂಪಗಳಿಂದ ಸಂಸೇವ್ಯಮಾನನಾಗಿ. ಉಪಾಸ್ಯನಾಗಿದ್ದಾನೆಂದು ತಿಳಿಸಿದರು. ಪ್ರಸಕ್ತ ೨೨ ನೆಯ ಪದ್ಯದಿಂದ ಅಷ್ಟದಳಯುಕ್ತ ಹೃತ್ಪದ್ಮದ ಪೂರ್ವ, ಆಗ್ನೇಯ, ದಕ್ಷಿಣ ಮತ್ತು ನೈರುತ್ಯದಿಕ್ಕುಗಳಲ್ಲಿರುವ ದಳಗಳಲ್ಲಿ ಸಂಚರಿಸುವಾಗ, ಆಯಾಯಾ ದಳಗತ ದಿಕ್ಪಾಲಕರ ದ್ವಾರಾ, ಜೀವರಿಗೆ ಪ್ರೇರಿಸುವ ಮನೋವೃತ್ತಿಗಳನ್ನು ತಿಳಿಸುತ್ತಾರೆ.

೧. ಹೃತ್ಪದ್ಮದ ಪೂರ್ವದಿಕ್ಕಿನಲ್ಲಿರುವ ದಳದಲ್ಲಿ ಪೂರ್ವ ದಿಕ್ಕಿನ ಅಧಿಪತಿ **ಇಂದ್ರದೇವರು** ಇದ್ದಾರೆ. ಇಂದ್ರನಿಂದ ಉಪಾಸ್ಯನಾದ **ಉಪೇಂದ್ರ** ನಾಮಕ ಬಿಂಬಮೂರ್ತಿಯು ಪೂರ್ವದಿಕ್ಕಿನ ದಳದಲ್ಲಿ ಪ್ರವೇಶಿಸಿದಾಗ ಜೀವನ ಮನಸ್ಸು ಪುಣ್ಯ ಕಾರ್ಯಗಳನ್ನು ಮಾಡುವುದರಲ್ಲಿ ಪ್ರೇರಿತವಾಗು

ವುದು. ಇಂದ್ರನು ಮನೋಭಿಮಾನಿಯಾದ ತತ್ತ್ವಾಭಿಮಾನಿಯು. ಮನಸ್ಸಿಗೆ ಪ್ರೇರಕನು. ನೂರು ಅಶ್ವಮೇಧಯಾಗಗಳನ್ನು ವಿಧ್ಯುಕ್ತವಾಗಿ ಮಾಡಿದನಂತರ ಭಗವದನುಗ್ರಹದಿಂದ ಇಂದ್ರಪದವಿ ಪ್ರಾಪ್ತಿಯಾಗುವುದು. ಮನಸ್ಸನ್ನು ಸತ್ಪುಣ್ಯಕರ್ಮಾನುಷ್ಠಾನದಲ್ಲಿ ತೊಡಗಿಸಬೇಕಾದರೆ ಇಂದ್ರದೇವರ ವ್ಯಾಪಾರದಿಂದಲೇ, ಹೀಗೆ ಉಪೇಂದ್ರನಾಮಕ ಶ್ರೀ ಪರಮಾತ್ಮನು ಇಂದ್ರನ ದ್ವಾರಾ, ಜೀವನಿಗೆ ಸತ್ಪುಣ್ಯ ಕಾರ್ಯಗಳಲ್ಲಿ ಪ್ರವರ್ತಿತವಾಗುವಂತೆ ಪ್ರೇರಿಸುವನು. ಆಗ ಜೀವನು, ದಾನ, ಧರ್ಮ, ಗುರು ಹಿರಿಯರ ಸೇವಾ, ಅತಿಥಿಸತ್ಕಾರ ಇತ್ಯಾದಿ ಸತ್ಕರ್ಮಗಳಲ್ಲಿ ತೊಡಗುವನು.

೨. **ಅಗ್ನಿಯು** ಆಗ್ನೇಯ ದಿಕ್ಕಿಗೆ ಅಧಿಪತಿಯು. ಬಿಂಬನು ಹೃತ್ಕಮಲದ ಆಗ್ನೇಯ ದಿಕ್ಕಿನ ದಳದಲ್ಲಿ ಸಂಚರಿಸುವಾಗ, ಅಲ್ಲಿಯ ದಿಕ್ಪಾಲಕನಾದ ಅಗ್ನಿಯಿಂದ ಉಪಾಸ್ಯಮಾನನಾಗುವನು. ಅಗ್ನಿಯಿಂದ ಸಂಸೇವ್ಯಮಾನನಾದ **ಪರಶುರಾಮ ರೂಪೀ** ಶ್ರೀ ಪರಮಾತ್ಮನು ಜೀವರಿಗೆ ನಿದ್ರೆ, ಆಲಸ್ಯ, ಹಸಿವು, ನೀರಡಿಕೆ ಇತ್ಯಾದಿ ಸ್ಥಿತಿಗಳಿಗೆ ಪ್ರೇರಕನಾಗುವನು ನಿದ್ರೆಯು ತೇಜಃ ತತ್ತ್ವದ ಕಾರ್ಯವು. ಅಂತೆಯೇ ಸೋಮಾರಿತನ ಅಥವಾ ಆಲಸ್ಯಸ್ಥಿತಿಯು ಇದೇ ಗುಣದಿಂದ ಪ್ರವರ್ತಿತವಾಗುವುದು. ಜಠರಾಗ್ನಿಯ ಪ್ರಖರತೆಯಿಂದಾಗಿ ಜೀವನಿಗೆ ಹಸಿವು ಉಂಟಾಗುವುದು. ತಾಪದ ದೆಸೆಯಿಂದ ನೀರಡಿಕೆಯಾಗುವುದು. ಹೀಗೆ ನಿದ್ರಾ, ಆಲಸ್ಯ ಕ್ಷುತ್ ಮತ್ತು ಪಿಪಾಸೆಗಳಿಗೆ ಕಾರಣವಾದ ತೇಜಃ ತತ್ತ್ವದ ಅಭಿಮಾನಿ ಅಗ್ನಿಯು. ಇಂತು ಅಗ್ನ್ಯಂತರ್ಗತ ಹರಿಣೇಪತಿ ಶ್ರೀ ಪರಶುರಾಮರೂಪೀ ಬಿಂಬನು ಆಗ್ನೇಯ ದಳಕ್ಕೆ ಬಂದಾಗ, ಜೀವರಿಗೆ ನಿದ್ರಾಲಸ್ಯ ಕ್ಷುತ್ಪಿಪಾಸೆಗಳು ಉಂಟಾಗುವುವು.

೩. ಪ್ರದಕ್ಷಿಣಾಕಾರದಲ್ಲಿ ಮುಂದಿನ ದಳವು ದಕ್ಷಿಣ ದಿಕ್ಕಿನಲ್ಲಿರುವ ದಳವು. **ಯಮಧರ್ಮನು** ದಕ್ಷಿಣ ದಿಕ್ಪಾಲಕ. ಆ ದಳವನ್ನು ಬಿಂಬನು ಪ್ರವೇಶಿಸುವನು. ಆಗ ಯಮಧರ್ಮನಿಂದ ಉಪಾಸ್ಯನಾದ **ಶ್ರೀರಾಮ** ನಾಮಕ ಶ್ರೀ ಪರಮಾತ್ಮನು, ಜೀವರಿಗೆ ಪ್ರಬಲವಾದ ಕೋಪ, ಆರ್ಭಟ

ಗಳು ಉಂಟಾಗುವುವು, ಯಮಧರ್ಮನು ಸೂರ್ಯಪುತ್ರನು. ಈ ಕಾರಣ ದಿಂದ, **ತರಣಿತನಯ ನಿಕೇತನ**—ಎಂದು ಶಬ್ದ ಪ್ರಯೋಗ ಮಾಡಿದ್ದಾರೆ ದಾಸರಾಯರು. ಯಮಧರ್ಮನು ಧರ್ಮಾಧರ್ಮಗಳನ್ನು ನಿಶ್ಚಯಿಸಿ, ಅದರಂತೆ ಭೋಗ ಅಥವಾ ನರಕದಲ್ಲಿ ಶಿಕ್ಷೆಗಳನ್ನು ಕೊಡುವ ಧರ್ಮಾಧಿಕಾರಿ ಹಾಗೂ ದಂಡಾಧಿಕಾರಿ. ಅದರಂತೆ ಕೋಪೋದ್ರೇಕ, ಅದರಿಂದಾಗೆ ಆರ್ಭಟ ಇತ್ಯಾದಿ ಮನೋವೃತ್ತಿಗಳು ಆ ದಳಗತ ಬಿಂಬನಿಂದ ಯಮಧರ್ಮನ ದ್ವಾರಾ ಜೀವನಿಗೆ ಪ್ರಕಟವಾಗುವುವು.

೪. ಬಿಂಬರೂಪೀ ಶ್ರೀಹರಿಯು ನೈರುತ್ಯ ದಿಕ್ಕಿನ ದಳವನ್ನು ಪ್ರವೇಶಿಸಿದಾಗ, ಅಲ್ಲಿ ನೈರುತ್ಯ ದಿಕ್ಕಿನ ಅಧಿಪತಿ **ನಿರಋತಿ** ಯಿಂದ ಸಂಸೇವ್ಯ ಮಾನನಾಗುವನು. ನಿರಋತಿಯ ಉಪಾಸ್ಯ ಮೂರ್ತಿಯಾದ **ಜನಾರ್ದನ** ರೂಪೀ ಬಿಂಬನು ಜೀವರಿಗೆ ಪಾಪ ಕಾರ್ಯಗಳಲ್ಲಿ ಮನಸ್ಸು ತೊಡಗುವಂತೆ ಪ್ರೇರಿಸುವನು. ಜನಾರ್ದನನು ಸರ್ವದೋಷ ವಿದೂರನು (ಅರವಿ ದೂರನು), ಪಾಪ ಕಾರ್ಯಗಳನ್ನು ಜೀವರಿಂದ ಮಾಡಿಸಿದ್ದಾಗ್ಯೂ, ತತ್ಸಂಬಂಧವಾದ ಕರ್ಮಲೇಪ ಆ ಅರವಿದೂರನಾದ ಜನಾರ್ದನನಿಗಿಲ್ಲ, ನಿರಋತಿಯು ದೈತ್ಯ ಕುಲಸಂಜಾತನು. (ಪ್ರಹ್ಲಾದ, ವಿಭೀಷಣ, ಬಲಿ ಇತ್ಯಾದಿ ಪುಣ್ಯಪುರುಷ ರಂತೆ), ಆದರೆ ದಿಕ್ಪಾಲಕನಾದ ನಿರಋತಿಯು ದೇವತಾವರ್ಗಕ್ಕೆ ಸೇರಿದ ಮುಕ್ತಿಯೋಗ್ಯ ಚೇತನನು.

ಇಂತು ಹೃತ್ಕಂಜದ ನಾಲ್ಕೂ ದಳಗಳಲ್ಲಿ ಬಿಂಬನು ಸಂಚಾರ ಮಾಡು ತ್ತಿರುವಾಗ, ಆಯಾಯಾ ದಿಕ್ಪಾಲಕರ ಕಾರ್ಯವ್ಯಾಪ್ತಿಗನುಗುಣವಾಗಿ. ಜೀವರಿಗೆ ವಿವಿಧ ಮನೋ ವ್ಯಾಪಾರಗಳನ್ನು ಮಾಡಿ ಮಾಡಿಸುತ್ತಿರುವನು. ॥೨೨॥

## ಪದ್ಯ (೨೩)

**ವರುಣನಲಿ ವಿನೋದ ಹಾಸ್ಯವು ।**
**ಮರುತನೊಳು ಗಮನಾಗಮನ ಹಿಮ ।**
**ಕರ ಧನಾಧಿಪರಲ್ಲಿ ಧರ್ಮದ ಬುದ್ಧಿ ಜನಿಸುವುದು ॥**
**ಹರನ ಮಂದಿರದಲ್ಲಿ ಗೋ ಧನ ।**
**ಧರಣಿ ಕನ್ಯಾದಾನಗಳು ಒಂ ।**
**ದರಘಳಿಗೆ ತಡಿಯದಲೆ ಕೊಡುತಿಹ ಚಿತ್ತಪುಟ್ಟುವುದು ॥೨೩॥**

**ಅವತರಣಿಕೆ**

ಹಿಂದಿನ ಪದ್ಯದಲ್ಲಿ ಬಿಂಬರೂಪೀ ಹಂಸನಾಮಕ ಶ್ರೀಪರಮಾತ್ಮನು ಪೂರ್ವ ಆಗ್ನೇಯ, ದಕ್ಷಿಣ ಮತ್ತು ನೈರುತ್ಯ ದಿಕ್ಕಿನಲ್ಲಿರುವ ಹೃತ್ಕಮಲದ ನಾಲ್ಕುದಿಕ್ಕುಗಳಲ್ಲಿ ಸಂಚರಿಸುತ್ತಿರುವಾಗ, ಜೀವರಿಗೆ ಪ್ರೇರಿಸುವ ಮನೋವೃತ್ತಿಗಳನ್ನು ತಿಳಿಸಿ, **ವರುಣನಲಿ**–ಎಂಬ ಪ್ರಸಕ್ತ ಸಂಧಿಗತ ೨೩ನೆಯ ಈ ಪದ್ಯದಿಂದ ಉಳಿದ ಪಶ್ಚಿಮ, ವಾಯವ್ಯ, ಉತ್ತರ ಮತ್ತು ಈಶಾನ್ಯ ದಿಗ್ಗತದಳಗಳಲ್ಲಿ ಸಂಚರಿಸುತ್ತಿರುವಾಗ. ಜೀವರಿಗೆ ಉಂಟಾಗುವ ಮನೋವೃತ್ತಿಗಳ ವಿಚಾರವನ್ನು ತಿಳಿಸುತ್ತಾರೆ. ॥೨೩॥

**ಪ್ರತಿಪದಾರ್ಥ**

**ವರುಣನಲಿ** ಶ್ರೀಪಶ್ಚಿಮದಿಕ್ಕಿನಲ್ಲಿರುವ ಹೃತ್ಪದ್ಮದ ದಳದಲ್ಲಿ ಮೂಲೇಶನು ಬಂದಾಗ, (ಪಶ್ಚಿಮವು ವರುಣನದಿಕ್ಕು. ಈ ದಿಕ್ಕಿಗೆ ವರುಣನು ದಿಕ್ಪಾಲಕನು) **ವಿನೋದ ಹಾಸ್ಯವು**= ವಿನೋದವಾದ ಮಾತುಕಥೆಗಳು. ಹಾಸ್ಯ, ಕುಚೋದ್ಯ, ಪರಿಹಾಸ ಇತ್ಯಾದಿ ಮನೋವೃತ್ತಿಗಳು ಜೀವರಿಗೆ ಉಂಟಾಗುವುವು. ಅಂದರೆ ವರುಣನಿಂದ ಉಪಾಸ್ಯನಾದ ಶ್ರೀ ಮತ್ಸ್ಯರೂಪೀ

ಶ್ರೀಪರಮಾತ್ಮನು ಪಶ್ಚಿಮದಳಕ್ಕೆ ಬಂದಾಗ ವಿನೋದ ಹಾಸ್ಯಗಳನ್ನು ಪ್ರೇರಿಸುವನು, **ಮರುತನೊಳು**＝ಪ್ರವಹವಾಯುವಿನ ಆಲಯವಾದ ವಾಯವ್ಯ ದಳಕ್ಕೆ ಬಂದಾಗ, **ಗಮನಾಗಮನ**＝ಹೋಗುವುದು-ಬರುವುದು ಇತ್ಯಾದಿ ಸಂಚಾರಗತಿಯನ್ನುಂಟುಮಾಡುವನು. ಅಂದರೆ ಪ್ರವಹವಾಯುವಿನಿಂದ ಉಪಾಸ್ಯನಾದ ಹಯವದನ ರೂಪೀ ಮೂಲೇಶನಿಂದ ವಾಯುವ್ಯದಳ ಪ್ರವೇಶದಿಂದ ಜೀವರಿಗೆ ಗಮನಾಗಮನ ಬುದ್ಧಿ ಜನಿಸುವುದು. **ಹಿಮಕರ ಧನಾಧಿಪರಲ್ಲಿ**＝ಚಂದ್ರ ಮತ್ತು ಕುಬೇರ ಇವರಿಬ್ಬರೂ ದಿಕ್ಪಾಲಕರಾದ ಉತ್ತರ ದಿಕ್ಕಿನ ದಳದಲ್ಲಿ ಬಂದಾಗ (ಹಿಮಕರ- ತನ್ನ ತಂಪಾದ ಕಿರಣಗಳಿಂದ ಹಿಮವನ್ನುಂಟುಮಾಡುವುದರಿಂದ ಚಂದ್ರನಿಗೆ ಈ ಹೆಸರು. ಧನಾಧಿಪ-ಸಂಪತ್ತಿಗೆ ಒಡೆಯನಾದ್ದರಿಂದ ಕುಬೇರನು ಧನಾಧಿಪನೆನಿಸುತ್ತಾನೆ) **ಧರ್ಮದ ಬುದ್ಧಿ**＝ದಾನ ಧರ್ಮಾದಿಗಳನ್ನು ಮಾಡಬೇಕೆಂಬ ಬುದ್ಧಿಯು, **ಜನಿಸುವುದು**＝ಮನಸ್ಸಿನಲ್ಲಿ ಮೂಡುವುದು. **ಹರನಮಂದಿರದಲ್ಲಿ**＝ಮಹರುದ್ರದೇವರ ಆಲಯವಾದ ಈಶಾನ್ಯದಿಕ್ಕಿನಲ್ಲಿರುವ ದಳಕ್ಕೆ ಬಂದಾಗ, **ಗೋ ಧನ ಧರಣಿ ಕನ್ಯಾದಾನಗಳು**＝ಗೋದಾನ, ದ್ರವ್ಯದಾನ, ಭೂದಾನ, ಕನ್ಯಾದಾನ ಇತ್ಯಾದಿ ನಾನಾ ಪ್ರಕಾರವಾದ ದಾನಗಳನ್ನು, **ಒಂದರಘಳಿಗೆತಡಿಯದೆಲೆ**＝ಅರ್ಧಘಳಿಗೆಯಷ್ಟು ತಡೆಯದೆ. ಅಂದರೆ ಸ್ವಲ್ಪವೂ ಸಾವಕಾಶಮಾಡದಂತೆ, **ಕೊಡುತಿಹ**＝ದಾನವನ್ನು ಕೊಡುವ ಪ್ರವೃತ್ತಿ ಪೂರ್ವಕವಾದ, **ಚಿತ್ತ ಪುಟ್ಟುವುದು**＝ಸಂಕಲ್ಪ (ಇಚ್ಛಾಶಕ್ತಿಯು) ಉಂಟಾಗುವುದು. ॥೨೩॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ದಳ ಸಂಚಾರವನ್ನೇ ಹೇಳುತಾರೆ.

ಮೂಲೇಶನ, ವರುಣದೇವನ ಮನಿಯಾದ ಪಶ್ಚಿಮದಿಕ್ಕು ದಳಕ್ಕೆ

ಬಂದರೆ, ವಿನೋದರೂಪವಾದ ಮಾತುಗಳ ಆಡೋಣ, ಹಾಸ್ಯ ಪರಿಹಾಸಾದಿಗಳು ಮಾಡಸತಾನೆ. ವಾಯುವ್ಯದಿಕ್ಕಿನಲ್ಲಿ ಮೂಲೇಶ ಬರಲು ಗಮನಾಗಮನ ಬುದ್ಧಿಗಳು ಉಂಟು ಮಾಡತಾನೆ. ಚಂದ್ರ ಕುಬೇರ ಇವರ ಅಭಿಮನ್ಯವಾದ ದಿಕ್ಕು ಉತ್ತರದಿಕ್ಕು. ಮತ್ತು ಹಿಮ ಉತ್ಪತ್ತಿಯಾಗತಕ್ಕ ದಿಕ್ಕು ಉತ್ತರದಿಕ್ಕು ಎಂತಲೂ ಅರ್ಥ. ಈ ದಿಕ್ಕಿನಲ್ಲಿ ಇರುವ ಮನಿ ಕುಬೇರನ ಮನಿ, ಈ ದಳಕ್ಕೆ ಮೂಲೇಶ ಬಂದರೆ, ಜೀವನಿಗೆ ಧರ್ಮ ಮಾಡಬೇಕು ಎಂಬ ಬುದ್ಧಿಯನ್ನುಂಟುಮಾಡತಾನೆ. ಈಶಾನ್ಯ ದಿಕ್ಕಿನಲ್ಲಿ ಇರುವ ದಳ ರುದ್ರದೇವರ ಮನಿ. ಈ ದಳಕ್ಕೆ ಮೂಲೇಶ ಬಂದರೆ, ಆಕಳುಗಳ, ದ್ರವ್ಯಗಳ, ಭೂಮಿಯು, ವಿವಾಹವಾಗದ ಬಾಲೆಯರ ಇವು ಮೊದಲಾದ ದಾನಗಳನ್ನೂ, ಅರ್ಧಘಳಿಗೆಯಾದರೂ ಸಾವಕಾಶಮಾಡದಲೆ ಕೊಡತಾ ಇರತಕ್ಕ ಬುದ್ಧಿಯನ್ನುಂಟುಮಾಡೋವನಾಗುತ್ತಾನೆ. ಸರ್ವದಾನ ಮಾಡಬೇಕು ಅಂತ ಇಚ್ಛಾ ಉಂಟಾಗಿ ತನ್ನಲ್ಲಿ ಇರತಕ್ಕ ಪದಾರ್ಥಗಳನ್ನು ದಾನ ಮಾಡೋ ಬುದ್ಧಿ ಕೊಡತಾನೆ ಎಂತ ತಾತ್ಪರ್ಯ ॥೨೩॥

## (೨) ಭಾವಪ್ರಕಾಶಿಕೆ-ವ್ಯಾಖ್ಯಾನ

ವರುಣನಿರುವ ಪಶ್ಚಿಮದಿಕ್ಕಿಗೆ ಶ್ರೀಪರಮಾತ್ಮನು ಬರಲು, ವಿನೋದ ಹಾಸ್ಯಾದಿಗಳಲ್ಲಿ ಬುದ್ಧಿ ಹುಟ್ಟುವುದು. ವಾಯುವಿರುವ ವಾಯುವ್ಯದಳಕ್ಕೆ ಬರಲು, ದೇಶಾಂತರಕ್ಕೆ ಹೋಗವುದಕ್ಕೂ ಬರುವುದಕ್ಕೂ ಬುದ್ಧಿ ಹುಟ್ಟುವುದು. ಚಂದ್ರ ಮತ್ತು ಕುಬೇರರಿರುವ ಉತ್ತರದಳಕ್ಕೆ ಬರಲು ಧರ್ಮ ವಿಷಯದಲ್ಲಿ ಬುದ್ಧಿ ಹುಟ್ಟುವುದು. ರುದ್ರದೇವರಿರುವ ಈಶಾನ್ಯ ದಿಕ್ಕಿಗೆ ಬರಲು, ಗೋದಾನ, ಭೂದಾನ, ದ್ರವ್ಯದಾನ, ಕನ್ಯಾದಾನ ಮೊದಲಾದವುಗಳಲ್ಲಿ ಬುದ್ಧಿಯು ಹುಟ್ಟುವುದು. ॥೨೩॥

## (೨) ಭಾವದರ್ಪಣ ಟೀಕಾ ವ್ಯಾಖ್ಯಾನ

ಈ ಪದ್ಯಕ್ಕೆ ಭಾವದರ್ಪಣ ಟೀಕಾ ವ್ಯಾಖ್ಯಾನ ಕಾರರು ವಿವರಣೆ ಬರೆದಿಲ್ಲ, "ವರುಣೇತಿ"-ಎಂದು ಮಾತ್ರ ಪದ್ಯಸೂಚನಾ ಮಾಡಿರುತ್ತಾರೆ ॥೨೩॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತ ಮೂಲ) :

"ವರುಣ"- ಇತಿ ॥ ವಾರುಣ್ಯಾಂತು ವಿನೋದಾದಿ ವಾಯವ್ಯಾಂ ಗಮನಾ ಗಮನಂ ॥ ಕೌಬೇರ್ಯಾಂ ರತಿಬುದ್ಧಿಃ ಸ್ಯಾತ್ ಐಶಾನ್ಯ ದ್ರವ್ಯ ದಾನಕೃತ್ ॥ ॥೨೩॥

ಕನ್ನಡಾರ್ಥ

ಹಂಸನಾಮಕ ಬಿಂಬನು ವರುಣ ದಿಕ್ಕಿನಲ್ಲಿ. ಅಂದರೆ ಪಶ್ಚಿಮದಿಕ್ಕಿನ ದಳಕ್ಕೆ ಬರಲಾಗಿ ಮನಸ್ಸು ವಿನೋದಾದಿಗಳಲ್ಲಿ ಪ್ರವೃತ್ತವಾಗುವುದು, ವಾಯುವ್ಯ ದಿಕ್ಕಿನಲ್ಲಿರುವ ದಳವನ್ನು ಪ್ರವೇಶಿಸಿದಾಗ, ಬರುವುದು ಹೋಗುವುದು ಇತ್ಯಾದಿ ಸಂಚಾರಕ್ರಿಯೆಗಳಲ್ಲಿ ಮನಸ್ಸು ತೊಡಗುವುದು. ಉತ್ತರದಿಕ್ಕಿನಲ್ಲಿರುವ ದಳದಲ್ಲಿ ಸಂಚರಿಸುತ್ತಿರುವಾಗ, ರತಿಕ್ರೀಡಾಬುದ್ಧಿಯು ಹುಟ್ಟುವುದು. ಈಶಾನ್ಯದಿಕ್ಕಿನ ದಳಕ್ಕೆ ಬರಲು, ದ್ರವ್ಯದಾನಾದಿಗಳನ್ನು ಮಾಡುವ ಸುಬುದ್ಧಿಯು ಉಂಟಾಗುವುದು. ॥೨೩॥

(೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ–

ವರುಣದಿಕ್ಕಿನಲ್ಲಿ ವಿನೋದ ಹಾಸ್ಯವ್ಯಾಪಾರ ನಡೆಯುವುದು, ವಾಯು ದಿಕ್ಕಿನಲ್ಲಿ ಗಮನಾಗಮನಾದಿ ಸಂಚಾರ, ಹಿಮಕರ ಎಂಬ ಚಂದ್ರ, ಧನಾಧಿಪನೆಂಬ ಕುಬೇರ ಇವರ ದಿಕ್ಕಾದ ಉತ್ತರದಿಕ್ಕಿಗೆ ಬಂದರೆ ಧರ್ಮದಲ್ಲಿ ಬುದ್ಧಿ ಹುಟ್ಟುವುದು. ಹರನ ಮಂದಿರವೆಂಬ ಈಶಾನ್ಯದಿಕ್ಕಿನಲ್ಲಿ ಬಂದರಗಳಿಗೆ ಬಿಡದಹಾಗೆ ಭೂದಾನ ಗೋದಾನ ಕನ್ಯಾದಾನ ಮುಂತಾದ್ದು ಮಾಡುವ ಬುದ್ಧಿ ಹುಟ್ಟುವುದು ॥೨೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹಿಂದಿನ ಪದ್ಯದಲ್ಲಿ ಹೃತ್ಕಮಲದ ಪೂರ್ವ, ಆಗ್ನೇಯ, ದಕ್ಷಿಣ ನೈರುತ್ಯ ದಿಕ್ಕುಗಳಲ್ಲಿರುವ ದಳಗಳಲ್ಲಿ ಬಿಂಬನ ಸಂಚಾರ ತನ್ಮೂಲಕ ಜೀವರಿಗೆ

ಉಂಟಾಗುವ ಅನುಭವ ವಿಶೇಷಗಳನ್ನು ತಿಳಿಸಿದರು. ಈಗ ಪ್ರಸಕ್ತ ೨೩ನೆಯ ಪದ್ಯದಿಂದ ಉಳಿದ ನಾಲ್ಕು ದಿಕ್ಕುಗಳಲ್ಲಿರುವ ದಳಗಳಲ್ಲಿ ಮೂಲೇಶನ ಗಮನ ದಿಂದುಂಟಾಗುವ ಮನೋವ್ಯಾಪಾರಗಳನ್ನು ತಿಳಿಸುತ್ತಾರೆ.

೧. ಪಶ್ಚಿಮ ದಿಕ್ಕಿನ ದಿಕ್ಪಾಲಕನು **ವರುಣದೇವರು**. ಜಲಾಭಿಮಾನಿಯಾದ ವರುಣನಿಂದ ಉಪಾಸ್ಯ ಭಗವನ್ಮೂರ್ತಿಯು **ಮತ್ಸ್ಯರೂಪೀ** ಶ್ರೀ ಪರಮಾತ್ಮನು. ಮತ್ಸ್ಯನಾಮಕ ಬಿಂಬರೂಪೀ ಮೂಲೇಶನು ಪಶ್ಚಿಮ ದಿಕ್ಕಿನಲ್ಲಿರುವ ವರುಣಾಲಯ ದಳವನ್ನು ಪ್ರವೇಶಿಸುವನು. ಆಗ ಜೀವರಿಗೆ ವಿನೋದ, ಹಾಸ್ಯ, ಪರಿಹಾಸ್ಯ ಮುಂತಾದ ಮನೋವೃತ್ತಿಗಳನ್ನುಂಟು ಮಾಡುವನು. ವರುಣನು ಅಪ್‌ತತ್ತ್ವಕ್ಕೆ ಅಭಿಮಾನಿ ದೇವತೆಯು. ಜಲ ತತ್ತ್ವದ ಲಕ್ಷಣ ದ್ರವತ್ವ. ಅಂದರೆ ಹರಿಯುವ ಸ್ವಭಾವ ಉಳ್ಳದ್ದು. ಇದರಿಂದ ವಿನೋದದಲ್ಲಿ ಕಾಲಕಳೆಯುವುದು, ಹಾಸ್ಯ ಕುಚೋದ್ಯಗಳನ್ನು ಮಾಡುವುದು ಇತ್ಯಾದಿ ಪ್ರವೃತ್ತಿಗಳು ಮನಸ್ಸಿನಲ್ಲಿ ಉಂಟಾಗುವುವು. ಇದು ವರುಣನಿಂದ ಸಂಸೇವ್ಯ ಮಾನನಾದ ಶ್ರೀಮತ್ಸ್ಯರೂಪೀ ಪರಮಾತ್ಮನ ವ್ಯಾಪಾರ ವಿಶೇಷ.

೨. ಬಿಂಬಮೂರುತಿ ಮೂಲೇಶನು ವಾಯವ್ಯ ದಿಕ್ಕಿನ ದಳದಲ್ಲಿ ಪ್ರವೇಶಸುವನು. **ಪ್ರವಹವಾಯುವು** ವಾಯವ್ಯ ದಿಕ್ಕಿನ ದಿಕ್ಪತಿಯು. ಅವನಿಂದ ಸಂಸೇವ್ಯಮಾನನಾದ ಉಪಾಸ್ಯಮೂರ್ತಿ **ಶ್ರೀಹಯವದನರೂಪೀ** ಪರಮಾತ್ಮನು. ಆಗ ಜೀವರಿಗೆ ಗಮನಾಗಮನವೆಂಬ ಸಂಚಾರದಲ್ಲಿ ಮನಸ್ಸು ತೊಡಗುವುದು. ಸ್ಥಳದಿಂದ ಸ್ಥಳಕ್ಕೆ ಪ್ರಯಾಣ ಬೇರೆ ಸ್ಥಳಕ್ಕೆ ಆಗಮನ. ಹೀಗೆ ಗಮನಾಗಮನ ಕ್ರಿಯೆಯಲ್ಲಿ ಮನಸ್ಸು ಪ್ರೇರಿತವಾಗುವುದು. ವಾಯುವಿನ ಲಕ್ಷಣ ಬೀಸುವುದು. ಅಂದರೆ ಸಂಚಾರಗತಿ. ಈ ಭಾವನೆ ಮನಸ್ಸಿನಲ್ಲಿ ಮೂಡುವುದು.

೩. **ಕಪಿಲನಾಮಕನಾದ** ಬಿಂಬನು ಉತ್ತರ ದಿಕ್ಕಿನಲ್ಲಿ ಬಂದಾಗ, ಆ ದಿಕ್ಕಿನ ದಳಗತರಾದ ದಿಕ್ಪಾಲಕರು **ಚಂದ್ರ ಮತ್ತು** ಕುಬೇರ ಇವರಿಂದ

ಉಪಾಸ್ಯನಾಗುವನು. ಆಗ ಧರ್ಮಕಾರ್ಯಗಳಲ್ಲಿ ಮನಸ್ಸು ಆಸಕ್ತವಾಗುವುದು. ಚಂದ್ರನು ಮನಸ್ಸಿನಲ್ಲಿ ಆಹ್ಲಾದವನ್ನುಂಟುಮಾಡುವನು. ಕುಬೇರನು ಧನಾಪತಿಯು. ಇದರಿಂದ ಧರ್ಮಕಾರ್ಯಗಳ ಕಡೆಗೆ ಮನಸ್ಸು ಹರಿಯುವುದು. ಸಂತೋಷಚಿತ್ತದಲ್ಲಿದ್ದಾಗ ಪುಣ್ಯ ಕೆಲಸಗಳನ್ನು ಮಾಡಬೇಕೆಂಬ ಶ್ರದ್ಧಾಸಕ್ತಿಗಳು ಮೂಡುವುದು ಸಹಜ.

**ಶ್ರೀವ್ಯಾಸದಾಸಸಿದ್ಧಾಂತ ಕೌಮುದೀಕಾರರ** ವ್ಯಾಖ್ಯಾನದ ಪ್ರಕಾರ, ಉತ್ತರದಿಕ್ಕಿನ ದಳದಲ್ಲಿ ಬಿಂಬನು ಪ್ರವೇಶಿಸಿದಾಗ, **ರತಿಕ್ರೀಡಾಸಕ್ತಿ**ಯಲ್ಲಿ ಮನಸ್ಸು ಪ್ರವರ್ತಿತವಾಗುವುದೆಂದು ಬರೆದಿರುತ್ತಾರೆ. ಇದು ವಿಚಾರಾಂಶ, ಚಂದ್ರನು ಮನಸ್ಸಿನಲ್ಲಿ ಆಹ್ಲಾದದ ತರಂಗಗಳನ್ನು ಎಬ್ಬಿಸುವುದರಿಂದ. ಈ ಪ್ರವೃತ್ತಿಗೆ ಕಾರಣವಾಗಬಹುದು. ವಿಚಾರವಂತರು ಗಮನಿಸತಕ್ಕ ಅಂಶ, ಚಂದ್ರನಿಗೆ **ಹಿಮಕರ**ನೆಂದು ಉಪಯೋಗಿಸಿದ್ದಾರೆ. ರಾತ್ರಿಯಲ್ಲಿ ಚಂದ್ರನ ಕಿರಣಗಳು ತಂಪಾಗಿರುವುದರಿಂದ ವಾತಾವರಣದಲ್ಲಿಯ ಜಲಾಂಶವು ಘನೀಭವಿಸಿ ಹಿಮ ಉತ್ಪತ್ತಿಯಾಗುವುದು ಪ್ರಕೃತಿಯಲ್ಲಿ ಕಂಡುಬರುವ ವ್ಯಾಪಾರ.

೪. ಮೂಲೇಶನಾದ ಬಿಂಬನು ಈಶಾನ್ಯ ದಿಕ್ಕಿನ ದಳಕ್ಕೆ ಪ್ರವೇಶಿಸುವನು. ಈಶಾನ್ಯದಿಕ್ಕು **ಶ್ರೀಮುಹರುದ್ರದೇವರ (ಹರನ)** ಮಂದಿರವು. ಹರನ ಮಂದಿರದಲ್ಲಿ ರುದ್ರೋಪಾಸಿತನಾದ **ನರಸಿಂಹ**ರೂಪವನ್ನು ಚಿಂತಿಸಬೇಕು. (ರುದ್ರಾಂತರ್ಗತ ನಾರಸಿಂಹ) ಈಶಾನ್ಯದಳದಲ್ಲಿ ಬಿಂಬನ ಪ್ರವೇಶದಿಂದ ಜೀವರಿಗೆ ಗೋದಾನ, ಭೂದಾನ, ದ್ರವ್ಯದಾನ, ಕನ್ಯಾದಾನ ಇತ್ಯಾದಿ ದಾನಕಾರ್ಯಗಳಲ್ಲಿ ಮನಸ್ಸು ಪ್ರವರ್ತಿತವಾಗುವುದು. ಶ್ರೀಮುಹರುದ್ರದೇವರು ಮನೋಭಿಮಾನಿಗಳು. ಮೇಲಾಗಿ ವೈರಾಗ್ಯನಿಧಿಗಳು. ಇದರಿಂದ ದಾನಧರ್ಮಗಳಲ್ಲಿ ಮನಸ್ಸು ಕ್ಷಣವೂ ಬಿಡದಂತೆ (**ಒಂದರಘಳಿಗೆ ತಡೆಯದೆಲೆ**) ಆಸಕ್ತವಾಗುವುದು ಸಹಜವೇ ಆಗಿದೆ.

## ಹೃತ್ಕಮಲದ ಅಷ್ಟದಳಗಳಲ್ಲಿ ಬಿಂಬನ ಕ್ರಿಯಾವಿಶೇಷಗಳು

| ಕ್ರಮ ಸಂಖ್ಯೆ | ದಳ | ದಿಕ್ಪಾಲಕರು | ಉಪಾಸ್ಯ ಭಗವದ್ರೂಪ | ಮನೋಪ್ರವೃತ್ತಿಗಳು |
|---|---|---|---|---|
| ೧ | ಪೂರ್ವ | ಇಂದ್ರ (ಸುರಪನಾಲಯ) | ಉಪೇಂದ್ರ | ಸತ್ಪುಣ್ಯಕಾರ್ಯಗಳು |
| ೨ | ಆಗ್ನೇಯ | ಅಗ್ನಿ (ವಹ್ನಿಯ ಮನೆ) | ಪರಶುರಾಮ | ನಿದ್ರೆ, ಆಲಸ್ಯ, ಹಸಿವು, ಬಾಯಾರಿಕೆ |
| ೩ | ದಕ್ಷಿಣ | ಯಮಧರ್ಮ (ತರಣಿತನಯನಿಕೇತನ) | ಶ್ರೀರಾಮ | ಪ್ರಬಲವಾದ ಕೋಪ, ಆರ್ಭಟೆ ಇತ್ಯಾದಿ |
| ೪ | ನೈಋತ್ಯ | ನಿರಋತಿ | ಜನಾರ್ದನ (ಅರವಿದೂರ | ಪಾಪಕಾರ್ಯಾಚರಣೆ |
| ೫ | ಪಶ್ಚಿಮ | ವರುಣ | ಮತ್ಸ್ಯ | ವಿನೋದ, ಹಾಸ್ಯ |
| ೬ | ವಾಯುವ್ಯ | ಪ್ರವಹವಾಯು (ಮರುತನೊಳು) | ಹಯವದನ | ಗಮನಾಗಮನ |
| ೭ | ಉತ್ತರ | ಕುಬೇರ_ಚಂದ್ರ | ಕಪಿಲ | ಧರ್ಮದಬುದ್ಧಿ |
| ೮ | ಈಶಾನ್ಯ | ರುದ್ರ (ಹರನ ಮಂದಿರದಲ್ಲಿ) | ನರಸಿಂಹ | ಗೋ, ಧನ, ಭೂ, ಕನ್ಯಾದಾನಗಳಲ್ಲಿ ಬುದ್ಧಿ |

# ಪದ್ಯ (೨೪)

ಮೂಲ

ಹೃದಯದೊಳಗೆ ವಿರಕ್ತಿ ಕೇಸರ ।
ಕೊದಗೆ ಸ್ವಪ್ನ ಸುಷುಪ್ತಿ ಲಿಂಗದಿ ।
ಮಧುಹ ಕರ್ಣಿಕೆಯಲಿ ಬರೆ ಜಾಗ್ರತೆಯು ಪುಟ್ಟುವುದು ॥
ಸುದರುಶನ ಮೊದಲಾದ ಅಷ್ಟಾ ।
ಯುಧವ ಪಿಡಿದು ದಿಶಾಧಿಪತಿಗಳ ।
ಸದನದಲಿ ಸಂಚರಿಸುತೀಪರಿ ಬುದ್ಧಿಗಳ ಕೊಡುವ ॥ ॥೩೪॥

ಅವತರಣಿಕೆ

ಹಿಂದಿನ ಪದ್ಯದಲ್ಲಿ ಹೃತ್ಕೀಲಾಲಜದ ಅಷ್ಟದಳಗಳಲ್ಲಿ ಮೂಲೇಶ ನಾಮಕ ಬಿಂಬನು ಸಂಚರಿಸುತ್ತಿರುವಾಗ, ಜೀವರಿಗೆ ಉಂಟಾಗುವ ವಿವಿಧ ಮನೋವ್ಯಾಪಾರಗಳನ್ನು ತಿಳಿಸಿ, **ಹೃದಯದೊಳಗೆ** ಎಂಬ ಪ್ರಸಕ್ತ ಸಂಧಿಗತ ೨೪ನೆಯ ಈ ಪದ್ಯದಿಂದ, ಹೃತ್ಪದ್ಮದ ಕರ್ಣಿಕಾದ ಮಧ್ಯಸ್ಥಾನ, ಕೇಸರಭಾಗ, ಮೂಲದಲ್ಲಿ ಬಿಂಬನ ಪ್ರವೇಶದಿಂದ ಜೀವರಿಗೆ ಉಂಟಾಗುವ ಸ್ವಪ್ನಾದಿ ಅವಸ್ಥಾತ್ರಯಗಳ ವಿಚಾರ ತಿಳಿಸುತ್ತಾರೆ. ॥೨೪॥

ಪ್ರತಿಪದಾರ್ಥ

**ಹೃದಯದೊಳಗೆ**=ಹೃದಯ ಮಧ್ಯದಲ್ಲಿ ಬಂದಾಗ, **ವಿರಕ್ತಿ**= ವೈರಾಗ್ಯ ಉಂಟಾಗುವುದು. **ಕೇಸರಕೆ**=ಹೃತ್ಪದ್ಮದ ಕರ್ಣಿಕಾದ ಮಧ್ಯದಲ್ಲಿ ರುವ ಕೇಸರಗಳಲ್ಲಿ **ಒದಗೆ**=ಪ್ರವೇಶಿಸಿದಾಗ, **ಸ್ವಪ್ನ**=ಸ್ವಪ್ನಾವಸ್ಥೆ

ಉಂಟಾಗುವುದು **ಲಿಂಗದಿ**＝ಕರ್ಣಿಕಾದ ಬುಡದಲ್ಲಿ ಬಂದಾಗ, **ಸುಷುಪ್ತಿ**＝ಗಾಢನಿದ್ರಾವಸ್ಥಾರೂಪವಾದ ಸುಷುಪ್ತ್ಯವಸ್ಥೆಯು ಒದಗುವುದು. **ಮಧುಹ**＝ಮಧುನಾಮಕ ದೈತ್ಯನನ್ನು ಸಂಹರಿಸಿದ ಮಧುಸೂದನ ನಾಮಕ ಶ್ರೀಪರಮಾತ್ಮನು **ಕರ್ಣಿಕೆಯಲಿ ಬರೆ**＝ದಳಗಳಲ್ಲಿ ಪುನಃ ಸಂಚರಿಸಲು ಆರಂಭಿಸಿದರೆ, **ಜಾಗ್ರತೆಯು**＝ಜಾಗ್ರದಾವಸ್ಥೆಯು (ಎಚ್ಚರಿಕೆಯಸ್ಥಿತಿ) **ಪುಟ್ಟುವುದು**＝ಉಂಟಾಗುವುದು. **ಸುದರುಶನ**＝ಸುದರ್ಶನ ಎಂಬ ಚಕ್ರಾಯುಧ, ಶಂಖ, ಗದಾ, ಪದ್ಮ, ಶಕ್ತಿ, ಗುರಾಣಿ, ಶಾರ್ಙ ಎಂಬ ಧನಸ್ಸು ಮತ್ತು ಬಾಣ **ಮೊದಲಾದ**＝ಇತ್ಯಾದಿ **ಅಷ್ಟಾಯುಧವ**＝ಎಂಟು ಆಯುಧವಿಶೇಷಗಳನ್ನು **ಪಿಡಿದು**＝ಅಷ್ಟಭುಜಗಳಲ್ಲಿ ಧರಿಸಿದವನಾಗಿ, **ದಿಶಾಧಿಪತಿಗಳ**＝ಇಂದ್ರಾದಿ ರುದ್ರಪರ್ಯಂತ ಅಷ್ಟದಿಕ್ಪಾಲಕರ **ಸದನದಲಿ**＝ಅಷ್ಟದಿಕ್ಕುಗಳಲ್ಲಿರುವ ದಳಗಳಲ್ಲಿ **ಸಂಚರಿಸುತ**＝ಸುತ್ತುತ್ತಾ **ಈಪರಿಬುದ್ಧಿಗಳ**＝ಪೂರ್ವೋಕ್ತ ಮನೋಪ್ರವೃತ್ತಿರೂಪವಾದ ಬುದ್ಧಿಯನ್ನು **ಕೊಡುವ**＝ಪ್ರೇರಿಸುತ್ತಾನೆ. ॥೨೪॥

## ವ್ಯಾಖ್ಯಾನಗಳು

### (೪) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಮೂಲೇಶ ನಾಮಕ ಪರಮಾತ್ಮನ ದಳಸಂಚಾರ ಅವಶಿಷ್ಟ ಹೇಳುತ್ತಾರೆ.

ದಳಗಳಸ್ಥಾನ ಬಿಟ್ಟು ಹೃದಯಕಮಲದೊಳಗೆ ತನ್ನ ಸ್ಥಾನವಾದ ಕಮಲ ಮಧ್ಯಗತ ಕರ್ಣಿಕಾ ಮ್ಯಾಲಕ್ಕೆ ಬಂದು, ಅದರ ಸುತ್ತು ಸಂಚಾರ ಮಾಡಿದರೆ, ವಿಷಯ ಭೋಗಾದಿಗಳಲ್ಲಿ ವಿರಕ್ತಿಬುದ್ಧಿ ಜನಿಸೋದಾಗತದೆ, ವಿರಕ್ತಿ ಮಾಡಬೇಕೆಂಬ ಜ್ಞಾನ ಉಂಟುಮಾಡತಾನೆ, ಮೂಲೇಶ ಕಮಲ ಕರ್ಣಿಕಾಕ್ಕೆ ಸುತ್ತಿಕೊಂಡಿರುವ ಕಿಂಜಲ್ಕ ಸಂಕೇತ ಕೇಸರಗಳಲ್ಲಿ ಪ್ರವೇಶಮಾಡಿ,

ಅದರಲ್ಲಿ ಸಂಚಾರ ಮಾಡಿದರೆ, ಸ್ವಪ್ನಸದೃಶವಾಗಿ ಬಾಹ್ಯವಿಷಯಾದಿಗಳಲ್ಲಿ ಚಿತ್ತ ಆಸಕ್ತವಾಗದೇ, ಅಂತರಂಗಮನಸ್ಕನಾಗಿ ಪರಮಾತ್ಮನಲ್ಲಿ ಜ್ಞಾಪಕವೂ ಚರಾಚರ ಅಧಿಷ್ಠಾನಗಳಲ್ಲಿ ಶ್ರೀಪರಮಾತ್ಮನಲ್ಲಿ ಜ್ಞಾಪಕರೂಪವಾದ ಜ್ಞಾನ ಉಂಟುಮಾಡತಾನೆ. ಕಮಲಕರ್ಣಿಕಾದಲ್ಲಿ ಕರ್ಣಿಕಾದ ಅಂಚುಭಾಗದಲ್ಲಿ ಸಂಚಾರ ಮಾಡಿದರೆ, ಸುಷುಪ್ತಿಸದೃಶವಾದ ಆನಂದ ಪೂರ್ವೋಕ್ತ ಅನುಷ್ಠಾನದಿಂದ ಉಂಟುಮಾಡತಾನೆ, ಮಧುಯುಕ್ತವಾದ ಕಮಲ ಕರ್ಣಿಕೆಯಲ್ಲಿ ಸಂಚಾರಬಿಟ್ಟು ಪುನಶ್ಚ ಅಷ್ಟದಳದಲ್ಲಿ ಬಂದರೆ, ಪೂರ್ವೋಕ್ತ ಪ್ರಕಾರ ವಿಷಯಾದಿ ವ್ಯಾಪಾರಗಳಲ್ಲಿ ಮನಸ್ಸು ಪ್ರವೇಶಮಾಡಿ, ಕರ್ಮವ್ಯಾಪಾರಗಳಲ್ಲಿ ಎಚ್ಚರಿಕೆ ಉಂಟಾಗತದೆ. ಮತ್ತು ದಳಸಂಚಾರಕಾಲದಲ್ಲಿ ಜೀವರಿಗೆ ಜಾಗ್ರದವಸ್ಥಾ, ಮಧ್ಯಗತನಾದರೆ ಸ್ವಪ್ನಾವಸ್ಥಾ, ಕಮಲಕರ್ಣಿಕಾದಲ್ಲಿ ಬಂದರೆ ನಿದ್ರಾವಸ್ಥಾ, ಮಧುಹಕರ್ಣಿಕೆಯಲ್ಲಿ ಇರೋಣ ಎಂಬುದು ಕ್ರಮಾತ್‌ಬಿಟ್ಟು, ದಳಗಳಲ್ಲಿ ಬಂದರೆ ಪುನಃ ಜಾಗ್ರದಾವಸ್ಥಾ ಪ್ರಾಪ್ತವಾಗತದೆ. (ಉಭಯಪ್ರಕಾರ ತಾತ್ಪರ್ಯ). ಶಂಖ ಚಕ್ರ ಮೊದಲಾದ ಎಂಟು ಆಯುಧ ಎಂಟು ಕರಗಳಲ್ಲಿ ಪಿಡಿದು, ಅಷ್ಟದಿಕ್ಕುಗಳಿಗೆ ಅಧಿಪತಿಗಳಾದ ಇಂದ್ರಾದಿ ದೇವತೆಗಳ, ದೇಹಗತ ಹೃದಯಸ್ಥ ಕಮಲಗತ ಅಷ್ಟದಿಕ್ಕುಗಳು ವ್ಯಾಪಿಸಿದ ಅಷ್ಟದಳಗಳೆಂಬ ಮನಿಗಳಲ್ಲಿ, ಸಂಚಾರ ಮಾಡತಾ ಇರತಕ್ಕ ಮೂಲೇಶ ಜೀವರಿಗೆ ಈ ಪೂರ್ವೋಕ್ತ ಪ್ರಕಾರ, ಜೀವನ್ನ ವಾಯುದೇವರನ್ನ ತನ್ನ ಪಾದಮೂಲದಲ್ಲಿ ಧರಿಸಿ, ಅವರಿಂದ ಸಹಿತನಾಗಿ ಸಂಚರಿಸುತ ನಾನಾವಿಧ ಬುದ್ಧಿಗಳ ಕೇಡೋವನಾಗತಾನೆ. ॥೨೪॥

## (೨) ಭಾವ ಪ್ರಕಾಶಿಕೆ–ವ್ಯಾಖ್ಯಾನ

ಅಷ್ಟದಳ ಸಂಚಾರಬಿಟ್ಟು, ಶ್ರೀ ಪರಮಾತ್ಮನು ಪುನಹ ಮಧ್ಯ ಹೃತ್ಕಮಲಕ್ಕೆ ಬರಲು, ವೈರಾಗ್ಯಬುದ್ಧಿ ಹುಟ್ಟುವುದು. ಆ ದಳಗಳ ಮಧ್ಯ ಕುಸುಮಗಳಲ್ಲಿ ಸಂಚರಿಸುವಾಗ ಸ್ವಪ್ನಾವಸ್ಥೆಯು ಬರುವುದು, ಕಮಲದ ಮಧ್ಯದ ಗಡ್ಡೆಗೆ ಬರಲು ನಿದ್ರಾವಸ್ಥೆಯು ಪ್ರಾಪ್ತವಾಗುವುದು. ಮಧುಸೂದನನು ಪುನಃ ದಳಗಳಿಗೆ ಪ್ರವೇಶಮಾಡಲು ಎಚ್ಚರಿಕೆ ಹುಟ್ಟುವುದು,

ಚಕ್ರ, ಶಂಖ, ಗದಾ, ಪದ್ಮ, ಧನಸ್ಸು, ಬಾಣ, ಕತ್ತಿ ಮತ್ತು ಢಾಲು ಎಂಬ ಎಂಟು ಆಯುಧಗಳನ್ನು ಎಂಟು ಕೈಗಳಲ್ಲಿ ಧರಿಸಿಕೊಂಡು, ಶ್ರೀಬಿಂಬನೆನಿಸುವ ಹಂಸರೂಪೀ ಶ್ರೀ ಪರಮಾತ್ಮನು ಅಷ್ಟದಿಕ್ಪಾಲಕರ ದಳಗಳಲ್ಲಿ ಸುತ್ತುತ್ತಿರುವಾಗ, ಈ ವಿಧವಾದ ಬುದ್ಧಿಗಳನ್ನು ಹುಟ್ಟಿಸುವನು. ॥೨೪॥

(೨) **ಭಾವದರ್ಪಣ ವ್ಯಾಖ್ಯಾನಕಾರರು** ೨೪ನೆಯ ಪ್ರಸಕ್ತ ಪದ್ಯಕ್ಕೆ ವಿವರಣೆ ಕೊಟ್ಟಿರುವುದಿಲ್ಲ. "ಹೃದಯೇತಿ"-ಎಂದು ಪದ್ಯಸೂಚನಾ ಮಾತ್ರ ಬರೆದಿರುತ್ತಾರೆ.

## (೪) ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

"ಹೃದಯ ಇತಿ" ॥ ಮಧ್ಯೇ ವೈರಾಗ್ಯಬುದ್ಧಿಃ ಸ್ಯಾತ್ ಸ್ವಪ್ನಾವಸ್ಥಾತು ಕೇಸರೇ ॥ ಜಾಗ್ರವಸ್ಥಾ ಕರ್ಣಿಕಾಯಾಂ ಲಿಂಗಂ ಚೈವ ಸುಷುಪ್ತಿಕೃತ್" ॥ ಇತಿ ॥ ಆಶಾ-ದಿಕ್ ॥೨೪॥

## ಕನ್ನಡಾರ್ಥ

ಹಂಸರೂಪೀ ಬಿಂಬನು ಹೃದಯಮಧ್ಯದಲ್ಲಿ (ಕರ್ಣಿಕಾಮಧ್ಯಕ್ಕೆ) ಬಂದಾಗ, ವೈರಾಗ್ಯ ಬುದ್ಧಿಯು ಉಂಟಾಗುವುದು. ಹೃದಯ ಕಮಲದ ಕೇಸರಗಳಲ್ಲಿ ಸಂಚರಿಸುವಾಗ ಸ್ವಪ್ನಾವಸ್ಥೆಯು ಪ್ರಾಪ್ತವಾಗುವುದು. ಹೃದಯ ಕಮಲದ ಕರ್ಣಿಕೆಯಲ್ಲಿ ಬಂದಾಗ ಜಾಗ್ರದವಸ್ಥೆಯು ಹುಟ್ಟುವುದು. ಹೃದಯ (ಕಮಲದ ಮೂಲದಲ್ಲಿ (ಲಿಂಗದಲ್ಲಿ) ಪ್ರವೇಶಿಸಿದರೆ, ಸುಷುಪ್ತ್ಯವಸ್ಥೆಯು ದಾಢನಿದ್ರಾವಸ್ಥೆ) ಉಂಟಾಗುವುದು. ಈ ವಿಚಾರಗಳು **ಹೃದಯಪದ್ಮ**ದಲ್ಲಿ ನಿರೂಪಿತವಾಗಿವೆ. ಆಶಾ-ದಿಕ್ಕು ॥೨೪॥

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಹೃದಯಮಧ್ಯದಲ್ಲಿ ಬಂದರೆ ವೈರಾಗ್ಯ ಹುಟ್ಟುವುದು. ಕೇಸರ ಲಿಂಗ

ವೆಂಬ ಕಮಲದ ಬುಡಕ್ಕೆ ಬಂದರೆ ಗಾಢನಿದ್ರೆ ಉಂಟಾಗುವುದು, ಮಧುಸೂದನನೆಂಬ ಹಂಸನು ಕರ್ಣಿಕೆಯೆಂಬ ಕಮಲದ ಮಣಿಯಲ್ಲಿ ಬಂದರೆ ಜಾಗ್ರದಾವಸ್ಥೆಯಾಗುವುದು. ಸುದರ್ಶನವೆಂಬ ಚಕ್ರ ಶಂಖ ಗದಾ ಪದ್ಮ ಕತ್ತಿ ಗುರಾಣಿ ಧನುಸ್ಸು ಬಾಣಗಳೆಂಬ ಎಂಟು ಆಯುಧಗಳನ್ನು ಧರಿಸಿ ದಿಶಾಧಿಪತಿಗಳೆಂಬ ಎಂಟು ದಿಕ್ಪಾಲಕರ ಮನೆಗಳಲ್ಲಿ ಹಂಸನು ಸಂಚರಿಸುತ್ತಾ ಜೀವನ ಮನಸ್ಸಿಗೆ ಮೇಲೆ ಹೇಳಿದ ಪ್ರಕಾರ ಬುದ್ಧಿಗಳನ್ನು ಕೊಡುವನು.

ಪ್ರಮಾಣ-

ಪೂರ್ವೇದಳೇ ಪುಣ್ಯಬುದ್ಧಿಃ ಆಗ್ನೌನಿದ್ರಾಕ್ಷುಧಾಧಿಕಂ ।
ಯಾಮ್ಯೇದಳೇ ಕ್ರೂರ ಬುದ್ಧಿಃ ನೈಋತ್ಯಾಂ ಪಾಪಬುದ್ಧಿ ಕೃತ್ ॥

ವಾರುಣ್ಯಾಂತು ಪರಿಕ್ರೀಡಾ ವಾಯುವ್ಯೇ ಗಮನಾಗಮನಂ ।
ಉತ್ತರೇರತಿಬುದ್ಧಿಸ್ಯಾತ್ ಈಶಾನ್ಯೇ ದ್ರವ್ಯದಾನಕೃತ್ ॥

ಮಧ್ಯೇ ವೈರಾಗ್ಯಬುದ್ಧಿಸ್ಯಾತ್ ಸ್ವಪ್ನಾವಸ್ಥಾತು ಕೇಸರೇ ।
ಜಾಗ್ರಾವಸ್ಥಾ ಕರ್ಣಿಕಾಯಾಂ ಲಿಂಗೇ ಚೈವ ಸುಷುಪ್ತಿಕಾಂ ॥
॥೨೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಹೃತ್ಪದ್ಮಗತ ಅಷ್ಟದಳಗಳನ್ನು ಬಿಟ್ಟು, ಕರ್ಣಿಕಾ ಎಂಬ ಭಾಗದಲ್ಲಿ ಸಂಚರಿಸುತ್ತಿರುವಾಗ, ಜೀವರಿಗೆ ಬಿಂಬರೂಪೀ ಶ್ರೀ ಪರಮಾತ್ಮನು ಪ್ರವರ್ತನೆ ಮಾಡುವ ವಿವಿಧ ವ್ಯಾಪಾರಗಳನ್ನು ತಿಳಿಸುತ್ತಾರೆ ಪ್ರಸಕ್ತ ೨೪ ನೆಯ ಪದ್ಯದಿಂದ.

೧. ಕರ್ಣಿಕಾ ಎಂಬ ನಾಳವು ಕಮಲದ ಮಧ್ಯದಲ್ಲಿರುತ್ತದೆ. ಈ ಕರ್ಣಿಕೆಯ ಮಧ್ಯಭಾಗವನ್ನು **ಹೃದಯದೊಳಗೆ** ಎಂಬ ಶಬ್ದ ಪ್ರಯೋಗದಿಂದ ನಿರೂಪಿಸಿರುತ್ತಾರೆ ಜ್ಞಾನಿಶ್ರೇಷ್ಠ ದಾಸವರೇಣ್ಯರು. ಹೃದಯವು ಮಧ್ಯಸ್ಥಾನವು. ಈ ಕಾರಣದಿಂದ ಕರ್ಣಿಕಾ ಎಂಬ ನಾಳದ ಮಧ್ಯಭಾಗದಲ್ಲಿ ಬಿಂಬರೂಪೀ ಹಂಸನಾಮಕ ಶ್ರೀ ಪರಮಾತ್ಮನು ಪ್ರವೇಶಿಸಿದಾಗ, ಜೀವರಿಗೆ ವೈರಾಗ್ಯಬುದ್ಧಿ ಹುಟ್ಟುವುದು. ಪ್ರಾಪಂಚಿಕ ಕ್ಷಣಿಕ ಸುಖೋಪಭೋಗಗಳಲ್ಲಿ ಜಿಹಾಸೆ ಉಂಟಾಗುವುದು.

೨. ಕರ್ಣಿಕಾನಾಳದ ಮೇಲ್ಭಾಗದಲ್ಲಿ ಮೃದುವಾದ ಎಸಳಿನಂತಿರುವ ಭಾಗವಿದೆ. ಇದಕ್ಕೆ ಕೇಸರ ಎಂದು ಹೆಸರು. ಈ ಕೇಸರಗಳೆಂಬ ಹಳದೀ ಕೆಂಪು ಬಣ್ಣದ ಗುಚ್ಛದಲ್ಲಿಯೇ ಪುಷ್ಪ ಪರಾಗಗಳಿರುವುವು. ಇಂತಹ ಕೇಸರದಲ್ಲಿ ಶ್ರೀ ಹರಿಯು ಸಂಚರಿಸುವಾಗ, ಜೀವರಿಗೆ ಸ್ವಪ್ನಾವಸ್ಥೆ ಉಂಟಾಗುವುದು. ಜೀವರ ಕಂಠ ಪ್ರದೇಶದಲ್ಲಿ ತೈಜಸರೂಪೀ ಪರಮಾತ್ಮನು ಬಂದಾಗ, ಮನಸ್ಸಿನ ಸಂಸ್ಕಾರ ರೂಪಗಳ ಫಲವಾಗಿ, ಸ್ವಾಪ್ನವಸ್ತುಗಳನ್ನು ಶ್ರೀ ಪರಮಾತ್ಮನು ಸೃಜಿಸಿ, ಜೀವರಿಗೆ ಸ್ವಪ್ನ ದ್ವಾರಾ ಪ್ರದರ್ಶಿಸಿ ಸ್ವಪ್ನಗಳ ಫಲಾನುಭವವನ್ನು ಕೊಡುವನು. ಕೇಸರಗಳಿರುವುದು ಕರ್ಣಿಕಾ ನಾಳದ ಅಗ್ರದಿಂದ ಸ್ವಲ್ಪ ಕೆಳಗೆ. ಅಂದರೆ ಕರ್ಣಿಕೆಯ ಕಂಠಸ್ಥಾನವು.

೩. ಕರ್ಣಿಕಾ ನಾಳದ ಬುಡವು ಗೆಡ್ಡೆಯಂತೆ ಸ್ವಲ್ಪ ದಪ್ಪವಾಗಿರುವುದು. ಇಲ್ಲಿಯೇ ಪುಷ್ಪರಸವೆಂಬ ಮಧುವಿರುವುದು. ಇದನ್ನು ದುಂಬಿಯು ನಳಿಕೆಯಿಂದ ಹೀರಿಕೊಳ್ಳುವುದು. ಈ ಬುಡಭಾಗಕ್ಕೆ **ಲಿಂಗ** ಎಂದು ಹೆಸರು. ಇಂತಹ ಕರ್ಣಿಕೆಯ ಬುಡಕ್ಕೆ ಬಂದಾಗ, ಜೀವರಿಗೆ ಗಾಢನಿದ್ರೆಯುಂಟಾಗುವುದು. ಈ ಗಾಢನಿದ್ರಾವಸ್ಥೆಗೆ **ಸುಷುಪ್ತಿ** ಎನ್ನುವನು. ಇಂತು ಲಿಂಗದಲ್ಲಿ ಬಿಂಬನ ಸಂಚಾರದಿಂದ ಜೀವರಿಗೆ ಸುಷುಪ್ತ್ಯವಸ್ಥೆಯು ಪ್ರಾಪ್ತವಾಗುವುದು. **ಪ್ರಾಜ್ಞ**ನಾಮಕ ಪರಮಾತ್ಮನು ವಾಯುದೇವರ ಸಹಿತ ಜೀವನನ್ನು ಆಲಂಗಿಸಿಕೊಂಡಾಗ, ಜೀವನಿಗೆ ಗಾಢನಿದ್ರಾವಸ್ಥೆ ಉಂಟಾಗುವುದು. ಆಗ ದಶೇಂದ್ರಿಯಗಳು ಮತ್ತು ಮನಸ್ಸಿನ ವ್ಯಾಪಾರಗಳಿರುವುದಿಲ್ಲ.

೪. **ಮಧುಹ** ಎಂದರೆ ಮಧುನಾಮಕನಾದ ದೈತ್ಯನನ್ನು ಸಂಹರಿಸಿ. ಶ್ರೀ ವಿಷ್ಣುವೆಂದರ್ಥ. (ಮಧು–ಮಧು ಎಂಬ ರಾಕ್ಷಸನನ್ನು ಹ–ಹನನ ಮಾಡಿದವನು). ಇವನಿಗೆ **ಮಧುಸೂದನನೆಂದು** ಹೆಸರು. ಅಂತಹ ಮಧು ಸೂದನ ನಾಮಕ ಶ್ರೀ ಪರಮಾತ್ಮನು ಕರ್ಣಿಕಾಸಂಚಾರ ಬಿಟ್ಟು, ಪುನಃ ದಳಗಳಲ್ಲಿ ಪ್ರವೇಶಿಸಿದಾಗ ಜಾಗ್ರದವಸ್ಥೆಯು ಉಂಟಾಗುವುದು. ಅಂದರೆ ಜೀವರಿಗೆ ಎಚ್ಚರಿಕೆಯ ಸ್ಥಿತಿ ಪ್ರಾಪ್ತವಾಗುವುದು. ಅಷ್ಟದಳಗಳಲ್ಲಿ ಬಿಂಬನ ಸಂಚಾರದಿಂದ, ಹಿಂದಿನ ಎರಡು ಪದ್ಯಗಳಲ್ಲಿ ವಿವರಿಸಿದಂತೆ ಪುಣ್ಯಕಾರ್ಯ ಪ್ರವೃತ್ತಿ ಇತ್ಯಾದಿ ಮನೋವ್ಯಾಪಾರಗಳು ನಡೆಯುವುವು. ಇವೆಲ್ಲವೂ ಜಾಗ್ರದವಸ್ಥೆಯ ವ್ಯಾಪಾರ ವಿಶೇಷಗಳು.

೫. ಹೃತ್ಕೀಲಾಲಜವು ಅಷ್ಟದಳ ಯುಕ್ತವಾದ ಪದ್ಮವು. ಈ ಅಷ್ಟ ದಳಗಳಲ್ಲಿ ಬಿಂಬರೂಪೀ ಹಂಸನಾಮಕ ಮೂಲೇಶನು ಅಷ್ಟಭುಜಗಳಿಂದ ವಿದ್ಯಮಾನನಾಗಿದ್ದು, ಸಂಚರಿಸುತ್ತಿರುವನು. ಮೂಲೇಶನು ತನ್ನ ಎಂಟು ಭುಜಗಳಲ್ಲಿ ಸುದರ್ಶನನೆಂಬ ಚಕ್ರ, ಪಾಂಚಜನ್ಯವೆಂಬ ಶಂಖ, ಕೌಮೋ ದಕೀ ಎಂಬ ಗದೆ, ಪದ್ಮ, ಶಾರ್ಙವೆಂಬ ಧನಸ್ಸು, ಬಾಣ, ಖಡ್ಗ ಮತ್ತು ಢಾಲು (ಗುರಾಣಿ) ಎಂಬ ಎಂಟು ಆಯುಧಗಳನ್ನು ಧರಿಸಿರುವನು. ಇಂತು **ಸುದರುಶನ ಮೊದಲಾದ ಅಷ್ಟಾಯುಧಗಳ ಪಡೆದು,** ಬಿಂಬ ನಾದ ಮೂಲೇಶನು ಅಷ್ಟದಿಕ್ಪಾಲಕರ (**ದಿಶಾಧಿಪತಿಗಳ**) ಆಲಯವಾದ ಅಷ್ಟದಳಗಳಲ್ಲಿ ಸಂಚರಿಸುತ್ತಾ ಜೀವರಿಗೆ ಹಿಂದೆ ವಿವರಿಸಿದಂತೆ ಬುದ್ಧಿ ಯನ್ನು ಪ್ರೇರಿಸುವನು. ॥೨೪॥

## ಪದ್ಯ (೨೫)

**ಮೂಲ-**

**ಸೂತ್ರನಾಮಕ ಪ್ರಾಣಪತಿ ಗಾ ।**
**ಯತ್ರಿಸಂಪ್ರತಿಪಾದ್ಯನಾಗೀ ।**
**ಗಾತ್ರದೊಳು ನೆಲೆಸಿರಲು ತಿಳಿಯದೆ ಕಂಡಕಂಡಲ್ಲಿ ॥**
**ಧಾತ್ರಿಯೊಳು ಸಂಚರಿಸಿ ಪುತ್ರ ಕ ।**
**ಳತ್ರ ಸಹಿತನುದಿನದಿ ತೀರ್ಥ ।**
**ಕ್ಷೇತ್ರಯಾತ್ರೆಯ ಮಾಡಿದೆವು ಎಂದೆನುತ ಹಿಗ್ಗುವರು ॥ ॥೨೫॥**

**ಅವತರಣಿಕೆ :**

ಸೂತ್ರ ನಾಮಕರಾದ ಶ್ರೀ ವಾಯುದೇವರಿಗೆ ನಿಯಾಮಕನಾದ ಪ್ರಾಣಪತಿ ಶ್ರೀಹರಿಯು ವೇದಗಳಿಗೆ ಮಾತೃಭೂತವಾದ ಗಾಯತ್ರಿಮಂತ್ರದಿಂದ ಪ್ರತಿಪಾದ್ಯನಾಗಿದ್ದಾನೆ. ಅಂತಹ ಪುರುಷಸೂಕ್ತ ಸುಮೇಯನಾದಿ ಶ್ರೀ ಪರಮಾತ್ಮನು ಬಿಂಬರೂಪಿಯಾಗಿ ಸಾಧನ ಶರೀರವಾದ ಈ ದೇಹದಲ್ಲಿ ಹೃತ್ಕಮಲ ನಿವಾಸಿಯಾಗಿ ಸಮಸ್ತ ಕಾರ್ಯಗಳಿಗೂ ಮುಖ್ಯ ಪ್ರೇರಕನಾಗಿದ್ದಾನೆ. ಈ ತತ್ತ್ವವನ್ನು ಅನುಸಂಧಾನ ಪೂರ್ವಕ ತಿಳಿದು, ಪಿಂಡಾಂಡರೂಪವಾದ ಈ ದೇಹದಲ್ಲಿಯೇ ಸಕಲ ತೀರ್ಥಾಭಿಮಾನಿಗಳೂ, ನದ್ಯಭಿಮಾನಿ ದೇವತೆಗಳೂ, ಕ್ಷೇತ್ರಾಭಿಮಾನಿಗಳೂ ನಲೆಸಿದ್ದಾರೆಂದು ತಿಳಿಯದೇ, ಕೇವಲ ಜಡಕರ್ಮಗಳಲ್ಲಿಯೇ ನಿತ್ಯಾಸಕ್ತರಾಗಿ , ತಾವು ಪತ್ನೀಪುತ್ರರಿಂದೊಡಗೂಡಿ, ಸಕಲ ತೀರ್ಥಕ್ಷೇತ್ರ ಯಾತ್ರೆಮಾಡಿ ಪುಣ್ಯ ಸಂಪಾದಿಸಿದೆವು-ಎಂದು ಹಿಗ್ಗುತ್ತಾರೆಂದು ತಿಳಿಸುತ್ತಾರೆ— **ಸೂತ್ರನಾಮಕ**—ಎಂಬ ಪ್ರಸಕ್ತ ಸಂಧಿಗತ ೨೫ನೆಯ ಈ ಪದ್ಯದಿಂದ.

**ಪ್ರತಿಪದಾರ್ಥ :**

**ಸೂತ್ರನಾಮಕ**=ಸೂಕ್ಷ್ಮಸೃಷ್ಟಿಯಲ್ಲಿ ಜಯಾಪತಿ ಸಂಕರ್ಷಣನಿಂದ ಉತ್ಪನ್ನರಾದ **ಸೂತ್ರ** ಎಂಬ ಹೆಸರಿನಿಂದ ಪ್ರಸಿದ್ಧರಾದ **ಪ್ರಾಣ**=ಶ್ರೀ ವಾಯುದೇವರಿಗೆ **ಪತಿ**=ನಿಯಾಮಕನಾದ ಶ್ರೀ ಪರಮಾತ್ಮ **ಗಾಯತ್ರಿ**= ವೇದಕ್ಕೆ ಮಾತೃಸ್ಥಾನವಾದ ಗಾಯತ್ರೀ ಮಂತ್ರದಿಂದ, **ಸಂಪ್ರತಿಪಾದ್ಯನಾಗಿ**=ಚೆನ್ನಾಗಿ ಪ್ರತಿಪಾದ್ಯನಾಗಿ (ಗಾಯತ್ರೀ ಮಂತ್ರಸ್ತುತ್ಯನಾದ) **ಈ ಗಾತ್ರದೊಳು**=ಈ ಶರೀರಗತ ಹೃತ್ಕಮಲದಲ್ಲಿ **ನೆಲೆಸಿರಲು** = ಆವಾಸವಾಗಿರುತ್ತಿರಲು, **ತಿಳಿಯದೆ**=ದೇಹದಲ್ಲಿ ಶ್ರೀ ಪರಮಾತ್ಮನ ಇರುವಿಕೆಯನ್ನು ಅರಿಯದೆ, **ಕಂಡಕಂಡಲ್ಲಿ**=ನಮ್ಮ ಮನಸ್ಸಿಗೆ ತೋಚಿದಂತೆ ಎಲ್ಲೆಂದರೆ ಅಲ್ಲಿ, **ಧಾತ್ರಿಯೊಳು**=ಈ ಭೂಮಿಯಲ್ಲಿ **ಸಂಚರಿಸಿ**=ಪ್ರವಾಸಕೈಗೊಂಡು ಸಂಚರಿಸುತ್ತಾ, **ಪುತ್ರಕಳತ್ರಸಹಿಂತದಿ**=ತನ್ನ ಹೆಂಡತಿ ಮಕ್ಕಳೊಡನೆ ಕೂಡಿಕೊಂಡು, **ಅನುದಿನದಿ**=ನಿತ್ಯವೂ, **ತೀರ್ಥ** = ಗಂಗಾದಿ ಸುಪ್ರಸಿದ್ಧ ನದಿಗಳು, **ಕ್ಷೇತ್ರ**=ಬದರಿ, ರಾಮೇಶ್ವರಾದಿ ಪುಣ್ಯಯಾತ್ರಾ ಸ್ಥಳಗಳ **ಯಾತ್ರೆಯ**=ಇವುಗಳ ಯಾತ್ರೆಯನ್ನು (ತೀರ್ಥಕ್ಷೇತ್ರಾಟನೆ) **ಮಾಡಿದೆವು**=ನಾವು ಮಾಡಿದವು. **ಎಂದೆನುತ**=ಎಂಬುದಾಗಿ ಹೇಳಿಕೊಂಡು **ಹಿಗ್ಗುವರು**=ಬಿಂಬಕ್ರಿಯಾಜ್ಞಾನವಿಲ್ಲದೆ, ಎಲ್ಲವನ್ನೂ ತಾವೇ ಮಾಡಿದೆವು ಎಂಬ ಅಜ್ಞಾನಗ್ರಸ್ತರಾಗಿ ಹಿಗ್ಗಿ ಆನಂದ ಪಡುತ್ತಾರೆ. ॥೨೫॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ–

ದೇಹದಲ್ಲಿ ಪರಮಾತ್ಮ ಇದ್ದಾನೆ ಎಂತ ಅನುಸಂಧಾನದಿಂದ ತಿಳಿಯದೆ ಇರಬಾರದೆಂದು ಹೇಳತಾರೆ.

ಸೂತ್ರ ಎಂತ ನಾಮದಿಂದ ಪ್ರಸಿದ್ಧನಾದ ಶ್ರೀ ವಾಯುದೇವರಿಗೆ ಸ್ವಾಮಿಯಾದ ಮೂಲೇಶನಾದ ಶ್ರೀ ಪರಮಾತ್ಮ, ವೇದಕ್ಕೆ ಮಾತೃಭೂತವಾದ ಗಾಯತ್ರೀಮಂತ್ರದಿಂದ ಚಂದಾಗಿ ಸರ್ವೋತ್ತಮನೆಂದು ಹೇಳಿಸಿಕೊಳ್ಳಲ್ಪಟ್ಟವನಾಗಿ ಅಂದರೆ, ಅನಂತವೇದಪ್ರತಿಪಾದ್ಯನಾಗಿ, ದೇಹದಲ್ಲಿ ಅಷ್ಟದಳಕಮಲದಲ್ಲಿ ಚತುರ್ವಿಂಶತಿತತ್ತ್ವಗಳಲ್ಲಿ ಬುದ್ಧಿಗಳು ಹುಟ್ಟಿಸುತ್ತಾ, ತತ್ತ್ವಗಳ ದ್ವಾರಾ ಚಲನಾದಿ ಸರ್ವವ್ಯಾಪಾರಗಳು ತತ್ತ್ವೇಶರ ದ್ವಾರಾ ಮಾಡಿಸತಾ ಈ ದೇಹದಲ್ಲಿ ಇರುತಿರಲಾಗಿ, ದೇಹೇಂದ್ರಿಯಾದಿ ವ್ಯಾಪಾರಗಳು ಈ ರೀತ್ಯಾ ಆಗತದೆ ಎಂತ ತಿಳಿಯದೆ, ಅಜ್ಞಜನರು, ಈ ಭೂಮಿಯೊಳು ವಿದ್ಯಮಾನಗಳಾದ ಅನೇಕ ತೀರ್ಥಕ್ಷೇತ್ರ ಸಂಚಾರಮಾಡಿ, ಪ್ರತಿದಿನದಲ್ಲೂ ದಾರಾ ಪುತ್ರಾದಿಗಳ ಸಹಿತ, ಗಂಗಾದಿ ತೀರ್ಥಗಳು, ಬದರಿ ಆದಿ ಪುಣ್ಯಕ್ಷೇತ್ರಗಳು ಈ ಯಾತ್ರಾದಿಗಳನ್ನು ನಾವು ಮಾಡಿದೆವು ಎಂತ ಹೇಳಿಕೊಂಡವರಾಗಿ ಅಂದರೆ, ಬಿಂಬಕ್ರಿಯಾವನ್ನ ತಿಳಿಯದೆ ತಮ್ಮ ಮೇಲೇ ಸ್ವಾಮಿತ್ವ ಅಜ್ಞಾನದಿಂದ ಆರೋಪಣ ಮಾಡಿಕೊಂಡು, ನಾವು ಮಾಡಿದೆವು ಎಂತ ಉಚ್ಚಾರ ಮಾಡುತ್ತಾ ಆನಂದ ಪಡೋವರಾಗತಾರೆ. ಇದು ಪಾಪ ಬೀಜ ಪುಣ್ಯವಾಗಿ ಅಂಥಾ ಫಲವೇ ಕೊಡೋದಾಗತದೆ. ಈ ಫಲ ಎಂಬುದು ಮೇಲೆ ನೋಡೋದಕ್ಕೆ ಮಹಾಸುಖವಾಗಿ ತೋರಿ, ಅದರಿಂದ ತಾನು ದುಃಖಿಸುತ್ತಾ ಇರತಾನೆ, ಆದ್ದರಿಂದ ದೇಹಸ್ಥ ಶ್ರೀ ಪರಮಾತ್ಮನ ಅನುಸಂಧಾನದಿಂದ ತಿಳಿದೇ ಯಾತ್ರಾದಿಗಳು ಮಾಡಬೇಕಂತ ತಾತ್ಪರ್ಯ ॥೨೫॥

(೧) **ಭಾವಪ್ರಕಾಶಿಕೆ ವ್ಯಾಖ್ಯಾನ–**

ಅನುಸಂಧಾನವಿಲ್ಲದವರು ತೀರ್ಥ ಯಾತ್ರಾದಿಗಳನ್ನು ಮಾಡಿದರೂ ನಿಷ್ಫಲವೇ ಆಗುವುದು. ಅನುಸಂಧಾನದಿಂದ ಭಗವದ್ರೂಪಗಳನ್ನು ದೇಹದಲ್ಲಿ ಚಿಂತಿಸಿದರೆ, ತೀರ್ಥಯಾತ್ರೆ ಮಾಡಿದ್ದಕ್ಕಿಂತಲೂ ಉತ್ತಮ ಫಲವು ಪ್ರಾಪ್ತವಾಗುವುದೆಂದು ಹೇಳುತ್ತಾರೆ.

ಸೂತ್ರನಾಮಕರಾದ ಪ್ರಾಣದೇವರ ಸ್ವಾಮಿಯಾದ ಶ್ರೀ ಹಂಸಮೂರ್ತಿಯು ನಮ್ಮ ದೇಹದ ಹೃತ್ಕಮಲದ ಮಧ್ಯದ ದಳಗಳಲ್ಲಿ ರಾಮಾದಿ

ರೂಪಗಳಿಂದ ವಾಸಮಾಡುವುದನ್ನು ಅರಿಯದೇ, ಈ ಭೂಮಿಯಲ್ಲಿ ದೇಶಾಟನೆ ಮಾಡಿ, ಉಡುಪಿಗೆ ಹೋಗಿ ಕೃಷ್ಣದರ್ಶನ ಮಾಡಿದೆವು. ಅಯೋಧ್ಯೆಗೆ ಹೋಗಿ ರಾಮದರ್ಶನ ಮಾಡಿದೆವು. ಕಾಶಿಗೆ ಹೋಗಿ ಗಂಗಾಸ್ನಾನ ಮಾಡಿದೆವು ಎಂದು, ಹೆಂಡರು ಮಕ್ಕಳಿಂದ ಕೂಡಿ, ದೇಶ ದೇಶ ತಿರುಗಿ ಬಂದು ಹೆಮ್ಮೆ ಕೊಚ್ಚಿ ಕೊಳ್ಳುವರು. ಹೃದಯದಲ್ಲಿರುವ ಭಗವಂತನನ್ನರಿಯದೆ ದೇಶಾಟನೆ ಮಾಡಿದರೇನು ಫಲ ! ಜ್ಞಾನಿಗಳು ದೇಹಗತ ಭಗವದ್ರೂಪಗಳನ್ನರಿತು, ಮನೆಯಲ್ಲಿದ್ದೇ ಸಕಲ ತೀರ್ಥಕ್ಷೇತ್ರಗಳ ಯಾತ್ರೆಯನ್ನು ಮಾಡಿದ ಫಲವನ್ನು ಹೊಂದುವರು. ಆದ್ದರಿಂದ ಅನುಸಂಧಾನವೇ ಮುಖ್ಯ ಸಾಧನವೆಂಬ ತಾತ್ಪರ್ಯ. ॥೨೫॥

**(೩) ಈ ಪದ್ಯಕ್ಕೆ ಭಾವದರ್ಪಣ ಟೀಕಾಕಾರರು ವ್ಯಾಖ್ಯಾನವನ್ನು ಬರೆದಿಲ್ಲ.**

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀಕಾರರು ಈ ಪದ್ಯಕ್ಕೆ ವ್ಯಾಖ್ಯಾನ ಬರೆದಿಲ್ಲ.**

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಸೂತ್ರನಾಮಕ ಎಂದು, ತೀರ್ಥಯಾತ್ರಾದಿ ಧರ್ಮಗಳು ಜ್ಞಾನ ಭಕ್ತಿ ಸಾಧನ, ಜ್ಞಾನವೇ ಮೋಕ್ಷಸಾಧನವೆಂದು ಅಲ್ಪರೂ ಅರಿಯರೆಂದು ಬೋಧಿಸುತ್ತಾರೆ. **'ತೆತೋಽಸನುಭವತ್ಸೂತ್ರಂ ಮತ್ಸೂತ್ರೇಣ ಸಮನ್ವಿತಂ'** ಎಂಬ **ಭಾಗವತೋಕ್ತ** ಸೂತ್ರನಾಮಕ ಪ್ರಾಣಪತಿಯಯದ ದೇವರು ತನ್ನ ಸ್ಮರಣೆ ಮಾಡುವವರನ್ನು ರಕ್ಷಿಸುವನಾದ್ದರೀದಲೂ, ವೇದಬೋಧಕನಾದ್ದರಿಂದಲೂ, ಗಾಯತ್ರಿ ಎಂದು ಮಂತ್ರದಲ್ಲಿ ಹೇಳಿಸಿಕೊಳ್ಳುತ್ತಾ, ಈ ಶರೀರದಲ್ಲಿದ್ದಾಗ್ಯೂ ತಿಳಿಯದೆ ಎಂದರೆ, ಕಾಣಿಸುವಲ್ಲೆಲ್ಲಾ ತದ್ವಾಜ್ಞಾನ ಮುಖ್ಯಸಾಧನವೆಂದರಿಯದೆ, ಪತ್ನೀ ಪುತ್ರರ ಸಹಿತರಾಗಿ ಭೂಮಿಯಲ್ಲಿ ಸಂಚರಿಸುತ್ತಾ, ತೀರ್ಥಕ್ಷೇತ್ರಯಾತ್ರೆಗಳನ್ನು ಮಾಡಿದೆವು ಎಂದು ಹಿಗ್ಗುವರು, ಎಂದರೆ ಇದೇ ಮುಖ್ಯಸಾಧನವೆಂದು ಅಜ್ಞರು ಹರ್ಷಪಡುವರು.

ಪ್ರಮಾಣ

ಯದಿದಂ ಪರಿತಃ ಪೂರ್ಣಂ ಮತ್ಸ್ಯಕೂರ್ಮಾದಿ ರೂಪಕಂ ।
ತದಿದಂ ಭಗವಾನ್ವಿಷ್ಣುಃ ಸರ್ವಾಂತಸ್ಥಿತ ಏವ ಚ ॥
ತನ್ನಿಸೃತತ್ವಾದ್ವೇದಾನಾಂ ಗಾಯಕಸ್ತ್ರಾತಿ ಚಾಖಿಳಂ ।
ಅತೋ ಗಾಯತ್ರೀನಾಮಾಸೌ ಭಗವಾನ್ಪುರುಷೋತ್ತಮಃ ॥
ಪ್ರಾಣ ಸಂಸ್ಥಸ್ಸವೈ ವಿಷ್ಣುಃ ಪ್ರಾಣಾಗ್ನೌ ಸಂವ್ಯವಸ್ಥಿತಃ ॥

ಎಂಬ ಛಾಂದೋಗ್ಯ ಭಾಷ್ಯಾರ್ಥವು ವಿವರಿಸಲ್ಪಟ್ಟಿತು. ॥೨೫॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸೂಕ್ಷ್ಮಸೃಷ್ಟಿಯಲ್ಲಿ ಮೂಲರೂಪೀ ಶ್ರೀಮನ್ನಾರಾಯಣನು ಸಂಕರ್ಷಣ ನಾಮಕನಾಗಿ ಪ್ರಾದುರ್ಭಾವರೂಪವನ್ನು ತಾಳಿ ಪ್ರಕಟ ನಾದನು. ಆಗ ಲಕ್ಷ್ಮೀದೇವಿ ಜಯಾ ನಾಮಕಳಾದಳು. ಅಂತಹ ಜಯಾ ಪತಿ ಸಂಕರ್ಷಣನ ದೆಸೆಯಿಂದ ಸೂತ್ರ ನಾಮಕ ಶ್ರೀ ವಾಯುದೇವರು ಉತ್ಪನ್ನರಾದರು. ಸಂಕರ್ಷಣಭವರಾದ ಶ್ರೀವಾಯುದೇವರು ಸಕಲ ತತ್ತ್ವೇಶರಿಗೆ ನಿಯಾಮಕರಾಗಿರುವುದರಿಂದ ಸೂತ್ರ ಎಂದು ಅವರಿಗೆ ಅಭಿಧಾನ.

೨. ಅಂತಹ ಸೂತ್ರನಾಮಕ ಮುಖ್ಯಪ್ರಾಣದೇವರಿಗೆ (ಸೂತ್ರ ನಾಮಕ ಪ್ರಾಣ) ಮುಖ್ಯ ನಿಯಾಮಕನಾಗಿ ಅವರಿಗೆ ಪ್ರಭುವಾದ ಶ್ರೀಹರಿಯು ಪ್ರಾಣಪತಿ ಎಂದೆನಿಸುವನು.

೩. ಪ್ರಾಣಪತಿಯಾದ ಶ್ರೀ ಪರಮಾತ್ಮನು ಗಾಯತ್ರೀ ಸಂಪ್ರತಿಪಾದ್ಯನು. ೨೪ ಅಕ್ಷರಗಳಿಂದ ಯುಕ್ತವಾದ ಗಾಯತ್ರೀ ಮಂತ್ರವು ಸಕಲ ವೇದಗಳಿಗೆ ಮಾತೃಸ್ಥಾನಾಪನ್ನವಾಗಿದೆ. ಮೂರು ಪಾದಗಳಿಂದ ಯುಕ್ತ

ವಾದ ಇಂತಹ ಗಾಯಿತ್ರಿಯಿಂದ ಪುರುಷಸೂಕ್ತ ದ್ವಾರಾ ಸಕಲವೇದಗಳೂ ಅವಿರ್ಭಾವವಾಗಿರುವುವು. ಇಂತಹ ಗಾಯತ್ರೀ ಮಂತ್ರದಿಂದ ಪ್ರಾಣಪತಿ ಯಾದ ಪ್ರಣವಸ್ವರೂಪಿಯು ಸುಮೇಯನು.

೪. ಸಾಧನಶರೀರವೆಂದೆನಿಸುವ ಈ ಸ್ಥೂಲದೇಹವು ೨೪ ತತ್ತ್ವಗಳಿಂದ ನಿರ್ಮಿತವಾಗಿದೆ. ಈ ೨೪ ಜಡ ತತ್ತ್ವಗಳಿಗೆ ಚತುರ್ವಿಂಶತಿ ದೇವತೆಗಳು ನಿಯಾಮಕರಾಗಿದ್ದಾರೆ. ಇಂತಹ ಚತುರ್ವಿಂಶತಿ ತತ್ವೇಶರಿಗೆ ಶ್ರೀ ಪರಮಾತ್ಮನು ಕೇಶವಾದಿ ಕೃಷ್ಣಾಂತ ೨೪ ರೂಪಗಳಿಂದ ಪರಮಮುಖ್ಯ ವೃತ್ತಿಯಿಂದ ನಿಯಾಮಕನಾಗಿದ್ದಾನೆ. ಗಾಯತ್ರೀಮಂತ್ರವು ಕೇಶವಾದಿ ಕೃಷ್ಣಾಂತ ೨೪ ಭಗವದ್ರೂಪಗಳನ್ನು ಪ್ರತಿಪಾದಿಸುವುದು. ಇಂತಹ ಗಾಯತ್ರಿ ಸಂಪ್ರತಿಪಾದ್ಯನಾದ ಶ್ರೀಹರಿಯು ಬಿಂಬನಾಗಿ ಈ ಸ್ಥೂಲದೇಹದಲ್ಲಿ (**ಗಾತ್ರದೊಳು**) ಹೃತ್ಕಮಲ ಮಧ್ಯನಿವಾಸಿಯಾಗಿ ವಿರಾಜಮಾನನಾಗಿದ್ದಾನೆ (**ನೆಲೆಸಿರಲು**). ಈ ತತ್ತ್ವವನ್ನು ತಿಳಿಯದೆ, ಈ ಭೂಮಂಡಲದಲ್ಲಿ (**ಧಾತ್ರಿಯೊಳು**) ಕಂಡ ಕಂಡ ಸ್ಥಳಗಳಲ್ಲಿ ಸಂಚರಿಸುತ್ತಾ, ತನ್ನ ಪತ್ನೀ ಪುತ್ರರೊಡಗೂಡಿ (**ಪುತ್ರ ಕಳತ್ರಸಹಿತ**) ಗಂಗಾದಿ ತೀರ್ಥಗಳಲ್ಲಿ ಸ್ನಾನಮಾಡಿದೆವು—ಬದರೀ, ಗಯಾ, ಅಯೋಧ್ಯಾ, ತಿರುಪತಿ, ರಾಮೇಶ್ವರ ಇತ್ಯಾದಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ, ತೀರ್ಥಕ್ಷೇತ್ರ ಯಾತ್ರೆ ಮಾಡಿದೆವು ಎಂಬ ಅಜ್ಞಾನದಿಂದ ಸಂತೋಷದಿಂದ ಹಿಗ್ಗುವವರನ್ನು ಕಂಡು ಜ್ಞಾನಿಶ್ರೇಷ್ಠರಾದ ದಾಸವರ್ಯರು ಮರುಗುತ್ತಾರೆ.

೫. ಈ ಸ್ಥೂಲದೇಹದಲ್ಲಿ ೭೨,೦೦೦ ನಾಡಿಗಳು ಶರೀರಾದ್ಯಂತ ಓತಪ್ರೋತನಾಗಿ ಹಬ್ಬಿ ಹರಡಿವೆ. ಇಂತಹ ನಾಡಿಗಳಲ್ಲಿ ನದ್ಯಭಿಮಾನಿಗಳು ವಿದ್ಯಮಾನರಾಗಿದ್ದಾರೆ. ಪಿಂಡಾಂಡರೂಪವಾದ ಈ ಶರೀರದಲ್ಲಿಯೇ ಸಕಲ ತೀರ್ಥಕ್ಷೇತ್ರಗಳು ಸೂಕ್ಷ್ಮವಾಗಿ ಇವೆ. ಜ್ಞಾನಿಗಳು ಈ ರಹಸ್ಯವನ್ನರಿತು, ಈ ದೇಹದಲ್ಲಿಯೇ ತೀರ್ಥ ಕ್ಷೇತ್ರಗತ ಭಗವನ್ಮೂರ್ತಿಗಳನ್ನು ಮನಸಾ ಚಿಂತಿಸುತ್ತಾ, ಉಪಾಸನೆ ಮಾಡುತ್ತಾರೆ.

"ಗಂಗೆಮಿಂದರೇ ಮಲವು ಹಿಂಗಿತಲ್ಲದೇ । ರಂಗನೊಲಿಯನೋ ಭಕುತರ ಸಂಗ ದೊರೆಯದೇ"

–ಎಂದು ಶ್ರೀವ್ಯಾಸವಿಠ್ಠಲಾಂಕಿತ ದಾಸವರ್ಯರ ಅನುಭವೋಕ್ತಿ.

ಈ ರಹಸ್ಯ ತತ್ತ್ವವನ್ನು ಜ್ಞಾನಾನುಸಂಧಾನ ಪೂರ್ವಕ ಅರಿಯದೇ, ಜ್ಞಾನರಹಿತವಾದ ಜಡಕರ್ಮಗಳಿಂದ ಫಲವೇನೂ ಇಲ್ಲ ಎಂಬುದೇ ಮುಖ್ಯ ತಾತ್ಪರ್ಯವು. ॥೨೫॥

## ಪದ್ಯ (೨೬)

### ಮೂಲ

**ನಾರಸಿಂಹ ಸ್ವರೂಪದೊಳಗೆ ಶ ।**
**ರೀರನಾಮದಿ ಕರಿಸುವನು ಹದಿ ।**
**ನಾರುಕಳೆಗಳುಳ್ಳ ಲಿಂಗದಿ ಪುರುಷನಾಮಕನು ॥**
**ತೋರುವನು ಅನಿರುದ್ಧನೊಳು ಶಾಂ।**
**ತೀರಮಣನನಿರುದ್ಧರೂಪದಿ ।**
**ಪ್ರೇರಿಸುವ ಪ್ರದ್ಯುಮ್ನ ಸ್ಥೂಲಕಳೇವರದೊಳಿದ್ದು ॥ ॥೨೬॥**

### ಅವತರಣಿಕೆ

ಸ್ವರೂಪ, ಲಿಂಗ, ಅನಿರುದ್ಧ ಮತ್ತು ಸ್ಥೂಲ ಎಂಬ ನಾಲ್ಕು ಶರೀರಗಳಲ್ಲಿ ವಿದ್ಯಮಾನನಾಗಿ ನಿಯಾಮಕನಾಗಿರುವ ಭಗವನ್ಮೂರ್ತಿಗಳು ಮತ್ತು ವ್ಯಾಪಾರವಿಶೇಷಗಳನ್ನು ತಿಳಿಸುತ್ತಾರೆ–ನಾರಸಿಂಹ ಎಂಬ ಪ್ರಸಕ್ತ ಸಂಧಿಗತ ೨೬ನೆಯ ಈ ಪದ್ಯದಿಂದ ॥೨೬॥

**ಪ್ರತಿಪದಾರ್ಥ**

**ಸ್ವರೂಪದೊಳಗೆ** = ಜೀವರ ಸ್ವರೂಪದೇಹದಲ್ಲಿ, **ನಾರಸಿಂಹ** = ಶ್ರೀನರಸಿಂಹನಾಮಕ ಪರಮಾತ್ಮನು, **ಶರೀರನಾಮದಿ** = ಆಯಾಯಾ ಸ್ವರೂಪಪಾತ್ಮಕ ಹೆಸರಿನಿಂದಲೇ, ಅಂದರೆ ಜೀವರು ಮನುಷ್ಯರೋ, ಮೃಗಗಳೋ, ಪಕ್ಷಿಗಳೋ ಆಗಿ ಸ್ವರೂಪಭೂತರಾಗಿರುತ್ತಾರೋ. ಆಯಾಯಾ ಶರೀರದ ಹೆಸರಿನಿಂದಲೇ **ಕರಿಸುವನು** = ಕರೆಸಿಕೊಳ್ಳುವನಾಗುತ್ತಾನೆ. **ಹದಿನಾರುಕಳೆಗಳುಳ್ಳ** = ಜ್ಞಾನೇಂದ್ರಿಯಗಳು-೫, ಕರ್ಮೇಂದ್ರಿಯಗಳು-೫ ಪಂಚತನ್ಮಾತ್ರೆಗಳು-೫ ಮತ್ತು ಮನಸ್ಸು-೧, ಹೀಗೆ ೧೬ ಕಳೆಗಳಿಂದ ಯುಕ್ತವಾದ. **ಲಿಂಗದಿ** = ಸ್ವರೂಪದೇಹಕ್ಕೆ ಅನಾದಿಯಿಂದ ಆವರ್ಕವಾಗಿರುವ ಲಿಂಗಶರೀರದಲ್ಲಿ, **ಪುರುಷ ನಾಮಕನು** = ಪುರುಷರೂಪಿಯಾದ ಶ್ರೀ ಪರಮಾತ್ಮನು **ತೋರುವನು** = ವಿರಾಜಮಾನನಾಗಿದ್ದು, ಗೋಚರಿಸುವನು **ಅನಿರುದ್ಧದೊಳು** = ಕಾರಣಶರೀರವಾದ ಅನಿರುದ್ಧದೇಹದಲ್ಲಿ, **ಶಾಂತೀರಮಣ** = ಶಾಂತೀಪತಿಯಾದ, **ಅನಿರುದ್ಧರೂಪದಿ** = ಅನಿರುದ್ಧನಾಮಕ ಶ್ರೀ ಪರಮಾತ್ಮನು, **ಸ್ಥೂಲ ಕಳೇವರದೊಳು** = ಸಾಧನ ಶರೀರವಾದ ಈ ಸ್ಥೂಲದೇಹದಲ್ಲಿ **ಇದ್ದು** = ಅಂತರ್ಗತನಾಗಿದ್ದು, **ಪ್ರದ್ಯುಮ್ನ** = ಪ್ರದ್ಯುಮ್ನರೂಪೀ ಶ್ರೀ ಪರಮಾತ್ಮನು **ಪ್ರೇರಿಸುವ** = ಆಯಾಯಾ ದೇಹಗತ ದೇವತೆಗಳ ದ್ವಾರಾ ಪ್ರೇರಿಸಿ, ಶರೀರಗತ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ॥೨೬॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ವರೂಪಾದಿ ಸ್ಥೂಲಾಂತ ದೇಹಗಳಲ್ಲಿ ಪ್ರೇರಕರೂಪಳಾದ ಭಗವದ್ರೂಪಗಳ ಹೇಳುತಾರೆ.

ಜೀವನ ಸ್ವರೂಪದೊಳಗೆ ಶ್ರೀನರಸಿಂಹದೇವರು, ಅಂದರೆ ನರಸಿಂಹ ನಾಮಕ ಪರಮಾತ್ಮ, ಆಯಾ ಜೀವರು ಮನುಷ್ಯರೋ ಮೃಗರೋ ಪಕ್ಷಿಗಳೋ ಆಯಾ ಶರೀರನಾಮಗಳಿಂದ, ಜೀವಾಕಾರನಾಗಿ ಶ್ರೀನರಸಿಂಹರೂಪದಿಂದ ಕರೆಸೋವನಾಗತಾನೆ. ದಶೇಂದ್ರಿಯಗಳು, ಪಂಚಭೂತಗಳು, ಮನಸ್ಸು ಅಂತು ಹದಿನಾರು ಕಳಾಗಳು ಉಳ್ಳ ಅನಾದಿಲಿಂಗ ಅಣುಲಿಂಗ ಮಾಹತ್ತತ್ತ್ವ ಈ ಶರೀರಗಳಲ್ಲಿ ಪುರುಷರೂಪಿಯಾದ ಪರಮಾತ್ಮನು; ಅನಿರದ್ಧ ಶರೀರದ ಒಳಗೆ ಶಾಂತಿನಾಮಕ ಲಕ್ಷ್ಮಿದೇವೇರಿಗೆ ಪತಿಯಾದ ಆನಿರುದ್ಧ ನಾಮಕ ಪರಮಾತ್ಮನು, ಸ್ಥೂಲಶರೀರದಲ್ಲಿ ಪ್ರದ್ಯುಮ್ನ ನಾಮಕ ಶ್ರೀ ಪರಮಾತ್ಮನು ಅಂತರ್ಗತನಾಗಿ ಇದ್ದು, ಜೀವನಲ್ಲಿ ತನ್ನ ಸ್ವಾಖ್ಯ ಬ್ರಹ್ಮಾದಿ ತತ್ತ್ವದೇವತಾರೂಪಗಳ ದ್ವಾರಾ ಜೀವರಿಗೆ ಇಚ್ಛಾರೂಪವಾದ ಪ್ರೇರಣೆ ಪ್ರೇರಿಸೋವನಾಗತಾನೆ. ಲಿಂಗಾದಿಗಳಲ್ಲಿ ವಿದ್ಯಮಾನರಾಗಿರುವ ಬ್ರಹ್ಮಾದಿ ದೇವತೆಗಳಿಗೆ ಪುರುಷರೂಪದಿಂದ ಪ್ರೇರಿಸೋವನಾಗತಾನೆ. ಅನಿರುದ್ಧ ದೇಹಗತ ರುದ್ರಾದಿ ದೇವತೆಗಳಿಗೆ ಅನಿರುದ್ಧರೂಪದಿಂದ ಮಾಡೋವನಾಗತಾನೆ. ಪ್ರದ್ಯುಮ್ನ ಸ್ಥೂಲದೇಹದೊಳು ಯಾವತ್ತೂ ಪ್ರೇರಿಸಿ ಅನಂತರ ಸ್ಥೂಲ ದೇಹದಿಂದ ವ್ಯಾಪಾರ ಮಾಡಸತಾನೆ. ಒಂದು ವ್ಯಾಪಾರ ಜೀವನಿಂದ ಆಗಬೇಕಾದರೆ ಈ ಪರಂಪರಾ ಒಂದು ಸ್ಥೂಲದೇಹದಲ್ಲಿ ಕಾರ್ಯಗಳು ಆಗತದೆ. ಈ ಪ್ರಕಾರ ಪ್ರತಿಕ್ಷಣದಲ್ಲಿ ಅನುಸಂಧಾನ ಇದ್ದ ಜ್ಞಾನಿಗಳಿಗೆ ಸ್ಥೂಲದೇಹಗತನಾದ ಬಿಂಬ ಅಪರೋಕ್ಷದಿಂದ ತೋರೋವನಾಗತಾನೆ, ಎಂತ ತಾತ್ಪರ್ಯ ॥೨೬॥

## (೨) ಭಾವಪ್ರಕಾಶಿಕೆ–ವ್ಯಾಖ್ಯಾನ

ಈ ಸಂಧಿಯ ೧೦–೧೧ ಮೊದಲಾದ ಕೆಲವು ಪದ್ಯಗಳಿಂದ ಜೀವನ ಸ್ವರೂಪದೇಹ ಮೊದಲಾದವುಗಳಲ್ಲಿರುವ ಭಗವದ್ರೂಪಗಳನ್ನು ಹೇಳಿದ್ದರು. ಆದರೆ ಆ ಪದ್ಯಗಳಲ್ಲಿ ಸ್ವರೂಪದೇಹ ಮೊದಲಾದ ದೇಹದ ಒಳಗಿದ್ದು, ಜೀವನ ಕೃತ್ಯವನ್ನು ಮಾಡಿ ಮಾಡಿಸುವ ರೂಪಗಳನ್ನು ಮಾತ್ರ ಹೇಳಿದರು. ಈ ಪದ್ಯದಲ್ಲಿ ಶರೀರಾಕಾರನಾಗಿ ಸ್ವರೂಪಾದ ದೇಹಗಳಲ್ಲಿ ತೋರುವ ಭಗವದ್ರೂಪಗಳನ್ನು ಹೇಳುತ್ತಾರೆ.

ನರಸಿಂಹರೂಪಿಯಾದ ಶ್ರೀ ಪರಮಾತ್ಮನು ಜೀವನ ಸ್ವರೂದೇಹ ರೂಪದಿಂದ ಸ್ವರೂಪ ಶರೀರ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಾ ಇರುವನು. ಷೋಡಶಕಳೆಗಳುಳ್ಳ ಲಿಂಗಶರೀರಾಕಾರನಾಗಿ ಪುರುಷನಾಮಕನಾಗಿರುವನು. ಅನಿರುದ್ಧದೇಹದಲ್ಲಿ ಶಾಂತೀಪತಿಯಾದ ಅನಿರುದ್ಧನಿರುವನು. ಸ್ಥೂಲಕಳೇವರದಲ್ಲಿ ಪ್ರದ್ಯುಮ್ನನಿದ್ದು ಪ್ರೇರಿಸುವನು. ॥೨೬॥

**(೩) ಭಾವದರ್ಪಣ ಟೀಕಾ ವ್ಯಾಖ್ಯಾನಕಾರರು ಈ ಪದ್ಯಕ್ಕೆ ವ್ಯಾಖ್ಯಾನ ಕೊಟ್ಟಿಲ್ಲ.**

**(೪) ಶ್ರೀ ವ್ಯಾಸದಾಸ ಸಿದ್ಧಾಂತಕೌಮುದೀ (ಸಂಸ್ಕೃತಮೂಲ)**

**ನಾರಸಿಂಹ**– ಇತಿ॥ ॥ "ಓಂ ॥ ಏವಾ ಮಹಾನ್ ಬೃಹದ್ದಿವೋ ಅಥರ್ವಾನಡಂ ವ ಓದತೀನಾಂ ॥ ಅವೋಚತಾಸ್ತ್ವಾಂ ತನ್ವಮಿಂದ್ರಮೇವ ನದಂ ಯೋ ಯುವತೀನಾಂ ॥ ಓಂ ॥ ನರಸಿಂಹವತ್ ವಪುಃ ಆಕೃತೀ ಯಸ್ಯ ಸ ತಥೋಕ್ತಃ ॥ ಶೀರ್ಯತ ಇತಿ ಶರಿಶ್ವಾತ್ ಈ ರಣಾಚ್ಛೈಲವೇತ್ಯುವ್ಯಕ್ತೇಃ ॥ ಪುರುಷಃ "ಸವಾ ಅಯಂ ಪುರುಷಃ ಸರ್ವಾಸು ಪೂರ್ಷು ವರ್ತಮಾನಃ ನೈನೇನ ಕಿಂಚನಾನಾವೃತಂ–" ಇತ್ಯಾದಿ ಶ್ರುತೇಃ ॥ ಪುರುಷಸು ಷಾರ್ಥಂ ಸನೋತಿ ದದಾತಿರುಮಾ । ಷಣದಾನೆ ॥ ಅನಿರುದ್ಧಃ ॥ಓಂ॥ ಪಕ್ವಂ ಫಲಮಂ ಕೀವ ಧೂನುಹೀಂದ್ರ ಸಂಪಾವರಣಂ ವನು ॥ ಸ್ವಯುರಿಂದ್ರ ಸ್ವರಾಳಸಿ ಸ್ಮದ್ದಿಷ್ಟಃ ಸ್ವಯಶಸ್ತರಃ ಸವಾವೃಧಾನಃ ॥ ಓಂ ॥ ಅನಿಃ ಚೇಷ್ಟತಃ ಫಲಾನಾಂ ಪ್ರಾಪಕಃ । ರುದ್ಧಃ ಸಮೇಷಾಂ ರೋಧಕಃ । ಸ್ವರಾಟ್, ಸ ಚಾಸೌ ತಥೋಕ್ತಃ ॥೨೬॥

**ಕನ್ನಡಾರ್ಥ**

ಜೀವನ ಸ್ವರೂಪ ಇತ್ಯಾದಿ ದೇಹಗತ ಭಗವದ್ರೂಪಗಳ ಚಿಂತನವನ್ನು ತಿಳಿಸುತ್ತಾರೆ- **ನಾರಸಿಂಹ** ಎಂಬ ಪದ್ಯದಿಂದ.

**ನಾರಸಿಂಹ** ಎಂಬ ನಾಮವು ಮತ್ತು **ಅನಿರುದ್ಧ** ಎಂಬ ನಾಮವು ಬೃಹತೀಮಂತ್ರಗಳಲ್ಲಿ ಉಲ್ಲೇಖವಾಗಿದೆ. "ನರ–ಸಿಂಹಾಕಾರವುಳ್ಳವನು

ಯಾವನೋ ಅವನೇ ನಾರಸಿಂಹನಾಮಕನು". ಇದು ಬೃಹತೀಮಂತ್ರದ ಅರ್ಥ. ಇಂತಹ ನಾರಸಿಂಹ ರೂಪೀ ಶ್ರೀಹರಿಯು **ಶರೀರ** ಶಬ್ದವಾಚ್ಯನಾಗಿದ್ದಾನೆ. ಜೀವ ಸ್ವರೂಪ ದೇಹದಲ್ಲಿ ಇರುವ ಭಗವದ್ರೂಪವು.

ಲಿಂಗಶರೀರವು ಷೋಡಶಕಳಾತ್ಮಕವಾದದ್ದು. ಅಲ್ಲಿ **ಪುರುಷ**ನಾಮದಿಂದ ಇದ್ದಾನೆ. "ಇಂತಹ ಸುಪ್ರಸಿದ್ಧನಾದ ಶ್ರೀಹರಿಯು ಸಕಲಶರೀರಗಳಲ್ಲೂ ಇರುತ್ತಾನೆ. ಅವನಿಂದ ವ್ಯಾಪಕವಾಗದ ಯಾವ ವಸ್ತುವೂ ಈ ಜಗನಲ್ಲಿಲ್ಲ. **ಇದು ಶ್ರುತಿವಾಕ್ಯವು.** ಇದರಿಂದ ದೇಹಸ್ಥನಾಗಿರುವ ಶ್ರೀಪರಮಾತ್ಮನಿಗೆ **ಪುರುಷ** ಎಂದು ಹೆಸರು.

ಅನಿರುದ್ಧ ಶರೀರದಲ್ಲಿ **ಅನಿರುದ್ಧನಾಮಕನಾಗಿರುವನು.** "ಅನಿ" ಕ್ರಿಯಾರೂಪವಾದ ವ್ಯಾಪಾರಗಳನ್ನು ಪ್ರವರ್ತಿಸುವವನು ಎಂದರ್ಥ. ಅಂದರೆ ಆಯಾಯಾ ಕ್ರಿಯಾನುಸಾರ ಫಲಪ್ರದನು ಎಂದು ತಾತ್ಪರ್ಯ. "ರುದ್ಧ"-ಸರ್ವತಂತ್ರ ಸ್ವತಂತ್ರನಾದುದರಿಂದ ಎಲ್ಲರನ್ನೂ ನಿರೋಧಿಸುವವನು. ಈ ಶಬ್ದಾರ್ಥವಿವರಣೆಯಿಂದ **ಅನಿರುದ್ಧ** ಶಬ್ದವಾಚ್ಯನು. ॥೨೬॥

## (ಆ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಜೀವನ ಸ್ವರೂಪ ಮುಂತಾದ ನಾಲ್ಕು ಶರೀರದಲ್ಲೂ ದೇವರರೂಪ ಚಿಂತನ ತಿಳಿಸುತ್ತಾರೆ– **ನಾರಸಿಂಹ** ಎಂದು. ನೃಸಿಂಹರೂಪದಿಂದ ಸ್ವರೂಪ ಎಂಬ ಜೀವ ಚೈತನ್ಯದಲ್ಲಿ ಶರೀರನಾಮಕನಾಗಿರುವನು. ಷೋಡಶಕಲೆಗಳುಳ್ಳ ಲಿಂಗಶರೀರವೆಂಬ ಮನಸ್ಸಿನಲ್ಲಿ ಪುರುಷನಾಮಕ ಇರುವನು. ಶಾಂತೀದೇವಿಪತಿ ಅನಿರುದ್ಧರೂಪದಿಂದ ಅನಿರುದ್ಧಶರೀರದಲ್ಲಿರುವನು. ಸ್ಥೂಲ ಶರೀರದಲ್ಲಿ ಪ್ರದ್ಯುಮ್ನರೂಪದಿಂದ ಇದ್ದು ಪ್ರೇರಿಸುವನು. ಇದರಿಂದ

**"ತಸ್ಮಿನ್ ಲಿಂಗಶರೀರೇಽಸ್ತಿ ಪುರುಷಾಖ್ಯೋ ಹರಿಃ ಸ್ವಯಮ್"**

– ಎಂಬ **ಅಧ್ಯಾತ್ಮಮಾಲಾರ್ಥ** ವಿವರಿಸಿತು. ॥೨೬॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವರ ಸ್ವರೂಪಶರೀರ, ಅದಕ್ಕೆ ಆವರಣರೂಪದಲ್ಲಿರುವ ಲಿಂಗಶರೀರ, ಅದರ ಮೇಲಿರುವ ಅನಿರುದ್ಧದೇಹ ಮತ್ತು ಸ್ಥೂಲಶರೀರ ಎಂಬ ತನು ಚತುಷ್ಟಯಗಳಲ್ಲಿರುವ ಭಗವದ್ರೂಪಗಳ ಉಪಾಸನಾಕ್ರಮವನ್ನು ತಿಳಿಸುತ್ತಾರೆ- **ನಾರಸಿಂಹ**- ಎಂಬ ಪ್ರಸಕ್ತ ೨೬ನೆಯ ಪದ್ಯದಿಂದ.

೧. ಜೀವರ ಸ್ವರೂಪದೇಹ ಅನಾದಿನಿತ್ಯವಾದುದು. ಚಿದಾನಂದಾತ್ಮಕವಾದುದು. ಅಪ್ರಾಕೃತಗುಣೋಪೇತವಾದುದು. ಇಂತಹ ಅತ್ಯಂತ ಸೂಕ್ಷ್ಮವಾದ ಜೀವರ ಸ್ವರೂಪಶರೀರದಲ್ಲಿ ಶ್ರೀ ಪರಮಾತ್ಮನು **ನಾರಸಿಂಹ** ರೂಪದಿಂದಿದ್ದಾನೆ. **ಮಾತೃಕಾನ್ಯಾಸಮಂತ್ರದಲ್ಲಿ**- "**ಕ್ಷಂ — ಲಕ್ಷ್ಮೀನರಸಿಂಹಾಯನಮಃ-ಜೀವೇ** ಎಂದು ಉಕ್ತವಾಗಿದೆ. ೫೧ ಅಕ್ಷರಶ್ರೇಣಿಯಲ್ಲಿ ಕೊನೆಯದಾದ **ಕ್ಷವರ್ಣಪ್ರತಿಪಾದ್ಯವಾದ ಭಗವದ್ರೂಪವು**- "**ನರಸಿಂಹ**" ಜೀವರು ತಮ್ಮ ಸ್ವರೂಪದೇಹದಲ್ಲಿ ಮಾನವರು, ಪಕ್ಷಿಗಳು, ಮೃಗಗಳು ತರುಲತೆ ಗುಲ್ಮಾದಿರೂಪಗಳಿಂದ ನಿತ್ಯರಾಗಿರುವರು. ಆಯಾಯಾ ಶರೀರದ ರೂಪದಿಂದಲೇ **ಆ ಶರೀರನಾಮಕನಾಗಿ** ನಾರಸಿಂಹರೂಪೀ ಶ್ರೀ ಪರಮಾತ್ಮನು ಬಿಂಬನಾಗಿದ್ದಾನೆ. **ನಾರಸಿಂಹ** ಎಂಬ ಶಬ್ದಾರ್ಥವು **ಬೃಹತೀಮಂತ್ರದಲ್ಲಿ** ವಿವರಿಸಲ್ಪಟ್ಟಿದೆ. "**ನರಸಿಂಹವತ್ ವಪುಃ ಆಕೃತಿಃ ಯಸ್ಯ ಸಃ ನರಸಿಂಹಃ "ಇತ್ಯುಕ್ತೇಃ** ನರ (ಮಾನವ) ಮತ್ತು ಸಿಂಹ (ವದನ ಸಿಂಹ ರೂಪ) ಈ ಆಕಾರವಿಶಿಷ್ಟವಾದ ಶರೀರವುಳ್ಳವನೇ **ನಾರಸಿಂಹನಾಮಕನು.** ಎಂಬುದೇ ಈ ಮಂತ್ರಾರ್ಥವು. ಅಂದರೆ ಪುರುಷೋತ್ತಮನಾದ ಶ್ರೀ ಪರಮಾತ್ಮನೆಂದರ್ಥ. ಸಿಂಹ ಶಬ್ದವು **ಶ್ರೇಷ್ಠವಾಚ್ಯವು.**

೨. ಅನಾದಿನಿತ್ಯವಾದ ಸ್ವರೂಪದೇಹದ ಸುತ್ತಲೂ ಆವರಣರೂಪದಲ್ಲಿ **ಲಿಂಗಶರೀರವಿದೆ.** ಈ ಶರೀರವು ಸ್ವರೂಪಕ್ಕೆ ಸಾವಕಾಶವಾಗಿ ಹೊಂದಿಕೊಂಡಿದೆ. ಮೂಲಪ್ರಕೃತಿಯ ಸಹಜ ಧರ್ಮಗಳಾದ ಸತ್ತ್ವ, ರಜ

ಮತ್ತು ತಮ ಎಂಬ ಪ್ರಾಕೃತವಾದ ತ್ರಿಗುಣಗಳಿಂದ ಯುಕ್ತವಾಗಿದೆ. ಇಂತು **ಗುಣತ್ರಯಾತ್ಮಕವಾದ** ಲಿಂಗದೇಹವು ಷೋಡಶಕಳಾತ್ಮಕವಾದದ್ದು. ಜ್ಞಾನೇಂದ್ರಿಯಗಳು-೫, ಕರ್ಮೇಂದ್ರಿಯಗಳು-೫ ತನ್ಮಾತ್ರಾಗಳು-೫ ಮತ್ತು ಮನಸ್ಸು-೧ ಹೀಗೆ ೧೬ ತತ್ತ್ವಗಳಿಂದ ಯುಕ್ತವಾಗಿದೆ. ಲಿಂಗ ಶರೀರದ ಪ್ರಥಮಾವರಣದಲ್ಲಿ **ಮನಸ್ಸು.** ದ್ವಿತೀಯಾವರಣದಲ್ಲಿ **ಪಂಚ ಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ,** ತೃತೀಯಾವರಣದಲ್ಲಿ **ಪಂಚ ತನ್ಮಾತ್ರಾಗಳು** ಇವೆ. (ಸೂಕ್ಷ್ಮರೂಪದಲ್ಲಿ) ಇಂತಹ ಲಿಂಗಶರೀರದಲ್ಲಿ ಶ್ರೀಪರಮಾತ್ಮನು **ಪುರುಷನಾಮಕನಾಗಿರುವನು.** ಈ ಶಬ್ದದ ವಿವರಣೆಯು **ಬೃಹತೀಮಂತ್ರದಲ್ಲಿ ಉಕ್ತವಾಗಿದೆ ಪುರು**-ಎಂದರೆ ಶರೀರ. **ಶಯುತೇ** ವಾಸಮಾಡುವನು. ಅಂದರ ಸಕಲಶರೀರಗಳಲ್ಲಿ ಇರುವನು. ಎಂಬರ್ಥ. ಅವನಿಂದ ವ್ಯಾಪಕವಾಗದ ಯಾವ ವಸ್ತುವೂ ಜಗತ್ತಿನಲ್ಲಿ ಇಲ್ಲ.

**"ಶೀರ್ಯತ ಇತಿ ಶಂ ತ್ವಾತ್ ಈ ರಣಾಚ್ಚೈಪೀತ್ಯು ವ್ಯುಕ್ತೇಃ"||**

**"ಸವಾ ಆಯಂ ಪುರುಷಃ ಸರ್ವಾನುಪೂರ್ಷು ವರ್ತಮಾನಃ ನೈನೇನಕಿಂಚನಾನಾವೃತಮ್ ||"**

**—ಇತಿ ಶ್ರುತ್ಯುಕ್ತೇಃ ||**

ಪುರುಷನಾಮಕ ಶ್ರೀಹರಿಯು ಲಿಂಗಶರೀರಗತನಾಗಿದ್ದು. ಜೀವರ ಅನಾದಿಕರ್ಮಗಳಿಗೆ ಮುಖ್ಯಪ್ರೇರಕನಾಗಿದ್ದಾನೆ.

೩. ಅನಿರುದ್ಧ ಶರೀರದಲ್ಲಿ ಶಾಂತೀಪತಿಯಾದ **ಅನಿರುದ್ಧನಾಮಕನಾಗಿ** ಶ್ರೀ ಪರಮಾತ್ಮನಿದ್ದಾನೆ. **(ಶಾಂತೀರಮಣನನಿರುದ್ಧರೂಪದಿ)** ಈ ಅನಿರುದ್ಧಶರೀರವು ಜೀವರ ಜನ್ಮಾಂತರಗಳಿಗೆ ಕಾರಣವಾದ ಕಾರಣ **ಶರೀರವು.**

**"ಅನಿಃ ಜೀಷ್ಟತಃ ಫಲಾನಾಂ ಪ್ರಾಪಕಃ ।**

**ರುದ್ಧಃ ಸರ್ವೇಷಾಂ ರೋಧಕಃ" ||**-ಎಂಬ ಪ್ರಮಾಣ ವ್ಯಾಖ್ಯಾನು **ಸಾರ.**

"ಆನಿ-ಎಂದರೆ ಸಕಲಕ್ರಿಯಾರೂಪವಾದ ವ್ಯಾಪಾರಗಳನ್ನು ಪ್ರವರ್ತಿಸುವವನು ಎಂದರ್ಥ. "ರುದ್ಧ" ಎಂದರೆ ಸರ್ವತಂತ್ರಸ್ವತಂತ್ರನು, ಎಲ್ಲರನ್ನು ನಿರೋಧಿಸುವವನು. ಅವನನ್ನು ನಿರೋಧಿಸುವ ಯಾವ ವಸ್ತುವೂ ಇಲ್ಲವೇ ಇಲ್ಲ. ಈ ಅರ್ಥದಲ್ಲಿ **ಅನಿರುದ್ಧಶಬ್ದವಾಚ್ಯನು.**

೪. ಸ್ಥೂಲಶರೀರದಲ್ಲಿ **ಪ್ರದ್ಯುಮ್ನ**ನಾಮಕನಾಗಿ ಶ್ರೀಪರಮಾತ್ಮನಿದ್ದಾನೆ, ಪ್ರ-ಪ್ರಕೃಷ್ಟವಾದ. **ಪ್ರದ್ಯುಮ್ನ**-ಕಾಂತಿಯುಳ್ಳವವಾದ್ದರಿಂದ **ಪ್ರದ್ಯುಮ್ನಶಬ್ದವಾಚ್ಯನು.** ಅತಿಶಯವಾದ ಕಾಂತಿಯಿಂದ ಪರಿಶೋಭಿತನಾದ ಪ್ರದ್ಯುಮ್ನನು ಸಾಧನಶರೀರ ಎಂದೆನಿಪ ಈ ಸ್ಥೂಲದೇಹದಲ್ಲಿದ್ದು ದೇಹಗತ ಸಮಸ್ತ ವ್ಯಾಪಾರಗಳನ್ನು ಇಂದ್ರಿಯಗಳ ದ್ವಾರಾ ಇಂದ್ರಿಯಾಭಿಮಾನಿ ದೇವತೆಗಳ ಮೂಲಕ ಪ್ರೇರಿಸುತ್ತಾ, ಪ್ರೇರ್ಯ ಪ್ರೇರಕನಾಗಿದ್ದಾನೆ. ಸಕಲಕ್ರಿಯೆಗಳಿಗೂ ಆ ಪ್ರದ್ಯುಮ್ನನೇ ಪರಮ ಮುಖ್ಯವೃತ್ತಿಯಿಂದ ಪ್ರೇರಕನು. ॥೨೬॥

## ಪದ್ಯ (೨೭)

ಮೂಲ :

ಮೊದಲು ತ್ವಕ್ಚರ್ಮಗಳು ಮಾಂಸವು ।
ರುಧಿರ ಮೇದೋ ಮಜ್ಜವಸ್ಥಿಗ ।
ಳಿದರೊಳಗೆ ಏಕೋನಪಂಚಾಶನ್ಮರುದ್ಗಣವು ॥
ನಿಧನ ಹಿಂಕಾರದಿ ಸಾಮಗ ।
ಅದರ ನಾಮದಿ ಕರೆಸುತೊಂಬ ।
ತ್ತಧಿಕ ನಾಲ್ವತ್ತೆನಿಪ ರೂಪದಿ ಧಾತುಗಳೊಳಿಪ್ಪ ॥ ॥೨೭॥

**ಅವತರಣಿಕೆ**

ಸ್ಥೂಲದೇಹದಲ್ಲಿ ಆವರಣರೂಪದಲ್ಲಿ ಒಂದರಮೇಲೆ ಮತ್ತೊಂದು ಇರುವ ತ್ವಗಾದಿ ಸಪ್ತಧಾತುಗಳಲ್ಲಿ, ಒಂದೊಂದರಲ್ಲಿಯೂ ಏಳರಂತೆ. ಸಪ್ತಧಾತುಗಳಲ್ಲಿ ೭ × ೭ = ೪೯ ಮರುದ್ಗಣಗಳಿವೆ. ಅವರಲ್ಲಿ ನಿಧನ ಹಿಂಕಾರಾದಿ ಸಪ್ತರೂಪಗಳಿಂದ ಒಂದೊಂದರಲ್ಲಿ ಏಳು ಸಾಮಗರೂಪನಾಗಿ ೪೯ ರೂಪಗಳಿಂದ ಧಾತುಗತ ಭಗವದ್ರೂಪಗಳ ವಿವರಗಳನ್ನು ತಿಳಿಸುತ್ತಾರೆ. **ಮೊದಲು ತ್ವಕ್ಚರ್ಮಗಳು**–ಎಂಬ ಪ್ರಸಕ್ತ ಸಂಧಿಗತ ೨೭ನೆಯ ಈ ಪದ್ಯದಿಂದ. ||೨೭||

**ಪ್ರತಿಪದಾರ್ಥ**

**ಮೊದಲು** = ಸ್ಥೂಲಶರೀರಕ್ಕೆ ಆವರಣರೂಪದಲ್ಲಿ ಪ್ರಪ್ರಥಮವಾಗಿ ಇರುವ **ತ್ವಕ್** = ಮೇಲಿನ ಚರ್ಮ (ಸ್ಪರ್ಶಜ್ಞಾನವನ್ನುಂಟುಮಾಡುವ ತ್ವಗಿಂದ್ರಿಯ) **ಚರ್ಮ** = ಅದರ ಒಳಪದರದಲ್ಲಿ ಇರುವ ಚರ್ಮವೆಂಬ ಧಾತು, (ದ್ವಿತೀಯಾವರಣ), **ಮಾಂಸ** = ಚರ್ಮದ ಒಳಪದರದಲ್ಲಿರುವ ಮಾಂಸವೆಂಬ ತೃತೀಯಾವರಣರೂಪವಾದ ಧಾತು, **ರುಧಿರ** = ಮಾಂಸಖಂಡಗಳ ಒಳಗೆ ರಕ್ತ ಧಮನಿಗಳಲ್ಲಿ ಹರಿಯುತ್ತಿರುವ, ರಕ್ತವೆಂಬ ಚತುರ್ಥಾವರಣ **ಮೇದೋ** = ಮೇದಸ್ಸೆಂಬ ಕೊಬ್ಬಿನ ಧಾತು (ಪಂಚಮಾವರಣ), **ಮಜ್ಜ** = ಕೀಲುಗಳು ಸರಾಗವಾಗಿ ಚಲಿಸಲು ಅನುಕೂಲವಾಗುವಂತೆ ಇರುವ ಮಜ್ಜಾ ಎಂಬ ಷಷ್ಠಾವರಣದ ಧಾತು, **ಅಸ್ಥಿ** = ದೇಹಕ್ಕೆ ಆಕಾರವನ್ನು ಕೊಡುವ ಮೂಳೆಗಳು ಎಂಬ ಪಂಜರದಂತಿರುವ ಸಪ್ತಾವರಣರೂಪವಾದ ಧಾತು, **ಇವರೊಳಗೆ** = ಪೂರ್ವೋಕ್ತ ಸಪ್ತಧಾತುಗಳಲ್ಲಿ **ಏಕೋನ ಪಂಚಾಶತ್** = ೪೯ ಸಂಖ್ಯಾತವಾದ (ಪಂಚಾಶತ್ = ೫೦, ಇದಕ್ಕೆ ಏಕೋನ = ಒಂದು ಕಡಿಮೆಯಾದ. ಅಂದರೆ ೪೯ ಎಂದರ್ಥ) **ಮರುದ್ಗಣವು** = ಮರುತರ ಸಮೂಹವು ಅಂದರೆ ೪೯ ಮರುದ್ಗಣವು ಇರುವುವು. **ನಿಧನ ಹಿಂಕಾರ ನಾಮದಿ** = ನಿಧನ, ಹಿಂಕಾರ, ಆದಿ, ಪ್ರಸ್ತಾವ, ಪ್ರತಿಹಾರ,

ಉದ್ಗೀಥ ಮತ್ತು ಉಪದ್ರವ ಎಂಬ ಸಪ್ತರೂಪಗಳಿಂದ **ಸಾಮಗ**=ಸಪ್ತ ಸಾಮಶಬ್ದವಾಚ್ಯನಾಗಿ (ಸಾಮಗಾನಪ್ರತಿಪಾದ್ಯನಾಗಿ) **ಅದರ ನಾಮದಿ** =ಆಯಾಯಾ ಸಪ್ತಧಾತುಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ, **ಒಂಭತ್ತಧಿಕ ನಾಲ್ವತ್ತೆನಿಪರೂಪದಿ**=೪೯ ರೂಪಗಳಿಂದ (೯ ಅಧಿಕವಾದ ೪೦=೪೦+೯=೪೯ ರೂಪಗಳು) **ಧಾತುಗಳಲ್ಲಿ**=ಒಂದೊಂದು ಧಾತುವಿನಲ್ಲಿ ೭ ರೂಪಗಳಂತೆ, ಸಪ್ತಧಾತುಗಳಲ್ಲಿ ೭×೭=೪೯ ರೂಪಗಳಿಂದ **ಇಪ್ಪ**=ಧಾತುಗತ ೪೯ ಮರುದ್ಗಣಗಳಲ್ಲಿ ಅಂತರ್ಯಾಮಿಯಾಗಿ ಇದ್ದಾನೆ. ॥೨೭॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ಥೂಲದೇಹಗತ ಸಪ್ತಧಾತುಸ್ಥ ದೇವತಾಭಗವದ್ರೂಪಗಳನ್ನು ಹೇಳುತಾರೆ.

೧. ಸ್ಥೂಲಶರೀರಕ್ಕೆ ಮ್ಯಾಲೆ ಮೊದಲು ಇರತಕ್ಕದ್ದು ತ್ವಕ್ ನಾಮಕ ಚರ್ಮಪ್ರಭೇದವು. ಇದರಲ್ಲಿ **ನಿಧನನಾಮಕ** ಶ್ರೀಪರಮಾತ್ಮ ಇದ್ದಾನೆ.

೨. ಈ ತ್ವಕ್ಕಿನ ಒಳಭಾಗದಲ್ಲಿ ಚರ್ಮ. ಇದರಲ್ಲಿ **ಹಿಂಕಾರನಾಮಕ** ಪರಮಾತ್ಮ ಇದ್ದಾನೆ.

೩. ಈ ಚರ್ಮದ ಒಳಗೆ ಮಾಂಸ, ಇದರಲ್ಲಿ **ಆದಿನಾಮಕ** ಪರಮಾತ್ಮ ಇದ್ದಾನೆ.

೪. ಈ ಮಾಂಸದ ಒಳಗೆ ರಕ್ತ, ಈ ರಕ್ತದಲ್ಲಿ **ಪ್ರಸ್ತಾವ** ನಾಮಕ ಪರಮಾತ್ಮ ಇದ್ದಾನೆ.

೫. ಈ ರುಧಿರದೊಳಗೆ ಮೇದ, ಈ ಮೇದದ ಒಳಗೆ **ಪ್ರತಿಹಾರ** ನಾಮಕ ಪರಮಾತ್ಮ ಇದ್ದಾನೆ.

೫. ಈ ಮೇದದ ಒಳಗೆ ಮಜ್ಜ, ಇದರಲ್ಲಿ **ಉದ್ಗೀಥನಾಮಕ** ಪರಮಾತ್ಮ ಇದಾನೆ.

೭. ಈ ಮಜ್ಜದ ಒಳಗೆ ಎಲಬುಗಳು, ಇದರಲ್ಲಿ **ಉಪದ್ರವ** ನಾಮಕ ಪರಮಾತ್ಮ ಇದ್ದಾನೆ.

ನಿಧನಾದಿರೂಪಗಳು ಸಪ್ತಸಾಮಗರೂಪಗಳು. ಸಪ್ತಸಾಮಗ ಎಂದರೆ ಸಪ್ತಕಾಲ ಎಂತ ೬ನೇ ಸಂಧಿ ೧೪ನೇ ಶ್ಲೋಕದಲ್ಲಿ ವಿವರ ಮಾಡಲ್ಪಟ್ಟಿದೆ. ಈ ಧಾತುಗಳ ನಾಮದಿಂದ ಕರಿಸುತ, ಈ ಸಪ್ತಭಗವದ್ರೂಪಗಳು, ನಾಲ್ವತ್ತೊಂಭತ್ತು ಮರುತ್ತರು, ಒಂದೊಂದು ಧಾತುವಿನೊಳಗೆ ಏಳೇಳು (೭ × ೭ = ೪೯) ಮರುತ್ತರಕ್ರಮದಿಂದ ಇದ್ದಾರೆ. ನಿಧನಾದಿ ಸಪ್ತಸಾಮರೂಪಗಳು ತ್ವಗಾದಿ ಸಪ್ತಧಾತುಗಳಲ್ಲಿ ನಲತ್ತೊಂಭತ್ತು ರೂಪಗಳಿಂದ ಇದ್ದಾನೆ. ಹ್ಯಾಂಗೆಂದರೆ ಒಂದೊಂದುಧಾತುವಿನೊಳಗೆ ಏಳು ಮರುತ್ತುಗಳು, ನಾಮ ಸಾಂಕೇತದಿಂದ ಭಗದ್ರೂಪ ಒಂದು. ಈ ಒಂದು ಭಗವದ್ರೂಪವೇ ಏಳು ರೂಪಗಳ ಧರಿಸಿ ಏಳು ಮರುತ್ತಗಳಲ್ಲಿ ಇರೋವನಾಗಿದ್ದಾನೆ, ಇದೇ ರೀತ್ಯಾ ಸಪ್ತಧಾತುಗಳಲ್ಲಿ ಗಣನಾ ಮಾಡಿದರೆ, ಧಾತು ಒಂದಕ್ಕೆ ಮರುತ್ತರು ಸಹ ಹದಿನಾಲ್ಕರ ಪ್ರಕಾರ ಏಳುಧಾತುಗಳಲ್ಲಿ ತೊಂಭತ್ತೆಂಟು ಭಗವದ್ರೂಪಗಳು ಆಗತದೆ, ಎಂತ ತಾತ್ಪರ್ಯ. ॥೨೭॥

## (೨) ಭಾವಪ್ರಕಾಶಿಕೆ ವ್ಯಾಖ್ಯಾನ

ಸಪ್ತಧಾತುಗಳಲ್ಲಿರುವ ಭಗವದ್ರೂಪಗಳನ್ನು ಹೇಳುತ್ತಾರೆ. ನಮ್ಮ ದೇಹದಲ್ಲಿ, ತ್ವಕ್, ಚರ್ಮ, ಮಾಂಸ. ರಕ್ತ. ಮೇದಸ್ಸು, ಮಜ್ಜಾ, ಅಸ್ಥಿಗಳೆಂಬ ೭ ಧಾತುಗಳಿರುವುವು. ಇವು ೭ರಲ್ಲಿ ಒಂದೊಂದರಲ್ಲಿ ಏಳೇಳು ಮರುತ್ತುಗಳಂತೆ ೭ ಧಾತುಗಳಲ್ಲಿ ೪೯ ಮರುತ್ತಗಳು ಇರುವರು, ಇವರಲ್ಲಿ

ಸಾಮಪ್ರತಿಪಾದ್ಯನಾದ ಮತ್ತು ಸಾಮಶಬ್ದವಾಚ್ಯರಾದ ಶ್ರೀಹರಿಯು ನಿಧನ, ಹಿಂಕಾರ, ಪ್ರಸ್ತಾವ, ಪ್ರತೀಹಾರ, ಉದ್ಗೀಥ, ವಷಟ್ಕಾರ ಆದಿ ನಾಮಗಳೆಂಬ ೭ ರೂಪಗಳಿಂದ, ಏಳೇಳುಮಂದಿ ಮರುತ್ತುಗಳಲ್ಲಿ ಒಂದೊಂದು ರೂಪದಂತೆ ೭ ಧಾತುಗಳಲ್ಲಿ ೭ರೂಪಗಳಿಂದ ಇರುವನು. ಇದರ ವಿಸ್ತಾರವು ಅಧ್ಯಾತ್ಮವೂಲಾಗ್ರಂಥದಲ್ಲಿರುವುದು.

"ತ್ವಚಿ ಪ್ರಸ್ತಾವ ನಾಮಾಚ ವಾಸುದೇವಸ್ತಥೈವಚ ।
ರಾಮರೂಪೀ ಹರಿಸ್ತತ್ರ ವರ್ತತೇ ತನ್ನಿಯಾಮಕಃ ॥
ಚರ್ಮಣಿ ಪತ್ರಿಹಾರೋಽಖ್ಯೋಽಹ್ಯನಿರುದ್ಧಸ್ತಥೈವ ಚ।
ಲಕ್ಷ್ಮೀಪತಿಸ್ತು ತತ್ರೈವ ವರ್ತತೇ ತನ್ನಿಯಾಮಕಃ ॥
ಮಾಂಸೇಷೂದ್ಗೀಥ ನಾಮಾಚ ನಾರಾಯಣ ಸುರೂಪವಾನ್ ।
ರಕ್ತೇ ನಿಧ ನನಾಮಾಚ ತಥಾ ಸಂಕರ್ಷಣಾಭಿಧಃ ।
ಶಾಂತ ಸಂವಿಚ್ಚ ತತ್ರೈವ ವರ್ತತೇ ನಿಯಾಮಕಃ ।
ಮೇದಸ್ಯಪಿ ವಷಟ್ಕಾರ ನಾಮಾ ಷಡ್ಗುಣ ಏವಚ ॥
ಮಜ್ಜಾಯಮಾದಿನಾರಾಹರೂಪೀ ಸಾರಾತ್ಮ ರೂಪಧೃಕ್ ।
ಅಸ್ಥಿಷೂಪದ್ರವೋ ನಾಮ ನೃಸಿಂಹೋ ಹಂಸ ಏವ ಚ ॥"

ಇದರರ್ಥ

೧. ತ್ವಕ್ಕಿನಲ್ಲಿ ಪ್ರಸ್ತಾವನಾಮಕ ಸಾಮವಾಚ್ಯನೂ ಆದ ವಾಸುದೇವ ರೂಪಿಯು ಇರುವನು. ಅಲ್ಲಿಯೇ ರಾಮರೂಪಿಯಾದ ಶ್ರೀಪರಮಾತ್ಮ ನಿಯಾಮಕನಾಗಿರುವನು.

೨. ಚರ್ಮದಲ್ಲಿ ಪ್ರತೀಹಾರ ನಾಮಕನು ಮತ್ತು ಅನಿರುದ್ಧನೂ ಇರುವರು. ಲಕ್ಷ್ಮಿಪತಿಯೂ ಅಲ್ಲಿ ನಿಯಾಮಕನಾಗಿರುವನು.

೩. ಮಾಂಸದಲ್ಲಿ ಉದ್ಗೀಥನಾಮಕನಿರುವನು, ಅಲ್ಲಿ ನಾರಾಯಣನು ನಿಯಾಮಕನಾಗಿರುವನು.

೪. ರಕ್ತದಲ್ಲಿ ನಿಧನನಾಮಕನೂ, ಸಂಕರ್ಷಣನೂ ಇರುವರು. ಅಲ್ಲಿ ಶಾಂತಸಂವಿತ್ ರೂಪಿಯು ನಿಯಾಮಕನಾಗಿರುವನು.

೫. ಮೇದಸ್ಸಿನಲ್ಲಿ ವಷಟ್ಕಾರನಾಮಕನೂ, ಷಡ್ಗುಣರೂಪಿಯೂ ಇರುವರು.

೬. ಅಸ್ಥಿಗಳಲ್ಲಿ ಉಪದ್ರವನಾಮಕನೂ ಮತ್ತು ನರಸಿಂಹ, ಹಂಸ ಈ ಮೂರ್ತಿಗಳಿರುವರು.

೭. ಮಜ್ಜಾದಲ್ಲಿ ವರಾಹರೂಪಿಯೂ ಮತ್ತು ಸಾರಾತ್ಮನೂ ಇರುವರು. ಈ ಅರ್ಥಗಳನ್ನೇ ಪ್ರಸಕ್ತ ಪದ್ಯವು ಸೂಚಿಸುವುದು. ॥೨೭॥

## (೨) ಭಾವದರ್ಪಣ ಟೀಕಾ ವ್ಯಾಖ್ಯಾನ

ಸಪ್ತಧಾತುಗಳಲ್ಲಿ ರತಕ್ಕ ಏಕೋನಪಂಚಾನ್ಮರುದ್ಗಣದೊಳಗೆ ಸಾಮವೇದ ಪ್ರತಿಪಾದ್ಯನಾದ ಹಿಂಕಾರಾದಿನಾಮಕ ಶ್ರೀಹರಿಯು ಏಕೋನ ಪಂಚಾಶದ್ರೂಪಗಳಿಂದ ಇದ್ದಾನೆಂದು ಹೇಳುತ್ತಾರೆ- **ನೊದಲು** ಎಂಬ ಪದ್ಯದಿಂದ. ॥೨೭॥

(೪) ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀಕಾರರು ಪ್ರಸಕ್ತ ಪದ್ಯದ ಅರ್ಥವನ್ನು ಮುಂದಿನ ೨೮ನೆಯ ಪದ್ಯದಲ್ಲಿ ಸೇರಿಸಿ, ಅವೆರಡು ಪದ್ಯಗಳ ಭಾವವನ್ನು ಸಂಗ್ರಹಿಸಿ ಬರೆದಿರುತ್ತಾರೆ. ೨೮ನೆಯ ಪದ್ಯವನ್ನು ಅವಲೋಕಿಸಬೇಕು. ॥೨೭॥

## (೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ-

ಸ್ಥೂಲದೇಹಗತ ಪ್ರದ್ಯುಮ್ನರೂಪಿ ಸ್ಮರಣೆ ವಿವರಿಸುತ್ತಾರೆ- ಮೊದಲು ಎಂದು, ಮೊದಲಲ್ಲಿ ತ್ವಕ್ಕು ಎಂಬ ತೊಗಟೆ ಧಾತು, ಅದರೊಳಗೆ ಚರ್ಮ ಮಾಂಸ

ರುಧಿರವೆಂಬ ರಕ್ತ, ಮೇದಸ್ಸೆಂಬ ಕೊಬ್ಬು, ಮಜ್ಜವೆಂಬ ರಕ್ತಸಾರ, ಅಸ್ಥಿ ಎಂಬ ಎಲುಬು ಹೀಗೆ ಕ್ರಮೇಣ ಒಂದರೊಳಗೊಂದು ಏಳು ಇರುವವು. ಅವುಗಳಿಗೆ ಅಭಿಮಾನಿ ನಾಲ್ವತ್ತೊಂಭತ್ತು ಮರುತ್ತುಗಳೆಂಬ ದೇವತೆಗಳಲ್ಲಿ ನಿಧನ ಹಿಂಕಾರ ಮೊದಲಾದ ಸಾಮಗಾನನಾಮಕ ದೇವರು, ಆಯಾ ಧಾತು ನಾಮದಿಂದಲೂ ಕರೆಸುತ್ತಾ ನಾಲ್ವತ್ತೊಂಭತ್ತು ರೂಪಗಳಿಂದ ಸಪ್ತಧಾತು ಗಳಲ್ಲಿರುವನು. ತ್ವಕ್ಕಿನಲ್ಲಿ ಪ್ರಸ್ತಾವ ಸಾಮನಾಮಕ ವಾಸುದೇವರು. ಚರ್ಮ ದಲ್ಲಿ ಪ್ರತಿಹಾರನಾಮ ಅನಿರುದ್ಧ ಭಗವದ್ರೂಪ. ಮಾಂಸದಲ್ಲಿ ಉದ್ಗೀಥ ಸಾಮನಾಮಕ ನಾರಾಯಣ. ರಕ್ತದಲ್ಲಿ ನಿಧನ ಸಾಮನಾಮ ಸಂಕರುಷಣ. ಮೇದಸ್ಸಿನಲ್ಲಿ ವಷಟ್ಕಾರ ನಾಮಕನು, ಷಡ್ಗುಣ ನಾಮಕ, ಸಹ. ಮಜ್ಜ ದಲ್ಲಿ ಆದಿ ಎಂಬ ಸಾಮಗ ಆದಿವರಾಹ ಸಾರಾತ್ಮಸಹ ಅಸ್ಥಿಗಳಲ್ಲಿ ಉಪದ್ರವ ವೆಂಬ ಸಾಮಗ, ಉಪದ್ರವಹರ ನೃಸಿಂಹ ಸಹ. ಹೀಗೆ ವಿವರ ತಿಳಿಯು ವುದು.

ಪ್ರಮಾಣ :—

ತ್ವಚಿಪ್ರಸ್ಥಾವ ನಾಮಕ ವಾಸದೇವಸ್ತಥೈವ ಚ ।
ರಾಮರೂಪೀ ಹರಿಸ್ತತ್ರ ವರ್ತತೇ ತನ್ನಿಯಾಮಕಃ ॥
ಚರ್ಮಣಿ ಪ್ರತಿಹಾರಾಖ್ಯೋಽರಾಹ್ಯನಿರುದ್ಧಸ್ತಥೈವ ಚ ।
ಲಕ್ಷ್ಮೀಪತಿಸ್ತು ತತ್ರೈವ ವರ್ತತೇ ತನ್ನಿಯಾಮಕಃ ॥
ಮಾಂಸೇಷೂದ್ಗೀಥನಾಮಾ ಚ ತಥಾ ಸಂಕರ್ಷಣಾಭಿಧಃ ॥
ರಕ್ತೇ ನಿಧನ ನಾಮಾ ಚ ನಾರಾಯಣ ಸುರೂಪವಾನ್ ।
ಶಾಂತಸಂವಿಚ್ಚ ತತ್ರೈವ ವರ್ತತೇ ತನ್ನಿಯಾಮಕಃ ।
ಮೇದಸ್ಯಪಿ ವಷಟ್ಕಾರನಾಮಾ ಷಡ್ಗುಣ ಏವ ಚ ॥
ಮಜ್ಜಾಯಾಮಾದಿವಾರಾಹರೂಪೀ ಸಾರಾತ್ಮರೂಪಧೃಕ್ ।
ಅಸ್ಥಿಷೂಪದ್ರವೋನಾಮ ನೃಸಿಂಹೋ ಹಂಸ ಏವ ಚ ॥
ಎಂಬ ಅಧ್ಯಾತ್ಮಮೂಲಾರ್ಥವು ವಿವರಿಸಲ್ಪಟ್ಟಿತು ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

ನಮ್ಮ ಸ್ಥೂಲದೇಹದಲ್ಲಿ ಆವರಣರೂಪದಲ್ಲಿ **ಸಪ್ತಧಾತುಗಳಿವೆ.** ಈ ಸಪ್ತಧಾತುಗಳಲ್ಲಿ ಒಂದೊಂದರಲ್ಲಿ ಏಳು ಮಂದಿಯಂತೆ. ನಾಲ್ವತ್ತೊಂಭತ್ತು ಮರುತ್ತುಗಳಿದ್ದಾರೆ. (೭ × ೭ = ೪೯) ಈ ಮರುದ್ಗಣಾಂತರ್ಗತ ನಿಧನ ಹಿಂಕಾರಾದಿ ಭಗವದ್ರೂಪಗಳ ಉಪಾಸನಾವಿಧಾನವನ್ನು ತಿಳಿಸುತ್ತಾರೆ. **ಮೊದಲು ತ್ವಕ್ಚರ್ಮಗಳು**– ಎಂಬ ಪ್ರಸಕ್ತ ೨೭ನೆಯ ಪದ್ಯದಿಂದ.

(೧) **ತ್ವಗಾವರಣ**–

ಈ ಶರೀರದ ಮೇಲಿನ ಹೊದಿಕೆ ತ್ವಕ್ ಎಂಬ ಧಾತು. ಇದೇ ಪ್ರಥಮಾವರಣವು. ಉಷ್ಣ, ಶೈತ್ಯ, ಛಳಿ, ಬಿಸಿಲು, ಗಾಳಿ ಇತ್ಯಾದಿ ಸ್ಪರ್ಶಜ್ಞಾನಕ್ಕೆ ಕಾರಣವಾದ ತ್ವಗಿಂದ್ರಿಯವು. ತ್ವಗಾವರಣದಲ್ಲಿ **ಪ್ರಸ್ತಾವ** ಎಂಬ ಹೆಸರಿನಿಂದ **ವಾಸುದೇವರೂಪಿ** ಶ್ರೀ ಪರಮಾತ್ಮನಿರುವನು. ಈ ಧಾತುವಿನ ನಿಯಾಮಕ ಭಗವದ್ರೂಪ **ಶ್ರೀರಾಮ** (ಲಾವಣ್ಯಪ್ರದ).

ಪ್ರಮಾಣ–

**ತ್ವಚಿ ಪ್ರಸ್ತಾವ ನಾಮಾಚ ವಾಸುದೇವಸ್ತಥೈವಚ ।**
**ರಾಮರೂಪೀ ಹರಿಸ್ತತ್ರ ವರ್ತತೇ ತನ್ನಿಯಾಮಕಃ ॥**

**—ಅಧ್ಯಾತ್ಮಮೂಲಾಗ್ರಂಥ ಪ್ರಮಾಣ**

(೨) **ಚರ್ಮಾವರಣ**

ತ್ವಗಾವರಣದ ಒಳಗಿನ ಪದರದಲ್ಲಿ ಇರುವ ಧಾತುವು **ಚರ್ಮ.** ಇದು ದ್ವಿತೀಯಾವರಣವು. ಈ ಧಾತುವಿನಲ್ಲಿ ಚಿಂತಿಸಬೇಕಾದ ಭಗವದ್ರೂಪ–**ಪ್ರತೀಹಾರ** ನಾಮಕ ಶ್ರೀ ಪರಮಾತ್ಮ. ಅವನೇ **ಅನಿರುದ್ಧರೂಪಿಯು.** ದೇಹದಲ್ಲಿ ಉಂಟಾಗುವ ವ್ರಣರೂಪವಾದ ಗಾಯಗಳು ಈ ಧಾತುವಿ

ನಿಂದಲೇ. ಅಂತಹ ವ್ರಣಪರಿಹಾರಕವಾದ **ಲಕ್ಷ್ಮೀಪತಿಯೇ** ಚರ್ಮಕ್ಕೆ ನಿಯಾಮಕನಾಗಿರುವನು.

**ಪ್ರಮಾಣ–**

**ಚರ್ಮಣಿ ಪ್ರತಿರಾಖ್ಯೋಽಹ್ಯನಿರುದ್ಧಸ್ತ್ವಸ್ಯೈವಚ ।**
**ಲಕ್ಷ್ಮೀಪತಿಸ್ತು ತತ್ರೈವ ವರ್ತತೇ ತನ್ನಿಯಾಮಕಃ ॥**
**—ಅಧ್ಯಾತ್ಮಮಾಲಾ ವಾಕ್ಯ**

**(೩) ಮಾಂಸಾವರಣ**

ಚರ್ಮಾವರಣದ ಒಳಗಿನ ಪದರದಲ್ಲಿ ಮಾಂಸ ವೆಂಬ ಧಾತುವಿದೆ. ಇದು ತೃತೀಯಾವರಣವು. ಮಾಂಸದಲ್ಲಿ **ಉದ್ಗೀಥನಾಮಕನಾಗಿ ಶ್ರೀ** ಪರಮಾತ್ಮನಿದ್ದಾನೆ. ವ–ಕಾರವರ್ಣಪ್ರತಿಪಾದ್ಯನಾದ **ವರನಾಮಕ ಶ್ರೀ** ಪರಮಾತ್ಮನು ಮಾಂಸದಲ್ಲಿದ್ದಾನೆ. ಪರಮಮಂಗಳರೂಪಿಯಾದ **ಶ್ರೀಮನ್ನಾರಾಯಣನು** ನಿಯಾಮಕನು. ಪ್ರಮಾಣವನ್ನು ಸಾರಗೊಳಿಸುವುದರಿಂದ **ಮಾಂಸ** ಶಬ್ದ ವಾಚ್ಯನು.

**ಪ್ರಮಾಣ**

**ಮಾಂಸೇಷೂದ್ಗೀಥ ನಾಮಚ ನಾರಾಯಣ ಸುರೂಪವಾನ್ ॥**
**—ಅಧ್ಯಾತ್ಮಮಾಲಾಗ್ರಂಥ**

**(೪) ರುಧಿರಾವರಣ**

ಮಾಂಸಖಂಡಗಳ ಒಳಪದರಗಳಲ್ಲಿ **ರಕ್ತ** ವೆಂಬ ಧಾತುವಿದೆ, ಇದು ಚತುರ್ಥಾವರಣವು, ರುಧಿರಗತ ಭಗವದ್ರೂಪ **ನಿಧನ. ಶಂ**–ಕಾರ ವರ್ಣ ವಾಚ್ಯನಾಗಿ **ಶಾಂತಸಂವಿತ್** ಎಂಬ ರೂಪದಿಂದ ಇರುವನು. **ಸಂಕರ್ಷಣ ರೂಪಿಯು** ಧಮನಿಗಳಲ್ಲಿ ರಕ್ತಪರಿಚಲನೆ ದೇಹಾದ್ಯಂತ ಶಕ್ತಿ ವಿತರಣೆ ಈ ಕಾರ್ಯಗಳಿಗೆ ನಿಯಾಮಕನಾಗಿದ್ದಾನೆ. ರಕ್ತವು ಲೋಹಿತ ರ್ಣವಾಗಿದೆ,

(ಕೆಂಪು) ಆದ್ದರಿಂದ ಲೋಹಿತನಾಮಕನು. ಆದೇ ಸಂಕರ್ಷಣನು **ಶಾಂತ ಸಂವಿತ್ ರೂಪದಿಂದ** ನಿಯಾಮಕನು.

ಪ್ರಮಾಣ-

**ರಕ್ಷೋ ನಿಧನ ನಾಮಾಚ ತಥಾ ಸಂಕರ್ಷಣಾಭಿಧಃ ।**

**ಶಾಂತಸಂವಿಚ್ಚ ತತ್ರೈವ ವರ್ತತೇ ನಿಯಾಮಕಃ ॥**

—ಅಧ್ಯಾತ್ಮಮಾಲಾ

(೫) **ಮೇದೋ ಆವರಣ**—

ರುಧಿರಾವರಣದ ಒಳಗೆ ಇರುವ ಧಾತುವೇ **ಮೇದಸ್ಸು.** ಇದೇ ಪಂಚಾವರಣವು. ಮೇದಸ್ಸಿನಲ್ಲಿ **ವಷಟ್ಕಾರನಾಮಕ** ಶ್ರೀ ಪರಮಾತ್ಮನು ವಿದ್ಯಮಾನನಾಗಿದ್ದಾನೆ, ಷಂ-ವರ್ಣವಾಚ್ಯನಾದ **ಷಡ್ಗುಣಾತ್ಮಾ** ಎಂಬ ಶಬ್ದವಾಚ್ಯನಾಗಿ ನಿಯಾಮಕನಾಗಿದ್ದಾನೆ. ಇದು ಐಶ್ವರ್ಯಪ್ರದರೂಪವು.

ಪ್ರಮಾಣ-

**ಮೇದಸ್ಯಪಿ ವಷಟ್ಕಾರನಾಮಾ ಷಡ್ಗುಣ ವಿವಚ ॥**

—ಅಧ್ಯಾತ್ಮ ಮಾಲಾಗ್ರಂಥ

(೬) **ಮಜ್ಜಾವರಣ**–

ಮೇದಸ್ಸಿನ ಒಳಪದರಗಳಲ್ಲಿ **ಮಜ್ಜಾ** ಎಂಬ ಧಾತುಇದೆ. ಇದು ಷಷ್ಠಾವರಣವು. **ಆದಿವರಹಾರೂಪೀ** ಶ್ರೀ ಪರಮಾತ್ಮನು ಮಜ್ಜಾಧಾತುವಿನಲ್ಲಿದ್ದಾನೆ. ಸಂ-ವರ್ಣವಾಚ್ಯನಾದ **ಸಾರಾತ್ಮ** ನಾಮಕನು ಮಜ್ಜಾಧಾತುಗತನಾಗಿದ್ದು. ಕೀಲುಗಳ ಸರಾಗ ಚಲನೆಗೆ ಸಹಾಯಕನಾಗಿದ್ದಾನೆ.

ಪ್ರಮಾಣ-

**ಮಜ್ಜಾಯಾಮಾದಿವರಾಹಾರೂಪೀ ಸಾರಾತ್ಮರೂಪಧೃಕ್ ॥**

—ಅಧ್ಯಾತ್ಮಮಾಲಾ ಗ್ರಂಥ

**ಪ್ರಮಾಣ :–**

**ಮಜ್ಜಾಯಾಮಾದಿವರಾಹರೂಪೀ ಸಾರಾತ್ಮರೂಪಧೃಕ್ ||**
**—ಅಧ್ಯಾತ್ಮಮಾಲಾಗ್ರಂಥ.**

**(೩) ಅಸ್ಥಿ ಆವರಣ :—**

ಕೊನೆಯದಾದ ಸಪ್ತಾವರಣವೆಂಬ ಧಾತುವಿಶೇಷವೇ ಅಸ್ಥಿ, ಮೂಳೆಗಳ ಹಂದರವಾದ (ಅಸ್ಥಿಪಂಜರ) ಈ ಶರೀರಕ್ಕೆ ಸೂಕ್ತವಾದ ಆಕಾರವನು ಕೊಡುವ ಚೌಕಟ್ಟೇ ಅಸ್ಥಿಪಂಜರವು. ಇಂತಹ ಅಸ್ಥಿಯಲ್ಲಿ **ಉಪದ್ರವ** ನಾಮಕ ಶ್ರೀಪರಮಾತ್ಮನಿರುವನು. ದುಷ್ಟರಿಗೆ ಉಪದ್ರವವನ್ನುಂಟು ಮಾಡುವುದರಿಂದ ಶ್ರೀಪರಮಾತ್ಮನಿಗೆ **ಉಪದ್ರವ** ನೆಂಬ ಅಭಿಧಾನ. ಈ ಉಪದ್ರವ ನಾಮಕನೇ **ನೃಸಿಂಹರೂಪೀ** ಹರಿಯು. ಹಂ-ವರ್ಣ ಪ್ರತಿಪಾದ್ಯನಾದ **ಹಂಸ** ನಾಮಕನು ಅಸ್ಥಿಗಳಲ್ಲಿದ್ದು, ಮೂಳೆಗಳಲ್ಲಿ ಶಕ್ತಿಪ್ರದನಾಗಿದ್ದಾನೆ. ಅಸ್ಥಿಗಳಲ್ಲಿ ಉಪದ್ರವ, ನರಸಿಂಹ ಮತ್ತು ಹಂಸ ಈ ಭಗದ್ರೂಪಗಳನ್ನು ಉಪಾಸಿಸಬೇಕು.

**ಪ್ರಮಾಣ :—**

**ಅಸ್ಥಿಷೂಪದ್ರವೋ ನಾಮ ನೃಸಿಂಹೋ ಹಂಸ ಏವ ಚ ||**
**—ಅಧ್ಯಾತ್ಮಮಾಲಾಗ್ರಂಥ.**

ಅಸ್ಥಿ-ಎಂದರೆ ಅತಿಸ್ಥಿರನಾಗಿ, ಮೂಳೆಯಲ್ಲಿ ಅಗ್ನಿಶಬ್ದವಾಚ್ಯನಾಗಿ ಶ್ರೀಹರಿಯು ಇದ್ದಾನೆ.

ಇಂತಹ ಸಪ್ತಾವರಣರೂಪಗಳಾಗಿರುವ **ಸಪ್ತಧಾತುಗಳಲ್ಲಿ** ೪೯ ಮರುದ್ಗಣಗಳಿದ್ದಾರೆ. ಈ ಮರುತ್ತುಗಳ ಸಂಖ್ಯೆಯನ್ನು **ಏಕೋನ ಪಂಚಾ**

**ಶತ್** ಎಂದಿದ್ದಾರೆ ದಾಸವರ್ಯರು. ಅಂದರೆ, **ಪಂಚಾಶತ್**–ಎಂದರೆ ೫೦ ಎಂದರ್ಥ. ಏಕೋನ–ಅಂದರೆ ಅದಕ್ಕೆ ಒಂದು ಕಡಿಮೆ ಎಂದರ್ಥ. ಅಲ್ಲಿಗೆ ೫೦ ಕ್ಕೆ ಒಂದು ಕಡಿಮೆ, ೪೯ ಎಂಬ ಸಂಖ್ಯೆ. ಮರುದ್ಗಣಗಳ ಸಂಖ್ಯೆ ೪೯. ಒಂದೊಂದು ಧಾತುವಿನಲ್ಲಿ ಏಳು ಮರುತ್ತುಗಳಂತೆ, ಸಪ್ತಧಾತುಗಳಲ್ಲಿ ೭×೭=೪೯ ಮರುದ್ಗಣ ಇವೆ.

ಒಬ್ಬೊಬ್ಬ ಮರುತ್ತನಲ್ಲಿ ಒಂದು ರೂಪದಿಂದ ಶ್ರೀಪರಮಾತ್ಮನು ಸಪ್ತಧಾತುಗಳಲ್ಲಿ ೪೯ ರೂಪಗಳಿಂದ ಇದ್ದಾನೆ. ಈ ಸಂಖ್ಯೆಯನ್ನು **ಒಂಭಧಿಕ ನಾಲ್ವತ್ತೆನಿಪ ರೂಪದಿ** ಎಂಬ ಶಬ್ದಪ್ರಯೋಗದಿಂದ ನಿರೂಪಿಸಿರುತ್ತಾರೆ. ಅಂದರೆ ೪೦+೯=೪೯ ಎಂದರ್ಥ. ಸಪ್ತಧಾತುಗತ ಶ್ರೀಹರಿಯ ಸಪ್ತ ರೂಪಗಳಿಗೆ **ಸಪ್ತಸಾಮ** ಎಂದು ಹೆಸರು. (೧) ನಿಧನ, (೨) ಹಿಂಕಾರ, (೩) ಆದಿ, (೪) ಉದ್ಗೀಥ, (೫) ಪ್ರಸ್ತಾವ, (೬) ಪ್ರತಿಹಾರ ಮತ್ತು (೭) ಉಪದ್ರವ ಎಂಬ ಈ ಸಪ್ತ ನಾಮಗಳೇ ಆ ಶ್ರೀಪರಮಾತ್ಮನ **ಸಪ್ತ ಸಾಮಗ ರೂಪಗಳು.**

## ಸಪ್ತಧಾತುಗತ ಭಗವದ್ರೂಪಗಳು

| ಕ್ರಮ ಸಂಖ್ಯೆ | ಸಪ್ತ ಧಾತುಗಳು | ಸಾಮಗ ರೂಪ | ಭಗವದ್ರೂಪ | ನಿಯಾಮಕ ರೂಪ | ಕಾರ್ಯ |
|---|---|---|---|---|---|
| ೧ | ತ್ವಕ್ | ಪ್ರಸ್ತಾವ | ವಾಸುದೇವ | ರಂ-ವರ್ಣವಾಚ್ಯ ಶ್ರೀರಾಮ | ಲಾವಣ್ಯ ಪ್ರದತ್ವ |
| ೨ | ಚರ್ಮ | ಪ್ರತಿಹಾರ | ಅನಿರುದ್ಧ | ಲಂ-ವರ್ಣವಾಚ್ಯ ಲಕ್ಷ್ಮೀಪತಿ | ಪ್ರಣಪರಿಹಾರಕತ್ವ |
| ೩ | ಮಾಂಸ | ಉದ್ಗೀಥ | ನಾರಾಯಣ | ವಂ ವರ್ಣವಾಚ್ಯ ವರ ನಾಮಕನು | ಅಂಗಾಂಗಳ ಚಲನೆ |
| ೪ | ರುಧಿರ | ನಿಧನ | ಸಂಕರ್ಷಣ | ಶಂ-ವರ್ಣವಾಚ್ಯ ಶಾಂತಸಂವಿತ್ | ವೀರ್ಯೋತ್ಪತ್ತಿ |
| ೫ | ಮೇದಸ್ಸು | ಹಿಂಕಾರ | ವಷಟ್ಕಾರ | ಷಂ-ವರ್ಣವಾಚ್ಯ ಷಡ್ಗುಣಾತ್ಮ | ಪುಷ್ಟಿ ಪ್ರದತ್ವ |
| ೬ | ಮಜ್ಜಾ | ಆದಿಸಾಮಗ | ಆದಿವರಾಹ | ಸಂ-ವರ್ಣವಾಚ್ಯ ಸಾರಾತ್ಮ | ಕೀಲುಗಳ ಚಲನೆ |
| ೭ | ಅಸ್ಥಿ | ಉಪದ್ರವ | ನರಸಿಂಹ | ಹಂ-ವರ್ಣವಾಚ್ಯ ಹಂಸ | ದೇಹದ ನಿಲುವು ಮತ್ತು ಆಕಾರ |

## ಪದ್ಯ (೨೮)

**ಮೂಲ–**

ಸಪ್ತಧಾತುಗಳೊಳಹೊರಗೆ ಸಂ ।
ತಪ್ತ ಲೋಹಗತಾಗ್ನಿಯಂದದಿ ।
ಸಪ್ತ ಸಾಮಗನಿಪ್ಪನನ್ನಮಯಾದಿ ಕೋಶದೊಳು ॥
ಲಿಪ್ತನಾಗದೆ ತತ್ತದಾಹ್ವಯ ।
ಕ್ಲೃಪ್ತ ಭೋಗವ ಕೊಡುತ ಸ್ವಪ್ನ ಸು ।
ಷುಪ್ತಿ ಜಾಗ್ರತಿಯೀವ ತೈಜಸ ಪ್ರಾಜ್ಞ ವಿಶ್ವಾಖ್ಯ ॥ ॥೨೮॥

**ಅವತರಣಿಕೆ :**

ಪೂರ್ವೋಕ್ತ ಸಪ್ತಧಾತುಗಳ ಒಳಗೆ ಅನ್ನಮಯಾದಿ ಪಂಚಕೋಶಗಳಿವೆ. ಚೆನ್ನಾಗಿ ಕಾಯಿಸಲ್ಪಟ್ಟ ಲೋಹದಲ್ಲಿರುವ ಅಗ್ನಿಯಂತೆ, ಹೀಕಾರಾದಿ ಸಪ್ತಸಾಮಗನಾದ ಶ್ರೀಪರಮಾತ್ಮನು ಆ ಪಂಚಕೋಶಗಳಲ್ಲಿ ಆಯಾಯಾ ಕೋಶಗಳ ಹೆಸರಿನಿಂದಲೇ ಕರೆಯಿಸಿಕೊಳ್ಳುತ್ತಾ. ಲೋಹಗತಅಗ್ನಿಯಂತೆ ನಿರ್ಲಿಪ್ತನಾಗಿ, ಜೀವರಿಗೆ ಅವರವರ ಕರ್ಮಾನುಸಾರ ಎಷ್ಟು ಭೋಗ ಗಳನ್ನು ಕೊಡಬೇಕೋ, ಅಷ್ಟನ್ನು ಮಾತ್ರ ಕ್ಲಿಪ್ತವಾಗಿ ನೀಡುತ್ತಾ, ವಿಶ್ವ ನಾಮಕನಾಗಿ ಜಾಗ್ರದಾವಸ್ಥೆಯನ್ನೂ, ತೈಜಸರೂಪಿಯಾಗಿ ಸ್ವಪ್ನಾವಸ್ಥೆ ಯನ್ನೂ ಮತ್ತು ಪ್ರಾಜ್ಞನಾಮಕನಾಗಿ ಸುಷುಪ್ತ್ಯವಸ್ಥೆಯನ್ನೂ ಕಾಲ ಕಾಲಕ್ಕೆ ಜೀವರಿಗೆ ಕೊಡುತ್ತಿರುವನು ಎಂದು ತಿಳಿಸುತ್ತಾರೆ—**ಸಪ್ತಧಾತು ಗಳೊಳಹೊರಗೆ**—ಎಂಬ ಪ್ರಸಕ್ತ ಸಂಧಿಗತ ೨೮ ನೆಯ ಈ ಪದ್ಯದಿಂದ. ॥೨೮॥

**ಪ್ರತಿಪದಾರ್ಥ :-**

**ಸಪ್ತಧಾತುಗಳ**=ಸ್ಥೂಲದೇಹಕ್ಕೆ ಆವರಣ ರೂಪದಲ್ಲಿರುವ ತ್ವಗಾದಿ ಏಳು ಧಾತುಗಳ **ಒಳಹೊರಗೆ**=ಒಳಗೆ ಮತ್ತು ಹೊರಗೆ (ಅಂತರ್ಬಹಿಗಳಲ್ಲಿ) **ಸಂತಪ್ತ** =ಚೆನ್ನಾಗಿ ಕಾಯಿಸಲ್ಪಟ್ಟ **ಲೋಹಗತೆ**=ಕಬ್ಬಿಣದಲ್ಲಿರುವ **ಅಗ್ನಿಯಂದದಿ**=ಅಗ್ನಿಯೋಪಾದಿಯಲ್ಲಿ (ಬೆಂಕಿಯಂತೆ) **ಅನ್ನಮಯಾದಿ ಕೋಶದೊಳು** = ಸಪ್ತಧಾತುಗಳಲ್ಲಿ ಅಂತರ್ಭೂತವಾಗಿರುವ ಅನ್ನಮಯಾದಿ ಪಂಚಕೋಶಗಳಲ್ಲಿ **ಸಪ್ತಸಾಮಗ**=ನಿಧನ. ಹಿಂಕಾರಾದಿ ಸಪ್ತಸಾಮ ಶಬ್ದವಾಚ್ಯನಾದ ಶ್ರೀಪರಮಾತ್ಮನು **ಇಪ್ಪ**=ನಿಯಾಮಕನಾಗಿ ಇದ್ದಾನೆ. **ಲಿಪ್ತನಾಗದೆ**=ಕಾಯಿಸಲ್ಪಟ್ಟ ಕಬ್ಬಿಣದಲ್ಲಿ ಅಗ್ನಿ ಇದ್ದರೂ, ಅದರಿಂದ ನಿರ್ಲಿಪ್ತನಾಗಿರುವಂತೆ, (ಸಪ್ತ ಧಾತುಗಳು ಮತ್ತು ಪಂಚ ಕೋಶಗಳಲ್ಲಿದ್ದರೂ, ಆವುಗಳಿಂದ ಅತ್ಯಂತ ಭಿನ್ನನಾಗಿ) **ತತ್ತದಾಹ್ವಯ**= ಆಯಾಯಾ ಕೋಶನಾಮಗಳಿಂದಲೇ ವಾಚ್ಯನಾಗಿದ್ದು, **ವಿಶ್ವಾಖ್ಯ** = ವಿಶ್ವನಾಮಕನಾಗಿ **ಜಾಗ್ರತಿ** = ಜಾಗ್ರದವಸ್ಥೆಯನ್ನೂ, **ತೈಜಸ**= ತೈಜಸನಾಮಕನಾಗಿ **ಸ್ವಪ್ನ**=ಸ್ವಪ್ನಾವಸ್ಥೆಯನ್ನೂ **ಪ್ರಾಜ್ಞ**=ಪ್ರಾಜ್ಞನಾಮಕನಾಗಿ **ಸುಷುಪ್ತಿ** = ಗಾಢನಿದ್ರೆ ಎಂಬ ಸುಷುಪ್ತ್ಯವಸ್ಥೆಯನ್ನೂ **ಈವ**=ಜೀವರಿಗೆ ಕಾಲಕಾಲಕ್ಕೆ ಕೊಡುತ್ತಿರುವನು. ॥೨೮॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಸಪ್ತಧಾತುಗಳ ವಿಚಾರವೇ ಹೇಳುತಾರೆ.

ಪೂರ್ವೋಕ್ತ ಸಪ್ತಕಾಲನಾಮಕ ನಿಧನಾದಿ ಏಳು ಭಗವದ್ರೂಪಗಳು ಸ್ಥೂಲದೇಹಗತ ತ್ವಗಾದಿ ಏಳು ಧಾತುಗಳ ಅಂತರ್ಬಹಿಯಲ್ಲಿ, ಚಂದಾಗಿ ಅಗ್ನಿಯಲ್ಲಿ ಕಾಸಲ್ಪಟ್ಟ ಕಬ್ಬಿಣಗತ ಅಗ್ನಿಯೋಪಾದಿಯಲ್ಲಿ ಇರೋವನಾಗಿದ್ದಾನೆ. ಅನ್ನಮಯಾದಿ ಐದು ಕೋಶಗಳು ಸಪ್ತಧಾತುಗಳಲ್ಲಿ ಅಂತರ್ಭೂತ

ಗಳು, ಸಪ್ತಧಾತುಗಳ ಸಂಗಡ ಅನ್ನಮಯಾದಿ ಕೋಶದಲ್ಲೂನೂ ನಿಧನಾದಿ ರೂಪಗಳಿಂದ ವ್ಯಾಪ್ತವಾಗಿ,ಆಯಾ ಕೋಶ ನಾಮಗಳಿಂದ ಇದ್ದು, ಆಯಾ ಕೋಶಗಳಿಂದಾಗಲೀ ತತ್ತತ್ಕಾರ್ಯಗಳಿಂದಾಗಲೀ ಅವುಗಳಿಗೆ ಸಂಬಂಧಪಡದೆ, ಆಯಾ ಜನ್ಮದಲ್ಲಿ ಆಯಾ ದೇಹದಿಂದ ಪೂರ್ವ ಕರ್ಮವನನುಸರಿಸಿ ಕ್ಲುಪ್ತವಾಗಿ ಭೋಗಮಾಡತಕ್ಕ ಸುಖ ದುಃಖಾದಿ ಭೋಗಗಳು ಕೊಡುತ್ತಾ ಇರುತ್ತಾನೆ, ಇದರ ಭೋಗಾರ್ಥ, ವಿಶ್ವನಾಮಕ ಪರಮಾತ್ಮ ದಕ್ಷಿಣ ನೇತ್ರದಲ್ಲಿ ಇದ್ದು, ಜಾಗ್ರದವಸ್ಥೆಯನ್ನೀನು. ತೈಜಸನಾಮಕನು ಕಂಠದೇಶಗತನಾಗಿ ಸ್ವಪ್ನಾವಸ್ಥಾವನ್ನೀನು, ಪ್ರಾಜ್ಞನಾಮಕನು ಹೃದಯಸ್ಥನಾಗಿ ನಿದ್ರಾವಸ್ಥಾವನ್ನೀನು, ಈ ಮೂರು ರೂಪಗಳಿಂದ ಪ್ರಸಿದ್ಧನಾಗಿ, ಈ ಅವಸ್ಥಾತ್ರಯ ಗಳ, ಗುಣತ್ರಯಗಳ ದ್ವಾರಾ ಐದಸತಾನೆ ಎಂತ ತಾತ್ಪರ್ಯ. ॥೨೮॥

(೨) ಭಾವಪ್ರಕಾಶಿಕೆ ವ್ಯಾಖ್ಯಾನ–

ಮೇಲೆ ಹೇಳಿದ ೭ ಧಾತುಗಳೊಳಗೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯಗಳೆಂಬ ಪಂಚಕೋಶ ಗಳಿರುವವು. ಆ ಕೋಶಗಳಿಂದ ಕೂಡಿದ ೭ ಧಾತುಗಳಲ್ಲಿ ನಿಧನಾದಿ ಸಪ್ತ ರೂಪಗಳಿರುವವು. ಅಲ್ಲದೆ,

"ಸಪ್ತಧಾತುಷು ಧಾತ್ವಂತಃ ಕ್ರಮಾತ್ಕೋಶಾಃ ಪ್ರತಿಷ್ಟಿತಾಃ ।
ತನ್ನಾಮಕಾನಿರುದ್ಧಾದಿ ರೂಪಾಣ್ಯೇಷು ವಿಚಿಂತಯೇತ್" ||

—ಎಂಬ ಅನಿರುದ್ಧಾದಿ ಪಂಚರೂಪಗಳು ಆಯಾ ಕೋಶಗಳ ಹೆಸರ್ರು ಗಳಿಂದ, ಆ ಕೋಶಗಳಲ್ಲಿರುವವು. ಆದರೂ ಈ ರೂಪಗಳೆಲ್ಲವೂ ಚೆನ್ನಾಗಿ ಕೆಂಪಗೆ ಕಾದಿರುವ ಕಬ್ಬಿಣದಲ್ಲಿ ಕಾಣುವ ಬೆಂಕಿಯಂತೆ ನಿರ್ಲಿಪ್ತವಾಗಿದ್ದು, ಆಯಾ ಜೀವರ-ಪ್ರಾರಬ್ಧಾದಿಗಳನ್ನು ಅನುಸರಿಸಿ, ಅವರವರ ಕ್ಲಿಪ್ತವಾದ ಭೋಗಗಳನ್ನು ಕೊಡುತ್ತಿರುವವು. ಇದಲ್ಲದೆ ವಿಶ್ವ, ತೈಜಸ, ಪ್ರಾಜ್ಞ ಎಂಬ ಮೂರು ರೂಪಗಳಲ್ಲಿದ್ದು, ಜಾಗ್ರದವಸ್ಥೆಯನ್ನು, ಸ್ವಪ್ನಾವಸ್ಥೆಯನ್ನು, ಸುಷುಪ್ತ್ಯವಸ್ಥೆಯನ್ನು ಕೊಡುವನು. ||೨೮||

**(೩) ಭಾವದರ್ಪಣ ವ್ಯಾಖ್ಯಾನ :-**

ಸಪ್ತಧಾತುಗೇತಿ ॥

**ತದುಕ್ತಂ ಮಾನಸಸ್ಮೃತೌ ॥**

**"ಸಪ್ತಧಾತುಷು ಧಾತ್ವಂತಃ ಕ್ರಮಾಚ್ಛ್ರೋಕಾಃ ಪ್ರತಿಷ್ಠಿತಾಃ ।**
**ತನ್ನಾಮಕಾನಿರುದ್ಧಾದಿ ರೂಪಾಣ್ಯೇಷು ವಿಚಿಂತೇದಿತಿ ॥" ॥೨೮॥**

**(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ(ಸಂಸ್ಕೃತ ಮೂಲ) : –**

"**ಅಸ್ಥಿರಶ್ಚಾಸ್ಥಿನಾಮಕಃ** ॥" ಅಸ್ಥಿಸ್ಥಿತೋ ಹರಿಃ ॥ ಸ್ಪರ್ಶ ಸಂಸ್ಥಿತಃ ಸ್ಪರ್ಶನಾಮಕಃ ॥ ಸ್ಪರ್ಶಹೇತುತ್ವತಃ ಸ್ಪರ್ಶನಾಮಾ ಸ ಭಗವಾನ್ ಹರಿಃ ॥ ಮಜ್ಜಾಸುಸ್ಥಃ ಸ ಮಜ್ಜಾಖ್ಯಃ ಮದಂ ಜನಯತೀತ ಹ ॥ ಪ್ರಮಾಣಂ ಸಾರಯೇತ್ ಯಸ್ಮಾತ್ ಮಾಂಸಾಖ್ಯಃ ಮಾಂಸಸಂಸ್ಥಿತಃ ॥ ಲೋಹಿತಾಖ್ಯಃ ರಕ್ತವರ್ಣಃ ಲೋಹಿತಸ್ಥಃ ಜನಾರ್ದನಃ ॥"–ಇತಿ **ಐತರೇಯೇ** ॥ ನಿಧನ ಹಿಂಕಾರಾದಿ ಪ್ರಸ್ತಾವೋದ್ಗೀಥ ಪ್ರತಿಹಾರೋಪದ್ರವಾಹ್ವ ಸಪ್ತಸಾಮಾನಿ ॥ ಪಂಚಕಂ ನಿರುಕ್ತಮ್ ದ್ವಯಂ ಚ "ಆದಿಃ ಕಲ್ಪಾದಿ ಹೇತುತ್ವಾತ್ ॥" ಇತಿ ॥ "ದುಷ್ಟೋಪದ್ರವ ಕರ್ತೃತ್ವಾತ್ ॥" ಇತಿ **ಛಾಂದೋಗ್ಯೇ** ॥೨೮॥

**ಕನ್ನಡಾರ್ಥ**

ತ್ವಕ್, ಚರ್ಮ, ಮಾಂಸ, ರುಧಿರ, ಮೇದಸ್ಸು, ಮಜ್ಜಾ, ಅಸ್ಥಿ—ಇವು ಸಪ್ತಧಾತುಗಳು. ಸ್ಥೂಲದೇಹಗತ ಈ ಸಪ್ತಧಾತುಗಳಲ್ಲಿ ಆಯಾಯಾ ನಾಮಗಳಿಂದ ಶ್ರೀಹರಿ ಇದ್ದಾನೆ.

(೧) ಅಸ್ಥಿರ–ಅತಿಸ್ಥಿರನಾದುದರಿಂದ, ಅಸ್ಥಿಯಲ್ಲಿ ಅಗ್ನಿಶಬ್ದವಾಚ್ಯನಾಗಿರುವನು.

(೨) ಸ್ಪರ್ಶೇಂದ್ರಿಯದಲ್ಲಿದ್ದು, ಸ್ಪರ್ಶಜ್ಞಾನವನ್ನುಂಟುಮಾಡುವುದರಿಂದ, ಸ್ಪರ್ಶನಾಮಕನು.

(3) ಮದವನ್ನು ಜನಯಿಸುತ್ತಾನಾದ್ದರಿಂದ "ಮಜ್ಜಾ" ಶಬ್ದವಾಚ್ಯನು.

(೪) ಪ್ರಮಾಣವನ್ನು ಸಾರಗೊಳಿಸುವುದರಿಂದ "ಮಾಂಸ" ನಾಮಕನು.

(೫) ಲೋಹಿತ – ಕೆಂಪುವರ್ಣ ವಿಶಿಷ್ಟನಾಗಿ ರಕ್ತದಲ್ಲಿರುವುದರಿಂದ "ಲೋಹಿತ" (ರುಧಿರ) ನಾಮಕನು. ಹೀಗೆ **ಐತರೇಯ ಉಪನಿಷದ್ಭಾಷ್ಯದಲ್ಲಿ ಉಕ್ತವಾಗಿದೆ.**

(೧) ನಿಧನ, (೨) ಹಿಂಕಾರ, (೩) ಆದಿ, (೪) ಉದ್ಗೀಥ, (೫) ಪ್ರಸ್ತಾವ, (೬) ಪ್ರತಿಹಾರ ಮತ್ತು (೭) ಉಪದ್ರವ-ಎಂಬ ಸಪ್ತಸಾಮವಾಚ್ಯನಾಗಿದ್ದಾನೆ.

(೬) ಕಲ್ಪಾದಿಗಳಿಗೆ ಕಾರಣನಾದ್ದರಿಂದ ಕಲ್ಪಾದಿಯಲ್ಲಿ ಜಗತ್ಸೃಷ್ಟಿಕರ್ತನಾದ್ದರಿಂದ "ಆದಿ" ಶಬ್ದವಾಚ್ಯನು,

(೭) ದುಷ್ಟರಿಗೆ ಉಪದ್ರವವನ್ನು ಕೊಡುವನಾದ್ದರಿಂದ –"ಉಪದ್ರವ"–ನಾಮಕನು. –ಹೀಗೆಂದು **ಛಾಂದೋಗ್ಯ ಭಾಷ್ಯದಲ್ಲಿ** ನಿರೂಪಿತವಾಗಿದೆ. ॥೨೮॥

## (೫) ಶ್ರೀ ಗುರುಹೃದಯಪ್ರಕಾಶಿಕೆ ವ್ಯಾಖ್ಯಾನ

ಮೇಲೆ ಹೇಳಿದ ಸಪ್ತಧಾತುಗಳೇ ಅನ್ನಮಯಾದಿ ಕೋಶಗಳೆಂಬ ಐದು ಚೇಲಗಳ ಒಳಗೆ ಹೊರಗೆ ಸಹಾ ಇರುವುದರಿಂದ, ನಿಧನ ಹಿಂಕಾರಾದಿ ಸಪ್ತಸಾಮಗತ ಪೂರ್ವೋಕ್ತ ರೂಪಗಳನ್ನು, ಜಾಗ್ರದಾದವಸ್ಥಾಪ್ರದ ರೂಪಗಳನ್ನೂ ಸಹಾ ತಿಳಿಸುತ್ತಾರೆ, ಸಪ್ತಧಾತುಗಳೆಂದು. ಮೇಲೆ ಹೇಳಿದ ಸಪ್ತ

ಧಾತುಗಳ ಒಳಗೆ ಹೊರಗೆ ಸಹಾ ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಎಂಭ ಐದು ಕೋಶಗಳಲ್ಲೂ, ಹಿಂಕಾರ ನಿಧನ ಪ್ರಸ್ತಾವ ಪ್ರತಿಹಾರ ಉದ್ಗೀಥ ಆದಿ ಉಪದ್ರವ ಎಂಬ ಸಪ್ತಸಾಮ ನಾಮಕ ಪ್ರದ್ಯುಮ್ನಾದಿ ಪೂರ್ವೋಕ್ತ ರೂಪ ಸಪ್ತಕವುಳ್ಳ ದೇವರು, ಸಂತಪ್ತ ಲೋಹದಲ್ಲಿರುವ ಅಗ್ನಿಯಂತೆ ನಿರ್ಲಿಪ್ತನಾಗಿದ್ದು, ಕ್ಲುಪ್ತಭೋಗ ಎಂದರೆ ಆಯಾಯಾ ದೇಹಗತಜೀವಗೆ ಅನುಭವಿಸುವುದಕ್ಕೆ ಸಿದ್ಧವಾದ ಪ್ರಾರಬ್ಧವೆಂಬ ಬಗೆ ಬಗೆ ಸುಖ-ದುಃಖಗಳನ್ನು ಕೊಡುತ್ತಿರುವನು. ವಿಶ್ವ ತೈಜಸ ಪ್ರಾಜ್ಞ ಎಂಬ ಮೂರು ರೂಪದಿಂದ ಕ್ರಮೇಣ ಜಾಗ್ರತ್ಸ್ವಪ್ನಸುಷುಪ್ತಿಗಳನ್ನೂ ಕೊಡುವನು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ನಮ್ಮ ಸ್ಥೂಲದೇಹಕ್ಕೆ ಆವರಣರೂಪದಲ್ಲಿರುವ **ಸಪ್ತಧಾತು** ಗಳು ಯಾವುವೆಂದರೆ-

೧. ತ್ವಕ್, ೨. ಚರ್ಮ, ೩. ಮಾಂಸ, ೪. ರುಧಿರ, ೫. ಮೇದಸ್ಸು, ೬. ಮಜ್ಜಾ ಮತ್ತು ೭. ಅಸ್ಥಿ.

ಇಂತಹ ಸಪ್ತಧಾತುಗಳ ಒಳಗೆ **ಪಂಚಕೋಶಗಳಿವೆ.** ಈ ಪಂಚ ಕೋಶಗಳು ಕ್ರಮವಾಗಿ-

೧. ಅನ್ನಮಯ ಕೋಶ. ೨. ಪ್ರಾಣಮಯಕೋಶ. ೩. ಮನೋಮಯ ಕೋಶ. ೪. ವಿಜ್ಞಾನಮಯ ಕೋಶ ಮತ್ತು ೫. ಆನಂದಮಯ ಕೋಶ.

ಪೂರ್ವೋಕ್ತ ಪಂಚಕೋಶಗಳು ಸಪ್ತಧಾತುಗಳ ಒಳಹೊರಗೆ ಎಂದರೆ ಒಂದು ಧಾತುವಿನ ಅಂತರ್ಭಾಗದಲ್ಲಿದ್ದರೆ, ಆ ಕೋಶವು ಆ ಧಾತುವಿನ ಒಳ

ಗಿರುವ ಇನ್ನೊಂದು ಧಾತುವಿನ ಹೊರ ಆವರಣದಲ್ಲಿರಬೇಕಾಯಿತು. ಹೀಗೆ ವಿದ್ಯಮಾನವಾಗಿರುವ ಪಂಚಕೋಶಗಳು ತೇಜೋಮಯ ಹಾಗೂ ಅತೀಂದ್ರಿಯ (ನಾಡೀ ವ್ಯೂಹಗಳಿದ್ದಂತೆ) ಒಂದು ಪಾತ್ರೆಯಲ್ಲಿ ಇನ್ನೊಂದು ಪಾತ್ರೆ ಅಡಕವಾಗಿರುವಂತೆ ಈ ಸಪ್ತಧಾತುಗಳಲ್ಲಿ ಅಂತರ್ಭೂತವಾಗಿವೆ.

೨. ಈ ಪಂಚಕೋಶಗಳಲ್ಲಿ ಅನಿರುದ್ಧ, ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ ಎಂಬ ಪಂಚರೂಪಗಳಿಂದ ಶ್ರೀ ಪರಮಾತ್ಮನು ಪರಮಮುಖ್ಯವೃತ್ತಿಯಿಂದ ಕೋಶಾಭಿಮಾನಿಯಾಗಿದ್ದಾನೆ.

**ಪ್ರಮಾಣ :—**

**"ಸಪ್ತಧಾತುಷು ಧಾತ್ವಂತಃ ಕ್ರಮಾತ್ಕೋಶಾಃ ಪ್ರತಿಷ್ಠಿತಾಃ ।**
**ತನ್ಮಾನುಕಾನಿರುದ್ಧಾದಿ ರೂಪಾಣ್ಯೇಷು ವಿಚಿಂತೇದಿತಿ ॥"**

—ಇತಿ **ಮಾನಸಸ್ಮೃತೌ** ॥

೩. ಕಬ್ಬಿಣವನ್ನು ಅಗ್ನಿಯಲ್ಲಿ ಚೆನ್ನಾಗಿ ಕಾಯಿಸಿದಾಗ, ಅದು ಕೆಂಪಗೆ ಪ್ರಜ್ವಲಿಸುವುದು. ಕಬ್ಬಿಣವು ಅಧಿಷ್ಠಾನ. ಅದರಲ್ಲಿ ಅಂತರ್ಭೂತವಾಗಿರುವ ಅಗ್ನಿಯು ಕಬ್ಬಿಣದಿಂದ ನಿರ್ಲಿಪ್ತವಾಗಿರುವುದು. ಅಂದರೆ ಅಗ್ನಿಯು ಕಬ್ಬಿಣದಿಂದ ಭಿನ್ನವಾಗಿರುವುದು. ಆದರೆ ಎರಡೂ ಏಕದೇಶೀಯವಾಗಿರುವುವು, ಇದನ್ನು **ತಪ್ತಲೋಹಗತಾಗ್ನಿಯಂದದಿ**—ಎಂಬ ಸುಂದರ ದೃಷ್ಟಾಂತದಿಂದ ವಿವರಿಸುತ್ತಾರೆ.

೪. ತಪ್ತಲೋಹಗತ ಅಗ್ನಿಯೋಪಾದಿಯಲ್ಲಿ ಶ್ರೀ ಪರಮಾತ್ಮನು **ಸಪ್ತಸಾಮಗ**ನೆಂದೆನಿಸಿ, ಈ ಪಂಚಕೋಶಾಂತರ್ಗತನಾಗಿ, ಸಪ್ತಧಾತುಗತನಾಗಿ ಇದ್ದಾನೆ.

ಸಪ್ತಧಾತ್ವಂತರ್ಗತ ಶ್ರೀ ಪರಮಾತ್ಮನ ಸಪ್ತಭಗವದ್ರೂಪಗಳು ಇಂತಿವೆ—

೧. ಪ್ರಸ್ತಾವ (ತ್ವಕ್ಕಿನಲ್ಲಿ) ೨. ಪ್ರತಿಹಾರ (ಚರ್ಮದಲ್ಲಿ)

೩. ಉದ್ಗೀಥ (ಮಾಂಸದಲ್ಲಿ) ೪. ನಿಧನ (ರುಧಿರದಲ್ಲಿ) ೫. ಹಿಂಕಾರ (ಮೇದಸ್ಸಿದಲ್ಲಿ) ೬. ಮಜ್ಜಾ (ಆದಿ) ಮತ್ತು ೭. ಉಪದ್ರವ (ಅಸ್ಥಿ)

ಪೂರ್ವೋಕ್ತ ಸಪ್ತರೂಪಗಳು **ಸಾಮಗ ವಾಚ್ಯ** ರೂಪಗಳು. ಇದರಿಂದ ಸಪ್ತಧಾತ್ವಂತರ್ಗತ ಶ್ರೀ ಪರಮಾತ್ಮನಿಗೆ **ಸಪ್ತಸಾಮಗನೆಂದು** ಹೆಸರು.

೫. ಸಪ್ತಧಾತುಗಳ ಒಳಹೊರಗೆ ಇರುವ ಪಂಚಕೋಶಗಳ ವಿವರ ಇಂತಿದೆ-

(೧) ತ್ವಕ್ ಚರ್ಮ ಮಾಂಸಗಳ ಮಧ್ಯ-**ಅನ್ನಮಯಕೋಶ.**
(೨) ಮಾಂಸ ಮತ್ತು ರುಧಿರಗಳ ಮಧ್ಯ-**ಪ್ರಾಣಮಯಕೋಶ.**
(೩) ರುಧಿರ ಮತ್ತು ಮೇದಸ್ಸುಗಳ ನಡುವೆ-**ಮನೋಮಯ ಕೋಶ**
(೪) ಮೇದಸ್ಸು ಮತ್ತು ಮಜ್ಜಾಗಳ ನಡುವೆ-**ವಿಜ್ಞಾನಮಯಕೋಶ.**
(೫) ಮಜ್ಜಾ ಮತ್ತು ಅಸ್ಥಿಗಳ ನಡುವೆ-**ಆನಂದಮಯಕೋಶ.**

೬. ಇಂತು ಅನ್ನಮಯಾದಿ ಪಂಚಕೋಶಗಳಲ್ಲಿ, ಸಪ್ತ ಧಾತುಗಳಲ್ಲಿ ಶ್ರೀ ಪರಮಾತ್ಮನು ಏಳು ರೂಪಗಳಿಂದ **ಸಪ್ತಸಾಮಗ** ನೆನಿಸಿ, ಆಯಾಯಾ ಕೋಶಗಳ ಹೆಸರಿನಿಂದಲೇ, ಕಾದ ಕಬ್ಬಿಣದಲ್ಲಿರುವ ಅಗ್ನಿಯಂತೆ, ಆ ಕೋಶಾಂತರ್ಗತನಾಗಿದ್ದರೂ, ಅವುಗಳಿಂದ ನಿರ್ಲಿಪ್ತನಾಗಿದ್ದು, ಆಯಾಯಾ ಕೋಶಗಳ ತತ್ತ್ವಕ್ಕೆ ಅಭಿಮಾನಿಗಳಾದ ದೇವತೆಗಳ ದ್ವಾರಾ, ಕೋಶ ಕಾರ್ಯಗಳನ್ನು ಮಾಡಿ ಮಾಡಿಸುತ್ತಿರುವನು. ಈ ಅಭಿಪ್ರಾಯವನ್ನೇ ಪದ್ಯದಲ್ಲಿ ದಾಸರಾಯರು **ಲಿಪ್ತನಾಗದೆ ತತ್ತದಾಹ್ವಯನಾಗಿ**—ಎಂದಿದ್ದಾರೆ.

೭. ಸಪ್ತಸಾಮಗನಾದ ಶ್ರೀಹರಿಯು ಪಂಚಕೋಶಾಂತರ್ಗತನಾಗಿದ್ದು, ಸಪ್ತಧಾತುಗನಾಗಿ, ಪ್ರಸ್ತಾವಾದಿ ಏಳು ರೂಪಗಳಿಂದ,

ಅನಿರುದ್ಧಾದಿ ಪಂಚರೂಪಗಳಿಂದ ಇದ್ದು, ದೇಹದಲ್ಲಿ ಪ್ರಕಾಶತೋವ್ಯಾಪ್ತ ನಾಗಿರುವ ಜೀವರಿಗೆ ಅವರವರ ಯೋಗ್ಯತೆಗೆ ತಕ್ಕಂತೆ, ಅನಾದಿ ಕರ್ಮಾನು ಸಾರ ಭೋಗಗಳನ್ನು ಕೊಡುತ್ತಾ, ಆ ಭೋಗಗಳ ಅನುಭವರೂಪವಾದ ಫಲವನ್ನು ಜೀವರಿಗೆ ಉಣಿಸುತ್ತಿರುವನು. ಇದೇ ದೇಹ' ದೇಹಗತ ಜೀವ, ದೇಹ ಹಾಗೂ ಜೀವಾಂತರ್ಗತ ಬಿಂಬರೂಪೀ ಶ್ರೀ ಪರಮಾತ್ಮನ ವ್ಯಾಪಾರ ವಿಶೇಷ. ಜೀವರ ಅನುಭವಕ್ಕೆ ತಂದುಕೊಡುವ ಈ ಕ್ರಿಯಾ ವಿಶೇಷದ ಫಲವು ದೇಹಗತ ೭೨,೦೦೦ ನಾಡಿಗಳು, ಸಪ್ತಧಾತುಗಳು ಮತ್ತು ಧಾತ್ವಂತರ್ಭೂತ ಪಂಚಕೋಶಾದಿಗಳ ದ್ವಾರಾ ನಡೆಯುತ್ತಿರುವುದು. ಈ ಅಭಿಪ್ರಾಯವನ್ನೇ **ಕ್ಲುಪ್ತಭೋಗವ ಕೊಡುತ** — ಎಂದು ನಿರೂಪಿಸಿದ್ದಾರೆ.

೭. ಜೀವರ ಅನುಭವಕ್ಕೆ ಬರುವ ಈ ಕ್ಲುಪ್ತ ಭೋಗಗಳನ್ನು ಶ್ರೀ ಪರಮಾತ್ಮನು ದೇಹಗತ ತ್ರಿಸ್ಥಾನಗಳಲ್ಲಿದ್ದು, ರೂಪತ್ರಯಗಳಿಂದ ನೀಡುವನು.

೧. ಜೀವರ ದಕ್ಷಿಣಾಕ್ಷಿಗತನಾಗಿದ್ದು, **ವಿಶ್ವನಾಮಕನು ಜಾಗ್ರದವಸ್ಥೆಗೂ,**
೨. ಕಂಠ ಪ್ರದೇಶದಲ್ಲಿದ್ದು **ತೈಜಸನಾಗಿ ಸ್ವಪ್ನಾವಸ್ಥೆಗೂ,**
೩. ಹೃದಯಸ್ಥನಾಗಿದ್ದು, **ಪ್ರಾಜ್ಞನಾಮಕನಾಗಿ ಸುಷುಪ್ತ್ಯವಸ್ಥೆಗೂ** ಪ್ರೇರಕನಾಗಿದ್ದಾನೆ. ಈ ಅವಸ್ಥಾತ್ರಯಗಳ ದ್ವಾರಾ ದೇಹದಲ್ಲಿ ಪ್ರಕಾಶತೋ ವ್ಯಾಪ್ತನಾದ ಪ್ರತಿಬಿಂಬರೂಪನಾದ ಜೀವನಿಗೆ, ಅವನ ಯೋಗ್ಯತೆ ಹಾಗೂ ಕರ್ಮಕ್ಕೆ ತಕ್ಕಂತೆ ಕ್ಲುಪ್ತವಾದ ಭೋಗಗಳನ್ನು ಈಯುವನು ಎಂದು ಪ್ರಸಕ್ತ ಪದ್ಯದ ತಾತ್ಪರ್ಯಾಭಿಪ್ರಾಯವು. ॥೨೮॥

## ಪಂಚಕೋಶಾಭಿಮಾನಿ ಪರಮಾತ್ಮನ ಭಗವದ್ರೂಪಗಳ ವಿವರ.

| ಕ್ರಮ ಸಂಖ್ಯೆ | ಯಾವ ಯಾವ ಧಾತುಗಳ ನಡುವೆ | ಪಂಚಕೋಶಗಳು | ಕೋಶಾಭಿಮಾನಿ ಭಗವದ್ರೂಪಗಳು | ಸಪ್ತಸಾಮಗ ರೂಪಗಳು |
|---|---|---|---|---|
| ೧ | ತ್ವಕ್‌ಚರ್ಮ-ಮಾಂಸಗಳ ನಡುವೆ | ಅನ್ನಮಯಕೋಶ | ಅನಿರುದ್ಧ | ಪ್ರಸ್ತಾವ-ಪ್ರತೀಹಾರ-ಉದ್ಗೀಥ |
| ೨ | ಮಾಂಸ-ರುಧಿರಗಳ ನಡುವೆ | ಪ್ರಾಣಮಯಕೋಶ | ಪ್ರದ್ಯುಮ್ನ | ಉದ್ಗೀಥ-ನಿಧನ |
| ೩ | ರುಧಿರ-ಮೇದಸ್ಸುಗಳನಡುವೆ | ಮನೋಮಯಕೋಶ | ಸಂಕರ್ಷಣ | ನಿಧನ-ಹಿಂಕಾರ |
| ೪ | ಮೇದಸ್ಸು-ಮಜ್ಜಾಗಳ ನಡುವೆ | ವಿಜ್ಞಾನಮಯಕೋಶ | ವಾಸುದೇವ | ಹಿಂಕಾರ-ಆದಿ |
| ೫ | ಮಜ್ಜಾ-ಅಸ್ಥಿಗಳ ನಡುವೆ | ಆನಂದಮಯಕೋಶ | ನಾರಾಯಣ | ಆದಿ-ಉಪದ್ರವ |

# ಪದ್ಯ (೨೯)

**ಮೂಲ**

**ತೀವಿಕೊಂಡಿಹವಲ್ಲಿ ಮಜ್ಜಕ ।**
**ಳೀವರದಿ ಅಂಗುಲಿಯ ಪರ್ವದ ।**
**ಠಾವಿನಲಿ ಮುನ್ನೂರು ಅರವತ್ತೆನಿಪ ತ್ರಿಸ್ಥಳದಿ ॥**
**ಸಾವಿರದ ಎಂಭತ್ತು ರೂಪವ ।**
**ಕೋವಿದರು ಪೇಳುವರು ದೇಹದಿ ।**
**ದೇವತೆಗಳೊಡಗೂಡಿ ಕ್ರೀಡಿಸುವನು ರಮಾರಮಣ ॥ ॥೨೯॥**

**ಅವತರಣಿಕೆ**

ಸಪ್ತಧಾತುಗಳ ಪೈಕಿ, ಆರನೆಯದಾದ ಮಜ್ಜಾ ಎಂಬ ಧಾತುವು ಬೆರಳುಗಳ ಕೀಲುಗಳ ಸಂಧಿ ಸ್ಥಾನಗಳಲ್ಲಿ (ಪರ್ವ) ಜಿಡ್ಡಿನಂತಿರುವುದು. ಇದರಿಂದ ಕೀಲುಗಳು ಸರಾಗವಾಗಿ ಚಲಿಸುವುವು, ಇಂತಹ ಬೆರಳುಗಳ ಕೀಲುಗಳ ಮೂರು ಸ್ಥಾನಗಳಲ್ಲಿ (ಶರೀರಗತ ಪಾದ, ಕರ ಮತ್ತು ಬೆರಳುಗಳು, ಅಥವಾ ಕೀಲು ಮತ್ತು ಅದಕ್ಕೆ ಸಂಬಂಧಿಸಿದ ಉಭಯ ಪಾರ್ಶ್ವಗತ ಎರಡು ಕೀಲುಗಳು) ೩೬೦ ರೂಪದಿಂದ ಮಜ್ಜಾ ಧಾತುಗನಾಗಿ ಇದ್ದಾನೆ, ೩೬೦ × ತ್ರಿಸ್ಥಾನಗಳು = ೧೦೮೦ ಅಂದರೆ ಸಾವಿರದ ಎಂಭತ್ತು ರೂಪಗಳಿಂದ ಈ ಶರೀರದಲ್ಲಿ ತತ್ತ್ವ ದೇವತೆಗಳ ಗಣ ಸಹಿತನಾಗಿ ಶ್ರೀ ಲಕ್ಷ್ಮೀಪತಿಯು ಕ್ರೀಡಿಸುವನು ಎಂದು ತಿಳಿಸುತ್ತಾರೆ, **ತೀವಿಕೊಂಡಿಹವಲ್ಲಿ**–ಎಂಬ ಪ್ರಸಕ್ತ ಸಂಧಿಗತ ೨೯ ನೆಯ ಈ ಪದ್ಯದಿಂದ, ॥೨೯॥

## ಪ್ರತಿಪದಾರ್ಥ

**ಕಳೇವರದಿ** = ಸಾಧನಶರೀರವೆಂದೆನಿಪ ಈ ಸ್ಥೂಲದೇಹದಲ್ಲಿ **ಅಂಗುಲಿಯ** = ಬೆರಳುಗಳ **ಪರ್ವ** = ಕೀಲುಗಳೆಂಬ ಸ್ಥಾನದಲ್ಲಿ **ತೀವಿಕೊಂಡಿಹ** = ಹಬ್ಬಿ ಹರಡಿಕೊಂಡಿರುವ **ಮಜ್ಜ** = ಮಜ್ಜಾ ಎಂಬ ೭ ನೆಯ ಧಾತುವಿನಲ್ಲಿ **ಅಲ್ಲಿ** = ಕೀಲುಗಳಿಗೆ ಸಂಬಂಧಿಸಿದ **ಮುನ್ನೂರುಅರವತ್ತೆನಿಪ** = ೩೬೦ ಸಂಖ್ಯಾಕವಾದ ಕೀಲುಗಳ **ಠಾವಿನಲಿ** = ಸಂಧಿಸ್ಥಳದಲ್ಲಿ (ನಮ್ಮ ದೇಹಗತ ಕೀಲು ಸಂಧಿಗಳ ಸಂಖ್ಯೆ ೩೬೦. ಪರ್ವ ಎಂದರೆ ಕಾಲ ಗಣತಿಯಿಂದ ಪ್ರತಿ ತಿಂಗಳಿಗೆ ಒಂದು ಪೂರ್ಣಿಮೆ ಮತ್ತು ಒಂದು ಅಮಾವಾಸ್ಯೆಯಂತೆ, ಒಂದು ವರ್ಷದ ಅವಧಿಯಲ್ಲಿ ೨೪ ಪರ್ವ ದಿನಗಳಾಗುವುವು, ಒಂದು ಪಕ್ಷಾಂತದಲ್ಲಿ ಒಂದು ಪರ್ವ. ಒಂದು ಪಕ್ಷಕ್ಕೆ ೧೫ ದಿನಗಳು. ಈ ಗಣನೆಯಂತೆ ೨೪ ಪರ್ವಗಳು × ೧೫ ದಿನಗಳು = ೩೬೦) **ತ್ರಿಸ್ಥಳದಿ** = ಕೈ, ಕಾಲು ಮತ್ತು ಬೆರಳುಗಳು ಎಂಬ ಈ ಮೂರು ಸ್ಥಾನಗಳಲ್ಲಿ, ಅಥವಾ ಒಂದು ಬೆರಳು ಅದಕ್ಕೆ ಸಂಬಂಧಿಸಿದಂತೆ ಉಭಯ ಪಾರ್ಶ್ವಗತ ಕೀಲುಗಳು. ಅಲ್ಲಿಗೆ ಮೂರು ಕೀಲಿನ ಸಂಧಿಗಳಾಗುವುವು. **ಸಾವಿರದ ಎಂಭತ್ತು ರೂಪವ** = ೧೦೮೦ ರೂಪಗಳಿಂದ ಅಂದರೆ ಪ್ರತಿ ಕೀಲಿನಲ್ಲಿಯೂ ೩ ಸಂಧಿಸ್ಥಾನಗಳಂತೆ, ೩೬೦ ಕೀಲುಗಳಲ್ಲಿ, ೩೬೦ × ೩ = ೧೦೮೦ ಆಗುವುದು. **ರಮಾರಮಣ** = ಶ್ರೀ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು **ದೇಹದಿ** = ಈ ಶರೀರದಲ್ಲಿ **ದೇವತೆಗಳೊಡಗೂಡಿ** = ೩೬೦ ದಿವಾಭಿಮಾನಿ ಮತ್ತು ೩೬೦ ನಿಶಾಭಿಮಾನಿ ದೇವತಾಗಣ ಸಹಿತ **ಕ್ರೀಡಿಸುವನು** = ಆಯಾಯಾ ಅಂಗುಲ ಪರ್ವಸ್ಥಾನದಲ್ಲಿದ್ದು ವಿಹಾರ ಮಾಡುತ್ತಾನೆಂದು **ಕೋವಿದರು** = ಬ್ರಹ್ಮಜ್ಞಾನಿಗಳು. **ಪೇಳುವರು** = ಹೇಳುತ್ತಾರೆ, ॥೨೯॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಅವಶಿಷ್ಟ ಸ್ಥೂಲದೇಹದ ವಿಚಾರ ಹೇಳತಾರೆ.

ಈ ಸ್ಥೂಲದೇಹದಲ್ಲಿ ಮೂನ್ನೂರ ಅರವತ್ತು ಸಂಖ್ಯಾ ಎನಿಸ ತಕ್ಕ ಅಸ್ಥಿಗಳು ಸ್ಥೂಲ-ಸೂಕ್ಷಗಳಾಗಿ ಇರೋದಾಗಿ ಅವೆ. ಆರನೆಯದಾದ ಮಜ್ಜಾ ಸಾಂಕೇತವಾದ ಧಾತು ಆಯಾ ಅಸ್ಥಿಗಳಲಿ ಹತ್ತಿಕೊಂಡಿಹವು. ಬೆರಳುಗಳ ಕೀಲುಗಳು, ಅವಕ್ಕೆ ಅನುಸರಿಸಿದ ಎಲುಬುಗಳು ದಾವ ರೀತ್ಯಾ ಅವೋ ಅದೇ ಪ್ರಕಾರ ದೃಶ್ಯಾದೃಶ್ಯಗಳಾಗಿ ಕೀಲುಗಳು ಎಲಬುಗಳು ಅವೆ. ಮುನ್ನೂರ ಅರವತ್ತು ಎನಿಪ ಕೀಲುಗಳ ಸ್ಥಳದಲ್ಲಿ,ಮೂರು ಸ್ಥಾನದಿ ಅಂದರೆ, ಕೀಲು ಒಂದು, ಕೀಲುಗಳಿಗೆ ಉಭಯಪಾರ್ಶ್ವಗತ ಎಲುಬುಗಳು ಎರಡು ಅಂತೂ ಮೂರು, ಈ ಪ್ರಕಾರ ಒಂದೊಂದು ಕೀಲಿಗೆ ಪೂರ್ವಪರಮಧ್ಯ ಇರತಕ್ಕ ಮೂರುಸ್ಥಳಗಳಲ್ಲಿ ಮಜ್ಜ ನಾಮಕ ಧಾತು ಲೇಪವಾಗಿ ಜಿಡ್ಡಿನಿಂದ ಯುಕ್ತವಾಗಿದೆ. ಬಂಡಿಚಕ್ರಕ್ಕೆ ಕಂದಣಿ ಎನತಕ್ಕ ಎಣ್ಣೆ (ಕೀಲೆಣ್ಣೆ) ಹ್ಯಾಂಗಿ ರಬೇಕೋ ಹಾಂಗೆ ಅದೆ. ಮುನ್ನೂರ ಅರವತ್ತಕ್ಕೆ ಒಂದೊಂದಕ್ಕೆ ಮೂರು ಸ್ಥಾನದ ಮೇರೆಗೆ, ೩೬೦ × ೩ = ೧೦೮೦, ಒಂದು ಸಾವಿರದ ಎಂಭತ್ತು ಆಗತದೆ. ಇಷ್ಟು ಭಗವದ್ರೂಪಗಳು. ಜ್ಞಾನಿಗಳಾದವರು ಈ ರೂಪ ಗಳನ್ನು ಈ ದೇಹದಲ್ಲಿ, ದೇವತೆಗಳ ಸಂಗಡ ಕೂಡಿಕೊಂಡು ಇಹವೆಂದು ಹೇಳೋವರಾಗತಾರೆ. (ಈ ಪ್ರಕಾರ ಇದ್ದುಕೊಂಡು) ಲಕ್ಷ್ಮೀಪತಿಯಾದ ನಾರಾಯಣದೇವರು ಆಯಾಸ್ಥಾನಗಳಲ್ಲಿ ಇದ್ದು ಆಟಗಳ ಆಡೋವನಾ ದ್ದಾನೆ.

ಈ ರೂಪಗಳು ದಾವವೆಂದರೆ ಅಸ್ಥಿಗತ ಉಪದ್ರವ ನಾಮಸಾಂಕೇತ ಭಗವದ್ರೂಪಗಳ ಅಂಶಗಳೆಂದು ತಾತ್ಪರ್ಯ. ಮತ್ತು ಮುನ್ನೂರಅರವತ್ತು

ದಿನಗಳಿಗೆ ಅಭಿಮಾನಿಗಳಾದ ದೇವತೆಗಳು, ತದಂತರ್ಗತ ಭಗವದ್ರೂಪ ಗಳೆಂದೂ ತಾತ್ಪರ್ಯ ॥೨೯॥

(೨) ಭಾವಪ್ರಕಾಶಿಕೆ ವ್ಯಾಖ್ಯಾನ

"ಪಾದ ಹಸ್ತಾಂಗುಲಿಸ್ಥಾನಿ ಯಾನಿ ಪರ್ವಾಣಿ ವಿಗ್ರಹೇ ।
ತತ್ಪರ್ವಸು ಪರಿಜ್ಞಾನಾತ್ಸರ್ವ ನಾಮಾನಿವೈ ಹರೇಃ ॥
ಅಸೀತ್ಯುತ್ತರಸಾಹಸ್ರ ರೂಪಾಣ್ಯೇತಾನಿ ಸರ್ವಶಃ ।
ಯೋ ವಿಜಾನಾತಿ ತಸ್ಯೈವ ನಿತ್ಯಮಾಯುರ್ವಿವರ್ಧತೇ ॥"

ಈ ಶರೀರದ ಪಾದ, ಕರ ಇವುಗಳ ಬೆರಳುಗಳ ಗೆಣ್ಣುಗಳಲ್ಲಿ ಪರ್ವ ನಾಮಕ ಪರಮಾತ್ಮನ ೧೦೮೦ ರೂಪಗಳನ್ನು ಯಾರು ತಿಳಿಯುತ್ತಾರೋ ಅವರಿಗೆ ಆಯುಷ್ಯವು ವೃದ್ಧಿಯಾಗುವುದೆಂಬ ಮಾನಸಸ್ಮೃತಿವಾಕ್ಯವನ್ನೇ ಇಲ್ಲಿ ದಾಸರಾಯರು ಹೇಳಿರುತ್ತಾರೆ.

ಕಾಲು, ಕೈಗಳ ಬೆರಳುಗಳ ಗೆಣ್ಣುಗಳಲ್ಲಿ ಮಜ್ಜ ಎಂಬ ಧಾತು ಸೇರಿ ಕೊಂಡಿರುವುದು. ಪರ್ವಗಳೆಂಬ ಹೆಸರುಳ್ಳ ಪೌರ್ಣಮಿ-ಅಮಾವಸ್ಯೆಗಳು ಒಂದು ವರ್ಷಕ್ಕೆ ೨೪ ಆಗುವುವು. ಒಂದೊಂದು ಪರ್ವಕ್ಕೆ ೧೫ ದಿವಸಗಳ ಮೇರೆ ೨೪ ಪರ್ವಗಳಿಗೆ, ೨೪ × ೧೫ = ೩೬೦ ಆಗುವುವು. ಇವುಗಳಲ್ಲಿ ಪರ್ವನಾಮಕನಾಗಿ ಪರಮಾತ್ಮನು ಪರ್ವಾಭಿಮಾನಿ ದೇವತೆಗಳಿಂದೊಡಗೂಡಿ ವಾಸಮಾಡುತ್ತಿರುವನು. ಬೆರಳುಗಳ ಪರ್ವಗಳಲ್ಲಿ (ಗೆಣ್ಣುಗಳಲ್ಲಿ) ಒಂದೊಂದು ಬೆರಳಿನಲ್ಲಿಯೂ ಮೂರು ಸ್ಥಾನಗಳಿರುವುವು. ಸ್ಥಾನ ಒಂದಕ್ಕೆ ೩೬೦ ರಂತೆ ೩೬೦ × ೩ = ೧೦೮೦ ಆಗುವುವು. ಇಷ್ಟು ರೂಪಗಳಿಂದ ಪರ್ವನಾಮಕನಾಗಿ ಶ್ರೀಲಕ್ಷ್ಮೀಪತಿಯು ತತ್ತದಭಿಮಾನಿ ದೇವತೆಗಳಿಂದೊಡಗೂಡಿ ಕ್ರೀಡಿಸುತ್ತಿರುವನು. ॥೨೯॥

## (೩) ಭಾವದರ್ಪಣ ಟೀಕಾ ವ್ಯಾಖ್ಯಾನ

ತೀವಿಕೊಂಡಿಹ- "ಅವಕಾಶಮಾಡಿಕೊಂಡಿರುವ"-ಎಂದರ್ಥ ॥

"ಪಾದಹಸ್ತಾಂಗುಲಿಸ್ಥಾನಿ ಯಾನಿ ಪರ್ವಾಣಿ ವಿಗ್ರಹೇ ।
ತತ್ಪರ್ವಸು ಪರಿಜ್ಞಾನಾತ್ಪರ್ವನಾಮಾನಿ ವೈ ಹರೇಃ ॥
ಅಸೀತ್ಯುತ್ತರಸಾಹಸ್ರ ರೂಪಾಣ್ಯೇತಾನಿ ಸರ್ವಶಃ ।
ಯೋ ವಿಜಾನಾತಿ ತಸ್ಯೈವ ನಿತ್ಯಮಾಯುರ್ವಿವರ್ಧತ ॥" ಇತಿ
॥೨೯॥

## (೪) ಶ್ರೀ ವ್ಯಾಸದಾಸ ಸಿದ್ಧಾಂತಕೌಮುದೀ (ಸಂಸ್ಕೃತಮೂಲ)

"ತೀವಿ"- ಇತಿ ॥ ಸಮ್ಯೃರ್ದಸಿ ಪರಜ್ಞಾನಾತ್ತು ಪರ್ವಾಣಿ ವಿಷ್ಣೋಃ ರೂಪಾಣಿ ॥ ಆಸ್ಥಾನಾತ್ ಮದನಾಶ್ಚೈವ ಹ್ಯಸ್ಥಿ ಮಜ್ಜಾಭಿಧಾನಿ ಚ ॥" ಷಷ್ಟ್ಯುತ್ತರ ಶತತ್ರಯಮಿತ್ಯುಕ್ತೇಃ ॥ ಪೃಥಕ್ ಮೇಲನೇತು "ಸಾಶೀತಿಕ ಸಹಸ್ರಕಮ್- ಇತಿ ಚ ಐತರೇಯೇ ॥೨೯॥

## ಕನ್ನಡಾರ್ಥ

"ತೀವಿ"- ಎಂಬ ಪದ್ಯದಿಂದ. ವಿಷ್ಣುವು ಪೂರ್ಣಾನಂದ ಜ್ಞಾನಮಯನು. ಆದ್ದರಿಂದ ವಿಷ್ಣುವಿನ ರೂಪಗಳಿಗೆ ಪರ್ವ ಎಂದು ಹೆಸರು,

ಅತಿ ದಾರ್ಢ್ಯ- ಸ್ಥೈರ್ಯವೀಯುವುದರಿಂದ ಅಸ್ಥಿಗಳೆಂದೂ, ಮದವನ್ನು ಜನಯಿಸುವುದರಿಂದ ಮಜ್ಜಾ ಎಂದೂ, ಅಸ್ಥಿ ಮತ್ತು ಮಜ್ಜಾಗತ ಭಗವದ್ರೂಪಗಳಿಗೆ ಅಭಿಧಾನ, ಅಸ್ಥಿ, ಮಜ್ಜಾ ಪರ್ವ ಈ ಮೂರರಲ್ಲಿಯೂ ಪ್ರತ್ಯೇಕವಾಗಿ ಒಂದೊಂದರಲ್ಲಿ ೩೬೦ ರೂಪಗಳಂತೆ, ೧೦೮೦ ರೂಪಳಿಂದ ದೇಹದಲ್ಲಿ ಇರುತ್ತಾನೆ, ಈ ತತ್ತ್ವವು ಐತರೇಯ ಭಾಷ್ಯದಲ್ಲಿ ನಿರೂಪಿತವಾಗಿದೆ, ॥೨೯॥

(೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ–

ಮಜ್ಜಾ ಅಸ್ಥಿ ಅಂಗುಲಿ ಪರ್ವವೆಂಬ ಕೈಕಾಲು ಮುಂತಾದ್ದರಲ್ಲಿರುವ ಗೆಣ್ಣುಗಳು ಈ ಮೂರು ಸ್ಥಳದಲ್ಲೂ, ಒಂದೊಂದರಲ್ಲಿ ೩೬೦ ಪ್ರಕಾರ ೧೦೮೦ ಭಗವದ್ರೂಪ ಸ್ಮರಣೋಪಾಸನೆ ತಿಳಿಸುತ್ತಾರೆ, ತೀವಿಕೊಂಡೆಂದು. ಮಜ್ಜವೆಂಬ ರಕ್ತಸಾರದಲ್ಲಿ ೩೬೦ ರೂಪಗಳು, ಅಸ್ಥಿಗಳಲ್ಲಿ ೩೬೦ರೂಪಗಳು ದೇಹದ ಗೆಣ್ಣಾದ ಅಂಗುಲಿಪರ್ವದಲ್ಲಿ ೩೬೦ ಸಹಾ ೧೦೮೦ ಭಗವದ್ರೂಗಳು ತೀವಿಕೊಂಡಿಹವು ಎಂದರೆ ತುಂಬಿರುವವೆಂದು ಜ್ಞಾನಿಗಳು ಹೇಳುವರು. ತತ್ತ್ವೇಶದೇವತೆಗಳಿಂದ ಕೂಡಿ, ರಮಾಪತಿ ಹೀಗೆ ಕ್ರೀಡಿಸುವನೆಂದು ಸ್ಮರಸೆಂತ ಅರ್ಥ.

**ಪ್ರಮಾಣ :—**

**ಷಷ್ಟಿತ್ರಿಂಶತಿ ರೂಪಾಣಿ ವರ್ತಂತೇ ತತ್ರ ಚಾಸ್ಥಿಷು ।**
**ಮಜ್ಜಾಯಾಮಪಿ ಶ್ರೀವಿಷ್ಣುಃ ಷಷ್ಟಿತ್ರಿಂಶತಿರೂಪಧೃಕ್ ॥**
**ಅಂಗಲೀ ಪರ್ವಪೂರ್ವೇಷು ಷಷ್ಟಿತ್ರಿಂಶತಿ ರೂಪವಾನ್ ।**
**ಏವಂಹ್ಯಶೀತಿಸಾಹಸ್ರರೂಪಾಣ್ಯತ್ರಾಪಿ ವೈ ಹರೇಃ ॥**

**–ಎಂಬ ಆಧ್ಯಾತ್ಮಮಾಲಾರ್ಥ ವಿವರಿಸಿತು ॥೨೯॥**

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಮಜ್ಜಾ ಎಂಬುದು ಸಪ್ತಧಾತುಗಳಲ್ಲಿ ಆರನೆಯದು. ಈ ಧಾತು ವಿಶೇಷವು ಎಣ್ಣೆಯಂತೆ ಜಿಡ್ಡಾಗಿರುವುದು, ಇದರಿಂದ ಮೂಳೆಯ ಕೀಲು ಗಳು ಸರಾಗವಾಗಿ ಚಲಿಸಲು ಸಹಕಾರಿಯಾಗಿದೆ. ಚಕ್ರವು ಅಚ್ಚಿನ ಸುತ್ತಲೂ ಸರಾಗವಾಗಿ ತಿರುಗುವಂತೆ ಕಲ್ಲೆಣ್ಣೆಯನ್ನು ಉಪಯೋಗಿಸುವ್ರೋ

ಪಾದಿಯಲ್ಲಿ ಕೀಲುಗಳ ಚಲನೆಗೆ ಮಜ್ಜಾ ಎಂಬ ಧಾತುವಿಶೇಷವು ಅನುಕೂಲವಾಗಿದೆ,

೨. ನಮ್ಮ ಶರೀರದಲ್ಲಿ ಕೀಲುಗಳು ಸರಾಗವಾಗಿ ಚಲಿಸುವಂತೆ ಕೀಲು ಸಂಧಿಗಳಿವೆ. ಇಂತಹ ಅಸ್ಥಿಸಂಧಿಗಳಿಗೆ **ಪರ್ವ** ಎಂದು ಹೆಸರು. ಕೈ, ಕಾಲು ಈ ಅಂಗಭಾಗಗಳಲ್ಲಿರುವ ಬೆರಳಗಳು (**ಅಂಗುಲಿಯು**) ಕೀಲುಗಳ ಸಂಗಮಸ್ಥಾನಗಳ ಅಂದರೆ ಅಸ್ಥಿ ಸಂಧಿಗಳ (**ಪರ್ವದ**) ಸುತ್ತಲೂ ಸಾವಕಾಶವಾಗಿ ಮಜ್ಜಾ ಎಂಬ ಧಾತುವು ಹೊಂದಿಕೊಂಡಿರುವುದು (**ತೀವಿಕೊಂಡಿಹ**)

೩. ಬೆರಳುಗಳ ಇಂತಹ ಕೀಲು ಸಂಧಿಗಳ ಸಂಖ್ಯೆ ೩೬೦. ಇದು ಅಸ್ಥಿ ಸಂಧಿಗಳ ಸಂಖ್ಯಾದೃಷ್ಟಿಯಿಂದ. ಒಂದು ತಿಂಗಳಿನಲ್ಲಿ ಶುಕ್ಲಪಕ್ಷಾಂತ **ಪೌರ್ಣಿಮೆ** ಹಾಗೂ ಕೃಷ್ಣಪಕ್ಷಾಂತ **ಅಮಾವಾಸ್ಯೆ**- ಇವುಗಳಿಗೂ **ಪರ್ವ**ಗಳೆಂದು ನಾಮ. ಒಂದು ವರ್ಷಾವಧಿಯಲ್ಲಿ ಇಂತಹ ಪರ್ವದಿನಗಳು; ತಿಂಗಳಿಗೆ ಎರಡರಂತೆ ೧೨ಮಾಸಗಳು × ೨ ಪರ್ವದಿನಗಳು = ೨೪ ಬರುವುವು. ಒಂದು ಪಕ್ಷಕ್ಕೆ ೧೫ ದಿನಗಳಂತೆ, ಒಂದು ವರ್ಷದಲ್ಲಿ ೨೪ ಪರ್ವದಿನಗಳು × ೧೫ದಿನಗಳು = ೩೬೦ ಆದೇ ಒಂದು ಸಂವತ್ಸರಕ್ಕೆ ಆಗುವ ದಿನಗಳ ಸಂಖ್ಯೆ.

೪. ಪ್ರತಿಯೊಂದು ಕೀಲಿಗೂ ಮೂರು ಸ್ಥಾನಗಳಿವೆ. ಪ್ರಧಾನ ಕೀಲು ಒಂದು. ಅದರ ಉಭಯಪಾರ್ಶ್ವಗಳಲ್ಲಿ ಆ ಕೀಲಿಗೆ ಸಂಬಂಧಿಸಿರುವ ಎರಡು ಸಂಧಿಗಳು. ಅಂದರೆ ಮೂಳೆಯ ಗೆಣ್ಣು (ಪರ್ವ)ಅದರ ಅಕ್ಕಪಕ್ಕಗಳಲ್ಲಿ ೨ ಸಂಗಮ ಸ್ಥಾನಗಳು. ಹೀಗೆ ಒಟ್ಟು ಮೂರು ಸ್ಥಾನಗಳು (**ತ್ರಿಸ್ಥಳದಿ**).

೫. ಹೀಗೆ ಪ್ರತಿಪರ್ವದ ಸಂಗಮ ಸ್ಥಾನದಲ್ಲಿ (**ಠಾವಿನಲ್ಲಿ**) ಮೂರು ಸ್ಥಾನಗಳಂತೆ ೩೬೦ ಪರ್ವಗಳಲ್ಲಿ ೩೬೦ × ೩ = ೧೦೮೦ ಸ್ಥಾನಗಳಿವೆ (**ಸಾವಿರದ ಎಂಭತ್ತುರೂಪವ**) ಇಂತು ೩೬೦ ಪರ್ವಗಳ ಸಂಧಿಗಳಲ್ಲಿ ಶ್ರೀಪರಮಾತ್ಮನು ೧೦೮೦ ರೂಪಗಳಿಂದ ಆ ಅಸ್ಥಿಸಂಧಿಗಳಲ್ಲಿ ವಿದ್ಯಮಾನನಾಗಿದ್ದು,

ಮಜ್ಜಾಗತನಾಗಿ ನಮ್ಮ ದೇಹಗತ ಕೀಲುಗಳ ಚಲನೆಗೆ ಕಾರಣನಾಗಿ, ಬೆರಳುಗಳನ್ನು ನಾವು ಮಡಚುತ್ತೇವೆ. ದೇಹದ ಭಾಗಗಳನ್ನು ತಿರುಗಿಸುತ್ತೇವೆ. ಈ ಕ್ರಿಯೆಯು ಜೀವರಾದ ನಮ್ಮಿಂದ ಮಾಡಲ್ಪಡುತ್ತಿದೆ. ಎಂದು ನಮ್ಮ ನಿತ್ಯ ದಿನಚರಿಯ ಜೀವನದಲ್ಲಿ ಅನುಭವಿಸಿದ್ಧವಾದ ವಿಷಯ. ಆದರೆ ಜೀವನು ಅಸ್ವಂತ್ರನು. ಭಗವತ್ಪ್ರೇರಣಾಶಕ್ತಿ ಇಲ್ಲದೆ ಯಾವ ಕ್ರಿಯೆಯನ್ನೂ ಮಾಡಲಾರ. ಶ್ರೀಪರಮಾತ್ಮನೇ ಈ ಪರ್ವದ ತ್ರಿಸ್ಥಾನಗಳಲ್ಲಿದ್ದು, ಮಜ್ಜಗತನಾಗಿ ಕೀಲುಗಳ ಈ ಚಲನಾಕಾರ್ಯವನ್ನು ಮಾಡಿ ಮಾಡಿಸುತ್ತಾನೆ.

೬, ಒಂದು ಸಂವತ್ಸರಕ್ಕೆ ೩೬೦ ದಿವಸಗಳು. ಪ್ರತಿದಿವಸಕ್ಕು ದಿವಾಭಿಮಾನಿ ದೇವತೆ ಇದ್ದಾರೆ. ಇಂತಹ ೩೬೦ ದಿವಾಭಿಮಾನಿ ದೇವತಾ ವರ್ಗದಿಂದ ಕೂಡಿಕೊಂಡು **(ದೇವತೆಗಳೊಡಗೂಡಿ) ಶ್ರೀಲಕ್ಷ್ಮೀನಾಥ**ನಾದ ರಮಾರಮಣನು ಈ ದೇಹಗತನಾಗಿ ವಿಹಾರ ಮಾಡುತ್ತಿರುವನು **(ಕ್ರಿಡಿಸುವನು)** ಈ ತತ್ತ್ವದ ರಹಸ್ಯಾರ್ಥವನ್ನು ಉತ್ತಮ ಜ್ಞಾನಾನುಸಂಧಾನದಿಂದ ಬ್ರಹ್ಮಜ್ಞಾನಿಗಳು **(ಕೋವಿದರು)** ತಿಳಿಸುತ್ತಾರೆ **(ಹೇಳುವರು.)**

ಪ್ರಮಾಣ-

(೧) **ಷಷ್ಟಿತ್ರಿಂಶತಿ ರೂಪಾಣಿ ವರ್ತಂತೇ ತತ್ರಚಾಸ್ಥಿಷು ।**
**ಮಜ್ಜಯಾಮಪಿ ಶ್ರೀವಿಷ್ಣು ಷಷ್ಟಿತ್ರಿಂಶತಿ ರೂಪಧೃಕ್ ॥**
**ಅಂಗುಲೀ ಪರ್ವ ಪೂರ್ವೇಷು ಷಷ್ಟಿತ್ರಿಂಶತಿ ರೂಪವಾನ್ ।**
**ಏವಂ ಹ್ಯಶೀತಿಸಾಹಸ್ರರೂಪಾಣ್ಯತ್ರಾಪಿ ವೈ ಹರೇಃ ॥**
**—ಅಧ್ಯಾತ್ಮ ಮಾಲಾ ಪ್ರಮಾಣ**

ಅಂದರೆ **ಷಷ್ಟಿತ್ರಿಂಶತಿ**=೩೬೦ ರೂಪಗಳಿಂದ **ಅಸ್ಥಿಷು ಮಜ್ಜಯಾಮಾಪಿ**=ಆಸ್ಥಿಸಂಧಿಗಳು ಹಾಗೂ ಮಜ್ಜಾ ಎಂಬ ಧಾತುವಿನಲ್ಲಿಯೂ, **ಅಶೀತಿ ಸಹಸ್ರರೂಪಾಣಿ**=ಒಂದು ಸಾವಿರದ ಎಂಬತ್ತು ರೂಪಗಳು

(ಅಶೀತಿ=೮೦ ಸಾಹಸ್ರ=೧೦೦೦೦ ಅಂದರೆ ೧೦೦೦೦+೮೦=೧೦೦೮೦ರೂಪ ಗಳಿಂದರ್ಥ). ಇಂತು ವಿಷ್ಣುನಾಮಕನಾದ=ಶ್ರೀಪರಮಾತ್ಮನು ೩೬೦ ಪರ್ವಗಳ ತ್ರಿಸ್ಥಾನಗಳಲ್ಲಿ ೧೦೮೦ ರೂಪಗಳಿಂದ ವಿದ್ಯಮಾನನಾಗಿದ್ದು ಕೊಂಡು ಕ್ರೀಡಿಸುವನು (ವರ್ತಂತೇ) ಎಂಬುದೇ ಪೂರ್ವೋಕ್ತ ಪ್ರಮಾಣ ವಾಕ್ಯದ ತಾತ್ಪರ್ಯಾರ್ಥವು ||೨೯||

## ಪದ್ಯ (೩೦)

**ಮೂಲ :**

**ಕೀಟಪೇಶಸ್ಕಾರಿ ನೆನವಿನಲಿ ।**
**ಕೀಟಭಾವವ ತೊರೆದು ತದ್ವತ್ ।**
**ಖೇಟರೂಪವನೈದಿಯಾಡುವ ತೆರದಿ ಭಕುತಿಯಲಿ ||**
**ಕೈಟಭಾರಿಯ ಧ್ಯಾನದಿಂದ ಭ ।**
**ವಾಟನಿಯನತಿಶೀಘ್ರದಿಂದಲಿ ।**
**ದಾಟಿ ಸಾರೂಪ್ಯವನು ಐದುವರಲ್ಪ ಜೀವಿಗಳು || ||೩೦||**

**ಅವತರಣಿಕೆ**

ವಿಷ್ಣುಭಕ್ತಿಯುಳ್ಳ ಭಗವದ್ಭಕ್ತರು ನಿರಂತರದಲ್ಲಿಯೂ ಭಗವದ್ಧ್ಯಾನಾಸಕ್ತರಾಗಿದ್ದು ಶ್ರೀಹರಿಯ ಕೃಪಾಕಟಾಕ್ಷಣವೀಕ್ಷಣದಿಂದ ಅವನ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾಗಿ ಸಾರೂಪ್ಯ ಮುಕ್ತಿಯನ್ನು ಹೊಂದುವರು ಎಂಬ ತತ್ತ್ವವನ್ನು ಕಣಜವೆಂಬ ಹುಳವು ರೆಕ್ಕೆ ಇಲ್ಲದ ಕೀಟವನ್ನು ತಂದು, ತನ್ನ ಗೂಡಿನಲ್ಲಿಟ್ಟು ಆಹಾರವನ್ನುಣಿಸಿ ತನ್ನಂತೆಯೇ ರೂಪವುಳ್ಳ ಹುಳುವನ್ನಾಗಿ ಮಾರ್ಪಡಿಸುವ ಸುಂದರ ಉಪಮಾನದಿಂದ ತಿಳಿಸುತ್ತಾರೆ. ಕೀಟಪೇಶಸ್ಕಾರಿ- ಎಂಬ ಪ್ರಸಕ್ತ ಸಂಧಿಗತ ೩೦ನೆಯ ಈ ಪದ್ಯದಿಂದ ||೩೦||

## ಪ್ರತಿಪದಾರ್ಥ

**ಕೀಟ** = ರೆಕ್ಕೆ ಇಲ್ಲದ ಹಸಿರುಬಣ್ಣದ ಒಂದು ಸಣ್ಣ ಹುಳುವು (ಶಾಮ ನಾಮಕ ಅವರೇಹುಳುವು) **ಪೇಶಸ್ಕಾರಿ** = ತನ್ನಂತೆಯೇ ಇರುವ ದೇಹ ವನ್ನುಂಟುಮಾಡುವ ಶಕ್ತಿಯುಳ್ಳ ಕುಂಬಾರನಹುಳುವಿನ (ಇದನ್ನು ಕಣಜದ ಹುಳ ಅಥವಾ ಕುರುಡಿ ಕುಠಾರ ಎಂತಲೂ ಕರೆಯುವರು) **ನೆನಪಿನಲಿ** = ಸದಾ ಅದನ್ನೇ ಚಿಂತಿಸುತ್ತಾ (ಅದರ ನಿರಂತರಸ್ಮರಣೆಯಲ್ಲಿಯೇ ಇದ್ದು) **ಕೀಟಭಾವವ** = ತನ್ನ ಪೂರ್ವಸ್ಥಿತಿಯಲ್ಲಿದ್ದ ರೆಕ್ಕೆ ಇಲ್ಲದಿದ್ದ ಹುಳುವಿನ ಆಕಾರ ವನ್ನು **ತೊರೆದು** = ಬಿಟ್ಟು **ತದ್ವತ್** = ತನ್ನನ್ನು ತಂದು ಸಾಕಿ ಸಲಹಿದ ಕುಂಬಾರಹುಳುವಿನಂತೆಯೇ **ಖೇಟರೂಪವನು** = ರೆಕ್ಕೆಇಂದ ಸಹಿತವಾದ ದೇಹಾಕೃತಿಯನ್ನು **ಐದಿ** = ಹೊಂದಿ **ಆಡುವ ತೆರದಿ** = ಖೇಟದಂತೆ ತಾನೂ ಆಕಾಶಮಾರ್ಗದಲ್ಲಿ ಹಾರಾಡುವಂತೆ, **ಭಕುತಿಯಲಿ** = ಸದಾ ಭಗವದ್ಧ್ಯಾನಾ ಸಕ್ತರಾಗಿ ಭಕ್ತಿಭಾವದಲ್ಲಿರತಕ್ಕವರು. **ಕೈಟಭಾರಿಯ** = ಕೈಟಭನೆಂಬ ದಾನವನ್ನು ಸಂಹರಿಸಿದ ಶ್ರೀವಿಷ್ಣುವಿನ **ಧ್ಯಾನದಿಂದ** = ತದೇಕ ಚಿತ್ತದಿಂದ ಧ್ಯಾನಮಾಡುವುದರಿಂದ **ಅಲ್ಪಜೀವಿಗಳು** = ಸಾಮಾನ್ಯರಾದ ಮುಕ್ತಿ ಯೋಗ್ಯಜೀವರೂ ಸಹ. **ಅತಿ ಶೀಘ್ರದಿಂದಲಿ** = ಅತ್ಯಂತ ಜಾಗ್ರತೆಯಾಗಿ **ಭವಾಟವಿಯ** = ಜನನ ಮರಣಾಖ್ಯರೂಪವಾದ ಈ ಸಂಸಾರವೆಂಬ ಘೋರಾ ರಣ್ಯವನ್ನು **ದಾಟಿ** = ವಿರಜಾನದಿಯಸ್ನಾನದ್ವಾರಾ ಲಿಂಗಭಂಗವನ್ನು ಹೊಂದಿ, ಕರ್ಮವಿಮೋಚನೆಯನ್ನು ಹೊಂದಿ, **ಸಾರೂಪ್ಯವನು** = ಭಗವಂತ ನಂತೆಯೇ ಚತುರ್ಭುಜಾದಿ ಅವಯವಗಳು ಶಂಖ ಚಕ್ರಾದಿ ಚಿನ್ಹಿತರಾಗಿ ಸದೃಶರೂಪವಾದ ಸಾಯುಜ್ಯವೆಂಬ ಮುಕ್ತಿ ಸ್ಥಿತಿಯನ್ನು **ಐದುವರು** = ಹೊಂದುವರು. ॥೩೦॥

# ವ್ಯಾಖ್ಯಾನಗಳು

## (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಪರಮಾತ್ಮನಲ್ಲಿ ಅಚಂಚಲಭಕ್ತಿ ಮಾಡಿದರ ಸಂಸಾರ ದುಃಖ ದಿಂದ ಮುಕ್ತನಾಗತಾನೆ ಎಂತ ಹೇಳತಾರೆ.

ರೆಕ್ಕೆ ಇಲ್ಲದ ಸಣ್ಣದಾದ ಹಸುರು ಹುಳುವು ಅಂದರೆ, ಶಾಮ ನಾಮಕ ಅವರೇ ಹುಳುವು. ಇದರನ್ನ ಮತ್ತೊಂದು ರೆಕ್ಕೆಯುಕ್ತವಾದ ಹುಳುವು ಮೃತ್ತಿಕಾದಿಂದ ಆಲಯ ಸಣ್ಣದಾಗಿ ನಿರ್ಮಾಣ ಮಾಡಿ ಅದರಲ್ಲಿ ಇಟ್ಟು ಕೀಟದೇಹವನ್ನೆ ಹೋಗಲಾಡಿಸಿ, ಅನ್ಯವಾದ ಪಖ (ರೆಕ್ಕೆ) ಯುಕ್ತವಾದ ತನ್ನ ಸದೃಶವಾದ ದೇಹಯುಕ್ತವನ್ನಾಗಿ ಮಾಡಿ ಸಂರಕ್ಷಣೆ ಮಾಡತದೆ, ಆ ಆಲಯುಗತ ಪಖರಹಿತ ಕಣಜಹುಳು ತನ್ನ ಯಶಸ್ಸನ್ನು ಚಿಂತಿಸತಕ್ಕ ತಂದು ಇಟ್ಟು ಪಖಸಹಿತವಾದ. ಪೂರ್ವೋಕ್ತ ಅವರೇಹುಳುವು ಸದಾ ಅದರ ಜ್ಞಾಪಕದಿಂದಲೇ ಇರುತ್ತದೆ. ಅನ್ಯಜ್ಞಾಪಕದಿಂದ ಇರೋದಿಲ್ಲ. ಈ ಪ್ರಕಾರ ಜ್ಞಾಪಕದಿಂದ ಇರೋಣದರಿಂದ. ಪೂರ್ವದಲ್ಲಿ ಪಖರಹಿತವಾದ ಕೀಟಭಾವದಿಂದ ಇರತಕ್ಕ ತನ್ನ ಕೀಟಸ್ವಭಾವದೇಹವನ್ನು ಬಿಟ್ಟು. ತನ್ನ ತಂದಿಟ್ಟ ರೆಕ್ಕೆಯುಕ್ತವಾದ ಆಕಾಶದಲ್ಲಿ ಸಂಚರಿಸತಕ್ಕ ಹುಳುವು ದಾವದದೆ ಅದರ ರೂಪದೋಪಾದಿಯಲ್ಲಿ ಪಖಯುಕ್ತವಾದ ರೂಪವನ್ನು ಹೊಂದಿ, ತಾನೂನೂ ಖೇಟನಾಮದಿಂದ ಕರಿಸಿ, ಅದರೋಪಾದಿಯಲ್ಲಿ ಪಖಗಳಿಂದ ಆಕಾಶಮಾರ್ಗದಲ್ಲಿ ಆಡೋದಾಗತದೆ. ಇದರೋಪಾದಿಯಲ್ಲಿ (ಖೇಟ ಸದೃಶನಾದ ಪರಮಾತ್ಮ, ಕೀಟಸದೃಶ ಜೀವ), ಕೈಟಭನಾಮಕ ದೈತ್ಯಗೆ ಶತ್ರುವಾದ ಬಿಂಬರೂಪಿ ಪರಮಾತ್ಮನ, ಕೀಟೋಪಾದಿಯಲ್ಲಿ ಸದಾ ತದೇಕ ಧ್ಯಾನ ಮಾಡೋಣದರಿಂದ, ಅಹಂಮಮತಾಖ್ಯ ಸಂಸಾರ ಅಡವಿಯನ್ನು ಆದಿಯಲ್ಲಿ ದಾಟಿ ನಂತರ ಅದಕ್ಕೆ ಕಾರಣವಾದ ಲಿಂಗದೇಹಾಖ್ಯ ಅಡವಿ ಯನ್ನು ವಿರಜಾಸ್ನಾನದಿಂದ ಬ್ಯಾಗ ದಾಟಿದವನಾಗಿ, ಸಾಯುಜ್ಯಾದಿಗಳಿಗಿಂತ ಅಲ್ಪವಾದ ಸಾರೂಪ್ಯಮುಕ್ತಿಯನ್ನು, ಕೆಲವು ಪ್ರಾಣಿಗಳು ಹೊಂದೋವ ರಾಗತಾರೆ ॥೩೦॥

(೨) ಭಾವಪ್ರಕಾಶಿಕೆ-ವ್ಯಾಖ್ಯಾನ-

ಸರ್ವಪ್ರಕಾರದಿಂದಲೂ ಮನಸ್ಸನ್ನು ಭಗವಂತನ ಪಾದಾರವಿಂದ ದಲ್ಲಿಟ್ಟು ಧ್ಯಾನಮಾಡುತ್ತಿದ್ದರೆ, ಪರಮಾತ್ಮನ ಸಾರೂಪ್ಯಪದವಿಯನ್ನು ಐದುವರೆಂದು ಹೇಳುತ್ತಾರೆ.

ಲೋಕದಲ್ಲಿ ಕಣಜವೆಂಬ ಹುಳುವು ಗೋಡೆಗಗಳಲ್ಲಿ ಮಣ್ಣಿನಿಂದ ಗೂಡು ಕಟ್ಟಿ ಅದರ ಸಣ್ಣದಾದ ದ್ವಾರದಲ್ಲಿ ಹಸರುಬಣ್ಣದ ರೆಕ್ಕೆಯಿಲ್ಲದ ಹುಳುವನ್ನು ತಂದಿಟ್ಟು, ಆ ಹುಳುವು ಹೊರಗೆ ಹೊಗಲು ಅವಕಾಶವಿಲ್ಲದೆ ದ್ವಾರ ಸಣ್ಣದಾಗಿ ಮಾಡಿ, ತಾನೇ ಆಹಾರವನ್ನು ಕೊಟ್ಟು, ಆ ಹುಳುವನ್ನು ರಕ್ಷಿಸುವುದು.

**ಶ್ರೀಮದ್ಭಾಗವತ ಏಕಾದಶಸ್ಕಂಧ-ಅಧ್ಯಾಯ ೯-೨೩ನೆಯ ಶ್ಲೋಕ :—**

**"ಕೀಟಃ ಪೇಶಸ್ಕೃತಂ ಧ್ಯಾಯನ್ ಕುಡ್ಯಾಂತೇನ ಪ್ರವೇಶತಃ ।**
**ಯಾತಿತತ್ಸಾತ್ಮತಾಂ ರಾಜನ್ ಪೂರ್ವರೂಪಮಸಂತ್ಯಜನ್॥"**
**ಇದೇರೀತಿ ಸಪ್ತಮಸ್ಕಂಧದ ಪ್ರಥಮಾಧ್ಯಾಯದಲ್ಲಿ—**
**"ಕೀಟಃ ಪೇಶಸ್ಕೃತಾರುದ್ಧಃ ಕುಡ್ಯೇಯಾಂತಮನುಸ್ಮರನ್ ।**
**ಸಂರಂಭ ಭಯಯೋಗೇನ ವಿಂದತೇ ತತ್ಸ್ವರೂಪಾತಾಮ್ ॥"**

ಅಂದರೆ ಕಣಜದಿಂದ ಗೋಡೆಯ ಗೂಡಿನಲ್ಲಿರಿಸಲ್ಪಟ್ಟ ಆ ಹುಳುವು ಹಗಲೂ ರಾತ್ರಿ ಹೊರಗೆ ಹೋಗಿರುವ ಆ ಕಣಜದ ಬರುವಿಕೆಯನ್ನು ನಿರೀಕ್ಷಿಸುತ್ತಾ ಅದನ್ನು ಸದಾ ಚಿಂತಿಸಿರುವುದು. ತನ್ನನ್ನು ಸೆಳೆದುಕೊಂಡು ಬಂದು ನಿರ್ಬಂಧದಲ್ಲಿಟ್ಟ ಪ್ರಯುಕ್ತ ಕಣಜದ ಮೇಲೆ ಸ್ವಲ್ಪ ಕೋಪವೂ, ಅದೇ ನಿಮಿತ್ತದಿಂದ ಸ್ವಲ್ಪ ದ್ವೇಷವೂ, ಭಯವೂ ಸಹ ಇದ್ದರೂ, ತನಗೆ ಆಹಾರವನ್ನು ಕೊಟ್ಟು ರಕ್ಷಿಸುವುದರಿಂದ, ಸ್ನೇಹಬಾಹುಳ್ಯದಿಂದ ಆ ಕಣಜವನ್ನೇ ಸ್ಮರಿಸುತ್ತ ಪೂರ್ವದ ಕೀಟದ ರೂಪ ಹೋಗಿ, ಅದೇ ಕಣಜದ ರೂಪವೇ ಈ ಹುಳುವಿಗೂ ಬರುವುದು. ಅಂದರೆ ಈ ಹುಳುವಿಗೂ ರೆಕ್ಕೆಗಳು ಒಂದು ಕೆಂಪು ಬಣ್ಣವು ತಿರುಗಿ, ಆ ಕಣಜದಂತೆಯೇ ಇದೂ ಕಣಜವಾಗುವುದು.

"ಯತ್ರ ಯತ್ರ ಮನೋದೇಹಿ ಧಾರಯೇತ್ಸಕಲಂಧಿಯಾ ।
ಸ್ನೇಹಾದ್ವೇಷಾದ್ಭಯಾದ್ವಾಪಿ ಯಾತಿ ತತ್ತತ್ಸ್ವರೂಪತಾಮ್ ॥"

ಎಂಬ ಪ್ರಮಾಣಾನುಸಾರ ಸ್ನೇಹದಿಂದಾಗಲೀ ದ್ವೇಷದಿಂದಾಗಲೀ ಭಯದಿಂದಾಗಲೀ ಸರ್ವದಾ ಮನಸ್ಸಿನಲ್ಲಿ ಯಾವುದನ್ನು ಚಿಂತಿಸುತ್ತಿರುವರೋ, ಅದರದರ ರೂಪವನ್ನು ಹೊಂದುವರೆಂದು ಪ್ರಮಾಣಾರ್ಥ. ಇದರಂತೆ ಭಗವಂತನಲ್ಲಿ ಯಾವುದಾದರೂ ಬಗೆಯಿಂದ ಮನಸ್ಸನ್ನಿಟ್ಟು ಧ್ಯಾನ ಮಾಡಿದರೆ, ಪರಮಾತ್ಮನ ಸಾರೂಪ್ಯವು ಪ್ರಾಪ್ತಿಯಾಗುವುದು. ಹಾಗಾದರೆ ದ್ವೇಷಿಗಳಾದ ತಮೋಯೋಗ್ಯರಿಗೂ ಕೂಡ ದ್ವೇಷದಿಂದ ಪರಮಾತ್ಮನನ್ನು ಚಿಂತಿಸುತ್ತಿದ್ದರೆ, ಸಾರೂಪ್ಯ ಹೊಂದುವರೇನೋ ಎಂದು ಶಂಕಾ ಮಾಡಕೂಡದು. ಏಕೆಂದರೆ ಭಗವಂತನಲ್ಲಿ ದ್ವೇಷಮಾಡುವವರು ಘೋರವಾದ ತಮಸ್ಸನ್ನು ಹೊಂದುವರು,

"ಕರ್ಮಣಾ ಮನಸಾ ವಾಚಾ ಯೋದ್ವಿಷ್ಯಾದ್ವಿಷ್ಣುಮವ್ಯಯಂ ।
ಮಜ್ಜಂತಿ ಪಿತರಸ್ತತ್ಯ ನರಕೇ ಶಾಶ್ವತೀಃ ಸಮಾಃ ॥"

ಅಂದರೆ, ಕರ್ಮದಿಂದಲಾಗಲೀ, ಮನಸ್ಸಿನಿಂದಲಾಗಲೀ, ವಾಕ್ಯದಿಂದಾಗಲೀ ಪರಮಾತ್ಮನಲ್ಲಿ ಯಾರು ದ್ವೇಷಮಾಡುವರೋ, ಅವರ ಪಿತೃಗಳೆಲ್ಲರೂ ಶಾಶ್ವತಕಾಲ ನರಕದಲ್ಲಿ ಬಿದ್ದಿರುವರು–ಎಂದಿರುವುದರಿಂದ ದ್ವೇಷಿಗಳಿಗೆ ಸಾರೂಪ್ಯಾದಿ ಮುಕ್ತಿಯು ಎಂದಿಗೂ ಸಾಧ್ಯವೇ ಇಲ್ಲ. ಮತ್ತು ಮೇಲಿನ ಉಪಮಾನದ ಪ್ರಯೋಜನವೇನೆಂದರೆ–

"ಸಂತ್ಯಲ್ಪಾತ್ಯಲ್ಪ ವಿದ್ವೇಷೇ ಭೋಜನಂ ದಾಸ್ಯತೀತಿತು ।
ಸ್ನೇಹ ಬಾಹುಲ್ಯತಃ ಕೀಟಃ ಪೇಶಸ್ಕಾರೀ ಸಮೋ ಭವೇತ್ ॥
ದ್ವೇಷೇ ಸರ್ವಾತ್ಮನಾನಷ್ಟೇ ಸ್ನೇಹೇ ಚೈವ ವಿವರ್ಧಿತೇ ।
ಸ್ವರೂಪತಾ ತದೈವಶ್ಯಾತ್ಕೀಟಸ್ಯೈವಂ ಹರೇರಪಿ ॥

**ನ ಹಿ ಪೇಶಸ್ಕೃತಃ ಕಿಂಚಿತ್ಫಲದಾತೃತ್ವಮಿಷ್ಯತೇ ।**

**ಸ್ವಾತಂತ್ರ್ಯಾದ್ವಿ ದ್ವಿಷಾಣಾಂ ಹಿ ಕೇಶವೋ ನ ಸುಖಪ್ರದಯಿತಿ ॥"**

**–ಎಂಬ ಭಾಗವತ ಏಕಾದಶ ಸ್ಕಂಧದ ಶ್ಲೋಕದ ತಾತ್ಪರ್ಯಾರ್ಥ.**

ಇದರ ಅಭಿಪ್ರಾಯ :—

ಕೀಟಕ್ಕೆ ತನ್ನನ್ನು ಸಳೆದು ತಂದು ಬಲಾತ್ಕಾರದಿಂದ ಮಣ್ಣಿನಗೂಡಿನಲ್ಲಿ ಹಿಂಸೆ ಪಡಿಸಿದುದರಿಂದ ಅತ್ಯಲ್ಪ ಕೋಪವು ಕಣಜದ ಮೇಲೆ ಇದ್ದರೂ, ತನಗೆ ಆಹಾರವನ್ನು ಕೊಟ್ಟು ಸಂರಕ್ಷಿಸುವುದರಿಂದ, ಅದರ ಮೇಲೆ ಸ್ನೇಹವು ಹೆಚ್ಚಾಗಿರುವುದು. ಮೊದಲು ಕೆಲವು ಕಾಲ ಸ್ವಲ್ಪ ಮಾತ್ರ ದ್ವೇಷವಿದ್ದರೂ, ಆ ದ್ವೇಷವು ಕಾಲಕ್ರಮೇಣ ಸಂಪೂರ್ಣವಾಗಿ ನಷ್ಟವಾಗಿ ಕೀಟವು ಸ್ನೇಹದಿಂದಲೇ ಕಣಜವನ್ನು ಸರ್ವದಾ ಚಿಂತಿಸುವುದರಿಂದ. ಆ ಕಣಜದಂತೆಯೇ ಆಗುವುದು. ಇದರಂತೆ ಶ್ರೀಹರಿಯಲ್ಲಿ ಸಂಪೂರ್ಣಭಕ್ತಿಯಿಂದ ಚಿಂತಿಸುವುದರಿಂದಲೇ ಪರಮಾತ್ಮನ ಸಾರೂಪ್ಯವು ಪ್ರಾಪ್ತವಾಗುವುದು. ಕೀಟಕ್ಕೆ ಫಲವನ್ನು ಕೊಡುವ ಯೋಗ್ಯತೆಯು ಕಣಜಕ್ಕಿಲ್ಲ. ಪರಮಾತ್ಮನು ಸ್ವತಂತ್ರನಾದುದರಿಂದ ದ್ವೇಷಗಳಿಗೆ ಸುಖ ಫಲವನ್ನು ಕೊಡುವುದಿಲ್ಲ. ಭಕ್ತರಿಗೆ ಮಾತ್ರವೇ ಸುಖವನ್ನು ಕೊಡುವನು. ಹಾಗಾದರೆ- "**ಸ್ನೇಹಾದ್ವೇಷಾದ್ಭಯಾದ್ವಾಪಿ**" ಎಂಬ ಪ್ರಮಾಣದ ಅಭಿಪ್ರಾಯವೇನೆಂದರೆ- ಜೀವನು ಯೋಗ್ಯನಾಗಿದ್ದು, ದೃತ್ಯರ ಆವೇಶದಿಂದ ಕೆಲಕಾಲ ದ್ವೇಷ ಮಾಡುತ್ತಿದ್ದು, ಸ್ವಲ್ಪ ಕಾಲಾನಂತರ ಸಂಪೂರ್ಣವಾಗಿ ದ್ವೇಷವು ನಷ್ಟವಾದರೆ. ಶಿಶುಪಾಲಾದಿಗಳಿಗೆ ಆದಂತೆ ಸದ್ಗತಿಯಾಗುವುದು. ಸ್ವಭಾವದಿಂದಲೂ ದ್ವೇಷಗಳಿಗೆ ಪರಮಾತ್ಮನಲ್ಲಿ ದ್ವೇಷವಿದ್ದರೂ ಸರ್ವದಾ ಕೀಟದಂತೆ ಪರಮಾತ್ಮನಾ ಚಿಂತನಾ ವಿಶೇಷವು ಇರುವುದಿಲ್ಲ. ಆದ್ದರಿಂದಲೇ,

**ಭಾಗವತ ಸಪ್ತಮಸ್ಕಂಧದಲ್ಲಿ—**

**"ಗೋಪ್ಯಃ ಕಾಮಾದ್ಭಯಾತ್ಕಂಸೋ ದ್ವೇಷಾಚ್ಚೈದ್ಯಾದಯೋ ನೃಪಾಃ ।**

**ಸಂಬಂಧಾದ್ವೃಷ್ಣಯಃ ಸ್ನೇಹಾದ್ಯೂಯಂ ಭಕ್ತ್ಯಾವಯಂ ವಿಭೋ ||**

**ಕತಮೋಪಿ ನವೇನಸ್ಯ ಪಂಚಾನಾಂ ಪುರುಷಂ ಪ್ರತಿ ||"**

ಅಂದರೆ, ಗೋಪಿಕಾಸ್ತ್ರೀಯರು ಕಾಮಸಹಿತವಾದ ಭಕ್ತಿಯನ್ನೂ, ಕಂಸನು ಭಯದಿಂದ ಕೂಡಿದ ಭಕ್ತಿಯನ್ನೂ, ಚೈದ್ಯಾದಿಗಳೂ ಸಂಬಂಧದಿಂದ ವೃಷ್ಣಿಗಳೂ, ಸ್ನೇಹದಿಂದ ನೀವು (ಪಾಂಡವರು) ಭಕ್ತಿಯಿಂದ ನಾವು ಭಕ್ತಿ ಮಾಡಿರುವೆವು. ವೇನಾಸುರನು ಬರೀ ದ್ವೇಷವನ್ನು ಮಾತ್ರ ಮಾಡಿರುವನು. ಆದ್ದರಿಂದಲೇ ವೇನಾಸುರರಿಗೆ ಸದ್ಗತಿಯಾಗಲಿಲ್ಲ. ಶಿಶುಪಾಲನು ಯೋಗ್ಯ ಜೀವನು. ಅವನೊಳಗಿದ್ದ ದೈತ್ಯನ ಸಹವಾಸದಿಂದ ದ್ವೇಷಮಾಡಿದನು. ಅದು ನಿವೃತ್ತಿಯಾಗಲು ಭಕ್ತಿಯೇ ವೃದ್ಧಿಯಾಯಿತು. ಆದ್ದರಿಂದಲೇ ಪರಮಾತ್ಮನನ್ನು ಹೊಂದಿದನೆಂದು ನಾರದರು ಧರ್ಮರಾಜನಿಗೆ ಹೇಳಿರುವುದಾಗಿ ಮೇಲಿನ ಶ್ಲೋಕಾರ್ಥ. ಇದರಿಂದ ದ್ವೇಷಿಗಳು ಎಂದಿಗೂ ಸರ್ವದಾ ಧ್ಯಾನ ಮಾಡುವುದಿಲ್ಲ. ಆದ್ದರಿಂದ ಅವರಿಗೆ ಸಾರೂಪ್ಯವು ಬರಲು ಕಾರಣವಿಲ್ಲ. ಯೋಗ್ಯಜೀವರು ಶಾಪಾದಿಕಾರಣದಿಂದ, ಅಸುರಾವೇಶದಿಂದ, ಹುಟ್ಟಿದವರು ಮಾತ್ರವೇ ದ್ವೇಷಾದಿಗಳನ್ನು ನಿಮಿತ್ತಮಾತ್ರದಲ್ಲಿಟ್ಟುಕೊಂಡು ಸರ್ವದಾ ಚಿಂತಿಸುತ್ತಿರುವರು. ಅವರಿಗೆ ಸದ್ಗತಿಯಾಗುವುದೆಂದು ತಾತ್ಪರ್ಯ. ||೩೦||

## (೩) "ಭಾವದರ್ಪಣ ಟೀಕಾ"–ವ್ಯಾಖ್ಯಾನ

ಸ್ನೇಹದಿಂದೇ ಆಗಲಿ. ದ್ವೇಷದಿಂದೇ ಆಗಲಿ, ಭಯದಿಂದೇ ಆಗಲಿ, ಪೇಶಸ್ಕಾರಿ-ಎಂದರೆ ಸಂಜೀವಿನಿ ಹುಳ ಎಂದು ಇರುತ್ತಾರೆ. ಅದರನ್ನೇ ಕೀಟ ಎಂಬೋದು ಧ್ಯಾನಮಾಡಿ. ಅದರ ಸ್ವರೂಪ ಸ್ವಾಮ್ಯವನ್ನು ಹೊಂದುತ್ತದೋ, ತದ್ವತ್ ಶ್ರೀಹರಿಯನ್ನು ಧ್ಯಾನಮಾಡಿದ ಪುರುಷನು ಸಾರೂಪ್ಯ ಮುಕ್ತಿ ಪಡೆಯುವನೆಂದು ಹೇಳುತ್ತಾರೆ- "ಕೀಟ ಪೇಶಸ್ಕಾರೀ"- ಇತಿ ||

**(೧) "ಯತ್ರ ಯತ್ರ ಮಂದೋ ದೇಹೀ ಧಾರಯತ್ಕಿಲ್ನ ಯಾಧಿಯಾ" ||** ಅಂದರೆ, ಆದ್ರಯಾಧಿಯಾ ಎಂಬರ್ಥ.

(೨) "ಸ್ನೇಹಾದ್ವೇಷಾದ್ಭಯಾದ್ವಾಪಿ ಯಾತಿ ತತ್ತ ಸ್ವರೂಪತಾಮ್ ।
ಕೀಟಃ ಪೇಶಸ್ಕೃತಂ ಧ್ಯಾಯನ್ ಕುಡ್ಯಾಂತೇನ ಪ್ರವೇಶಿತಃ ॥
ಯಾತಿ ತತ್ಸಮತಾ" ರಾಜನ್ ಪೂರ್ವರೂಪಮಸ್ಯತ್ಯಜನ್ ॥"
—ಇತಿ ಏಕಾದಶಸ್ಕಂಧ ಭಗವತೋಕ್ತೇಃ ॥

(೩) "ತಂ ತಥಾ ಯಥೋಪಾಸತೇ ತತ್ತಥೈವ ಭವತೀ ॥"
—ಇತಿ ಶ್ರುತೇಃ ॥

(೪) "ಸತ್ಯಲ್ಪಾತ್ಯಲ್ಪ ವಿದ್ವೇಷೇ ಭೋಜನಂ ದಾಸ್ಯತೀತಿತುಃ ।
ಸ್ನೇಹ ಬಾಹುಳ್ಯತಃ ಕೀಟಃ ಪೇಶಸ್ಕಾರೀ ಸಮೋ ಭವೇತ್ ॥
ದ್ವೇಷೇ ಸರ್ವಾತ್ಮನಾ ನಷ್ಟೇ ಸ್ನೇಹೇಚೈವ ವಿವರ್ಧತೇ ।
ಸ್ವರೂಪತಾ ತದೈವ ಸ್ಯಾತ್ಕೀಟಸ್ಸ್ಯೈವಂ ಹರೇರಪಿ ॥
ನಾಹಿ ಪೇಶಸ್ಕೃತಃ ಕಿಂಚಿತ್ಫಲದಾತೃತ್ವಮೀಷ್ಯತೇ ।
ಸ್ವಾತಂತ್ರ್ಯ ದ್ವಿಷಾಣಾಂ ಹಿ ಕೇಶವೋ ನ ಸುಖಪ್ರದಃ ॥"
—ಇತಿ ಸ್ವಾತಂತ್ರ್ಯ ವಿವೇಕೇ ॥

—ಎಂದು ತಾತ್ಪರ್ಯ ಹೊರಟಿದ್ದರಿಂದ ಸಿದ್ಧ. ಅಲ್ಪ ಜೀವರುಗಳು ಎಂದರೆ— ಪರಮಾತ್ಮಗೆ ಅಲ್ಪರು ಇರುವ ಸಾಂಶರು ಎಂಬರ್ಥ. ॥೩೦॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದಿ (ಸಂಸ್ಕೃತ ಮೂಲ)—

ಕೀಟೆ—ಇತಿ ॥ ಅಲ್ಪಾಃ ದ್ವೇಷೇಣ ಶಿಶುಪಾಲ ಮುಖಾಃ । "ಸತ್ಯಪ್ಯತ್ಯಲ್ಪ ವಿದ್ವೇಷೇ ಭೋಜನಂ ದಾಸ್ಯತೀತಿತು । ಸ್ನೇಹ ಬಾಹುಲ್ಯತಃ ಕೀಟಃ ಪೇಶಸ್ಕಾರಿ ಸಮೋ ಭವೇತ್" ॥—ಇತಿ ಏಕಾದಶ ತಾತ್ಪರ್ಯೇ. ॥೩೦॥

**ಕನ್ನಡಾರ್ಥ :-**

"ಅಲ್ಪಜೀವರು"- ಎಂದರೆ ಜೀವದ್ವಯಾವೇಶ ಯುಕ್ತರಾದ ಶಿಶುಪಾಲ ಇತ್ಯಾದಿ ಜೀವರುಗಳೆಂದು ತಿಳಿಯಬೇಕು. ಶಿಶುಪಾಲನಲ್ಲಿ ಜಯನೆಂಬ ದ್ವಾರಪಾಲಕನಿದ್ದನು. ಈತನು ತತ್ವಾಭಿಮಾನಿಗಳಿಗಿಂತಲೂ ಅಲ್ಪಭಕ್ತ. ಸಾಂಶದೇವತೆಯು. ಜಯನಿಗೆ ಮಾತ್ರ ಸಾರೂಪ್ಯ ಮುಕ್ತಿ. ದೈತ್ಯಾಂಶ ಶಿಶುಪಾಲನಿಗೆ ತಮಸ್ಸು,

ಬಹು ಸ್ವಲ್ಪ ಪ್ರಮಾಣದಲ್ಲಿ ದ್ವೇಷಭಾವನೆ ಇದ್ದರೂ-"ಭೋಜನವನ್ನೀಯುತ್ತಾನೆ"-ಎಂಬ ವಿಶೇಷ ಕಾರಣದಿಂದ, ಭಕ್ತ್ಯುದ್ರೇಕದ ಫಲವಾಗಿ ಕೀಟವು ಪೇಶಸ್ಕಾರಿ ಹುಳದ ಸಾಮ್ಯ ಸಾರೂಪ್ಯವನ್ನು ಹೊಂದುತ್ತದೆ, (ಕೆಲ ವಂಶಗಳಲ್ಲಿ ಮಾತ್ರ) ಎಂದು- **ಏಕಾದಶ ಸ್ಕಂಧ ಭಾಗವತ ತಾತ್ಪರ್ಯದಲ್ಲಿ** ನಿರೂಪಿತವಾಗಿದೆ. ॥೩೦॥

## (ಆ) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ

ಪೂರ್ವೋಕ್ತ ಸರ್ವೋಪಾಸನೆಗೂ ಸದೃಷ್ಟಾಂತ ಫಲಪ್ರಾಪ್ತಿ ತಿಳಿಸುತ್ತಾರೆ, ಕೀಟವೆಂದು. ಕೀಟವೆಂಬ ಶಾಮನಾಮಕ ಅವರೇಹುಳುವು. ಪೇಶಸ್ಕಾರಿ ಎಂಬ ಕಣಜವೆಂಬ ಹುಳುವಿನ ನೆನವಿನಲಿ. ಅಂದರೆ ಸದಾ ತನಗೆ ಆಹಾವನ್ನು ಕೊಟ್ಟು ನಿರ್ಬಂಧಿಸಿರುವುದು ಎಂದು ಸ್ಮರಿಸುವುದರಿಂದ, ಕೀಟಭಾವವೆಂಬ ಅವರೇಹುಳುವಿನ ರೂಪವನ್ನು ತೊರೆದುಬಿಟ್ಟು, ತದ್ವತ್ ಖೇಟ ರೂಪವನ್ನೈದಿ ಅಂದರೆ, ಅದರಂತೆ ಕಣಜವೆಂಬ ರೂಪವನ್ನು ಹೊಂದಿ, ರೆಕ್ಕೆಸಹಿತ ಹಾರಾಡುವ ಹಾಗೆ, ಅಲ್ಪರಾದ ಜೀವರುಗಳು ಕೈಟಭಾಸುರ ಧ್ವಂಸಿಯಾದ ದೇವರ ಭಕ್ತಿಪೂರ್ವಕಧ್ಯಾನದಿಂದ ಭವಾಟವಿ ಎಂಬ ಜನನ ಮರಣಾದಿರೂಪ ಸಂಸೃತಿವನವನ್ನು ಬೇಗ ದಾಟಿ, ದೇವರ ಸಾರೂಪ್ಯ ಮೊದಲಾದ ಮುಕ್ತಿಯನ್ನು ಹೊಂದುವರು.

**ಪ್ರಮಾಣ–**

ಕೀಟಃ ಪೇಶಸ್ಕೃತಾರುದ್ಧಃ ಕುಡ್ಯೇಯಾಂತಮನುಸ್ಮರ್ರ್ ।
ಸಂರಂಭ ಭಯಯೋಗೇನ ವಿಂದತೇ ತತ್ಸ್ವರೂಪತಾಂ ॥
ಏವಂ ಹರೌ ಭಗವತಿ ಮಾಯಾಮನುಜ ಈಶ್ವರೇ ।
ವೈರೇಣ ಧೂತ ಪಾಪ್ಮಾತಸ್ತಮಾಪುರನುಚಿಂತಯಾ ॥

—ಎಂಬ ಭಾಗವತಾರ್ಥ ವಿವರಿಸಿತು. ॥೩೦॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀ ಪರಮಾತ್ಮನ ಧ್ಯಾನೋಪಾಸನೆಯಲ್ಲಿ ಸದಾ ಅಸಕ್ತರಾಗಿರತಕ್ಕ ಮುಕ್ತಿ ಯೋಗ್ಯಜೀವರು ಅಲ್ಪರಾಗಿದ್ದರೂ ಸಹ, ಭಗವದನುಗ್ರಹದಿಂದ **ಸಾರೂಪ್ಯವೆಂಬ** ಮುಕ್ತ್ಯಾವಸ್ಥೆಯನ್ನು ಹೊಂದುವರು ಎಂಬ ವಿಷಯವನ್ನು ದಾಸರಾಯರು **ಕೀಟ ಪೇಶಸ್ಕಾರಿ ನ್ಯಾಯದಿಂದ** ದೃಷ್ಟಾಂತ ಪೂರ್ವಕವಾಗಿ ವಿವರಿಸುತ್ತಾರೆ–ಕೀಟ **ಪೇಶಸ್ಕಾರಿ**–ಎಂಬ ಪ್ರಸಕ್ತ ೩೦ ನೆಯ ಪದ್ಯದಿಂದ.

೧. **ಪೇಶಸ್ಕಾರಿ** ಎಂದರೆ ಸಂಜೀವಿನೀ ಹುಳು ಎಂದರ್ಥ. ಇದನ್ನು ಕಣಜದ ಹುಳು ಎಂತಲೂ ಕರೆಯುವರು. ಇದಕ್ಕೆ ಕುರುಡೀ ಕುಠಾರ ಎಂತಲೂ ಹೆಸರು. ಈ ಸಂಜೀವಿನೀ ಹುಳವು ಅವರೇ ಕಾಯಿನಲ್ಲಿರುವ ಹುಳುವನ್ನು ತಂದು ಗೂಡಿನಲ್ಲಿಟ್ಟು ಸಾಕುವುದು. ಇಂತಹ ಹುಳುವಿಗೆ ಕೀಟವೆಂದು ಹೆಸರು. ಕೀಟವು ಹಸಿರುಬಣ್ಣದ ಸಣ್ಣ ಪ್ರಮಾಣದ ಹುಳುವಾಗಿದೆ. ಇದಕ್ಕೆ ರೆಕ್ಕೆಗಳಿರುವುದಿಲ್ಲ. ಇಂತಹ ಕೀಟವನ್ನು ಸಂಜೀವಿನೀ ಹುಳುವು ತನ್ನ ಬಾಯಿಯಲ್ಲಿ ಕಚ್ಚಿಕೊಂಡು, ಗಟ್ಟಿಯಾದ ಗೋಡೆ ಅಥವಾ ಮರದ ಬಾಗಿಲಿನಲ್ಲಿ ಕುಡಿಕೆಯಂತೆ ಮೃದುವಾದ ಮಣ್ಣಿನಿಂದ ಗೂಡನ್ನು ಕಟ್ಟಿ, ಅದರಲ್ಲಿ ಆ ಕೀಟ

ವನ್ನಿಡುವುದು. ಆ ಕೀಟವು ಗೂಡಿನಿಂದ ಹೊರಗೆ ಬಾರದಂತೆ ಗೂಡಿನ ಮುಂಭಾಗದಲ್ಲಿ ಸಣ್ಣ ದ್ವಾರವನ್ನು ಮಾಡುವುದು. ಆ ದ್ವಾರದ ಮೂಲಕ ತಾನು ಗೂಡಿನಲ್ಲಿ ಪ್ರವೇಶಿಸುವುದು. ಆ ಕಣಜದ ಹುಳುವಿನ ಭಯವು ಆ ಕೀಟಕ್ಕೆ ಇರುವುದು. ಪ್ರಾರಂಭದಲ್ಲಿ ಕೀಟಕ್ಕೆ ಕಣಜದ ಹುಳುವಿನ ವಿಷಯದಲ್ಲಿ ಭಯದ ದೆಸೆಯಿಂದಾಗಿ ಅಲ್ಪ ದ್ವೇಷವಿದ್ದರೂ, ಆ ಹುಳುವು ಕೀಟಕ್ಕೆ ಕಾಲಕಾಲಕ್ಕೆ ಆಹಾರವನ್ನು ಒದಗಿಸಿ, ಅದನ್ನು ಸಂರಕ್ಷಿಸುತ್ತಿರುವುದರಿಂದ ಆ ಭಯ ದ್ವೇಷಾದಿಗಳು ಪರಿಹಾರವಾಗಿ ಕಾಲಕ್ರಮೇಣ ಅದರಲ್ಲಿ ಸ್ನೇಹ ಭಾವವು ವೃದ್ಧಿಯಾಗುವುದು. ಈ ಸ್ನೇಹಭಾವದಿಂದ, ನಿರಂತರದಲ್ಲಿಯೂ ಆ ಕೀಟವು ಪೇಶಸ್ಕಾರಿಯ ಸ್ಮರಣೆ ಅಥವಾ ಧ್ಯಾನದಲ್ಲಿಯೇ ಆಸಕ್ತವಾಗಿರುವುದು. ಈ ಧ್ಯಾನಸ್ಥಿತಿಯ ಪರಿಣಾಮವಾಗಿ ಆ ಕೀಟಕ್ಕೆ ರೆಕ್ಕೆಗಳು ಬಂದು, ಶರೀರದ ಬಣ್ಣವು ಹಸಿರಿನಿಂದ ಕೆಂಪಗೆ ತಿರುಗಿ, ಆ ಕಣಜದ ಹುಳುವಿನ ಶರೀರವನ್ನೇ ಹೋಲುವ ದೇಹವನ್ನು ಪಡೆಯುವುದು. ಅದೂ ಕಣಜದಂತೆಯೇ ದೇಹ ಸಾಮ್ಯವನ್ನು ಪಡೆದು, ಹಾರಿಹೋಗುವುದು. ಇದೊಂದು ಸುಂದರವಾದ ದೃಷ್ಟಾಂತ.

**ಪ್ರಮಾಣ–**

**(೧) "ಕೀಟಃ ಪೇಶಸ್ಕೃತಂ ಧ್ಯಾಯನ್ ಕುಡ್ಯಾಂತೇನ ಪ್ರವೇಶಿತಃ |**
**ಯಾತಿ ತತ್ಸಾತ್ಮತಾಂ ರಾಜನ್ ಪೂರ್ವರೂಪಮಸಂತ್ಯಜನ್ ||"**

**—ಶ್ರೀಮದ್ಭಾಗವತ ಏಕಾದಶಸ್ಕಂಧ. ಅಧ್ಯಾಯ ೯ ಶ್ಲೋಕ–೨೩.**

**ಈ ಶ್ಲೋಕಾರ್ಥ—**

ಅವರೇ ಕಾಯಿ ಹುಳುವು (**ಕೀಟ**) ಪೇಸ್ಕಾರಿ ಎಂಬ ಸಂಜೀವಿನೀ ಹುಳುವನ್ನೇ ಯಾವಾಗಲೂ ಧ್ಯಾನಿಸುತ್ತಾ (**ಪೇಶಸ್ಕೃತಂ ಧ್ಯಾಯನ್**) ಗೂಡಿನ ಒಳಭಾಗದಲ್ಲಿ ಪ್ರವೇಶಿಸಲ್ಪಟ್ಟು (**ಕುಡ್ಯಾಂತೇನ ಪ್ರವೇಶಿತಃ**) ಆ ಪೇಶಸ್ಕಾರಿಯ ಶರೀರದಂತೆಯೇ ದೇಹ ಸಾದೃಶ್ಯವನ್ನು ಹೊಂದುವುದು (**ತತ್ಸಾತ್ಮತಾಂ ಯಾತಿ**) ಎಲೈ ಪರೀಕ್ಷಿದ್ರಾಜನೆ ಕೇಳು (**ಹೇ ರಾಜನ್**)

ಆ ಕೀಟವು ತನ್ನ ಪೂರ್ವ ರೂಪವನ್ನು ಬಿಟ್ಟು, ಕಣಜದ ಹುಳುವಿನಂತೆಯೇ ಆಗುವುದು **(ಪೂರ್ವರೂಪಂ ಸಂತ್ಯಜನ್).**

**(೨) "ಸಂತ್ಯಲ್ಪಾತ್ಯಲ್ಪ ವಿದ್ವೇಷಭೋಜನಂ ದಾಸ್ಯತೀತು ।**

**ಸ್ನೇಹಬಾಹುಲ್ಯತಃ ಕೀಟಃ ಪೇಶಸ್ಕಾರೀ ಸಮೋಭವೇತ್ ॥"**

**—ಭಾಗವತ-ಏಕಾದಶಸ್ಕಂಧ.**

**ಶ್ಲೋಕಾರ್ಥ–**

ಪ್ರಾರಂಭದಲ್ಲಿ ಆ ಗೂಡಿನಲ್ಲಿ ತಂದಿಡಲ್ಪಟ್ಟ ಆ ಕೀಟಕ್ಕೆ ಪೇಶಸ್ಕಾರಿಯ ವಿಷಯದಲ್ಲಿ ಭಯ ಮತ್ತು ಅದರಿಂದ ದ್ವೇಷವೂ ಇರುತ್ತದೆ. ಈ ದ್ವೇಷವು ಅತ್ಯಲ್ಪ ಪ್ರಮಾಣದಲ್ಲಿರುತ್ತದೆ. **(ಸಂತಿ ಅಲ್ಪ ಅತ್ಯಲ್ಪ ವಿದ್ವೇಷೇ)** ಇದಕ್ಕೆ ಮುಖ್ಯ ಕಾರಣವು ಆ ಪೇಶಸ್ಕಾರಿಯು ಕೀಟಕ್ಕೆ ಕಾಲಕಾಲಕ್ಕೆ ಆಹಾರವನ್ನು ತಂದು, ಅದು ಇದ್ದಲ್ಲಿಯೇ ಆಹಾರ ಕೊಟ್ಟು ಸಂರಕ್ಷಿಸುತ್ತದೆ. **(ಭೋಜನಂ ದಾಸ್ಯತೀತಿ)** ಇದರಿಂದ ಆ ಕೀಟಕ್ಕೆ ಕಾಲಕ್ರಮೇಣ ಭಯ ದ್ವೇಷಾದಿಗಳು ಹೋಗಿ, ಸ್ನೇಹಾಧಿಕ್ಯವುಂಟಾಗುವುದು. ಇಂತಹ ಸ್ನೇಹ ಬಾಹುಲ್ಯದಿಂದ ಆ ಕೀಟವು ಕೊನೆಯಲ್ಲಿ ಪೇಶಸ್ಕಾರಿಯಂತೆಯೇ ಸದೃಶವಾದ ಶರೀರವನ್ನು ಹೊಂದುವುದು. **(ಕೀಟಃ ಸ್ನೇಹ ಬಾಹುಲ್ಯತಃ ಪೇಶಸ್ಕಾರೀ ಸಮಃ ಅಭವೇತ್).**

೨. ಇವರಂತೆಯೇ ಕೈಟಭನೆಂಬ ಮಹಾ ಬಲಾಢ್ಯನಾದ ದೈತ್ಯನನ್ನು ಸಂಹರಿಸಿದ **ಕೈಟಭಾರಿಯಾದ** ಆ ಶ್ರೀಮನ್ನಾರಾಯಣನ ಧ್ಯಾನದಲ್ಲಿ ಸದಾ ನಿರತರಾಗಿರುವ ಮುಕ್ತಿಯೋಗ್ಯಜೀವರು, **ಸಾರೂಪ್ಯವೆಂಬ** ಮುಕ್ತಿಸ್ಥಿತಿಯನ್ನು ಪಡೆಯುವರು, ಅಂದರೆ ಶ್ರೀಹರಿಯಂತೆಯೇ ಚತುರ್ಭುಜ ಶಂಖ ಚಕ್ರಾದಿ ಆಯುಧ ವಿಶೇಷಗಳಿಂದ ಪರಿಶೋಭಿತರಾಗಿ ಅನಾದಿನಿತ್ಯವಾದ ತಮ್ಮ ಸ್ವರೂಪಶರೀರದಿಂದ ರೂಪ ಸದೃಶವಾದ **ಸಾರೂಪ್ಯ** ಮುಕ್ತಿಯನ್ನೈದು

ವರು. ಸಾರೂಪ್ಯವೆಂದರೆ ಶ್ರೀ ಪರಮಾತ್ಮನಂತೆಯೇ ಪ್ರತಿಬಿಂಬ ರೂಪ ರಾಗಿರುವರೇ ಹೊರತು **ಅವನೇ** ಅವರಾಗುವುದಿಲ್ಲ. ಅಂತಹ ಮುಕ್ತಿಯೋಗ್ಯ ಜೀವರು ಸ್ವರೂಪಯೋಗ್ಯತೆಯಲ್ಲಿ ಬ್ರಹ್ಮಾದಿದೇವತೆಗಳಿಂದ ಅವರರು. ಇದ ರಿಂದಲೇ **ಅಲ್ಪ ಜೀವಿಗಳು**–ಎಂದಿದ್ದಾರೆ ದಾಸರಾಯರು, ಇಂತಹ ಅಲ್ಪ ಜೀವಿಗಳು ಸಾಂಶರೇ. ದೃಷ್ಟಾಂತವಾಗಿ **ಶಿಶುಪಾಲನನ್ನು** ತೆಗೆದುಕೊಳ್ಳ ಬಹುದು. ಶಿಶುಪಾಲನು **ಜೀವದ್ವಯಾವೇಶವುಳ್ಳ** ಚೇತನನು. ಅವನಲ್ಲಿ (೧) **ಜಯನೆಂಬ** ಮುಕ್ತಿಯೋಗ್ಯನಾದ ದ್ವಾರಪಾಲಕನು ಮತ್ತು (೨) **ಶಿಶುಪಾಲನೆಂಬ** ತಮೋಯೋಗ್ಯನಾದ ದೈತ್ಯನೂ ಇದ್ದನು. ದೈತ್ಯನ ಸಹವಾಸದಿಂದ ಜಯನು ಶ್ರೀಕೃಷ್ಣನಲ್ಲಿ ದ್ವೇಷವನ್ನು ಮಾಡಿ, ರಾಜ ಸೂಯಯಾಗ ಸಂದರ್ಭದಲ್ಲಿ ಅಗ್ರಪೂಜಾ ಪ್ರಕರಣದಲ್ಲಿ ಮನಸ್ವೀ ನಿಂದಿ ಸಿದನು. ಕೃಷ್ಣನ ಚಕ್ರಾಯುಧದಿಂದ ಶಿಶುಪಾಲನು ಸಂಹೃತನಾದ ಕಾಲದಲ್ಲಿ ಜಯನೆಂಬ ಮುಕ್ತಿಯೋಗ್ಯ ಚೇತನಕ್ಕೆ **ಸಾರೂಪ್ಯ** ಮುಕ್ತಿಯನ್ನು ದಯ ಪಾಲಿಸಿದನು. ಇದರಿಂದ ಆ **ಜ್ಯೋತಿಯು** ಕೃಷ್ಣನ ಉದರವನ್ನು ಎಲ್ಲರೂ ನೋಡುತ್ತಿರುವಂತೆಯೇ ಪ್ರವೇಶಿಸಿತು. ತಮೋಯೋಗ್ಯನಾದ ಶಿಶುಪಾಲ ನಿಗೆ ನಿತ್ಯದುಃಖ ರೂಪವಾದ ಅಂಧತಮಸ್ಸು ಪ್ರಾಪ್ತವಾಯಿತು. **ಜಯ** ನೆಂಬ ದ್ವಾರಪಾಲಕನು ತತ್ವಾಭಿಮಾನಿಗಳಿಗಿಂತ ಅವರನು. (ಅಲ್ಪಜೀವಿ). ಇದರಂತೆ ಕಂಸನು ಭಯದಿಂದಲೂ, ಪಾಂಡವರು ಸ್ನೇಹದಿಂದಲೂ ಯಾದ ವರು ಭಾಂದವ್ಯದಿಂದಲೂ, ಸದ್ಗತಿಯನ್ನು ಹೊಂದಿದರು. ॥೩೦॥

## ಪದ್ಯ (೩೧)

**ಮೂಲ-**

**ಈ ಪರಿಯು ದೇಹದೊಳು ಭಗವ ।**
**ದ್ರೂಪಗಳ ಮರಿಯುದಲೆ ಮನದಿ ಪ ।**
**ದೇಪದೇ ಭಕುತಿಯಲಿ ಸ್ಮರಿಸುತಲಿಪ್ಪ ಭಕುತರನು ॥**
**ಗೋಪತಿ ಜಗನ್ನಾಥವಿಠ್ಠಲ ಸ ।**
**ಮೀಪಗನು ತಾನಾಗಿ ಸಂತತ ।**
**ಸಾಪರೋಕ್ಷಿಯ ಮಾಡಿ ಪೊರೆವನು ಎಲ್ಲ ಕಾಲದಲಿ ॥** ॥೩೧॥

**ಅವತರಣಿಕೆ :**

ಪೂರ್ವೋಕ್ತ ಪ್ರಕಾರ ಸಾಧನಶರೀರವಾದ ಈ ದೇಹದಲ್ಲಿ ತತ್ತತ್ಸ್ಥಾನಗತ ಭಗವದ್ರೂಪಗಳನ್ನು ನಿರಂತರದಲ್ಲಿಯೂ ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ, ಭಕ್ತ್ಯುದ್ರೇಕದಿಂದ ಸ್ಮರಣೆ ಮಾಡುತ್ತಲಿರುವ ನಿಜ ಭಕ್ತರನ್ನು ವೇದ ವಿನುತನಾದ, ಭೂರಮಣನಾದ ಶ್ರೀ ಜಗನ್ನಾಥವಿಠ್ಠಲಸ್ವಾಮಿಯು, ಆ ಭಕ್ತರಿಗೆ ಸಮೀಪವರ್ತಿಗನಾಗಿದ್ದು, ತನ್ನ ಅಪರೋಕ್ಷಜ್ಞಾನರೂಪವಾದ ಸಂದರ್ಶನ ಭಾಗ್ಯವನ್ನಿತ್ತು, ಸರ್ವಕಾಲಗಳಲ್ಲಿ ಸಂರಕ್ಷಿಸುವನು ಎಂದು ತಿಳಿಸುತ್ತಾ—**ಈ ಪರಿಯು ದೇಹದೊಳು**-ಎಂಬ ಪ್ರಸಕ್ತ ಸಂಧಿಗತ ೩೨ ನೆಯ ಈ ಅಂತ್ಯ ಪದ್ಯದಿಂದ ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ. ॥೩೧॥

**ಪ್ರತಿಪದಾರ್ಥ**

**ಈ ಪರಿಯು**=ಪೂರ್ವೋಕ್ತ ಪ್ರಕಾರ (ಹಿಂದಿನ ಪದ್ಯಗಳಲ್ಲಿ ಹೇಳಿದ),

**ದೇಹದೊಳು** = ಸಾಧನಶರೀರವೆಂತೆಂಬ ಈ ಸ್ಥೂಲದೆಹದಲ್ಲಿ, **ಭಗವದ್ರೂಪ ಗಳ** = ಓತ ಪ್ರೋತನಾಗಿ ಹಬ್ಬಿ ಹರಡಿರುವ ಸರ್ವ ಇಂದ್ರಿಯಗತ, ತತ್ತ್ವಸ್ಥಾನಗತ ಭಗವನ್ಮೂರ್ತಿಗಳನ್ನು, **ಮರಿಯುದಲೆ** = ಆ ಭಗವದ್ರೂಪಗಳ ವ್ಯಾಪಾರ ವಿಶೇಷವನ್ನು ಮರಿಯದೆ (ಸದಾ ಸರ್ವಕಾಲದಲ್ಲಿಯೂ ಶ್ರೀ ಪರಮಾತ್ಮನೇ ಮುಖ್ಯನಿಯಾಮಕನೂ ಮತ್ತು ಕರ್ತೃವೂ ಆಗಿದ್ದಾನೆಂಬ ವಿಷಯವನ್ನು ಸ್ಮರಿಸಿಕೊಳ್ಳುತ್ತಾ), **ಮನದಿ** = ಮನಸ್ಸಿನಿಂದ ಭಾವನಾತರಂಗಗಳಲ್ಲಿ, **ಪದೇಪದೇ** = ಬಾರಿಬಾರಿಗೂ (ಎಡ ಬಿಡದೆ), **ಸ್ಮರಿಸುತಲಿಪ್ಪ** = ಸ್ಮರಣೆ ಮಾಡುತ್ತಲಿರುವ **ಭಕುತರನು** = ಭಗವದ್ಭಕ್ತರನ್ನು, **ಗೋಪತಿ** = ಅನಂತ ವೇದಗಳಿಂದ ಪ್ರತಿಪಾದ್ಯನಾದ (ಭೂರಮಣನಾದ, ಲೋಕೇಶನಾದ. ಗೋ = ವೇದ, ಭೂಮಿ) **ಜಗನ್ನಾಥವಿಠ್ಠಲ** = ದಾಸರಾಯರ ಅಂಕಿತನಾಮಕನಾದ ಶ್ರೀ ಜಗನ್ನಾಥವಿಠ್ಠಲ ಸ್ವಾಮಿಯು, **ಸಮೀಪಗನು** = ಅವರಿಗೆ ಅತ್ಯಂತ ಸಮೀಪವರ್ತಿಗನಾಗಿದ್ದು (ಸರ್ವಜೀವರಿಗೆ ಶ್ರೀ ಪರಮಾತ್ಮನು ಬಿಂಬನಾಗಿರುವುದರಿಂದ, ಜೀವರಿಗೆ ಅವನಿಗಿಂತ ಸಮೀಪ ಬಂಧುಗಳು ಮತ್ತ್ಯಾರಿರುವರು!) **ತಾನಾಗಿ** = ಸ್ವಯಂ ಭಕ್ತವರ್ಗಕ್ಕೆ ಅನುಗ್ರಹಿಸುತ್ತಾ, **ಸಂತತ** = ಸರ್ವಕಾಲದಲ್ಲಿ ತನ್ನನ್ನ ಧ್ಯಾನಿಸುತ್ತಿರುವವರನ್ನು **ಸಾಪರೋಕ್ಷಿಯಮಾಡಿ** = ಅಪರೋಕ್ಷವುಳ್ಳವಳ್ಳವರನ್ನಾಗಿ ಮಾಡಿ, ಅಂದರೆ ಅಪರೋಕ್ಷಜ್ಞಾನಿಗಳನ್ನಾಗಿ ಮಾಡಿ, ಅವರಿಗೆ ತನ್ನ ಸಂದರ್ಶನ ಭಾಗ್ಯವನ್ನು ಕರುಣಿಸಿ, **ಎಲ್ಲಕಾಲದಲಿ** = ಸರ್ವಕಾಲ ಮತ್ತು ಅವಸ್ಥೆಗಳಲ್ಲಿಯೂ, **ಪೊರೆವನು** = ಲಿಂಗಭಂಗ ದ್ವಾರಾ ಕರ್ಮ ವಿಮೋಚನೆಗೈಸಿ, ನಿತ್ಯಾನಂದರೂಪವಾದ ಮೋಕ್ಷವನ್ನು ಕೊಟ್ಟು, ಸಂರಕ್ಷಿಸುವನು. ॥೫೧॥

## ವ್ಯಾಖ್ಯಾನಗಳು

### (೧) ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಪೂರ್ವೋಕ್ತ ಚಿಂತನಾದಿಂದಲೇ ಅಪರೋಕ್ಷವೆಂದು ಹೇಳುತಾರೆ,

ಈ ಪೂರ್ವೋಕ್ತ ಪ್ರಕಾರ ಸರ್ವಕಾಲದಲ್ಲೂ ಸ್ಥೂಲಾದಿ ದೇಹಗಳಲ್ಲಿ ಇರತಕ್ಕ ಅನೇಕವಾಗಿ ಹೇಳಿರುವ ಭಗವದ್ರೂಪಗಳನ್ನು ದೇಹೇಂದ್ರಿಯಾಗಳಿಂದ ನಡೆಯುವ ಶುಭಾಶುಭಕರ್ಮಗತ ಭಗವದ್ರೂಪಗಳ ವ್ಯಾಪಾರಗಳ ಮರಿಯದಹಾಂಗೆ ಮನಸ್ಸಿನಲ್ಲಿ ಪದೇ ಪದೇ ಕೇವಲ ಭಕ್ತಿಯಿಂದ ಸ್ಮರಣೆ ಮಾಡತ ಇರತಕ್ಕ ಭಗವದ್ಭಕ್ತರನ್ನು ಅನಂತವೇದಗಳಿಂದ ಪ್ರತಿಪಾದ್ಯನಾದ ವಿಠಲರೂಪಿಯಾದ ಶ್ರೀನಾರಾಯಣದೇವರು, ತನ್ನ ಇಚ್ಛಾದಿಂದ ತಾನೆವ ಹೃದಯಾಕಾಶದಲ್ಲಿ ಅಪರೋಕ್ಷಕ್ಕೆ ಸಮೀಪಗನಾಗಿ, ನಿರಂತರ ವಾಸನಾರೂಪದಿ ಧ್ಯಾನಮಾಡತಕ್ಕ ಅಧಿಕಾರಿಗ್ಳಿಗೆ, ವಾಸನಾರೂಪವನ್ನ ದೂರಮಾಡೀ ನಿಜರೂಪವಾದ ತನ್ನ ಅಪರೋಕ್ಷದಿಂದ ಸಹಿತನನ್ನಾಗಿ ಮಾಡಿ, ಲಿಂಗಭಂಗ ಐದಿಸಿ ಸ್ವರೂಪಾನಂದ ವ್ಯಕ್ತಮಾಡಿ ಮೋಕ್ಷಸ್ಥಾನದಲ್ಲಿ ಇಟ್ಟು ಕಾಪಾಡುತ್ತಾನಂತ ತಾತ್ಪರ್ಯ, ॥೩೧॥

(೨) ಭಾವಪ್ರಕಾಶಿಕೆ ವ್ಯಾಖ್ಯಾನ–

ಪ್ರಸಕ್ತ ಸಂಧಿಯನ್ನು ಮುಗಿಸುತ್ತಾ ಧ್ಯಾನಮಾಡುವವರಿಗಾಗುವ ಫಲವನ್ನು ಹೇಳುತ್ತಾರೆ.

ಈ ಪ್ರಕಾರ ಸಂಧಿಯಲ್ಲಿ ಹೇಳಿದಂತೆ ನಮ್ಮ ದೇಹದೊಳಗಿರುವ ಭಗವದ್ರೂಪಗಳನ್ನು ತಿಳಿದು ಕ್ಷಣಬಿಡದೆ ಅವಿಚ್ಛಿನ್ನ ಭಕ್ತಿಯಿಂದ ಸ್ಮರಣೆಮಾಡುತ್ತಿರುವ ಭಕ್ತರಿಗೆ ಶ್ರೀಜಗನ್ನಾಥ ವಿಠ್ಠಲಾಂಕಿತ ಗೋಪತಿಯು, ಗೋ ಎಂದರೆ, ಭೂಮಿಗೆ ಹೆಸರು. ಭೂಮಿಯನ್ನು ರಕ್ಷಿಸಿದುದರಿಂದ ಗೋಪತಿ ಎಂದಾಯಿತು. ಅಥವಾ ಗೋ ಎಂದರೆ ವೇದಾತ್ಮಿಕರಾದ ದುರ್ಗಾದೇವಿಯರು. ಅವರಿಗೆ ಪತಿಯಾದುದರಿಂದ ಗೋಪತಿ ಎಂದು ಹೆಸರು. ಇಂತಹ ಶ್ರೀಪರಮಾತ್ಮನು ಇವರ ಹೃದಯಾಕಾಶದಲ್ಲಿ ನಿಂತು, ಅಪರೋಕ್ಷದಲ್ಲಿ ಗೋಚರನಾಗಿ ಸರ್ವದಾ ರಕ್ಷಿಸುವನು. ॥೩೧॥

॥ ಇಂತು ಭಾವಪ್ರಕಾಶಿಕೆ– ಎಂಬ ಶ್ರೀಮದ್ಹರಿಕಥಾಮೃತಸಾರದಲ್ಲಿ ೯ ನೆಯಸಂಧಿಯ ವ್ಯಾಖ್ಯಾನ ಮುಕ್ತಾಯವಾಯಿತು ॥

(೩) ಭಾವದರ್ಪಣ ವ್ಯಾಖ್ಯಾನ

ದೇಹಸ್ಥ ಸಮಸ್ತ ಭಗವದ್ರೂಪಗಳನ್ನೂ ಮನಃಪೂರ್ವಕ ಕ್ಷಣಶಃ ಸ್ಮರಣ ಮಾಡತಕ್ಕ ಪುರುಷರಿಗೆ ಅಪರೋಕ್ಷ ಕೊಡುತ್ತಾನೆಂದು ಹೇಳುತ್ತಾರೆ । ಈಪರೀತಿ ॥ ॥೩೦॥

॥ ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸ ವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣ ಟೀಕಾಯಾಂ ಕಮಲಾಪತಿದಾಸಹೃದ್ಗತೇನ ಶ್ರೀಹರಿಣಾ ಕೃತಾಯಾಂ ಜೀವಪ್ರಕರಣ ಸಂಧಿಃ ಪರ್ಯವಸಿತಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

(೪) ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ (ಸಂಸ್ಕೃತಮೂಲ)

ಉಪಸಂಹರತಿ- "ಈಪರಿ"-ಇತಿ ॥ ಗೋಪತಿಃ ಗೋಪ್ತಾ ॥ "ಓಂ" ಅಸ್ಮಾದ್ ಚಿತ್ರಾಭಿರವತ್ ದಭಿಷ್ಟಿ ಭಿರಾನಃ ಸುಷ್ಮ್ನೇಷು ಯಾಮಯ ॥ ಇಮಾ ಉತ್ವಾ ಪುರೂವಸೋಗಿರೋ ವರ್ಧಂತು ಯಾ ಮಮ ॥ಓಂ॥

ಗಾಃ ವೇದರೂಪಾಃ ಶರಃ । ತಾಸಾಂ ಪತಿಃ ॥೩೦॥

॥ ಇತಿ ಶ್ರೀಮದ್ಧರಿಕಥಾಮೃತಸಾರ ಟೀಕಾಯಾಂ ಶ್ರೀವ್ಯಾಸದಾಸ ಸಿದ್ಧಾಂತ ಕೌಮುದ್ಯಾಂ ವರ್ಣಪ್ರಕ್ರಿಯಾ ಸಂಧಿಃ ಸಮಾಪ್ತಃ ॥

**ಕನ್ನಡಾರ್ಥ:**

ಪ್ರಸಕ್ತ ಸಂಧಿಯಾದ **ವರ್ಣಪ್ರಕ್ರಿಯಾಸಂಧಿಯನ್ನು** ಉಪಸಂಹರಿಸು ತ್ತಾರೆ, "ಈಪರಿ" ಎಂಬ ಪದ್ಯದಿಂದ.

**ಗೋಪತಿ** ಎಂಬ ನಾಮವು ವಿಷ್ಣುಸಹಸ್ರನಾಮಾಂತರ್ಗತವಾದುದು. ಬೃಹತೀ ಮಂತ್ರಾನುಸಾರವಾಗಿ– "ವೇದಗಳೆಂಬಗೋವು (ವಾಕ್ಯ) ಗಳನ್ನು ಪರಿಪಾಲಿಸಿ ಪತಿಯೆನಿಸುವುದರಿಂದ **ಗೋಪತಿ** ಎಂದು ಅರ್ಥವಾಗುವುದು. ॥೩೧॥

**॥ಇಂತು ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ ಸಂಸ್ಕೃತ ವ್ಯಾಖ್ಯಾನದು**

**ಕನ್ನಡಾರ್ಥಾನುವಾದದಲ್ಲಿ ೯ನೆಯ ಸಂಧಿ**

**ವರ್ಣಪ್ರಕ್ರಿಯಾಸಂಧಿ ಮುಕ್ತಾಯವಾಯಿತು ॥**

**(೫) ಶ್ರೀ ಗುರುಹೃದಯ ಪ್ರಕಾಶಿಕೆ ವ್ಯಾಖ್ಯಾನ**

ಉಕ್ತಾರ್ಥ ವಿವರಿಸುತ್ತಾರೆ, ಈ ಪರಿ ಎಂದು. ದೇಹದಲ್ಲಿ ಈ ಪರಿ ಎಂದರೆ, ಹಿಂದೆ ಹೇಳಿದ ಪ್ರಕಾರ ದೇವರ ರೂಪಗಳನ್ನು ಮರೆಯದೆ, ಮನಸ್ಸಿನಲ್ಲಿ ಪದೇ ಪದೇ ಎಂದರೆ ಪುನಃ ಪುನಃ ಭಕ್ತಿಯಿಂದ ಸ್ಮರಿಸುತ್ತಿರುವ ಭಕ್ತರನ್ನು ಸಾಪರೋಕ್ಷಿಯ ಮಾಡಿ ಎಂದರೆ, ತನ್ನ ರೂಪಸಂದರ್ಶನವುಳ್ಳವರನ್ನು ಮಾಡಿ, ಗೋಪತಿ ಎಂದರೆ ವೇದಸ್ವಾಮಿ ಸಂತತ ಅಂದರೆ ವ್ಯಾಪ್ತನಾದಂಥ ಜಗನ್ನಾಥನಾದ ಜ್ಞಾನಪ್ರದ ಸ್ವಾಮಿಯು ಸಮೀಪದಲ್ಲಿ ಸನ್ನಿಧಾನ ವಿಶೇಷದಿಂದಿದ್ದು ಸದಾ ರಕ್ಷಿಸುವನು. ॥೩೧॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ನಮ್ಮ ಸ್ಥೂಲಶರೀರವು ಸಾಧನಶರೀರವು. ಇದರ ದ್ವಾರವೇ ಭಗವದನುಗ್ರಹ ಪ್ರಾಪ್ತಿಗಾಗಿ ಸಾಧಕನು ಮಾಡಬೇಕಾದ ಸಕಲ ಸಾಧನಗಳೂ ನಡೆಯುವುವು. ಸ್ಥೂಲದೇಹಗತ, ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಪಂಚಭೂತಗಳು, ತನ್ಮಾತ್ರಾಪಂಚಕಗಳು, ಮನೋ ಪಂಚಕಗಳು, ತ್ವಗಾದಿ ಸಪ್ತಧಾತುಗಳು, ಅನ್ನಮಯಾದಿ ಪಂಚಕೋಶಗಳು, ೭೨,೦೦೦ ಸಂಖ್ಯಾಕವಾದ ನಾಡೀವ್ಯೂಹ ಇವುಗಳಲ್ಲೂ ಶ್ರೀಪರಮಾತ್ಮನು ವ್ಯಾಪಿಸಿ ಹಬ್ಬಿ ಹರಡಿಕೊಂಡಿದ್ದಾನೆ. ಇಂತಹ ಇಂದ್ರಿಯಾದಿ ಪರಿಕರಗಳಿಂದ ಯುಕ್ತವಾದ ಈ ದೇಹವು ಬಿಂಬರೂಪಿಯಾದ ಶ್ರೀಹರಿಯು ವಾಸಿಸುವ ದೇವಮಂದಿರವು.

೨. ಸ್ಥೂಲಶರೀರದಲ್ಲಿ **(ದೇಹದೊಳು)** ವ್ಯಾಪಿಸಿಕೊಂಡಿರುವ ಪ್ರಸಕ್ತ ಸಂಧಿಯ ಪೂರ್ವಪದ್ಯಗಳಲ್ಲಿ ವಿವರಿಸಿರುವ ಪ್ರಕಾರ **(ಈ ಪರಿಯ)** ಶ್ರೀ ಪರಮಾತ್ಮನ ಭಗವನ್ಮೂರ್ತಿಗಳನ್ನು **(ಭಗವದ್ರೂಪಗಳ)** ಗುರೂಪ ದೇಶದ್ವಾರಾ ಅರಿತು, ನಿರಂತರವೂ ಧ್ಯಾನಿಸುತ್ತಿರಬೇಕು. ಧ್ಯಾನೋಪಾಸ ನೆಗೆ ಮನಸ್ಸೇ ಮುಖ್ಯೇಂದ್ರಿಯವು. ದೇಹಗತ ಭಗವದ್ರೂಪಗಳ ಸ್ಮರಣೆ ಯನ್ನು ಧ್ಯಾನಕ್ಕೆ ವಿಷಯವನ್ನಾಗಿ ಮಾಡಿ ಮನಸಾ ಸ್ಮರಣಪೂರ್ವಕವಾಗಿ **(ಮರಿಯದೆಲೆ)** ಬಾರಿಬಾರಿಗೂ ನಿಷ್ಕಾಮನಾ ಭಾವದಿಂದ, ಶುದ್ಧಪೂರ್ವಕ ವಾಗಿ **(ಪದೇ ಪದೇ ಭಕುತಿಯಲಿ)** ನೆನೆಯುತ್ತಿರಬೇಕೆಂದು ತಿಳಿಸುತ್ತಾರೆ. ಭಕ್ತಿಗೆ ಮಹಾತ್ಮಜ್ಞಾನಪೂರ್ವಕವಾದ ಧೃಢಸ್ನೇಹವೇ ಕಾರಣವು. ಅಂತಹ ಧೃಢಭಕ್ತಿಯಿಂದ ಶರೀರಗತ ಭಗವದ್ರೂಪಗಳನ್ನು ಬಾರಿಬಾರಿಗೂ ಸ್ಮರಿಸುತ್ತಿ ರುವ ಭಕ್ತವರ್ಗವನ್ನು **ಗೋಪತಿ** ಶ್ರೀ ಪರಮಾತ್ಮನು ಸಲಹುವನು. **ಗೋ** ಶಬ್ದವು ಬಹ್ವರ್ಥಗರ್ಭಿತವಾದುದು, (೧) **ಗೋ**-ಎಂದರೆ ವೇದ ಗಳು. ಅನಂತಾನಂತ ವೇದಗಳಿಂದ ಸ್ತುತ್ಯಮಾನವಾದ ವೇದಪ್ರತಿಪಾದ್ಯ ಗೋವಿಂದನಿಗೆ **ಗೋಪತಿ** ಎಂದು ಹೆಸರು. (೨) **ಗೋ**-ಎಂದರೆ ಭೂಮಿ

ಇದರಿಂದ ಸಾಂಕೇತವಾದ ಬ್ರಹ್ಮಾಂಡಗತ ೧೪ ಲೋಕಗಳು ಇಂತಹ ಚತುರ್ದಶಭುವನಗಳಿಗೆ ಅಧಿಪತಿ ಎಂದು **ಗೋಪತಿ** ನಾಮವು ಪ್ರತಿಪಾದಿಸುವುದು. (೩) **ಗೋ**–ವೇದಾಭಿಮಾನಿಗಳಾದ **ದುರ್ಗಾ** ದೇವಿಗೆ ಪತಿಯಾಗಿರುವುದರಿಂದ ಅಂತಹ ದುರ್ಗಾರಮಣನಾದ ಶ್ರೀಹರಿಗೆ **ಗೋಪತಿ** ಎಂಬ ಅಭಿಧಾನ. ಇಂತು ವೇದಪ್ರತಿಪಾದ್ಯನಾದ ಲೋಕೇಶನಾದ ದುರ್ಗಾಧವನಾದ **ಶ್ರೀಜಗನ್ನಾಥವಿಠ್ಠಲನು.** ದಾಸರಾಯರ ಬಿಂಬಮೂರ್ತಿಯು. ಜಗತ್ಪ್ರಭುವಾದ ಶ್ರೀಜಗನ್ನಾಥವಿಠ್ಠಲನಾಮಕ ಶ್ರೀಪರಮಾತ್ಮನು ಅಂತಹ ಭಕುತರಿಗೆ **ಸಮೀಪಗನಾಗಿದ್ದಾನೆ.** ಜೀವರಿಂದ ಅವಿಯೋಗಿಯಾಗಿ ಬಿಂಬನಾಗಿದ್ದಾನೆ. ಅಂತಹ ಬಿಂಬರೂಪೀ ಶ್ರೀಪರಮಾತ್ಮನು ಭಕ್ತರಿಗೆ ಸದಾ ಅನಿಮಿತ್ತ ಬಂಧುವಾಗಿ ಸಮೀಪಗನಾಗಿದ್ದಾನೆ.

೩. ಸ್ವಯಂ (**ತಾನಾಗಿ**) ಜೀವರ ಅನಿಮಿತ್ತ ಬಂಧುವಾದ ಬಿಂಬನು, ಅವರ ಅಮಲಭಕ್ತಿಗೆ ಒಲಿದು, ತನ್ನ ಅಪರೋಕ್ಷ ಜ್ಞಾನವನ್ನು ಅನುಗ್ರಹಿಸವನು. ಅವರನ್ನು **ಸಾಪರೋಕ್ಷಿ**ಗಳನ್ನಾಗಿ ಮಾಡಿ ಅವರ ಹೃತ್ಕಮಲದಲ್ಲಿ ಬಿಂಬಾಪರೋಕ್ಷರೂಪವಾದ ದರ್ಶನ ಭಾಗ್ಯವನ್ನು ಕೊಡುವನು. ಅಪರೋಕ್ಷೀಕೃತಶ್ರೀಶರಾದ ಅಂತಹ ಭಗವದ್ಭಕ್ತರನ್ನು ಸದಾ ಸರ್ವಕಾಲಗಳಲ್ಲಿಯೂ, ಅವರ ಸಕಲಾಭೀಷ್ಟಗಳನ್ನು ಸಲ್ಲಿಸಿ, ಮೋಕ್ಷಸಾಮ್ರಾಜ್ಯವೆಂಬ ನಿತ್ಯಸುಖವನ್ನು ಕೊಟ್ಟು, ಸಂರಕ್ಷಿಸುವನು (**ಪೊರೆವನು**) ಎಂಬುದೇ ಪ್ರಸಕ ಸಂಧಿಗತ ೩೧ನೆಯ ಈ ಅಂತ್ಯ ಪದ್ಯದ ತಾತ್ಪರ್ಯಾರ್ಥವು.

**|| ಇಂತು ಶ್ರೀಮದ್ಹರಿಕಥಾಮೃತಸಾರದಲ್ಲಿ ವರ್ಣಪ್ರಕ್ರಿಯಾಸಂಧಿ (ಜೀವಪ್ರಕರಣಸಂಧಿ)**

**(ಉದಾತ್ತಾನುದಾತ್ತ ಸಂಧಿ)ಯಲ್ಲಿ ಕೊನೆಯ ಪದ್ಯವಾದ ೩೧ನೆಯ ಪದ್ಯದ ಸರ್ವವ್ಯಾಖ್ಯಾನಸಾರಸಂಗ್ರಹವೆಂಬ ತಾತ್ಪರ್ಯವು ಪರಿಸಮಾಪ್ತಿಯಾಯಿತು ||**

**|| ಶ್ರೀಮಧ್ವೇಶಾರ್ಪಣಮಸ್ತು ||**

## ಮುಂದಿನ ಪ್ರಕಟಣೆ:

ಇದೇ ಮಾಲಿಕೆಯಲ್ಲಿ ಶ್ರೀಮದ್ಧರಿಕಥಾಮೃತಸಾರದಲ್ಲಿ ಹತ್ತನೆಯ ಸಂಧಿ ಸರ್ವಪ್ರತೀಕ ಸಂಧಿಯು ದಶಮ ಸಂಪುಟದ ರೂಪದಲ್ಲಿ ಶೀಘ್ರವೇ ಪ್ರಕಟವಾಗಲಿದೆ.

# ತಿದ್ದುಪಡಿ

| ಪುಟ | ಸಾಲು | ತಪ್ಪು | ಸರಿ |
|---|---|---|---|
| 1 | 2 | 3 | 4 |
| 10 | 6 | ದವರೆಲ್ಲರು | ದಮರರೆಲ್ಲರು |
| 10 | 17 | (ಎಣ್ = ಎಂಟು, ದಿಶೆ = ದಿಕ್ಕು) | (ಎಂಟು + ದಿಶೆ = ಎಣ್ದೆಸೆ) |
| 11 | 3 | ವಾಪಿ | ಪಾಪಿ |
| 12 | 13 | ಲಿಂಗದೇಹದಲ್ಲಿ | ಲಿಂಗದಲ್ಲಿ |
| 12 | 15 | ಮಧಹ | ಮಧುಹ |
| 16 | 3 | ಮೋಚಕ | ಮೋಚಿತ |
| 18 | 25 | ಪ್ರಮರ್ಕ | ಪ್ರವರ್ತಕ |
| 23 | 8 | ನಿಚನಾ | ನೀಚತಾ |
| 24 | 15 | ಸ್ಥಳ | ಸ್ವರ |
| 25 | 12 | ಸಪಿಸರ್ಗಾಶ್ಚ | ಸವಿಸರ್ಗಾಶ್ಚ |
| 25 | 19 | ಮೇಲಿ | ಮೇರೆ |
| 25 | ಕೋನೇ ಸಾಲು ಆದ ಮೇಲೆ ಈ ರೀತಿ ಸೇರಿಸಿಕೊಳ್ಳಿ ಸವ-ಣಾಹಾದ್ಯೈ ಪ್ಯರ್ಥಾಃ ಸ್ವರಾರ್ಥಾನಾಮಿಯಂ ಸ್ಥಿತಿಃ ॥ | | |
| 28 | 19 | ವಾದ | ನಾದ |
| 29 | 17 | ಸ್ಮಣೆ | ಸ್ಮರಣೆ |
| 30 | 5 | ಮಾತ್ರಾಖ್ಯ | ಮಾತ್ರಾಬಲಂ |
| 30 | 5 | ಸಂತಾಪಃ | ಸಂತಾನಃ |
| 30 | 6 | ಇತ್ಯುತ್ತಶ್ಕೇ | ಇತ್ಯುಕ್ತಶ್ಕೀ |
| 30 | 16 | ಪದ್ಮದ | ಪದ್ಮದ |
| 32 | 15 | ಸಮೂರಾರ | ಸಮಾಹಾರ |

| 1 | 2 | 3 | 4 |
|---|---|---|---|
| 37 | 2 | ಅನುಸಂಧಾವ | ಅನುಸಂಧಾವ |
| 38 | 1/2 | ತ್ಯಾದಿಂದ ರಹಿತ ವಾದ ಸತ್ಕರ್ಮ | ಫಲತ್ಯಾಗದಿಂದ ಸತ್ಕರ್ಮ |
| 39 | 6 | ಭಗವದ್ಭಕ್ತಿ | ಭಗವದ್ಭಕ್ತರಲ್ಲಿ, ಸದ್ಭಕ್ತಿ |
| 39 | 6 | ತೋಷ | ದೋಷ |
| 39 | 18 | ಚಲಪ್ರತಿಮಾಗಳಿಗಿಂತಲೂ | ಚಲಪ್ರತಿಮಾನೇ |
| 39 | 21 | ಈ ಪದ್ಯದಲ್ಲಿ | ಮೇಲಿನ ಪದ್ಯದಲ್ಲಿ |
| 45 | 21 | ತನ್ಮಾತ್ರಯಗಳು | ತನ್ಮಾತ್ರಗಳು |
| 46 | 10 | ನಿಧನ ನಾಕಮ | ನಿಧನ ನಾಮಕ |
| 53 | 1 | ಪರ್ವಕರ್ಮಗಳು | ಪರ್ವಕಾಲಗತ ಕರ್ಮಗಳು |
| 53 | 25 | ಮಾಡತಕ್ಕ : | |

[illegible] :— ಮಾಡತಕ್ಕ ಕರ್ಮಗಳು ಗಹನವಾಗಿ ಉಂಟು ಎಂತ ತಾತ್ಪರ್ಯ. ಆಯಾ ದೃಷ್ಟಾಂತದಿಂದ ಆದನದನನುಸರಿಸಿದ ಕರ್ಮಗಳು ಯಥಾವತ್ತು ತೆಗೆದುಕೋ[illegible]ಕು. ತ್ರಯ ಎಂದರೆ ಪೂರ್ವೋಕ್ತ ಪ್ರಕಾರ ಮೂರು ವಿಧ ದೇಹ ಸಂಬಂಧ, ದೇಹದಿಂದ ಸ್ಥೂಲ ದೇಹದ್ವಾರಾ ಮಾಡತಕ್ಕ

| | | | |
|---|---|---|---|
| 55 | 6 | ಚಿಂತಿಸಿ | ಚಿಂತಿಸಿ ಕರ್ಮಾಂತರ್ಗತ ಕರ್ಮರೂಪಿ ಪರಮಾತ್ಮನ ಚಿಂತಿಸಿ |
| 55 | 8 | ಕರ್ಮಾಂತರ್ಗತ | ಇಲ್ಲಿ ಇರುವುದನ್ನು ಬಿಟ್ಟು ಓದಿಕೊಳ್ಳಿ |
| 55 | 17 | ದೈಹಿಕ | ದೇಶಿಕ |
| 56 | 22 | ದೈಹಿಕ | ದೈಶಿಕ |
| 57 | 13 | ಕೊಡುವುದರಿಂದಲೂ | ಕೊಡುವುದರಿಂದಲೂ, ಕರ್ಮಾಚರಣೆ ತಿಳಿಯುವುದು ಅಗಾಧವಾದದ್ದರಿಂದಲೂ |
| 58 | 12 | ದೈಹಿಕ | ದೈಶಿಕ |

| 1 | 2 | 3 | 4 |
|---|---|---|---|
| 59 | 19 | ವ್ಯಕ್ತಿ | ವೃತ್ತಿ |
| 63 | 22 | ದಿಂದಾ | ನಿಂದಾ |
| 64 | 2 | ಭೇದಜ್ಞಾನ | ಭೇದಜ್ಞಾನ ಮಿಶ್ರಜ್ಞಾನ |
| 64 | 7 | ಲ್ಲಿಧ | ವಿಧ |
| 64 | 11 | ಇವಕ್ಕೆ | ಇದರಲ್ಲಿ ಭಾರ್ಗವ ಎಂದು |
| 64 | 13 | ಪರಶುರಾಮದೇವರು ರಾಜಸ ತಾಮಸ ಕರ್ಮಕ್ಕೆ ಹಯವದನ ದೇವರು | ಇಷ್ಟನ್ನೂ ಬಿಟ್ಟು ಮುಂದಕ್ಕೆ ಓದಿಕೊಳ್ಳಿ |
| 64 | 14 | ಭಗವದ್ರೂಪಗಳು | ಭಗವದ್ರೂಪಗಳು, ಅಂದು ಮೂರು. ತಾಮಸಕರ್ಮ ಒಂದು |
| 64 | 23 | ಏಕದೇಹ | ಏಕದೇಶ |
| 64 | 26 | ಸ್ಥೂಲ ದೇಹಾಕಾರ | |

ಸರಿ:— ಸ್ಥೂಲ ದೇಹಾಕಾರನಾಗಿ ವ್ಯಾಪ್ತನಾಗಿ ಇದ್ದಾನೆ, ಪ್ರತಿಬಿಂಬನಾದ ಜೀವ ಎಂಬುವ ಸ್ಥೂಲದೇಹಾಕಾರದಂತೆ ಇರತಕ್ಕವ,

| 1 | 2 | 3 | 4 |
|---|---|---|---|
| 65 | 1 | ನಾಗಿ ಇದ್ದಾನೆ | ಇದನ್ನು ಬಿಟ್ಟುಕೊಂಡು ಓದಿ |
| 65 | 2/3 | ಇಂಥಾ ಬಿಂಬ ಪ್ರತಿಬಿಂಬರಲ್ಲಿ | ಇಂಥಾ ಪ್ರತಿಬಿಂಬರಲ್ಲಿ |
| 66 | 9 | ಜಗತ್ಕಾರ್ಯೆ ಮಂದ್ರಿತಃ | ಜಗತ್ಕಾರ್ಯೇ ಮತಿಂದ್ರಿತಃ |
| 74 | 8/9 | ಮತ್ತು ಅನಲನ | ಮತ್ತೂ ಅನಲದಲಿ |
| 74 | 23 | ಯದನ್ನಾತ್....ಪಾಪಂ ತದ....ಮುಚ್ಯತೆ। | |

ಸರಿ:— ಯದನ್ನಾತ್ ಕುರುತೇ ಪಾಪಂ ತದನ್ನಾತ್ ಪ್ರತಿಮುಚ್ಯತೇ।
ಯದ್ಭ್ರಾತ್ರ್ಯಾತ್ ಕುರುತೇ ಪಾಪಂ ತದ್ಭ್ರಾತ್ರ್ಯಾತ್ ಪ್ರತಿಮುಚ್ಯತೇ॥

| 1 | 2 | 3 | 4 |
|---|---|---|---|
| 31 | 16 | ವೃದ್ಧಿ ಹಾಸೇನ ವಿದ್ಯತೇ | ವೃದ್ಧಿ ಹ್ರಾಸೋ ನವಿದ್ಯತೇ |
| 31 | 17 | ಸಂಪನ್ನೇನ ಜಾಯತೇ | ಸಂಪನ್ನೋ ನ ಜಾಯತೇ |
| 33 | 11 | ಅಧಿಕಾರಾವ ನಾ ಭೇದ | ಅಧಿಕಾರಾತನಾ ಭೇದ |
| 34 | 8 | ಯುಕ್ತಿಸ್ಸನ್ | ಯುಕ್ತಸ್ಸನ್ |
| 38 | 25 | ಏವ ಮೂರು ರೂಪ | ಏವಮಾದಿ ರೂಪ |
| 38 | 26 | ಎಂತ ಮ್ಯಾಲೆ ಹೇಳಿದೆ | |

40 :— ಎಂತ ಮ್ಯಾಲೆ ಹೇಳಿದೆ, ಯಾಕೆಂದರೆ, ಅತ್ಯಂತ ಅಣುತರದಲ್ಲಿ ತದಪೇಕ್ಷಯಾ ಅಣುತರವಾಗೋ ಸಾಮರ್ಥ್ಯವಿಲ್ಲವಾದ್ದರಿಂದ ಪ್ರವೇಶ ಕೂಡದು, ಹಾಂಗೆ ಅಣುತರವಾಗೋ ಸಾಮರ್ಥ್ಯ ಅದೆ ಎಂತ ಪ್ರಮಾಣವಿದ್ದರೆ ಅಂಗೀಕರಿಸತಕ್ಕದ್ದು. ಸ್ವರೂಪಾಪೇಕ್ಷಯಾ ಅಣುತ್ವ ಆಗೋದಿಲ್ಲ, ಮಹತ್ತೂ ಆಗೋದಿಲ್ಲ ಎಂತ ಪ್ರಮಾಣವದೆ. ಅಣುತ್ವ ಇಲ್ಲದ ಮ್ಯಾಲೆ ಅಣುತರತ್ವ ಇಲ್ಲ ಎಂಬುದು ಅರ್ಥಾತ್ ಸಿದ್ಧವು, ಸ್ವರೂಪಾಪೇಕ್ಷಯಾ . ಅಣುತ್ವ ಸಿದ್ಧಿ ಇಲ್ಲ ಎಂಬುದಕ್ಕೆ ಪ್ರಮಾಣದಾವವೆಂದರೆ ಅಣುಭಾಷ್ಯ ನಾಲ್ಕನೇ ಅಧ್ಯಾಯದ ಪ್ರಮಾಣ ಹಿಂದಿನ ಶ್ಲೋಕದಲ್ಲೇ ಹೇಳಿಯದೆ. ಅದಕ್ಕೆ ಅರ್ಥ - ಮೋಕ್ಷದಲ್ಲಿ ಆನಂದ ಎಂಬುದು ವೃದ್ಧಿ ಹ್ರಾಸಾದಿಗಳಿಂದ ಯುಕ್ತವಾಗೋದಿಲ್ಲ. ಅನಾದಿ ಸ್ವರೂಪದಲ್ಲಿ ಅನಾದಿಯಿಂದ ಎಷ್ಟು ವಿದ್ಯಮಾನವಾಗಿ ಅದೋ ಅಷ್ಟು ಭೋಗಿಸತಾನೆ. ಅದಕ್ಕೆ ವೃದ್ಧಿಹ್ರಾಸ ಎರಡೂ ಇಲ್ಲ. ಅಸ್ಮಿನ್ ಬ್ರಹ್ಮಣಿ ಎಂದರೆ, ಈ ಚತುರ್ಮುಖ ಬ್ರಹ್ಮ ದೇವರು, ಸಂಪನ್ನಃ —ಇವನಿಂದ ಯುಕ್ತರಾದ ಯಾವತ್ತೂ ಜೀವರೇನು, ನಜಾಯತೇ - ಪರಮಾತ್ಮನಿಂದ ಹುಟ್ಟಿದವರಲ್ಲ, ನಮ್ರಿಯತೇ - ಪರಮಾತ್ಮನಿಂದ ಸಾಯೋವರಲ್ಲ, ನ ಹ್ರೀಯತೇ = ಪರಮಾತ್ಮನಿಂದ ಸರೂಪಾಪೇಕ್ಷಯಾ ಶುಷ್ಕಗಳು

| | | | |
|---|---|---|---|
| 92 | 8 | ಜೀವನ ಮಧ್ಯದಲ್ಲಿಯೂ | |

| 1 | 2 | 3 | 4 |
|---|---|---|---|
| ಸರಿ :— | | ಜೀವನ ದೇಹಾಕಾರನಾದ ಪರಮಾತ್ಮನ ಮಧ್ಯದಲ್ಲಿ ಇರುವನು, ನಾರಾಯಣನೇ ಜೀವನ ಮಧ್ಯದಲ್ಲಿಯೂ | |
| 98 | 8 | ತಸ್ಯವೃಷ್ಠ | ತಸ್ಯಪೃಷ್ಠ |
| 101 | 2 | ಇವನ ಮೂಲ | ಇವನ ಪಾದಮೂಲ |
| 101 | 14 | ಸ್ಥೂಲ ದೇಹದಲ್ಲಿ ವಿಚಾರ | |
| ಸರಿ :— | | ಸ್ಥೂಲ ದೇಹದಲ್ಲಿ, ಸ್ವರೂಪ ದೇಹದಲ್ಲಿ ಇರೋವರಾಗಿ ಇದ್ದಾರೆ, ಈಗ ಹೇಳತಕ್ಕದ್ದೆಲ್ಲ ಸ್ವರೂಪದೇಹದ ವಿಚಾರ | |
| 101 | 19 | ಸ್ಥೂಲಾಕಾಶ | ಸ್ಥೂಲಾಕಾಶ ಸೂಕ್ಷ್ಮಾಕಾಶ |
| 102 | 8 | ವಿಶ್ವಶಬ್ದ ಸಾಂಕೇತರಾದ ಜೀಮರಲ್ಲಿ | |
| ಸರಿ :— | | ವಿಶ್ವಶಬ್ದ ಸಾಂಕೇತರಾದ ಸರ್ವದೇವರನ ಅವರವರ ಭಾರವನ್ನು ವಹಿಸಿದವ ಎಂದರೆ, ದಳಗಳಲ್ಲಿ ಸಂಚಾರ ಮಾಡತ ಅವರವರ ಕಡಿಯಿಂದ ಯೋಗ್ಯತಾನುಸಾರ ಸಾಧನಿ ಮಾಡಸತಕ್ಕ ಭಾರವಹಿಸಿದವ ಇವನೇ ಮೂಲೇಶ ಮತ್ತು ತನ್ನ ಪಾದಮೂಲದಲ್ಲಿ ವಿಶ್ವಶಬ್ದ ಸಾಂಕೇತರಾದ ಜೀವರಲ್ಲಿ | |
| 104 | 6 | ಅಂತಃಕರ್ಣಿಗ್ರಗತ | ಅರ್ಥಃ ಕರ್ಣಿಕಾಗ್ರಗತ |
| 105/ | 21 | | |
| 105 | 22 | ಜೀವಹೃತ್ಕಮ ನಾಮವಾಸ್ | |
| | 23 | | |
| ಸರಿ :— | | ಜೀವಹೃತ್ಕಮಲಸ್ಸ್ಯೈವ ಕರ್ಣಿಕಾಯಾಂ ರಮಾಪತಿಃ । ಜೀವಾಂಗುಷ್ಠ ಪ್ರಮಾಣೇನ ವರ್ತತೇಹ್ಯಾತ್ಮನಾಮವಾನ್ ॥ | |
| 111 | 4 | ಇದ್ದಾನೆಂದು | |
| ಸರಿ :— | | ಇದ್ದಾನೆಂದು ಹೇಳಲಿಕ್ಕೆ ಕಾರಣವೇನೆಂದರೆ 'ಪರಮಾತ್ಮಾ ಚತುರೂಪಃ ಸರ್ವಪ್ರಾಣಿ ಶರೀರಗಃ' ಎಂದರೆ ವಿಶ್ವ ತೈಜಸ ಪ್ರಾಜ್ಞ ತುರ್ಯ ಈ ನಾಲ್ಕು ರೂಪದಿಂದ ದೇಹದಲ್ಲಿ ಇದ್ದಾನೆಂದು | |

| 1 | 2 | 3 | 4 |
|---|---|---|---|
| 111 | 15 | ಸಹಸ್ರನಾದಿ | ಸಹಸ್ರನಾಡಿ |
| 117 | 21 | ಜೀವಕರ್ಮಗಳಲ್ಲಿ | ಜೀವಕೃತಕರ್ಮಗಳಲ್ಲಿ |
| 118 | 4 | ತತ್ಫಲಗಳಿಲ್ಲೀನದೆ | ತತ್ಫಲಗಳಲ್ಲೀನೂ |
| 118 | 26 | ವ್ಯಾಪ್ತಿ ಇಲ್ಲ ಎಂಬುದು | |

ಸರಿ :— ವ್ಯಾಪ್ತಿ ಇಲ್ಲ ಎಂತಲೇ ಆಗುತ್ತದೆ, ಲಿಂಗದಲ್ಲಿ ವ್ಯಾಪ್ತಿ ಇಲ್ಲದೆ ಇದ್ದಮ್ಯಾಲೆ ಸ್ವರೂಪದಲ್ಲಿ ವ್ಯಾಪ್ತಿ ಇಲ್ಲ ಎಂಬುದು.

| | | | |
|---|---|---|---|
| 119 | 4 | ಸಮ | ಸರ್ವ |
| 120 | 13 | ಒಬ್ಬನೇ ನಿಯಾಮಕ | |

ಸರಿ :— ಒಬ್ಬನೇ ನಿಯಾಮಕ. ಲಿಂಗದಲ್ಲಿ ರಮಾಸಹಿತ ನಿಯಾಮಕ, ಅಣು ಲಿಂಗದಲ್ಲಿ ಪಯೋಜಾಸನ ಸಮೀರ ಸಹಿತ ನಿಯಾಮಕ

| | | | |
|---|---|---|---|
| 120 | 21 | ಇರತಕ್ಕ | |

ಸರಿ :— ಇರತಕ್ಕ ತತ್ತ್ವೇಶರೂಪದಲಿ ಪ್ರವೇಶ ಮಾಡಿ ಸೇವೆ ಕೈಕೊಳ್ಳುತ್ತಾ ಎಂದರೆ, ಸ್ವರೂಪದಲ್ಲಿ ತನ್ನ ಸ್ವಾಖ್ಯ

| | | | |
|---|---|---|---|
| 122 | 8 | ದೇವ | ಶೇಷ |
| 123 | 8 | ಶ್ಲೋಕದಲ್ಲಿ | ಸ್ಥೂಲದೇಹದಲ್ಲಿ |
| 123 | 21 | ಮಾಡಿದ ಮ್ಯಾಲೆ | ಮಾಡಿದ ಮ್ಯಾಲೆ ಪ್ರಳಯ ಕಾಲದಲ್ಲಿ ನಿರ್ಗಮರಾಗಿ |
| 124 | 6 | ಯೋಪ್ಪ್ವಾ | ಯೋಪ್ಪ್ಟಾ |
| 124 | 7 | ವಿರ್ವಾ | ಸರ್ವಾ |
| 124 | 14 | ಗುಣಸಮೂಹ | ಗಣಸಮೂಹ |
| 124 | 19 | ಇರೋವನಾಗಿದ್ದಾನೆ | |

ಸರಿ :— ಇರೋವನಾಗಿದ್ದಾನೆ. ಇದ್ದುಕೊಂಡು ತನ್ನಿಂದ ತಾನೇ ಸೇವ್ಯ ಸೇವಕನಾಗಿ ಸ್ವರೂಪದಲ್ಲಿ ಇರೋವನಾಗಿದ್ದಾನೆ.

| | | | |
|---|---|---|---|
| 126 | 1 | ಈರ | ಈಶ |
| 127 | 2 | ಸ್ವರೂಪದಲ್ಲಿ ಇದ್ದಂಥಾವೆ | ಸ್ವರೂಪದಲ್ಲಿ ಅನಾದಿ |

| 1 | 2 | 3 | 4 |
|---|---|---|---|
| | | | ಯಿಂದ ಇಂಥಾದ್ದಾಗೇ |
| 127 | 10 | ಬ್ರಹ್ಮಾವಾಯ್ವಾದಿಗಳು | ಬ್ರಹ್ಮವಾಯ್ವಾದಿಗಳುಇಲ್ಲ |
| 128 | 20 | ಮುಕ್ತಿಯಲ್ಲಿ ಪರಮಾತ್ಮನ | ಮುಕ್ತಿಯಲ್ಲಿ ಜೀವನ ಸ್ವರೂಪದಲ್ಲಿ ಪರಮಾತ್ಮನ |
| 128 | 24 | ಶೃಣೋವ | ಶೃಣೋಮಿ |
| 129 | 11 | ದೇವದಾ | ದೇವತಾ |
| 129 | 16 | ದೇಲ್ಯೈಃ | ದೇವ್ಯೈಃ |
| 130 | 8 | ಅಹಂತತ್ತ್ವಭಿವ | ಅಹಂತತ್ತ್ವಭಿ |
| 131 | 11 | ದ್ವೀತೀಪಕ್ಷ | ದ್ವಿತೀಯ ಪಕ್ಷ |
| 132 | 4 | ಭೃತ್ಯನದ್ವಾರಾ | |

ಸರಿ :— ಭೃತ್ಯನದ್ವಾರಾ ತಾನು ಆಜ್ಞಾ ಮಾಡಿಸಿದವನಾಗತಾನೆ, ಅವನಿಗೆ ಫಲರೂಪವಾದ ಜೀವನಗಳ ನಡಸತಾನೆ. ಅವರವರ ಜೀವನಗಳ ನಡಸೋ ನಿಮಿತ್ತ ರಾಜ ಭೃತ್ಯನದ್ವಾರಾ

| 1 | 2 | 3 | 4 |
|---|---|---|---|
| 133 | 6 | ವಾಯುಂ | ವಾಯ್ಯುಂ |
| 133 | 24/25 | ದಕ್ಷರಲ್ಲಿ | ದಕ್ಷರಲ್ಲ |
| 134 | 11 | ಜ್ಞಾನಿನಾ | ಜ್ಞಾನಾನಿ |
| 134 | 12 | ಕರ್ಮದೇವ | ಕರ್ಮಕೃದೇವ |
| 134 | 21 | ಪುನಸ್ಥೀನ | ಮನಸ್ಥೀನ |
| 134 | 23 | ಕಾಮ್ಯೈಃ | ಕಾಮ್ಯೈರ್ಃ |
| 135 | 21 | ಜಡೇಂದ್ರಿಯಸ್ಸೈಃ | ಜಡೇಂದ್ರಿಯಸ್ಥೈಃ |
| 136 | 2 | ಕಾಮ್ವೈಃ | ಕಾಮ್ಯೈಃ |
| 136 | 8 | ಚಿನ್ಮನದಲ್ಲೀನೂ | |

ಸರಿ :— ಚಿನ್ಮನದಲ್ಲೀನೂ, ಜಡದಶೇಂದ್ರಿಯಗಳಲ್ಲಿ ವ್ಯಾಪ್ತವಾದ ಜೀವನ ದಶಚಿದೇಂದ್ರಿಯಗಳಲ್ಲೇನೂ

| 1 | 2 | 3 | 4 |
|---|---|---|---|
| 136 | 11 | ಪಾವನಲ್ಲಿ | ಜೀವನಲ್ಲಿ |
| 136 | 13 | ಸೀತೇನ | ಸ್ಥಿತೇನ |
| 136 | 17 | ಅನಿರುದ್ಧಗತ | ಅನಿರುದ್ಧದೇಹಗತ |
| 136 | 18 | ಮೂಲದಲ್ಲಿ ಧಾರಿತ | |

ಸರಿ :— ಮೂಲದಲ್ಲಿ ಧಾರಯತಿ–ಧರಿಸೋವನಾಗಿದ್ದಾನೆ. ತಾನು ಮೂಲೇಶನ ಪಾದ ಮೂಲದಲಿ ಧಾರಿತ

| | | | |
|---|---|---|---|
| 136 | 20/21 | ವೇದಯತ್ಯಹಮಿತ್ಯಪಿ | ವೇದಯತ್ಯ ಹಮಿತ್ಯಪಿ, ಅಪಿ |
| 137 | 7 | ಸರ್ದ | ಸರ್ವ |
| 137 | 8 | ಕಶಣೇಶ್ವರಃ | ಕರಣೇಶ್ವರಃ |
| 138 | 7 | ತತ್ತ್ವೇಶದಾರನ | ತತ್ತ್ವೇಶರು ದಾರು ? |
| 138 | 22/23 | ವಾಯುದೇವರ ವ್ಯಾಪ್ತಿ ಪ್ರಕಾಶದಲ್ಲಿ ಎಂಬುದು ಪ್ರಕಾಶದಲ್ಲಿ ಪ್ರಕಾಶಾಂತರ ವ್ಯಾಪ್ತಿ ಎಂಥಾದ್ದೆಂದರೆ, | ವಾಯುದೇವರ ವ್ಯಾಪ್ತಿ ಎಂಬುದು ಪ್ರಕಾಶದಲ್ಲಿ ಪ್ರಕಾಶಾಂತರ ವ್ಯಾಪಿಸಿದಂತೆ, ಕ್ಷೀರದಲ್ಲಿ ನವನೀತ, ಉದಕ ವ್ಯಾಪ್ತಿಸಿದಂತೆ ಮತ್ತು ರುದ್ರಾದಿಗಳ ವ್ಯಾಪ್ತಿ ಎಂಥಾದ್ದೆಂದರೆ |
| 138 | 26 | ತಿಳಿಯಬೇಕು | ತಿಳಿಯಬೇಕು, ಇಂಥಾದ್ದೇ ಜೀವಾಂತರ್ಗತತ್ವ ವಾಯುದೇವರಿಗೆಂದು ತಿಳಿಯಬೇಕು. |
| 141 | 2 | ಶರೀರ ಎಂದರೆ | ಶರೀರಿ ಎಂದರೆ |
| 141 | 5 | ತತ್ತ್ವಸಾಶ್ಚ | ತತ್ತ್ವಸ್ಥಾಶ್ಚ |
| 142 | 1 | ಮಾಡಿಸಲ್ಪಡತದೆ | ಮಾಡಿಸಲ್ಪಡತದೆ. ಅಂದರೆ ಅಲ್ಲಲ್ಲಿ ಇರತಕ್ಕ, ತೇ = ಆಯಾ |

| 1 | 2 | 3 | 4 |
|---|---|---|---|
| | | | ದೇವತಿಗಳಿಂದ ವ್ಯಾಪಾರಮಾಡಿ ಸಲ್ಪಡತದೆ. |
| 142 | 11 | ಸರ್ವೇಷ್ಟೇತೇಷು | ಸರ್ವೇಷ್ಟೇತೇಷು |
| 142 | 14 | ಸ್ವರಸಪದಲ್ಲಿ | ಸ್ವರೂಪದಲ್ಲಿ |
| 142 | 17 | ಅಂಥ | ಅಥ |
| 143 | 3 | ಪ್ರದ | ಪ್ರಜ |
| 143 | 9 | ವೈಸಯಿಕ | ವೈಷಯಿಕ |
| 146 | 13 | ಅವನು | ಅವರವರು |
| 146 | 16 | ಲಕ್ಷ್ಮೀಧರಾಭ್ಯಾರಿಶ್ಲಿಷ್ಟಃ | ಲಕ್ಷ್ಮೀಧರಾಭ್ಯಾಂ ಮಾಶ್ಲಿಷ್ಟಃ |
| 151 | 21 | ಮೂರ್ತಯೋಷ್ಟಾವತು | ಮೂರ್ತಯೋಷ್ಟಾವಪಿ |
| 156 | 7 | ರತತ್ವಾದ್ಯಾತ್ಮಕೇ | ರತತ್ವಾದ್ಭಾತ್ಮಕೆ |
| 157 | 4 | ಪ್ರಾಕೃತಸ್ಯ | ಪ್ರಾಕೃತದೇಹಸ್ಯ |
| 157 | 20 | ಮತ್ತು | ಮತ್ತು ಏವ ಎಂತ ಇರವುದರಿಂದ ಅದರನ್ನೇ ಸ್ಥಾಪನ ಮಾಡಿದಂತಾಯಿತು. |
| 159 | 11 | ಸ್ಥೂಲದೇಹಗತ | ಸೂಕ್ಷ್ಮದೇಹಗತ |
| 160 | 9 | ವಾಯುದೇವರೇ | ವಾಯುದೇವರೇ ವೊದಲಾದ |
| 161 | 1 | ಚೇತನ ಐದಲೆಂದು | ಚೇತನಯುಲ್ಕೆಂಬಿಯು |
| 162 | 12 | ಬಾಹ್ಯದಲ್ಲಿ | ಬಾಹ್ಯದಲ್ಲಿ ಪತಿತಪಾವನ |
| 162 | 10 | ಭೂರ್ನಾಪೂ | ಭೂರ್ನಾಮಾ |
| 162 | 11 | ತದ್ಯಕ್ಷಿಣೇ | ತದ್ದಕ್ಷಿಣೇ |
| 162 | 16 | ಜಡಾನಾಂ | ಜಡಾಯಾಂ |
| 162 | 16 | ಥೈವಲಿ | ಥೈವ ಚ |
| 162 | 20 | ಜಾತಂ | ಜಾತಂ ಸತ್ವಂ |
| 162 | 21 | ಸತತ್ತ್ವ | ಸತ್ತ್ವ |

| 1 | 2 | 3 | 4 |
|---|---|---|---|
| 164 | 18 | ವೃತೋಕ್ತಮಂ | ವೃತೋತ್ತಮಂ |
| 165 | 1 | ವರೆಗೂ ಆಯಿತು | ವರಣವಾಯಿತು |
| 165 | 17 | ಜಾ ತೌ | ಜಾತೇ ತೌ |
| 166 | 2 | ಸದಾನತಾಃ | ಸದಾತನಾಃ |
| 162 | 20 | ಬ್ರಹ್ಮವಾಯುಗಳು | ಬ್ರಹ್ಮವಾಯುಗಳು ರುದ್ರಾದಿಗಳು |
| 167 | 5 | ರುದ್ರಾದಿ | ರುದ್ರಾದಿ ದೇವತಿಗಳಿಗೆ ಪ್ರವೇಶ ಇರೋದಾಗಿ ಅದೆ. ಈ ಬ್ರಹ್ಮ ವಾಯ್ವಾದಿ |
| 169 | 1 | ವಾದದಲ್ಲಿಯೇ | ವಶದಲ್ಲಿಯೇ |
| 171 | 20 | ಪೂರ್ತಿನಾ | ಮೂರ್ತಿನಾ |
| 172 | 6 | ಮಿತ್ಯಪಿ | ಮಿತ್ಯಪಿ |
| 172 | 8 | ತಃ | ಸಃ |
| 173 | 2 | ಸ್ವರೂಪಾಂತ | ಸ್ವರೂಪಾಂತಃಕರಣಗಳಲ್ಲಿ ಕೇಶವಾದಿ ಕೃಷ್ಣಾಂತ ಸ್ವರೂಪಗಳಿಂದ |
| 173 | 21 | ಪಾಣನಾವವ್ನ | ಪ್ರಾಣಾನಾಮ್ನ |
| 173 | 22 | ಜೀವಸ್ಥಿತೇ | ಜೀವಸ್ಥಿತೇನ |
| 178 | 8 | ಮಜ್ಞಾನಂ | ಸುಜ್ಞಾನಂ |
| 188 | 6 | ಸುದೇಹಸ್ಥ | ಸ್ವದೇಹಸ್ಥ |
| 193 | 3 | ಶಕ್ತಿಮಾ | ರಕ್ತಿಮಾ |
| 194 | 8 | ನಾತತ್ತ್ವವರ್ಣೈಃ | ನಾತತ್ತ್ವದ್ವರ್ಣೈಃ |
| 201 | 13 | ಅಹಂಕಾರಾತ್ಮಕವಾದ | ಅಹಂಕಾತ್ಮಕವಾದ ಅನಿರುದ್ಧ ಶರೀರ ಉತ್ಪತ್ತಿ. ಈ ಪ್ರಕಾರ ಪ್ರತಿ ಶರೀರವೂ ಷೋಡಷಕಳಾತ್ಮಕವೇ ಅದರಲ್ಲಿ |

| 1 | 2 | 3 | 4 |
|---|---|---|---|
| 203 | | ಭಾವದರ್ಪಣ ಟೀಕಾ<br>ಬಿಟ್ಟುಹೋಗಿದೆ | (ಇದನ್ನು ಸೇರಿಸಿಕೊಳ್ಳುವುದು) |

ಸರಿ :— 2. **ಭಾವದರ್ಪಣ ಟೀಕಾ**—ಆರಧಿಕೇತಿ॥ ಈ ಹದಿನಾರುಕಳಾ ವಿಷಯುದಲ್ಲಿ ನಾಲ್ಕನೇ ಸಂಧಿ 2ನೇ ಪದ್ಯದಲ್ಲಿ ಬರದದೆ. ಅಲ್ಲಿ ನೋಡ ತಕ್ಕದ್ದು. ಜೀವಪರಮಾಚ್ಛಾದಕೇತಿ. ತದುಕ್ತಂ ವಿಜಯದಾಸ ರಾಜೈಃ ಜೀವಾಚ್ಛಾದಿಕವೆಂದೂ, ಪರಮಚ್ಛಾದಿಕವೆಂದೂ ಆವಾಸ ವಾಗಿರತಾ ಲಿಂಗಾನಿರುದ್ಧ ಮಧ್ಯೆ ನೋವುಪಡಿಸುತ್ತಾ ಜಡಕ್ಕೆ ಪ್ರಕೃತಿಗಳಿರುವುದು. ತೀವ್ರ ಪೋಗುವುದಲ್ಲಾ ಎಂದು ಸುಳಾದಿಯಲ್ಲಿ ಉಕ್ತವಾದ ಪ್ರಯುಕ್ತ ಮೋಕ್ಷಾಧಿಕಾರಿ ಜ್ಞಾನೈಶ್ವರ್ಯವನ್ನು ಆಚ್ಛಾದನ ಮಾಡತಕ್ಕ ಜೀವಾಚ್ಛಾದಕ ಪ್ರಕೃತಿ ತಮೋಯೋಗ್ಯಳೆಂತಲೂ ಜೀವಗೆ ಪರಮಾತ್ಮನ್ನ ತೋರಿಸದಂತೆ ಆಚ್ಛಾದನ ಮಾಡತಕ್ಕ ಪ್ರಕೃತಿ ನಿತ್ಯ ಸಂಸಾರಿ ಎಂತಲೂ ಎನಿಸಿಕೊಳ್ಳುತ್ತಾಳೆ. ಇದರಲ್ಲಿ ತಮೋಯೋಗ್ಯ ಪ್ರಕೃತಿಯನ್ನು ಸಂಹಾರ ಮಾಡು ಎಂತಲೂ ನಿತ್ಯ ಸಂಸಾರಿ ಪ್ರಕೃತಿಯನ್ನು ಕಡೆಗೆ ನೂಕು ಎಂತಲೂ ಶ್ರೀದೇವಿಯು ಪ್ರಾರ್ಥನೆ ಮಾಡಿದ್ದಾಳೆ/ಎಂತ ವಿಷ್ಣುರಹಸ್ಯದಲ್ಲಿ ಹೇಳಿರುತ್ತದೇ ಇದಕ್ಕೆ ಪ್ರಮಾಣ-ಮೋಕ್ಷಾಧಿಕಾರಣಾಮೇವಜ್ಞಾನೈಶ್ವರ್ಯಾದಯೋ ಗುಣಾಃ ತೇಷಮಾಚ್ಛಾದಯತ್ಯೇಕಾ ತಮೋಗಾ ಸಾ ಪ್ರಕೀರ್ತಿತಾ ಜೀವಂ ಪ್ರತಿ ಮಹಾವಿಷ್ಣು ಪ್ರಾಪ್ತ್ಯಾಚ್ಛಾದ ಇತಿ ಪ್ರಭೋ. ಸಾ ಪರಾ ಪ್ರಕೃತಿರ್ಜ್ಞೇಯ ಪರಮಾಚ್ಛಾದಿಕಾ ಸ್ಮೃತಾ. ತತ್ರವಿಷ್ಣೋಃ ರ್ಮಹಾ ಭಾಗಾ ಸ್ವಗುಣಾಚ್ಛಾದಿಕಾಂ ಹನ. ಪರಮಚ್ಛಾದಿಕಾಂ ದುಷ್ಟಾಂ ವ್ಯಾಘುಟ್ಯ ಚ ಮಹಾಪ್ರಭೋ. ಮೋಕ್ಷದೇಹೀ ಮಹಾ ಭಾಗಾ ತದ್ಭಕ್ತಾನಾಂ ಮಹಾಪ್ರಭೋ ಇತಿವಿಷ್ಣು ರಹಸ್ಯೋಕ್ತೇಃ ಯಸ್ಮಾತ್ ಕಾರಣಾತ್ಪ್ರಾರ್ಥನೇ ಮಾಡಿದಳೋ ತಸ್ಮಾತ್ಕಾರಣಾದ್ದೈತ್ಯರನ್ನ ಬರಗೊಡದಂತೆ ಲಿಂಗದೇಹದಲ್ಲಿ ಕಾದಿದ್ದು ಜೀವರನ್ನು

| 1 | 2 | 3 | 4 |
|---|---|---|---|
| | | | ಪಾಲಿಸುತ್ತಾನೆಂದು ತಾತ್ಪರ್ಯ, ತ್ರಿವೃತು ಎಂದರೆ, ತ್ರಿಗುಣದಲ್ಲಿ ನಿಂತು ಕಾರ್ಯ ನಡೆಸತಕ್ಕವನೆಂದರ್ಥ ॥೧೪॥ |
| 203 | 20 | ಕೃತಾಹರೇ | ಕೃತಹೇತಿ |
| 203 | 24 | ವ್ಯಕ್ತಿ | ವಕ್ತಿ |
| 206 | 3 | ಸೃಷ್ಟ್ವಾವೇದಾ | ಸೃಷ್ಟ್ವಾವೇವ |
| 206 | 4 | ಭಾವತ್ರಯ | ಭಾಗತ್ರಯ |
| 207 | 4 | ಭೂತಪಂಚಕಗಳು | ಪಂಚತನ್ಮಾತ್ರಗಳು |
| 214 | 15 | ಆದರಧೇ | ಆದರೋ |
| 223 | 23 | ದ್ರುಹೆಜ | ದ್ರುಹಿಣ |
| 233 | 3 | ಸುವರ | ಸುನರ |
| 239 | 10 | ಹನಗೈಸುತ | ಹಾನಿಗೈಸುತ |
| 240 | 8 | ಹಾನಿಗೈಸುವ | ವಹಾನಗೈಸುವ |
| 240 | 23 | ಶಕಾರ | ಶರೀರ |
| 241 | 6 | ದೇಶ | ದೇಹ |
| 241 | 22 | ಸರ್ವತ್ರತಾಂಗ | ಸರ್ವವ್ರತಾಂಗ |
| 250 | 6 | ತಮಃಪರಿಚ್ಛೇದವಾದ | ತಮಃ ಪರಿಚ್ಛೇದದಲ್ಲಿ |
| 250 | 23 | ಭಂಗಹರ್ಯಾಯಾ | ಭಂಗಪರ್ಯಾಯ |
| 251 | 1 | ಅಂಕುರರಹಿತ | ಅಂಕುರರಹಿತವಾಗಿ ಬೀಜಭೂತವಾಗಿ |
| 252 | 14 | ಕಪರ್ದಿ | ಕಪರ್ದಿ |
| 252 | 18 | ವಿಷುಃ | ವಿಷ್ಣುಃ |
| 253 | 3 | ಬಿಂಬರೂಪಿ | ಬಿಂಬರೂಪಂ |
| 253 | 7 | ಜೀವರೂಪಿ | ಜೀವರೂಪೇ |
| 254 | 12 | ಜೀವಸಂಯುತಃ॥ | ಜೀವಸಂಯುತಃ॥ ಜೀವೋಪ್ಯಂ |

| 1 | 2 | 3 | 4 |
|---|---|---|---|
| | | | ಜಲಿಮಾಬಧ್ಯ ಸಹಾ ಪ್ರಾಣವಶೇ ಸ್ಥಿತಃ॥ |
| 260 | 17 | ಪೂರ್ಣಮಾಡ | ಪೂರ್ಣಮಾಡಿ ಸುಖದುಃಖಾಃದಿಗಳ ದೇವಾಸುರಗಣದೊಳಗೆ ವಿಭಾಗವ ಮಾಡಿ |
| 268 | 9 | ಶಯಾಲ | ಶಯಾಲಯಾ |
| 269 | 17 | ಉಪಸ್ಯನು | ಉಪಾಸ್ಯನು, ನೃಸಿಂಹರೂಪಿ ಶ್ರೀ ಪರಮಾತ್ಮ ಈಶಾನ್ಯ ದಿಕ್ಕು ದಳದಲ್ಲಿ ರುದ್ರದೇವರಿಂದಉಪಾಸ್ಯನು |
| 270 | 14 | ವಿಧತೇ | ವಿಧತೇ |
| 270 | 15 | (ಶಿವಸಾನಂ) | (ಶವಶಾನಂ) |
| 270 | 20 | ಯತಸ್ತ್ವಾವ | ಯತಯಸ್ತ್ವಾವ |
| 292 | 7 | ಕಕ್ತಿ | ಕತ್ತಿ |
| 294 | 22 | ಹುಟ್ಟುವುದು | ಹುಟ್ಟುವುದು ಕೇಸರವೆಂಬ ಕಮಲ ಕುಸುಮಕ್ಕೆ ಹಂಸರೂಪನು ಬಂದರೆ ಸ್ವಪ್ನ ಉಂಟಾಗುವುದು. |
| 306 | 14 | ಯಾವತ್ತೂ | ಯಾವತ್ತೂ ದೇವತಿಗಳಿಗೆ |
| 307 | 10 | ಅಥರ್ವಾನಡಂ | ಅಥರ್ವಾ (ವಿವಕ್ತಿ) ನದಂ |
| 307 | 12 | ಶರಿಶ್ವಾತ್ | ಶರೀರಶ್ವಾತ್ |
| 307 | 13 | ತ್ಯುವುಕ್ತೇ; | ತ್ಯುಪ್ಯುಕ್ತೇಃ |
| 307 | 15 | ದದಾತಿರುವ | ದದಾತಿ ವಾ |
| 306 | 16 | ಕೀತ | ಕೀವ (ಚ) |
| 307 | 17 | ಸ್ಮದ್ಗಿಷ್ಟಃ | ಸ್ಮದ್ದಿ (ದ್ವಿ) ಷ್ಟಃ |
| 307 | 19 | ಚೌ ಸೌ | ಚೌ ಸೌ ಸ (ಸ ಇತಿ) |
| 310 | 12 | ಕಂತ್ವಾತ್ | ಶರೀರತ್ವಾತ್ |

| 1 | 2 | 3 | 4 |
|---|---|---|---|
| 310 | 12 | ತ್ಯುವ್ಯಕ್ತೇ | ತ್ಯುಪ್ಯಕ್ತೇಃ |
| 316 | 6 | ಇರುಮರು | ಸಾರಾವ ತ್ಮನ್ ಇರುವನು |
| 316 | 12 | ಪಂಚಾನ್ಮ | ಪಂಚಾಶನ್ಮ |
| 317 | 11 | ನೃಸಿಂಹ ಸಹ | ನೃಸಿಂಹ ಹಂಸ ಸಹ |
| 317 | 14 | ನಾಮಕ | ನಾಮಾ ಚ |
| 317 | 18 | ತಥಾ ಸಂಕರ್ಷಣಾಭಿಧಃ | ನಾರಾಯಣ ಸುರೂಪವಾನ್ |
| 317 | 19 | ನಾರಾಯಣಸುರೂಪವಾನ್ | ತಥಾಸಂಕರ್ಷಣಾಭಿಧಃ |
| 319 | 4 | ಸ್ತಣ್ಯೈ | ಸ್ತಥ್ಯೈ |
| 323 | 5 | ಪ್ರಣ | ವ್ರಣ |